ಬೀದರ ಜಿಲ್ಲೆಯ ಇತಿಹಾಸ

(ಕಲ್ಯಾಣ ಚಾಲುಕ್ಯರು ಕ್ರಿ.ಶ 973 ರಿಂದ 1189ರವರೆಗೆ)

ಸಂಪುಟ–೨

ಶಕೀಲ್ ಐ. ಎಸ್.

2022

ಪ್ರಕಾಶಕರು :

ಉಸ್ಮಾನ ಶಿಕ್ಷಣ ಮತ್ತು ಚಾರಿಟೇಬಲ್ ಟ್ರಸ್ಟ್ (ರಿ)
ಭಗತಸಿಂಗ ಶಾಲೆ ಹತ್ತಿರ, ಕಲ್ಲೂರ ರೋಡ,
ಹುಮನಾಬಾದ ಜಿ॥ ಬೀದರ–585330 (ಕರ್ನಾಟಕ)

Bidar Jilley Etihas (Samput-2), Written by **Shakeel I.S, H.No. 21/129/137,** IDSMT Layout, Near Bhagat Singh School, Teachers Colony, Humnabad, Dist Bidar (K.S) Pin No. 585330, Phone No. 9986183462, e-mail: shakeelisrjmf@gmail.com, Published by **Osman Education & Charitable Trust (r),** Kallur Road, Humnabad, Dist Bidar-585 330 (Karnataka)

Fisrt Impression	:	**2022**
Rights	:	**By Author's**
Price	:	**400=00 Rs**
Pages	:	
Copies	:	**1000**

Paper Used : 70 GSM Maplitho

D.T.P

Excellent Computer Institute

Humnabad-585330 Phone No 9342992745

Printed at : J.P Printers, Gadag

ಬೀದರ ಜಿಲ್ಲೆಯ ಇತಿಹಾಸ (ಸಂಪುಟ–2), ಲೇಖಕರು ಶಕೀಲ್ ಐ.ಎಸ್, ಮನೆ ನಂ 21/129/137, ಐ.ಡಿ.ಎಸ್.ಎಮ್.ಟಿ ಲೇಔಟ್, ಭಗತಸಿಂಗ ಶಾಲೆ ಹತ್ತಿರ, ಟೀಚರ್ಸ್ ಕಾಲೋನಿ, ಹುಮನಾಬಾದ ಜಿ॥ ಬೀದರ–585330 ಫೋನ್ ನಂ. 9986183462 ಹಾಗೂ ಪ್ರಕಾಶಕರು **ಉಸ್ಮಾನ ಶಿಕ್ಷಣ ಮತ್ತು ಚಾರಿಟೇಬಲ್ ಟ್ರಸ್ಟ್** (ರಿ), ಕಲ್ಲೂರ ರೋಡ, ಹುಮನಾಬಾದ ಜಿ॥ ಬೀದರ–585330 (ಕರ್ನಾಟಕ)

ಪ್ರಥಮ ಮುದ್ರಣ	:	2022
ಹಕ್ಕುಗಳು	:	ಲೇಖಕರಿಗೆ ಸೇರಿದ್ದು
ಬೆಲೆ	:	400=00 ರೂ.
ಪುಟಗಳು	:	
ಪ್ರತಿಗಳು	:	1000

ಪ್ರಕಾಶಕರ ಮಾತು

ಉಸ್ಮಾನ ಶಿಕ್ಷಣ ಸಂಸ್ಥೆಯು ಹಿಂದುಳಿದ ಕಲ್ಯಾಣ ಕರ್ನಾಟಕ ಪ್ರದೇಶದ ಜನರಿಗೆ ತಾಂತ್ರಿಕ ಶಿಕ್ಷಣ ನೀಡಬೇಕ್ಕೆನ್ನುವ ಸದುದ್ದೇಶದಿಂದ ಪ್ರಾರಂಭಿಸಿದ್ದು ಈ ಸಂಸ್ಥೆಯ ಅಡಿಯಲ್ಲಿ ಗಣಕಯಂತ್ರ ಭೋಧನೆ ಮತ್ತು ಎಕ್ಸಲೆಂಟ್ ಐ.ಟಿ.ಐ ಕಾಲೇಜು ಮತ್ತು ಎಕ್ಸಲೆಂಟ್ ಪಬ್ಲಿಕ್ ಆಂಗ್ಲ ಮಾಧ್ಯಮ ಶಾಲೆ ಪ್ರಾರಂಭಿಸಿ ಕಡಿಮೆ ದರದಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ನೀಡುತ್ತ ಯಶಸ್ವಿಯಾಗಿ ಮುನ್ನಡೆಸುತ್ತಿದ್ದೇವೆ. ಅದರಂತೆ ಮಹ್ಮದ ಎಕ್ಬಾಲ್ ಸಾಬ ರವರ ಅಧ್ಯಕ್ಷತೆಯಲ್ಲಿ ದರ್ಜೋಖಿ ತರಬೇತಿ ಮತ್ತು ಟೇಲರಿಂಗ ತರಬೇತಿಯನ್ನು ನೀಡುವುದರ ಜೋತೆಗೆ ಮೋಟರ ವಾಹನ ತರಬೇತಿಯನ್ನು ಸಹ ನೀಡುತ್ತಾ ತಾಂತ್ರಿಕತೆಗೆ ಹೆಚ್ಚಿನ ಆದ್ಯತೆ ನೀಡಿ ಸಂಸ್ಥೆಯನ್ನು ಮುನ್ನಡೆಸುತ್ತಿದ್ದೇವೆ.

ಶಕೀಲ್ ಐ. ಎಸ್. ರವರು ಬೀದರ ಜಿಲ್ಲೆಯ ಇತಿಹಾಸ ಸಂಪುಟ–1 ಕೃತಿಯು ಆದಿ ಶಿಲಾಯುಗದಿಂದ ರಾಷ್ಟ್ರಕೂಟರವರೆಗಿನ ಬೀದರ ಜಿಲ್ಲೆಯ ಬಿಟ್ಟು ಹೋದ ಬಹಳಷ್ಟು ಇತಿಹಾಸವನ್ನು ಸಂಶೋಧಿಸಿ ಬರೆದು ನಮ್ಮಿಂದ ಪ್ರಕಟಣೆಗೊಂಡಿದ್ದು ನಮಗೆ ಎಲ್ಲಿಲ್ಲದೇ ಸಂತೋಷವನ್ನು ತಂದುಕೊಟ್ಟಿದೆ. ಬೀದರ ಜಿಲ್ಲೆಯ ಇತಿಹಾಸದ ಕುರಿತು ಒಂದೂ ಕೃತಿ ಸಿಗದಿದ್ದ ಸಮಯದಲ್ಲಿ ಇವರು ಇಂತಹದೊಂದು ಮಹತ್ವದ ಕೃತಿಯನ್ನು ರಚಿಸಿದ್ದಲ್ಲದೇ ಬೀದರ ಜಿಲ್ಲೆಯ ಇತಿಹಾಸ ಸಂಪುಟ–2 ಕೃತಿಯನ್ನು ಸಹ ಸಿದ್ದಪಡಿಸಿದ್ದಾರೆ.

ಶಕೀಲ್ ಐ.ಎಸ್ ರವರು **"ಬೀದರ ಜಿಲ್ಲೆಯ ಇತಿಹಾಸ ಸಂಪುಟ–2"** (ಕಲ್ಯಾಣ ಚಾಲುಕ್ಯರು ಕ್ರಿ.ಶ 973 ರಿಂದ 1189ರ ವರೆಗಿನ) ಕೃತಿ ಪ್ರಕಟಿಸಲು ಅನುಮತಿ ನೀಡಿದ್ದರಿಂದ ಅವರಿಗೆ ಪ್ರ ಪ್ರಥಮವಾಗಿ ನಮ್ಮ ಸಂಸ್ಥೆಯ ಪರವಾಗಿ ಅಭಿನಂದಿಸುತ್ತೇವೆ. ಈ ಕೃತಿಯನ್ನು ಕೊಂಡು ಓದುವಂತಹ ಸಮಸ್ತ ಓದುಗರಿಗೂ ನಾವು ಅಭಿನಂದನೆಯನ್ನು ಸಲ್ಲಿಸುತ್ತೇವೆ.

ಅಧ್ಯಕ್ಷರು
ಉಸ್ಮಾನ ಶಿಕ್ಷಣ ಮತ್ತು ಚಾರಿಟೇಬಲ್ ಟ್ರಸ್ಟ್
ಹುಮನಾಬಾದ ಜಿ॥ ಬೀದರ
585330 (ಕರ್ನಾಟಕ)

ಪ್ರಸ್ತಾವನೆ

ನಾಡುಗಳ ನಾಡಾದ ಬೀದರ ಜಿಲ್ಲೆಯು ಪೌರಾಣಿಕವಾಗಿ ಮತ್ತು ಐತಿಹಾಸಿಕವಾಗಿ ಅನೇಕ ಘಟನೆಗಳ ತವರೂರಾಗಿರುವ ಬೀದರ ಜಿಲ್ಲೆಯ ಇತಿಹಾಸ ಆದಿಶಿಲಾಯುಗದಿಂದ ರಾಷ್ಟ್ರಕೂಟರ ವರೆಗೆ ಸಂಪುಟ–1ರಲ್ಲಿ ವಿವರಿಸಲಾಗಿದೆ. ಅದರ ಮುಂದುವರೆದ ಭಾಗವಾಗಿ ಕಲ್ಯಾಣ ಚಾಲುಕ್ಯರ ಸಮಗ್ರ ಇತಿಹಾಸವನ್ನು ಪರಿಚಯಿಸಲು ರಚಿಸಿರುವ ಗ್ರಂಥ ಇದಾಗಿದೆ.

ರಾಷ್ಟ್ರಕೂಟರನ್ನು ಮೂಲೆಗುಂಪುಮಾಡಿ ಕಲ್ಯಾಣ ಚಾಲುಕ್ಯರ ಇಮ್ಮಡಿ ತೈಲಪನು ಸ್ವಾತಂತ್ರನೆಂದು ಘೋಷಿಸಿಕೊಂಡು ಮಾನ್ಯಖೇಡದಿಂದ ಆಳ್ವಿಕೆ ಪ್ರಾರಂಭಿಸುವ ಕಾಲಘಟ್ಟದಿಂದ ಅಂದರೆ ಕ್ರಿಶ 973 ರಿಂದ ಒಂದನೇ ಸೋಮೇಶ್ವರನು ಕಲ್ಯಾಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಪ್ರಾರಂಭಿಸಿದ ಕಾಲಘಟ್ಟವನ್ನೊಳಗೊಂಡು ನಾಲ್ಕನೇ ಸೋಮೇಶ್ವರ ಕಾಲಘಟ್ಟದ ವರೆಗೆ ಅಂದರೆ ಕ್ರಿಶ 1189ರ ವರೆಗೆ ನಡೆದ ಐತಿಹಾಸಿಕ ಘಟನೆಗಳು, ಯುದ್ಧಗಳು, ಹೋರಾಟಗಳು, ದಾಯಾದಿಗಳ ಕಲಹಗಳು, ಆ ಕಾಲಘಟ್ಟದ ಧಾರ್ಮಿಕ, ಸಾಮಾಜಿಕ ಆರ್ಥಿಕ, ಶೈಕ್ಷಣಿಕ, ಸಾಹಿತ್ಯಕ ಮತ್ತು ಮಹಿಳೆಯ ಸ್ಥಿತಿಗತಿಗಳ ಇತಿಹಾಸವನ್ನು ದಾಖಲಿಸಲಾಗಿದೆ.

ಕಲ್ಯಾಣ ಚಾಲುಕ್ಯರ ಆಳ್ವಿಕೆಯಲ್ಲಿ ಅವರ ರಾಣಿಯರು ಭತ್ತ ಗ್ರಾಮಗಳು, ಅಗ್ರಹಾರಗಳು, ನಾಡುಗಳು, ವಿಭಾಗಗಳು ಸಹ ಆಳ್ವಿಕೆ ಮಾಡಿರುವ ಇತಿಹಾಸವನ್ನು ಹಾಗೂ ಮಹಿಳೆಯರು ಮಾಂಡಲಿಕರಾಗಿ ಆಳ್ವಿಕೆ ಮಾಡಿದ ಐತಿಹಾಸಿಕ ಮಹತ್ವದ ವಿಷಯವನ್ನು ಸಹ ಈ ಕೃತಿಯಲ್ಲಿ ದಾಖಲಿಸಿ ಓದುಗರಿಗೆ ಮುಟ್ಟಿಸಲು ಪ್ರಯತ್ನಿಸಲಾಗಿದೆ.

ಬೀದರ ಜಿಲ್ಲೆಯ ಇತಿಹಾಸ ಸಂಪುಟ–2 ಕೃತಿಯಲ್ಲಿ ಬೀದರ ಜಿಲ್ಲೆಯ ಶಾಸನಗಳ ಮೇಲೆ ಹಚ್ಚಿನ ಬೆಳಕು ಚೆಲ್ಲಿದ್ದಲ್ಲದೇ, ಬೀದರ ಜಿಲ್ಲೆಯಲ್ಲಿಯೇ ಬಾಳಿ ಬದುಕಿ ಜಗತ್ತಿಗೆ ಅದ್ಭುತ ಸಾಹಿತ್ಯ ಕೊಡುಗೆಯನ್ನು ನೀಡಿದ ಮಹಾನೀಯರಾದ ವಿಜ್ಞಾನೇಶ್ವರ, ಬಿಲ್ಹಣ, ಭಾಸ್ಕರಚಾರ್ಯ ಸೇರಿದಂತೆ ಮೂರನೇ ಸೋಮೇಶ್ವರರ ಪರಿಚಯ ಹಾಗೂ ಅವರ ಕೃತಿಗಳ ಪರಿಚಯ ಸಹ ನೀಡಲಾಗಿದೆ.

– ಶಕೀಲ್ ಐ.ಎಸ್ ಹುಮನಾಬಾದ ಜಿ॥ ಬೀದರ.

ನನ್ನ ಪ್ರಯತ್ನ

ಬೀದರ ಜಿಲ್ಲೆಯ ಸಮಗ್ರ ಇತಿಹಾಸ ಕೃತಿಗಳು ಓದುಗರಿಗೆ ಲಭ್ಯವಿಲ್ಲದಿರುವುದನ್ನು ಮನಗಂಡು ಈಗಾಗಲೆ ಬೀದರ ಜಿಲ್ಲೆಯ ಇತಿಹಾಸ ಸಂಪುಟ–1 (ಆದಿಶಿಲಾಯುಗದಿಂದ ರಾಷ್ಟ್ರಕೂಟರವರೆಗೆ) ಕೃತಿಯನ್ನು ಬರೆದು ಪ್ರಕಟಿಸಿ ಓದುಗರಿಗೆ ಮುಟ್ಟಿಸಿದ್ದು, ಮುಂದಿನ ಭಾಗವಾಗಿ ಬೀದರ ಜಿಲ್ಲೆಯ ಇತಿಹಾಸ ಸಂಪುಟ–2 (ಕಲ್ಯಾಣ ಚಾಲುಕ್ಯರು ಕ್ರಿ.ಶ 973 ರಿಂದ 1189) ವರೆಗಿನ ಇತಿಹಾಸವನ್ನು ಈ ಕೃತಿಯಲ್ಲಿ ಬರೆಯಲಾಗಿದೆ. ಈ ಕೃತಿಯಲ್ಲಿ ಹೋಸ ವಿಷಯಗಳನ್ನು ಸಂಶೋಧನೆ ಮಾಡಿ, ಅನೇಕ ಇತಿಹಾಸ ತಜ್ಞರ ಕೃತಿಗಳನ್ನು ಅಧ್ಯಯನ ಮಾಡಿ ದಾಖಲಿಸಲಾಗಿದೆ. ವಿಶೇಷವಾಗಿ ಎರಡನೇ ಭಾಸ್ಕರನ ಕುರಿತು ಲೀಲಾವತಿ ಗ್ರಂಥವನ್ನು ಪರ್ಷಿಯನ ಭಾಷೆಗೆ ಭಾಷಾಂತರಿಸಿದ ಮಹಮ್ಮದ ಫೈಜಿಯ ಕೃತಿ ಹಾಗೂ ಶಾಸನಗಳ ಸಹಾಯದಿಂದ ಎರಡನೇ ಭಾಸ್ಕರನು ಬೀದರದವನೇ ಅನ್ನುವುದನ್ನು ಸಾಬೀತು ಪಡಿಸಲು ಪ್ರಯತ್ನಿಸಿರುತ್ತೇನೆ. ಬಹುಶಃ ನನ್ನ ಪ್ರಯತ್ನ ಸಾಬೀತು ಪಡಿಸಲು ಅಷ್ಟೊಂದು ಪೂರಕವಲ್ಲವೆಂದು ಬೇರೆ ಜಿಲ್ಲೆಯವರು ಇನ್ನಷ್ಟು ಪೂರಕ ದಾಖಲೆಗಳು ಮಂಡಿಸಿದಲ್ಲಿ ಅವುಗಳನ್ನು ಪರಿಶೀಲಿಸಿ ಒಪ್ಪಬಹುದಾಗಿದೆ.

ಈ ಗ್ರಂಥ ಬರೆಯುವಾಗ ಗ್ರಂಥಋಣದಲ್ಲಿ ನಮೂದಿಸಿದ ಪುಸ್ತಕಗಳ ಲೇಖಕರಿಗೆ,ಪ್ರಕಾಶಕರಿಗೆ ನಾನು ಋಣಿಯಾಗಿರುತ್ತೇನೆ. ಕೃತಿ ಬರೆಯುವಾಗ ನನಗೆ ಪ್ರೋತ್ಸಹಿಸಿದ ಹಿರಿಯ, ಕಿರಿಯ ಸಾಹಿತಿಗಳು, ಗೆಳೆಯರು, ಸಹಪಾಠಿಗಳು ಹಾಗೂ ಪೊಲೀಸ್ ಕರ್ತವ್ಯದ ಬಿಡುವಿನ ಸಮಯದಲ್ಲಿ ಮನೆಯಲ್ಲಿ ಕೃತಿ ರಚಿಸುವಾಗ ಸಹಕರಿಸಿದ ತಂದೆ ಎಕ್ಬಾಲ್ ಸಾಬ, ತಾಯಿ ಶಹನಾಜ ಬೇಗಂ, ಪತ್ನಿ ರುಬೀನಾ ಬೇಗಂ ಸೇರಿದಂತೆ ಕುಟುಂಬದ ಎಲ್ಲ ಸದಸ್ಯರಿಗೂ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಗ್ರಂಥ ಪ್ರಕಾಶಕರಾದ ಅಧ್ಯಕ್ಕರು, ಉಸ್ಮಾನ ಶಿಕ್ಷಣ ಮತ್ತು ಚಾರಿಟೇಬಲ್ ಟ್ರಸ್ಟ್. ಹುಮನಾಬಾದ ರವರಿಗೆ, ಬೆನ್ನುಡಿ ಬರೆದುಕೊಟ್ಟ ಡಾ. ಸತೀಷಕುಮಾರ ಹೊಸಮನಿ ರವರಿಗೂ ಹಾಗೂ ಮುಖಪುಟವನ್ನು ತಯಾರಿಸಿದ ಮಹಮ್ಮದ ಜಾವೀದ ಜಮಾದಾರ , ಪುಸ್ತಕವನ್ನು ಮುದ್ರಿಸಿಕೊಟ್ಟ ಜೆ.ಪಿ ಪ್ರಿಂಟರ್ಸ ಗದಗರವರಿಗೂ ಸಹ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

– ಶಕೀಲ್ ಐ.ಎಸ್ ಹುಮನಾಬಾದ ಜಿ॥ ಬೀದರ.

ಅನುಕ್ರಮಣಿಕೆ

ಅಧ್ಯಾಯ 1

ಕಲ್ಯಾಣ ಚಾಲುಕ್ಯರ ರಾಜಕೀಯ ಇತಿಹಾಸ

ಇಮ್ಮಡಿ ತೈಲಪನು ಕ್ರಿ.ಶ 973ರಲ್ಲಿ ರಾಷ್ಟ್ರಕೂಟರ ಕರ್ಕನನ್ನು ಸೋಲಿಸಿ ಕಲ್ಯಾಣ ಚಾಲುಕ್ಯರ ಸಾಮ್ರಾಜ್ಯವನ್ನು ಸ್ವಾತಂತ್ರವಾಗಿ ಆಳ್ವಿಕೆ ಮಾಡಲು ಪ್ರಾರಂಭಿಸಿ ಕ್ರಿ.ಶ 1156ರವರೆಗೂ ಆಳ್ವಿಕೆ ಮಾಡಿದ ರಾಜರು ಈ ರಂಗಸಜ್ಜಿಕಯಲ್ಲಿ ಉಳಿದು ಕನ್ನಡನಾಡಿನ ಪರಂಪರೆಯನ್ನು ಉಜ್ವಲಗೊಳಿಸಿ ಮಹತ್ವದ ಸಾಧನೆಗಳನ್ನು ಮಾಡಿದ್ದಾರೆ. ಆನಂತರ ಬಿಜ್ಜಳನಿಂದ ಕಳಚೂರಿ ಸಂತತಿ ಸ್ಥಾಪನೆಯಾಗಿ ಕ್ರಿ.ಶ 1183ರವರೆಗೆ ಮುಂದುವರೆಯಿತು. ಅನಂತರ ಚಾಲುಕ್ಯ ಸಂತತಿ ಪುನರುತ್ಥಾನಗೊಂಡರು ಕೇವಲ 6 ವರ್ಷ ಮಾತ್ರ ಉಳಿಯಿತು. ಚಾಲುಕ್ಯ ಸಾಮ್ರಾಜ್ಯವು ಕರ್ನಾಟಕ, ಮಹಾರಾಷ್ಟ್ರ ಮತ್ತು ಆಂಧ್ರದ ಹಲವು ಭಾಗಗಳನ್ನು ಒಳಗೊಂಡಿತ್ತು. ಅವರ ಉದಾರವಾದ ರಾಜನ ಆಶ್ರಯದಲ್ಲಿ ಕನ್ನಡನಾಡಿನಲ್ಲಿ ಕಲೆ, ಸಾಹಿತ್ಯ ಮತ್ತು ಸಂಸ್ಕೃತಿಗಳು ವಿಕಾಸಗೊಂಡವು. ಬೀದರ್ ಜಿಲ್ಲೆಯ ಕಲ್ಯಾಣ ಅವರ ರಾಜಧಾನಿಯಾಗಿದ್ದರಿಂದ ಅವರನ್ನು 'ಕಲ್ಯಾಣ ಚಾಲುಕ್ಯ'ರೆಂದು ಕರೆಯಲಾಗಿದೆ. ದಖನ್ ಪ್ರಸ್ಥಭೂಮಿಗಾಗಿ, ಕರ್ನಾಟಕದ ಸಾರ್ವಭೌಮತ್ವಕ್ಕೆ ಚೋಳರೊಂದಿಗೆ ನಿರಂತರವಾದ ಹೋರಾಟವನ್ನು ಕಲ್ಯಾಣದ ಚಾಲುಕ್ಯರು ಕೈಕೊಂಡಿದ್ದರು. ಉತ್ತರದಲ್ಲಿ ಪರಮಾರರೊಂದಿಗೆ ಹೋರಾಡಿ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ಕೊನೆಗೊಂಡು ಶಾಂತಿಯೇರ್ಪಟ್ಟಿತ್ತು.

ಎರಡನೆಯ ತೈಲಪನಿಂದ ಪ್ರಾರಂಭಗೊಂಡ ಈ ಮನೆತನವು ಒಂದನೆಯ ಸೋಮೇಶ್ವರನ ಕಾಲದಲ್ಲಿ ಕಲ್ಯಾಣ ರಾಜಧಾನಿಯನ್ನು ಮಾಡಿಕೊಂಡು ಭದ್ರಬುನಾದಿಯನ್ನು ಹೊಂದಿ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ನಾಲ್ಕು ದಿಕ್ಕುಗಳಲ್ಲಿ ಪ್ರಸಿದ್ಧಿ ಪಡೆಯಿತು. ಅನಂತರ ಮೂರನೆಯ ಸೋಮೇಶ್ವರ, ಎರಡನೆಯ ಜಗದೇಕಮಲ್ಲರ ಕಾಲದಲ್ಲಿ ಇಳಿಮುಖವಾಗಿ ಅಂತಿಮವಾಗಿ ನಾಲ್ಕನೆಯ ಸೋಮೇಶ್ವರನ ಕಾಲದಲ್ಲಿ ಅಂತ್ಯವನ್ನು ಕಂಡ ಈ ಸಾಮ್ರಾಜ್ಯವು ದಕ್ಷಿಣ ಭಾರತದ ವಿಸ್ತಾರವಾದ ಭೂ ಪ್ರದೇಶವನ್ನು ಆಕ್ರಮಿಸಿಕೊಂಡಿದಿತಲ್ಲದೇ, ಈ ನಾಡಿನ ಕೀರ್ತಿ ದೇಶವಿದೇಶಗಳಲ್ಲಿ ಹರಡಿದ್ದರು.

1. ಇಮ್ಮಡಿ ತೈಲಪ (ಕ್ರಿ.ಶ 973–997) :

ಇಮ್ಮಡಿ ತೈಲಪನು ಕಲ್ಯಾಣ ಚಾಲುಕ್ಯ ವಂಶದ ಸ್ಥಾಪಕ. ಈತನು ಬಾದಾಮಿ ಚಾಲುಕ್ಯರ ವಂಶಸ್ಥನಗಿದ್ದನು. ಅಂದರೆ ಚಾಲುಕ್ಯ ಸಂತತಿಯ 4ನೇ ವಿಕ್ರಮಾದಿತ್ಯನ ಮಗ. ಈತನನ್ನು ಸತ್ಯಶ್ರೀಕುಲ ತಿಲಕ, ಚಾಲುಕ್ಯ ರಾಮ ಎಂದು ಶಾಸನಗಳು ಕರೆದಿವೆ. ಅವನಿಗೆ ತೈಲಪ, ತೈಲಪ್ಪಯ್ಯ ಎಂಬ ಹೆಸರುಗಳಿದ್ದವು. ಇಮ್ಮಡಿ ತೈಲಪನು ರಾಷ್ಟ್ರಕೂಟರ ದೊರೆ 3ನೇ ಕೃಷ್ಣನ ಸಾಮಾಂತನಾಗಿ ಬಿಜಾಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ತರ್ದವಾಡಿ–1000ಯನ್ನು ಅಣುಗಜೀವಿತವಾಗಿ 957ರಲ್ಲಿ ಆಳುತ್ತಿದ್ದನು. 3ನೇ ಕೃಷ್ಣನ ನಂತರ ಬಂದ ಖೊಟ್ಟಿಗ ಮತ್ತು ಇಮ್ಮಡಿ ಕೀರ್ತಿವರ್ಮರ ದೌರ್ಬಲ್ಯದ ಲಾಭ ಪಡೆದು ಪ್ರಾಬಲ್ಯಕ್ಕೆ ಬಂದು, ಕೇವಲ ಎಂಟು ವರ್ಷಗಳಲ್ಲಿಯೇ ಅಂದರೆ 965ರ ನರಸಲಗಿ ಶಾಸನ ತಿಳಿಸುವಂತೆ ಮಹಾಸಾಮಂತಾಧಿಪತಿಯಾಗಿ ಮೇಲೆರಿದ. ಮುಂದೆ ಕೆಲವು ವರ್ಷಗಳಲ್ಲಿಯೇ ಖೊಟ್ಟಿಗ ನಿಧನನಾದಾಗ ದುರ್ಬಲ ರಾಜನಾದ ಇಮ್ಮಡಿ ಕರ್ಕನನ್ನು ಸೋಲಿಸಿ ಮಾನ್ಯಖೇಟವನ್ನು ವಶಪಡಿಸಿಕೊಂಡು ತಾನೇ ಸಾಮ್ರಾಟನೆಂದು ಘೋಷಿಸಿಕೊಂಡನು. ಮಾನ್ಯಖೇಟವನ್ನೇ ರಾಜಧಾನಿಯಾಗಿಟ್ಟುಕೊಂಡು ಕ್ರಿ.ಶ 973ರಲ್ಲಿ ಕಲ್ಯಾಣ ಚಾಲುಕ್ಯ ವಂಶಕ್ಕೆ ಆಸ್ತಿಭಾರ ಹಾಕಿದನು.[1]

ಬೀದರ ಜಿಲ್ಲೆಯ ಭಾಲ್ಕಿ ಪಟ್ಟಣದ ಗಣಪತರಾವ್ ಪಂಚಾಳ ಅವರ ಮನೆಯ ಮುಂಭಾಗದಲ್ಲಿರುವ ಕಂಬದ ನಾಲ್ಕು ಮುಖಗಳಲ್ಲಿ ಕ್ರಿ.ಶ 981ರ ಶಾಸನದಲ್ಲಿ, ಚಾಲುಕ್ಯ ತೈಲಪದೇವನು ರಾಜ್ಯಭಾರ ಮಾಡುತ್ತಿದ್ದಾಗ, ಅವನ ಸಾಮಂತನಾಗಿ ಬೀದರ ಹಿಲ್ಲೆಯ ಭೋಲ್ಲುಂಕೆಯಲ್ಲಿ ರಾಜರಸನಿರುತ್ತಾನೆ. ಅವನ ದಂಡನಾಯಕನಾಗಿ ನಾಗವರ್ಮಯ್ಯನಿದ್ದ, ಹಾಗೂ ಕೆಲವು ವ್ಯಾಪಾರಿಗಳು ಸಭಾಮಂಟಪವನ್ನು ಕಟ್ಟಿಸಿ ಅದಕ್ಕೆ ಕೆಲವು ದಮ್ಮಗಳನ್ನು ಬಿಟ್ಟಿರುವ ವಿಷಯ ತಿಳಿಯುವುದರೊಂದಿಗೆ ದೇಗುಲಕ್ಕೆ ಬಾರಿಕನಲ್ಲದೇ ಬೇರೆಯವರಿಗೆ ಸಲ್ಲುವುದಿಲ್ಲವೆಂದು ಕಟ್ಟಳೆಯನ್ನು ವಿಧಿಸಿರುವುದು ಸಹ ಕಾಣಬಹುದಾಗಿದೆ. ಕಲ್ಯಾಣ ಚಾಲುಕ್ಯರ ಮೂಲ ಪುರುಷನು ಮಳಖೇಡದಿಂದ ಆಳ್ವಿಕೆ ಮಾಡುತ್ತಿದ್ದ ಕಾಲಘಟ್ಟದಲ್ಲಿ ಅವನ ಸಾಮಂತನಾಗಿ ಬೀದರ ಜಿಲ್ಲೆಯ ಭಲ್ಲುಂಕೆಯಲ್ಲಿ ರಾಜ್ಯಭಾರ ಮಾಡುತ್ತಿರುವ ಇತಿಹಾಸವು ಈ ಶಾಸನದಿಂದ ತಿಳಿದು ಬರುವುದಲ್ಲದೇ ಕಲ್ಯಾಣ ಚಾಲುಕ್ಯರ ಇತಿಹಾಸವು ಸಹ ಈ ಜಿಲ್ಲೆಯಲ್ಲಿ ಎರಡನೇ ತೈಲಪನಿಂದಲೆ ಪ್ರಾರಂಭವಾಗುತ್ತದೆ.[2]

ತೈಲಪನು ಹಲವು ರಾಷ್ಟ್ರಕೂಟ ಸಾಮಂತರನ್ನು ಸದೆಬಡಿದು ರಾಜ್ಯ ವಿಸ್ತರಿಸಿದನು. ಮೊದಲಿಗೆ ತಲಕಾಡಿನ ಗಂಗಶಾಖೆಯ ಸಾಮಂತರಲ್ಲಿ ಒಬ್ಬನಾದ ಪಾಂಚಾಲದೇವನು ದಂಗೆ ಎದ್ದಾಗ ಅವನ ದಂಗೆಯನ್ನು ತೈಲಪನು ಅಡಗಿಸಿದನು. ಈ ಕಾರ್ಯದಲ್ಲಿ ನೆರವಾದ ದಂಡನಾಯಕ ನಾಗದೇವನಿಗೆ 'ಅಹಮಮಲ್ಲ' ಎಂಬ ಬಿರುದು ನೀಡಿದನು. ನಂತರ ಕ್ರಿ.ಶ 992 ಮತ್ತು 995 ರಲ್ಲಿ ಗಂಗವಾಡಿ ಮತ್ತು

ನೊಳಂಬವಾಡಿಗಳನ್ನು ಮುತ್ತಿದ ಒಂದನೇ ರಾಜರಾಜ ಚೋಳನನ್ನು ಸೋಲಿಸಿ ಅವನಿಂದ 150 ಯುದ್ಧಾನೆಗಳನ್ನು ಪಡೆದನು. ಕೊಂಕಣದ ಶಿಲಾಹಾರರು, ಸೌದತ್ತಿಯ ರಟ್ಟರು, ಸೇವುಣರ ಎರಡನೇ ಭೀಮನು, ಬನವಾಸಿಯ ಭೀಮರಸನನ್ನು ತೈಲಪನು ಸೋಲಿಸಿ ತನ್ನ ಅಧೀನ ಮಾಡಿಕೊಂಡನು ಲಾಟ (ಗುಜರಾತ್) ಮತ್ತು ಮಾಳ್ವಗಳನ್ನು ಗೆದ್ದು ಅದಕ್ಕೆ ಬಾರಪ್ಪನನ್ನು ಮಾಂಡಲೀಕನನ್ನಾಗಿ ನೇಮಿಸಿದನು. ತನ್ನ ಮೇಲೆ 16 ಬಾರಿ ಮೇಲೆರಗಿ ಬಂದ ಪಾರಮಾರ ರಾಜ ಮಂಜನನ್ನು ಸೋಲಿಸಿ ಮಾನ್ಯಖೇಡದಲ್ಲಿ ಬಂಧಿಸಿದನು. ತೈಲಪನ ತಂಗಿ ಮೃಣಾವತಿ ಪ್ರೇಮ ಪಾಶಕ್ಕೆ ಮಂಜನು ಸಿಲುಕಿದ್ದಾನೆಂದು ತಿಳಿದು ಅವನನ್ನು ಕೊಲ್ಲಿಸಿದನು. ಈ ವಿಷಯ ಮೇರು ತುಂಗನ 'ಮಂಜಪ್ರಬಂಧ' ದಿಂದ ತಿಳಿದು ಬರುತ್ತದೆ. ಹೀಗೆ ಪರಾಕ್ರಮಿಯಾದ ತೈಲಪನಿಗೆ ಅಹಮಮಲ್ಲ, ಭೂವನೈಕ್ಯಮಲ್ಲ ಎಂಬ ಬಿರುದುಗಳಿದ್ದವು. ಈತನು ರಾಷ್ಟ್ರಕೂಟ ರಾಜಕುಮಾರಿ ಜಾಕಬ್ಬೆಯನ್ನು ವರಿಸಿದನು. ಈತನ ತಾಯಿ ತ್ರಿಪುರಿ ಕಳಚೂರಿ ಲಕ್ಷ್ಮಣನ ಮಗಳಾದ ಬೊಂತಾದೇವಿ. ಜಾಕಬ್ಬೆಗೆ ಸತ್ಯಾಶ್ರಯ ಮತ್ತು ದಸವರ್ಮ ಎಂಬ ಇಬ್ಬರು ಮಕ್ಕಳಿದ್ದರು.[3]

2. ಸತ್ಯಾಶ್ರಯ (ಕ್ರಿ.ಶ 997–1008) :

ಸತ್ಯಾಶ್ರಯನು ರಾಣಿ ಜಾಕಬ್ಬೆಯ ಮಗ. ತಂದೆಯಂತೆ ಪರಾಕ್ರಮಿಯಾದ ಈತ ಪಾರಮಾರರೊಂದಿಗೆ ನಿರಂತರ ಯುದ್ಧಗಳಿಗೆ ಇಳಿದನು. ಪಾರಮಾರರ ಸಿಂಧೂ ರಾಜನು ದಂಡೆತ್ತಿ ಬಂದು ಹಿಂದೆ ಕೈಬಿಟ್ಟು ಹೋಗಿದ್ದ ಪ್ರದೇಶಗಳನ್ನು ವಶಪಡಿಸಿಕೊಳ್ಳಲು ಚಾಲುಕ್ಯರ ಮೇಲೆ ಯುದ್ಧ ಸಾರಿದನು. ಆದರೆ ಸತ್ಯಾಶ್ರಯನಿಂದ ಸೋತುಹೋದನು. ಸತ್ಯಾಶ್ರಯ ಚೋಳರ ದಾಳಿಯನ್ನು ಸಮರ್ಥವಾಗಿ ಎದುರಿಸಿದನು. ರಾಜರಾಜ ಚೋಳನು ಗಂಗವಾಡಿ ಮತ್ತು ನೋಳಂಬವಾಡಿಗಳನ್ನು ಮುತ್ತಿದನು.[4] ಇದಕ್ಕೆ ವಿರುದ್ಧವಾಗಿ ಸತ್ಯಾಶ್ರಯ ವೆಂಗಿಯನ್ನು ಮುತ್ತಿ ವಶಪಡಿಸಿಕೊಂಡನು. ಕ್ರಿ.ಶ 1006ರ ಸುಮಾರಿನಲ್ಲಿ ಧನ್ಯಕಟಕ ಮತ್ತು ಯಾಣಮಂಡಲ ದುರ್ಗಗಳಿಗೆ ಬೆಂಕಿಯಿಟ್ಟನು. ಈ ಯುದ್ಧದಲ್ಲಿ ಚೋಳರ ಸೇನೆಯನ್ನು ಹಿಂದಕ್ಕಟ್ಟಿ ಅವರ ಅಪಾರ ಸಾಮಗ್ರಿಯನ್ನು ಕಿತ್ತುಕೊಂಡನು.[5] ಚೋಳರು ಇದನ್ನು ಉಗ್ರವಾಗಿಪ್ರತಿಭಟಿಸಿದರು. ರಾಜರಾಜ ಚೋಳನು ಒಂಬತ್ತು ಲಕ್ಷ ಸೈನ್ಯದೊಂದಿಗೆ ಕಲ್ಯಾಣಿ ಚಾಲುಕ್ಯರ ಮೇಲೆ ದಾಳಿ ಮಾಡಲು ಬಂದು ಎಡೆದೊರೆನಾಡು, ಬನವಾಸಿ, ಬಿಜಾಪುರ, ಮಾನ್ಯಖೇಡ ಧನವೂರುಗಳನ್ನು ಆಕ್ರಮಿಸಿ ಅಪಾರ ಸಂಪತ್ತನ್ನು ಲೂಟಿ ಮಾಡಿದನು. ನಾಗರಿಕರನ್ನು ಕ್ರೂರವಾಗಿ ಹಿಂಸಿಸಿದನು. ಮಕ್ಕಳು, ಸ್ತ್ರೀಯರನ್ನು ಬ್ರಾಹ್ಮಣರನ್ನು ಕೊಲ್ಲಿಸಿದನು. ಬಾಲಕಿಯರನ್ನು ಅಪಹರಿಸಿ ಅವರ ಜಾತಿ ಹಾಳು ಮಾಡಿದನು. ಮಹಿಳೆಯನನ್ನು ಬೇರೆಯರೊಂದಿಗೆ ವಿವಾಹ ಮಾಡಿಸಿ ಅಮಾನುಷವೆಸಗಿದನು. ಸತ್ಯಾಶ್ರಯ ತಾವರಗಟ್ಟ ಎಂಬಲ್ಲಿ ರಾಜರಾಜನನ್ನು ಸಂಧಿಸಿ ಭೀಕರ ಕದನ ಮಾಡಿದನು. ರಾಜರಾಜನು ತಪ್ಪಿಸಿಕೊಂಡು ಓಡಿಹೋದನು. ಅವನ ದಂಡನಾಯಕ ನಕ್ಕಿರನ್ ಚಂದಿರನ್ ಹತನಾದನು. ಸತ್ಯಾಶ್ರಯನು ಕೊಂಕಣದ

ವೀರರಾದ ಶಿಲಾಹಾರರ ಅಪರಾಜಿತನನ್ನು ಗೂರ್ಜರನ್ನು ಕಳಚೂರಿ ಕೋಕಲ್ಲನನ್ನು ಸೋಲಿಸಿ ಅವರನ್ನು ತನ್ನ ಸಾಮಂತರನ್ನಾಗಿ ಮಾಡಿಕೊಂಡನು. ದಕ್ಷಿಣದಲ್ಲಿ ಕರ್ನೂಲ್, ಧರಣಿಕೋಟಗಳು, ಗುಂಟೂರು ಜಿಲ್ಲೆಗಳು ಅವನ ವಶವಾದವು. ಗೋಪಿರಾಜ ಲಾಟದ ಬರ್ಪನು ಮಾಂಡಲೀಕನಾದನು. ಅನಂತರ ಅವನ ಮಗ ದಕ್ಷಿಣದಲ್ಲಿ ಪ್ರಬಲರಾದ ಚೋಳರ ಆಕ್ರಮಣಗಳಿಂದ ಸಾಮ್ರಾಜ್ಯವನ್ನು ರಕ್ಷಿಸಿದನು.[6] ಈ ಚೋಳ ಆಕ್ರಮಣದಲ್ಲಿ ಸತ್ಯಾಶ್ರಯನ ಸಹೋದರ ದಸವರ್ಮನೂ ಮರಣ ಹೊಂದಿದನು.[7] ಶಿಲಾಹಾರ ಅಪರಾಜಿತನನ್ನು ಸೋಲಿಸಿ, ಅವನ ರಾಜಧಾನಿ ಅಂಶುನಗರವನ್ನು ಸುಟ್ಟುಹಾಕಿದನು.[8]

ಕಲ್ಯಾಣ ಚಾಲುಕ್ಯರ ದೊರೆ ಸತ್ಯಾಶ್ರಯನ (ಕ್ರಿ.ಶ 997–1008) ರಾಣಿ ಅಯ್ಯಬ್ಬೆಯೇ ಅಧಿಕಾರ ನಡೆಸಿದ ಈ ಮನೆತನದ ಮೊದಲ ಮಹಿಳೆ. ಸೇನಬೋವನು ಈಕೆಯ ಕೈಕೆಳಗೆ ಆಡಳಿತ ನಡೆಸುತ್ತಿದ್ದನೆಂದ ಮೇಲೆ ಈಕೆಯು ಆಡಳಿತದಲ್ಲಿ ಖಂಡಿತ ಇದ್ದಿರಲೇಬೇಕು. ಈಕೆಯ ಅಕ್ಕಬಜ್ಜಿಯು ಸಹ ಚರಿಯಾಲದ ಗೋವೆಯ ಗಾವುಂಡನಿಗೆ ದಸವಂದ ಮಾನ್ಯವನ್ನು ಕ್ರಿ.ಶ 1001ರಲ್ಲಿ ಬಿಟ್ಟಿರುವುದು ಶಾಸನೋಕ್ತವಾಗಿದೆ. ಕ್ರಿ.ಶ 1008ರಲ್ಲಿ ಇರಿವಬೆಡಂಗನ ಮಡದಿಯಾದ ದೇವಕಬ್ಬೆಯು ಬೊಪ್ಪದಂಡೆಯಲ್ಲಿ ದೇಗುಲವನ್ನು ನಿರ್ಮಿಸಿ ಅದರ ನಿರ್ವಹಣೆಗೆ ಭೂದಾನಗಳನ್ನು ನೀಡಿದ್ದಾಳೆ.[9]

ಅಕ್ಕಾದೇವಿ:

ಸತ್ಯಾಶ್ರಯ ಇರಿವಬೆಡಂಗನ ಹಾಗೂ ಭಾಗ್ಯವತಿಯ ಮಗಳು ಐದನೇ ವಿಕ್ರಮಾದಿತ್ಯನ ತಂಗಿಯೂ ಎರಡನೆಯ ಜಯಸಿಂಹನ ಅಕ್ಕಳು ಆದ ಅಕ್ಕಾದೇವಿಯನ್ನು ಇರಿವನೊಳಂಬಾಧಿರಾಜನು ವಿವಾಹವಾಗಿದ್ದನು.

ಅಕ್ಕಾದೇವಿಯು ವಾಗ್ದೇವಿ, ಸೀತೆ, ಮಹಾದೇವಿ (ಪಾರ್ವತಿ), ಭೂದೇವಿಗೆ ಸಮಾನಳೆಂದು ಹೊಗಳಿ ಸದ್ಗುಣಗಳನ್ನು ಪಡೆದ ಗುಣದ ಬೆಡಗಿಯೆಂದು, ಏಕವಾಕ್ಯೆಯೆಂದು, ಶೌರ್ಯದ ಗುಣ ಹೊಂದಿರುವ ರಣಭೈರವಿ ಎಂದು ಶಾಸನಗಳು ಈಕೆಯನ್ನು ಕೊಂಡಾಡಿವೆ. ಅಕ್ಕಾದೇವಿಯನ್ನು ಸ್ಮರಿಸದೇ ಇರಲು ಸಾಧ್ಯವೆ ಇಲ್ಲ. ಈಕೆ ಕಿಸುಕಾಡು 70ನ್ನು ಆಳುತ್ತಿದ್ದಳು. ಈಕೆಯ ಧಾರ್ಮಿಕ, ಸಾಮಾಜಿಕ ಕೊಡುಗೆಗಳು ವಿಶೇಷವಾದದ್ದು. ತನ್ನ ಅಣ್ಣನಾದ ವಿಕ್ರಮಾದಿತ್ಯನಿಗೆ ಪರೋಕ್ಷವಿನಯವಾಗಿ ಪೇರೂರು ಅಗ್ರಹಾವರನ್ನು ಬಿಟ್ಟಳು. ಅಲ್ಲದೆ ಇವಳ ಬಹುಮುಖ್ಯ ಕೊಡುಗೆಯೆಂದರೆ ಪೆರೂರ ಅಗ್ರಹಾರದಲ್ಲಿ ತ್ರೈಪುರುಷ ಶಾಲೆಯನ್ನು ಪ್ರಾರಂಭಿಸಿ ಇಲ್ಲಿನ 500 ವಿದ್ಯಾರ್ಥಿಗಳ ಊಟ ಮತ್ತು ಬಟ್ಟೆಗಾಗಿ ಅದೇ ಊರಿನಲ್ಲಿ 500 ಮತ್ತರು ಭೂಮಿಯನ್ನು, 50 ಮನೆಯನ್ನೂ ಮತ್ತು ಹೂವಿನ ತೋಟವನ್ನು ದಾನವಾಗಿ ನೀಡಿದಳು. ಈ ಧರ್ಮವನ್ನು ರಾಜರಕ್ಷಿತ ಧರ್ಮವೆಂದು ಪೇರೂರಿನ 400 ಮಹಾಜನರು ಇದನ್ನು ಪಾಲಿಸಬೇಕು ಎಂದು ಆಜ್ಞೆಯನ್ನು ಹೊರಡಿಸಿದ್ದಾಳೆ.

ಮೊದಲು ಕಿಸುಕಾಡು 70ನ್ನು ಆಳುತ್ತಿದ್ದ ಈಕೆ ಕ್ರಮೇಣ, ಬಾಗಡಗೆ–70, ತೊರಗಲೆ 300, ಮಾಸೆಯವಾಡಿ 140ರ ಆಡಳಿತವನ್ನು ಕೈಗೊಂಡು ಅತ್ಯಂತ ದಕ್ಷ ಅಧಿಕಾರಿಣಿಯೆಂದು ತೋರಿಸಿದ ನಂತರ ಇಡಿ ಬನವಾಸಿ ಪನ್ನಿರ್ಛಾಸಿರದ ಅಧಿಕಾರಿಯಾಗಿ ರೂಪುಗೊಂಡು ಬಡ್ತಿ ಹೊಂದಿದ್ದು ಸ್ತ್ರೀಯರ ಆಡಳಿತದ ಇತಿಹಾಸದಲ್ಲಿಯೇ ಬಹುದೊಡ್ಡ ಸಾಧನೆಯೆಂದರು ತಪ್ಪಲ್ಲ. ಇಲ್ಲಿಂದ ಮುಂದೆ ಅನೇಕ ದಾನದತ್ತಿಗಳನ್ನು ನೀಡಿದ್ದಾಳೆ.

ದೀನನಾಥ ಚಿಂತಾಮಣಿ, ಏಕವಾಕ್ಯೆ, ಗಂಗಾಸ್ನಾನ ಪವಿತ್ರೆ, ಗುಣದ ಬೆಡಂಗಿ ಮುಂತಾದವುಗಳಿಂದ ಹೆಸರಾಗಿದ್ದ ಅಕ್ಕಾದೇವಿ ಎಂಬುವಳು ಗೋಕಾಕೆಯ ಕೋಟೆಯ ನೆಲೆವೀಡಿನಲ್ಲಿದಾಗ, ವಿಕ್ರಮಪುರದ ಗೊಣದ ಬೆಡಂಗಿಯ ಜಿನಾಲಯಕ್ಕೆ ದಾನ ನೀಡಿದ್ದನ್ನು ಶಾಸನವು ಉಲ್ಲೇಖಿಸಿದೆ. ಜಿನಾಲಯವು ಶಿಥಿಲವಾದಾಗ ಜೀರ್ಣೋದ್ಧಾರ ಮಾಡಲು, ಸುಣ್ಣ ಬಳೆಯಲು ಗಂಧ, ಧೂಪ ದೀಪಕ್ಕೆಂದು, ಮೂಲ ಸಂಘದ ಸೇನಗಣದ ಹೊಗರೆಯಗಚ್ಚದ ನಾಗಸೇನ ಪಂಡಿತರಿಗೆ, ಅಲ್ಲಿಯ ಋಷಿಯರಿಗೆ, ಅಜ್ಜಿಯರ (ಕಂತಿಯರು) ಆಹಾರ ದಾನ ಹಾಗೂ ಕಪ್ಪಡಕ್ಕೆಂದು, ಕಿಸುಕಾಡು 70ರ ಬಳಿಯ ಗಾಣದ ಹೋಳೂರು ಎಂಬ ಗ್ರಾಮವನ್ನು ದಾನ ನೀಡುತ್ತಾಳೆ. ಇದಲ್ಲದೆ ವಿಕ್ರಮಪುರದ ಈಶಾನ್ಯಕ್ಕೆ ಒಂದು ಮತ್ತರು ತೋಟವನ್ನು ನೈರುತ್ಯದಿಕ್ಕಿನಲ್ಲಿ ಪಂಡಿತ ನಾಗದೇವರಿಗೆ 12 ಮತ್ತರು ಭೂಮಿ, ಪರೆಕಾರ ಕೇತೋರ್ಜನಿಗೆ ದಕ್ಷಿಣದಲ್ಲಿ 24 ಮತ್ತರು ಹಾಗೂ ಉತ್ತರಕ್ಕೆ ಒಂದು ಮತ್ತರು ತೋಟವನ್ನು ದಾನ ನೀಡುತ್ತಾಳೆ. ಕಲ್ಕುಟಿಗ ಸೂರೋಜನಿಗೆ 12 ಮತ್ತರು ತೋಟವನ್ನು ನೀಡುತ್ತಾಳೆ. ದಡಿಗರಸನಿಂದ ಕೊಂಡುಕೊಂಡು ದೇವರಿಗೆ ಕಪ್ಪಡಿಕೆರೆಯ ದಕ್ಷಿಣದಲ್ಲಿ 50 ಮತ್ತರು ಭೂಮಿ ಸರ್ವನಮಸ್ಯವಾಗಿ ನೀಡಿರುವುದನ್ನು ಶಾಸನವು ಉಲ್ಲೇಖಿಸಿದೆ.

ಅಕ್ಕಾದೇವಿಯು "ರಣಭೈರವಿ"ಯೆಂಬ ಹೆಗ್ಗಳಿಕೆಯನ್ನು ಪಡೆದಿದ್ದಳು. ಜಯಸಿಂಹನ ಹೆಂಡತಿ ಸುಗ್ಗಲದೇವಿಯು ಶರಣ ದೇವರದಾಸಿಮಯ್ಯನ ಭಕ್ತೆಯಾಗಿದ್ದಳು. ಕಿಸುಕಾಡು–70ರ ರಾಜ್ಯಪಾಲಳು ಅಥವಾ ಪ್ರಾಂತಾಧಿಕಾರಿಯಾಗಿದ್ದ ಅಕ್ಕಾದೇವಿ ಏಳುಜನರ ಮಂತ್ರಿಮಂಡಲ ಹೊಂದಿದ್ದು, ಶಿಲಾಹಾರರು ಮತ್ತು ನೊಳಂಬರು ಸಹ ಬೇರೆ ಬೇರೆ ವಿಭಾಗದ ಸಚಿವರಾಗಿದ್ದರು.[36]

ಕ್ರಿ.ಶ 1050ರ ಸೂಡಿ ಶಾಸನವು ಅಕ್ಕಾದೇವಿಯು ಕಿಸುಕಾಡು–70 ತೊರೆಗೆರೆ–60 ಮತ್ತು ಮಾಯಿಸವಾಡಿ–140ಗಳನ್ನು ಆಳುತ್ತಿದ್ದಾಗಿನ ಆಕೆಯ ಮಂತ್ರಿಮಂಡಳದ ಪೂರ್ಣ ಚಿತ್ರಣವನ್ನು ನೀಡುತ್ತದೆ. ಇದರ ಪ್ರಕಾರ ಅಕ್ಕಾದೇವಿಯ ಮಂತ್ರಿಮಂಡಳವು ಮನೆವೆರ್ಗ್ಗಡೆ ಕಾಳಿದಾಸಯ್ಯ, ತಂತ್ರಪಾಳ, ಮಿಳ್ಳಯ್ಯ, ತಂತ್ರಪಾಳ, ಚಟ್ಟಿಮಯ್ಯ, ಪ್ರದಾನ, ದೆಮ್ಮಣ್ಣ, ಅಳಿಯಂ ಚೌಡಿಮಯ್ಯ, ಅಡಪದ, ಚಾವುಂಡರಾಯ, 'ತಂತ್ರದ ಸೇನಬೋವ' 'ದಾಸಿಮಯ್ಯ' (ಅಂತು ಸಮಸ್ತ ಪ್ರಧಾನರುಮ್) ಎಂದು ವಿವರಿಸುತ್ತದೆ. ಆದರೆ ಸೋಮೇಶ್ವರ ದೊಡ್ಡ ಸಾಮ್ರಾಜ್ಯವನ್ನು ಸ್ಥಾಪಿಸಿದ್ದು ಅದರ ವ್ಯಾಪ್ತಿಗನುಗುಣವಾಗಿ ಮಂತ್ರಿಮಂಡಲದ ಸದಸ್ಯರ ಸಂಖ್ಯೆಯೂ

ಹೆಚ್ಚಾಗಿದ್ದಿರಬಹುದು.

ಕಲ್ಯಾಣ ಚಾಲುಕ್ಯರಲ್ಲಿ ಸ್ವತಂತ್ರ ರಾಜ್ಯಭಾರ ನಡೆಯಿಸಿದ ಕೆಲವೇ ರಾಣಿಯರಲ್ಲಿ ಅಕ್ಕಾದೇವಿ ಅದ್ವಿತಿಯಳು. ಈಕೆಯ ಹೆಸರಿನಲ್ಲಿ ಸೂಡಿ (1000), ಬೇಲೂರು (1022), ಹುಟ್ಟೂರು (1037), ಅರಸಿಬೀದಿ (1047), ಸೂಡಿ (1050), ಕೋರಲಹಳ್ಳಿ (1050), ಸೂಡಿ (1051), ಅರಸಿಬೀದಿ (1053), ಸೂಡಿ (1054), ಸೂಡಿ 1054), ಹೊಟ್ಟೂರು (1164) ಹೀಗೆ ಹನ್ನೊಂದು ಶಾಸನಗಳು ಲಭಿಸಿವೆ. ಈ ಎಲ್ಲ ಶಾಸನಗಳು ಇವಳನ್ನು ಸಾಮಾನ್ಯವಾಗಿ "ಸ್ವಸ್ತ್ಯಾನವರತ ಪರಮ ಕಲ್ಯಾಣಾಭ್ಯುದಯ ಸಹಸ್ರ ಫಳಭೋಗಭಾಗಿನಿ ದ್ವಿತೀಯ ಲಕ್ಷ್ಮೀ ಸಮಾನೆಯರಣಿತ ದಾನ ಚಿಂತಾಮಣಿ ವಿವೇಕ ಚೂಡಾಮಣಿಗಳೇಕವಾಕ್ಯಯರ್ಗುಣದ ಬೆಡಂಗಿ" ಎಂದು, "ಸಕಲ ಜಗತ್ತ್ರಣುತೆಯಂ ಸಮಸ್ತರಿಪುನ್ರಿಪ ಅರ್ಚಿತಚರಣಾರವಿಂದೆ ವಿವೇಕಚುಡಾಮಣಿಯುಂ ದೀನನಾಥ ಚಿಂತಾಮಣಿಯುಂ ಸ್ವವಂಶವರ್ಧ ನೈಕಸಾಕ್ಷಲಕ್ಷ್ಮೀಯುಂ, ಪರಿಜನಾಕ್ಷವಿ(ಕ್ಷೆ)ಯುಂ, ವಸುಧಾಜನ ಕಾಮಧೇನುವಂ ಏಕವಾಕ್ಯೆಯಂ ಗುಣದ ಬೆಡಂಗಿ"ಎಂದು "ಸ್ವಸ್ತಿ ಅರಿನೃಪ ಮುಕುಟಟಿತ ಛರಣಾರವಿಂದೆಯರ್ ಗುಣದ ಬೆಡಂಗಿ"ಎಂದು ಸ್ತುತಿಸಿವೆ. "ರಣಭೈರವಿ", "ಉಚ್ಚಂಡಭೈರವಿ" ಎಂದು ವಿಶಿಷ್ಟ ಬಿರುದುಗಳು ಬೇಲೂರಿನ ಶಾಸನದಲ್ಲಿ ಕಂಡಬರುತ್ತವೆ.

ಸೂಡಿ ಶಾಸನದ ಪ್ರಾರಂಭದಲ್ಲಿ ಕಲ್ಯಾಣದ ಚಾಲುಕ್ಯ ತ್ರಿಭುವನಮಲ್ಲ ಐದನೆಯ ವಿಕ್ರಮಾದಿತ್ಯನ ಉಲ್ಲೇಖ, ಬೇಲೂರು ಹೊಟ್ಟೂರು ಶಾಸನಗಳಲ್ಲಿ ಜಗದೇಕಮಲ್ಲ ಜಯಸಿಂಹರ ಉಲ್ಲೇಖಗಳು ಮುಂದೆ ಅರಸೀಬಿದಿ, ಸೂಡಿ, ಕೋರಲಹಳ್ಳಿ, ಹೊಟ್ಟೂರು, ಶಾಸನಗಳಲ್ಲಿ ತ್ರೈಲೋಕ್ಯಮಲ್ಲನ ಉಲ್ಲೇಖ ಬರುವುದರಿಂದ ಅಕ್ಕಾದೇವಿಯು ತ್ರೀಭುವನಮಲ್ಲ, ತಮ್ಮ ಜಯಸಿಂಹ ತಮ್ಮನ ಮಗ ಸೋಮೇಶ್ವರ ಹೀಗೆ ಮೂರು ಜನ ಅರಸರ ಆಳ್ವಿಕೆಯಲ್ಲಿ ಬಾಳಿದಳೆಂದು ಸ್ಪಷ್ಟವಾಗುತ್ತದೆ.

ಒಂದನೇಯ ಸೋಮೇಶ್ವರನ ಆಳ್ವಿಕೆಯ ಕಾಲದಲ್ಲಿ ಅಕ್ಕಾದೇವಿ ಪನ್ನಾಳೆಯ ಕೋಟೆಯ ನೆಲೆಯಿಂದ ಕಿಸುಕಾಡು–70, ತೊರಗೆರೆ–70, ಮಾಸವಾಡಿ–140ಗಳನ್ನು ದುಷ್ಟನಿಗ್ರಹದಿಂದ ಆಳುತ್ತಿದ್ದಳು. ಒಂದನೆಯ ಸೋಮೇಶ್ವರನ ಸಹೋದರಿ ಅಕ್ಕಾದೇವಿ–ಕದಂಬ, ಚಾಲುಕ್ಯ ಅರಸಿಯರ ಪಾಲಿಗೆ ರತ್ನಕಿರೀಟವೆನಿಸಿರುವಳು. ಸಾಹಿತ್ಯ, ಧರ್ಮ, ರಾಜ್ಯಾಡಳಿತ, ಯುದ್ಧ ಮೊದಲಾದ ಹಲವು ರಂಗಗಳಲ್ಲಿ ಅಕ್ಕಾದೇವಿಯ ವ್ಯಕ್ತಿತ್ವ ನೆಲೆನಿಂತಿದೆ. ಈಕೆಯು ಕಿಸುಕಾಡು–70 ಆಳುತ್ತಿದ್ದಳೆಂಬ ವಿಷಯ ಅರಸಿಬೀದಿ, ಕಿಸುಕಾಡು–70 ಬಾಗಡಗೆ–70 ತೊರಗಲೆ–60, ಮಾಸವಾಡಿ–140ಗಳನ್ನು ಪನ್ನಾಳೆಯ ಕೋಟೆಯ ದಂಡಿನಲ್ಲಿದ್ದಾಗ ಆಳುತ್ತಿದ್ದು, ಚೋಳ, ಆಂಧ್ರ, ಮಗದ, ಕೊಂಕಣ, ಮಾಳವ, ಪಾಂಚಾಳರನ್ನು ಸೋಲಿಸಿ ಚಾಲುಕ್ಯ ಕುಲತಿಳಕಳೆನಿಸಿದ ಅಕ್ಕಾದೇವಿ ಎಂದು ಈಕೆಯ ಶೌರ್ಯವನ್ನು ಕೋರಲಹಳ್ಳಿ

ಶಾಸನವು ಕೊಂಡಾಡುತ್ತದೆ. ಮತ್ತೊಂದು ಶಾಸನ ಅಕ್ಕಾದೇವಿ ಕಿಸುಕಾಡು–70 ವಿಭಾಗವನ್ನು ವಿಕ್ರಮಪುರ (ಅರಸಿಬೀದಿ)ವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದಳೆಂದು ತಿಳಿಸುತ್ತದೆ.

ಚಾಲುಕ್ಯ ರಾಜಕುಮಾರಿ ಅಕ್ಕಾದೇವಿ ಗೋಕಾಕೆಯ ನೆಲೆಯಲ್ಲಿದ್ದಾಗ ವಿಕ್ರಮಪುರ (ಅರಸಿಬೀದಿ)ದ 'ಗುಣದವೆಡಂಗಿ' ಜಿನಾಲಯಕ್ಕೆ ಮತ್ತು ಮೂಲ ಸಂಘ, ವಾರಸೇನಗಣ, ಹೊಗಾರಿಗಚ್ಚದ ನಾಗಸೇನ ಪಂಡಿತನಿಗೆಂದು ಭೂಮಿದಾನವನ್ನು ಕೈಗೊಂಡಳೆಂಬ ಸಂಗತಿಯನ್ನು ಕ್ರಿ.ಶ 1047ರ ಅರಸಿಬೀದಿ ಶಾಸನ ವರ್ಣಿಸಿದೆ.

ಪುರುಷ ವರ್ಣನೆಯಂತೆ ಸ್ತ್ರೀ ವರ್ಣನೆಗಳು ಈತನ ಶಾಸನಗಳಲ್ಲಿ ಸ್ಥಾನ ಪಡೆದಿವೆ. ತ್ರೈಳೋಕ್ಯಮಲ್ಲನ ಸಹೋದರಿ ಅಕ್ಕಾದೇವಿ ಆಳ್ವಿಕೆ ಕಾಲದಲ್ಲಿ ಕಿಸುಕಾಡು–70, ಬಾಗಡೆಗೆ–70, ತೊರಗಲೆ–60 ವಿಭಾಗಗಳನ್ನು ಆಳುತ್ತಿದ್ದಾಗ ಪನ್ನಾಳೆಯ ಕೋಟೆಯದಂಡಿನಲ್ಲಿದ್ದಾಗಿನ ಆಕೆಯ ಸಾಹಸವನ್ನು ಆಕೆಯು ಸೋಲಿಸಿದ ಅರಸರನ್ನು ಕುರಿತು, "... ಅರಿನೃಪ ಮುಕುಟ ಘಟ್ಟಿತ ...ರವಿನ್ದೆ, ಗಂಗಾಸ್ನಾನಪವಿತ್ರೆಯು ದೀನನಾಥ ಚಿಂನ್ತಾಮಣಿಗಳು... ಚೂಡಾಮಣಿಗಳೇಕವಾಕ್ಯಂಯುರು ಗುಣದಬೆಡಂಗಿಯರಪ್ಪ ಶ್ರೀ ಮ(ದ)ಕ್ಕಾದೇ ವಿಯರ್ ಕಿಸುಕಾಡೆಪ್ಪತ್ತುಮಂ ಬಾಗಡಗೆಯೆಪ್ಪತ್ತುಮಂ ತೊಱಗಲೆ....ಮಂ ಮಾಸೆಯವಾಡಿನೂಱನಾಲ್ವತ್ತು ಮಂ ದುಷ್ಟ ನಿಗ್ರಹವಿಸಿಷ್ಟಪ್ರತಿ...(ದಿಂ) ಸುಖಸಂಕಥಾವಿನೋದದಿಂದ ರಾಜ್ಯಗೆಯ್ಯುತ್ತಂ ಪನ್ನಾವಱೆಯ ಕೋಟೆಯ ದಣ್ಡಿನ.... (ಚೋಳಾಂ) ಧ್ರಮಗಧ ಕೊಂಕಣ ಮಾಟವ ಪಾಂಚಾಳಲಾಳರಂ ಭುಜಬಳದಿಂ ಕ.... (ಕೊಣ್ಡಾಳ್ದನು) ಯದುಶೌರ್ಯ ಚಳುಕ್ಯಕುಳತಿಳಕಂ ಯರಸುಮೆನಿಸಿ ದಕ್ಕಾದೇ...."ಎಂದು ಬಣ್ಣಿಸಿದೆ.

ಧನ್ನಾಡ ಕಾಳಗದಲ್ಲಿ ಅಕ್ಕಾದೇವಿಯು ಚೋಳರನ್ನು ಸದೆಬಡಿಯಲು ತನ್ನ ಸೈನ್ಯವನ್ನು ಕಳುಹಿಸುತ್ತಾಳೆ. ಈ ಧನ್ನಾಡ ಕಾಳಗದ ವಿವರ ಈ ಕೆಳಗಿನಂತಿದೆ.

ಕ್ರಿ.ಶ 1042–44ರ ಸಂದರ್ಭದಲ್ಲಿ ನಡೆದಿದ್ದು ಇದರ ಬಗ್ಗೆ ಕಲ್ಯಾಣ ಚಾಲುಕ್ಯರ ಶಾಸನಗಳಲ್ಲಿ ಮಾಹಿತಿ ಇಲ್ಲ. (ಗೋಪಾಲ ಬಿ.ಅರ್, ದ ಚಾಲುಕ್ಯಾಸ ಆಪ್ ಕಲ್ಯಾಣ ಅಂಡ ದ ಕಲಚೂರಿ, ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯ 1981, ಪುಟ 158) ರಲ್ಲಿ ಈ ಯುದ್ಧದ ವಿವರಗಳು ರಾಜಾಧಿರಾಜಚೋಳನ ತಿಂಗಳೇರತರು ಪ್ರಶಸ್ತಿಯಲ್ಲಿ ಬರುತ್ತದೆ. ಡಾ. ಹುಲ್ಷ್ ಅವರು ಪ್ರಶಸ್ತಿಯ ಈ ಭಾಗವನ್ನು ಹೀಗೆ ಅನುವಾದಿಸಿದ್ದಾರೆ. ಅಹಮಲ್ಲನ ದಂಡನಾಯಕರಾದ ಗುಂಡಪ್ಪಯ್ಯನ್ ಹಾಗೂ ಗಂಗಾಧರನ್ ಈ ಯುದ್ಧದಲ್ಲಿ ತಮ್ಮ ಗಜಗಳೊಂದಿಗೆ ಧರೆಗುರುಳಿದರು. ಚಾಲುಕ್ಯರ ಸೈನ್ಯವನ್ನೂ, ಗಜಗಳನ್ನೂ, ದುಂಬಿಗಳು ಹಾಗು ಕೆವುಡನ್ (ಚೋಳಪ್ರಭು)ನ ಬಲಿಷ್ಠ ಸೈನ್ಯಗಳು ಮುತ್ತಿಗೆ ಹಾಕಿದವು. ಈ ಭೀಕರ ನಿರ್ಣಾಯಕ ಕಾಳಗದಲ್ಲಿ ಅಪ್ರತಿಮ ಧೈರ್ಯಶಾಲಿಗಳಾದ ವಿಜಯಾದಿತ್ಯನ ಬಲಿಷ್ಠ

ಸಂಗಮಯ್ಯನು ಹಾಗೂ ಇತರರು ಹೇಡಿಗಳಂತೆ ರಣರಂಗದಿಂದ ಹಿಂದೆ ಸರಿದರೋ ಆಗ ಚೋಳದೊರೆ ಇವರೆಲ್ಲರನ್ನು ಬಂಧಿಸಿ ತನ್ನ ಪೋಷಾಕುಗಳಲ್ಲಿ ಜಯ ಪಡೆದು "ತನ್ನಡಿಯರ್ ಜಯಂ ಗೊಂಡು"ಚಾಲುಕ್ಯರ (ಸೋಮೇಶ್ವರನ) ಧನ–ಕನಕಾದಿಗಳನ್ನು, ಗಜಾಶ್ವಗಳನ್ನು ಸೆರೆಹಿಡಿದು ವೈರಿಗಳ ಪ್ರಮುಖ ನಗರ ಕೊಲ್ಲಿಪಾಕಿಯನ್ನು ಅಗ್ನಿಗಾಹುತಿ ಮಾಡಲಾಗಿ ಅಹವಮಲ್ಲನು ಹೆದರಿಕೊಂಡನು. ಈ ಯುದ್ಧವು 1042 ರಿಂದ 1044 ರ ಮಧ್ಯದಲ್ಲಿ ನಡೆದಿದ್ದೇ ಆದಲ್ಲಿ ಈ ಸಂದರ್ಭದಲ್ಲಿ ಒಂದನೇಯ ಸೋಮೇಶ್ವರನು ಪೊಟ್ಟಳಕೆರೆಯ ಬೀಡಿನಿಂದ ಆಳುತ್ತಿದ್ದಿದ್ದನ್ನು ಶಾಸನಗಳು ಹೇಳುತ್ತಿರುವುದರಿಂದ ಈ ಕಾಲದಲ್ಲಿ ಧನ್ನಾಡ ಯುದ್ಧ ನಡೆದಿದೆ.

ಕ್ರಿ.ಶ 1044 ರ ಸಿರಿವಾರಂ ಶಾಸನದಲ್ಲಿ ಸೋಮೇಶ್ವರನು ಪೊಟ್ಟಳಕೆರೆಯ ನೆಲೆವೀಡಿನಿಂದ ಆಳುತ್ತಿದ್ದನೆಂದು ಹೇಳುತ್ತದೆ. ಚೋಳರ ಈ ದಾಳಿಯ ಸಂದರ್ಭದಲ್ಲಿ ಸೋಮೇಶ್ವರನು ಮೊರಗನೂರು ಬೀಡಿನಲ್ಲಿದ್ದುದನ್ನು ಗೊತ್ತಾಗಿ 28 ಅಕ್ಟೋಬರ್ 1045ರ ಶಾಸನ ಹೇಳಿದರೆ ಮೋರಿಗೇರಿಯ ಕ್ರಿ.ಶ 1045ರ ಶಾಸನದಲ್ಲಿ ಯುದ್ಧದಲ್ಲಿ ಶಿವಾಂಪನನ್ನು ಸೋಲಿಸಿ ಬಂಧಿಸಿರುವುದು ಸ್ಪಷ್ಟವಾಗುತ್ತದೆ. ಕಲ್ಯಾಣ ಚಾಲುಕ್ಯರ ಶಾಸನಗಳ ಆಧಾರದ ಮೇರೆಗೆ ವೆಂಗಿ ಮಂಡಲದ ಮೇಲೆ ಚಾಲುಕ್ಯರದೇ ಹಿಡಿತವಿದ್ದುದು ಸ್ಪಷ್ಟವಾಗುತ್ತದೆ.

ಕಿಸುಕಾಡು 70, ಬಾಗಡಗೆ 70, ತೊಱಗಲೆ, ಮಾಸಿಯವಾಡಿ 140 ಪನ್ನಾವಳೆ ಕೋಟೆಯನ್ನು ಆಳುತ್ತಿದ್ದ ಅಕ್ಕಾದೇವಿಯು ತನ್ನ ಸೇನೆಯನ್ನು ಚೋಳರನ್ನು ಸದೆಬಡಿಯಲು ಕಳುಹಿಸಿದ್ದುದು ತಿಳಿದು ಬರುತ್ತದೆ. ಕೋರಲಹಳ್ಳಿಯ ಕ್ರಿ.ಶ 1050 ಡಿಸೆಂಬರ್ 24 ರ ಶಾಸನದಲ್ಲಿ 'ಗುಣದ ಬೆಡಂಗಿಯರಪ್ಪ ಶ್ರೀಮದಕ್ಕಾದೇವಿಯರ್'.... ಚೋಳಾಂಧ್ರರ ಮಗದ ಕೊಂಕಣ ಮಾಳವ ಪಾರುಖಿಳ್ಬಳ ಲಾಳರಂ ಭುಜಬಳದಿಂದ.. ಯದುಶೌರ್ಯಂ ಚಾಲುಕ್ಯ ಕುಳತಿಳಕಂಯರಸುಮೆನಿಸಿದಕ್ಕಾದೇವಿ ..." ಎಂದು ಬರುತ್ತದೆ. ಇದು ಚೋಳರೊಂದಿಗಿನ ಸಂಘರ್ಷವನ್ನು ಸೂಚಿಸುತ್ತದೆ.

ಚಾಲುಕ್ಯ ಚಕ್ರವರ್ತಿ ಐದನೆಯ ವಿಕ್ರಮಾದಿತ್ಯನು ಆಳುತ್ತಿರುವಾಗ ಆತನ ಪಾದಪದ್ಮೋಪಜೀವಿಯಾಗಿ ಇರಿವನೊಳಂಬಾಧಿರಾಜನು ನೊಳಂಬವಾಡಿ 32000, ಕೊಗಳಿ 500, ಬಲ್ಲಕುಂದೆ 300, ಕುಕ್ಕನೂರು 30, ಮಾಸಿಯವಾಡಿಯಲ್ಲಿ 5 ಗ್ರಾಮಗಳನ್ನು ಆಳುತ್ತಿದ್ದನೆಂದು ಗದಗ ಜಿಲ್ಲೆಯ ಆಲೂರಿನ ಕ್ರಿ.ಶ 1 ಮೇ 1010 ರ ಶಾಸನ ಹೇಳುತ್ತದೆ. ಈ ಶಾಸನದಲ್ಲಿ ನೊಳಂಬ ಪಲ್ಲವ ಮನೆತನದ ಇರಿವನೊಳಂಬಾಧಿರಾಜನು ಚಾಲುಕ್ಯ ರಾಜಕುಮಾರಿಯನ್ನು ವಿವಾಹವಾಗಿದ್ದಾನೆ. ಈ ವಿಷಯ ಶಾಸನದಲ್ಲಿ "ಚಕ್ರವರ್ತಿ ತಿಳಕಂ ತೈಲಂಗೆ ಮರ್ಮಳ್ಪೊಡರ್ಪ್ಪಿನ ಸತ್ಯಾಶ್ರಯ ಚಕ್ರವರ್ತ್ತಿಯ ಮಗಳ್ ಶ್ರೀ ವಿಕ್ರಮಾದಿತ್ಯದೇವನ ಚಕ್ರೇಶನ ತಂಗೆ ತನ್ನರಸಿಯನ್ದನ್ದೀ ನೋಱಂಬಾಧಿರಾಜನ ಪೆಂಪಂ ಕುಳಮಂ ಮಹಾಮಹಿಮೆಯಂ ಬಣ್ಣಿಪ್ಪೊನೇ ಮಣ್ಣಿಪೊಂ"ಎಂದು ಬರುತ್ತದೆ.

ಇರಿವನೊಳಂಬ ಘಟಯಂಕಕಾರ ಪಲ್ಲವಾದಿತ್ಯನು ಚಾಲುಕ್ಯ ಚಕ್ರವರ್ತಿ ಐದನೆಯ ವಿಕ್ರಮಾದಿತ್ಯನಿಗೆ ಅಧೀನನಾಗಿ ಆಳುತ್ತಿದ್ದನೆಂದು ಪಂಪದೇವನಹಳ್ಳಿ ಗೋನಹಾಳು ಕ್ರಿ.ಶ 1014 ರ ಶಾಸನ ಹೇಳುತ್ತದೆ. ಚಕ್ರವರ್ತಿ ಎರಡನೆಯ ಜಯಸಿಂಹನ ಪಾದಪದ್ಮೋಪಜೀವಿಯಾಗಿ ಜಗದೇಕಮಲ್ಲ ಪಲ್ಲವ ಪೆರ್ಮಾಡಿ ಉದಯದಿತ್ಯದೇವ (ಕ್ರಿ.ಶ 1018–1039) ಆಳುತ್ತಿದ್ದನೆಂದು ಪಂಪದೇವನಹಳ್ಳಿ ಬಾಗಳಿ 23 ಡಿಸೆಂಬರ್ 1018 ರ ಶಾಸನ ಹೇಳುತ್ತದೆ. ಇಲ್ಲಿ ಇವನು ಗಂಗವಾಡಿ 96000, ಕದಂಬಳಿಕೆ 1000, ಕೋಗಳಿ 500, ಮಾಸಿಯವಾಡಿ 140 ರಲ್ಲಿ ಪಂಚಗ್ರಾಮಗಳನ್ನು ಬಲ್ಲಕುಂದೆ 300, ಎಡದೊರೆ 2000, ಕುಡಿಹಾರ 70 ವಿಭಾಗಗಳ್ನು ಕಂಪಿಲಿಯ ನೆಲೆವೀಡಿನಿಂದ ಆಳುತ್ತಿದ್ದುದು ತಿಳಿದು ಬರುತ್ತದೆ. ಬಲ್ಲಕುಂದೆ ಕ್ರಿ.ಶ 998 ರ ಶಾಸನವು ಇರಿವನೊಳಂಬಾಧಿರಾಜನನ್ನು ಸ್ವಸ್ತಿ ಘಟೆಯಂಕಕಾರ ಚತ್ರವೆಡಂಗ ನೊಳಂಬಾಧಿರಾಜನೆಂದು ಕರೆದಿದೆ. ಇದರಿಂದ ಇವನು 'ಚಿತ್ರವೆಡಂಗೆ' ನೆನಿಸಿದರೆ ಅಕ್ಕಾದೇವಿಯನ್ನು 'ಗುಣದ ಬೆಡಂಗೆ' ಎಂದು 24 ಡಿಸೆಂಬರ್ 1021 ಬೇಲೂರು ಶಾಸನಗಳು ಕರೆದಿವೆ.

ಕ್ರಿ.ಶ 24 ಡಿಸೆಂಬರ್ 1050 ರ ಕೊರ್ಲಹಳ್ಳಿಯ ಶಾಸನವು ಮಹಾಸಾಮಂತ ಅಜ್ಜರಸನ ಪರಿಚಯುವನ್ನು ನೀಡುತ್ತದೆ. ಇವನು ಅಕ್ಕಾದೇವಿಯು ಪಾದಪದ್ಮೋಪಜೀವಿಯಾಗಿದ್ದಾನೆ. ಇವನು 'ದ್ವಾರಾವತಿಪುರವರೇಸ್ವರ'ನಾಗಿದ್ದು ಗರುಡ ಧ್ವಜವನ್ನು ಹೊಂದಿರುವುದರಿಂದ ಇವನು ಯಾದವ ವಂಶಕ್ಕೆ ಸೇರಿದ್ದಾನೆ. ತನ್ನ ಚಕ್ರವರ್ತಿಯ ಪರವಾಗಿ ಯುದ್ಧಗಳನ್ನು ಮಾಡಿರುವುದು ಅವನ ಪ್ರಶಸ್ತಿಯಿಂದ ತಿಳಿದು ಬರುತ್ತದೆ.

ಅಕ್ಕಾದೇವಿಯು ಆಡಳಿತಗಾರಳಾಗಿ ಯುದ್ಧದಲ್ಲಿ ಉಗ್ರವಾಗಿ ಹೋರಾಡಿದಲ್ಲದೇ ಹೆಚ್ಚಿನ ಸಂಖ್ಯೆಯ ಶತ್ರುಗಳನ್ನು ವಶಪಡಿಸಿಕೊಂಡಿದ್ದಳೆಂದು ಗುರುತಿಸಲಾಗಿದೆ. ಸ್ಥಳಿಯರನ್ನು ಹತ್ತಿಕ್ಕಲು ಗೋಕಾಕನ್ನು ಮುತ್ತಿಗೆ ಹಾಕಿದಳು. ಇವಳು ಗಂಡನೊಂದಿಗೆ ಹಾಗೂ ಸ್ವತಂತ್ರವಾಗಿ ಆಳ್ವಿಕೆ ನಡೆಸಿರುವುದು ಕಂಡು ಬರುತ್ತಿದೆ. ಆದರೆ ಇವಳ ಕೊನೆಯ ದಿನಗಳ ಕುರಿತು ತಿಳಿದು ಬಂದಿರುವುದಿಲ್ಲ.[10]

ಸತ್ಯಾಶ್ರಯನಿಗೆ ಇರವ ಬೇಡಂಗ, ಅಕಳಂಕಚರಿತ, ಸಾಹಸಭೀಮ, ಅಹವಮಲ್ಲ, ಎಂಬ ಬಿರುದುಗಳಿದ್ದವು. ಕನ್ನಡದ ಖ್ಯಾತ ಕವಿ ರನ್ನನು ಸತ್ಯಾಶ್ರಯನ ಆಸ್ಥಾನದಲ್ಲಿದ್ದನು. ರನ್ನನು ಗದಾಯುದ್ಧವನು ಬರೆದಿದ್ದಾನೆ. ರನ್ನನು ತನ್ನ ಆಶ್ರಯದಾತನಾದ ಸತ್ಯಾಶ್ರಯನನ್ನು ಮಹಾಭಾರತದ ಭೀಮನಿಗೆ ಹೋಲಿಸಿದ್ದಾನೆ. ಸತ್ಯಾಶ್ರಯನು ರನ್ನನಿಗೆ ಕವಿ ಚಕ್ರವರ್ತಿ ಎಂಬ ಬಿರುದು ನೀಡಿ ಗೌರವಿಸಿದನು.[11] ಸತ್ಯಾಶ್ರಯನು ತನ್ನ ಮಗಳನ್ನು ನೊಳಂಬ–ಪಲ್ಲವರಾಜ ಇರಿವ ನೋಳಂಬಾಧಿರಾಜನಿಗೆ ಮದುವೆ ಮಾಡಿಕೊಟ್ಟನು. ಸತ್ಯಾಶ್ರಯನಿಗೆ ಪುತ್ರ ಸಂತಾನವಿರಲಿಲ್ಲ. ಹೀಗಾಗಿ ಅವನ ಮರಣದ ನಂತರ ಅವನ ಸೋದರ

ದಶವರ್ಮನ ಮಗನಾದ ಐದನೇ ವಿಕ್ರಮಾದಿತ್ಯನು ಅಧಿಕಾರಕ್ಕೆ ಬಂದನು.[12]

3. ಐದನೇ ವಿಕ್ರಮಾದಿತ್ಯ (ಕ್ರಿ.ಶ 1008–14) :

ಐದನೇ ವಿಕ್ರಮಾದಿತ್ಯನು ಸತ್ಯಾಶ್ರಯನ ಸೋದರನ ಮಗ. ಇವನ ಕಾಲದಲ್ಲಿ ಪಾರಮಾರರ ಉತ್ತರದಲ್ಲೂ, ಚೋಳರು ದಕ್ಷಿಣದಲ್ಲೂ ಚಾಲುಕ್ಯ ರಾಜ್ಯದ ಗಡಿಗಳನ್ನು ಮುತ್ತಿದರು. ಗಂಗವಾಡಿ ಮತ್ತು ನೊಳಂಬವಾಡಿಗಳು ಆ ವೇಳೆಗಾಗಲೇ ಚೋಳರ ಕೈ ಸೇರಿದವು. ಚೋಳರು ಈಗ ವೆಂಗಿಯ ಮೇಲೆ ಪರಮಾಧಿಕಾರ ಸ್ಥಾಪನೆಗೆ ಮುಂದಾದರು. ವಿಕ್ರಮಾದಿತ್ಯನು ರಾಜ್ಯ ವಿಸ್ತರಿಸದಿದ್ದರು ಶತ್ರುಗಳ ವಿರುದ್ಧ ಹೋರಾಡಿ ಚಾಲುಕ್ಯ ಸಾಮ್ರಾಜ್ಯವನ್ನು ರಕ್ಷಿಸಿಕೊಂಡನು. ವಿಕ್ರಮಾದಿತ್ಯನ ನಂತರ ಅವನ ತಮ್ಮ ಅಯ್ಯಣ್ಣನು 1015ರಲ್ಲಿ ವಿಕ್ರಮಾದಿತ್ಯನ ಸ್ಥಾನಕ್ಕೆ ವಾರಸುದಾರನಾಗಿ ಒಂದು ವರ್ಷ ಆಳಿದನು. ತರುವಾಯ ಇವನ ಕಿರಿಯ ತಮ್ಮನಾದ ಜಯಸಿಂಹ ಜಗದೇಕಮಲ್ಲನು ಪಟ್ಟಕ್ಕೆ ಬಂದನು. ಅವನ ದಂಡನಾಯಕ ಕೇಶವಜಿ ಬನವಾಸಿ, ಶಾಂತಳಿಗೆ ಪ್ರದೇಶಗಳನ್ನು ಆಳುತ್ತಿದ್ದನು. ವಿಕ್ರಮಾದಿತ್ಯನಿಗೆ ತ್ರಿಭುವನಮಲ್ಲ, ವಲ್ಲಭ ನರೇಂದ್ರ ಎಂಬ ಬಿರುದುಗಳಿದ್ದವು.[13]

'ಐಯ್ಯಣ ವಂಶ ಚರಿತ ಕಾವ್ಯಂ' ಕೃತಿಯು ಈತನ ಕುರಿತು ಮಾಹಿತಿಯನ್ನು ಒದಗಿಸುವ ಬಹು ಮುಖ್ಯ ಕೃತಿಯಾಗಿದೆ.[14]

4. ಎರಡನೇ ಜಯಸಿಂಹ (ಕ್ರಿ.ಶ 1015–43) :

ಬೀದರ ಜಿಲ್ಲೆಯ ಬಸವಕಲ್ಯಾಣದ ಪೀರ ಪಾಷಾ ದರ್ಗಾದ ಗೋರಿಯ ದಕ್ಷಿಣ ದಿಕ್ಕಿಗೆ ಪಾವಟಿಗೆಗೆ ಹಾಕಿರುವ ಕಲ್ಲಿನ ಮೇಲಿರುವ ಕ್ರಿ.ಶ 1025ರ ಶಾಸನದ ಆರಂಭದಲ್ಲಿ ಚಾಲುಕ್ಯ ವಂಶದ ಮೂಲವನ್ನು ಬ್ರಹ್ಮನಿಂದ ಆರಂಭಿಸಿ ಅವನ ಮಗ ಮನು ಮುಂದೆ ಹಾರಿತಿ ಹುಟ್ಟಿದ. ಅವನ ಮಗ ಚಾಲುಕ್ಯ, ಆ ವಂಶದಲ್ಲಿ ಕೆಲವರು ಆಳಿದ ನಂತರ ವಿಷ್ಣುವರ್ಧನ ವಿಜಯಾದಿತ್ಯ ಎಂಬುವವನು ಜನಿಸಿದನು. ಮುಂದೆ ಸತ್ಯಾಶ್ರಯ ಎಂಬುವವನು ರಾಜ್ಯವಾಳಿದ. ಅವನ ಹೆಸರೆ ಈ ವಂಶದವರಿಗೆ ಬಂತು ಇವರು ಮುಂದೆ ಕುಂತಳ ಪ್ರದೇಶದ ಅಧಿಪತಿಯಾದರು ಎನ್ನುವ ಕಲ್ಯಾಣ ಚಾಲುಕ್ಯರ ಮೂಲ ದಿಂದ ಸತ್ಯಾಶ್ರಯನ ಮಗನೇ ಜಯಸಿಂಹನು. ಹೀಗೆ ರಾಜನ ವಂಶಾವಳಿಯ ಮಾಹಿತಿಯನ್ನು ಈ ಶಾಸನ ಒದಗಿಸುತ್ತದೆ.[15]

ಬೀದರ ಜಿಲ್ಲೆಯ ಭಾತಂಬ್ರ ಗ್ರಾಮದ ಪ್ರಭು ಬಿರಾದಾರ ಅವರ ಹೊಲದಲ್ಲಿರುವ ಕಲ್ಲಿನ ಮೇಲಿರುವ ಶಾಸನದ ಮೇಲೆ ಜಯಸಿಂಹನ ಮಹಾಪ್ರಧಾನ ಇಂದ್ರದಂಡನಾಯಕನ ತಾಯಿ ಮೈಲಲ... ಅನ್ನ ಶಾಂತಿಯನ್ನು ಮಾಡಿ, ವೀರದೇವರಿಗೆ ಗಣಮತದ ವೃತ್ತಿಯಾಗಿ ತಲ್ಲಿಗಾಂವೆಯಲ್ಲಿ 2 ಮತ್ತರು ಭೂಮಿ, 2 ಮನೆಗಳನ್ನು ನೀಡಿರುವು ತಿಳಿಯುತ್ತದೆ. ಈ ತೆಲ್ಲಿಗಾಂವೆ ಎನ್ನುವುದು ಈಗಿನ ತೆಲಗಾವ ಇದೆ.[16] ಹೀಗೆ ಎರಡನೇ ಜಯಸಿಂಹನ ಕಾಲಘಟ್ಟದಲ್ಲಿ ಆತನ ಮಾಂಡಲೀಕ ರಾಜಮನೆತನಗಳ

ಹೆಣ್ಣು ಮಕ್ಕಳಿಗೆ ದಾನ ಧರ್ಮ ಮಾಡಲು ಅನುಮತಿ ಇತ್ತೇನ್ನುವುದು ತಿಳಿದು ಬರುತ್ತದೆ.

ಈ ಹಿಂದಿನ ರಾಜರಂತೆ ಎರಡನೇ ಜಯಸಿಂಹನ ಕಾಲದಲ್ಲಿ ಚೋಳ–ಚಾಲುಕ್ಯರ ನಡುವೆ ಎಡಬಿಡದೆ ಹೋರಾಟ ಮುಂದುವರೆಯಿತು. ವೆಂಗಿ ಅವರಿಬ್ಬರ ಹೋರಾಟಕ್ಕೆ ರಣರಂಗವಾಯಿತು. ಗಂಗವಾಡಿ ಮತ್ತು ನೋಳಂಬವಾಡಿಗಳನ್ನು ಜಯಿಸಿದ ಒಂದನೇ ರಾಜೇಂದ್ರಚೋಳನು ವೆಂಗಿನ ಮೇಲೆ ಪರಮಾಧಿಕಾರ ಬಯಸಿ ತುಂಗಭ್ರಾ ನದಿಯನ್ನು ದಾಟಿ ಚಾಲುಕ್ಯ ಪ್ರದೇಶಗಳ ಮೇಲೆ ದಾಳಿ ಇಟ್ಟನು. ಗೋದಾವರಿ ನದಿಯ ದಂಡೆಯ ಮೇಲೆ ಉಗ್ರಕಾಳಗವು ನಡೆಯಿತು. ಪಾರಮಾರರ ದೊರೆ ಭೋಜನು ಕೊಂಕಣವನ್ನು ಆಕ್ರಮಿಸಿಕೊಂಡನು. ರಾಜೇಂದ್ರ ಚೋಳನು ಪಾರಮಾರರೊಂದಿಗೆ ಕೂಡಿ ಚಾಲುಕ್ಯ ರಾಜಧಾನಿ ಮಾನ್ಯಖೇಟವನ್ನು ಸುಟ್ಟುಹಾಕಿದನು. ಬಹು ಕಾಲದ ವರೆಗೆ ರಾಜಧಾನಿಯಾಗಿ ಮೇರೆದ ಮಾನ್ಯಖೇಟವು ಸುಟ್ಟು ನಾಶವಾಯಿತು.[17]

ವೆಂಗಿಯ ಆಧಿಪತ್ಯಕ್ಕಾಗಿ ಚೋಳರಿಗೂ ಮತ್ತು ಚಾಲುಕ್ಯರಿಗೂ ಯುದ್ಧ ಮುಂದುವರೆದು ಕ್ರಿ.ಶ 1014ರಲ್ಲಿ ವಿನಯಾದಿತ್ಯನ ಮಗ ಒಂದನೆಯ ರಾಜರಾಜ ವೆಂಗಿಯಲ್ಲಿ ಪಟ್ಟಕ್ಕೆ ಬಂದನು ಇವನ ತಾಯಿ ಚೊಳನೃಪ ರಾಜರಾಜನ ಮಗಳು. ಹೀಗಾಗಿ ವೆಂಗಿ ಅರಸ, ಚೋಳ ಅರಸ ರಾಜೇಂದ್ರನ ಸಹಾಯವನ್ನು ಪಡೆದನು. ಇದನ್ನು ಒಂದನೇ ರಾಜರಾಜ ಮಲಸಹೋದರ, ಎರಡನೆಯ ವಿಜಯಾದಿತ್ಯ ವಿರೋಧಿಸಿ, ಜಯಸಿಂಹನ ನೆರವಿನೊಂದಿಗೆ ವೆಂಗಿಯ ಅರಸನಾಗಲು ಹವಣಿಸಿದ. ಚಾಲುಕ್ಯ ಮತ್ತು ಚೋಳರ ನಡುವೆ ಭೀಕರ ಹೋರಾಟವು ಮುಸಂಗಿ (ಮಸ್ಕಿ)ಯಲ್ಲಿ ನಡೆದು ಜಯಸಿಂಹನು ಸೋಲನ್ನು ಅನುಭವಿಸಿದನು. ಚೋಳರು ರಟ್ಟಪಾಡಿಯನ್ನು ಸುಟ್ಟರೆಂದು ಹೇಳಿಕೊಂಡಿದ್ದಾರೆ. ಜಯಸಿಂಹನು ತಕ್ಷಣವೇ ಚೇತರಿಸಿಕೊಂಡು ಚೋಳರನ್ನು ತನ್ನ ರಾಜ್ಯದಿಂದ ಓಡಿಸಿದನು. ಇದರಿಂದಾಗಿ ರಾಯಚೂರ್ ದೋಅಬ್ ಪ್ರದೇಶವು ಇವನ ವಶವಾಯಿತು. ತನ್ನ ಆಶ್ರಯ ನಿರೀಕ್ಷಿಸಿ ಬಂದಿದ್ದ ವಿಜಯಾದಿತ್ಯನನ್ನು ಮಸ್ಕಿಯ ಸುತ್ತಲಿನ ಪ್ರಾಂತಾಧಿಕಾರಿಯನ್ನಾಗಿ ನೇಮಿಸಿದನು.[18]

ಕ್ರಿ.ಶ 1020ರಲ್ಲಿ ಭೋಜನು ಎರಡು ಸಾರಿ ತನ್ನ ವಿಜಯೋತ್ಸವ ಆಚರಿಸಿಕೊಂಡು ತೈಲನ ಕೈಗಳಲ್ಲಿ ಪರಮಾರ ಮುಂಜನು ಅನುಭವಸಿದ ಪರಾಭವಕ್ಕೆ ಮುಯ್ಯಿ ತೀರಿಸಿಕೊಂಡನು. ಆದರೆ ಭೋಜನು ಬಹಳ ಕಾಲ ಕೊಂಕಣವನ್ನು ಹಿಡಿದಿರಿಸಿಕೊಳ್ಳಲಾಗಲಿಲ್ಲ. 1024ರ ವೇಳೆಗೆ ಜಯಸಿಂಹನು ತನ್ನ ದಂಡನಾಯಕನಾದ ಮಹಾಪ್ರಚಂಡ ದಂಡನಾಯಕ ಚಾವನರಸನ ನೆರವಿನಿಂದ ಕೊಂಕಣವನ್ನು ಮರಳಿ ಗಳಿಸಿದನು.[19] ರಾಜೇಂದ್ರನು ತನ್ನ ಮಗಳಾದ ಅಮ್ಮಂಗ ದೇವಿಯನ್ನು ರಾಜರಾಜ ನರೇಂದ್ರನಿಗೆ ನೀಡಿ ವೆಂಗಿಯನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡನು. ಜಯಸಿಂಹನು ಕೊಂಕಣವನ್ನು ಮುತ್ತಿ ಅಪಾರ ಸಂಪತ್ತನ್ನು ಕೈವಶ ಮಾಡಿಕೊಂಡನು. ಜಯಸಿಂಹನು

1031ರಲ್ಲಿ ಚೋಳರೊಂದಿಗೆ ಯುದ್ಧ ಮಾಡಬೇಕಾಯಿತು. ಈ ಸಾರಿ ವಿಜಯ ಅವನ ಪಾಲಿಗಿತ್ತು. ಚೋಳ ಸೈನ್ಯವನ್ನು ಸೋಲಿಸಿ ಹಿಂದಕ್ಕೆ ಅಟ್ಟಿದನು. ಚೋಳರು ಚಾಲುಕ್ಯ ರಾಜ್ಯ ಬಿಟ್ಟು ಓಡಿದರು. ಅವರನ್ನು ಚೇರರಾಜ್ಯದವರೆಗು ಬೆನ್ನಟ್ಟಿದರು. ಅದೇ ರೀತಿ ಶಿಲಾಹಾರ ರಾಜನನ್ನು ಕಳಚೂರಿ ಗಾಂಗೆಯದೇವನನ್ನು ಪಾರಮಾರ ಭೋಜನನ್ನು ಸೋಲಿಸಿದನು. ಮೂರನೆಯ ಭಿಲ್ಲಮನು ಚಾಲುಕ್ಯ ಚಕ್ರವರ್ತಿ ಜಯಸಿಂಹನೊಂದಿಗೆ ಸಂಘರ್ಷಕ್ಕೆ ಇಳಿದಂತೆ ಕಾಣುತ್ತದೆ. ಕ್ರಿ.ಶ 1042ರ ಆನಂತಪುರ ಶಾಸನದಲ್ಲಿ ದಂಡನಾಯಕ ಬಿಜ್ಜರಸನನ್ನು 'ಭಿಲ್ಲಮದಿಶಾಪಟ್ಟಂ' ಎಂದು ಕರೆಯಲಾಗಿದೆ. ಚಾಲುಕ್ಯರ ದಂಡನಾಯಕ ವಾಜಿ ವಂಶದ ನಾಗವರ್ಮನು ಸೇವುಣ ದೇಶವನ್ನು ಸುಟ್ಟಿದನ್ನು ಕ್ರಿ.ಶ 1047ರ ಒಂದನೆಯ ಸೋಮೇಶ್ವರನ ತದಖೇಲ್ ಶಾಸನದಲ್ಲಿ ಹೇಳಲಾಗಿದೆ.

ಕರಮಿದ ಸಾಧ್ಯಮೆಂಬ ಕೊಳನಂ ಭುಜಗರ್ಬ್ಬದೆ ಕೊಂಡನುಗ್ರ ಸಂ
ಗರಜಯಿ ನಾಗವರ್ಮ್ಮ ವಿಭು ಸಾಧಿಸಿದಂ ಸವಲಕ್ಕೆ ವಿಂಧ್ಯಮಂ
ಪರವರಿದೇಯ್ದಿ ವಿಂಧ್ಯಪತಿ ಮಲ್ಲನನಾಜಿಯೋಳಾಂತು ಕೊಂದನಾ
ದುರ್ದ್ದರಿಪಿದನೊಂದೆ ಕೊಳ್ಳಿಯೊಳೆ ಸೇವುಣದೇಶಮನೇಂ ಪ್ರತಾಪಿಯೋ
ಆದಟರೆವೆಂದು ಬೀಗಿ ಬೆಸೆದಿರ್ಪ್ಪನಿತಲ್ಲದೆ ಪೂಣ್ದು ಪೋಗಿಡಂ
ಗದ ಸವಲಕ್ಕವಿಂಜದ ವರಾಳದ ಲಂಜಿಯ ಚಕ್ರಗೊಟ್ಟದ
ಗ್ಗದ ನೃಪರಂ ಪೋಳಂಚೆಲಯ ವೀರ ಶಿಖಾಮಣಿ ನಾಗವರ್ಮನಂ
ದದೆ ನೆಲನಂ ನಿಮಿರ್ಚ್ಚಿದವರಾರ್ಗ್ಗಳ ಚಕ್ರಿಯ ದಂಡನಾಯಕರು॥
'ವಿಂಧ್ಯಾಧಿಪಮಲ್ಲ ಶಿರಚ್ಛೇದನಂ ಸೇವುಣದಿಶಾಪಟ್ಟಂ'[20]

ಜಯಸಿಂಹನು ಪಾರಮಾರರ, ಕಳಚೂರಿಗಳ, ಚೋಳರ ಸೈನ್ಯವನ್ನು ಸೋಲಿಸಿದನೆಂದು ಹೇಳಲಾಗಿದೆ.[21]

ಜಯಸಿಂಹನಿಗೆ ಜಗದೇಕಮಲ್ಲ, ಮಲ್ಲಿಕಾಮೋದ, ವಿಕ್ರಮಸಿಂಹ, ತ್ರೈಲೋಕ್ಯಮಲ್ಲ ಎಂಬ ಬಿರುದುಗಳಿದ್ದವು.[22] ಇವನಿಗೆ ಪದ್ಮಲದೇವಿ, ಸುಗ್ಗಲದೇವಿ, ಬಿಜ್ಜಲದೇವಿ, ದೇವಳದೇವಿ ಸೋಮಲದೇವಿ, ಮಹಾದೇವಿ, ಲಕ್ಷ್ಮೀದೇವಿ ಹೀಗೆ ಏಳು ರಾಣಿಯರಿದ್ದರು. ಇವರಲ್ಲಿ ರಾಣಿ ಸೋಮಲದೇವಿಯು ಎಡೆದೊರೆ 2000ದಲ್ಲಿ ಆಡಳಿತದಲ್ಲಿ ತೊಡಗಿಸಿಕೊಂಡಿದ್ದಾಗ ಹೆಗ್ಗಡೆ ಕಿಕ್ಕಪಯ್ಯನು ಬಳ್ಳನಿಟ್ಟಿಗೆಯಲ್ಲಿ (ಇಂದಿನ ಬಲ್ಲಟಗಿ) ನಿರ್ಮಿಸಿದ ವಿಷ್ಣು ದೇವಾಲಯಕ್ಕೆ 20 ಮತ್ತರು ಭೂಮಿಯನ್ನು ದಾನ ನೀಡಿದ್ದಾಳೆ. ಈಕೆ ಏತಗಿರಿಯ (ಇಂದಿನ ಯಾದಗಿರಿ) ನೆಲೆವಿಡಿನಲ್ಲಿದ್ದಾಗ ದಿದ್ದಿಗೆಯ ಮಧುಸೂಧನ ಭಟ್ಟರಿಗೆ ಇದೆ ಬಳ್ಳನಿಟ್ಟಿಗೆಯಲ್ಲಿ

ಪಿರಿಯಕೋಲಲ್ಲಿ ಅಳೆದು 100 ಮತ್ತರು ಭೂಮಿಯನ್ನು ದಾನನೀಡುವುದರ ಜೊತೆ 10 ಕೈ ಅಳತೆಯ ಮನೆಯ ನಿವೇಶನವನ್ನು ದಾನವಾಗಿ ನೀಡಿದ್ದಾಳೆ. ಈಕೆ ಪುಟ್ಟಲಕೆರೆಯ ನೆಲೆವೀಡಿನಲ್ಲಿದ್ದಾಗ ಕ್ರಿ.ಶ 22.01.1036ರಲ್ಲಿ ಜಯಚಂಡರತಿ ಮಾರಬ್ಬೆಯ ಕೋರಿಕೆಯ ಮೇರೆಗೆ ಎಡದೊರೆ 2000ರಲ್ಲಿಯ ಮೊಸಳೆಕಲ್ಲು 300ರ ಭತ್ತಗ್ರಾಮವಾದ ಬಳ್ಳನಿಟ್ಟಿಗೆಯ ಬಂಕೇಶ್ವರ ದೇವರಿಗೆ 1 ನಿವೇಶನ, 1 ಗಾಣ, 1 ತೋಟ ಮೊದಲಾದವುಗಳನ್ನು ಗೋಕರ್ಣವಾಸಿ ಜೀನರಿಗೆ ಬಿಟ್ಟುಕೊಟ್ಟಳು. ಈಕೆ ಕಾಲಕಾಲಕ್ಕೆ ತನ್ನ ನೆಲೆವೀಡನ್ನು ಬದಲಾಯಿಸುತ್ತಿದ್ದಂತೆ ತೋರುತ್ತದೆ.[23]

ಎರಡನೇ ಜಯಸಿಂಹನ ಆಳ್ವಿಕೆಯ ಕೊನೆಯವರೆಗೂ ಮಾನ್ಯಖೇಡವು ರಾಜಧಾನಿಯಾಗಿತ್ತು. ಇತರ ಉಪರಾಜಧಾನಿಗಳು ಯಾದಗಿರಿ ಮತ್ತು ಕೊಲ್ಲಿಪಾಕೆ ಹಾಗೂ ಹೊತ್ತಲಕೆರೆ ಇಂದಿನ ಬಳ್ಳಾರಿ ಜಿಲ್ಲೆಯಲ್ಲಿ, ಕಲ್ಯಾಣವನ್ನು ನೆಲೆವೀಡು (ಖಾಯಂ ಶಿಬಿರ) ಎಂದ ಉಲ್ಲೇಖಿಸಲಾಗಿದೆ. ಜಯಸಿಂಹನಿಗೆ ಹಿರಿಯ ಪುತ್ರ ಒಂದನೆಯ ಸೋಮೇಶ್ವರನಾಗಿದ್ದು, ಅವ್ವಲದೇವಿ, ಸೋಮಲದೇವಿಯರೆಂಬ ಹೆಣ್ಣು ಮಕ್ಕಳಿದ್ದರು. ತರುವಾಯ ಅವನ ಮಗ ಒಂದನೇ ಸೋಮೇಶ್ವರನು ಪಟ್ಟಕ್ಕೆ ಬಂದನು.[24]

ಮಾನ್ಯಖೇಡ ರಾಜಧಾನಿಯನ್ನು ಚೋಳರು ಸುಟ್ಟು ಹಾಕಿ ಅದು ಬಹಳಷ್ಟು ಹಾನಿಗೊಳಗಾಗಿದ್ದರಿಂದ ಜಯಸಿಂಹನು ರಾಜಧಾನಿಗಾಗಿ ಸೂಕ್ತ ಸ್ಥಳವನ್ನು ಹುಡುಕುವ ಪ್ರಯತ್ನ ಪ್ರಾರಂಭವಾಯಿತು. ಏತಗಿರಿ (ಇಂದಿನ ಯಾದಗಿರಿ) ಪೊಟ್ಟಳಕೆರೆ (ಆಂಧ್ರದ ಪಟ್ಲಚೇರು), ಕೊಲ್ಲಿಪಾಕ (ಹೈದ್ರಾಬಾದ್‌ಗೆ 75 ಕಿ.ಮೀ ದೂರದಲ್ಲಿರುವ ಕೊಲನುಪಾಕ)ವು ಇವನ ರಾಜಕೀಯ ಚಟುವಟಿಕೆಗಳ ಕೇಂದ್ರಗಳಾಗಿದ್ದವು.

ಬೀದರ ಜಿಲ್ಲೆಯ ಕಾರಪಾಕಪಳ್ಳಿಯ ಭೀಮಶೆಟ್ಟಿ ಮಾಲಿ ಪಾಟೀಲ್ ರವರ ಹೊಲದ ಸಮೀಪದಲ್ಲಿರುವ ಗಿಡದ ಪಕ್ಕದಲ್ಲಿ ಬಿದ್ದಿರುವ ಕಲ್ಲು ತುಂಡಿನ ಕ್ರಿ.ಶ 1027ರ ಶಾಸನಲ್ಲಿ, ಚಾಲುಕ್ಯರ ಜಯಸಿಂಹನ ಆಳ್ವಿಕೆಯ ವಿಷಯ ನಮೂದಿಸಿದ್ದು, ಹಿರಿಯ ಮಗನಿಗಾಗಿ ಕಪಾಲದೋಳುಣ್ಡಂ ಎಂದಿದೆ.[25]

5. ಒಂದನೇ ಸೋಮೇಶ್ವರ (ಕ್ರಿ.ಶ 1043–68) :

ಒಂದನೇ ಸೋಮೇಶ್ವರನು ಬಾಲ್ಯದಿಂದಲೇ ವೇದ, ಆಗಮಗಳು ಮತ್ತು ಇತಿಹಾಸದಲ್ಲಿ ಪಾರಂಗತನಾಗಿದ್ದು, ಗುರುಗಳ ಬಗೆಗೆ ಬಹಳ ಗೌರವವನ್ನು ಹೊಂದಿದ್ದನೆಂದು ಬಿಲ್ಹಣನು ತನ್ನ ಕಾವ್ಯಕೃತಿಯಲ್ಲಿ ತಿಳಿಸುತ್ತಾನೆ. ಒಂದನೇ ಸೋಮೇಶ್ವರನು ಕ್ರಿ.ಶ 1033ರಲ್ಲಿ ಯುವರಾಜನಾಗಿ ಕಟ್ಟರನೆಲೆವೀಡಿನಿಂದ ಆಳ್ವಿಕೆ ಮಾಡುತ್ತಿರುವ ವಿಷಯ ಕ್ರಿ.ಶ 1033ರ ಶಿವಪುರಸ ಶಾಸನದಿಂದ ತಿಳಿದು ಬರುತ್ತದೆ. ಅಲ್ಲದೇ ಸೇವುಣ ಅರಸ ಸೇವುಣ ಚಂದ್ರಬನನ್ನು ಸೋಲಿಸಿದನೆಂದು ತಿಳಿದು ಬರುತ್ತದೆ. ಅದಲ್ಲದೇ ಚೋಳ ಅರಸ ರಾಜಾಧಿರಾಜನಿಗೂ ಹಾಗೂ ಎರಡನೇ ಜಯಸಿಂಹನಿಗೂ ಕ್ರಿ.ಶ 1022–23ರಲ್ಲಿ ನಡೆದ ಕಲಿದಿಂಡಿ ಯುದ್ಧದಲ್ಲಿಯೂ

ಸಹ ಒಂದನೇ ಸೋಮೇಶ್ವರನು ಯುವರಾಜನಾಗಿ ಭಾಗವಹಿಸಿರುವುದು ಕಂಡು ಬರುತ್ತದೆ.

ರಾಜಧಾನಿಯಾಗಿದ್ದ ಮಾನ್ಯಖೇಡ ಚೋಳರಿಂದ ಸುಟ್ಟು ಬಹಳಷ್ಟು ಹಾನಿಗೊಳಗಾಗಿರುವುದರಿಂದ ಒಂದನೇ ಸೋಮೇಶ್ವರನ ತಂದೆ ಜಯಸಿಂಹನ ಕಾಲದಿಂದ ಮತ್ತೊಂದು ರಾಜಧಾನಿಯನ್ನು ನಿರ್ಮಿಸುವ ಪ್ರಯತ್ನ ಜಾರಿಯಲ್ಲಿಯೇ ಇತ್ತು. ಸೋಮೇಶ್ವರನು ಮುಂದೆ ಕ್ರಿ.ಶ 1043–44ರಲ್ಲಿ ಪಟ್ಟಣಕ್ಕೆ ಬಂದ ನಂತರ ಕಲ್ಯಾಣ ಪಟ್ಟಣವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಕಲ್ಯಾಣದಿಂದಲೇ ತನ್ನ ಆಳ್ವಿಕೆ ಮಾಡಲು ಪ್ರಾರಂಭಿಸಿದ. ಮತ್ತು ಕಲ್ಯಾಣಪುರವನ್ನು ರಾಜಧಾನಿಯನ್ನಾಗಿ ಅಭಿವೃದ್ಧಿ ಪಡಿಸಲು ಪ್ರಾರಂಭಿಸಿದನು. ಚಾಲುಕ್ಯ ಮತ್ತು ಚೋಳ ಮನೆತನಗಳ ನಡುವೆ ದಕ್ಷಿಣ ಭಾರತದ ರಾಜಕೀಯ ಪರಮಾಧಿಕಾರ ಸ್ಥಾಪನೆಗೆ ನಿರಂತರ ಸಂಘರ್ಷ ನಡೆಯುತ್ತಿತ್ತು. ಗಂಗವಾಡಿ, ನೊಳಂಬವಾಡಿ ಮತ್ತು ವೆಂಗಿಗಳ ಮೇಲೆ ಹತೋಟಿ ಸಾಧಿಸಲು ಅವೆರಡೂ ಸ್ಪರ್ಧಿಸಿ ಹೋರಾಡುತ್ತಿದ್ದವು. ಒಂದನೇ ಸೋಮೇಶ್ವರನ ಕಾಲದಲ್ಲಿ ಈ ಸ್ಪರ್ಧೆ, ಹೋರಾಟವು ಪರಾಕಾಷ್ಠತೆಯನ್ನು ಮುಟ್ಟಿತ್ತು. ವೆಂಗಿಯ ಮೇಲೆ ಸಾರ್ವಭೌಮತ್ವ ಸ್ಥಾಪಿಸಲು ರಾಜಾಧಿರಾಜ ಚೋಳನು ತುಂಗಭದ್ರಾ ನದಿಯನ್ನು ದಾಟಿ ಚಾಲುಕ್ಯ ಪ್ರದೇಶಗಳ ಮೇಲೆ ದಾಳಿಯಿಟ್ಟನು.[26]

ವೆಂಗಿಯ ಅರಸ ರಾಜರಾಜ ಹಾಗೂ ಅವನ ಮಲತಮ್ಮ ವಿಜಯಾದಿತ್ಯ ಇವರ ನಡುವೆ ಇದ್ದ ವೈಮನಸ್ಸಿನಲ್ಲಿ ಸೋಮೇಶ್ವರನು ವಿಜಯಾದಿತ್ಯನ ಪಕ್ಷ ವಹಿಸಿದನು. ಆದರೆ ತನ್ನ ದಂಗೆಯ ಫಲವವನ್ನು ವಿಜಯಾದಿತ್ಯನು ಬಹಳಕಾಲ ಸವಿಯಲು ಸಾಧ್ಯವಾಗಲಿಲ್ಲ. ನೀಲಕಂಠ ಶಾಸ್ತ್ರಿಗಳ ಮಾತುಗಳಲ್ಲಿ, ಸೋಮೇಶ್ವರನು ವಿಜಯಾದಿತ್ಯನ ವಿಕ್ಷುಬ್ಧ ಆಸೆಯನ್ನು ಚೋಳರ ಎದುರಾಗಿ ನಡೆಸುವ ಯುದ್ಧದ ಆಳದಲ್ಲಿ ಹೂಡಿದ ಕಾಯಿಯನ್ನಾಗಿ ಬಳಸಿಕೊಂಡನು. ವಿಜಯಾದಿತ್ಯನು ಸೋಮೇಶ್ವರನ ಅಜೀವ ಮಿತ್ರನಾದನು. ಯುದ್ಧವಿಲ್ಲದ ಸಮಯದಲ್ಲೂ ಅವನು ಸೋಮೇಶ್ವರನ ಆಸ್ಥಾನದಲ್ಲಿ ಸನ್ಮಾನ್ಯ ಅತಿಥಿಯಾಗಿರುತ್ತಿದ್ದನು.

ಸೋಮೇಶ್ವರನು ಪಟ್ಟಾಭಿಷಿಕ್ತನಾದ ಕೂಡಲೆ ಯುದ್ಧಗಳ ಈ ಸರಣಿಯನ್ನು ಪ್ರಾರಂಭಿಸಿದನು. ಅಮರಾವತಿಯಲ್ಲಿದ್ದ ಚೋಳರ ಎದುರಾಗಿ ಸೈನ್ಯವನ್ನು ಕಳುಹಿಸಿದನು.[27]

ಧನ್ನಾಡ ಕಾಳಗ ಕ್ರಿ.ಶ 1042–44ರ ಸಂದರ್ಭದಲ್ಲಿ ನಡದಿದ್ದು ಇದರ ಬಗ್ಗೆ ಕಲ್ಯಾಣ ಚಾಲುಕ್ಯರ ಶಾಸನಗಳಲ್ಲಿ ಮಾಹಿತಿ ಇಲ್ಲ. ಧನ್ನಾಡ ಕಾಳಗದಲ್ಲಿ ದಂಡನಾಯಕರಾದ ಗುಂಡಪ್ಪಯ್ಯನ್ ಹಾಗೂ ಗಂಗಾಧರನ್ ಈ ಯುದ್ಧದಲ್ಲಿ ತಮ್ಮ ಗಜಗಳೊಂದಿಗೆ ಧರೆಗುರುಳಿದರು. ಚಾಲುಕ್ಯರ ಸೈನ್ಯವನ್ನು ಗಜಗಳನ್ನು ದುಂಬಿಗಳನ್ನು ಹಾಗೂ ಕೆವುಡನ್ (ಚೋಳಪ್ರಭು) ಬಲಿಷ್ಠ ಸೈನ್ಯಗಳು ಮುತ್ತಿಗೆ ಹಾಕಿದವು. ಈ ನಿರ್ಣಾಯಕ ಕಾಳಗದಲ್ಲಿ ಅಪ್ರತಿಮ ಧೈರ್ಯಶಾಲಿಗಳಾದ ವಿಕ್ಕಿ

ಮತ್ತು ವಿಜಯಾದಿತ್ಯನ ಬಲಿಷ್ಠ ಸಂಗಮಯ್ಯನ ಹಾಗೂ ಇತರರು ಹೇಡಿಗಳಂತೆ ರಣರಂಗದಿಂದ ಹಿಂದೆ ಸರಿದರೋ ಆಗ ಚೋಳದೊರೆ ಇವರೆಲ್ಲರನ್ನು ಬಂಧಿಸಿ ತನ್ನ ಪೋಷಾಕುಗಳಲ್ಲಿ ಜಯ ಪಡೆದು "ತನ್ನಡಿಯರ್ ಜಯಂ ಗೊಂಡು" ಚಾಲುಕ್ಯರ (ಸೋಮೇಶ್ವರನ) ಧನ–ಕನಕಾದಿಗಳನ್ನು, ಗಜಾಶ್ವಗಳನ್ನು ಸೆರೆಹಿಡಿದು ವೈರಿಗಳ ಪ್ರಮುಖ ನಗರ ಕೊಲ್ಲಿಪಾಕಿಯನ್ನು ಅಗ್ನಿಗಾಹುತಿ ಮಾಡಲಾಗಿ ಅಹಮಲ್ಲನು ಹೆದರಿಕೊಂಡನು. ಇದರಿಂದ ಈ ಯುದ್ಧದಲ್ಲಿ ಚೋಳ ಅರಸನಿಗೆ ಜಯ ಲಭಿಸಿರುವುದು ಸ್ಪಷ್ಟವಾಗಿದೆ. ಆದರೆ ಈ ಯುದ್ಧದ ಕುರಿತು ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ.

ಬಳ್ಳಿಗಾವಿಯ ಶಾಸನದಲ್ಲಿ ಸೋಮೇಶ್ವರನ ಪಾದಪದ್ಮೋಪಜೀವಿಯಾದ ಮಹಾಮಂಡಳೇಶ್ವರ ಚಾವುಂಡರಾಯರಸ ಬನವಾಸಿ 12000, ಸಾಂತಳಿಗೆ 1000, ಹೈವೆ 500 ಪಶ್ಚಿಮ ಸಮುದ್ರದ ವರೆಗಿನ ಭೂಮಿ ಆಳುತ್ತಿದ್ದು ತನ್ನ ಚಕ್ರವರ್ತಿಯ ಆಜ್ಞೆಯ ಮೇರೆಗೆ ಚೋಳ ಅರಸನನ್ನು ಸೋಲಿಸಿದನೆಂದು ಹೇಳುತ್ತದೆ.[28]

ಕಂಪಿಲಿ ಹಾಗೂ ಪುಂಡೂರು ಕಾಳಗಗಳು: ಚೋಳರ ಔತ್ತರೇಯ ದಂಡಯಾತ್ರೆಯಲ್ಲಿ ನೊಳಂಬವಾಡಿ 32000ದ ರಾಜಧಾನಿ ಕಂಪಿಲೆಯನ್ನು ಗೆದ್ದು ಸುಟ್ಟಿದನ್ನು ಅವರ ಶಾಸನಗಳು ಹೇಳುತ್ತವೆ. ಈ ಯುದ್ಧದಲ್ಲಿ ಗಂಡರ ದಿನಕರನ್, ನಾರನನ್, ಕನವಾಡಿ ಗಣಪತಿ, ಮಧಿಸೂಧನ ಮತ್ತು ಇತರ ಅನೇಕರು ಕಂಪಿಲಿ ಪಟ್ಟಣದಲ್ಲಿರುವ ಸಲುಕ್ಕಿಯರ್ ಅರಮನೆಯನ್ನು ನಾಶಗೊಳಿಸಿದರೆಂದು ಹೇಳಲಾಗಿದೆ. ಬೇರೆಯ ಶಾಸನಗಳಲ್ಲಿ ಈ ಸಂಘರ್ಷವು ಕೃಷ್ಣಾನದಿಯ ಎತಟದಲ್ಲಿರುವ ಪುಂಡೂರು ಎಂಬಲ್ಲಿ ನಡೆದಿದ್ದು ಅಲ್ಲಿ ಸೋಮೇಶ್ವರನ ಸಾಮಂತ ವಿಚ್ಚಯನ ಸಹೋದರರು ಆತನ ತಾಯಿ ಮತ್ತು ಮಕ್ಕಳು ಹಾಗೂ ಕೆಲವು ಸ್ತ್ರೀಯರನ್ನು ಯುದ್ಧ ಕೈದಿಗಳನ್ನಾಗಿ ಬಂಧಿಸಿ ಪುಂಡೂರನ್ನು ಚೋಳರು ಲೂಟಿ ಮಾಡಿ ನಾಶಮಾಡಿದರೆಂದು ವರ್ಣಿಸಲಾಗಿದೆ. ಚೋಳಸೈನ್ಯ ವಿಚ್ಚಯನನ್ನು ರಣರಂಗದಿಂದ ಹೊರದೂಡಿದ ನಂತರ ಒಂದನೆಯ ಸೋಮೇಶ್ವರ ಅಹವಮಲ್ಲನು ಚೋಳರೊಂದಿಗೆ ಶಾಂತಿ ಒಪ್ಪಂದವೇರ್ಪಡಿಸಿಕೊಳ್ಳುವಂತೆ ತನ್ನ ಅಧಿಕಾರಿಗಳನ್ನು ಒತ್ತಾಯಿಸಿದ. ಆದರೆ ಚೋಳ ಅರಸನು ಚಾಲುಕ್ಯ ಅಧಿಕಾರಿಗಳನ್ನು ಅಮಾನುಷವಾಗಿ ನಡೆಸಿಕೊಳ್ಳುವುದರ ಜೊತೆಗೆ ಒಪ್ಪಂದಕ್ಕೆ ಬಂದಂತಹ ಅಧಿಕಾರಿಗಳ ಎದೆಯ ಮೇಲೆ ಅಹವಮಲ್ಲನು ಭಯದಿಂದ ಓಡಿಹೋದ ಎಂದು ಹೇಳಿಕೆಯನ್ನು ಬರೆಯಿಸಿದ.[29]

ಚೋಳ ಶಾಸನಗಳ ಪ್ರಕಾರ ರಾಜಾಧಿರಾಜನ ಸೈನ್ಯಗಳು ಅಹವಮಲ್ಲನ ಎದೆಯಲ್ಲೂ ದಿಗಿಲನ್ನು ಹುಟ್ಟಿಸಿದವು. ಅವನ ಹಲವು ದಳಪತಿಗಳನ್ನು ಉಗ್ರವಾಗಿ ಶಿಕ್ಷಿಸಿ, ಕೊಲ್ಲಿಪಾಕಿ ನಗರವನ್ನು ಸುಟ್ಟು ಹಾಕಲಾಯಿತು. ಇವನ ಉಪ ರಾಜಧಾನಿಗಳಲ್ಲಿ ಒಂದು ನಗರವೂ ಕೈಬಿಟ್ಟಿತು. ಸೋಮೇಶ್ವರನು ಮೊದಲ ಸುತ್ತಿನ ಕದನದಲ್ಲಿ ಪರಾಜಿತನಾದನು. ಚೋಳರು ಮತಾಂಧರಾಗಿ ಜೈನ ಧರ್ಮದ

ವಿರೋಧಿಗಳಾಗಿದ್ದರು. ಈ ದಾಳಿಯ ಕಾಲಕ್ಕೆ ಚೋಳರು ಕೊಲ್ಲಾಪುರ ಸುತ್ತಲಿನ ಅನೇಕ ಜೈನ್ ಬಸದಿಗಳನ್ನು ಧ್ವಂಸ ಮಾಡಿದರು. ಎರಡನೇ ಸುತ್ತಿನಲ್ಲಿ ಚಾಲುಕ್ಯ–ಚೋಳ ಸೇನೆಗಳು ಕೃಷ್ಣಾತೀರದ ಪುಂಡೂರಿನಲ್ಲಿ ಘರ್ಷಿಸಿದವು. ನಗರವನ್ನು ವಶಪಡಿಸಿಕೊಳ್ಳಲಾಯಿತೆಂದು ಚೋಳ ಶಾಸನಗಳು ಹೇಳುತ್ತವೆ. ಪುಂಡುರನ್ನು ಚೋಳರು ಲೂಟಿ ಮಾಡಿ ನೆಲಸಮಗೊಳಿಸಿ ಸಂಪೂರ್ಣವಾಗಿ ಧೂಳೀಘಟಮಾಡಲಾಯಿತು. ಸೋಮೇಶ್ವರನು ಕೃಪಾಭೀಕ್ಷೆಯನ್ನು ಯಾಚಿಸಿದನೆಂದು ಹೇಳಲಾಗಿದೆ. ಆದರೆ ಕರ್ನಾಟಕದ ಹಲವು ಇತಿಹಾಸಕಾರರು ಇದುಕೇವಲ ಉತ್ಪ್ರೇಕ್ಷೆಯೆಂದು ತಳ್ಳಿಹಾಕುತ್ತಾರೆ. ಘರ್ಷಣೆಯ ಈ ಭಾಗವನ್ನು ಪುನರ್ ನಿರ್ಮಿಸಲು ಕಲ್ಯಾಣ ಚಾಲುಕ್ಯ ಶಾಸನಗಳು ಸಹಾಯ ಮಾಡುವುದಿಲ್ಲ. ಯುದ್ಧದ ಫಲಿತಾಂಶಗಳು ನಿರ್ಣಾಯಕವಾಗಿರಲಿಲ್ಲ ಎಂದಷ್ಟು ಮಾತ್ರ ಹೇಳಬಹುದು.[30]

ಚೋಳರ ಶಾಸನಗಳ ಪ್ರಕಾರ ಚೋಳ ಅರಸ ರಾಜಾಧಿರಾಜನು ಇಲ್ಲಿಂದ ಕಲ್ಯಾಣಕ್ಕೆ ಮುನ್ನುಗ್ಗಿ, ಕಲ್ಯಾಣಪುರವನ್ನು ದಹಿಸಿ ವೀರಾಭಿಷೇಕವನ್ನಾಚರಿಸಿ, 'ವಿಜಯ ರಾಜೇಂದ್ರ' ನೆಂಬ ಬಿರುದನ್ನು ಧರಿಸಿದ. ಈ ಘಟನೆಯು ಚೋಳ ಅರಸನಿಂದ ಚಾಲುಕ್ಯರ ಆನೆಗಳನ್ನು ಬಂಧಿಸುವದರ ಮೂಲಕವೂ, ಹಾಗೂ ಆನೆಗಳಿಗೆ ಸಿರುತ್ತುರೈ, ಪೆರಂದುರೈ ಮತ್ತು ದೈವಭೀಮಾರತಿ ನದಿಗಳಲ್ಲಿ ಸ್ನಾನಮಾಡಿಸುವುದರ ಮೂಲಕ, ಹಾಗೂ ಕಾಳಿದಾಸ, ಚಾಮುಂಡ ಮತ್ತು ಎಲ್ಲವಮಾರಾಜನ್, ಕೊಮ್ಮಯನ್, ಸೇರಿದಂತೆ ದಂಡನಾಯಕರು, ಮಹಾಂಂಡಳೇಶ್ವರರು ಸೇರಿದಂತೆ ಇತರರನ್ನು ಕಾಳಗದಲ್ಲಿ ಸೋಲಿಸುವದರ ಮೂಲಕ ಮುಂದೊರೆಯಿತು. ಚೋಳ ಅರಸನ ಕಲ್ಯಾಣದ ಮೇಲಿನ ಆಕ್ರಮಣವನ್ನು ಕುರಿತು ದರಾಸುರಮ್‌ದ ದ್ವಾರಪಾಲಕ ವಿಗ್ರಹದ ಕೆಳಭಾಗದಲ್ಲಿ ಕೊರೆಯಲಾದ ಶಾಸನದ ಉಲ್ಲೇಖವನ್ನು ಒದಗಿಸಲಾಗಿದೆ. ಈ ಶಾಸನದ ಪಠ್ಯವು ' ಈ ವಿಗ್ರಹವನ್ನು ಉಡೈಯರ್ ಶ್ರೀ ವಿಜಯರಾಜೇಂದ್ರದೇವರು ಕಲ್ಯಾಣಪುರವನ್ನು ದಹಿಸಿದ ನಂತರ ತಂದರೆಂಬುದಾಗಿ' ತಿಳಿಸುತ್ತದೆ. ಈ ಪಠ್ಯದಾಧಾರದ ಮೇಲೆ ಈ ವಿಗ್ರಹ (ದ್ವಾರಪಾಲಕ)ವನ್ನು ಕಲ್ಯಾಣಪೂರವನ್ನು ಕೊಳ್ಳೆಹೊಡೆದ ನಂತರ ತಂದಿರಬಹುದಾಗಿದೆ. ಈ ಎಲ್ಲ ಘಟನಾವಳಿಗಳು ಕ್ರಿ.ಶ 1044ರ ಕ್ಕಿಂತ ಮುಂಚೆ ಸಂಭವಿಸಿದವೆಂದು, ಕ್ರಿ.ಶ 1044ರ ವರೆಗೂ ಕಲ್ಯಾಣವು ಚಾಲುಕ್ಯರ ರಾಜಧಾನಿಯಾಗಿರಲಿಲ್ಲವೆಂದೂ, ಕಲ್ಯಾಣವು ರಾಜಧಾನಿಯೆಂದು ಉಲ್ಲೇಖಿಸುವ ಅತ್ಯಂತ ಪ್ರಾಚೀನ ಶಾಸನವು ಕ್ರಿ.ಶ 1048ರ ಚಿಕ್ಕೆರೂರು ಶಾಸನವಾಗಿದ್ದು, ಕ್ರಿ.ಶ 1048ರ ವೇಳೆಗೆ ಚಾಲುಕ್ಯರು ಕಲ್ಯಾಣಪುರವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಅಭಿವೃದ್ಧಿಪಡಿಸುತ್ತಿದ್ದರೆಂದೂ, ಸಹಜವಾಗಿಯೇ ವೈರಿಗಳಾದ ಚೋಳರು ಕಲ್ಯಾಣವನ್ನೇ ತಮ್ಮ ಮುಖ್ಯ ಗುರಿಯನ್ನಾಗಿಟ್ಟುಕೊಂಡರೆಂದು ಊಹಿಸಬಹುದಾಗಿದೆ. ದಾಳಿಯಲ್ಲಿ ಹಾನಿಯಾಗಿರಬಹುದು ಆದರೆ ಕಲ್ಯಾಣವನ್ನು ಸುಟ್ಟು ಹಾಕಿದರು ಎನ್ನುವ ಅವರ ಶಾಸನಗಳ ಉಲ್ಲೇಖಗಳು ನಂಬಲು

ಅರ್ಹವಲ್ಲದ್ದು. ಈ ದಾಳಿಯಲ್ಲಿ ಚೋಳ ಅರಸನ ಸಾಧನೆಗಳು ಸಂಪೂರ್ಣ ಸೊನ್ನೆ, ರಾಜಾಧಿರಾಜ, ಪರಮಾಭೋಜನು ಚಾಲುಕ್ಯ ಪ್ರಾಂತಗಳ ಮೇಲೆ ದಾಳಿಮಾಡಿದಾಗ ಚೋಳ ಅರಸ ಕೌಶಲ್ಯದಿಂದ ವರ್ತಿಸಿ, ಸೋಮೇಶ್ವರ ಪರಮಾರಭೋಜನ ಜೊತೆಗೆ ಯುದ್ಧದಲ್ಲಿ ಮಗ್ನನಾಗಿದ್ದಾಗ, ಚಾಲುಕ್ಯರ ಮೇಲೆ ದಾಳಿ ಮಾಡಿ ರಟ್ಟಪಾಡಿಯನ್ನು ಕೊಳ್ಳೆಹೊಡೆದನಾದರೂ ತನ್ನ ಕಾರ್ಯಸಾಧನೆಯಲ್ಲಿ ವಿಫಲನಾದ.[31]

ನಂತರ ಒಂದನೇ ಸೋಮೇಶ್ವರನು ಕಲ್ಯಾಣಪೂರವನ್ನು ಕಲ್ಯಾಣನಗರವನ್ನಾಗಿ ಮಾಡಿದನು. ಬಿಲ್ಹಣನ ಪ್ರಕಾರ ಕಲ್ಯಾಣನಗರವನ್ನು ಎಷ್ಟರ ಮಟ್ಟಿಗೆ ಅಲಂಕರಿಸಿದನೆಂದರೆ' ಅಂತಹ ಇನ್ನೊಂದು ನಗರವು "ಹಿಂದೆ ಎಂದೂ ಇರಲಿಲ್ಲ, ಮುಂದೆ ಎಂದೂ ಇರುವುದಿಲ್ಲ" ' ನೆಲೆವೀಡು' ಆಗಿದ್ದುದು ಸಾಮ್ರಾಜ್ಯದ ರಾಜಧಾನಿಯಾಗಿ ಮೇರೆಯಿತು.

ನಂತರ ಕ್ರಿ.ಶ 1049 ರಿಂದ 1051ರ ವರೆಗೆ ಶಿಲಾಹಾರರ ದಮನದ ಕಡೆಗೆ ಗಮನಕೊಟ್ಟು ಒಂದನೇ ಸೋಮೇಶ್ವರನು, ತನ್ನ ತಂದೆಯಾದ ಜಯಸಿಂಹನ ಆಳ್ವಿಕೆಯಲ್ಲಿ ಚಾಲುಕ್ಯರಿಂದ ಶಿಲಾಹಾರ ಭೋಜನು ಕೊಂಕಣವನ್ನು ವಶಪಡಿಸಿಕೊಂಡಿದ್ದನು. ಆ ಪ್ರದೇಶವನ್ನು ಪುನಃ ತನ್ನ ರಾಜ್ಯಕ್ಕೆ ಸೇರಿಸಲು ಒಂದನೇ ಸೋಮೇಶ್ವರನು ಕದಂಬರು ಸೇರಿದಂತೆ ತನ್ನ ಇತರ ಸಾಮಂತರನ್ನು ಒಟ್ಟಿಗೆ ಸೇರಿಸಿ ಶಿಲಾಹಾರರ ಮೇಲೆ ದಾಳಿ ಮಾಡಿದನು. ಚಾಲುಕ್ಯ ಮುಖಂಡ ಪುಲಿಕೇಶಿ ಠಾಣಾವರೆಗೂ ಮುನ್ನುಗ್ಗಿ ಶಿಲಾಹಾರರ ಮುಮ್ಮಣಿಯ ಕತ್ತನ್ನು ಮುರಿದು ಅವನ ಜಾಗೆಯಲ್ಲಿ ತನ್ನ ಒಬ್ಬ ಪ್ರತಿನಿಧಿಯನ್ನು ನೇಮಿಸುತ್ತಾನೆ. ತ್ರೈಲೋಕ್ಯಮಲ್ಲ ಸೋಮೇಶ್ವರನು ಸ್ವತಃ ಶಿಲಾಹಾರ ರಾಜ್ಯದ ಮೇಲೆ ದಂಡೆತ್ತಿ ಹೋಗಿ ಕ್ರಿ.ಶ 1049ರ ಅಗಷ್ಟ್ ಮಾಸದಲ್ಲಿ ಚಾಲುಕ್ಯಪ್ರಭು ಕರ್ಹಾಡನಾಡಲ್ಲಿಯ ವಗ್ಘರಪುರದ ನೆಲೆವೀಡಿನೊಳ ಬೀಡು ಬಿಟ್ಟಿದ್ದನೆಂದು ನಂತರ ಪನ್ನಾಳೆಯು ಇಂದಿನ ಕೊಲ್ಹಾಪುರ ಸಮೀಪದ ಪನ್ಹಾಳದಲ್ಲಿ ಸೋಮೇಶ್ವರನು ಮುಮ್ಮಣಿಯನ್ನು ಹತ್ತಿಕ್ಕಿದ್ದನೆಂದು ಪ್ರಿನ್ಸ್ ಆಫ್ ವೇಲ್ಸ್ ಮ್ಯೂಜಿಯಮ್‌ದ ತಾಮ್ರಪಟದ ಶಾಸನ ತಿಳಿಸುತ್ತದೆ. ಬಿಲ್ಹಣ, ಆರನೇ ವಿಕ್ರಮಾದಿತ್ಯನ ರಾಣಿಯಾದ ಚಂದ್ರಲೇಖಲ (ಚಂದಲಾದೇವಿ) ಕರಹಾಟ ಪ್ರದೇಶವನ್ನಾಳುತ್ತಿದ್ದ ಶಿಲಾಹಾರ ವಿದ್ಯಾಧರನ ಮಗಳು ಎಂದು ಹೇಳಿದ್ದಾನೆ. ಈ ಘಟನೆ ನಡೆದ ನಂತರವೇ ಮಾರಸಿಂಹ (ವಿದ್ಯಾಧರ) ಆರನೆಯ ವಿಕ್ರಮಾದಿತ್ಯನಿಗೆ ತನ್ನ ಮಗಳನ್ನು ಮದುವೆ ಮಾಡಿಕೊಟ್ಟಿರಬಹುದು.[32]

ಕ್ರಿ.ಶ 1050–1051ರ ವರೆಗೆ ಮಾಳ್ವದ ಮೇಲೆ ದಂಡಯಾತ್ರೆಯಲ್ಲಿ ಒಂದನೆಯ ಸೋಮೇಶ್ವರನು ತನ್ನೊಂದಿಗೆ ದಂಡನಾಯಕ ಗುಂಡಮಯ್ಯ, ಮಹಾಸಾಮಂತಾಧಿಪತಿ ನಾಗದೇವ, ವಾನಸ ಕುಟುಂಬ ಮಧೂಸುದನ ಮತ್ತು ಪುಲಿಕೇಶಿ, ಹೊಯ್ಸಳರ ಅರಸ ಎರೆಯಂಗ, ಕಲಚೂರಿ ಕರ್ಣ, ಚಾಲುಕ್ಯ ಭೀಮರು,

ರಂಜೇರು ಸಿಂಧನ ಗೊಂಕನೃಪ ಸೇರಿದಂತೆ ಇನ್ನಿತರ ಪ್ರಮುಖರನ್ನು ಸೇರಿಸಿಕೊಂಡು, ಇವರೆಲ್ಲರ ಸಹಾಯದಿಂದ ಚಾಲುಕ್ಯ ಅರಸ ಮಾಳವನ್ನು ಮುತ್ತಿ, ಧಾರಾನಗರಿಯನ್ನು ಆಕ್ರಮಿಸಿ ಬಂಗಾರದ ಆಭರಣಗಳು ವಶಪಡಿಸಿಕೊಂಡು ಸ್ತ್ರೀಯರನ್ನು ಹಿಡಿದು ಅವರಿಗೆ ವಿಧವೆಯರ ದೀಕ್ಷೆ ಕೊಟ್ಟು ಧಾರಾನಗರದ ಜೊತೆಗೆ ಏಳು ಮಾಳವಗಳನ್ನು ಪ್ರಳಯಾಗ್ನಿಯಂತೆ ಕೊಳ್ಳಿ ಇಟ್ಟು, ಸುಟ್ಟು ರಾಜ್ಯಚಿಹ್ನೆಗಳನ್ನು ವಶಪಡಿಸಿಕೊಂಡಿದನ್ನು ಕರೀಂನಗರ ಜಿಲ್ಲೆಯ ನರಸಿಂಗಾಪುರಂ ಶಾಸನ ತಿಳಿಸುತ್ತದೆ. ನಂತರ ಆತನು ಉಜ್ಜಯನಿಯತ್ತ ಮುನ್ನಗ್ಗಿ ಅದನ್ನು ಸಹ ಸುಟ್ಟುಹಾಕಿದನು. ಯುದ್ಧದಲ್ಲಿ ಪರಮಾರರ ದೋರೆ ಭೋಜನು ಸಂಪೂರ್ಣವಾಗಿ ಪರಾಭವಗೊಂಡನು.[33]

ಈ ಕಡೆಗೆ ರಾಜಾಧಿರಾಜನು ನೋಳಂಬವಾಡಿಯನ್ನು ಮುತ್ತಿ ರಾಜಧಾನಿ ಕಂಪಿಲೆ ನಗರವನ್ನು ವಶಪಡಿಸಿಕೊಂಡು, ಆ ನಗರವನ್ನು ಸುಟ್ಟು ಅಲ್ಲಿ ಒಂದು ವಿಜಯಸ್ತಂಭವನ್ನು ನೇಡುತ್ತಾನೆ. ಇದು ಕ್ರಿ.ಶ 1050ಕ್ಕೂ ಪೂರ್ವದಲ್ಲಿ ನಡೆದ ಯುದ್ಧವಾಗಿದೆ. ವಿಜಯಶಾಲಿಯಾದ ರಾಜಾಧಿರಾಜ ಇಲ್ಲಿಂದ ತನ್ನ ಸೇನೆಯನ್ನು ಮುಂದುವರೆಸಿಕೊಂಡು ಕೊಪ್ಪಳದ ಮಾರ್ಗವಾಗಿ ಬೆಳ್ವೊಲ ದೇಶಕ್ಕೆ ಅಡಿಯಿಡುತ್ತಾನೆ. ಬೆಳ್ವೊಲದ ರಾಜಧಾನಿ ಅಣ್ಣಿಗೆರೆ, ಈ ಅಣ್ಣಿಗೆರೆಯಲ್ಲಿ ರಾಷ್ಟ್ರಕೂಟ ರಾಜಕುಮಾರಿ ರೇವಕನಿಮ್ಮಡಿಯ ವಲ್ಲಭನಾದ ಗಂಗಪೇರ್ಮಾಡಿ ಭೂತುಗನು ಸುಂದರವಾದ ಜಿನಾಲಯ ಕಟ್ಟಿಸುತ್ತಾನೆ. ಈ ಭೂತುಗನು ರಾಷ್ಟ್ರಕೂಟ ಚಕ್ರವರ್ತಿಯ ಪರವಾಗಿ ತೆಕ್ಕೋಲಂ ಕಾಳಗದಲ್ಲಿ ಭಾಗವಹಿಸಿ ತನ್ನ ಬಂಟ ಮಣಲೇರನ ನೆರವಿನೊಂದಿಗೆ ರಾಜಾದಿತ್ಯಚೋಳನ ಆನೆಯ ಅಂಬಾರಿಯನ್ನೆ ರಣರಂಗನ್ನಾಗಿಸಿಕೊಂಡು ರಾಜಾದಿತ್ಯನನ್ನು ಕೊಂದು ಯುದ್ಧವನ್ನು ಗೆದ್ದುಕೊಡುತ್ತಾನೆ. ಇದರಿಂದ ಸಂತೋಷಗೊಂಡ ಮೂರನೆಯ ಕೃಷ್ಣನು ಬೆಳ್ವೊಲ 300, ಪುಲಿಗೆರೆ 300, ಬನವಾಸಿ 12000, ವಿಭಾಗಗಳನ್ನು ಕೊಡುತ್ತಾನೆ. ಇವುಗಳನ್ನು ಪಡೆದು ಆಳುತ್ತಿರುವಾಗ ಅಣ್ಣಿಗೆರೆಯಲ್ಲಿ ಸುಂದರವಾದ ಜಿನಾಲಯವನ್ನು ಕಟ್ಟಿಸುತ್ತಾನೆ. ಈ ಜಿನಾಲಯ ಎರಡು ನೂರರಲ್ಲಿ ಪ್ರಸಿದ್ಧಿಯನ್ನು ಪಡೆದಿದ್ದು. ಇಂತಹ ಐತಿಹಾಸಿಕ ಮತ್ತು ಪುರಾತನ ಜಿನಾಲಯವನ್ನು ರಾಜಾಧಿರಾಜನು ದಾಳಿ ಮಾಡುವ ಕಾಲಕ್ಕೆ ಜಿನಾಲಯವನ್ನು ನಾಶಮಾಡುತ್ತಾನೆ. ಈ ಘಟನೆಯು ಕ್ರಿ.ಶ 1071ರ ಗವರಾಡ ಶಾಸನದಲ್ಲಿ,

> 'ಪೊಲೆಚೋಳಂ ನೆಲೆಗಟ್ಟು ತನ್ನ ಕುಳಧರ್ಮ್ಮಾಚಾರಮಂ ಬಿಟ್ಟಟು ಬೆ
> ಳ್ವಲ ದೇಶಕ್ಕಡಿಯಿಟ್ಟು ದೇವಗೃಹ ಸಂಧೋಹಂಗಳಂ ಸುಟ್ಟು ಕ
> ಯ್ಯಲೆ ಪಾಪಂ ಬೆಳೆದೆತ್ತೆನಲ್ಕೆ ಧೂರಧೊಳು ತ್ರೈಲೋಕ್ಯ ಮಲ್ಲಂಗೆ ಪಂ
> ದಲೆಯಂ ಕೊಟ್ಟಸುವಂ ಬಿಸುಟ್ಟು ನಿಜವಂಶೋಚ್ಚಿತ್ತಿಯಂ ಮಾಡಿದ '
> 'ಜಿನನಾಥಾವಾಸಮಂ ವಾಸವರಿತು ನಿಭಮಂ ಕಷ್ಟಕಾಕತೀಯತ

ದುರ್ಭಾವನೆಯಿಂ

ಚಾಂಡಾಳ ಚೋಳಂ ಸುಡಿಸಿ ಕಿಡಿಸಿ ವಿಚ್ಛಿತ್ತಿಯಾಗಿರ್ದುದೇಂ ನೆಟ್ಟನೆ

ನಷ್ಟೋದ್ದಾರಮಂ ಸಾಸ್ವತಮತಿಶಯಮಾಯ್ತೆಂಬಿನಂ ಮಾಡಿ

ತಚ್ಛಾಸನಮಾಚಂದ್ರಾರ್ಕತಾರಂ ನಿಲೆ ನಿಲಿಸಿದನೇಂ ಧನ್ಯನೋ ಲಕ್ಷ್ಮಭೂಪಂ'

ಹೀಗೆ ರಾಜಾಧಿರಾಜನು ಬೆಳ್ವೊಲ ದೇಶವನ್ನು ವಶಪಡಿಸಿಕೊಂಡು ಸೇನೆಯನ್ನು ಮುಂದುವರೆಸಿಕೊಂಡು ಕೊಲ್ಲಾಪುರಕ್ಕೆ ಹೋಗುತ್ತಾನೆ. ಕೊಲ್ಲಾಪುರದ ಲಕ್ಷ್ಮಿ ದೇವಾಲಯವನ್ನು ಸುಡುತ್ತಾನೆ. ಈ ವಿಷಯವನ್ನು ಕೊಲ್ಲಾಪುರ ಶಾಸನದಲ್ಲಿ, 'ಸ್ವಸ್ತಿ ಶ್ರಿಮಹಾಲಕ್ಷ್ಮಿ ದೇವಿಯರಲ್ಲಿಗೆ ಚೋಳಂ ಬನ್ದು ದೇಗುಲಮಂ ಸುಡುವಾಗ ಮಾಲಗಾರಿ ಮುಟ್ಟಯ್ಯ ದೇವರ್ಗ್ಗೆ ವೇಲೆಗೊಣ್ಡು ಕಾದಿ' ವೀರಮರಣ ಹೊಂದುತ್ತಾನೆ.[34]

ಕ್ರಿ.ಶ 1050 (1054)ರಲ್ಲಿ ಚಾಲುಕ್ಯರು ಚೋಳರು ಮತ್ತೊಮ್ಮೆ ಕಾದಿದರು. ಈ ಸಾರಿ ಯುದ್ಧವಾದದ್ದು ಕೊಪ್ಪಂ ಎಂಬಲ್ಲಿ, ಇದು ಕೊಪ್ಪಳ ಜಿಲ್ಲೆ ಎಂದು ಗುರುತಿಸಲಾಗಿದೆ. ರಾಜಾಧಿರಾಜನು ತಾನೇ ಸ್ವತಃ ಚೋಳಸೇನೆಯನ್ನು ಮುನ್ನಡೆಸಿದನು. ಒಂದನೇ ಸೋಮೇಶ್ವರನು ಕಲ್ಯಾಣಿ ಚಾಲುಕ್ಯರ ಸೈನ್ಯವನ್ನು ಮುನ್ನಡೆಸಿಕೊಂಡು ಯುದ್ಧದಲ್ಲಿ ಭಾಗವಹಿಸಿದರು. ಮಣಿಮಂಗಲಂ ಶಾಸನದಲ್ಲಿ, ಚಾಲುಕ್ಯ ಸೈನ್ಯ ಈ ಯುದ್ಧಭೂಮಿಯಲ್ಲಿ ಮುಖ್ಯವಾಗಿ ಆನೆಯ ಮೇಲೆ ಕುಳಿತಿದ್ದ ರಾಜಾಧಿರಾಜನನ್ನು ಗುರಿಯಾಗಿಟ್ಟುಕೊಂಡಿದ್ದು, ಮೊದಲು ಬಾಣಗಳಿಂದ ಚೋಳನೃಪ ಕುಳಿತಿದ್ದ ಆನೆಯನ್ನು ಘಾಸಿಗೊಳಿಸಿ, ನಂತರ ರಾಜಾಧಿರಾಜನ ಮೇಲೆ ಬಾಣ ಪ್ರಯೋಗ ಮಾಡಿ ಕೊಂದು ಕೆಳಗುರುಳಿಸಿದರು. ಆಗ ಮೀಸಲು ಪಡೆಯನ್ನಿಟ್ಟುಕೊಂಡು ಕಾದಿದ್ದ ರಾಜೇಂದ್ರನು ಯುದ್ಧರಂಗಕ್ಕೆ ಕಾಲಿಟ್ಟನು. ಯುದ್ಧರಂಗದಲ್ಲೇ ತನ್ನನ್ನು ರಾಜನೆಂದು ಘೋಷಿಸಿಕೊಂಡು ಪಟ್ಟಾಭಿಷಿಕ್ತನಾದನು. ಚೋಳ ಶಾಸನಗಳ ಪ್ರಕಾರ ಹಲವು ಜನ ಚಾಲುಕ್ಯ ದಂಡನಾಯಕರುಗಳಾದ ಪುಲಕೇಶಿನ್, ದಸಪನಮನ್, ನನ್ನಿ ನೊಳಂಬನ್ ಹಾಗೂ ಅಹವಮಲ್ಲನ ಸಹೋದರ ಜಯಸಿಂಹ ರಣಭೂಮಿಯಲ್ಲಿ ಕೊಲ್ಲಲ್ಪಟ್ಟರು. ವನ್ನಿಯ, ರೇವಣ, ತುತ್ತವಂ ಮತ್ತು ಕುಂದಮಯ್ಯನ್ ರಣಭೂಮಿಯಿಂದ ಓಡಿಹೋದರು. ಚೋಳರಾಜೇಂದ್ರನು ಚಾಲುಕ್ಯ ರಾಣಿಯರಾದ ಸತ್ತಿಯವ್ವೆ, ಸಂಗಪ್ಪಾಯಿ ಹಾಗೂ ಇತರರನ್ನು ಅಪಾರಸಂಪತ್ತಿನೊಂದಿಗೆ ಬಂಧಿಸಿದನು. ನಂತರ ಕೊಲ್ಲಾಪೂರದ ವರೆಗೂ ಮುನ್ನುಗ್ಗಿ ಅಲ್ಲಿ ವಿಜಯಸ್ತಂಭವನ್ನು ನಡೆಸಿದನೆಂದು ವಿವರಿಸಿವೆ. ಕೊಲ್ಲಾಪುರ ಲಕ್ಷ್ಮೀವಿಲಾಸ ಅರಮನೆಯ ವಸ್ತು ಸಂಗ್ರಹಾಲಯದಲ್ಲಿರುವ ಕಲ್ಲು ಒಡೆದಿದ್ದು ಶಾಸನದ ಒಂದೇ ಪಟ್ಟಿಕೆ ಲಭ್ಯವಿದ್ದು, ಅದರಲ್ಲಿ ಚೋಳ ಅರಸನೊಬ್ಬನು ಮಹಾಲಕ್ಷ್ಮೀ ದೇವಾಲಯವನ್ನು ಮುತ್ತಿ ಅದನ್ನು ಸುಡಲೆತ್ನಿಸುತ್ತಿದ್ದಾಗ ಮುಟ್ಟಯ್ಯ (ಮುತ್ತಯ್ಯ)ನೆಂಬ ಯೋಧನೊಬ್ಬನು ಹೋರಾಡಿ ಮಡಿದನೆಂದು ದಾಖಲಾಗಿದೆ.[35]

ಈ ಯುದ್ಧದ ಫಲಿತಾಂಶ ಕೂಡ ಇತಿಹಾಸಕಾರರಲ್ಲಿ ಚರ್ಚೆಯ ವಿಷಯವಾಗಿದೆ. ಬಹುಶಃ ಫಲಿತಾಂಶ ನಿರ್ಣಾಯವಾಗಿರಲಿಲ್ಲವೆಂದು ತೋರುತ್ತದೆ. ಹಿಂದಿರುಗುವ ದಾರಿಯಲ್ಲಿ ರಾಜೇಂದ್ರನು ಬಳ್ಳಾರಿ ಜಿಲ್ಲೆಯ ಕುಮ್ಮಟದುರ್ಗಕ್ಕೆ ಮುತ್ತಿಗೆ ಹಾಕಿದನು. ಸೋಮೇಶ್ವರನು ಅವನನ್ನು ಅಟ್ಟಿಸಿಕೊಂಡು ಹೋಗಿ ಚಾಲುಕ್ಯ ಗಡಿಯಿಂದಾಚೆಗೆ ಓಡಿಸಿದ.[36] ಕ್ರಿ.ಶ 1055ರ ಅಗಸ್ಟರಂದು ತನ್ನ ರಾಣಿ ಕೇತಲದೇವಿಯು ಆಳುತ್ತಿದ್ದ ಅಗ್ರಹಾರದಲ್ಲಿ ತಂಗಿ ಅಲ್ಲಿಯ ದೇವಾಲಯಕ್ಕೆ ಭೂಮಿದಾನ ನೀಡಿದನೆಂದು ತಿಳಿದು ಬರುತ್ತದೆ.

ಕೊಪ್ಪಂ (ಕೊಪ್ಪಳ)ದಲ್ಲಿ ಯುದ್ಧವಾಗಿ ರಾಜಾಧಿರಾಜ ಚೋಳ ಹತನಾಗಿದ್ದು ಖೇಣಿ ರಂಜೋಳ ಶಾಸನದಲ್ಲಿ, **"'ಮುನಿದುಗ್ರಾರತಿ ಸೈನಂಗಳನೆತುಳಿದು ಕೊಂದಿಕ್ಕಿ ಚಾಲುಕ್ಯ ಸಿಂಹಾಸನ ಚೋಳನಟ್ಟಿಸಲೊತವಗ ಲೊಟ್ಟೆರಿದಾಡಿಸಿ ತುದಿಯೋಲು ಗೊಂಕನಾರಾಡಿಸಿದಂ ಗೊಂಕನೃಪಂ'** ಅಂತ ದಾಖಲಾಗಿದ್ದರಿಂದ ಅಟ್ಟಳೆಯ ರಂಜೇರು ಸಿಂಧರನ ದೊರೆ ಗೊಂಕನೆ ಚೋಳರನ್ನು ಸದೆಬಡಿದು ಓಡಿಸಿ, ಗೊಂಕನೇ ರಾಜಾಧಿರಾಜನನ್ನು ಕೊಂದಿರಬಹುದೆಂದು ಊಹಿಸಬಹುದಾಗಿದೆ.[37]

ಕೊಪ್ಪಂ ಕಾಳಗವು ಒಂದನೆಯ ಸೋಮೇಶ್ವರನ ಕೀರ್ತಿ, ಸಾಮರ್ಥ್ಯವನ್ನು ಇಮ್ಮಡಿಗೊಳಿಸಿತು. ಈತನು ಮಹಾತ್ವಕಾಂಕ್ಷಿ ಅರಸನಾಗಿದ್ದು, ತನ್ನ ಆಳ್ವಿಕೆಯುದ್ಧಕ್ಕೂ ಯುದ್ಧಗಳಲ್ಲಿಯೇ ನಿರತನಾಗಿದ್ದನೆಂಬುದು ತಿಳಿದು ಬರುತ್ತದೆ. ಈತನ ಕಂಚಿಯ ದಂಡಯಾತ್ರೆಯನ್ನು ಕುರಿತು ಬಿಲ್ಹಣ ತನ್ನ ವಿಕ್ರಮಾಂಕ ದೇವಚರಿತ ಕಾವ್ಯಕೃತಿಯಲ್ಲಿ, ' ಸೋಮೇಶ್ವರನು ತನ್ನ ಸಾಮ್ರಾಜ್ಯ ವಿಸ್ತಾರಕ್ಕೆ ವಿರೋಧಿಯಾಗಿ ಬಂದಿದ್ದ ದ್ರಾವಿಡ ರಾಜನನ್ನು ಸೋಲಿಸಿ, ಕಂಚಿಯನ್ನು ಹೊಕ್ಕು ಅದನ್ನು ಧೂಳಿಪಟಮಾಡಿ, ಅದರ ರಾಜನನ್ನು ಅಡವಿಗೆ ಅಟ್ಟಿದನು' ಎಂದು ವರ್ಣಿಸಲಾಗಿದೆ. ಭಾರಂಗಿಯ ಶಾಸನದಲ್ಲಿಯೂ ಸಹ ಸೋಮೇಶ್ವರನ ದಂಡನಾಯಕನಾದ ಪುಲಿಕೇಶಿಯಿಂದ ಕಂಚಿಯು ದಹಿಸಲ್ಪಟ್ಟಿತು ಎಂದು ಹೇಳಲಾಗಿದೆ.[38]

ಬೀದರ ಜಿಲ್ಲೆಯ ಲಂಜವಾಡದಲ್ಲಿರುವ ಹನುಮಂತದೇವರ ಗುಡಿಯ ಮುಂಭಾಗದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲಿರುವ ಶಾಸನದಲ್ಲಿ, ಚಾಲುಕ್ಯ ತ್ರೈಲೋಕ್ಯಮಲ್ಲನು ಆಳುತ್ತಿದ್ದಾಗ, ಬೋದನದ ಕೆಲವು ದಿವಸದ ಪ್ರಯಾಣದ ಬೀಡಿನಲ್ಲಿದ್ದಾಗ ಮಹಾಸಾಮನ್ತ ಉದಯಗಿರಿಯ ಅಲ್ಲಮ ಮಾಡಿಸಿದ ತೀರ್ಥಸ್ಥಾನದಲ್ಲಿ ತಮ್ಮ ತಂದೆ ಮಹಾಸಾಮನ್ಯ ಬಿಜ್ಜರಸ, ತಾಯಿ ಮಲ್ಲಿಕಬ್ಬೆರಸಿಯರಿಗೆ ಧರ್ಮವಾಗಲಿ ಎಂದು ಬೀರಿಗೆ 40ರ ಬಳಿಯ ಲೆಂಜವಾಡವನ್ನು, ಮನ್ನೆಯದ ತೆರಿಗೆಗಳಿಂದ ಮುಕ್ತಗೊಳಿಸಿ ಪ್ರಭು ಚಾವುಂಡಯ್ಯನ ಕಾಲನ್ನು ತೊಳೆದು ಶಾಸ್ವತವಾಗಿರುವಂತೆ ಅಗ್ರಹಾರವನ್ನಾಗಿ ಮಾಡಿಕೊಟ್ಟಿರುವುದು ತಿಳಿದು ಬರುತ್ತದೆ.[39]

1059ರಲ್ಲಿ ಮತ್ತೆ ಚೋಳರೂ ಚಾಲುಕ್ಯರು ಔಲಿಹಳ್ಳಿ (ಧಾರವಾಡ ಜಿಲ್ಲೆ)ಯಲ್ಲಿ ಕಾದಿದದರು. ವೀರರಾಜೇಂದ್ರನು ಪಟ್ಟಕ್ಕೆ ಬಂದ ನಂತರ ಮಾಡಿದ

ಪ್ರಥಮ ಯುದ್ಧವೇ ಕೊಡಲ ಸಂಗಮದ ಹತ್ತಿರ. ವೀರರಾಜೇಂದ್ರ ಚೋಳನು ಚಾಲುಕ್ಯರಿಗೆದುರಾಗಿ ದಂಡೆತ್ತಿ ಬಂದು ಕೂಡಲಸಂಗಮದಲ್ಲಿ ಅವರು ಘರ್ಷಿಸಿದರು. ಚೋಳರು ಚಾಲುಕ್ಯರ ಸಾಮಂತರನ್ನು ಸೋಲಿಸಿದರು. ಅಹವಮಲ್ಲನ ಮಕ್ಕಳಾದ ವಿಕ್ಕಲನ್, ಸಿಂಗಣನ್‌ರನ್ನು ಕೂಡಲ ಸಂಗವು ತಡಿಯುಲ್ಲಿ ಸೋಲಿಸಿದನೆಂಬುದಾಗಿಯೂ ಹಾಗೂ ಸಿಂಘಣ ಎಂಬುವವನ್ನು ವೀರರಾಜೇಂದ್ರ ಕೊಂದು ಹಾಕಿದನೆಂದು, ಉಳಿದಂತೆ ಮಧುವನನ್, ವಿಕ್ಕಲನ್, ಸಿಂಗಣನ್, ಅಣ್ಣಲನ್‌ರು ಸೋಮೇಶ್ವರ ಸಹಿತ ರಣರಂಗದಿಂದ ಪಲಾಯಗೈದರೆಂದು ಚೋಳರ ಶಾಸನಗಳು ವರ್ಣಿಸಿವೆ.

ಆದರೆ ಈ ಯುದ್ಧದಲ್ಲಿಯೂ ಸಹ ಫಲಿತಾಂಶವು ನಿರ್ಣಾಯಕವಾಗಲಿಲ್ಲ. ಎರಡೂ ಕಡೆ ಅಪಾರ ಸಾವು-ನೊವುಗಳುಂಟಾದವು.[40] ಈ ದಂಡಯಾತ್ರೆಯಲ್ಲಿ ರಾಜಾಧಿರಾಜನು ಚಾಲುಕ್ಯ ದಂಡನಾಯಕನನ್ನು ಸೋಲಿಸಿ ಕಂಚಿಯನ್ನು ವಶಪಡಿಸಿಕೊಂಡನು. ಅನಂತರ ವೆಂಗಿಗಾಗಿ ನಡೆದ ಯುದ್ಧಗಳಲ್ಲಿ ಚಾಲುಕ್ಯರ ಕೈ ಮೇಲಾಯಿತು. ಸೊಮೇಶ್ವರನು ಚೋಳರ ಮಿತ್ರ ನರೇಂದ್ರನ ವಿರುದ್ಧವಾಗಿ ವಿಜಯಾದಿತ್ಯನನ್ನು ವೆಂಗಿಯಲ್ಲಿ ಅಧಿಕಾರಕ್ಕೆ ತಂದನು. ವಿಧಿಯಿಲ್ಲದೆ ಚೋಳರು ವಿಜಯಾದಿತ್ಯನನ್ನು ವೆಂಗಿಯ ರಾಜನೆಂದು ಮಾನ್ಯ ಮಾಡಬೇಕಾಯಿತು. ವೆಂಗಿಯ ಈ ಮೇಲಾಟದಲ್ಲಿ ಜಯಶೀಲನಾದ ಸೋಮೇಶ್ವರನು ವೆಂಗಿ ಪುರಾವರಾಧೀಶ್ವರ ಎಂಬ ಬಿರುದು ಗಳಿಸಿದನು. ಚೋಳರನ್ನು ಹೊರದೂಡುವ ಕಾರ್ಯದಲ್ಲಿ ಅವನ ದಂಡನಾಯಕ ಚಾವುಂಡರಾಜನು ಯಶಸ್ವಿಯಾದನು.ಪರಾಕ್ರಮಿಯಾದ ಸೋಮೇಶ್ವರನಿಗೆ ತ್ರೈಲೋಕ್ಯಮಲ್ಲ, ಅಹವಮಲ್ಲ, ರಾಜನಾರಾಯಣ ಮತ್ತು ವೀರಮಾರ್ತಾಂಡ ಎಂಬ ಬಿರುದುಗಳಿದ್ದವು.[41]

ಸೋಮೇಶ್ವರನಿಗೆ ಎಂಟು ಜನ ಪತ್ನಿಯರು, ಇವರೆಲ್ಲರೂ ಸಾಮಂತ ಮನೆತನದ, ಅಧಿಕಾರಿ ವರ್ಗದವರ ಮಕ್ಕಳು. ಹಿರಿಯರಾಣಿ ಪಲ್ಲವ ವಂಶದವಳಾದ ಬಾಚಲಾದೇವಿಗೆ ಮೂರು ಜನ ಗಂಡು ಮಕ್ಕಳು ಈ ಮೂರು ಜನರು ಆಡಳಿತದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಇನ್ನುಳಿದಂತೆ ಪಿರಿಯರಸಿಯಾಗಿರುವ ಚಂದಲಕಬ್ಬೆ (ಚಂದ್ರಿಕಾದೇವಿ), ಮೈಳಲದೇವಿ, ಕೇತಲದೇವಿ, ಭೀಮಸೇನನ ಮಗಳು ಲಚ್ಚಲದೇವಿ, ಗಂಗಮಾರಸಿಂಹನ ಮಗಳು ಲೀಲಾದೇವಿ, ಬರ್ಮನೆಂಬ ಅಧಿಕಾರಿಯ ಮಗಳು ಚಾಮಲದೇವಿ ಮತ್ತು ಹೊಯ್ಸಳ ವಿನಯಾದಿತ್ಯನ ಮಗಳು ಹೊಯ್ಸಳದೇವಿ. ಸೋಮೇಶ್ವರನ ವ್ಯಕ್ತಿತ್ವ ಮೆರಗುವುದಕ್ಕೆ ಇವರಲ್ಲಿ ಕೆಲವರು ಕಾರಣೀಭುತರಾಗಿದ್ದಾರೆ. ಮತ್ತೆ ಕೆಲವರು ಈತನನ್ನು ಮದುವೆಯಾಗುವುದರ ಮೂಲಕ ಸಮಕಾಲಿನ ರಾಜ್ಯಗಳು ಹಾಗೂ ಚಾಲುಕ್ಯರ ಮಧ್ಯ ಶಾಂತಿಯುಂಟಾಗುವಂತೆ ಮಾಡಿದ್ದಾರೆ. ಬೇರೆ ಬೇರೆ ಮನೆತನಗಳಿಂದ ಬಂದ ಇವರೆಲ್ಲರೂ ಹೊಂದಿಕೊಂಡು ಹೋಗಿರುವಂತೆ ಕಂಡು ಬರುತ್ತದೆ.[42]

ಕೇತಲದೇವಿ :

ತ್ರೈಲೋಕ್ಯಮಲ್ಲ ಸೋಮೇಶ್ವರನ ರಾಣಿ ಕೇತಲದೇವಿಯು ಪೊನ್ನವಾಡದ ಅಗ್ರಹಾರವನ್ನು ಆಳುತ್ತಿದ್ದಳು. ಆಕೆಯ ಕೈಕೆಳಗೆ ವಣಸವಂಶದ ಚಾಕಿರಾಜನು ಸೇವೆ ಸಲ್ಲಿಸುತ್ತಿದ್ದನು. ಈತನು ಪೊನ್ನವಾಡದಲ್ಲಿ ಶಾಂತಿನಾಥ, ಪಾರ್ಶ್ವನಾಥ, ಸುಪಾರ್ಶ್ವನಾಥ, ಬಸದಿಗಳನ್ನು ಕಟ್ಟಿಸಿದ. ಹೊನ್ನವಾಡದ ಇನ್ನೊಂದು ಶಾಸನವು ತ್ರೈಲೋಕ್ಯಮಲ್ಲನ ಪತ್ನಿ ಕೇತಲದೇವಿಯು ತರ್ದವಾಡಿ 1000ದಲ್ಲಿರುವ 600 ಬಾಡದ ಬಳಿ ಇರುವ ಬಾಗೆ 50ರ ಕಂಪಣದಲ್ಲಿದ್ದ ಅಗ್ರಹಾರ ಪೊನ್ನವಾಡವನ್ನು ಆಳುತ್ತಿದ್ದಳೆಂದು ತಿಳಿಸುತ್ತದೆ.

ಮೊದಲನೆಯ ಸೋಮೇಶ್ವರನ ಸ್ವತಂತ್ರ ಮನೋಭಾವದ ರಾಜಕೀಯ ಹಿಡಿತವನ್ನು ಬದುಕಿನಲ್ಲಿ ಸಾಧಿಸಿಕೊಂಡು ಬಂದ ರಾಣಿ 'ಕೇತಲದೇವಿ' ಕ್ರಿ.ಶ 1054ರ ಹೊನ್ನವಾಡದ ಶಾಸನವು ಶ್ರೀಮತ್ಕೇತಲದೇವಿಯರು ತರ್ದ್ಧವಾಡಿ ಸಾಸಿರದೊಳಗಣ ಆರುನೂರುಂಬಾಡದ ಕಂಪಣ ಬಾಗೆಯಯ್ವತ್ತರ ಬಳಿಯ ಉತ್ತಮ ಅಗ್ರಹಾರಂ ಪೊನ್ನವಾಡಮಂ ತ್ರಿಭೋಗಾಭ್ಯಂತರಸಿದ್ದಿಯಿಂದಾಳುತ್ತ ಇರೆ"ಎಂದಿದೆ.

ಹೊನವಾಡದಲ್ಲಿರುವ ಕಲ್ಲಿನ ಮೇಲೆ ಇರುವ ಕ್ರಿ.ಶ 1073ರ ಶಾಸನದಲ್ಲಿ ಚಾಲುಕ್ಯ ಭುವನೈಕಮಲ್ಲನು ರಾಜ್ಯಭಾರ ಮಾಡುತ್ತಿದಾಗ ಅವನ ಗುರು ಸಮಾನನಾದ ಭಾಸ್ಕರಭಟ್ಟನು ಅಗ್ರಹಾರ ಪೊನ್ನವಾಡವನ್ನು ತ್ರೀಭೋಗಾಭ್ಯಂತರ ಸಿದ್ಧಿಯಿಂದ ಆಳುತ್ತಿದ್ದಂತೆಯು, ಭುವನೈಕಮಲ್ಲನು ವೊಡೆವೆಟ್ಟದ ಪಯಣದ ಬೀಡಿನಲ್ಲಿದ್ದಂತೆಯೂ ಹೇಳಿದೆ. ಭಾಸ್ಕರಭಟ್ಟನನ್ನು ಶಾಸನದಲ್ಲಿ ಮಹಾಪ್ರಚಂಡ ದಂಡನಾಯಕ, ವಿಪ್ರದಿವಾಕರ್, ಬಾಣನೇ ಮೊದಲಾದ ಚೋಳಸಾಮಂತರಿಗೆ ಸಿಂಹದಂತಿರುವವನು, ಶಿವಭಕ್ತನು, ಭುವನೈಕಮಲ್ಲನನ್ನು ಆರಾಧಿಸುತ್ತಿದ್ದ ವ್ಯಕ್ತಿಯಾಗಿದ್ದನೆಂದು, ಮನೆವರ್ಗಡೆಯೊಂದೂ ವರ್ಣಿಸಿದೆ.

ಅಂದರೆ ಕ್ರಿ.ಶ 1073 ರಲ್ಲಿ ಪೊನ್ನವಾಡ ಅಗ್ರಹಾರನವನ್ನು ಭಾಸ್ಕರಭಟ್ಟನು ಆಳುತ್ತಿದ್ದನೆಂದ ಮೇಲೆ ಕೇತಲದೇವಿಯು ಈ ಸಮಯದಲ್ಲಿ ಮರಣ ಹೊಂದಿರಬಹುದು. ನಂತರ ಆ ಅಗ್ರಹಾರವನ್ನು ಭುವನೈಕಮಲ್ಲನು ಭಾಸ್ಕರಭಟ್ಟನಿಗೆ ನೀಡಿರಬಹುದೆಂದು ತಿಳಿಯಬಹುದು.

ಸೋಮೇಶ್ವರನು ಕಮ್ಮಟದುರ್ಗ (ಕಂಪಿಲಿ) ಕೋಟೆಯನ್ನು ಬಿಡುಗಡೆಗೊಳಿಸಿ, ವೈರಿಯನ್ನು ನಿಷ್ಕಂಟಕಮಾಡಿ ಕ್ರಿ.ಶ 1055ರ ರಂದು ತನ್ನ ರಾಣಿ ಕೇತಲದೇವಿಯು ಕರಡಿಕಲ್ಲು 400ರಲ್ಲಿಯ ಬನ್ನಿಗೋಳ ಅಗ್ರಹಾರವನ್ನು ಆಳುತ್ತಿದ್ದ ಸಮಯದಲ್ಲಿ ತಂಗಿದ್ದನೆಂದೂ ಅಲ್ಲಿಯ ದೇವಾಲಯಕ್ಕೆ ಭೂಮಿದಾನ ನೀಡಿದನೆಂದೂ ತಿಳಿಸುತ್ತದೆ. ಈ ವೇಳೆಯಲ್ಲಿ ಈ ಪ್ರದೇಶವು ಹೊಯ್ಸಳ ವಿನಯಾದಿತ್ಯನ ನಿಯಂತ್ರಣದಲ್ಲಿದ್ದು, ಅವನು ನಿಧಾನವಾಗಿ ಪ್ರಾಬಲ್ಯಕ್ಕೆ ಬರುತ್ತಿದ್ದನಾದರೂ, ಒಂದನೆಯ ಸೋಮೇಶ್ವರನ

ಹಿರಿಯಾಧಿಕಾರವನ್ನು ಒಪ್ಪಿಕೊಂಡಿದ್ದನು.[50] ಕೇತಲದೇವಿಯು ಬನ್ನಿಗೊಳ ಅಗ್ರಹಾರಕ್ಕೆ ದಾನ ಕೊಟ್ಟಿರುವ ವಿಷಯವನ್ನು ಉಲ್ಲೇಖಿಸುತ್ತದೆ.

ಕ್ರಿ.ಶ 1055ರ ಬನ್ನಿಗೋಳ ಶಾಸನವು, ಇವಳು ಕರಡಿಕಲ್ಲ 300ರ ಬಳಿಯದ್ದು ಬನ್ನಿಗೋಳವನ್ನು 'ಕುತ್ತುಂಬಿತ್ತಿ'ಯಾಗಿ ಆಳುತ್ತಿದ್ದಳೆಂದು ಹೇಳಿದೆ.

ಕೇತಲಾದೇವಿ ಕರಡಿಕಲ್ಲ–400ರ ಅಗ್ರಹಾರ ಬನ್ನಿಗೋಳವನ್ನು, ಕುತ್ತುಂಬಿತ್ತಿ ಮತ್ತು ತ್ರೀಭೋಗಾಭ್ಯಂತರ್ ಸಿದ್ಧಿಯಿಂದ ಆಳುತ್ತಿದ್ದಳೆಂದು ವಿವರಿಸುತ್ತವೆ. ಆದರೆ ಹೊನ್ನವಾಡ ಶಾಸನವು ಇದೇ ರಾಣಿ ಕ್ರಿ.ಶ 1062ರಲ್ಲಿ ತರ್ದವಾಡಿ 1000 ದೋಳಗಣ ನೂರುಂಬಾಡದ ಬಳಿಯ ಕಂಪಣ, ಬಾಗೆ 50ರ ಅಗ್ರಹಾರ ಪೊನ್ನವಾಡ (ಹೊನವಾಡ)ವನ್ನು ತ್ರಿಭೋಗಾಭ್ಯಂತರ್ ಸಿದ್ಧಿಯಿಂದ ಪರಿಪಾಲಿಸುತ್ತಿದ್ದಳು ಎನ್ನುತ್ತದೆ.

ಒಂದನೇ ಸೋಮೇಶ್ವರನ ರಾಣಿ 'ಕೇತಲದೇವಿ'ಯನ್ನು ಹೊನವಾಡ ಶಾಸನವು "ಸರಸ್ವತಿ ಕರ್ಣಾವತಂಸೆ"ಎಂದು ಸ್ತುತಿಸುತ್ತದೆ.[43]

ಮೈಳಲದೇವಿ:

ಒಂದನೇ ಸೋಮೇಶ್ವರನ ರಾಣಿ ಮೈಳಲದೇವಿಯ ಕುರಿತು ಹಾವನೂರು ಶಾಸನದಲ್ಲಿ "ತ್ರೈಲೋಕ್ಯಮಲ್ಲ ದೇವರರ್ದ್ಧಾಂಗನೆ ಶ್ರೀಮತ್ ಪಿರಿಯರಿಸಿ ಮೈಳಲದೇವಿಯರ್ ಬನವಾಸಿ ಪನ್ನಿರ್ಚ್ಛಾಸಿರಮುಮಂ ಆಳುತ್ತಿರೆ" ಎಂದು ಉಲ್ಲೇಖಿಸಿದೆ.

ಕ್ರಿ.ಶ 1049ರ ಶಾಸನದಲ್ಲಿ ಶ್ರೀಮತ್ತ್ರೈಲೋಕ್ಯಮಲ್ಲದೇವ ವಿಶಾಲ ವಕ್ಷಸ್ಥಳ ನಿವಾಸಿನಿಯರಪ್ಪ ಶ್ರೀಮತ್ಪಿರಿಯರಸಿಯರ್ಮೈಳದೇವಿಯರ ಉಲ್ಲೇಖ ಬಾಗೆವಾಡಿ ಶಾಸನದಲ್ಲಿದೆ. ಒಂದನೇ ಸೋಮೇಶ್ವರನ ರಾಣಿ ಮೈಳಲದೇವಿಯ ಅಂಕಕಾರ ಮಹಾಮಂಡಳೇಶ್ವರ ಮಾರರಸನು ಕೊಪ್ಪಂ ಕಾಳಗದಲ್ಲಿ ಭಾಗವಹಿಸಿದ್ದು, ಚೋಳ ರಾಜಾಧಿರಾಜನನ್ನು ಕೊಂದ ಕೀರ್ತಿಗೆ ಪಾತ್ರನಾಗಿದ್ದಾನೆಂದು ಕ್ರಿ.ಶ 1064ರ ಗದಗ ಶಾಸನದಿಂದ ತಿಳಿದು ಬರುತ್ತದೆ.

ರಾಣಿ ಮೈಳಲದೇವಿ ಶೈವಧರ್ಮಕ್ಕೆ ನೀಡಿದ ಪ್ರೋತ್ಸಾಹ ಅವಿಸ್ಮರಣೀಯವಾದುದು. ಕ್ರಿ.ಶ 1049ರಲ್ಲಿ ಈಕೆಯ ಪತಿ ತ್ರೈಲೋಕ್ಯಮಲ್ಲ, ಪ್ರಧಾನಿ ಬಲ್ಲವರಸ, ಬೊಂಥಾದೇವ, ನಯರ ಚಿದ್ದಯ್ಯರಸರ ಸಮಕ್ಷಮದಲ್ಲಿ ಭತ್ತಗ್ರಾಮ ಹೊಂನವಾಡಿಯ ಸೋಮೇಶ್ವರ ದೇವಾಲಯದ ಜೀರ್ಣೋದ್ಧಾರ ದೇವಭೋಗಕ್ಕೆ ಚಂದಯ್ಯಭಟ್ಟರಿಗೆ ದತ್ತಿ ಬಿಡಿಸಿಕೊಟ್ಟಿರುವಳು. ಈ ದೇವಸ್ಥಾನದ ಹೊಣೆಗಾರಿಕೆ ಪಾಶುಪತ ಯೋಗಾಚಾರ್ಯ ಜ್ಞಾನರಾಶಿ ವ್ಯಾಖ್ಯಾನದೇವರಿಗೆ ಸಂಬಂಧಿಸಿತ್ತು.

ಯರಗುಪ್ಪಿ ಮತ್ತು ಗದಗ ಶಾಸನವು ಮಾರರಸನು ಚಾಲುಕ್ಯ ಅರಸನ ಮಹಾಮಾಂಡಳೇಶ್ವರನಾಗಿ ಮೈಳಲದೇವಿಯ ಅಂಕಕಾರ ಎರಡನೂರು (ಬೆಳ್ವಲ–300 ಹಾಗೂ ಪುಲಿಗೇರೆ–300) ವಿಭಾಗಗಳನ್ನು ನೋಡಿಕೊಳ್ಳುತ್ತಿದ್ದನೆಂಬುದಾಗಿ

ತಿಳಿದು ಬರುತ್ತದೆ.

ಕ್ರಿ.ಶ 1062ರ ಯರಗುಪಿ ಶಾಸನದಲ್ಲಿ ಮಹಾಮಂಡಳೇಶ್ವರ ಮಾರರಸನು ಒಂದನೆಯ ಸೋಮೇಶ್ವರನ ಪಾದಪದ್ಮೋಪಜೀವಿಯಾಗಿದ್ದು, 'ಭಾವನ ಗನ್ಧವಾರಣ' 'ಮೈಕಳದೇವಿ ಯಮಕಕಾಱ'ಎಂದು ಹೇಳಿಕೊಂಡಿರುವುದರಿಂದ ಚಕ್ರವರ್ತಿ ಒಂದನೆಯ ಸೋಮೇಶ್ವರನು ಮಾರರಸನಿಗೆ ಭಾವನಾಗಿದ್ದು, ಮೈಳಲದೇವಿಯು ಇವನ ಸಹೋದರಿಯಾಗಿರುವುದು ಸ್ಪಷ್ಟ. ಈ ಮಾರರಸ ಎರಡನೂರು ಪುಲಿಗೆರೆ 300 ಬೆಳ್ವೊಲ 300 ಆಳುತ್ತಿದ್ದನು.

ತ್ರೈಲೋಕ್ಯಮಲ್ಲನ ಉಲ್ಲೇಖಿತ ಎಂಟು ಜನ ಮಡದಿಯರಲ್ಲಿ ಕ್ರಿ.ಶ 1053ರ ವೇಳೆಗೆ ಕಾಣಿಸಿಕೊಂಡ ರಾಣಿ ಸವತಿಮದಭಂಜನೆ ತ್ರೈಲೋಕ್ಯಮಲ್ಲ ದೇವನರ್ಧಾಂಗಿ 'ಪಿರಿಯರಸಿ'ಮೈಳಲದೇವಿ ಬನವಾಸಿ–12000ನ್ನು ಆಳುತ್ತಿದ್ದಳೆಂದು ಹಾವನೂರ ಶಾಸನ ವಿವರಿಸುತ್ತದೆ.

ಸೋಮೇಶ್ವರನ ಮಡದಿ ಮೈಳಲದೇವಿಯೂ ಕ್ರಿ.ಶ 1049ರ ಶಾಸನದಲ್ಲಿ ಸೋಮೇಶ್ವರ ದೇವಾಲಯದ ಜೀರ್ಣೋದ್ಧಾರಕ್ಕೆಂದು ಹಾಗೂ ಇತರ ಕಾರ್ಯಗಳಿಗೆಂದು ಹೊನವಾಡ ಗ್ರಾಮವನ್ನು ದಾನವಾಗಿ ನೀಡಿದ ಕುರಿತು ಹೇಳುತ್ತದೆ. ಆದ್ದರಿಂದ ಈ ದೇವಾಲಯ ಶಾಸನದ ಕಾಲಕ್ಕೆ ಇಲ್ಲಿಯೇ ಶಾಸನಕ್ಕಿಂತ ಸ್ವಲ್ಪ ಮುಂಚೆ ನಿರ್ಮಾಣವಾಗಿರಬೇಕೆಂದು ತಿಳಿಯಬಹುದಾಗಿದೆ.

ಹೋಯ್ಸಳದೇವಿ :

ಇವಳು ಒಂದನೆಯ ಸೋಮೇಶ್ವರನ ರಾಣಿಯರಲ್ಲಿ ಒಬ್ಬಳಾಗಿದ್ದು, ಇವಳ ಕುರಿತು ಶಾಸನದಲ್ಲಿ, ತ್ರೈಲೋಕ್ಯಮಲ್ಲದೇವ ವಿಶಾಲವೃಕ್ಷ ಸ್ಥಳನಿವಾಸಿನಿ ಶ್ರೀಮತ್ಪಿರಿಯರಸಿ ಹೊಯ್ಸಳದೇವಿಯರ್ ಕಲ್ಯಾಣದ ನೆಲೆವೀಡಿನೊಳ ಸುಖಸಂಕಥಾ ವಿನೋದದಿಂದ ರಾಜ್ಯಂಗೈಯುತ್ತಮಿರೆ"ಎಂದು ಹೊನ್ನಾಳಿ ಶಾಸನವು ತಿಳಿಸುತ್ತದೆ. ಇವಳು ಆಡಳಿತದಲ್ಲಿಯೂ ರಾಜ್ಯಭಾರದತ್ತ ಹೆಚ್ಚು ಗಮನ ಕೊಟ್ಟಂತೆ ಕಂಡು ಬರುತ್ತದೆ.

ಕ್ರಿ.ಶ 1055ರ ಹೊನ್ನಾಳಿಯ ಶಾಸನದಲ್ಲಿ, ಈಕೆಯು ವಿನಯಾದಿತ್ಯನ ಸಹೋದರಿಯೋ, ಪುತ್ರಿಯೋ ಆಗಿರಬೇಕು. ಈಕೆಯನ್ನು ಶಾಸನದಲ್ಲಿ "ಸ್ವಸ್ತಿ ಅನವರತ ಪರಮ ಕಲ್ಯಾಣಾಭ್ಯುದಯ ಸಹಸ್ರ ಫಳಭೋಗ ಭಾಗಿನಿ ದ್ವಿತೀಯ ಲಕ್ಷ್ಮೀ ಸಮಾನೆ ಸಮಸ್ತಾನ್ತಃಪುರ ಮುಖಮಣ್ಡನಿ ಸವತಿ ಮದಭಂಜನೆ ಆಶ್ರಿತ ಜನ ಕಾಮಧೇನು ಶ್ರೀಮತ್ತ್ರೈಲೋಕ್ಯಮಲ್ಲದೇವ ವಿಸಾಳವಕ್ಷಸ್ಥಳ ನಿವಾಸಿನಿ ಶ್ರೀಮತ್ಪಿರಿಯರಸಿ ಹೊಯ್ಸಳದೇವಿಯರ್ ಕಲ್ಯಾಣದ ನೆಲೆವಿಡಿನೋಳ್ಸುಖ ಸಂಖಾತ ವಿನೋದದಿಂದ ಇದ್ದಳೆಂದು ಹೇಳಲಾಗಿದೆ.

ವಿಕ್ರಮಾದಿತ್ಯನು ಕುಮಾರ ವೃತ್ತಿಯಿಂದ ಗಂಗವಾಡಿ 96000 ಆಳುತ್ತಿದ್ದ

ಸಂದರ್ಭದಲ್ಲಿ ಈತನಿಗೂ ವಿಜಯಾದಿತ್ಯನಿಗೂ ಹೆಚ್ಚಿನ ಸಂಪರ್ಕಕ್ಕೆ ಬಂದಿರಬೇಕು. ಆದ್ದರಿಂದ ಮುಂದೆ ಒಂದನೆಯ ಸೋಮೇಶ್ವರ ಹೋಯ್ಸಳದೇವಿಯನ್ನು ವಿವಾಹವಾದ ಮೇಲೆ ಇವರ ಸಂಬಂಧ ಇನ್ನಷ್ಟು ಗಾಢವಾಯಿತು.

ರಾಣಿ ಹೊಯ್ಸಳದೇವಿಯು ಹೊನ್ನಾವಳಿಯಲ್ಲಿ ಮಾಚಗಾವುಂಡನೆಂಬವನು ಕಟ್ಟಿಸಿದ ಮಲ್ಲಿಕೇಶ್ವರತೀರ್ಥದ ದೇವರಿಗೆ ದತ್ತಿ ಬಿಟ್ಟಿರುವಳು.

ಲಚ್ಚಲ ಮಹಾದೇವಿ :

ಒಂದನೇ ಸೋಮೇಶ್ವರನ ರಾಣಿ ಲಚ್ಚಲ ಮಹಾದೇವಿಯು 'ಊರು' ಎಂಬ ಪ್ರದೇಶವನ್ನು ಆಳುತ್ತಿದ್ದಳೆಂದು ಶಾಸನೊಲ್ಲೇಖವಿದೆ. ಹಾನಗಲ್ಲ ತಾಲ್ಲೂಕಿನ ಬೆಳಮಟ್ಟಿಯಲ್ಲಿ ಇವಳಿಗೆ ಸಂಬಂಧಿಸಿದ ಎರಡು ಶಾಸನಗಳು ದೊರೆಯುವುದರಿಂದ ಹಾನಗಲ್ಲಿನ ಬೆಳಮಟ್ಟಿ ಇವಳ ಅಧಿಕಾರಕ್ಕೆ ಒಳಪಟ್ಟ ಪ್ರದೇಶವಾಗಿರಬೇಕು. ಕ್ರಿ.ಶ 1048 ಮತ್ತು ಕ್ರಿ.ಶ 1054ರ ಶಾಸನಗಳೆರಡು ಕದಂಬ ಮಹಾಮಂಡಳೇಶ್ವರ ಹರೀಕೇಸರಿದೇವ ಬನವಾಸಿ–12000, ಪಾನುಂಗಲ್–500ರ ಆಡಳಿತ ಕೈಗೊಂಡಾಗ ಲಚ್ಚಲದೇವಿ ಊರಿನ ಅಧಿಕಾರ ಕೈಗೊಂಡಿದ್ದು ತಿಳಿದು ಬರುತ್ತದೆ.

ಶಿಗ್ಗಾಂವ ಶಾಸನವು ಲಚ್ಚಲದೇವಿಯನ್ನು 'ಶೃಂಗಾರ ಗಂಗಾ ತರಂಗಿಣಿ'ದಾನ ಚಿಂತಾಮಣಿ, ಚಂಪಕಾಮೋದೆ, ವಿವೇಕ ವಿಧ್ಯಾಧರಿ, ಸಕಳಕಳಾಧರಿಯೆಂದು ವರ್ಣಿಸುತ್ತದೆ. ಈಕೆ ಊರು ಎಂಬ ವಿಭಾಗವನ್ನು ಆಳುತ್ತಿದ್ದಳೆಂದು ತಿಳಿದು ಬರುತ್ತದೆ.

ಚಾಮಲಾದೇವಿಯು

ಒಂದನೇ ಸೋಮೇಶ್ವರನ ರಾಣಿ ಚಾಮಲಾದೇವಿಯು ಸರಿಮಲೆಯಲ್ಲಿ ಬೀಡುಬಿಟ್ಟಾಗ ಬಲ್ಲಟಗಿಯಲ್ಲಿ ಬಿಟ್ಟದತ್ತಿ ಕೆರೆಯೂರಿನಲ್ಲಿ ಬೀಡಬಿಟ್ಟಾಗ ಭತ್ತ ಗ್ರಾಮ ಕಡಗಲ್ಲಿನ ಭೋಗೇಶ್ವರ ದೇವರಿಗೆ ಬಿಟ್ಟ ದತ್ತಿ ಮಲೆವೂರಿನಲ್ಲಿ ಬಿಡುಬಿಟ್ಟಾಗ ಬಿಟ್ಟದತ್ತಿಗಳನ್ನು ಗಮನಿಸಿದರೆ ಚಾಮಲಾದೇವಿ ಯಾವುದೋ ಪ್ರದೇಶದ ಮೇಲ್ವಿಚಾರಣೆ ಮಾಡಿರಬೇಕು. ಬಹುತೇಕ ಈ ಆಧಾರಗಳ ವೈಚಾರಿಕ ಅಧ್ಯಯನದಿಂದ ಭತ್ತಗ್ರಾಮ, ಕಡಗಲ್ಲು, ಇವಳ ಆಳ್ವಿಕೆಗೆ ಒಳಪಟ್ಟ ಪ್ರದೇಶವಾಗಿರಲು ಬೇಕು. ಮಸಳಿಕಲ್ಲು–300ರ ಮುಖ್ಯ ಭಾಗ ಗೋರಿಕಲ್ಲು–12ರ ಮುಖ್ಯ ಸ್ಥಳವೇ ಕಡಗಲ್ಲು ಇರಬಹುದು. ಮಾನವಿ ತಾಲೂಕಿನ ಬಾಗಲವಾಡದ ಒಂದು ಬಲ್ಲಟಗಿಯ ಮೂರು ಹಾಗು ಕಡಗಲ್ಲಿನ ಒಂದು ಹೀಗೆ ಚಾಮಲಾದೇವಿಯ ಹೆಸರಿನಲ್ಲಿ ಐದು ಶಾಸನಗಳು ದೊರಕುವುದರಿಂದ ಸೋಮೇಶ್ವರನ ಅಧಿಕಾರದ ಅವಧಿಯಲ್ಲಿ ಇವಳು ಮಹತ್ವದ ಸ್ಥಾನ ವಹಿಸಿರುವುದು ಗೊತ್ತಾಗುತ್ತದೆ.

ರಾಣಿ ಚಾಮಲಾದೇವಿ ಬಲ್ಲಟಗಿಯಲ್ಲಿ ಚಾಮೇಶ್ವರ ದೇವಸ್ಥಾನ ನಿರ್ಮಿಸಿದಲ್ಲದೇ ದೇವರಿಗೆ ನರ್ತನ, ಸಂಗೀತ ಸೇವೆಗೆ, ದೇವಸ್ಥಾನದ

ಜೀರ್ಣೋದ್ಧಾರಕ್ಕೆ ದತ್ತಿ ಬಿಟ್ಟಿರುವಳು. ಇವಳೆ ಬಲ್ಲಟಗಿಯ ಕಲದೇವರಿಗೂ ದತ್ತಿಕೊಟ್ಟ ಉಲ್ಲೇಖವಿದೆ.

ಚಾಮಲದೇವಿಯು ಸರಿಮಲೆಯಲ್ಲಿ ಬೀಡುಬಿಟ್ಟಾಗ ಬಲ್ಲಟಗಿಯಲ್ಲಿ ಬಿಟ್ಟ ದತ್ತಿ ಕೆರೆಯೂರಿನಲ್ಲಿ ಬೀಡುಬಿಟ್ಟಾಗ ಭತ್ತಗ್ರಾಮ ಕಪಗಲ್ಲಿನ ಭೋಗೇಶ್ವರದೇವರಿಗೆ ಬಿಟ್ಟದತ್ತಿ, ಮಲೆವೂರಲ್ಲಿ ಬೀಡುಬಿಟ್ಟಾಗ ಬಿಟ್ಟ ದತ್ತಿಗಳನ್ನು ಗಮನಿಸಿದರೆ ಚಾಮಲದೇವಿ ಯಾವುದೋ ಪ್ರದೇಶದ ಮೇಲ್ವೀಚಾರಣೆಯಲ್ಲಿದ್ದಿರಬೇಕು. ಬಹುಶಃ ಭತ್ತಗ್ರಾಮ ಕಪಗಲ್ಲು ಇವಳ ಆಳ್ವಿಕೆಗೆ ಒಳಪಟ್ಟ ಪ್ರದೇಶವಾಗಿರಬಹುದು.

ಕಂಚಲಮಹಾದೇವಿ :

ಕಲ್ಯಾಣ ಚಾಲುಕ್ಯರ ಭುವನೈಕಮಲ್ಲನ ಪಟ್ಟದರಾಣಿ ಕಂಚಲದೇವಿಯು ಆಳ್ವಿಕೆ ಮಾಡುತ್ತಿದ್ದ ಬಗ್ಗೆ ಶಾಸನದಿಂದ ತಿಳಿದು ಬರುತ್ತದೆ. ಕಕ್ಕಳಮೇಲ ಗ್ರಾಮದಲ್ಲಿರುವ ಮಲ್ಲಿಕಾರ್ಜುನ ದೇವಾಲಯದ ಒಂದು ಕಲ್ಲಿನ ಮೇಲೆ ಇರುವ ಶಾಸನದ ಕಾಲವು ಕ್ರಿ.ಶ 1070ರ ಶಾಸನದಲ್ಲಿ, ಚಾಲುಕ್ಯ ತ್ರಿಭುವನಮಲ್ಲನು ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದಾಗ, ಭುವನೈಕಮಲ್ಲನ ಪಟ್ಟದ ರಾಣಿ ಹಾಗೂ ಪಟ್ಟದ ರಾಣಿ ಹಾಗೂ ಪಟ್ಟಮಹಾದೇವಿಯಾದ ಕಂಚಲಮಹಾದೇವಿಯು ತಮ್ಮ ಆಳ್ವಿಕೆಗೆ ಸೇರಿದ ಕಕ್ಕಳಮೇಲೆಯ ದೇವರಿಗೆ ಸರ್ವನಮಸ್ಯವಾಗಿ ಮಾಣಿಕೇಶ್ವರದ ಕೋಲಲ್ಲಿ ಅಳೆದು ಒಂದು ಮತ್ತರು ತೋಟ ಒಂದು ನಿವೇಶನ ಮುಂತಾದವನ್ನು ಮೂಲಸ್ಥಾಲದ ಆಚಾರ್ಯ ನಾಗರಾಸಿ ಪಂಡಿತನಿಗೆ ದಾನ ನೀಡಿದಂತೆ ತಿಳಿಯುತ್ತದೆ.

ತ್ರೈಲೋಕ್ಯಮಹಾದೇವಿಯ :

ಕಲ್ಯಾಣ ಚಾಲುಕ್ಯರ ತ್ರೈಲೋಕಮಲ್ಲನ ರಾಣಿಯಾದ ತ್ರೈಲೋಕ್ಯಮಹಾದೇವಿಯು ಮಕ್ಕುಂಡೆಯನ್ನು ಆಳ್ವಿಕೆ ಮಾಡುತ್ತಿದ್ದರ ಕುರಿತು ಕ್ರಿ.ಶ 1066ರ ಮುಕ್ಕುಂದಿಯ ಶಾಸನವು ತಿಳಿಸುವಂತೆ ತ್ರೈಲೋಕ್ಯಮಹಾದೇವಿಯು ತನ್ನ ಪತಿಯಾದ ತ್ರೈಲೋಕ್ಯಮಲ್ಲನೊಡನೆ ಕಲ್ಯಾಣದಲ್ಲಿ ರಾಜ್ಯಭಾರವನ್ನು ಮಾಡುತ್ತಿದ್ದಳು. ಹಾಗೂ ನಿಟ್ಟರಗಿ 70ರ ಬಳಿಯ ಅಗ್ರಹಾರ ಮುಕ್ಕುಂಡೆ (ಇಂದಿನ ಮುಕ್ಕುಂದಿ)ಯನ್ನು ತ್ರಿಭೋಗ್ಯಾಭ್ಯಂತರವಾಗಿ ಆಳುತ್ತಿದ್ದಳು. ಈ ಮೇಲೆ ಹೇಳಿದ ದಿನಾಂಕದಂದು ಈಕೆ ತುಂಗಭದ್ರಾ ನದಿಯ ತೀರದ ಕಪಾಲೇಶ್ವರ ದೇವರಿಗೆ 12 ಮತ್ತರು ಕರಿಯ ಭೂಮಿಯನ್ನು ಸೆಟ್ಟಿಕಬ್ಬೆಯ ಗಡಿಂಬದ ಕೋಲಿನಿಂದ ಅಳೆದು ನೀಡಿದಳು.

ರೆಬ್ಬಲಮಹಾದೇವಿ :

ತ್ರೈಲೋಕ್ಯಮಲ್ಲನ ರಾಣಿಯಾದ ರೆಬ್ಬಲದೇವಿಯು ಅಸುಗಲ್ಲಿನ ಬಳವಟ್ಟಿಯನ್ನು ಒಳಗೊಂಡ ಸುತ್ತಲಿನ ಪ್ರದೇಶವನ್ನು ಆಳುತ್ತಿದ್ದಳು. ಹೊಯ್ಸಳಮಹಾದೇವಿಯು ಕೂಡ ಈಕೆಯೊಂದಿಗೆ ಆಡಳಿತದಲ್ಲಿ

ತೊಡಗಿಸಿಕೊಂಡಿರುವ ವಿಷಯ ಶಾಸನಗಳಿಂದ ತಿಳಿದು ಬರುತ್ತದೆ.[44]

ಚಾಲುಕ್ಯ ಭೀಮನು ಸ್ವತಂತ್ರನಾಗಲು ಹವಣಿಸುತ್ತಿರುವಾಗ ಒಂದನೇ ಸೋಮೇಶ್ವರನು ಆತನೊಂದಿಗೆ ಯುದ್ಧ ಮಾಡಿದನು. ಈ ಯುದ್ಧದಲ್ಲಿ ಒಂದನೇ ಸೋಮೇಶ್ವರನ ಮಗ ಎರಡನೇ ಸೋಮೇಶ್ವರನು ಸಹ ಭಾಗವಹಿಸಿ ಒಂದನೆಯ ಭೀಮನನ್ನು ಬಗ್ಗುಬಡಿದು ಜಯಶಾಲಿಯಾಗಿರುವುದು ತಿಳಿದು ಬರುತ್ತದೆ. ಅದಲ್ಲದೇ ಯುವರಾಜನಾಗಿದ್ದಾಗ ಬೆಳವಲ–300 ಮತ್ತು ಪುರಿಗೇರೆ–30ಗಳನ್ನು ಆಳುತ್ತಿದ್ದೆನೆಂದು ತಿಳಿದು ಬರುತ್ತದೆ.

ಅದಲ್ಲದೇ ಒಂದನೇ ಸೋಮೇಶ್ವರನ ಮಗನಾದ ಆರನೇ ವಿಕ್ರಮಾದಿತ್ಯನು ಸಹ ಕಳಚೂರಿನೃಪ ಕರ್ಣನಿಗೆ ಸೊಲಿಸಿದನು. ಗುರ್ಜರ್ ರಾಜನು ಆರನೇ ವಿಕ್ರಮಾದಿತ್ಯನನ್ನು ಕಂಡಕೂಡಲೆ ಗುಹೆಯಲ್ಲಿ ಅಡಗಿಕೊಂಡನೆಂದು ತಿಳಿದು ಬರುತ್ತದೆ.

ಬಿಲ್ಹಣನ ವಿಕ್ರಮಾಂಕದೇವಚರಿತಂನಲ್ಲಿ ವಿಕ್ರಮಾದಿತ್ಯನು ಕುಮಾರನಾಗಿರುವಾಗಲೇ ದಂಡಯಾತ್ರೆಯನ್ನು ಕೈಕೊಂಡು ಚೋಳನನ್ನು ಸೊಲಿಸಿದ ಉಲ್ಲೇಖವಿದೆ. ಚೋಳರ ರಾಜಧಾನಿ ಕಂಚಿಯ ವರೆಗೆ ಹೋಗಿ ಆ ನಗರವನ್ನು ವಿಕ್ರಮಾದಿತ್ಯ ಕೊಳ್ಳೆ ಹೊಡೆಯುತ್ತಾನೆ. ಅಲ್ಲಿ ಉಳಿದುದು ದೇವಾಲಯಗಳ ಮೇಲಿದ್ದ ಧ್ವಜದ ಬಟ್ಟೆ ಮತ್ತು ಆ ನಗರದ ಹೆಣ್ಣು ಮಕ್ಕಳ ಮರ್ಯಾದೆ ಮುಚ್ಚಿದ ಕೌಪೀನ ಬಟ್ಟೆಗಳು ಮಾತ್ರ ಎಂದು ವರ್ಣಿಸಲಾದ ವಿಕ್ರಮಾದಿತ್ಯನ ಮೊದಲ ಯುದ್ಧದ ವಿಜಯದ ವಿಷಯವನ್ನು ತಿಳಿಸಲಾಗಿದೆ.[45]

ಜಯಸಿಂಹನನ್ನು ಮಾಳವದ ಸಿಂಹಾಸನದಲ್ಲಿ ಕೂಡ್ರಿಸುವಲ್ಲಿ ಒಂದನೇ ಸೋಮೇಶ್ವರನ ಮಗ ಆರನೇ ವಿಕ್ರಮಾದಿತ್ಯನು ಯಶಸ್ವಿಯಾದನೆಂದು ಬಿಲ್ಹಣನ ಹೇಳಿಕೆಯು ಮಾಂಧಾತಾ ತಾಮ್ರಪಟಶಾಸನದಲ್ಲಿದೆ. ಚೋಳರ ವಿರುದ್ಧ ನಡೆದ ದನ್ನಡ ಕಾಳಗದಲ್ಲಿ ಭಾಗವಹಿಸಿದಲ್ಲದೇ ಕ್ರಿ.ಶ 1055 ರಿಂದ 1065ರ ವರೆಗೆ ಅನೇಕ ಕಡೆಗಳಲ್ಲಿ ಯುದ್ಧಗಳಲ್ಲಿ ಭಾಗವಹಿಸಿರುವುದು ಕಂಡು ಬರುತ್ತದೆ. ಅದಲ್ಲದೇ ಆ ಕಾಲಘಟ್ಟದಲ್ಲಿಯೇ ಗಂಗವಾಡಿ, ಬನವಾಸಿ, ನೋಳಂಬವಾಡಿ, ಗಂಗಮಂಡಳ ಮತ್ತು ಸಾಂತಳಿಗೆ ವಿಭಾಗಗಳನ್ನು ಆಳುತ್ತಿದ್ದನೆಂದು ತಿಳಿದು ಬರುತ್ತದೆ.[46]

ಒಬ್ಬ ಶ್ರೇಷ್ಠವಾದ ಯೋಧನಾಗಿದ್ದ ಒಂದನೇ ಸೋಮೇಶ್ವರನು ಉಗ್ರವಾದ ರೋಗವೊಂದು ಬಂದಿದರಿಂದ ಮಾರ್ಚ 29, 1068ರಲ್ಲಿ ತುಂಗಭದ್ರೆಯಲ್ಲಿ ಮುಳುಗಿ ಪ್ರಾಣತ್ಯಾಗ ಮಾಡಿದನು.[47] ಈ ಸಮಯದಲ್ಲಿ ವಿಕ್ರಮಾದಿತ್ಯನು ಕೃಷ್ಣಾ ನದಿಯ ಹತ್ತಿರವಿದ್ದನೆಂದು ಬಿಲ್ಹಣನು ಹೇಳುತ್ತಾನೆ. ಅದಲ್ಲದೇ ಒಂದನೇ ಸೋಮೇಶ್ವರನು ಕುರುವತ್ತಿಯ ಸಮೀಪ ತುಂಗಭದ್ರಾ ನದಿಯಲ್ಲಿ ಜಲಸಮಾಧಿ ಮೂಲಕ ನಿಧನಹೊಂದಿದ ವಿಷಯ ಶಿವಮೊಗ್ಗ ಜಿಲ್ಲೆಯ ಬಳ್ಳಿಗಾವೆ ಶಿಕಾರಿಪೂರ 15ನೇ ಅಗಷ್ಟ 1068ರ ಶಾಸನದಲ್ಲಿ ದಾಖಲಾಗಿದೆ.

6. ಎರಡನೇ ಸೋಮೇಶ್ವರ (ಕ್ರಿ.ಶ 1068–1076) :

ಎರಡನೇ ಸೋಮೇಶ್ವರನ ಅಲ್ಪ ಅವಧಿಯ ಆಳ್ವಿಕೆಯು ಕಷ್ಟಕಾಲವಾಗಿತ್ತು. ಸಿಂಹಾಸನಕ್ಕೆ ಬಂದೊಡನೆಯೇ, ಚಾಲುಕ್ಯ ರಾಜ್ಯದ ಪರಿಸ್ಥಿತಿಯ ಪ್ರಯೋಜನ ಪಡೆಯಲೆತ್ನಿಸಿದ ಚೋಳರ ಮೇಲೆ ಸೈನ್ಯವನ್ನು ಕಳುಹಿಸಬೇಕಾಯಿತು. ಚಾಲುಕ್ಯರ ಅಶ್ವದಳದೆದುರು ನಿಲ್ಲಲಾರದೆ ಚೋಳರು ತಾವು ಆಕ್ರಮಿಸಿಕೊಂಡಿದ್ದ ಗುತ್ತಿಯಿಂದ ಪಲಾಯನ ಮಾಡಿದರು.

ಆಮೇಲೆ ಸೋಮೇಶ್ವರನು ದಕ್ಷಿಣದ ಗಡಿಗಳನ್ನು ಬಲಪಡಿಸಿದನು. ಅದರ ಬೇರೆ ಬೇರೆ ವಲಯಗಳನ್ನು ತನ್ನ ದಳಪತಿಗಳ ಉಸ್ತುವಾರಿಯಲ್ಲಿಟ್ಟನು. ಇವರ ಪೈಕಿ ಮೂವರು ತುಂಬ ಮುಖ್ಯರಾದವರು. ರಾಜನ ಸಹೋದರರಾದ ಆರನೇ ವಿಕ್ರಮಾದಿತ್ಯ, ನಾಲ್ಕನೇ ಜಯಸಿಂಹ ಮತ್ತು ಲಕ್ಷ್ಮಣ ದಂಡನಾಯಕ. ಇವರು ಕ್ರಮವಾಗಿ ಗಂಗವಾಡಿ, ನೊಳಂಬವಾಡಿ–ಸಿಂದವಾಡಿ ಹಾಗೂ ಬನವಾಸಿಗಳ ಹೊಣೆಯನ್ನು ಹೊತ್ತು ಕೊಂಡಿದ್ದರು.

ಎರಡನೇ ಸೋಮೇಶ್ವರನ ಆಳ್ವಿಕೆಯ ಒಂದು ಮುಖ್ಯವಾದ ಅಂಶವೆಂದರೆ, ಅವನ ತಮ್ಮ ಆರನೇ ವಿಕ್ರಮಾದಿತ್ಯ ವಹಿಸಿದ ಪಾತ್ರ, ಬಿಲ್ಹಣನು ಅವನ ಮಹಿಮೆಗಳನ್ನು ಕೊಂಡಾಡಿದ್ದಾನೆ. ಕರ್ನಾಟಕದ ಇತಿಹಾಸಕಾರರು ವಿಕ್ರಮಾದಿತ್ಯನ ಕಾರ್ಯಚಟುವಟಿಕೆಗಳ ಮೇಲೆ ಸಾಕಷ್ಟು ಅಧ್ಯಯನ ಮಾಡಿದ್ದಾರೆ. ಶಾಸನಗಳು ಸ್ಪಷ್ಟ ಸೂಚನೆಗಳನ್ನು ಕೊಡುತ್ತವೆ. ಸೋಮೇಶ್ವರನು ರಾಜನಾದ್ದರಿಂದ ಹಾಗೂ ತನಗೆ ಕೊಟ್ಟ ಸ್ಥಾನಮಾನದಿಂದ ಅತೃಪ್ತನಾಗಿ ಅವನು ಚೋಳರು ಮತ್ತಿತರ ಅರಸರ ವಿರುದ್ಧ ವೈರವನ್ನು ಕಾರಿದನು. ವಾಸ್ತವವಾಗಿ ಕಲ್ಯಾಣ ಚಾಲುಕ್ಯರ ಶಾಸನಗಳು (ಅನಂತಪುರ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿರುವುವು) ವಿಕ್ರಮಾದಿತ್ಯನಿಗೆ ಪೂರ್ಣ ಚಕ್ರವರ್ತಿ ಬಿರುದುಗಳನ್ನು ಕೊಡುತ್ತವೆ. ಇವುಗಳ ಆಧಾರದಿಂದ ನೀಲಕಂಠಶಾಸ್ತ್ರಿಗಳು, ಆರನೇ ವಿಕ್ರಮಾದಿತ್ಯನು ಅಧಿಕಾರನ್ನು ಬಲಾತ್ಕಾರವಾಗಿ ಕಿತ್ತುಕೊಂಡನೆಂದೂ, ಸೋದರರ ನಡುವೆ ಸಂಧಾನವಾಗಿ ಸಾಮ್ರಾಜ್ಯವು ವಿಭಜನೆಯಾಯಿತೆಂದೂ ಚೋಳಸಾಮ್ರಾಜ್ಯಕ್ಕೆ ಒತ್ತಿಕೊಂಡಿದ್ದ ಭಾಗಗಳು ವಿಕ್ರಮಾದಿತ್ಯನಿಗೆ ದೊರಕಿದುವೆಂದೂ, ವಿಕ್ರಮಾದಿತ್ಯನು ಚೋಳ ವೀರರಾಜೇಂದ್ರನ ಮಗಳನ್ನು ಮದುವೆ ಮಾಡಿಕೊಂಡು ಮೈತ್ರಿ ಬೆಳೆಸಿದನೆಂದೂ ಪಟ್ಟುಹಿಡಿದು ವಾದಿಸುತ್ತಾರೆ.

ಒಬ್ಬ ವೀರಯೋಧನಾಗಿ ಹಾಗೂ ಮುತ್ಸದ್ದಿಯಾಗಿ ವಿಕ್ರಮಾದಿತ್ಯನಿಗಿದ್ದ ಸಾಮರ್ಥ್ಯ ಮತ್ತು ಕೌಶಲ್ಯಗಳು ಈ ಅವಧಿಯಲ್ಲಿ ವ್ಯಕ್ತವಾದುವು. ಉದ್ದೇಶಪೂರ್ವಕವಾಗಿ ಮತ್ತು ನಿಧಾನವಾಗಿ ಅವನು ಚಕ್ರವರ್ತಿ ಬಿರುದುಗಳನ್ನು ಧರಿಸಿದನು. ನೊಳಂಬ ವಾಡಿಯ ಗವರ್ನರ್ ಆಗಿದ್ದ ತನ್ನ ಸೋದರ ಜಯಸಿಂಹನ ಬೆಂಬಲದಿಂದ, ಸೋಮೇಶ್ವರನ ಬೆಂಬಲಿಗರನ್ನು ಒಬ್ಬೊಬ್ಬರನ್ನಾಗಿ ತನ್ನ ಕಡೆಗೆ

ಒಲಿಸಿಕೊಂಡನು. ಅವರು ತನ್ನ ಪಕ್ಷವನ್ನು ಸೇರುವಂತೆ ಮಾಡಿದನು. ಬಲದಿಂದ ಮತ್ತು ಆಮೀಷಗಳಿಂದ ಗೋವಿಂದವಾಡಿಯ ದಂಡನಾಯಕ ಕದಂಬರಾಜ ಜಯಕೇಶಿ, ಹಾಗೂ ವಿಜಯಾದಿತ್ಯ, ಹೊಯ್ಸಳ ವಿನಯದಿತ್ಯ ಮತ್ತು ಮಗ, ಉಚ್ಚಂಗಿಯ ಪಾಂಡ್ಯರಾಜ ಮತ್ತು ಯಾದವರಾಜ ಎರಡನೇ ಸೇವುಣ ಇವರ ಬೆಂಬಲವನ್ನು ಗಳಿಸಿಕೊಂಡನು. ಹೀಗೆ ಆರನೇ ವಿಕ್ರಮಾದಿತ್ಯನು, ತನ್ನ ಸೋದರ ಸೋಮೇಶ್ವರನಿಗೂ ಚೋಳ ದೊರೆ ರಾಜೇಂದ್ರನಿಗೂ ಉಂಟಾಗಲಿದ್ದ ಮೈತ್ರಿಯ ಅಪಾಯದ ವಿರುದ್ಧವಾಗಿ ನಿಲ್ಲಲು ಸಿದ್ಧತೆಗಳನ್ನು ಮಾಡಿಕೊಂಡನು.

ಬೇಸತ್ತ ಎರಡನೇ ಸೋಮೇಶ್ವರನು ತನ್ನ ವಿಶ್ವಾಸಪಾತ್ರ ದಳಪತಿ ಲಕ್ಷ್ಮಣ ದಂಡನಾಥ ಮತ್ತು ಇತರ ಹಲವು ಸಾಮಂತರಾಜರ ಬೆಂಬಲದಿಂದ ಇಡೀ ಸಾಮ್ರಾಜ್ಯದಲ್ಲಿ ಸುತ್ತಾಡಿದನು, ಅಲ್ಲಲ್ಲಿ ಶಿಬಿರಗಳನ್ನು ಹಾಕಿಕೊಂಡು ನಿಂತು ಪರಿಶೀಲಿಸಿದನು. ವಾಸ್ತವವಾಗಿ ಅಲ್ಲಲ್ಲಿ ನಿಂತು ಅವನು ತನ್ನ ಸಾಮರ್ಥ್ಯವನ್ನು ಪ್ರದರ್ಶಿಸುತ್ತಿದ್ದನು. ಆದರೆ ಅವನು ತುಂಗಭದ್ರೆಯ ಸಮೀಪಕ್ಕೆ ತಮ್ಮ ದಂಗೆಕೋರ ಸೋದರ ವಿಕ್ರಮಾದಿತ್ಯನ ರಾಜ್ಯಕ್ಕೆ ಕಾಲಿಡಲಿಲ್ಲ ಎಂಬುದು ಮಹತ್ವದ ವಿಚಾರ.

ಕ್ರಿ.ಶ 1076ರ ಸುಮಾರಿನಲ್ಲಿ ಎರಡನೇ ಸೋಮೇಶ್ವರನು ಔಪಚಾರಿಕವಾಗಿ ಚೋಳ ಸಿಂಹಾಸನವನ್ನು ಆಕ್ರಮಿಸಿಕೊಂಡಿದ್ದ ಪೂರ್ವಚಾಲುಕ್ಯ ರಾಜನೊಂದಿಗೆ ಮೈತ್ರಿ ಸ್ಥಾಪಿಸಿದನು. ಆ ಮೇಲೆ ವಿಕ್ರಮಾದಿತ್ಯನೊಂದಿಗೆ ಅಂತಿಮ ಹೋರಾಟವನ್ನು ಪ್ರಾರಂಭಮಾಡಿದನು. ಯುದ್ಧದಲ್ಲಿ ದ್ರಾವಿಡರಾಜನು ಓಡಿಹೋದನು. ಮತ್ತು ಸೋಮೇಶ್ವರನು ಸೆರೆಯಾದನು.

ಎರಡನೇ ಸೋಮೇಶ್ವರನು ದುರದೃಷ್ಟಶಾಲಿಯಾದ ರಾಜನೆನ್ನುವುದರಲ್ಲಿ ಸಂದೇಹವಿಲ್ಲ. ಆದರೆ ಅವನ ಕ್ರೌರ್ಯ ಮತ್ತು ನಿರಂಕುಶಾಧಿಕಾರಗಳ ಕುರಿತು ಬಿಲ್ಹಣನ ಮಾತುಗಳನ್ನಾಗಲಿ ವಿಕ್ರಮಾದಿತ್ಯನ ಶಾಸನಗಳನ್ನಾಗಲಿ ನಂಬಲು ಕಾರಣವಿಲ್ಲ.[48]

ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಧನ್ನೂರ (ಎಚ್) ಗ್ರಾಮದ ಬಸವೇಶ್ವರ ದೇವಾಲಯದಲ್ಲಿರುವ ಶಾಸನದಲ್ಲಿ, ಎರಡನೇ ಸೋಮೇಶ್ವರ (ಭೂಲೋಕಮಲ್ಲದೇವ)ನ ಆಳ್ವಿಕೆ ಕಾಲದಲ್ಲಿ ಪ್ರಭುಗಾವುಂಡ ಮಹೇಶ್ವರನ ಪುತ್ರ ಮಲ್ಲದೇವ ಹಾಗೂ ಮಲ್ಲದೇವ ಪುತ್ರರಾದ ಗೋಪದೇವ, ಪ್ರಧಾನಿ ಕಾಳಿಮಯ್ಯರು ಸೇರಿ ಜಿನಾಲಯದ ಮುನಿಗಳ ಆಹಾರಕ್ಕಾಗಿ ನಂದಾದೀವಿಗೆಗೆ ದಾನ ನೀಡಿರುವುದನ್ನು ಕಾಣಬಹುದು.[49]

ರಾಜಗೇರ ಗ್ರಾಮದ ಹನುಮಂತ ದೇವಾಲಯದ ಸಮೀಪದಲ್ಲಿರುವ ಕ್ರಿ.ಶ 1065ರ ಶಾಸನದಲ್ಲಿ, ಜಯಸಿಂಹನ ಆಳ್ವಿಕೆಯಲ್ಲಿ ರಾಚಗಿರದ ಕೆರೆಕಟ್ಟೆಯ ದೇಗುಲಕ್ಕೆ ಚಂದಗಾವುಂಡನು 24 ಮತ್ತರು ಕಪ್ಪುಭೂಮಿಯನ್ನು ಬಿಡುತ್ತಾನೆ.[50]

7. ಆರನೇ ವಿಕ್ರಮಾದಿತ್ಯ (ಕ್ರಿ.ಶ 1076–1127) :

ವಿಕ್ರಮಾದಿತ್ಯನ ಬಾಲ್ಯಜೀವನವನ್ನು ಬಿಲ್ಹಣ ಮತ್ತು ಮೂರನೇ ಸೋಮೇಶ್ವರರು ತಮ್ಮ ಕೃತಿಗಳಲ್ಲಿ ಕಾವ್ಯೋಚಿತವಾಗಿ ವರ್ಣಿಸಿದ್ದಾರೆ. ಶಸ್ತ್ರಪ್ರವೀಣನಾದ ಇವರು ಶಾಸ್ತ್ರ, ಕಾವ್ಯ ಪ್ರವೀಣನೂ, ವಾಗ್ಮಿಯೂ ಆಗಿದ್ದನೆಂದು ಹೇಳುತ್ತಾರೆ. ವಿಕ್ರಮಾದಿತ್ಯನ ಶೌರ್ಯದ ಗುಣಗಳಿಗೆ ಮೆಚ್ಚಿ ತಂದೆ ಒಂದನೇ ಸೋಮೇಶ್ವರನು ಅವನಿಗೆ ಯುವರಾಜಪಟ್ಟ ಕಟ್ಟಲು ನಿರ್ಧರಿಸುತ್ತಾನೆ. ಈ ಸಂಗತಿಯಿಂದ ವಿಕ್ರಮಾದಿತ್ಯನಿಗೆ ಸಂತೊಷವಾಗುವ ಬದಲು ದುಃಖವಾಗುತ್ತದೆ. ನೀವು ಭೇದಭಾವ ಮಾಡುತ್ತಿದ್ದೀರಿ, ನನಗಿಂತ ಹಿರಿಯನಾದ ಅಣ್ಣ ಸೋಮೇಶ್ವರನಿರುವಾಗ ನನಗೆ ಯಾಕೆ ಈ ಯುವರಾಜ ಪಟ್ಟ? ವೆಂದು ತಂದೆಗೆ ಪ್ರಶ್ನಿಸಿ ಅದನ್ನು ನಿರಾಕರಿಸುತ್ತಾನೆ. ಆಗ ಸೋಮೇಶ್ವರನು ತನ್ನ ಹಿರಿಯಪುತ್ರ ಎರಡನೇ ಸೋಮೇಶ್ವರನನ್ನೇ ಯುವರಾಜನನ್ನಾಗಿ ಮಾಡುತ್ತಾನೆ. ತಂದೆ ಚಕ್ರವರ್ತಿಯಾಗಿ ಆಳುತ್ತಿದ್ದಾಗ ವಿಕ್ರಮಾದಿತ್ಯನು ಆತನ ಪಾದಪದ್ಮೋಪಜೀಯಾಗಿ ‘ ವಂದಲೆಮರ್ಯಾದೆ’ಯಿಂದ ‘ಕುಮಾರವೃತ್ತಿಯಿಂದ’ ಆಳುತ್ತಿದ್ದನೇ ಹೊರತು ಯುವರಾಜನಾಗಿ ಅಲ್ಲವೆಂದು ಶಾಸನಗಳಿಂದ ತಿಳಿದು ಬರುತ್ತದೆ.

ಬಿಲ್ಹಣನ ವಿಕ್ರಮಾಂಕದೇವಚರಿತಂದಲ್ಲಿ ಹೇಳಿದಂತೆ, ಒಂದನೇ ಸೋಮೇಶ್ವರನ ಆಜ್ಞೆಯ ಮೇರೆಗೆ ಆರನೇ ವಿಕ್ರಮಾದಿತ್ಯನು ದಂಡಯಾತ್ರೆ ಕೈಕೊಂಡು ಶತ್ರುಗಳ ಮೇಲೆ ವಿಜಯ ಸಾಧಿಸಿ ಕೃಷ್ಣಾನದಿಯ ದಂಡೆಯ ಮೇಲೆ ಬೀಡುಬಿಟ್ಟಿರುತ್ತಾನೆ. ಅಲ್ಲಿಗೆ ಕಲ್ಯಾಣನಗರದಿಂದ ದೂತನು ಬಂದು ಅಹವಮಲ್ಲ ಸೋಮೇಶ್ವರನು ಸತ್ತ ಸುದ್ಧಿಯನ್ನು ವಿವರವಾಗಿ ಹೀಗೆ ಹೇಳುತ್ತಾನೆ, ‘ಚಕ್ರವರ್ತಿಜ್ವರದಿಂದ ಬಳಲುತ್ತಿದ್ದು ಆತನು ತನ್ನ ಮಂತ್ರಿಗಳನ್ನೆಲ್ಲ ಕರೆಯಿಸಿ ನನ್ನನ್ನು ಸ್ವರ್ಗಕ್ಕೆ ಕಳುಹಿಸುವ ಶಕ್ತಿ ಇರುವ ತುಂಗಭದ್ರಾ ನದಿಯಲ್ಲಿ ಮುಳುಗಿ ಶಿವಾಧೀನನಾಗುತ್ತೇನೆಂದು ತಿಳಿಸಿದ, ಅದಕ್ಕೆ ಮಂತ್ರಿಗಳೆಲ್ಲರೂ ಒಪ್ಪಿದರು. ಆಗ ಸೋಮೇಶ್ವರನು ಕುರುವತ್ತಿಯಲ್ಲಿ ತುಂಗಭದ್ರಾನದಿಯಲ್ಲಿ ಸ್ನಾನಮಾಡಿ ಶಿವನನ್ನು ಆರಾಧಿಸಿ ಸಾಕಷ್ಟು ಬಂಗಾರವನ್ನು ದಾನಮಾಡಿ, ಅನಂತರ ತುಂಗಭದ್ರೆಯಲ್ಲಿ ಮುಳಗಿ ಸಾವನ್ನು ಅಪ್ಪಿದ’ ಈ ವಿಷಯ ಕೇಳಿದ ವಿಕ್ರಮಾದಿತ್ಯನು ಸ್ವರ್ಗಸ್ಥ ತಂದೆಗೆ ಮಾಡಬೇಕಾದ ವಿಧಿಕರ್ಮಗಳನ್ನು ಮಾಡಿಮುಗಿಸಿ ಚಕ್ರವರ್ತಿಯಾಗಿದ್ದ ಅಣ್ಣನನ್ನು ನೋಡಲು ಕಲ್ಯಾಣನಗರಕ್ಕೆ ಬರುತ್ತಾನೆ. ದುಃಖದಿಂದ ಅರಮನೆಗೆ ಹೋಗಿ ಅಣ್ಣನ್ನು ತಬ್ಬಿಕೊಂಡು ಆಳುತ್ತಾನೆ. ಕಾಲಗತಿಸಿದಂತೆ ಈ ದುಃಖ ಮರೆಯುತ್ತ ಬರುತ್ತದೆ.

ಮುಂದೆ ಬಿಲ್ಹಣನು, ಅಣ್ಣತಮ್ಮಂದಿರಿಬ್ಬರ ನಡುವೆ ವೈರತ್ವ ಬೆಳೆಯಲು ಕಾರಣವನ್ನು ತಿಳಿಸುತ್ತಾನೆ. ವಿಕ್ರಮಾದಿತ್ಯನಾದರೋ ತನ್ನ ತಂದೆ ತೀರಿಹೋದಮೇಲೆ ಅಣ್ಣ ಸೋಮೇಶ್ವರನನ್ನು ತಂದೆಯ ಸಮಾನವೆಂದು ಗೌರವಿಸುತ್ತಿದ್ದನು. ಆದರೆ

ಸೋಮೇಶ್ವರನಿಗೆ ಈ ಉದಾರ ಭಾವನೆ ಇರಲಿಲ್ಲ. ತಮ್ಮನ ಶೌರ್ಯ ಗುಣಗಳನ್ನು ನೋಡಿ ಸಹಿಸಲಿಕ್ಕಾಗಲಿಲ್ಲ, ಅವನನ್ನು ನಿರ್ನಾಮಮಾಡಲೂ ಯೋಚಿಸಿದ. ಈ ಅಪಾಯದ ಮುನ್ಸೂಚನೆಯನ್ನು ಕಂಡುಕೊಂಡ ವಿಕ್ರಮಾದಿತ್ಯನು ತಮ್ಮ ಜಯಸಿಂಹನನ್ನು ಕರೆದುಕೊಂಡು ಕಲ್ಯಾಣನಗರವನ್ನು ಬಿಟ್ಟು ಹೋಗುತ್ತಾನೆ. ಈ ಸುದ್ದಿ ಎರಡನೇ ಸೋಮೇಶ್ವರನಿಗೆ ಗುರುತಾಗಿ ಇವರಿಬ್ಬರನ್ನು ಸೇರೆಹಿಡಿಯಲು ಸಾಕಷ್ಟು ಸೈನ್ಯವನ್ನು ಕಳುಹಿಸುತ್ತಾನೆ. ಆದರೆ ದೊಡ್ಡ ಆನೆಬಲವುಳ್ಳ ವಿಕ್ರಮಾದಿತ್ಯ ಎರಡನೇ ಸೋಮೇಶ್ವರನ ಸೈನ್ಯವನ್ನು ಸೋಲಿಸಿ ಕಳುಹಿಸುತ್ತಾನೆ. ವಿಜಯಿಯಾದ ವಿಕ್ರಮಾದಿತ್ಯನು ಚೋಳನ ಮೇಲೇರಿ ಹೋಗಬೇಕೆಂದು ನಿರ್ಧರಿಸಿ, ಕೊನೆಯ ಗಳಿಗೆಯಲ್ಲಿ ಮನಸ್ಸನ್ನು ಬದಲಾಯಿಸಿ ಕೆಲವು ದಿನಗಳನ್ನು ಹಾಯಾಗಿ ಕಳೆಯಬೇಕೆಂದು ವನವಾಸ ಮಂಡಲದ ಕಡೆಗೆ ಹೋಗುತ್ತಾನೆ. ಅಣ್ಣತಮ್ಮಂದಿರ ಜಗಳದ ವಿಷಯ ತಿಳಿದು ಆಳುಪರದೊರೆ, ಕದಂಬ ಜಯಕೇಶಿ, ಬನವಾಸಿಯ ಕದಂಬರೂ, ಉಚ್ಚಂಗಿ ಪಾಂಡ್ಯರೂ ವಿಕ್ರಮಾದಿತ್ಯನ ಬೆನ್ನು ಕಟ್ಟುತ್ತಾರೆ.

ಆರನೇ ವಿಕ್ರಮಾದಿತ್ಯನು ವೀರರಾಜೇಂದ್ರಚೋಳನ ಮಗಳನ್ನು ಮದುವೆಯಾಗಿ ವಿಕ್ರಮಾದಿತ್ಯ ಉಭಯ ಮನೆತನಗಳಲ್ಲಿ ಸ್ನೇಹವನ್ನೇರ್ಪಡಿಸಲು ಪ್ರಯತ್ನಿಸುತ್ತಾನೆ. ಕಾಲಾನಂತರದಲ್ಲಿ ಚೋಳಪಟ್ಟಕ್ಕೆ ಬಂದಿದ್ದ ವಿಕ್ರಮಾದಿತ್ಯನ ಅಳಿಯ ಅಧಿರಾಜೇಂದ್ರನನ್ನು ಕೊಂದು ವೆಂಗಿಯ ಚಾಲುಕ್ಯ–ಚೊಳ ಮನೆತನದ ರಾಜಿಗನು ಚೋಳ ಸಿಂಹಾಸನವನ್ನು ಆಕ್ರಮಿಸುತ್ತಾನೆ. ಇತ್ತ ಅಣ್ಣ ಸೋಮೇಶ್ವರನು ಈ ರಾಜಿಗನೊಡನೆ ಒಪ್ಪಂದ ಮಾಡಿಕೊಂಡು ವಿಕ್ರಮಾದಿತ್ಯನ ಮೇಲೆ ಯುದ್ಧಕ್ಕೆ ಬರುತ್ತಾನೆ. ಈ ಕಡೆಯಿಂದ ಸೋಮೇಶ್ವರನ ಸೈನ್ಯ, ಆ ಕಡೆಯಿಂದ ರಾಜಿಗನ ಸೈನ್ಯಗಳು ಸಾಗರೋಪಾದಿಯಲ್ಲಿ ಬರುತ್ತಿದ್ದವು. ಮಧ್ಯದಲ್ಲಿ ಸಿಕ್ಕುಹಾಕಿಕೊಂಡು ವಿಕ್ರಮಾದಿತ್ಯ ಅಣ್ಣನ ಈ ದ್ರೋಹದಿಂದ ದುಃಖಿತನಾಗಿ ಎರಡೂ ಕಡೆಯ ಸೈನ್ಯದೊಂದಿಗೆ ಯುದ್ಧ ಮಾಡಲು ಸರಿಯಾಗದ ಕ್ರಮಕೈಕೊಳ್ಳುತ್ತಾನೆ. ವಿಕ್ರಮಾದಿತ್ಯನ ಹೊಡೆತಕ್ಕೆ ರಾಜಿಗನು ರಣರಂಗಬಿಟ್ಟು ಓಡಿ ಹೋಗುತ್ತಾನೆ. ಸೋಮೇಶ್ವರನನ್ನು ಸೆರೆಹಿಡಿದು ಕಾರಾಗೃಹಕ್ಕೆ ತಳ್ಳಲಾಗುತ್ತದೆ.

ಬಿಲ್ಹಣನು ವಿರೂಪಿಸಿದ ಮೇಲಿನ ಘಟನೆಗಳು ಐತಿಹಾಸಿಕವಾಗಿ ಸತ್ಯವಾಗಿವೆ. ಇದಕ್ಕೆ ಪೂರಕವೆಂಬಂತೆ ಅನೇಕ ಶಾಸನಗಳು ಈ ವಿಷಯಗಳು ತಿಳಿಸುತ್ತವೆ.[51]

ಇವನು ಕ್ರಿ.ಶ 1076ನೆಯ ಮಾರ್ಚ್.8 ರಂದು ಪಟ್ಟಾಭಿಷೇಕಗೊಂಡು ಅದೇ ದಿವಸ ತನ್ನ ಹೆಸರಿನ ಚಾಲುಕ್ಯ ವಿಕ್ರಮ ವರ್ಷವೆಂದು ಹೋಸ ಶಕೆಯನ್ನು ಪ್ರಾರಂಭಿಸುತ್ತಾನೆ.

ಈ ವಿಷಯವು ಕಲಬುರ್ಗಿ ಜಿಲ್ಲೆಯ ತೆಂಗಳಿಯಲ್ಲಿರುವ ಕ್ರಿ.ಶ 1162ರ ಶಾಸನದಲ್ಲಿ, ಮುಂನಾದ ಶಕನೃಪಾಬ್ದ

ಮಂನಾಗದೆನುತ್ತ ಮಿಕ್ಕ ವಿಕ್ರಮವರಿಷಂ

ತಂನಿಂದೆ ನೆಗಳಲೆಸೆದಂ

ಸಂನುತಮತಿ ವಿಷ್ಣುಮೂರ್ತಿ ಪೆರ್ಮ್ಮಾಡಿನೃಪ ॥ ಎಂದು ಹೇಳಿದೆ.

ಅದರಂತೆ ಮುದೋಳದಲ್ಲಿ, ಎಸೆವ ಸಕವರುಷಮಂ ಮಾ

ಣಿಸಿ ವಿಕ್ರಮ ವರುಷಮೆಂದು ತನ್ನಯ ಹೆಸರಂ

ವಸುಮತಿಗೆ ನೆಗರ್ಚಿದಂ ಸಾ

ಹಸಿಗಂ ಜಗದೇಕದಾನಿ ಧರ್ಮವಿನೋದಂ ॥ ಎಂದು ಹೇಳಲಾಗಿದೆ.[52]

ಆರನೇ ವಿಕ್ರಮಾದಿತ್ಯನು ಕಲ್ಯಾಣ ಚಾಲುಕ್ಯರ ಅತ್ಯಂತ ಶ್ರೇಷ್ಠದೊರೆ. ಅವನು ಸಮರ್ಥ ರಾಜನೂ, ವೀರಯೋಧನೂ, ಉತ್ತಮ ರಾಜನೀತಿಜ್ಞನೂ, ದಕ್ಷ ಆಡಳಿತಗಾರನೂ, ಪರಾಕ್ರಮಿಯೂ, ಕಲೆ, ಸಾಹಿತ್ಯಗಳ ಉದಾರ ಪೋಷಕನೂ ಆಗಿದ್ದನು. ಪೆರ್ವಾಡಿದೇವ ಮತ್ತು ತ್ರಿಭುವನಮಲ್ಲ, ರಾಯಸರ್ವಜ್ಞ ರಾಯನಾರಾಯಣ, ಪ್ರಥ್ವಿವಲ್ಲಭ ಎಂಬ ಬಿರುದುಗಳನ್ನು ಹೊಂದಿದನು.[53]

ಕಲ್ಯಾಣ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನಿಗೆ ಗೋವೆ ಕದಂಬ ಮನೆತನದ ಒಂದನೆಯ ಜಯಕೇಶಿಯು ತನ್ನ ಮಗಳನ್ನು ಕೊಟ್ಟು ವಿವಾಹ ಮಾಡಿದಲ್ಲದೆ ಅಪಾರ ಕೊಡುಗೆಗಳನ್ನು ಕೊಡುತ್ತಾನೆ. ಅಲ್ಲದೇ ವಿಕ್ರಮಾದಿತ್ಯನಿಗೆ ಚಕ್ರವರ್ತಿಯಾಗಲು ನೆರವಾಗಿ ಕಲ್ಯಾಣಕ್ಕೆ ಹೋಗಿ ಪಟ್ಟಕಟ್ಟಿ ಬಂದಿದ್ದಾನೆ.[54]

ಆರನೇ ವಿಕ್ರಮಾದಿತ್ಯನು ಪಟ್ಟಣಕ್ಕೆ ಬಂದು ಚಾಲುಕ್ಯ ವಿಕ್ರಮಶಕೆಯನ್ನು ಪ್ರಾರಂಭಿಸಿದ ವರ್ಷವೇ ಅಂದರೆ ಚಾಲುಕ್ಯವಿಕ್ರಮ ವರ್ಷ ಪ್ರಥಮ, ಕ್ರಿಶ 11–11–1077ರ ಪ್ರಥಮ ವರ್ಷದಲ್ಲಿಯೇ ಕಮಳಸಿರಿ ಕಂತಿಯವರಿಗೆ ಪಲುಗೆರೆ 60ರ ಮನ್ನೆಯದ ಎಡೆಯರಸರಿಗೆ ತೂವಗಾವೆಯಲ್ಲಿ ತಮಗೆ ಸೇರಿದ ಕಮ್ಮತದಲ್ಲಿ 40 ಮತ್ತರು ಹೊಲವನ್ನು ಕಾಲುತೊಳೆದು ಬಿಟ್ಟಿದ್ದು ತಿಳಿದು ಬಂದಿದು, ಅಟ್ಟಳೆಯ ಸೇನಬೋವ ಅಗ್ಗಯ್ಯ ಎಂಬುವನು ಈ ಶಾಸನವನ್ನು ಬರೆದು ಭಮೋಜ ಕೆತ್ತಿರುವ ಇತಿಹಾಸ ತಿಳಿದು ಬರುತ್ತದೆ.[55]

ವಿಕ್ರಮನ ಹಿರಿಮೆ ಕುರಿತು ವಿಜ್ಞಾನೇಶ್ವರರು ಮಿತಾಕ್ಷರದಲ್ಲಿ, "ಕಲ್ಯಾಣದಂಥಹ ನಗರವು ಈ ಭೂಮಿಯ ಮೇಲೆ ಹಿಂದೆದೂ ಇರಲಿಲ್ಲ. ಈಗ ಇನ್ನೊಂದಿಲ್ಲ. ಮುಂದೆ ಹುಟ್ಟುವುದೂ ಇಲ್ಲ. ಜಯಶಾಲಿಯಾದ ವಿಕ್ರಮಾರ್ಕನಂತಹ ಚಕ್ರವರ್ತಿಯನ್ನು ಕಂಡಿಲ್ಲ ಮತ್ತು ಕೇಳಿಲ್ಲ" ಎಂದಿದ್ದಾರೆ.

ನಾಸೀದಸ್ತಿ ಭವಿಷ್ಯತಿ ಕ್ಷಿತಿತಲೆ ಕಲ್ಯಾಣಕಲ್ಪಂ ಪುರಂ।

ನೋ ದೃಟ: ಶ್ರೂತ ಏವವಾ ಕ್ಷಿತಿಪತಿ: ಶ್ರೀವಿಕ್ರಮಾಕಾರ್ಯಪಂ॥

ವಿಜ್ಞಾನೇಶ್ವರ ಪಂಡಿತೋ ನ ಭಜತೆ ಕಿಂಚಾನ್ಯದನ್ಯೋಪಂ

ಆಕಲ್ಪಂ ಸ್ಥಿರಮಸ್ತು ಕಲ್ಪಲತಿಕಾಕಲ್ಪ ತದೇತತ್ರಯಂ॥

ಬಿಲ್ಹಣನು ಆರನೇ ವಿಕ್ರಮಾದಿತ್ಯನ ಕುರಿತು 'ಅವನದು ರಾಮರಾಜ್ಯವಾಗಿತ್ತು ಮತ್ತು ಅವನನ್ನು ಕರ್ನಾಟಕದ ಚಂದ್ರ' ಎಂದು ಕರೆದಿದ್ದಾನೆ.[56]

ಅದರಂತೆ ಗದಗ ಶಾಸನವು, 'ಚಾಲುಕ್ಯ ವಿಕ್ರಮಾದಿತ್ಯ ತ್ರಿಭುವನಮಲ್ಲ ಜಗತ್ತಿನ ಅತಿ ಬುದ್ಧಿವಂತ ಉದಾರಿ ದೊರೆ. ಧರ್ಮ, ಕಲೆ, ಸಾಹಿತ್ಯಗಳ ಪೋಷಕನಾಗಿ ಎಲ್ಲರ ಕೀರ್ತಿಯನ್ನು ವಿಕ್ರಮಶಕೆಯಡಿಯಲ್ಲಿ ಹಬ್ಬಿಸಿದನು' ಎಂದಿದೆ.

ಕ್ರಿ.ಶ 11ನೇ ಶತಮಾನದಲ್ಲಿ ಜಲಸಂಗಿಯಲ್ಲಿ ಮಹಾದೇವ ದೇವಾಲಯದ ಲಿಪಿಗಾರ್ತಿ ವಿಗ್ರಹದ ಕೈಯಲ್ಲಿರುವ ಹಾಳೆಗಲ್ಲಿನ ಮೇಲೆ ಸಪ್ತದ್ವೀಪಗಳಲ್ಲಿಯೂ ಶ್ರೇಷ್ಠನಾದ ವಿಕ್ರಮಾದಿತ್ಯನು ಏಳನೆಯ ವಿಷ್ಣುವರ್ಧನನಾಗಿದ್ದಾನೆಂದು ವರ್ಣಿಸಿದ್ದು, ಇದು ಆರನೆಯ ವಿಕ್ರಮಾದಿತ್ಯನ ಅಡಳಿತದ ಶ್ರೇಷ್ಠತೆಯು ಏಳು ಸಮುದ್ರದ ಆಚೆಯು ಪಸರಿಸಿತ್ತೇನ್ನುವುದನ್ನು ತೋರಿಸುತ್ತದೆ.[57]

ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯು ಧಾರ್ಮಿಕ ಸಂಕೀರ್ಣತೆಯ ಕಾಲವಾಗಿದ್ದು, ಧರ್ಮ–ಧರ್ಮಗಳ ಮಧ್ಯ ಸಂಘರ್ಷ, ಸಾಮಾಜಿಕ ಧಾರ್ಮಿಕ ಅಂಧಾನುಕರಣೆಗಳನ್ನು ಹೋಗಲಾಡಿಸಲು ಈತನ ಕಾಲದಲ್ಲಿ ಸಮಕಾಲೀನ ವಚನಕಾರರು, ಕವಿಗಳು ಪ್ರಯತ್ನಿಸಿದಂತೆ ಶಾಸನ–ಕಾವ್ಯಗಳಿಂದ ತಿಳಿದು ಬರುತ್ತದೆ. ಸಂಸ್ಕೃತಿ, ಧರ್ಮ, ಕಲೆ, ವಾಸ್ತುಶಿಲ್ಪ ಮತ್ತು ದಾನ–ದತ್ತಿಗಲ ವಿಷಯದಲ್ಲಿಯೂ ಔದಾರ್ಯತೆಯನ್ನು ಮೆರೆದ ಕಾಲ. ಈತ ತೋರಿದ ಪರಮತ ಸಹಿಷ್ಣುತೆ, ಉದಾರತೆಗಳು ಧರ್ಮ–ಧರ್ಮಗಳ ಮಧ್ಯದ ಸಂಘರ್ಷವನ್ನು ತಪ್ಪಿಸಿ ಧರ್ಮ ಮತ್ತು ಸಂಸ್ಕೃತಿಯ ಮುನ್ನಡೆಗೆ ಕಾರಣವಾದವು. ಪ್ರಾರಂಭದಲ್ಲಿ ಜೈನನಾಗಿದ್ದ ಈತ ಅದರ ಉನ್ನತಿಗೆ ಕಾರಣನಾದನು. ಈತನ ಕಾಲದಲ್ಲಿ ರಾಜನಿಂದ ಹಿಡಿದು ಸಾಮಾನ್ಯ ವರ್ಗದವರೂ, ವಿವಿಧ ಮತ–ಪಂಥಗಳಿಗೆ ಸಂಬಂಧಿಸಿದ ದೇವಾಲಯಗಳನ್ನು ನಿರ್ಮಿಸಿ ಧರ್ಮ, ಶಿಕ್ಷಣ, ಸಾಹಿತ್ಯ, ಕಲೆ ಮತ್ತು ವಾಸ್ತುಶಿಲ್ಪಗಳ ಪ್ರಗತಿಗೆ ಕಾರಣರಾಗಿದ್ದು ಇತಿಹಾಸದ ಮುಖಾಂತರ ತಿಳಿಯುತ್ತದೆ.[58] ಆರನೇ ವಿಕ್ರಮಾದಿತ್ಯನ ರಾಜ್ಯಾಳ್ವಿಕೆಯ ಇತಿಹಾಸವಿರುವ ಶಾಸನಗಳು ಬೀದರ ಜಿಲ್ಲೆಯಲ್ಲಿ ಅಷ್ಟೊಂದು ಲಭ್ಯವಾಗದಿದ್ದರು, ಈತನ ಆಳ್ವಿಕೆ ಕಾಲದಲ್ಲಿ ಮಹಾಮಾಂಡಲಿಕರು, ಸಾಮಂತರು ಆಳ್ವಿಕೆ ಮಾಡಿರುವ ವಿಷಯ ಹಾಗೂ ದಾನ ಧರ್ಮಗಳನ್ನು ನೀಡಿರುವುದರೊಂದಿಗೆ ಕಲ್ಯಾಣ ಚಾಲುಕ್ಯರ ಸಾಮ್ರಾಜ್ಯವನ್ನು ಕಾಪಾಡಿಕೊಂಡು ಹೋಗಿರುವ ಇತಿಹಾಸವನ್ನು ಪರಿಚಯಿಸುವ ಶಾಸನಗಳು ಲಭ್ಯವಾಗಿದ್ದು, ಅಂತಹ ಶಾಸನಗಳನ್ನು ಈ ಕೆಳಗಿನಂತೆ ಪರಿಚಯಿಸಲಾಗಿದೆ.

ಬೀದರ ಜಿಲ್ಲೆಯ ಮೋರಖಂಡಿ ಗ್ರಾಮದ ಹನುಮಂತ ಗುಡಿಯ ಒಳಗಡೆ ಇರುವ ಕಲ್ಲಿನ ಮೇಲಿರುವ ಕ್ರಿ.ಶ 1079ರ ಶಾಸನದಲ್ಲಿ ತ್ರಿಭುಮಲ್ಲ ಆರನೇ ವಿಕ್ರಮಾದಿತ್ಯನು ಕಲ್ಯಾಣದ ನೆಲೆವೀಡಿನಿಂದ ರಾಜ್ಯಭಾರ ಮಾಡುತ್ತಿದ್ದಾಗ

ಅಂಬುಲಗೆಯ ಪ್ರಭು ಮುಖ್ಯನು ತನ್ನ ಊರಿನ ಉತ್ಪತ್ತಿಯನ್ನು ಕನ್ನಡಿ ಭಾಗಿಗಳು ಸಹಿತವಾಗಿ ಕೊಂಡುಕೊಂಡು ಮೋರಖಂಡಿಯ ಸೋಮನಾಥದೇವರಿಗೆ ಧಾರಾಪೂರ್ವಕವಾಗಿ ಬಿಡುತ್ತಾನೆ. ಹಾಗಾದರೆ ಈ ಕನ್ನಡಿ ಭಾಗಗಳು ಎಂದರೆ ಕನ್ನಡ ಮಾತನಾಡುವ ಜನರು ವಾಸಿಸುವ ಭಾಗಗಳೆ ?, ಕನ್ನಡಿ ಎನ್ನುವುದು ಬೇರೆ ಅರ್ಥ ಕೊಡುತ್ತದೆಯೇ? ಹೀಗೆ ಅನೇಕ ಪ್ರಶ್ನೆಗಳಿಗೆ ಉತ್ತರ ಹುಡುಕಬೇಕಾಗಿದೆ.[59]

ಬೀದರ ಜಿಲ್ಲೆಯ ತೆಲಗಾಂವ ಗ್ರಾಮದ ಶಂಕರಗಿರಿ ಮಹಾರಾಜರ ಸಮಾಧಿಕಟ್ಟೆಯಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲಿನ ಕ್ರಿ.ಶ 1081ರ ಶಾಸನದಲ್ಲಿ, ಆರನೇ ವಿಕ್ರಮಾದಿತ್ಯನು ಕಲ್ಯಾಣ ನಾಡಿನಿಂದ ರಾಜ್ಯವಾಳುತ್ತಿದ್ದಾಗ, ಅವನ ಪಾದಪದ್ಮೋಪಜೀವಿಯಾಗಿ, ಸತ್ಯಯುಧಿಷ್ಟರ ನಂತಿರುವ, ನಿಗಳಂಕಮಲ್ಲ, ಎಲ್ಲ ಕಡೆ ಕೀರ್ತಿಗೆ ಪಾತ್ರನಾದ, ಎಲ್ಲರಿಗೂ ಒಂದೇ ರೀತಿಯಲ್ಲಿ ನೋಡಿಕೊಂಡು ಹೋಗುವ, ಸಾಹಸಿ, ಕಲ್ಯಾಣ ಕೋಟೆಯ ರಕ್ಷಕ, ರಣರಂದಲ್ಲಿ ವೀರತನದಿಂದ ಹೋರಾಡುವಂತಹ ಪ್ರಶಸ್ತಿಯನ್ನು ಪಡೆದಿರುವ ಮಹಾಮಂಡಳೇಶ್ವರ ನೊರೆಯಮರಸರು ಬೀರಿಗೆ ನಾಲ್ವತ್ತರ ಬಳಿಯ ತೆಲ್ಲಿಗಾವೆಯಯಲ್ಲಿ ದಾನ ಬಿಡುತ್ತಾನೆ.[60]

ಬೀದರ ಜಿಲ್ಲೆಯ ಹಳ್ಳಿ ಗ್ರಾಮದ ಮಾರುತಿಗುಡಿಯ ಎಡಭಾಗದಲ್ಲಿರುವ ಕಲ್ಲಿನ ಮೇಲಿರುವ ಕ್ರಿ.ಶ 1083ರ ಶಾಸನದಲ್ಲಿ, ತ್ರಿಭುವನಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಮಹಾಸಾಮಂತನಾದ ರಾಘವರಾಮ ಎಂಬುವವನು ಆಳ್ವಿಕೆ ಮಾಡುತ್ತಿದ್ದ ವಿಷಯ ತಿಳಿದು ಬರುತ್ತದೆ. ಅಲ್ಲದೇ ಈತನಿಗೆ ಪಿರಿಯ ಬೇಂಟೆಯನವನೆಂದು ಕರೆದಿದೆ. ಅಲ್ಲದೇ ಅಟ್ಟಳೆಯ ಪೇರ್ಮಾಡಿರಾಯನ ದಂಡನಾಯಕ ಶಿವರಾಜನ ಆಜ್ಞೆಯಂತೆ ಪಂಪೇಶ್ವರದೇವರ ಅಂಗಭೋಗ ತಪೋಧನ ಮಾಣಿಗಳ ಆಹಾರ ಬತ್ತೆಗೆಂದು ವಾರಣಾಸಿಯಿಂದ ಬಂದಿದ್ದ ದೇಶಾಂತರದ ಪಾಸುಪತಾಚಾರ್ಯನಾದ ರತ್ನರಾಸಿ ಎಂಬುವವನ ಕಾಲನ್ನು ತೊಳೆದು ಭೂದಾನ ನೀಡಿದ ಉಲ್ಲೇಖವಿದೆ. ಈ ಶಾಸನದಿಂದ ಪೆರ್ಮಾಡಿ ದೇವನಿಗೆ ಒಬ್ಬ ದಂಡನಾಯಕ ಶಿವರಾಜ ಎನ್ನುವನಿದ್ದ ಎನ್ನುವ ವಿಷಯ ತಿಳಿಯುವುದರೊಂದಿಗೆ ಅವನ ಆಜ್ಞೆಯ ಮೇರೆಗೆ ವಾರಣಾಸಿಯಿಂದ ಬಂದ ರತ್ನರಾಸಿ ಎನ್ನುವರನ್ನು ಕಾಲು ತೊಳೆದು ಹೊರಗಿನಿಂದ ಬರುವ ಪಂಡಿತರಿಗೆ ಭೂಮಿಯನ್ನು ಸಹ ದಾನ ನೀಡಿ ಅವರಿಗೆ ಇಲ್ಲಿಯೇ ವಾಸಿಸಲು ಅನುವು ಮಾಡಿಕೊಡುತ್ತಿದ್ದರೆನ್ನುವ ವಿಷಯ ಈ ಶಾಸನದಿಂದ ತಿಳಿದು ಬರುತ್ತದೆ.[61]

ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಗೋರ್ಟಾ (ಬಿ) ಗ್ರಾಮದ ಹನುಮಂತ ಗುಡಿಯ ಮುಂಭಾಗದಲ್ಲಿರುವ ಕಲ್ಲಿನ ಮೇಲಿರುವ ಶಾಸನದಲ್ಲಿ, ತ್ರಿಭುವನಮಲ್ಲನು ರಾಜಧಾನಿ ಕಲ್ಯಾಣಪುರದಿಂದ ಆಳುತ್ತಿದ್ದಾಗ ಇವನ ಸದ್ಗುರುವಾಗಿ ರುದ್ರಮಿಶ್ರನಿದ್ದ. ಇವನು ಗೋವರ್ಧನ ಭಟ್ಟೋಪಾಧ್ಯಾಯ ಮತ್ತು ಅರಸಿಕಬ್ಬೆಯ

ಮಗನಾಗಿದ್ದನೆಂದು ಈ ಶಾಸನದಿಂದ ತಿಳಿದು ಬರುತ್ತದೆ.[62]

ಭಾಲ್ಕಿ ಚನ್ನಬಸವೇಶ್ವರ ಕಾಲೇಜಿನಲ್ಲಿ ನಿಲ್ಲಿಸಿರುವ ಕಂಬದ ಮೇಲಿರುವ ಕ್ರಿ.ಶ 1099ರ ಶಾಸನದಲ್ಲಿ, ಕಲ್ಯಾಣದ ಚಾಲುಕ್ಯ ತ್ರಿಭುವನಮಲ್ಲದೇವ (ಆರನೆಯ ವಿಕ್ರಮಾದಿತ್ಯ)ನು ಕಲ್ಯಾಣದಿಂದ ಆಳುತ್ತಿದ್ದನೆಂದು ಶಾಸನ ತಿಳಿಸಿದೆ. ಇವನ ಮೊಮ್ಮಗನಾದ ಕುಮಾರ ಬಂಗಾರ, ಬಪ್ಪನಂಕಕಾರ ಇತ್ಯಾದಿ ಬಿರುದಾಂಕಿತ ಮಹಾಮಂಡಳೇಶ್ವರ, ಕುಮಾರ ಹೆಮ್ಮಾಡಿದೇವನು ಭಲ್ಲುಂಕೆಯ ರಾಜಧಾನಿಪಟ್ಟಣದ ತ್ರೈಪುರುಷ ದೇವಾಲಯಕ್ಕೆ ದೀಪದ ಎಣ್ಣೆಗಾಗಿ ಮೂರು ಗಾಣಗಳನ್ನು ದಾನ ನೀಡಿದನೆಂದು ತಿಳಿಸಿದೆ. ಕಪಿಲೇಶ್ವರ ದೇವಾಲಯಕ್ಕೆ ಒಂದು ಗಾಣ ಹಾಗೂ ಅಲ್ಲಿನ ಬ್ರಹ್ಮಜಿನಾಲಯಕ್ಕೆ ಒಂದು ಗಾಣವನ್ನು ನೀಡಿದನೆಂದಿದೆ. ಉತ್ತರೇಶ್ವರ ದೇವಾಲಯದ ಶ್ರೀಖಣ್ಡ (ಶ್ರೀಗಂಧ), ಧೂಪ, ನೈವೇದ್ಯಕ್ಕಾಗಿ ಮಹಾಜನರ ಸಿದ್ದಾಯದಲ್ಲಿ ಪ್ರತಿವರ್ಷ ಆರು ಗದ್ಯಾಣಗಳು ಮತ್ತು ಭಲ್ಲುಂಕೇಶ್ವರ ದೇವಾಲಯಕ್ಕೆ ಮತ್ತಗಾರೂಢ ಭಗದತ್ತನೆಂದು, ಕುವರ ಬಂಗಾರನೆಂದು ಕರೆಯಲಾಗಿದೆ.[63]

ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಅಳವಾಯಿ ಗ್ರಾಮದ ಕ್ರಿ.ಶ 1077ರ ಶಾಸನದಲ್ಲಿ, ಚಾಲುಕ್ಯ ಆರನೇ ವಿಕ್ರಮಾದಿತ್ಯನು ಆಳುತ್ತಿದ್ದನೆಂದು, ಅವನ ಆಡಳಿತದಲ್ಲಿ ಮನ್ನೆಯ ಎಡೆಯರಸನು ತೂವಗಾವೆಯಲ್ಲಿ ತಮ್ಮ ಒಡೆತನದ ಕಮ್ಮತದಲ್ಲಿ ನಲವತ್ತು ಮತ್ತರು ಭೂಮಿಯನ್ನು ಮರಿಕಲ್ಲ ಕಮಳಸಿರಿ ಕಂತಿಯರಿಗೆ ಪಾದ ತೊಳೆದು ದಾನ ಮಾಡಿದನೆಂದು ಶಾಸನ ತಿಳಿಸಿ, ಈ ಶಾಸನವು ಅಟ್ಟಳೆಯ ಅಗ್ಗಳಯ್ಯನು ಬರೆದಿರುತ್ತಾನೆ.[64]

ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಧನ್ನೂರ (ಎಚ್) ಗ್ರಾಮದ ಬಸವೇಶ್ವರ ದೇವಾಲಯದಲ್ಲಿರುವ ಶಾಸನದಲ್ಲಿ, ತ್ರಿಭುವನಮಲ್ಲದೇವನು ಕಲ್ಯಾಣದಿಂದ ಆಳುತ್ತಿದ್ದನೆಂದು ಹೇಳಿದೆ. ಆಡಳಿತ ಸಮಯದಲ್ಲಿ ಇವನ ದಂಡನಾಯಕನಾದ ಪ್ರಭುಗಾವುಂಡ ಮಹೇಶ್ವರನು ದೇವಸೇನಸಿದ್ಧಾಂತದೇವರ ಸಮ್ಮುಖದಲ್ಲಿ ಅರಹಂತದೇವರ ಅಂಗಭೋಗ, ನೈವೇದ್ಯ, ಜೀರ್ಣೋದ್ಧಾರಕ್ಕಾಗಿ ಒಂದು ಮತ್ತರು ತೋಟ, ಭೂಮಿಯನ್ನು ದಾನ ನೀಡಿರುವುದಾಗಿ ತಿಳಿದು ಬರುತ್ತದೆ.[65]

ಬೀದರ ಜಿಲ್ಲೆಯ ಮರಕಲ್‌ದಲ್ಲಿರುವ ಕ್ರಿ.ಶ 1079ರ ಶಾಸನದಲ್ಲಿ ಆರನೇ ವಿಕ್ರಮಾದಿತ್ಯನ ಮಹಾಮಂಡಳೇಶ್ವರನಾದ ಅಟ್ಟಳೆಯ ವೀರಗೊಂಕರಸ ಆಳ್ವಿಕೆ ಮಾಡುತ್ತಿರುವ ವಿಷಯ ತಿಳಿದು ಬರುತ್ತದೆ.[66]

ಬೀದರ ಜಿಲ್ಲೆಯ ಭಾಲ್ಕಿಯ ಚೆನ್ನಬಸವೇಶ್ವರ ಕಾಲೇಜಿನಲ್ಲಿ ನಿಲ್ಲಿಸಿರುವ ಕಂಬದ ಮೇಲಿರುವ ಕ್ರಿ.ಶ 1099ರ ಶಾಸನದಲ್ಲಿ, ಆರನೇ ವಿಕ್ರಮಾದಿತ್ಯ ತ್ರಿಭುವನಮಲ್ಲನು ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದಾಗ ಅವನ ಮಾಂಡಲಿಕ ಹೆರ್ಮಾಡಿದೇವನು ರಾಜಧಾನಿ ಭಲ್ಲುಂಕೆಯಿಂದ ಆಳ್ವಿಕೆ ಮಾಡುತ್ತಿದ್ದ ವಿಷಯ ತಿಳಿದು ಬರುತ್ತದೆ. ಅಟ್ಟಳೆಯ ರಂಜೇರಿನ ಸಿಂಧರ ಆಳ್ವಿಕೆಯಲ್ಲಿ ಹೆರ್ಮಾಡಿದೇವನು ರಾಜ್ಯವಾಳುವಾಗ

ಭಲ್ಲುಂಕೆಯನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿರುವುದು ಧೃಡಪಡುತ್ತದೆ.[67]

ಬೀದರ ಜಿಲ್ಲೆಯ ಭಾಲ್ಕಿಯ ಚೆನ್ನಬಸವೇಶ್ವರ ಕಾಲೇಜಿನಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲಿರುವ ಕ್ರಿ.ಶ 1105ರ ಶಾಸನದಲ್ಲಿ, ಅಟ್ಟಳೆಯ ರಂಜೇರಿನ ಸಿಂಧರ ರಾಜನಾದಂತಹ ಪೆರ್ಮಾಡಿಯು ಭಲ್ಲುಂಕೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡುತ್ತಿದ್ದ ವಿಷಯ ಈ ಶಾಸನದಿಂದ ತಿಳಿದು ಬರುತ್ತದೆ.[68]

ಬೀದರ ಜಿಲ್ಲೆಯ ಚಂದಾಪೂರ ಮಹಾದೇವ ಮಂದಿರದ ಮುಂಭಾಗದಲ್ಲಿರುವ ಕಲ್ಲಿನ ಮೇಲಿನ ಕ್ರಿ.ಶ 1112ರ ಶಾಸನದಲ್ಲಿ, ಸೂತುವಿನಿಂದ ಹಿಮಾದ್ರಿಯ ಕೋಡಿನವರೆಗಿನ ರಾಜರನ್ನು ಸೋಲಿಸಿ ವೀರ ಹೆಮ್ಮಾಡಿರಾಯನು ವಿಕ್ರಮನ ರಾಜ್ಯವನ್ನು ನಿಲ್ಲಿಸಿರುವ ವಿಷಯ ಈ ಶಾಸನದಿಂದ ತಿಳಿದು ಬರುತ್ತದೆ. ಅದಲ್ಲದೇ ಚಾಲುಕ್ಯ ತ್ರಿಭುವನಮಲ್ಲನು ಜಯನ್ತಿಪುರದ ನೆಲೆವೀಡಿನಿಂದ ರಾಜ್ಯಭಾರ ಮಾಡುತ್ತಿದ್ದಾಗ ಭೋಗ ದೇವಚಟ್ಟೋಪಾಧ್ಯಾಯನ ಮಗ ಲಕ್ಷ್ಮೀಧರಚಟ್ಟೋಪಾಧ್ಯಾಯನು ತಾನು ಬಲ್ಲವರಸನ ಅಮಾತ್ತನ ಭೂಮಿ ದಾನವಾದ, ಸರ್ವನಮಸ್ಯದ ಅಗ್ರಹಾರವಾದ ಚಂದಾವಾರಿ (ಈಗಿನ ಚಂದಾಪೂರ) ಜಂಜರಾತೀರದಲ್ಲಿ ಭೋಗೇಶ್ವರ ದೇವರನ್ನು ಪ್ರತಿಷ್ಠಾಪನೆ ಮಾಡಿದ. ನಂತರ ಇದಕ್ಕೆ ತ್ರಿಭುವನಮಲ್ಲ ಆರನೇ ವಿಕ್ರಮಾದಿತ್ಯನು ಕೈಲಿ ಎರಡು ವೃತ್ತಿಯನ್ನು ಪಡೆದು, ಅದರಲ್ಲಿ ಸ್ಥಳದ ನಿವೇಶನವನ್ನು ಹೊರತುಪಡಿಸಿ ಒಂದು ಮತ್ತರು ತೋಟವನ್ನು ದೇವರ ಪೂಜೆ, ಪುನಸ್ಕಾರ ಜೀರ್ಣೋದ್ಧಾರಕ್ಕೆಂದು ಮಹಾಜನರಿಗೆ ನೀಡಿರುವ ವಿಷಯ ದಾಖಲಾಗಿದೆ.[69]

ಬೀದರ ಜಿಲ್ಲೆಯ ಹುಮನಾಬಾದ ತಾಲೂಕಿನ ಘಾಟಬೋರಳ ಗ್ರಾಮದ ಹನುಮಾನ ದೇವಾಲಯದಲ್ಲಿರುವ ಕ್ರಿ.ಶ 1120ರ ಶಾಸನದಲ್ಲಿ ತ್ರಿಭುವನಮಲ್ಲ ಆರನೇ ವಿಕ್ರಮಾದಿತ್ಯನು ರಾಜ್ಯವಾಳುತ್ತಿದ್ದಾಗ ಸಿಂಧವಂಶದ ಮಾಂಡಳಿಕನಾಗಿ ಹುಲ್ಲೆಯ ಸೋವರಸನಿದ್ದ, ಅವನ ಮೈದುನ ನಕರಸ ಎಂಬುವವನು ಬೋರಿವಳದ ಬೆಟ್ಟ ಸಮರದೇವತೆಯ ಚತುಸ್ಥಾನದವರಿಗೆ ಕೆಲವು ದಾನಗಳನ್ನು ನೀಡಿರುವುದು ಕಾಣಹಬುದು. ಈ ಶಾಸನದಲ್ಲಿ ಹುಲ್ಲೆಯ ಸೋಮರಸನಿದ್ದ ಎನ್ನುವ ವಿಷಯ ತಿಳಿದು ಬರುತ್ತದೆ. ಹಾಗಾದರೆ ಆ ಹುಲ್ಲೆ ಎನ್ನುವ ಪ್ರದೇಶ ಯಾವುದು ? ಅದಲ್ಲದೇ ಆತನ ಮೈದುನ ನಕರಸ ಎಂಬುವವನು ಬೋರಿವಳದ ಬೆಟ್ಟ ಸಮರದೇವತೆಗೆ ದಾನ ನೀಡಿರುವುದು ತಿಳಿದು ಬಂದಿದ್ದರಿಂದ ಈ ಬೋರಿವಳ ಎನ್ನುವ ಬೆಟ್ಟ ಯಾವುದು ? ಅದು ಘಾಟಬೋರಳದ ಬೆಟ್ಟವೇ ? ಎನ್ನುವ ಕುರಿತು ಸಂಶೋಧನೆಯಾಗಬೇಕಾಗಿದೆ.[70]

ಬೀದರ ಜಿಲ್ಲೆಯ ಉಜ್ಜಳಂ ಗ್ರಾಮದಲ್ಲಿರುವ ಕ್ರಿ.ಶ 1120ರ ಶಾಸನದಲ್ಲಿ, ಚಾಲುಕ್ಯ ತ್ರಿಭುವನಮಲ್ಲದೇವ ಆರನೇ ವಿಕ್ರಮಾದಿತ್ಯ ಕಲ್ಯಾಣದ ನೆಲೆವೀಡಿನಿಂದ

ಆಳುತ್ತಿದ್ದನೆಂದು ತಿಳಿಸಿದೆ. ಇವನ ಮಹಾಮಂಡಳೇಶ್ವರನಾದ ವೈಸಕುಲದ ಶ್ರೀಯಮರಸನ ಪ್ರಶಸ್ತಿಗಳಿದ್ದು, ಅವನು ಉಬ್ಬಳ ಪ್ರದೇಶವಾಳುತ್ತಿದ್ದನೆಂದು ದಾಖಲಿಸಿದೆ. ಇವನು ಮಲ್ಲ, ಬರ್ಮ್ಮ, ಮೊದಲಾದವರ ಶಿರವನ್ನು ಛೇದಿಸಿದನೆಂದಿದೆ.

ಮಹಾಮಂಡಳೇಶ್ವರ ಶ್ರೀಯಮರಸ, ದೇವಣಸೆಟ್ಟಿ, ಬೆನಕಿಸೆಟ್ಟಿ, ಶಂಕರಸೆಟ್ಟಿ, ವರ್ಧಮಾನಸೆಟ್ಟಿ, ಬೀಚಿಸೆಟ್ಟಿಯರು ಮೊದಲಾದ ಸಮಸ್ತ ನಖರರು ಭತ್ತಗ್ರಾಮ ಉಜ್ವಳದ ಜಿನಾಲಯದ ಪೂಜೆ–ಪುನಸ್ಕಾರ, ಅಭಿಷೇಕ, ನೈವೇದ್ಯಗಳಿಗಾಗಿ ದಾನ ನೀಡಿರುವುದು ತಿಳಿಯುತ್ತದೆ. ಮಂಡವದ ಪೆರ್ಗ್ಗಡೆ ಚಾಮುಂಡಮಯ್ಯನ ಅಣತಿಯಂತೆ ಈತನ ಭಾವ ಮಲ್ಲರಸ ಮತ್ತು ಪ್ರಮುಖರು ಹಣವನ್ನು ದಾನ ಮಾಡಿದ್ದನು ಉಲ್ಲೇಖಿಸಿದೆ. ಸುಂಕವೆರ್ಗಡೆ ಏಕಚರಸನ ಅತಣಿಯಂತೆ ಚಂದಿರಯ್ಯ ಮತ್ತು ಕರಣಂಗಳು ದಾನ ನೀಡಿದಂತಿದೆ. ಜೈನಪರ ಶಾಪಾಶಯದಲ್ಲಿ, ದಾನಧರ್ಮವನ್ನು ಯಾರು ಪಾಲಿಸುವುದಿಲ್ಲವೋ ಅವರು ಸಪ್ತನರಕಗಳಲ್ಲಿ (ರತ್ನಪ್ರಭಾ, ಶರ್ಕರಪ್ರಭಾ, ವಾಲುಕಾಪ್ರಭಾ, ಪಂಕಪ್ರಭಾ, ಧೂಮಪ್ರಭಾ, ತಮಪ್ರಭಾರ, ಮಹಾತಮಪ್ರಭಾ) ವಾಸಿಸುತ್ತಾರೆಂದು ಶಾಸನದಲ್ಲಿ ತಿಳಿಸಿದೆ.[71]

ಬಸವಕಲ್ಯಾಣ ತಾಲೂಕಿನ ಕೋಟೆಯಲ್ಲಿರುವ ವಸ್ತು ಸಂಗ್ರಹಾಲಯದಲ್ಲಿರುವ ಒಂದನೆಯ ಕಲ್ಲಿನ ಮೇಲಿರುವ ಶಾಸನದಲ್ಲಿ ಆರನೆಯ ವಿಕ್ರಮಾದಿತ್ಯ ತ್ರಿಭುವನಮಲ್ಲನು ಜಯಂತಿಪುರದ ನೆಲೆವೀಡಿನಿಂದ ಆಳುತ್ತಿದಾಗ ಅವನ ದಂಡ ನಾಯಕ, ಮಹಾಪ್ರಧಾನಿ, ಬಣಸವೆರ್ಗ್ಗಡೆ ಅನಂತಪಾಳಯ್ಯ ಎಂಬುವನಿದ್ದನೆನ್ನುವ ಇತಿಹಾಸವು ಈ ಶಾಸನದಿಂದ ತಿಳಿದು ಬರುವುದಲ್ಲದೇ ಪಲ್ಲವರಸನನ್ನು ವಿಜ್ಞಾಪಿಸಿಕೊಂಡು ಸುಂಕವನ್ನು ಬಿಡಿಸಿಕೊಟ್ಟ ವಿಷಯವು ಈ ಶಾಸನದಿಂದ ತಿಳಿದು ಬರುತ್ತದೆ.[72]

ಬೀದರ ಜಿಲ್ಲೆಯ ಮುಚಳಂಬ ಗ್ರಾಮದ ರಾಮಲಿಂಗೇಶ್ವರ ಗುಡಿಯ ಎಡಭಾಗದಲ್ಲಿರುವ ಕಲ್ಲಿನ ಮೇಲಿರುವ ಕ್ರಿ.ಶ 1125ರ ಶಾಸನದಲ್ಲಿ ತ್ರಿಭುಮಲ್ಲ ಆರನೇ ವಿಕ್ರಮಾದಿತ್ಯನು ರಾಜಧಾನಿ ಜಯಂತಿಪುರದ ನೆಲೆವೀಡಿನಲ್ಲಿದ್ದಾಗ ರಾಜನಾರಾಯಣಪುರದ ಸ್ಥಳದ ಕಾಲಹಳ್ಳಿಯಾದ ಮುಚ್ಚಳಂಬಿಯ ರಾಮೇಶ್ವರ ದೇವರಿಗೆ ಮೊದಲು ನೀಡಿದ್ದ 80 ಮತ್ತರು ಹೊಲವನ್ನು ಮತ್ತು 12 ಮತ್ತರು ತೊಟವನ್ನು, ಎರಡು ನಿವೇಶನಗಳನ್ನು ಮೊದಲು ನೋಡಿಕೊಳ್ಳುತ್ತಿದ್ದ ಗೊರವರು ಒತ್ತೆ ಇಟ್ಟುಕೊಂಡಿದ್ದರು. ಮಹಾಜನರು ಆ ಒತ್ತೆಕಾರರನ್ನೆಲ್ಲಾ ಒಕ್ಕಲೆಬ್ಬಿಸಿ ಆ ಭೂಮಿಯೆಲ್ಲವನ್ನು ಬಿಡಿಸಿ ದೇವರಿಗೆ ನೀಡಿದರು. ಇದಲ್ಲದೇ ತಮ್ಮ ಧರ್ಮದ ಹಣವನ್ನು ದೇವರಿಗೆ ಸರ್ವಮಾನ್ಯವಾಗಿ ನೀಡಿದರು. ಹೀಗೆ ಆರನೆ ವಿಕ್ರಮಾದಿತ್ಯನ ಕಾಲಘಟ್ಟದಲ್ಲಿ ಬೀದರ ಜಿಲ್ಲೆಯಲ್ಲಿ ನಡೆದ ಎರಡು ಗುಂಪುಗಳ ಮಧ್ಯದಲ್ಲಿನ ವಿರಸದ ಇತಿಹಾಸವು ಈ ಶಾಸನದಿಂದ ತಿಳಿದು ಬರುತ್ತದೆ.[73]

ಬೀದರ ಜಿಲ್ಲೆಯ ರಂಜೋಳ ಗ್ರಾಮದ ಮಾರುತಿ ದೇವಾಲಯದಲ್ಲಿರುವ ಶಾಸನದಲ್ಲಿ, ಆರಂಭದಲ್ಲಿ ಚಾಲುಕ್ಯ ಅರಸ ಕತ್ತಿಯರಸನನ್ನು ರಾಷ್ಟ್ರಕೂಟರು

ಮೂಲೆಗೆ ತಳ್ಳಿದರೆಂದೂ, ರಾಷ್ಟ್ರಕೂಟರನ್ನು ತೈಲಪನು ಮೂಲಗೆ ತಳ್ಳಿದನೆಂದು ತಿಳಿಸುತ್ತದೆ. ಈ ತೈಲಪನ ಮಗ ದಶವರ್ಮ, ಇವನ ಮಗ ಜಯಸಿಂಹ, ಜಯಸಿಂಹ ಮಗ ಅಹವಮಲ್ಲ, ಇವನ ಮಗ ವಿಕ್ರಮಾದಿತ್ಯನೆಂದು ಹೇಳಿದೆ.

ತ್ರಿಭುವನಮಲ್ಲನು ರಾಜ್ಯಭಾರ ಮಾಡುತ್ತಿದ್ದು, ಭೂಮಿಯಲ್ಲಿ ಕುಂತಳದೇಶದ ಭಾಗವಾಗಿ ಅಟ್ಟಳೆನಾಡು ಚೆಲುವಾಗಿತ್ತು ಅದರಲ್ಲಿ ರೆಂಜೇರು ಎಂಬುದು ಸಿಂಧವಂಶದ ಸ್ಥಾನವಾಗಿ ಪ್ರಖ್ಯಾತಿಪಡೆದಿತ್ತು. ಆ ಪುರದಲ್ಲಿ ಸಿಂಧವಂಶದ ಹಜ್ಜ ರಾಜ್ಯಭಾರ ಮಾಡುತ್ತಿದ್ದನು.[74]

ಬಗದಲ್ ಗ್ರಾಮದ ಪಂಚಯ್ಯಸ್ವಾಮಿ ಲದ್ದಿಯವರ ನೇವಳಗಿಪಟ್ಟಿ ಹೊಲದಲ್ಲಿರುವ ಕಲ್ಲಿನ ಮೇಲಿರು ಶಾಸನದಲ್ಲಿ, ಆರನೇ ವಿಕ್ರಮಾದಿತ್ಯನು ಮನ್ನೆಯಕೆರೆಯ ನೆಲೆವೀಡಿನಲ್ಲಿದ್ದು ಅವನ ಮಂಡಳೇಶ್ವರನಾದ ಪೆರ್ಮಾಡಿ ಅರಸನು ಹಿರಿಯ ಬಾವುಗೆಯ ಸಿರಿಸಿಗೆಯ ಮಲ್ಲಿಭಟ್ಟನಿಗೆ ದಾನ ನೀಡಿದಂತೆ ಉಲ್ಲೇಖಿವಿದೆ.[75]

ಬರೂರ ಗ್ರಾಮದ ಪಂಚಾಯಿತಿ ಕಛೇರಿಯ ಎದುರಿನ ಕಟ್ಟೆಯ ಕಲ್ಲಿನ ಮೇಲಿರುವ ಕ್ರಿ.ಶ 1113ರ ಶಾಸನದಲ್ಲಿ, ತ್ರಿಭುವನಮಲ್ಲನು ಕಳಾಸಪುರದ ನೆಲೆವೀಡಿನಲ್ಲಿದ್ದಂತೆ ಶಾಸನದಲ್ಲಿ ಹೇಳಿದೆ. ಬರವೂರನಲ್ಲಿ ಚಂದಗಣಾರ್ಯ ಎಂಬುವವನಿದ್ದ ಇವನ ವಂಶದವನಾದ ಹಾಗೂ ಬರವೂರ ಪ್ರಭುವಾಗಿದ್ದ ಆದಿತ್ಯಭಟ್ಟೋಪಾಧ್ಯಾಯನು ಸೂರ್ಯದೇವರ ದೇವಾಲಯವನ್ನು ಪ್ರತಿಷ್ಠಾಪಿಸಿದ. ಪ್ರತಿಷ್ಠೆ ಮಾಡಿದ ಕಾಲದಲ್ಲಿ ಪಿತಿಯ ಕೋಲಿನಲ್ಲಿ ಮೂರು ಮತ್ತರು ಹೊಲವನ್ನು ಮಾಣಿಕೇಶ್ವರದ ಒಂಬತ್ತು ಕೈಯ ನಿವೇಶನ, ಹೂವಿನ ತೋಟ ಮುಂತಾದವನ್ನು ನೀಡುತ್ತಾನೆ. ಅಲ್ಲಿಯ ವ್ಯಾಪಾರಿಗಳು ದೇವರ ದೀಪ, ನೈವೇದ್ಯವೆಂದು ಕತ್ತೆ, ಕೋಣ, ಬಂಡಿ ಮುಂತಾದವುಗಳಲ್ಲಿ ಬಂದು ಮಾರಿದ ವಸ್ತುಗಳಿಗೆ ಗದ್ಯಾಣಕ್ಕೆ ಬೆಳ್ಳಿಯ ಹಾಗವನ್ನು ಬಿಟ್ಟ ಉಲ್ಲೇಖವಿದೆ.[76]

ಹೀಗೆ ಆರನೇ ವಿಕ್ರಮಾದಿತ್ಯನ ಕಾಲದಲ್ಲಿ ಬೀದರ ಜಿಲ್ಲೆಯ ಸ್ಥಳಿಯ ಇತಿಹಾಸದ ಪರಿಚಯದ ನಂತರ ಒಬ್ಬ ವೀರ ಪರಾಕ್ರಮಿ, ಉತ್ತಮ ಆಡಳಿತಗಾರ, ರಾಜನೀತಜ್ಞ, ದಕ್ಷ ಆಡಳಿತಗಾರನ ಯುದ್ಧ ದಿಗ್ವಿಜಯಗಳ ಇತಿಹಾಸವನ್ನು ತಿಳಿಯೋಣ.

1. ಜಯಸಿಂಹನ ಬಂಡಾಯ :

ಸಿಂಹಾಸನಕ್ಕಾಗಿ ಆರನೇ ವಿಕ್ರಮಾದಿತ್ಯನ ಸೋದರ ಜಯಸಿಂಹನು ದಂಗೆ ಎದ್ದನು. ಅನೇಕ ಸಾಮಂತರು ಜಯಸಿಂಹನ ಸಹಾಯಕ್ಕೆ ಧಾವಿಸಿದರು. ಆದರೆ ವಿಕ್ರಮಾದಿತ್ಯನು ಜಯಸಿಂಹ ಮತ್ತು ಅವನ ಆಪ್ತರನ್ನು ಸೋಲಿಸಿದನು. ಜಯಸಿಂಹನನ್ನು ಕ್ಷಮಿಸಿ ಬನವಾಸಿಯ ರಾಜ್ಯಪಾಲನನ್ನಾಗಿ ನೇಮಿಸಿದನು.[77]

2. ಪಾರಮಾರರ ಮೇಲೆ ದಿಗ್ವಿಜಯ :

ಮಾಳವದೇಶದ ಪಾರಮಾರರೊಂದಿಗೆ ಆರನೇ ವಿಕ್ರಮಾದಿತ್ಯನು ಒಮ್ಮೆ ಮಿತ್ರನಾಗಿ ಮಾಳವದೇಶಕ್ಕೆ ಹೊದರೆ ಇನ್ನೊಮ್ಮೆ ಶತ್ರುವಾಗಿ ನುಗ್ಗಿ ಯುದ್ಧಗಳನ್ನು ಗೆದ್ದಿದ್ದಾನೆ. 1077ರಲ್ಲಿ ಚಕ್ರವರ್ತಿ ವಿಕ್ರಮಾದಿತ್ಯನು ಪಾರಮಾರರ ಮೇಲೆ ದಂಡೆತ್ತಿ ಹೋಗಿ ಸೋಲಿಸಿದನು. ಮೊದಲಬಾರಿಗೆ ಪಾರಮಾರ ರಾಜ ಉದಯಾದಿತ್ಯನನ್ನು ಸೋಲಿಸಿ ಅವನ ರಾಜಧಾನಿ ಧಾರಾನಗರವನ್ನು ಸುಟ್ಟು ಹಾಕುತ್ತಾನೆ.ಈ ದಿಗ್ವಿಜಯವು ಇವನ ಖ್ಯಾತಿಯನ್ನು ಇಮ್ಮಡಿಗೊಳಿಸುತ್ತದೆ.

ನಂತರ ಕ್ರಿ.ಶ 1098ರಲ್ಲಿ ಉದಯಾದಿತ್ಯನ ಮಗನಾದ ಜಗದ್ದೇವನ ಪರವಾಗಿ ಭಾಗವಹಿಸುತ್ತಾನೆ. ಉದಯಾದಿತ್ಯನ ಕಿರಿಯಮಗ ಜಗದ್ದೇವ, ಹಿರಿಯಮಕ್ಕಳು ಲಕ್ಮದೇವ ಮತ್ತು ನರವರ್ಮನ್. ಈ ಮೂರು ಜನರಲ್ಲಿ ಕಿರಿಯವನಾದ ಜಗದ್ದೇವ ಒಳ್ಳೆಯನಾಗಿದ್ದ ಕಾರಣ ತಂದೆ ಉದಯಾದಿತ್ಯ ಇವನನ್ನು ಹೆಚ್ಚು ಪ್ರೀತಿಸುತ್ತಿದ್ದ. ಹೀಗಾಗಿ ತಂದೆ ಉದಯಾದಿತ್ಯ ಇವನನ್ನೇ ತನ್ನ ಉತ್ತರಾಧಿಕಾರಿಯನ್ನಾಗಿ ನೇಮಿಸುತ್ತಾನೆ. ಆದರೆ ಹಿರಿಯ ಅಣ್ಣಂದಿರು ಇದಕ್ಕೆ ಆಸ್ಪದ ಕೊಡುವುದಿಲ್ಲ. ಇದರಿಂದಾಗ ಧಾರಾನಗರದಿಂದ ಓಡಿಬಂದ ಜಗದ್ದೇವ ವಿಕ್ರಮಾದಿತ್ಯನಲ್ಲಿ ಆಶ್ರಯ ಕಲ್ಯಾಣದಲ್ಲಿ ಆಶ್ರಯ ಪಡೆಯುತ್ತಾನೆ. ವಿಕ್ರಮಾದಿತ್ಯ ಇವನನ್ನು ತನ್ನ ಮಗನ ಹಾಗೆ ನೋಡಿಕೊಂಡು ಸೈನ್ಯದೊಂದಿಗೆ ಧಾರಾನಗರಕ್ಕೆ ಹೋಗಿ ಜಗದ್ದೇವನ ಅಣ್ಣಂದಿರನ್ನು ಸೋಲಿಸಿ ಜಗದ್ದೇವನಿಗೆ ಎಲ್ಲ ರೀತಿಯ ಸಹಾಯ ಮಾಡಿ ಬರುತ್ತಾನೆ. ಈ ಜಗದ್ದೇವನು ವಿಕ್ರಮಾದಿತ್ಯನಿಗೆ ಬಹಳ ವಿದೇಏಯನಾಗಿದ್ದು ವಿಕ್ರಮಾದಿತ್ಯನ ಆದೇಶದ ಮೇರೆಗೆ ಶತ್ರುಗಳೊಂದಿಗೆ ಹೋರಾಡಿದ್ದಾನೆ. ಹೊಯ್ಸಳರೊಂದಿಗೂ ಇವನು ಯುದ್ಧ ಮಾಡಿದ್ದಾನೆ. ಹೀಗೆ ಆರನೇ ವಿಕ್ರಮಾದಿತ್ಯನ ಸಾಮ್ರಾಜ್ಯ ಮಾಳ್ವವರೆಗೆ ವಿಸ್ತರಿಸಿದನು.[77]

3. ವೆಂಗಿಯ ಆಕ್ರಮಣ ಮತ್ತು ಚೋಳರ ಸೋಲು :

ಚೋಳರೊಂದಿಗೆ ಆರನೇ ವಿಕ್ರಮಾದಿತ್ಯನು ರಾಜಕುಮಾರನಾಗಿರುವಾಗಲೇ ಮೂರು ಯುದ್ಧಗಳಲ್ಲಿ ಭಾಗವಹಿಸಿ ಅವರೊಂದಿಗೆ ಹೋರಾಡಿರುತ್ತಾನೆ. ವೆಂಗಿಯ ಸಾರ್ವಭೌಮತ್ವಕ್ಕಾಗಿ ಚೋಳ ಮತ್ತು ಚಾಲುಕ್ಯರಿಗೆ ನಿರಂತರ ಯುದ್ಧಗಳು ನಡೆಯುತ್ತಲೆ ಬಂದಿವೆ. ಆರನೇ ವಿಕ್ರಮಾದಿತ್ಯನು ರಾಜನಾದ ನಂತರ ಕ್ರಿ.ಶ 1085ರಲ್ಲಿ ಚೋಳರಾಜ್ಯವನ್ನು ಮುತ್ತಿ ಕಂಚಿ ಮತ್ತು ತಂಜಾಪೂರುಗಳನ್ನು ವಶಪಡಿಸಿಕೊಂಡನು. ವೆಂಗಿಯನ್ನು ಮುತ್ತಿ ವಶಪಡಿಸಿಕೊಂಡು ಅದನ್ನು ದ್ವಂಸ ಮಾಡಿದನು. ಅನಂತರ ವೆಂಗಿಯನ್ನು ಮುತ್ತಲು ಬಂದ ಒಂದನೇ ಕುಲ್ಲೊತ್ತುಂಗ ಚೋಳನನ್ನು ಸೋಲಿಸಿದನು. ವೆಂಗಿಯ (ಆಂದ್ರ) ಚಾಲುಕ್ಯರು ಅವನ ಸಾರ್ವಭೌಮಕ್ಕೆ ಒಳಗಾದರು. ಚೋಳರ ವಿರುದ್ಧ ಕಾದಾಡುತ್ತಿದ್ದ ಸಿಂಹಳದ ರಾಜ ವಿಜಯಬಾಹುವಿನ ಆಸ್ಥಾನಕ್ಕೆ ತನ್ನ ರಾಯಭಾರಿಯನ್ನು ಕಳುಹಿಸಿದನು.[78]

ವೆಂಗಿಮಂಡಳದ ಮೇಲೆ ಪ್ರಭುತ್ವ ಸ್ಥಾಪಿಸಲು ಚೋಳರಿಗೂ ಚಾಲುಕ್ಯರಿಗೂ

ಸ್ಪರ್ಧೆ ನಡೆದು ಅದು ಯುದ್ಧದಲ್ಲಿ ಪರ್ಯವಸನವಾಗುತ್ತಿತ್ತು. ಇದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಆರನೇ ವಿಕ್ರಮಾದಿತ್ಯನು ಚಕ್ರವರ್ತಿಯಾದ ಮೇಲೆ ವೆಂಗಿಮಂಡಳದಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸುತ್ತಾನೆ. ಹೀಗೆ ಸ್ಥಾಪಿಸುವುದಕ್ಕಾಗಿ ವಿಕ್ರಮಾದಿತ್ಯನು ಕೆಲವಾರು ಯುದ್ಧಗಳನ್ನು ಮಾಡಬೇಕಾಯಿತು.

ವಿಕ್ರಮಾದಿತ್ಯನು ಪಟ್ಟಕ್ಕೆ ಬಂದ ಮೇಲೆ ವೆಂಗಿಮಂಡಲವನ್ನು ಗೆಲ್ಲಲು ತನ್ನ ಸೈನ್ಯವನ್ನು ಕಳುಹಿಸುತ್ತಾನೆ. ಕ್ರಿ.ಶ 1078ರ ಸುಮಾರಿಗೆ ಚಾಲುಕ್ಯ–ಚೋಳರ ಪ್ರತಿನಿಧಿಯಾಗಿ ಮುಮ್ಮಡಿ ಭೀಮನು ಅಲ್ಲಿ ಆಳುತ್ತಿರುತ್ತಾನೆ. ಆರನೇ ವಿಕ್ರಮಾದಿತ್ಯನ ಸೈನ್ಯ ಇವನನ್ನು ಸೋಲಿಸುತ್ತದೆ. ಮುಂದೆ 1078–1079ರಲ್ಲಿ ವೆಂಗಿಮಂಡಲಕ್ಕೆ ಮುಮ್ಮಡಿ ಭೀಮನ ಉತ್ತರಾಧಿಕಾರಿಯನ್ನಾಗಿ ವೀರಚೋಳ ನೆಂಬುವವನನ್ನು ಕಳುಹಿಸಲಾಗುತ್ತದೆ. ಆದರೆ ಯುದ್ಧದಲ್ಲಿ ಇವನೂ ಸೋಲನ್ನು ಅನುಭವಿಸಬೇಕಾಗುತ್ತದೆ. ಆಮೇಲೆ ವಿಕ್ರಮಾದಿತ್ಯನು ವೆಂಗಿಮಂಡಲದ ಆಡಳಿತವನ್ನು ತನ್ನ ಮಹಾಮಂಡಳೇಶ್ವರನಾದ ರಾಜಾದಿತ್ಯನಿಗೆ ಒಪ್ಪಿಸುತ್ತಾನೆ. ಈ ರಾಜಾದಿತ್ಯನು ಕ್ರಿ.ಶ 1083ರಲ್ಲಿ ಚೋಳರನ್ನು ಸೋಲಿಸಿ ಕಂಚಿನಗರದವರೆಗೂ ಹೋಗಿ ಅದನ್ನು ಸೂರೆಗೊಂಡು ಬರುತ್ತಾನೆ.

ಕ್ರಿ.ಶ 1113ರಲ್ಲಿ ಆಂಧ್ರದ ಕರಾವಳಿ ಪ್ರದೇಶಕ್ಕಾಗಿ ನಡೆದ ಯುದ್ಧದ ನೇತೃತ್ವವನ್ನು ವಿಕ್ರಮಾದಿತ್ಯನ ಮಗ ಕುಮಾರ ತೈಲಪದೇವನು ವಹಿಸಿಕೊಂಡು ಆ ಭಾಗವನ್ನು ಆಳುತ್ತಿದ್ದ ಚೊಳ ಅರಸ ಎರಡನೇ ರಾಜೇಂದ್ರ (ಕುಲೋತ್ತುಂಗ–1)ನ ಮಗ ಪರಾಂತರಕನನ್ನು ಸೋಲಿಸಿ ಕಂಚಿಯ ವರೆಗೆ ಓಡಿಸುತ್ತಾನೆ. ಕಳಿಂಗದ (ಈಗಿನ ಓರಿಸ್ಸಾ ರಾಜ್ಯದ ದಕ್ಷಿಣ ಭಾಗ) ಆಂಧ್ರ ಕರಾವಳಿ ಪ್ರದೇಶವೆಲ್ಲ ಇವನಿಗೆ ದಕ್ಕುತ್ತದೆ. ಅದರಂತೆ ಕ್ರಿ.ಶ 1118ರಲ್ಲಿ ಮತ್ತೊಂದು ಯುದ್ಧ ನಡೆದಿದ್ದು, ಈ ಯುದ್ಧದ ಮುಖಂಡತ್ವವನ್ನು ವಿಕ್ರಮಾದಿತ್ಯನ ಮಗ ಮೂರನೆಯ ಸೋಮೇಶ್ವರನು ವಹಿಸಿದನು. ಇದರಲ್ಲಿ ಮೂರನೇ ಸೋಮೇಶ್ವರನೇ ವಿಜಯಿಯಾಗುತ್ತಾನೆ.[79]

ಜನನಾಥಪೂರದಲ್ಲಿಯು ಒಂದು ಯುದ್ಧ ನಡೆಯುತ್ತದೆ. ಈ ಜನನಾಥಪೂರದಿಂದ ಎರಡನೇ ರಾಜೇಂದ್ರ ಚೋಳನ ಮಗ ಪರಾಂಗತಕನು ಆಳುತ್ತಿರುತ್ತಾನೆ. ಅಂದರೆ ಈ ನಗರ ಚೋಳರ ಅರಸರ ವಾಸಸ್ಥಾನವಾಗಿತ್ತೆಂಬುದು ಸ್ಪಷ್ಟ. ಈ ಜನನಾಥಪೂರಕ್ಕೆ ಆರನೇ ವಿಕ್ರಮಾದಿತ್ಯನ ದಂಡನಾಯಕರಲ್ಲಿ ಒಬ್ಬನಾದ ಗೊಂವಿಂದನು ಲಗ್ಗೆ ಇಟ್ಟು ಪರಾಂತಕನನ್ನು ಸೋಲಿಸಿ ವೆಂಗಿಪುರವನ್ನು ಸುಡುತ್ತಾನೆ. ವಿಕ್ರಮಾದಿತ್ಯ ಚಕ್ರವರ್ತಿಯಾದ ಮೇಲೆ ಚೋಳರೊಂದಿಗೆ ನಡೆದ ಎಲ್ಲ ಯುದ್ಧಗಳಲ್ಲಿ ಜಯಗಳಿಸಿದ್ದಾನೆ. ಹೀಗಾಗಿ ಆರನೇ ವಿಕ್ರಮಾದಿತ್ಯನು ಜೀವಿಸಿರುವ ವರೆಗೆ ವೆಂಗಿಮಂಡಲ ಚೋಳರ ಕೈಗೆ ಸೇರಲಿಲ್ಲ.[80]

4. ಹೊಯ್ಸಳರ ಮೇಲೆ ದಿಗ್ವಿಜಯ :

ಆರಂಭ ಹೊಯ್ಸಳರು ಕಲ್ಯಾಣ ಚಾಲುಕ್ಯರ ಸಾಮಂತರಾಗಿ ಅವರಿಗೆ

ವಿಧೇಯರಾಗಿದ್ದರು. ನೃಪಕಾಮ್, ವಿನಯಾದಿತ್ಯ, ಒಂದನೇ ಬಲ್ಲಾಳರು ನಿಷ್ಠೆಯಿಂದ ಇದ್ದರು. ಎರೆಯಂಗನು ಮಾಳ್ವ ಮತ್ತು ಚಿತ್ರಕೂಟಗಳನ್ನು ಗೆಲ್ಲಲು ನೆರವಾಗಿದ್ದನು. ಹೊಯ್ಸಳರು ವಿಕ್ರಮಾದಿತ್ಯನ ಕಾಲದಲ್ಲಿ ಚಾಲುಕ್ಯರ ಸಾಮಂತತ್ವದಿಂದ ಹೊರಬರಲು ಹೆಣಗಾಡಿದರು. ಒಂದನೇ ಬಲ್ಲಾಳನು ದಂಗೆ ಎದ್ದು ವಿಕ್ರಮಾದಿತ್ಯನಿಂದ ತಕ್ಕಶಾಸ್ತಿ ಮಾಡಿಸಿಕೊಂಡಿದ್ದನು. ಆನಂತರ ಬಂದ ವಿಷ್ಣುವರ್ಧನನು ಸಹ ಸ್ವತಂತ್ರನಾಗಲು ಹವಣಿಸಿ ಬಳ್ಳಾರಿ ಮತ್ತು ತುಂಗಭದ್ರಾ ನದಿ ಪ್ರದೇಶಗಳನ್ನು ಆಕ್ರಮಿಸಿದನು. ವಿಕ್ರಮಾದಿತ್ಯನು ತನ್ನ ಸಾಮಂತರ ಸೈನ್ಯವನ್ನೆಲ್ಲಾ ಕೂಡಿಸಿ ವಿಷ್ಣುವರ್ಧನನ ವಿರುದ್ಧ ಸೈನ್ಯ ಕಳುಹಿಸಿದನು. ಕ್ರಿ.ಶ 1118ರಲ್ಲಿ ಕಲ್ನೇಗಾಲ ಎಂಬಲ್ಲಿ ನಡೆದ ಕದನದಲ್ಲಿ ವಿಷ್ಣುವರ್ಧನನ ದಂಡನಾಯಕ ಗಂಗರಾಜನು ಚಾಲುಕ್ಯ ಸೈನ್ಯವನ್ನು ಸೋಲಿಸಿ ಹಿಮ್ಮೆಟ್ಟಿಸಿದನು. ಆದರೆ ಅನಂತರ ನಡೆದ ಆಲಸೂರು, ಹೊಸವೀಡು, ಕದನಗಳಲ್ಲಿ ವಿಷ್ಣುವರ್ಧನನು ಸೋತು ವಿಕ್ರಮಾದಿತ್ಯನ ಸಾಮಂತನಾಗಿಯೇ ಮುಂದುವರಿದನು.[81]

5. ದಕ್ಷಿಣ ರಾಜ್ಯಗಳೊಡನೆ ಯುದ್ಧ

ಕರಹಾಡದ ಶಿಲಾಹರ ಭೋಜರಾಜನನ್ನು ಸೋಲಿಸಿ ಅವನನ್ನು ತನ್ನ ಸಾಮಂತನನ್ನಾಗಿ ಮಾಡಿಕೊಂಡನು. ಕೊಂಕಣ ಅವನ ವಶವಾಯಿತು. ಅದೇ ರೀತಿ ಗೋವೆಯ ಕದಂಬರಸ ಎರಡನೇ ಜಯಕೇಶಿ, ಕೊಂಕಣದ ಮೌರ್ಯದೊರೆ ಜಯಕೇಶಿನ್, ಹಾನಗಲ್ ಕದಂಬರು, ಉಚ್ಚಂಗಿಯ ಪಾಂಡ್ಯರು, ಎಲಬುರ್ಗಿಯ ಸಿಂಧರು, ವಾರಂಗಲ್‌ನ ಕಾಕತೀಯರು, ದಕ್ಷಿಣ ಕನ್ನಡದ ಆಲೂಪರು, ಸೇವುಣರು, ಪೊಂಬುರ್ಚದ ಶಾಂತಾರನನ್ನು ಸೋಲಿಸಿ ಸಾಮಂತರಾಗಿ ಮಾಡಿಕೊಳ್ಳುತ್ತಾನೆ.[82]

6. ಉತ್ತರ ದಿಗ್ವಿಜಯಗಳು :

ಉತ್ತರದಲ್ಲಿ ಗೂರ್ಜರಾಜನನ್ನು, ತ್ರಿಪುರಿಯ ಕರ್ಣನನ್ನು, ಕಳಚೂರಿ ಬಲ್ಲದೇವನನ್ನು ಸೋಲಿಸಿ ಅವರಿಂದ ಕಪ್ಪಕಾಣಿಕೆಗಳನ್ನು ಪಡೆದು ತನ್ನ ಸಾಮಂತರನ್ನಾಗಿ ಮಾಡಿಕೊಂಡನು. ಲಾಟ ಅವನ ಅಧೀನವಾಯಿತು. ಅಂಗ, ಕಳಿಂಗ, ಮಗಧ, ಪಾಂಚಾಲ, ಸೌರಾಷ್ಟ್ರ ಅಭೀರ, ಸಿಂಧು, ಮಾಳ್ವ ಮತ್ತು ವರಟಗಳನ್ನು ಗೆದ್ದನೆಂದು ಅವನ ಶಾಸನಗಳು ಹೇಳುತ್ತವೆ.[83]

ವಿಕ್ರಮಾದಿತ್ಯನ ಅಧಿಕಾರಿಗಳು ಕಾಶ್ಮೀರ, ನೇಪಾಳಗಳ ವರೆಗೆ ಹೋಗಿ ಅಲ್ಲಿಯ ಅರಸರನ್ನು ಸೋಲಿಸಿದ ವಿಷಯ ಶಾಸನಗಳಲ್ಲಿ ಬರುತ್ತದೆ. ಶಿವಮೊಗ್ಗ ಜಿಲ್ಲೆಯ ಶಿಕಾರಿಪೂರ ಬಳ್ಳಿಗಾವಿ 1096ರಲ್ಲಿಯ ಶಾಸನದಲ್ಲಿ ವಿಕ್ರಮಾದಿತ್ಯನ ಮಹಾಸಾಮಂತಾಧಿಪತಿ ಮಹಾಪ್ರಚಂಡದಂಡನಾಯಕ ಕಾಳಿದಾಸ ಚಮೂಪನು ನೇಪಾಳ, ಪಾಂಚಾಳ, ಚೋಳಾದಿ ಅರಸರನ್ನು ಸೋಲಿಸಿ ಅವರ ಭಂಡಾರ, ಆನೆ, ಕುದುರೆ, ಹೆಂಡಿರನ್ನು ತಂದು ವಿಕ್ರಮಾದಿತ್ಯನಿಗೆ ಕೊಟ್ಟನೆಂದು ಹೇಳಲಾಗಿದೆ. ಮಹಾಸಾಮಂತಾಧಿಪತಿ ಮಹಾಪ್ರಚಂಡದಂಡನಾಯಕ ಕಾಳಿಯರಸನು ಚಕ್ರವರ್ತಿ ಆರನೇ ವಿಕ್ರಮಾದಿತ್ಯನಿಗೆ ಹಿಮಾಲಯದಿಂದ ಸೇತುವರೆಗೂ ಭೂಮಿಯನ್ನು

ಜಯಿಸಿ ತಂದು ಕೊಟ್ಟನೆಂದು ಕಲಬುರ್ಗಿ ಜಿಲ್ಲೆಯ ಚಿತಾಪೂರ ತಾಲೂಕಿನ ನಾಗಾಯಿಯಲ್ಲಿರುವ ಕ್ರಿ.ಶ 1085ರ ಶಾಸನ ಹೇಳುತ್ತದೆ. ಇದೇ ರೀತಿ ಮಹಾಮಂಡಳೇಶ್ವರ ತ್ರಿಭುವನಮಲ್ಲ ಪಾಂಡ್ಯನು ಚಿತ್ರದುರ್ಗದ ಶಾಬನೂರ ಶಾಸನದಂತೆ ಕಳಿಂಗ, ಅಂಗ, ವಂಗ, ಮಗಧ, ನೇಪಾಳ, ಪಾಂಚಾಳ, ಜೂರ್ಜ್ಜರ, ಗೌಳ, ದ್ರವಿಳ, ಆಂಧ್ರ, ಮಾಳವ, ಸೌರಾಷ್ಟ್ರ, ಬರ್ಬರ್, ಕಾಶ್ಮೀರ ಮೊದಲಾದ ಅರಸರನ್ನು ಸೋಲಿಸಿದನೆಂದು ತಿಳಿಸುತ್ತದೆ. ಈ ಮೇಲಿನ ಮಾತುಗಳಲ್ಲಿ ಉತ್ಪ್ರೇಕ್ಷೆಯಿರಬಹುದಾದರೂ ವಿಕ್ರಮಾದಿತ್ಯನ ಸೈನ್ಯ ಉತ್ತರ ಭಾರತದ ಕೆಲವು ಪ್ರಾಂತಗಳವರೆಗಾದರೂ ಹೋಗಿ ಅಲ್ಲಿಯ ಅರಸರನ್ನು ಸೋಲಿಸಿರಬೇಕೆನಿಸುತ್ತದೆ.[84]

ಚಾಲುಕ್ಯ ಚಕ್ರವರ್ತಿ ಸೋಮೇಶ್ವರ (ಕ್ರಿ.ಶ 1060,1069) ಮತ್ತು ಅವನ ಮಗ ವಿಕ್ರಮಾದಿತ್ಯ (ಕ್ರಿ.ಶ 1076–1126) ಉತ್ತರ ಭಾರತದ ಮೇಲೆ ದಂಡೆತ್ತಿ ಹೋಗಿ ಬಂಗಾಳ ಮತ್ತು ಬಿಹಾರ್ ರಾಜ್ಯಗಳನ್ನು ಗೆದ್ದು, ತಮ್ಮ ಅಧಿಪತ್ಯವನ್ನು ಅಲ್ಲಿ ಸ್ಥಾಪಿಸಿದ ವಿಷಯ ಚರಿತ್ರೆಯಲ್ಲಿ ಎಲ್ಲರಿಗೂ ತಿಳಿದಿದೆ. ಸೋಮೇಶ್ವರ, ಆಂಧ್ರ, ದ್ರಾವಿಡ, ಮಗಧ, ಮತ್ತು ನೇಪಾಳ ರಾಜರ ತಲೆಗಳನ್ನು ಚಂಡಾಡಿ ತನ್ನ ಅಧಿಪತ್ಯವನ್ನು ಸ್ಥಾಪಿಸಿದ ಬಗ್ಗೆ ಪಟ್ಟದಕಲ್ಲಿನ ಶಿಲಾಶಾಸನ ಸಾರುತ್ತದೆ.

ಪ್ರಸಿದ್ಧ ಪಟ್ಟದ ಕಲ್ಲಿನ ಶಾಸನದ ಪ್ರಕಾರ ಚಾಲುಕ್ಯ ವಿಕ್ರಮಾದಿತ್ಯ ನೇಪಾಳದವರೆಗೆ ದಂಡೆತ್ತಿ ಹೋಗಿ ಅಲ್ಲಿನ ರಾಜರನ್ನು ಸದೆಬಡಿದುದಾಗಿ ತಿಳಿಸುತ್ತದೆ. ನೇಪಾಳದ ವಂಶಾವಳಿಗಳು ನಾನ್ಯದೇವ ಸಾಮಂತ ರಾಜರಾಗಿದ್ದುದನ್ನು ಸಾರುತ್ತವೆ. ಅನಂತರ ಪ್ರಕಟಗೊಂಡ ನೂತನ ವಂಶಾವಳಿಗಳ ಪ್ರಕಾರ ನಾನ್ಯದೇವ ಅಂತಃಕಲಹಗಳಿಂದ ಜರ್ಜಿತವಾಗಿದ್ದ ನೇಪಾಳವನ್ನು ಆಕ್ರಮಿಸಿ, ಭಟಗಾಂವದಲ್ಲಿ ತನ್ನ ಅಧಿಪತ್ಯವನ್ನು ಸ್ಥಾಪಿಸಿ ಕಠಮಂಡು ಕಣವೆಯನ್ನು ಆಳತೊಡಗುತ್ತಾನೆ. ಇದರಿಂದಾಗಿ ನೇಪಾಳವನ್ನು ಆಳುತ್ತಿದ್ದ ಪಾಲರವಂಶ ಕ್ಷೀಣಗೊಂಡು ಅವಸಾನಗೊಳ್ಳುತ್ತದೆ. ಈ ವಿಷಯದಲ್ಲಿ ಅನೇಕ ಭಿನ್ನಾಭಿಪ್ರಾಯಗಳಿದ್ದರೂ ನಾನ್ಯದೇವ ನೇಪಾಳವನ್ನು ಆಕ್ರಮಿಸಿ ಭಟಗಾಂವದಲ್ಲಿ ತಳ ಊರಿದ್ದು ಮಾತ್ರ ಖಚಿತವೆಂದು ವಿದ್ವಾಂಸರ ಅಭಿಪ್ರಾಯ.

ಚಿರತ್ರೆಕಾರರು ಮತ್ತು ಘನ ವಿದ್ವಾಂಸರು ಹರಿಸಿಂಹದೇವನನ್ನು ನಾನ್ಯದೇವನ ಆನಂತರ ಮಿಥಿಲೆಯ ಒಬ್ಬ ಪ್ರಬಲ ಮಹಾರಾಜನೆಂದು ಘೋಷಿಸಿದ್ದಾರೆ. ಈ ರಾಜನ ಬಗ್ಗೆ ನಮಗೆ ದೊರೆತಿರುವ ಮಾಹಿತಿ ಕೇವಲ ಸಾಹಿತ್ಯ ಸ್ಥಳಿಯಪುರಾಣ, ಐಹಿತ್ಯ, ಪರಂಪರೆಗಳ ಆಧಾರಗಳೆಂದು ಚರಿತ್ರೆಕಾರರು ಸಾರಿರುತ್ತಾರೆ. ವಿದ್ಯಾಪತಿಯು ಪುರುಷ ಪರೀಕ್ಷಾದಲ್ಲಿ ಈ ರಾಜನು ಕರ್ನಾಟಕ ಕುಲಸಾಂಭವ, ಕರ್ನಾಟಕ ವಂಶೋದ್ಭವ ಎಂದು, ಚಂಡೇಶ್ವರನ ಕೃತ್ಯ ರತ್ನಾಕರದಲ್ಲಿ ಕರ್ನಾಟಕ ಚೂಡಾಮಣಿ ಎಂದು ಜ್ಯೋತೀಶ್ವರ ಠಾಕೂರನ ಧೂರ್ತ ಸಮಾಗಮದಲ್ಲಿ ಹಿಂದೂಪತಿ ಎಂದು ಉಮಾಪತಿಯ ಪರಿಜಾತಾ ಹರನಾಟಕದಲ್ಲಿ ಹಿಂದೂಪತಿ ಹರಿಸಿಂಹ ನೆಂದು

ಕರೆಯಲ್ಪಟ್ಟಿದ್ದಾನೆ. ನಾನ್ಯದೇವನೊಂದಿಗೆ ಈ ಭಾಗದಿಂದ ಸುಮಾರು 12 ಕಾಯಸ್ಥ ಕುಟುಂಬಗಳು ಹಿಂಬಾಲಿಸಿ ಹೋಗಿದ್ದಾರೆ. ನಾನ್ಯದೇವನು ನೇಪಾಳದಲ್ಲಿ ರಾಜ್ಯಸ್ಥಾಪನೆ ಮಾಡಿದ ನಂತರ ಆತನ ಆಹ್ವಾನದ ಮೇರೆಗೆ 20 ಕುಟುಂಬಗಳು ವಲಸೆ ಹೋಗಿದ್ದು ಇರುತ್ತದೆ. ಅನಂತರ ಮಿಥಿಲಿಗೆ ಇನ್ನು 30 ಕುಟುಂಬಗಳು ಹೋಗುತ್ತವೆ. ಅನಂತರ ಈ ಭಾಗದಿಂದ ಅನೇಕ ಕುಟುಂಬಗಳು ಹಂತಹಂತವಾಗಿ ಹೋಗಿ ಮಿಥಿಲಿಯಲ್ಲಿ ವಾಸಮಾಡಲು ಪ್ರಾರಂಭಿಸಿದ್ದು ಕಂಡು ಬರುತ್ತದೆ. ನೇಪಾಳದ ಮೇಲೆ ಈ ಮೊದಲೇ ನಾನ್ಯದೇವನಿಂದ ಶುರುವಾದ ಆಕ್ರಮಣ, ಹರಿಸಿಂಹನ ಕಾಲಕ್ಕೆ ದೇಶವನ್ನು ಭದ್ರವಾಗಿ ತನ್ನ ವಂಶಕ್ಕೆ ಅಧೀನಕ್ಕೊಳಪಡಿಸಿದನೆಂಬ ಸಾಹಸ ಕಾರ್ಯಕ್ಕೆ ಬಲವಾದ ಆಧಾರಗಳನ್ನು ಚರಿತ್ರಕಾರರು ಒದಗಿಸಿದ್ದಾರೆ. ಈ ಭಾಗದಿಂದ ಹೋಗಿ ರಾಜ್ಯ ಸ್ಥಾಪನೆ ಮಾಡಿದ ನಾನ್ಯದೇವನ ಪ್ರಧಾನ ಮಂತ್ರಿ ಶ್ರೀಧರದಾಸನೆಂಬ ಬ್ರಾಹ್ಮಣ ಬಹಳ ಪ್ರಸಿದ್ಧಿ ಪಡೆದಿದ್ದನು. ಈತನು ಮಹಾಮಂಡಲಿಕ ಎಂಬ ಬಿರುದು ಹೊಂದಿದ್ದನು.

ಮಿಥಿಲೆಯನ್ನಾಳಿದ ಕರ್ನಾಟಕ ವಂಶದ ರಾಜರು ತಾವು ಕರ್ನಾಟಕ ವಂಶಕ್ಕೆ ಸೇರಿದವರು ಎಂದು ಮೊದಲನೆಯ ರಾಜನಾದ ಶ್ರೀ ನಾನ್ಯದೇವನಿಂದ ಮೊದಲ್ಗೊಂಡು ಕೊನೆಯ ರಾಜನಾದ ಹರಿಸಿಂಹ ದೇವನವರೆಗೂ ಈ ವಂಶದವರಿಗೆ ಹೆಮ್ಮೆಯಿಂದ 'ಕರ್ನಾಟಕ ಕುಲಭೂಷಣ', 'ಕರ್ನಾಟಕ ಕುಲಶ್ರೇಷ್ಠ', 'ಕರ್ನಾಟಕ ಕುಲಭೂಷಣ', 'ಕರ್ನಾಟಕ ಕುಲ ಚೂಡಾಮಣಿ', 'ಕರ್ನಾಟಕ ಕುಲಸಂಭವ', 'ಕರ್ನಾಟಕ ವಂಶೋದ್ಭವ', ಕರ್ನಾಟಕಾಧೀಪ', 'ಕರ್ನಾಟಕ ಕುಲಲಕ್ಷ್ಮಿ', ಎಂದು ಇತಿಹಾಸಕಾರರು, ಸಾಹಿತಿಗಳು, ಶಾಸನಗಳಲ್ಲಿ ಸ್ಥಳಿಯ ಜನರು ಸಾರಿದ್ದಾರೆ.[85]

7. ಇತರೆ ಯುದ್ಧಗಳು :

1) ಮಡಕೆದೊರೆ ಯುದ್ಧ:

ಮಹಾಸಾಮಂತಾಧಿಪತಿ ಮಹಾಪ್ರಚಂಡದಂಡನಾಯಕ ತಂಬರಸನು ಚಕ್ರವರ್ತಿ ವಿಕ್ರಮಾದಿತ್ಯನ ಆದೇಶದ ಮೇರೆಗೆ ಚೋಳನ ವಿರುದ್ಧ ಯುದ್ಧ ಮಾಡಿದುದು ಹಳೆಬನ್ನೂರು ಶಾಸನದಿಂದ ತಿಳಿದುಬರುತ್ತದೆ. ಮಡಕೆದೊರೆಯಲ್ಲಿ (ಇಂದಿನ ಮಡಿಕೇರಿ) ತಂಬರಸನಿಗೂ ಚೋಳಸೈನ್ಯಕ್ಕೂ ಭೀಕರ ಯುದ್ಧ ನಡೆಯುತ್ತದೆ. ಈ ಯುದ್ಧದಲ್ಲಿ ಚೋಳ ಸೈನಿಕರು ಹೆದರಿ ಓಡಿಹೋಗುತ್ತಾರೆ. ತಂಬರಸನು ಅಲ್ಲಿ ಒಂದು ವಿಜಯಸ್ಥಂಭವನ್ನು ನೇಡುತ್ತಾನೆ.

2) ಗಂಗೆಕೊಂಡ ಚೋಳಪುರದ ಯುದ್ಧ :

ಮಡಕದೊರೆಯಲ್ಲಿ ತಂಬರಸನು ಚೋಳನನ್ನು ಸೋಲಿಸಿ ಚೋಳರ ರಾಜ್ಯದೊಳಗೆ ನುಗ್ಗಿ ಗಂಗೆಕೊಂಡಚೋಳಪುರಕ್ಕೆ ದಾಳಿ ಇಡುತ್ತಾನೆ. ಈ ಯುದ್ಧದಲ್ಲಿ ಗಂಗೆಕೊಂಡಚೋಳಪುರದ ಚೋಳನು ಓಡಿಹೋಗುತ್ತಾನೆ. ಇದರ ನೆನಪಿಗಾಗಿ

ತಂಬರಸನು ಗುಡಿಯನ್ನು ಕಟ್ಟಿಸಿ ಕೀರ್ತಿಧ್ವಜಸ್ಥಂಭವನ್ನು ನಿಲ್ಲಿಸುತ್ತಾನೆ. ಇಲ್ಲಿಂದ ಇನ್ನೂ ಮುಂದೆ ಹೋಗಿ 'ದ್ರವಿಳಾಳೀಪತಿ' ಯಾಗಿದ್ದವನು ಎರಡನೇ ರಾಜೇಂದ್ರ ಅಲ್ಲಿ 'ರಾಜಿಗಚೋಳನ ಒಕ್ಕಲಂ ಬಡಿದು' ಜಯಸ್ಥಂಭವನ್ನು ನೇಡುತ್ತಾನೆ. ಈ ಎಲ್ಲ ಕಾರ್ಯವನ್ನು ತಂಬರಸನು 20 ಜೂನ್ ಕ್ರಿ.ಶ 1080ರೊಳಗಾಗಿ ಮಾಡಿ ಮುಗಿಸಿದ್ದಾನೆ.

3) ತೆಂಕಣಗೊಗ್ಗಿಯೊಡನೆ ಯುದ್ಧ :

ವಿಕ್ರಮಾದಿತ್ಯನ ಮಹಾಸಾಮಂತಾಧಿಪತಿ ಮಹಾಪ್ರದಂಡದಂಡನಾಯಕ ಗೋವಿಂದರಸನು ತೆಂಕಣಗೊಗ್ಗಿಯ ಮೇಲೆ ದಂಡೆತ್ತಿ ಹೋಗಿ ಕಲ್ಲೂರನ್ನು ಸುಡುತ್ತಾನೆ. 31 ಜುಲೈ 1113ರ ಬಳ್ಳಿಗಾವೆ ಶಾಸನವು ಸಾಕ್ಷಿಯಾಗಿದೆ.

4) ಕಿಳ್ಗಿಳಕೋಟೆಯ ಮುತ್ತಿಗೆ :

ಆಗಿನ ಕಾಲದ ಪ್ರಸಿದ್ಧವಾಗಿದ್ದ ಕೋಟೆಯೆಂದರೆ ಕಿಳ್ಗಿಳಕೋಟೆ. ದುರ್ಗತ್ರಯವನ್ನು ಅಳವಡಿಸಿಕೊಂಡು ನಿರ್ಮಿಸಲ್ಪಟ್ಟ ಕೋಟೆಯಾಗಿದೆ. ಇಂಥ ಕೋಟೆಯನ್ನು ವಿಕ್ರಮಾದಿತ್ಯನ ಮಹಾಸಾಮಂತಾಧಿಪತಿ ಮಹಾಪ್ರಚಂಡದಂಡನಾಯಕ ಗೋವಿಂದರಸನು ಮುತ್ತಿ ವಶಪಡಿಸಿಕೊಳ್ಳುತ್ತಾನೆ.

5) ಪಾಂಚಾಳನೊಡನೆ ಯುದ್ಧ:

ವಿಕ್ರಮಾದಿತ್ಯನ ಮಹಾಮಂಡಳೇಶ್ವರ ತ್ರಿಭುವನಮಲ್ಲ ಗಂಗಪೇರ್ಮಾಡಿ ಬರ್ಮದೇವನು ಪಾಂಚಾಳವನ್ನು ಯುದ್ಧದಲ್ಲಿ ಸೋಲಿಸುತ್ತಾನೆ. ಹೀಗಾಗಿ ಇವನು ಕಣಜಯಪ್ರೋತ್ತುಂಗ ನೆಂಬ ಹೆಸರನ್ನು ಪಡೆಯುತ್ತಾನೆ.[86]

6) ಆಂಧ್ರ-ಗೂರ್ಜರ-ಚಕ್ರಕೂಟ ಯುದ್ಧಗಳು :

ಆರನೇ ವಿಕ್ರಮಾದಿತ್ಯನ ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ಅನಂತಪಾಳನು ಚಕ್ರವರ್ತಿಯ ಪರವಾಗಿ ಗೂರ್ಜರ್, ಆಂಧ್ರರೊಡನೆ ಯುದ್ಧಮಾಡಿ ಚಕ್ರಕೂಟವನ್ನು ವಶಪಡಿಸಿಕೊಂಡಿದ್ದಾನೆ.

7) ರತ್ನಪುರದ ಯುದ್ಧ:

ವಿಕ್ರಮಾದಿತ್ಯನ ಆದೇಶದ ಮೇರೆಗೆ ಮಹಾಸಾಮಂತಾಧಿಪತಿ ಮಹಾಪ್ರಚಂಡ ದಂಡನಾಯಕ ಶ್ರೀಪತಿಯು ರತ್ನಪುರವನ್ನು ಕೈವಶಪಡಿಸಿಕೊಳ್ಳುತ್ತಾನೆ. ಅಲ್ಲಿಂದ ಬೆಳ್ಗೊಡೆ, ಭಂಡಾರ, ಸಿಂಹವಿಷ್ಟರ, ಕುದುರೆ, ವಿಳಾಸಿನಿಯವರನ್ನು ತಂದು ಚಕ್ರವರ್ತಿ ವಿಕ್ರಮಾದಿತ್ಯನಿಗೆ ಒಪ್ಪಿಸುತ್ತಾನೆ.

ಹೀಗೆ ಅನೇಕ ಯುದ್ಧಗಳನ್ನು ಮಾಡಿ, ಶತ್ರುಗಳನ್ನು ಹತ್ತಿಕ್ಕಿ ಆರನೇ ವಿಕ್ರಮಾದಿತ್ಯ ವಿಜಯಿಯಾಗಿದ್ದಾನೆ. ಪ್ರಾರಂಭದಲ್ಲಿ ಚೋಳರು, ಮಧ್ಯದಲ್ಲಿ

ಹೊಯ್ಸಳರು ತೊಂದರೆ ಕೊಟ್ಟರು ಅವರನ್ನು ಸಮರ್ಥವಾಗಿ ಎದುರಿಸಿ ಸಾಮ್ರಾಜ್ಯದಲ್ಲಿ ಶಾಂತಿಯು ನೆಲೆಸುವಂತೆ ಮಾಡಿದ ಕೀರ್ತಿ ಇವನದಾಗಿದೆ.[87]

ಇಂತಹ ಒಬ್ಬ ಮಹಾನ ಸಾಮ್ರಾಟನು ಶೌರ್ಯದಲ್ಲಿ ನಾರಾಯಣನಾಗಿದ್ದರೆ ವಿವಾಹದ ವಿಷಯದಲ್ಲಿ ಶ್ರೀಕೃಷ್ಣನಾಗಿದ್ದಾನೆ. ಇವನಿಗೆ 19 ಜನ ರಾಣಿಯರಿದ್ದರು. ವಿಕ್ರಮಾದಿತ್ಯನ ಹಿರಿಯಪುತ್ರ ಮಲ್ಲಿಕಾರ್ಜುನ, ಇವನು ಯಾವ ರಾಣಿಗೆ ಹುಟ್ಟಿದನೆಂಬುದು ತಿಳಿದು ಬರುವುದಿಲ್ಲ. ರಾಣಿ ಚಂದಲದೇವಿಯಿಂದ ಮೂರನೇ ಸೋಮೇಶ್ವರ, ತೈಲಪ, ಜಯಕರ್ಣ ಮತ್ತು ಒಬ್ಬ ಪುತ್ರಿ ಜನಿಸಿದ್ದಾರೆ. ರಾಣಿ ಮಲೆಯಮತಿ ದೇವಿಯ ಹೊಟ್ಟೆಯಿಂದ ಮೈಳಲದೇವಿ ಜನಿಸಿದ್ದಳು. ಅವನಿಗೆ ಹಲವು ರಾಣಿಯರಿದ್ದರು. ಚಂದ್ರಲೇಖ, ಶಿಲಾಹಾರ ರಾಜಕುಮಾರಿ ಕೇತಲದೇವಿ ಲಕ್ಷ್ಮೀಮಹಾದೇವಿ ಮತ್ತು ಚಂದಲದೇವಿ ಪ್ರಸಿದ್ಧರು. ಮಹಾದಾನಗಳನ್ನು ಮಾಡಿದ ಕರ್ನಾಟಕದ ಅರಸರಲ್ಲಿ ವಿಕ್ರಮಾದಿತ್ಯನೂ ಒಬ್ಬನಾಗಿದ್ದನು. ಅವನು ತುಲಾಪುರುಷನನ್ನು ಆಚರಿಸಿದನು. ಅನೇಕ ವೇಳೆ ಶಾಸನಗಳು ಆರನೇ ವಿಕ್ರಮಾದಿತ್ಯನಿಗೆ ನಿತ್ಯಭೂಮಿದಾನ ಎಂಬ ಬಿರುದನ್ನು ಸಹ ಕೊಡುತ್ತವೆ.[88] ಹೀಗೆ ಅನೇಕ ಯುದ್ಧಗಳನ್ನು ಗೆದ್ದು ಪ್ರಖ್ಯಾತಿ ಪಡೆದ ಆರನೇ ವಿಕ್ರಮಾದಿತ್ಯನಿಗೆ ಒಟ್ಟು 19 ಜನ ರಾಣಿಯರು. ಇವರಲ್ಲಿ ಕೆಲವರು ಭತ್ತಗ್ರಾಮ, ಅಗ್ರಹಾರ ಹಾಗೂ ಕೆಲವು ಭಾಗಗಳು ಆಳ್ವಿಕೆ ಮಾಡಿದ್ದಾರೆ. ಅಂತಹ ರಾಣಿಯವರ ಕುರಿತು ಸಹ ಅಧ್ಯಯನ ಮಾಡೋಣ.

ಚಂದಲದೇವಿ :

ಆರನೇ ವಿಕ್ರಮಾದಿತ್ಯನ ರಾಣಿಯರಲ್ಲಿ ದೊರೆಗೆ ಅತಿ ಪ್ರಿಯಪಾತ್ರಳಾದವಳೆಂದರೆ ಚಂದಲದೇವಿ. ಈಕೆ ಮೂವತ್ತು ವರ್ಷಕ್ಕೂ ಅಧಿಕವಾಗಿ ಈತನೊಂದಿಗೆ ಆಡಳಿತದಲ್ಲಿ ಸಹಕರಿಸಿದ್ದಾಳೆ. ಹುಣಸಿಹಡಗಲಿ ಶಾಸನದಲ್ಲಿ "ಶ್ರೀಮತ್ಪಿರಿಯರಸಿ ಚನ್ದಲದೇವಿಯರು ಅಲಂದೇಸಾಸಿರ ಪ್ರಮುಖವನೇಕ ಭತ್ತ ಗ್ರಾಮಂಗಳುಮಂ ದುಷ್ಟನಿಗ್ರಹ ಶಿಷ್ಟಪ್ರತಿಪಾಲನರಿಂದಾಟ್ದಿ(ಳ್ದ)ರಸುಗೆಯ್ಯುತ್ತಮಿರೆ' ಎಂದಿದ್ದು, ಚಂದಲದೇವಿಯು ಆಲಂದೆ 1000ವನ್ನು ಆಳುತ್ತಿದ್ದ ಸಂಗತಿಯನ್ನು ತಿಳಿಸುತ್ತದೆ. ಕ್ರಿ.ಶ 14.08.1121ರ ಹೊತ್ತಿಗೆ ಈಕೆ ಜಯಂತಿಪುರದಿಂದ (ಬನವಾಸಿ) ಆಡಳಿತ ನಡೆಸುತ್ತಿದ್ದಳು.

ರಾಜನಕೋಳೂರಿನ ಈಕೆಯ ಕ್ರಿ.ಶ 1091ರ ಶಾಸನವು ಭತ್ತಗ್ರಾಮವಾದ ರಾಜನಕೋಳುರಿನಲ್ಲಿರುವ ಬ್ರಹ್ಮಪುರಿಯ ಬ್ರಾಹ್ಮಣರಿಗೆ ಭೂದಾನಗಳನ್ನು ನೀಡಿದ ವಿಷಯವನ್ನು ತಿಳಿಸುತ್ತದೆ. ಈಕೆಯನ್ನು ಶಾಸನಗಳು ಪುಂಖಾನುಪುಂಖವಾಗಿ ಹೊಗಳಿದೆ. ಇದೇ ಗ್ರಾಮದ ಶಂಕರನಾರಾಯಣ ದೇವರಿಗೆ ಭೂಮಿ, ಗಾಣ ನಿವೇಶನಗಳನ್ನು ಕ್ರಿ.ಶ 16.01.1097 ರಲ್ಲಿ ದತ್ತಿಯಾಗಿ ನೀಡಿದನ್ನು ಇನ್ನೊಂದು ಶಾಸನ ತಿಳಿಸುತ್ತದೆ. ಕ್ರಿ.ಶ 1097ರ ಕಲಗೇರಿಯ ಶಾಸನವು ತಿಳಿಸುವ ಹಾಗೆ ಚಂದಲದೇವಿಯು ಮಹಾ ಅಗ್ರಹಾರವಾದ ಕಡಕೆರೆಯ ಊರೊಡೆಯ ಪ್ರಮುಖರಿಗೆ

ಋಗ್ವೇದ ಖಂಡಿಕಕ್ಕೆ ಮತ್ತು ಶಾಸ್ತ್ರ ಖಂಡಿಕಕ್ಕೆ ತಲಾ ಎಂಟೆಂಟು ಗದ್ಯಾಣ ಹಣವನ್ನು ದಾನವಾಗಿ ನೀಡಿದ್ದಾಳೆ. ಬಹುಶಃ ಈ ಅಗ್ರಹಾರವನ್ನು ಈಕೆಯೇ ನಿರ್ಮಿಸಿರಬೇಕು. ಕ್ರಿ.ಶ 1106ರಲ್ಲಿ ಉತ್ತರಾಯಣ ಸಂಕ್ರಾಂತಿಯ ನಿಮಿತ್ತವಾಗಿ ಬಳ್ಳಿನಿಟ್ಟಿಗೆಯಲ್ಲಿ 24 ಮತ್ತರು ಕರಿಯನೆಲವನ್ನು 1 ನಿವೇಶನವನ್ನು ಹುಲ್ಲಿಮಯ್ಯ ಮತ್ತು ಮಲ್ಲಯ್ಯನಿಗೆ ನೀಡಿದಳು. ಕ್ರಿ.ಶ 1115ರಲ್ಲಿ ಕಲಿದೇವರ ಅಂಗಭೋಗ ಖಂಡಸ್ಫುಟಿತ ಮೊದಲಾದ ಕಾರ್ಯಗಳಿಗೆ 12 ಮತ್ತರು ಭೂಮಿ, 1 ಹೂವಿನ ತೋಟ, 1 ಗಾಣವನ್ನು ದಾನವಾಗಿ ನೀಡಿದಳು.

ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯನಿಗೆ ಸಮಸ್ತ ಭುವನಾಶ್ರಯ, ಸತ್ಯಾಶ್ರಯ ಕುಲತಿಲಕ ಚಾಳುಕ್ಯಾಭರಣ ಎಂಬ ವಿಶೇಷಣಗಳಿದ್ದವು. ಆತನು ಇಳೆಯಲ್ಲಿ ಮಹಿಮಾನ್ವಿತನೂ ನಹುಷ ಭಗೀರಥ ಪೃಥುವಿನಂತೆ ಚಾರಿತ್ರ್ಯವುಳ್ಳವನೂ ಆಗಿದ್ದನು. ಆತನಿಗೆ ಯಾವಾಗಲೂ ಮಂಗಳವನ್ನೇ ಆಶಿಸುವ ಮೂರನೆಯ ಲಕ್ಷ್ಮಿಯೇನೋ ಎಂಬಂತಿರುವ ಕಲ್ಪವೃಕ್ಷವನ್ನು ಆಲಂಗಿಸಿರುವಲತೆಯಂತೆ ಅರಸನನ್ನು ಅಪ್ಪಿರುವಂತಹ, ಸಾಮಂತರನ್ನು ತಾಯಿಯಂತೆ ಕಾಣುವ, ದುರಹಂಕಾರಿಗಳಾದ ಸವತಿಯರನ್ನು ಅಡಗಿಸುವ, ದೀನರನ್ನು ಅನಾಥರನ್ನು ದಯೆಯಿಂದ ಕಾಯುವ ಎಲ್ಲ 64 ಕಲೆಗಳಲ್ಲಿ ನಿಷ್ಣಾತವಾಗಿರುವ ಅಂತಃಪುರದ ಸ್ತ್ರೀಯರಲ್ಲಿ ಚೂಡಾಮಣಿಯಂತಿದ್ದ ಕಲಿಕಾಲದಲ್ಲಿ ಸರಸ್ವತಿಯಂತಿರುವ ಮಲಪವಿಧ್ಯಾಧರಿಯಾದ ಚಂದಲದೇವಿ ಎಂಬುವವಳು ಪತ್ನಿಯಾಗಿದ್ದಳು. ಆಕೆಯು ಆಲಂದೆ ಸಾಸಿರವೇ ಮುಖ್ಯವಾಗಿ ಹಲವು ಭತ್ತಗ್ರಾಮಗಳನ್ನು ಆಳುತ್ತಿದ್ದಳು.

ಚಂದಲದೇವಿಯ ಅಧೀನದಲ್ಲಿ ಮಹಾಮಂಡಳೇಶ್ವರ ಪದವಿಯಿಂದ ಬಿಬ್ಬರಸನು ಆಳುತ್ತಿದ್ದನು. ಆತನು ಕೋಪಣ ಪುರವರಾಧೀಶ್ವರ, ಆಲಂದೆವೆಡಂಗ, ಸತ್ಯಯುಧಿಷ್ಠಿರ ಮುಂತಾದ ಬಿರುದುಗಳನ್ನು ಧರಿಸಿದ್ದನು. ಪದ್ಮಾವತೀದೇವಿಯ ಆರಾಧಕನೂ ಆಗಿದ್ದನು. ಆತನು ಆಲಂದೆನಾಡನ್ನು ಅತ್ಯಂತ ಪ್ರತಾಪಶಾಲಿತನದಿಂದ ಆಳುತ್ತಿದ್ದನು.

ಚಿನ್ನತುಂಬಳಂ ಶಾಸನದಲ್ಲಿ "ಚಂದಲದೇವಿಯ ಗಂಧವಾರಣ ತ್ರಿಭುವನಮಲ್ಲದೇವ ಪಾದಸಳ್ಬರಣ ಗುಣಾಭರಣ"ಎಂದು ಕಲಿಗಭೂಪನನ್ನು ಕರೆಯಲಾಗಿದೆ. ಈ ಕಲಿಗನನ್ನೇ ಬಂಕಾಪುರ ಶಾಸನವು "ಚನ್ದಲದೇವಿಯ ಗನ್ಧವಾರಣಂ ರಿಪ್ರಮದನಿವಾರಣ ಶ್ರೀಮನ್ಮಹಾಮಣ್ಡಳೇಶ್ವರ ಕಲಿಯಮರಸ"ಎಂದು ಕರೆದಿದೆ. ಇದರಿಂದ ಕಲಿಯಮರಸನು ಚಂದಲದೇವಿಗೆ ನಿಕಟವರ್ತಿಯಾಗಿದ್ದನೆಂಬುದು ಸ್ಪಷ್ಟವಾಗುತ್ತದೆ.

ನೃತ್ಯವಿಧ್ಯಾಧರಿ ಚಂದಲದೇವಿಯರ ಧರ್ಮವಾಗಿ ಭೀಮಣಯ್ಯನ ಆಜ್ಞಾಪನೆಯ ಮೇರೆಗೆ ರಕ್ಕಸಯ್ಯನಾಯಕನು ಆಲಂದೆ ಸಾಸಿರದ ಹಂಡಗಿಲೆಯಲ್ಲಿ ತಾನು ಮಾಡಿಸಿದ ಕಲ್ಲಿನ ಬಸದಿಯ ಪಾರ್ಶ್ವನಾಥ ದೇವರಿಗೆ ಮತ್ತು ಅಲ್ಲಿಗೆ

ಸಮೀಪವಿರುವ ಪಟ್ಟಸಾಲೆಯ ಶಾಂತಿನಾಥದೇವರ ಅಭಿಷೇಕ ಅಷ್ಟವಿಧಾರ್ಚನೆ ಜೀವದಯಾಷ್ಟಮಿ ಹಬ್ಬ ಮಹಾಪೂಜೆ ಋಷಿಯರ ಆಹಾರದಾನಗಳಿಗೆಂದು ಜೀರ್ಣೋದ್ಧಾರಕ್ಕೆಂದು ಹಂಡಗಿಲೆಯಲ್ಲಿ 12 ಮತ್ತರು ಕರಿಯ ನೆಲ, 1 ಮತ್ತರು ತೋಟ 1 ಗಾಣ 10 ಮನೆಗಳನ್ನು ದಾನವಾಗಿ ನೀಡಿದನು.

ಈ ರಕ್ಕಸಯ್ಯ ನಾಯಕನನ್ನು ಇದೇ ಶಾಸನದಲ್ಲಿ ಅತ್ರೇಯಗೋತ್ರೋದ್ಭವನೂ ಜೈನಮತವೆಂಬ ಭವನಕ್ಕೆ ಆಧಾರಸ್ತಂಭನೂ, ವಾದಿಗಳ ಸಮೂಹದಲ್ಲಿ ಮುಖ್ಯವಾಗಿ ನಿಲ್ಲುವವನೂ, ಚತುರ್ವಿಧ ದಾನಗಳಲ್ಲಿ ಆಸಕ್ತನೂ, ಜಿನಮುನಿಗಳ ಪಾದವೆಂಬ ಕಮಲಗಳಲ್ಲಿ ಸದಾ ವಿಹರಿಸುವ ದುಂಬಿಯಂತಿರುವವನೂ, ಪ್ರತಾಪಶಾಲಿಯೂ ಆಗಿದ್ದನು. ಈ ಭೂಮಿಯನ್ನು ರಾಕ್ಷಸರು ಪಾತಳಕ್ಕೆ ಕದ್ದೊಯ್ದಾಗ ವಿಷ್ಣುವು ವರಾಹ ರೂಪ ತಾಳಿ ಮಹಾರೋಷದಿಂದ ತೆರಳಿ ಅದನ್ನು ಮೇಲಕ್ಕೆತ್ತಿ ತಂದು ರಕ್ಷಿಸಿದಂತೆ ತನ್ನ ವಂಶದ ಕೀರ್ತಿಯನ್ನು, ಘನತೆಯನ್ನು ಉತ್ತುಂಗಕ್ಕೆ ತಂದು ಕಾಪಾಡಿದಂತಹ ಬಲವುಳ್ಳವನಾಗಿದ್ದನು ಎಂದು ವರ್ಣಿಸಿದೆ.

ಸಾಂಗ್ಲಿ ಜಿಲ್ಲೆಯ, ಜತ್ತ ತಾಲೂಕಿನ ಉಮ್ರಾಣಿ ಗ್ರಾಮದ ಹೇಮಲಿಂಗ ದೇವಾಲಯದಲ್ಲಿ ದೊರೆತ ಕ್ರಿ.ಶ 1123ರ ಶಾಸನದಲ್ಲಿ ಕಲ್ಯಾಣ ಚಾಲುಕ್ಯದೊರೆ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸಂಬಂಧಿಸಿದ್ದಾಗಿದೆ.

ವಿಕ್ರಮನ ಕೈಕೆಳಗಿನ ಅಧಿಕಾರಿ ಕೋಪಣಪುರವರಾಧಿಶ್ವರ ಖ್ಯಾತಿಯ ಹೆಮ್ಮಾಡಿದೇವನ ಉಲ್ಲೇಖ ಇಲ್ಲಿ ಬಂದಿದೆ. ಈತನ ಪಟ್ಟಮಹಾದೇವಿ ಚಂದ್ರಲಾದೇವಿ ಮತ್ತು ಮಕ್ಕಳಾದ ಕುಮಾರ ದೋಲರಸದೇವ ಮತ್ತು ವನಸಿಂಹದೇವ ಮೊದಲಾದವರು ಸೇರಿ ಹೆಮ್ಮೇಶ್ವರ ದೇವಾಲಯಕ್ಕೆ ವಿವಿಧ ರೀತಿಯ ದತ್ತಿಗಳನ್ನು ಕೊಟ್ಟ ವಿವರ ಬಂದಿದೆ. ಶಾಸನದ ಕೊನೆಯಲ್ಲಿ ತೀರ್ಥ ರಾಮೇಶ್ವರ ದೇವಾಲಯದ ಸ್ಥಾನಾಚಾರ್ಯ ಚಂದ್ರಭರಣಪಂಡಿತರ ಸಿದ್ಧಿಸಾಧನೆ ಮತ್ತು ಅವರ ಗುರುಪರಂಪರೆಯನ್ನು ಬಣ್ಣಿಸಲಾಗಿದೆ. ಜೈನಯಿತನನ್ನು ಚಂದ್ರಾಭರಣಪಂಡಿತ ತನ್ನ ವಾಕ್ ವೈಭವದಿಂದ ಸೋಲಿಸಿದ ವಿಚಾರವು ಇಲ್ಲಿ ಬಂದಿದೆ. ಈ ಲಕುಲೀಶ ಪಾಶುಪಾತ ಗುರುಗಳು ಅಂದಿನ ಸಮಾಜದಲ್ಲಿ ಗೌರವಾನ್ವಿತ ಸ್ಥಾನಮಾನಗಳನ್ನು ಪಡೆದುಕೊಂಡಿದ್ದರೆಂಬುದು ಈ ಶಾಸನದಿಂದ ಸ್ಪಷ್ಟವಾಗುತ್ತದೆ.

ಮೂರನೆಯ ಸೋಮೇಶ್ವರನ ತಾಯಿಯನ್ನು ಶಾಸನಗಳಲ್ಲಿ 'ಚಂದಲದೇವಿ' ಎಂದು ಕರೆಯಲಾಗಿದೆ. ಕ್ರಿ.ಶ 1082 ರ ಆಳಂದ, ಶಾಸನವೇ ಈಕೆಯ ಕುರಿತಾದ ಉಪಲಬ್ಧ ಪ್ರಥಮ ಶಾಸನವಾಗಿದೆ. ಅದರಲ್ಲಿ ಈಕೆ ಸೋಮೇಶ್ವರ ದೇವರಿಗೆದಾನ ನೀಡಿದುದನ್ನು ಹೇಳಲಾಗಿದೆ. ಈಕೆ ವಿಕ್ರಮಾದಿತ್ಯನನ್ನು ಮೆಚ್ಚಿ ಅವನನ್ನೇ ಆರಿಸಿಕೊಂಡು ಮದುವೆಯಾದ ವಿಕ್ರಮಾದಿತ್ಯನ ಪ್ರಿಯರಾಣಿಯೂ ಆಗಿದ್ದ ಈಕೆಯ ಬಗ್ಗೆ ಶಾಸನಗಳಲ್ಲಿ ಹಾಗೂ ಬಿಲ್ಹಣನ್ ವಿಕ್ರಮಾಂಕದೇವಚರಿತಂ ಕಾವ್ಯದಲ್ಲಿ ಮಾಹಿತಿ ಸಿಗುತ್ತದೆ. ಈಕೆಯ ಮದುವೆಯ ಪ್ರಸಂಗದ ಬಗ್ಗೆ ಶಾಸನಗಳು ಮೌನವಹಿಸಿದ್ದರೂ, ಬಿಲ್ಹಣನು

ಆ ಪ್ರಸಂಗವನ್ನು ದೀರ್ಘವಾಗಿ ವರ್ಣನಾತ್ಮಕವಾಗಿ ವಿವರಿಸಿದ್ದಾನೆ. ಚಂದಲದೇವಿ ಮತ್ತು ವಿಕ್ರಮಾದಿತ್ಯರ ವಿವಾಹ ಬಿಲ್ಹಣನ ದೃಷ್ಟಿಯಲ್ಲಿ ಪ್ರೇಮವಿವಾಹವಾಗಿದೆ. ಸ್ವಯಂವರದ ಮೂಲಕ ಚಂದಲದೇವಿಯು ವಿಕ್ರಮಾದಿತ್ಯನನ್ನು ವರಿಸುತ್ತಾಳೆ. ಬಿಲ್ಹಣನು ಸಹ ತನ್ನ ಕಾವ್ಯದ ಬಹುಭಾಗವನ್ನು ಅಂದರೆ ಅಧ್ಯಾಯ 8–13 ವರೆಗೆ ಇವರೀರ್ವರ ವಿವಾಹ, ಮಧುಚಂದ್ರ ಮತ್ತು ಇವರೀರ್ವರು ಕಳೆದ ಚಳಿಗಾಲ, ಬೇಸಿಗೆಕಾಲ, ಮಳೆಗಾಲಗಳ ವರ್ಣನೆಗೆ ಮೀಸಲಿಟ್ಟಿದ್ದಾನೆ. ಬಿಲ್ಹಣನು ಈಕೆಯನ್ನು 'ಚಂದ್ರಲೇಖಾ' ಎಂದು ಕರೆದಿದ್ದಾನೆ. ವಿಕ್ರಮಾಂಕದೇವಚರಿತದಲ್ಲಿ ಈ ವಿವಾಹದ ವಿವರಣೆ ಈ ರೀತಿಯಾಗಿದೆ.

ಕರಹಾಟದ (ಕರಹಾಡ) ಶಿಲಾಹಾರ ವಂಶದ ಚಂದಲದೇವಿಯು ಸುಂದರ ತರುಣಿಯಾಗಿದ್ದುದರಿಂದ ಈಕೆಗಾಗಿ ಅರಸನು ಸ್ವಯಂವರವನ್ನು ಏರ್ಪಡಿಸುತ್ತಾನೆ. ಈ ಅರಸನ ಹೆಸರು ತಿಳಿದುಬರುವುದಿಲ್ಲ. ಇವಳ ಅಸಾಧರಣ ಸೌಂದರ್ಯದ ವರ್ಣನೆಯನ್ನು ಕೇಳಿದ ವಿಕ್ರಮಾದಿತ್ಯನು ಒಂದು ರೀತಿಯಲ್ಲಿ ಹುಚ್ಚು ಹಿಡಿದಂತಾಗಿ ಕನಸಿನಲ್ಲಿಯೂ ಈಕೆಯನ್ನು ಕಾಣಲಾರಂಭಿಸಿದನು. ಇದೇ ಸಂದರ್ಭದಲ್ಲಿ ಚಂದ್ರಲೇಖಾಳ ಮನಸ್ಸಿನ ಇಂಗಿತವನ್ನರಿಯಲು ಕರಹಾಟಕ್ಕೆ ಕಳುಹಿಸಲಾಗಿದ್ದ ಧೂತನೂ ಆಕೆಯಿಂದ ಸಿಹಿ ಸುದ್ಧಿಯನ್ನು ತಂದು ವಿಕ್ರಮಾದಿತ್ಯನಿಗೆ ಹೀಗೆ ಹೇಳುತ್ತಾನೆ. ' ಓ ಪ್ರಭುವೇ ನಿನ್ನ ಪ್ರತಿಭೆ, ಗುಣಗಳಿಂದಾಗಿಯೂ ಅಥವಾ ಬ್ರಾಹ್ಮಣನ ಹೇಳಿಕೆಯಿಂದಾಗಿಯೋ ಏನೋ ನಿನ್ನ ವರ್ಣನೆಯನ್ನು ಆಕೆಯ ಎದುರಿಗೆ ಮಾಡಿದಾಗ ಆಕೆ ನಿನಗೆ ಆಕರ್ಷಿತಳಾಗಿ ಕಾಮತಾಪದಿಂದ ಬಳಲಿದಳು 'ಎಂದು ಮುಂತಾಗಿ ವಿವರಿಸಿ ಚಂದ್ರಲೇಖೆಯೂ ವಿಕ್ರಮಾದಿತ್ಯನನ್ನೇ ಪ್ರೇಮಿಸುತ್ತಿದ್ದ ವಿಷಯವನ್ನು ಹೇಳುತ್ತಾನೆ.

ತೆಳ್ಳಗೆ ಅರಿಶಿಣ ಬಣ್ಣ ಹೊಂದಿ ಚಂಪಕಾ ಹೂವಿನ (ಸಂಪಿಗೆ) ಮಾಲೆಯಂತಿದ್ದ ಚಂದ್ರಲೇಖೆಯ ತಂದೆಯಾದರೂ ಮಗಳಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡಿದ್ದಾನೆ. ತನಗಿಚ್ಚೆ ಬಂದವನನ್ನು ಆಕೆ ಆರಿಸಿಕೊಳ್ಳಬಹುದು.

ಅಲ್ಲದೆ ಅವನ ಕನಸಿನಲ್ಲಿ ಶಿವನು ಬಂದು "ಆಕೆ ತನ್ನಿಚ್ಛೆಯ ಪತಿಯನ್ನು ಆರಿಸಿಕೊಳ್ಳಲಿ, ನೀನು ಸ್ವಯಂವರವನ್ನೇರ್ಪಡಿಸು"ಎಂದು ಹೇಳಿದ್ದಾನೆ. ಹೀಗಾಗಿ ಮಗಳ ವಿಷಯದಲ್ಲಿ ಅಡ್ಡಬರುವುದಿಲ್ಲ. ಅಲ್ಲದೆ ಅವನೆನಾದರು ಹೆಚ್ಚಾಗಿ ನಿನ್ನನ್ನೇ ನಂಬಿಕೊಂಡಿದ್ದಾನೆ ಎಂದು ಕರಹಾಟ ನಗರದಲ್ಲಿ ನಡೆಯುತ್ತಿದ್ದ ವಿಷಯವನ್ನು ತಿಳಿಸುತ್ತಾನೆ. ಸ್ವಯಂವರಕ್ಕಾಗಿ ಗೊತ್ತುಪಡಿಸಿದ ದಿನವು ಸಮಿಪಿಸಿದಾಗ ಧೂತನು ವಿಕ್ರಮಾದಿತ್ಯನಿಗೆ "ಓ ದೊರೆಯೇ ದಯಮಾಡಿ ಪ್ರಯಾಣವನ್ನು ಈಗಲೇ ಪ್ರಾರಂಭಿಸಿರಿ. ಎರಡನೆಯ ವಿಜಯದೇವತೆಯಾದ ಈಕೆ ನಿಮ್ಮ ಹೆಂಡತಿಯಾಗಬೇಕು'ಎಂದು ಹೇಳುತ್ತಾನೆ.

ಚಕ್ರವರ್ತಿ ಈ ವಿಷಯವನ್ನು ಕೇಳಿ ಸಂತೋಷದಿಂದ ವೇಗವಾಗಿ ಓಡುವ

ಅಶ್ವಗಳನ್ನು ತೆಗೆದುಕೊಂಡು ಸ್ವಯಂವರ ನಡೆಯುವ ಕರಹಾಟ ನಗರದತ್ತ ಧಾವಿಸಿ ಬರುತ್ತಾನೆ. ಇವನನ್ನು ನೋಡಿ ಕರಹಾಟದ ಅರಸ ಹರ್ಷದಿಂದ ಪುಳಕಿತನಾಗಿ ತುಂಬು ಹೃದಯದಿಂದ ಸ್ವಾಗತಿಸುತ್ತ, ಸ್ವಯಂವರ ನಡೆದ ಸ್ಥಳದಲ್ಲಿ ಕರೆದುಕೊಂಡು ಹೋಗಿ ಕುಳ್ಳಿರಿಸುತ್ತಾನೆ. ಅಲ್ಲಿ ದೇಶ–ವಿದೇಶಗಳಿಂದ ಚಂದ್ರಲೇಖೆಯನ್ನು ಪಡೆಯಬೇಕೆಂಬ ಉದ್ದೇಶದಿಂದ ಬಂದಿದ್ದ ರಾಜರು, ರಾಜಕುಮಾರರು ನೆರೆದಿದ್ದರು. ಅವರೆಲ್ಲ ಚಂದ್ರಲೇಖೆಯ ಬರುವಿಕೆಗಾಗಿ ಕಾದಿದ್ದರು.

ಚಂದ್ರಲೇಖೆಯು ರೇಷ್ಮೆ ಸೀರೆಯನ್ನುಟ್ಟು, ತಲೆಗೆ ಕೇದಗೆಯನ್ನು ಮುಡಿದು, ಹಣೆಗೆ ಗಂಧವನ್ನು ಧರಿಸಿ ವಿವಿಧ ಉಡುಗೆ–ತೊಡುಗೆಗಳನ್ನು ತೊಟ್ಟು ಸುಂದರವಾಗಿ ಕಂಗೊಳಿಸುತ್ತಿದ್ದ ಅಪ್ರತಿಮ ಸೌಂದರ್ಯದ ಗಣಿಯಾದ ಚಂದ್ರಲೇಖೆಯ ಹೂಮಾಲೆಯನ್ನು ಹಿಡಿದು ಸ್ವಯಂವರ ನಡೆಯುವ ಸ್ಥಳಕ್ಕೆ ತನ್ನ ಸಖಿಯರೊಡನೆ ಬರುತ್ತಾಳೆ. ಸಖಿಯು ಅಲ್ಲಿ ನೆರೆದಿದ್ದ ಅರಸರ, ಕುಮಾರರ ಗುಣಗಾನವನ್ನು ಮಾಡುತ್ತ ಅವರ ವಂಶ, ದೇಶ ಮೊದಲಾದವುಗಳನ್ನು ಹೇಳುತ್ತ ಒಬ್ಬೊಬ್ಬರನ್ನಾಗಿ ಪರಿಚಯಿಸುತ್ತಾ ಬರುತ್ತಾಳೆ. ಹೀಗೆ ಅಲ್ಲಿ ಬಂದಿದ್ದ ಪ್ರಮುಖ ವಂಶದ ಅರಸರೆಂದರೆ ಚೇದಿ ಅರಸು. ಕನ್ಯಾಕುಬ್ಜದ ದೊರೆ, ಅರ್ಜುನ ವಂಶಜ, ಕಾಲಿಂಜರ ಬೆಟ್ಟದ ದೊರೆ, ಗೋಪಾಲಚಲದರಸ (ಗ್ವಾಲಿಯರ್) ಮಾಳವ, ಗೂರ್ಜರ ಪಾಂಡ್ಯ, ಚೋಳ, ಮೊದಲಾದ ದೇಶದವರೆಂದು ಇವರನ್ನು ಪರಿಚಯಿಸುತ್ತಿದ್ದಾಗ ಚಂದ್ರಲೇಖೆಯು ಇವರಾರ ಕಡೆಗೂ ನೋಡುತ್ತಿದ್ದಿಲ್ಲ. ಆಕೆಯ ಮಾತನ್ನೂ ಕೇಳುತ್ತಿದ್ದಿಲ್ಲ. ಈ ಎಲ್ಲ ಅರಸರಿಗಿಂತ ದೂರದಲ್ಲಿ ಕುಳಿತ್ತಿದ್ದ ವಿಕ್ರಮಾದಿತ್ಯನಿಗೆ ಹಾರವನ್ನು ಹಾಕಿ ಅವನನ್ನು ತನ್ನ ಪತಿಯನ್ನಾಗಿ ಆಯ್ಕೆ ಮಾಡಿಕೊಳ್ಳುತ್ತಾಳೆ. ಇದರಿಂದ ಕುಪಿತಗೊಂಡ ಇತರ ಅರಸರು ಮನಸ್ಸಿಗೆ ಬಂದಂತೆ ಮಾತನಾಡುತ್ತ ತಮ್ಮ ದಾರಿಯನ್ನು ಹಿಡಿಯುತ್ತಾರೆ. ಕರಹಾಟದ ಅರಸನು ಇವರೀರ್ವರ ವಿವಾಹ ಮಾಡುತ್ತಾನೆ ಎಂದಿದೆ.

ಚಂದಲಾದೇವಿಯ ವಿವಿಧ ಪ್ರಶಸ್ತಿಗಳನ್ನು ಶಾಸನಗಳಲ್ಲಿ ಹೀಗೆ ಹೇಳಲಾಗಿದೆ. ಹುಣಸಿ ಹಡಗಲಿ ಶಾಸನದಲ್ಲಿ ಸ್ವಸ್ತ್ಯನವರತ ಪರಮ ಕಲ್ಯಾಣಾಭ್ಯೂದಯ ಸಹಸ್ರಫಲಭೋಗ ಭಾಗಿನಿ, ದ್ವಿತೀಯ ಲಕ್ಷ್ಮೀಸಮಾನೆ ಕಳಹಂಸಯಾನೆ ರಾಯರ್ಝುಳಪ್ಪ ಕಟ್ಟಿ (ಳ್ವ) ಕುಜಸಮಾಲಂಗಿತ ಕಲ್ಪಲತೆ ಸಾಮಂತಸೀಮಂತಿನೀ ಪರಿವೃತೆ, ದುಷ್ಟ ದರ್ಷಿಷ್ಠ ಸವತೀ ಶಿರೋವಜ್ರಮುಷ್ಠಿ ದೀನಾನಾಥಕಥಕ ವೈತಾಳಿಕ ಸುವರ್ಣ್ನವೃಷ್ಠಿವಂದಿಚಿಂತಾಮಣಿ ಅಂತಃಪುರ ಚೂಡಾಮಣಿ ಮಲಪವಿಧ್ಯಾಧರಿ, ಸಕಳಕಳಾಧರಿ, ರಾಯಮನೋಜರಾಜರಲಿ, ಅಡಬಳ ಸರಸ್ವತಿ, ನೃತ್ಯವಿಧ್ಯಾಧರಿ, ಸಸ್ತಿಗಜಕೇಸರಿ, ಕಲಿಕಾಲ ಸರಸ್ವತಿ ಶ್ರೀಮತ್ತ್ರಿಭುವನಮಲ್ಲದೇವ ವಿಶಾಳವೃಕ್ಷಸ್ಥಳ ನಿವಾಸಿನಿಯರಪ್ಪ ಶ್ರೀ ಮತ್ಪಿರಿಯರಸಿ ಚನ್ದಲದೇವಿಯರು"ಎಂದು ಹೇಳಿದೆ. ಅಳಂದ ಶಾಸನವು "ಸ್ವಸ್ತ್ಯನವರತ ಪರುಮಕಲ್ಯಾಣಾಭ್ಯುದಯ ಸಹಸ್ರಫಲಭೋಗಭಾಗಿನಿ ವಾಟ(ಕ್ಕೆ) ಮದದ್ವಿರದ ಗಾಮಿನಿ ರಾಯುಜಗದಲಮತತಿ ಮಚ್ಚರಿಪ ಸವತೀಮದಭಂಜನೆ ರಾಯಭಂಗಾಜಿ ದೇವಮನಜ್ಜಿ ಯೋನಿಧಿ ಪ್ರವರ್ದ್ಧಮಾನ(ನ) (ಚಂದ್ರ) ವದನೆ ಸೌಭಾಗ್ಯಸದನೆ ರಾಯಜಳಪ್ಪ ಕಳ್ವಾವನೀಜ ಸಮಾಲಿಂದ ಜಂನಮಲತೆ ಶರ(ಣಾಗತ) ಸಮುದ್ಧರಣ ಪರಿಣತೆ ದುಷ್ಟದರ್ಷಿಷ್ಟ್ ಸವತೀ ಶಿರೋವಜ್ರಮುಷ್ಟಿಯನವರತೆ (ಸು) ವರ್ಣ್ನ ವೃಷ್ಟೀ ಸಮಸ್ತಾನ್ತರಃಪುರ ಜಗದಳ ಪವಿತ್ರೀಕೃತ ರಾಯನಾರಾಯಣ ಹೃದಯಾನಂದ ಪ್ರದಾಯಕಿ ಗೌರೀಪದಾಂಬುಜಾ ರಾಧಕಿ ಸೌಭಾಗ್ಯ ಗರ್ವದುರ್ವ್ವಿನೀತಾಂತಃಪುರಕಾ(ಸ್ತೋಪ) ಹಾಸಿನಿ ಶ್ರೀವತ್ತ್ರಿಭುವನಮಲ್ಲದೇವ ವಿಶಾಳ ವೃಕ್ಷಸ್ಥಳ ನಿವಾಸಿನಿಯರಪ್ಪ ಶ್ರೀ(ನೃ)ತ್ಯ ವಿಧ್ಯಾಧರಿ ಚಂದಲದೇವಿಯರು"ಎಂದು ಈಕೆಯ ಪ್ರಶಸ್ತಿಯನ್ನು ಹೇಳಿದೆ.

'ನೃತ್ಯ ವಿದ್ಯಾಧರಿ' ಎಂಬ ಪ್ರಶಸ್ತಿಯಿಂದ ಈಕೆಯು ಶ್ರೇಷ್ಠದರ್ಜೆಯ ನೃತ್ಯಗಾರ್ತಿಯಾಗಿದ್ದಳೆಂಬುದು ತಿಳಿದು ಬರುತ್ತದೆ. ಅಲ್ಲೇ ಈಕೆಯು ಇತರ ಕಲೆಗಳಲ್ಲಿಯೂ ಪರಿಣಿತಳಾಗಿದ್ದಳು. 'ಸವತಿಶಿರೋವಜ್ರಮುಷ್ಠಿ' ಎಂಬ ಪ್ರಶಸ್ತಿ ಸವತಿಯರ ಬಗ್ಗೆ ಇವಳಿಗಿದ್ದ ದರ್ಪವನ್ನು ಸೂಚಿಸುತ್ತದೆ. "ಗೌರೀಪದಾಂಬುಜಾರಾಧಕಿ'ಎಂಬ ಪ್ರಶಸ್ತಿ ಈಕೆ ಗೌರಿಭಕ್ತೆಯೆಂಬುದನ್ನು ಸೂಚಿಸುತ್ತಿರಬಹುದು. ಹೀಗಾಗಿ ಚಲುವೆಯಾದ ಈಕೆ ವಿಕ್ರಮಾದಿತ್ಯನ ಪ್ರಿಯರಾಣಿಯಾಗಿರುವುದರಲ್ಲಿ ಸಂದೇಹವೇ ಇಲ್ಲ ಎಂದು ಹೇಳಬಹುದು.

ಕ್ರಿ.ಶ 1098ರ ಹುಣಸಿಹಡಗಲಿ ಶಾಸನದಲ್ಲಿ ಈಕೆಯನ್ನು "ಶ್ರೀಮತ್ರಿಭುವನಮಲ್ಲದೇವ ವಿಶಾಳವಕ್ಷಸ್ಥಳ ನಿವಾಸಿನಿಯರಪ್ಪ ಶ್ರೀ ಮತ್ಪಿರಿಯರಸಿ ಚನ್ದಲದೇವಿಯರು" ಎಂದು ಕರೆಯಲಾಗಿದೆ. ಕ್ರಿ.ಶ 1110 ರ ಕಾಳಗಿ ಶಾಸನದಲ್ಲಿ ಕೂಡ ಈಕೆ ಪಿರಿಯರಸಿ ಎಂಬರ್ಥದಲ್ಲೆ ಹೇಳಲಾಗಿದೆ. "ಶ್ರೀ ತ್ರಿಭುವನಮಲ್ಲಭೂಪತಿ ದೇವನಗ್ರಮಹಾಮಹಿಷಿಪದಕೆ ನಿಂದಭಿನವರೂಪ್ರವಿಭ್ರಮಸಮನ್ವಿತ ಚಂದಲದೇವಿಯರು"ಎಂದು ಬರುತ್ತದೆ.

ಚಂದಲದೇವಿಯ ಹೊರರೂಪ ಸುಂದರವಾಗಿರುವಂತೆ ಆಕೆಯ ಒಳಮನಸ್ಸು ಸುಂದರವಾಗಿದ್ದಿತು. ಅಲ್ಲದೆ ಈಕೆ ಆನೇಕ ದಾನ ಧರ್ಮಾದಿ ಕಾರ್ಯಗಳನ್ನು ಮಾಡಿದುದು ಶಾಸನಗಳಿಂದ ತಿಳಿದು ಬರುತ್ತದೆ. ಕ್ರಿ.ಶ 1097 ರ ರಾಜಕೊಳೂರು ಶಾಸನದಲ್ಲಿ ಇವಳು ಭತ್ತ ಗ್ರಾಮವಾದ ರಾಜನಕೋಳೂರಿನಲ್ಲಿಯ ಶಂಕರನಾರಾಯಣ ದೇವರಿಗೆ ಭೂಮಿ, ತೋಟ, ಗಾಣ, ನಿವೇಶನಗಳನ್ನು ದತ್ತಿಯಾಗಿ ಬಿಟ್ಟುದುದನ್ನು ತಿಳಿಸುತ್ತದೆ. ಕಟ್ಗೇರಿ ಶಾಸನದಲ್ಲಿ ಇವಳು ಅಗ್ರಹಾರ 'ಕಟಕೆಱೆಯ' ಊರೊಡೆಯ ಪ್ರಮುಖ ಮಹಾಜನರ ಕೈಯಲ್ಲಿ ಋಗ್ವೇದದ ಖಂಡಿಕಕ್ಕೆ ಸಿದ್ದಾಯದಲ್ಲಿ ಎಂಟು ಗಾದ್ಯಾಣವನು ಧಾರಾಳಪೂರ್ವಕವಾಗಿ ದಾನ ಮಾಡುತ್ತಾಳೆ.

ಹುಣಸಿಹಡಗಲಿ ಶಾಸನದಲ್ಲಿ ಚಂದಲದೇವಿಯು ಹಲವು ಭತ್ತಗ್ರಾಮಗಳನ್ನು ಆಳುತ್ತಿದ್ದಳೆಂದು ಹೇಳಿದೆ. 'ಶ್ರೀಮತಪಿರಿಯರಸಿ ಚನ್ದಲದೇವಿಯರು ಅಲಂದೆಸಾಸಿರ ಪ್ರಮುಖವನೇಕ ಭತ್ತಗ್ರಾಮಂಗಳು ಮರಿದುಷ್ಟನಿಗ್ರಹ ಶಿಷ್ಟಪ್ರತಿಪಾಳನರಿಂದಾಜ್ಜಿ(ಳ್ದ)

೨೮

ರಸುಗೈಯ್ಯುತ್ತಿಮಿರೆ"ಎಂದಿದೆ. ಇದರಿಂದ ಆಳಂದೆ ಸಾಸಿರದಲ್ಲಿ ತನ್ನ ಉಪಜೀವನಕ್ಕಾಗಿ ಕೊಟ್ಟ ಭತ್ತಗ್ರಾಮಗಳ ಉಸ್ತುವಾರಿಯನ್ನು ನೊಡಿಕೊಳ್ಳುತ್ತಿದ್ದಳೆಂದು ತಿಳಿಯುತ್ತದೆ.

ಮೂರನೆಯ ಸೋಮೇಶ್ವರ, ತೈಲಪ, ಜಯಕರ್ಣದೇವ ಈ ಮೂವರು ಪುತ್ರರು ಚಂದಲದೇವಿಯ ಉದರದಿಂದ ಜನಿಸಿದಾರೆ. ಈಕೆಗೆ ಒಬ್ಬ ಪುತ್ರಿಯೂ ಜನಿಸಿದ್ದಳೆಂಬ ಅಂಶವನ್ನು ಡಾ. ಪಿ.ಬಿ ದೇಸಾಯಿಯವರು ಶೋಧಿಸಿದ್ದಾರೆ. ಆಕೆಯನ್ನು ಕಲಚೂರಿ ವಂಶದ ಮಹಾಮಂಡಳೇಶ್ವರ ಪೆರ್ಮಾಡಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಇದಕ್ಕೆ ಅವರು ಜತ್ತ್ ತಾಲೂಕಿನ ವಳಸಂಗ ಗ್ರಾಮದ ಶಾಸನಾಧಾರವನ್ನು ಕೊಟ್ಟಿರುತ್ತಾರೆ. "ಈ ಶಾಸನದ ಆರಂಭದಲ್ಲಿ ಜಗದೇಕಮಲ್ಲನ ಆಳ್ವಿಕೆಯ ವಿಷಯವು ಬರುತ್ತದೆ. ಆನಂತರ ಮಹಾಮಂಡಳೇಶ್ವರ ಬಿಜ್ಜಣದೇವನು ಕರಹಾಡ ನಾಲ್ಕುಸಾವಿರ ಪ್ರದೇಶವನ್ನು ಆಳುತ್ತಿದ್ದನೆಂದು ಹೇಳಿದೆ. ನಂತರ ಈ ಬಿಜ್ಜಳದೇವನ ಮುತ್ತಬ್ಬೆಯೂ ತ್ರಿಭುವನಮಲ್ಲದೇವನ ಅರ್ಧಾಂಗಿ ಲಕ್ಷ್ಮೀಯೂ ಆದ "ಅಭಿನವಶಾರದಾ ದೇವಿಯರಪ್ಪ ಶ್ರೀಮದಭಿನವ ಚಂದಲದೇವಿಯರು" ವಳಸಂಗ ಗ್ರಾಮದ ಆಡಳಿತವನ್ನು ನಡೆಸುತ್ತಿದ್ದ ವಿಷಯವನ್ನು ವಿವರಿಸಿದೆ. ಈ ಬಿಜ್ಜಣದೇವನೆಂದರೆ ಪೆರ್ಮಾಡಿಯ ಮಗನಾದ ಬಿಜ್ಜಳ. ಈ ಅಭಿನವ ಚಂದಲದೇವಿ ಮೂರನೆಯ ಸೋಮೇಶ್ವರನ ತಾಯಿಯಾದ ಸುಪ್ರಸಿದ್ಧ ಚಂದಲದೇವಿಯಲ್ಲದೆ ಬೇರೆಯಲ್ಲ. ಈಕೆಗೆ 'ಅಭಿನವ ಸರಸ್ವತಿ' ಎಂಬ ಬಿರುದು ಇದ್ದಿತು. ಶಾರದಾ ಮತ್ತು ಸರಸ್ವತೀ ಇವು ಪರ್ಯಾಯ ಪದಗಳು ಎಂದು ಹೇಳಿದ್ದಾರೆ. ಬಿಜ್ಜಳನ 'ಮುತ್ತಬ್ಬೆ' ಚಂದಲದೇವಿಯಾದರೆ ಈ ಚಂದಲದೇವಿಯ ಮಗಳ ಮಗ ಬಿಜ್ಜಳ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದರೆ ಚಂದಲದೇವಿಯ ಮಗಳ ಹೆಸರು ತಿಳಿದು ಬರುವುದಿಲ್ಲ.

ಚಂದಲದೇವಿಯ ಪುತ್ರ ಮಹಾಮಂಡಳೇಶ್ವರ ಕುಮಾರ ತೈಲಪನು (35ನೆಯ ಚಾಲುಕ್ಯ ವಿಕ್ರಮವರ್ಷದಲ್ಲಿ) ಅಗಸ್ತೇಶ್ವರ ಮತ್ತು ಚಂದಲೇಶ್ವರ ದೇವರದಾಯಿ (–ದಾಸಿಗಾಗಿ) ಬಾಗಿಯಬ್ಬೆಯ ಹೇಳಿಕೆಯ ಮೇರೆಗೆ ಕಂದೂರು–1000ರಲ್ಲಿಯ ಎತ್ತರ್ಪಿಂರೊಳಗಣ ಸೆಜೆಮಲೆ–12ರಲ್ಲಿದ್ದ ವೇಪಿಕಟ್ಟೆ ಗ್ರಾಮವನ್ನು ದಾನ ಕೊಡುತ್ತಾನೆ. ಇಲ್ಲಿ ಚಂದಲೇಶ್ವರ ದೇವರನ್ನು ಪ್ರತಿಷ್ಠಾಪಿಸಿರುವುದರಿಂದ ಈ ಸುಮಾರಿಗೆ ಚಂದಲದೇವಿಯು ಮರಣ ಹೊಂದಿರಬೇಕು. ಆಕೆಯ ನೆನಪಿಗಾಗಿ ಚಂದಲದೇವಿಯ ಪುತ್ರ ಹಾಗೂ ಅವನ ತಾಯಿ ಚಂದಲೇಶ್ವರ ದೇವಾಲಯ ನಿರ್ಮಿಸಿ ದೇವರನ್ನು ಪ್ರತಿಷ್ಠಾಪಿಸಿರಬೇಕು.

ಈ ಚಂದಲದೇವಿಯು ಶಿಲಾಹಾರ ರಾಜಕುಮಾರಿ ಎಂಬುದು ಸ್ಪಷ್ಟ. ಆದರೆ ಈ ಶಿಲಾಹಾರರಲ್ಲಿ ಅನೇಕ ಶಾಖೆಗಳಿವೆ. ಅವುಗಳಲ್ಲಿ ಈಕೆಯು ಯಾವ ಶಾಖೆಗೆ ಸೇರಿದ್ದಳೆಂಬುದು ಸ್ಪಷ್ಟವಾಗಿ ತಿಳಿದುಬಂದಿಲ್ಲ. ಆದರೆ ಡಾ. ಎಂ.ಎಂ ಕಲಬುರ್ಗಿಯವರು ಈಕೆ ಕೊಲ್ಹಾಪುರದ ಶಿಲಾಹಾರ ಮನೆತನಕ್ಕೆ ಸೇರಿದವಳೆಂಬ

ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದಕ್ಕಾಗಿ ಇವರು ಕೊಲ್ಹಾಪುರದ ಶಿಲಾಹಾರ ಮನೆತನದ ವಂಶದ ಬಗ್ಗೆ ಹೇಳುತ್ತಾ "ಜಟಿಗನ ಮೊಮ್ಮಗನಾದ ಮಾರಸಿಂಹ ಈ ಮನೆತನದ ಪ್ರಸಿದ್ಧ ಅರಸು. ಈತನನ್ನು 'ಚಕ್ರೇಶಪ್ರಿಯಮಾತುಲ' ಎಂದು ತಾಳಲೆ ತಾಮ್ರಪಟಕರೆದಿದೆ. ಶಿಲಾಹಾರ ರಾಜಕುಮಾರಿ ಚಂದ್ರಲೇಖಾ (ಚಂದ್ರಲದೇವಿ) ಎಂಬವಳನ್ನು ಕಲ್ಯಾಣ ಚಾಲುಕ್ಯ ಚಕ್ರೇಶ ಆರನೆಯ ವಿಕ್ರಮಾದಿತ್ಯನು ರಾಜಧಾನಿ ಕರಹಾಡದಲ್ಲಿ ಮದುವೆಯಾಗಿದ್ದನೆಂದು ವಿಕ್ರಮಾಂಕದೇವ ಚರಿತಂ ಹೇಳುವುದರಿಂದ ಈಕೆ ಈ ಮಾರಸಿಂಹನ ಮಗಳೇ ಆಗಿರಬೇಕು." ಎಂದಿದ್ದಾರೆ. ಇದರ ಅರ್ಥದಲ್ಲಿ ಕೊಲ್ಹಾಪುರ ಶಿಲಾಹಾರರಿಗೆ 'ಕರಹಾಡ' ರಾಜಧಾನಿಯಾಗಿತ್ತು. ಈ ಶಿಲಾಹಾರರ ಪುತ್ರಿಯೇ ಚಂದಲದೇವಿ ಎಂಬುದು ಇವರ ಅಭಿಪ್ರಾಯವಾಗಿದೆ.

ಆದರೆ ಮೂರು ಪ್ರತ್ಯೇಕವಾದ ಶಿಲಾಹಾರ ಮನೆತನಗಳು ಒಂದೊಂದು ಭಾಗದಲ್ಲಿ ಆಳುತ್ತಿದ್ದವು. ಉತ್ತರ ಕೊಂಕಣ ಭೂಪ್ರದೇಶದಲ್ಲಿ ಕೊಲ್ಹಾಪುರವನ್ನು ರಾಜಾನಿಯನ್ನಾಗಿ ಮಾಡಿಕೊಂಡು ಕೊಲ್ಹಾಪುರ ಶಿಲಾಹಾರ ಮನೆತನದವರು ಆಳುತ್ತಿದ್ದರು. ದಕ್ಷಿಣ ಕೊಂಕಣದಲ್ಲಿ ಮಿರಜನ್ನು ರಾಜಧಾನಿಯಾಗಿ ಮಾಡಿಕೊಂಡು ಮತ್ತೊಂದು ಶಿಲಹಾರ ಮನೆತನವು ಆಳುತ್ತಿತ್ತು. ಇದೇ ರೀತಿ ದಕ್ಷಿಣ ಮರಾಠ ಪ್ರದೇಶದಲ್ಲಿ ಕರಹಾಡನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕರಹಾಡ ಶಿಲಾಹಾರರು ಆಳುತ್ತಿದ್ದರು. ಈ ಕರಹಾಡ ಶಿಲಾಹಾರ ಮನೆತನಕ್ಕೆ ಚಂದಲದೇವಿಯು ಸೇರಿದ್ದಾಳೆಂದು ಹೆಳಬೇಕಾಗುತ್ತದೆ.

ವಳಸಂಗ ಜಗದೇಕಮಲ್ಲನ ಶಾಸನವು, ಮಹಾಂಂಡಳೇಶ್ವರ ಬಿಜ್ಜಳದೇವನು ಕರಹಾಡ–4000ವನ್ನು ಆಳುತ್ತಿದ್ದಾಗ ಅವನ ಅಜ್ಜಿ (ತಾಯಿಯ ತಾಯಿ) ಮತ್ತು ವಿಕ್ರಮಾದಿತ್ಯನ ರಾಣಿ ಚಂದಲಾದೇವಿಯು ವಳಸಂಗ ಗ್ರಾಮದ ಆಡಳಿತವನ್ನು ನೋಡಿಕೊಳ್ಳುತಿದ್ದಳು. ಇವಳನ್ನು ಅಭಿನವ ಶಾರದಾದೇವಿ ಎಂದು ಕರೆದಿದೆ. ಈ ಶಾಸನದಲ್ಲಿ ಚಂದಲದೇವಿಯನ್ನು ಮುತ್ತಬ್ಬೆ ಎಂದು ಕರೆದದ್ದು ಯತಾರ್ಥವಾಗಿದೆ.

ಜೋಗಮನು ತನ್ನ ಮಗಳನ್ನು ವಿಕ್ರಮಾದಿತ್ಯನಿಗೆ ಕೊಟ್ಟಿದ್ದನು. ಹಿಂದೆ ಬಹುಶಃ ಪರಸ್ಪರ ಅನ್ಯೊನ್ಯತೆಯ ಕ್ರೀಯೆಯಾಗಿ ವಿಕ್ರಮಾದಿತ್ಯನು ತನ್ನ ಪ್ರೀತಿಯ ರಾಣಿ ಚಂದಲಾದೇವಿಗೆ ಜನಿಸಿದ ತನ್ನ ಮಗಳನ್ನು ಜೋಗಮನ ಮಗನಾದ ಪೆರ್ಮಾಡಿಗೆ ಕೊಟ್ಟನು. ಆದ್ದರಿಂದ ಅವನು ಆರನೆಯ ವಿಕ್ರಮಾದಿತ್ಯನಿಗೆ ಅಳಿಯನಾದನು. ಬಹುಶಃ ಇದೇ ಸಂಬಂಧವು ಚಂದಲಾದೇವಿಯ ಮಗಳಾದ ಮತ್ತು ತನ್ನ ಸಹೋದರಮಾವನಾದ ಮೂರನೇ ಸೋಮೇಶ್ವರನ ಮೇಲೆ ಯಜಮಾನಿಕೆಯನ್ನು ಮರೆತು ತನ್ನ ಸ್ವಂತದ ಹೆಸರಿನಲ್ಲಿ ಶಾಸನವನ್ನು ಹೊರಡಿಸಲು ಪ್ರೋತ್ಸಾಹ ಕೊಟ್ಟಿರಬಹುದು.

ಆರನೆಯ ವಿಕ್ರಮಾದಿತ್ಯನ ಬಲಗೇರಿಯ ಶಾಸನವು ಮಂಗಳವಾಡ ಪುರವರಾಧೀಶ್ವರರಾದ ಕಳಚುರಿಯ ಕನ್ನಮರಿಂದ ಎರಡನೆಯ ಬಿಜ್ಜಳನವರೆಗೆ

ವಂಶಾವಳಿಯನ್ನು ನೀಡುವದರೊಂದಿಗೆ, ಈ ಶಾಸನವು ಬಿಜ್ಜಳನ್ನು ಪೆರ್ಮಾಡಿ ಮತ್ತು ನಾಗಲಾದೇವಿಯ ಮಗನಾಗಿದ್ದನು ಎಂದು ಹೇಳಿರುವುದಲ್ಲದೆ ಬಿಜ್ಜಳನಿಗೆ ರಾಜಲಾ ಮತ್ತು ಮೈಲುಗೆ ಎಂಬ ಇಬ್ಬರು ಕಿರಿಯ ಸಹೋದರಿದ್ದರೆಂದು ಹೇಳಿದೆ. ಆದ್ದರಿಂದ ಬಿಜ್ಜಳನ ತಾಯಿಯಾದ ನಾಗಲಾದೇವಿಯು ರಾಣಿ ಚಂದಲಾದೇವಿಯ ಮಗಳಾಗಿದ್ದಳು ಎಂದು ಸ್ಪಷ್ಟಪಡಿಸುತ್ತದೆ.

ಚಕ್ರವರ್ತಿ ವಿಕ್ರಮಾದಿತ್ಯ ಮತ್ತು ಚಂದಲದೇವಿಯರ ಎರಡನೇ ಪುತ್ರ ತೈಲಪದೇವ. ಆಳವನಪಲ್ಲಿ ಕ್ರಿ.ಶ 29 ಅಕ್ಟೋಬರ್ 1110ರ ಶಾಸನದಲ್ಲಿ 'ತತುಪ್ರಿಯಪುತ್ರಂ (ವಿಕ್ರಮಾದಿತ್ಯನ ಮಗ) ಮಹಾಮಂಡಳೇಶ್ವರ ಯುವರಾಜ ತೈಲಪದೇವರ್ಕ್ಕನ್ನೂರ್ದ್ಸಾಸಿರ (ಕನ್ನೂರು) ಬಾಡಮುಂ ತ್ರಿಭೋಗಾಭ್ಯಂತರ ಸಿದ್ಧಿಯಿಂ' ಆಳುತ್ತಿದ್ದನೆಂದು ಹೇಳಲಾಗಿದೆ. ತೊಗರಕುಂಟ ಶಾಸನದಲ್ಲಿ 'ರಾಯಕುಮಾರ ....ಚ್ಚನ್ದಲದೇವೀನಯನ ಸರಸಿಜಸೂರ್ಯ್ಯ ಸಪ್ರತಿಹತಧೈರ್ಯ್ಯ ಗುರುಜನಪದರಂಜಿತ ಚೋಳ ಕಟಕರಕ್ಷಪಾಳ..... ಶ್ರೀಮನ್ಮಹಾಮಣ್ಡಳೇಶ್ವರಂ ಕುಮಾರ ತೈಲಪದೇವ' ಎಂದು ಬರುತ್ತದೆ. ಕೊಲ್ಹಾಪುರ ಶಾಸನದಲ್ಲಿ ಇವನು ತನ್ನ ದಾದಿ ಬಾಗಿಯಬ್ಬೆಯ ಹೇಳಿಕೆಯ ಮೇರೆಗೆ ಕಂದೂರು 1000 ಎತ್ತಪಿ 90ರಲ್ಲಿಯ ಸಿಜಿಮಲೆ 12 ರೊಳಗಣವ್ರೇಪಿಕಟ್ಟ ಗ್ರಾಮವನ್ನು ಅಗಸ್ತ್ಯೇಶ್ವರ ಮತ್ತು ಚಂದಲೇಶ್ವರ ದೇವರಿಗಾಗಿ ಗೋಕರ್ಣರಾಶಿ ಪಂಡಿತರಿಗೆ ದಾನ ಕೊಡುತ್ತಾನೆ. ಇದೇ ಶಾಸನದಲ್ಲಿ ಇವನು ಚಂದಲೇಶ್ವರ ದೇವರನ್ನು ಪ್ರತಿಷ್ಠಾಪಿಸಿದ ಮಾಹಿತಿಯೂ ದೊರೆಯುತ್ತದೆ. ಬಹುಶಃ ತನ್ನ ತಾಯಿ ಚಂದಲದೇವಿಯ ನೆನಪಿಗಾಗಿ ಈ ಕಾರ್ಯವನ್ನು ತೈಲಪನು ಮಾಡಿರಬೇಕು. ಈ ಮೇಲಿನ ಆಧಾರಗಳಿಂದ ತೈಲಪದೇವನು ವಿಕ್ರಮಾದಿತ್ಯ ಮತ್ತು ಚಂದಲದೇವಿಯವರ ಮಗನೆಂಬುದರಲ್ಲಿ ಸಂಶಯವಿಲ್ಲ.

ಕಳಚುರಿ ವಂಶದ ಜೋಗಮರಾಣನ ಪುತ್ರ ಮಹಾಮಂಡಳೇಶ್ವರ ಪೆರ್ಮಾಡಿಯರಸನಾಗಿದ್ದಾನೆ. ವಿಕ್ರಮಾದಿತ್ಯನ ಪಾದಪದ್ಮೋಪಜೀವಿಯಾಗಿದ್ದ ಈತನ ಕಾಲವನ್ನು ಪಾಂಡುರಂಗರಾಯ ದೇಸಾಯಿಯವರು ಕ್ರಿ.ಶ 1118–1140 ಎಂದು ನಿರ್ಧರಿಸಿದ್ದಾರೆ. ಅಲ್ಲದೆ ಇವನು ವಿಕ್ರಮಾದಿತ್ಯನ ಅಳಿಯನಾಗಿದ್ದನೆಂಬುದನ್ನು ಶೋಧಿಸಿದ್ದಾರೆ. ವಿಕ್ರಮಾದಿತ್ಯನ ಪ್ರೀತಿಯ ರಾಣಿ ಚಂದಲದೇವಿಯ ಮಗಳನ್ನು ಈ ಪೇರ್ಮಾಡಿಯು ವಿವಾಹವಾಗಿದ್ದಾನೆ. ಏಕೆಂದರೆ ಚಂದಲದೇವಿಯನ್ನು ಬಿಜ್ಜಳನ ಮುತ್ತಬ್ಬೆ (ತಾಯಿಯ ತಾಯಿ) ಎಂದು ಕರೆಯಲಾಗಿದೆ. ಗೋಕಾಕ್ ತಾಲ್ಲೂಕಿನ ಕುಂದರಗಿ ಶಾಸನೋಕ್ತ ಪೆರ್ಮಾಡಿಯರಸನು ಈ ಪೇರ್ಮಾಡಿಯರಸನೇ ಆಗಿರಬೇಕು. ಶಾಸನ ತ್ರುಟಿತವಾಗಿರುವುದರಿಂದ ಹೆಚ್ಚಿನ ವಿಷಯ ತಿಳಿದು ಬರುವುದಿಲ್ಲ. ಶಾಸನದ ಆರಂಭಕ್ಕೆ ಚಕ್ರವರ್ತಿ ವಿಕ್ರಮಾದಿತ್ಯನ ಮತ್ತು ಮಹಾಸಾಮಂತಾಧಿಪತಿ ಮಹಾಪ್ರಚಂಡದಂಡ ನಾಯಕ ಮಹೇಶ್ವರಯ್ಯನ ಉಲ್ಲೇಖಗಳ ನಂತರ ಈ ಮಹಾಮಂಡಳೇಸ್ವರನ ವಿಷಯ ಬರುತ್ತದೆ. ತ್ರುತಿಟವಾಗಿದ್ದರೂ ಈ ಶಾಸನ ಮಹಾಮಂಡಳೇಶ್ವರ ಕಳಚುರಿ ಪೆರ್ಮಾಡಿಯರಸನೆಂಬುದು ನಿಸ್ಸಂಶಯ. ಹರಸೂರ

ಶಾಸನದಲ್ಲಿ ಆ ಜೋಗಮಂತೆ ಮಗನುದ್ದೇಜಿತರಿಪು ಚಕ್ರನಾರ್ಜ್ಜಿತೋರ್ಜ್ಜಿತ ತೇಜೋಭ್ರಾಜಿಷ್ಣು ಜಿಷ್ಣುವಿಕ್ರಮ ನಾಜಿಜಯ ಪ್ರಥಿತ ಪ್ರಥುಭುಜಂ ಪೆರ್ಮ್ಮಾಡಿ"ಎಂದು ಈತನನ್ನು ವರ್ಣಿಸಲಾಗಿದೆ.

ಶ್ರೀಯಾದೇವಿ :

ಆರನೇ ವಿಕ್ರಮಾದಿತ್ಯನ ರಾಣಿ ಶ್ರೀಯಾದೇವಿಯು ಕ್ರಿ.ಶ 1086ರಲ್ಲಿ ಬಗದಲನ್ನು ಆಳುತ್ತಿದ್ದಳು. ಬೀದರ ಜಿಲ್ಲೆಯ ಬಗದಲ್ ಗ್ರಾಮದ ಮಾರುತಿ ಗುಡಿ ಮುಂಭಾಗದಲ್ಲಿರುವ ಕಲ್ಲಿನ ಮೇಲೆ ಬರೆದಿರುವ ಕ್ರಿ.ಶ 1086ರ ಶಾಸನದಲ್ಲಿ ತ್ರಿಭುವನಮಲ್ಲನು ಜಯಂತಿಪುರದಿಂದ ಆಳ್ವಿಕೆ ನಡೆಸುತ್ತಿದ್ದಾಗ ಅವನ ಪತ್ನಿ ಶ್ರೀಯಾದೇವಿಯು ಬಗದಾಳವನ್ನು ಆಳುತ್ತಿದ್ದಂತೆ ಶಾಸನ ಉಲ್ಲೇಖಿಸಿದೆ. ಉಳಿದ ವಿವರಗಳು ಶಾಸನ ಒಡೆದಿರುವುದರಿಂದ ಹಾಳಾಗಿದೆ.

ಕೇತಲದೇವಿ :

ಆರನೇ ವಿಕ್ರಮಾದಿತ್ಯನ ಪಿರಿಯ ಕೇತಲದೇವಿಯು ಕ್ರಿ.ಶ 1091ರ ಶಾಸನದಲ್ಲಿ ಬಲ್ಲಿಕುಂದೆ 300 ಬಳಿಯ ತೆಕ್ಕೆಕಲ್ಲು 12 ರೊಳಗಣ ಭತ್ತಗ್ರಾಮವಾದ ಸಿರಿಗುಪ್ಪೆ ಕೊಳನೂರು ಮೊದಲಾದ ಗ್ರಾಮಗಳನ್ನು ಆಳುತ್ತಿದ್ದಳು.

ಪದ್ಮಲದೇವಿ :

ಬೆಳಗಾವಿ ಜಿಲ್ಲೆಯ ರಾಯಬಾಗ 1077ರ ಶಾಸನದಲ್ಲಿ ಅಪ್ರತ್ಯಕ್ಷವಾಗಿ ಪದ್ಮಲದೇವಿಯ ಉಲ್ಲೇಖ ಬರುತ್ತದೆ. ಚಕ್ರವರ್ತಿ ವಿಕ್ರಮಾದಿತ್ಯನು 'ಧಾರಾ'ನಗರವನ್ನು ಸುಟ್ಟು ಉದಯಾದಿತ್ಯನನ್ನು ಸೋಲಿಸಿ ಮರಳಿ ಬರುವಾಗ ಕೊಲ್ಹಾಪುರ ಶಿಲಾಹಾರ ಭೋಜನ ಮೇಲೆ ಯುದ್ಧಕ್ಕೆ ಹೋಗುತ್ತಾನೆ. ಆ ಯುದ್ಧದಲ್ಲಿ ವಿಕ್ರಮಾದಿತ್ಯನ ಮಹಾಮಂಡಳೇಶ್ವರನಾದ ಕೊಂಗಜರಸನ ಕಡೆಯ ಚಂಡರಸನು ಭೋಜನ ಆನೆಯ 'ಪಾಳಿಮೊಗಮ' ಕಿತ್ತು ಹಲವರನ್ನು ಕೊಂದು ಸುರಲೋಕಕ್ಕೆ ಹೋಗುತ್ತಾನೆ. ಈ ಯುದ್ಧದಲ್ಲಿ ವಿಕ್ರಮಾದಿತ್ಯನು ಗೆದ್ದು ಈ ಶಾಸನಯುಕ್ತ ವಿಜಯಸ್ಥಂಭವನ್ನು ನಿಲ್ಲಿಸುತ್ತಾನೆ. ಇದರಲ್ಲಿ ಮಹಾಮಂಡಳೇಶ್ವರ ಕೊಂಗಜರಸನ ಪ್ರಶಸ್ತಿಯೂ ಇದ್ದು, ಅಲ್ಲಿ 'ಭಾವನಂಕಕಾರ ಪದ್ಮಲದೇವಿಯ ನಿಜಗಂಧವಾರಣ' ಎಂದು ಬರುತ್ತದೆ. ಇದರಿಂದ ಮಹಾ ಮಂಡಳೇಶ್ವರ ಕೊಂಗಜರಸನು ಪದ್ಮಲದೇವಿಯ ಸಹೋದರನಾಗಿದ್ದು ವಿಕ್ರಮಾದಿತ್ಯನ ಅಳಿಯನಾಗಿದ್ದನೆಂದು ಗೊತ್ತಾಗುತ್ತದೆ. ಈ ಶಾಸನದ ಕಾಲ ಕ್ರಿ.ಶ 1077 ಮಾರ್ಚ್ 19 ಇರುವುದರಿಂದ ಇದಕ್ಕಿಂತ ಪೂರ್ವದಲ್ಲಿ ಬಹುಶಃ ಯುವರಾಜನಾಗಿದ್ದಾಗಲೇ ಪದ್ಮಲದೇವಿಯನ್ನೂ ವಿಕ್ರಮಾದಿತ್ಯನು ವಿವಾಹವಾಗಿರಬೇಕು.

ಈಕೆಯ ನೇರ ಉಲ್ಲೇಖ ಬಳ್ಳಾರಿ ಜಿಲ್ಲೆಯ ಹಡಗಲಿ ತಾಲೂಕಿನ ರಂಗಾಪುರಂ ಕ್ರಿ.ಶ 1116ರ ಶಾಸನದಲ್ಲಿ ಬರುತ್ತದೆ. ಇದರಿಂದ ಪದ್ಮಲದೇವಿಯು

ಈ ಭಾಗದವಳಾಗಿರಬೇಕು. ಈಕೆಯ ಪ್ರಶಸ್ತಿಯನ್ನು "ಸ್ವಸ್ತಿಯನವರತ ಪರಮಕಲ್ಯಾಣಾಭ್ಯುದಯ ಸಹಸ್ರಫಳಭೋಗಭಾಗಿನೀ ದ್ವಿತೀಯಲಕ್ಷ್ಮೀ ಸಮಾನೆ ಕಳಹಂಸಯಾನೆ ಅಗಣ್ಯಪುಣ್ಯಲಾವಣ್ಯ ಲೀಲಾಲಂಕ್ರಿತ ಪರಿವಾರಕಲ್ಪಲತೆ ಅರ್ತ್ಥಿಜನ ಚಿಂತಾಮಣಿ, ಗೋತ್ರಚೂಡಾಮಣಿ, ಪ್ರತ್ಯಕ್ಷಪಾರ್ವ್ವತಿ ಪತಿಬ್ರತಾರುಂಧತಿ ಅರ್ತ್ಥಿಜನ ಚಿಂತಾಮಣಿ, ಗೋತ್ರಚೂಡಾಮಣಿ, ಪ್ರತ್ಯಕ್ಷಪಾರ್ವ್ವತಿ ಪತಿಬ್ರತಾರುಂಧತಿ ಅಭಿನವಸರಸ್ವತಿ, ರೂಪವಿಧ್ಯಾಧರಿ, ಸಕಳಕಳಾಧರಿ, ಮಹಾಲಕ್ಷ್ಮೀ ದೇವೀಲಬ್ಧವರಪ್ರಸಾದೆ, ದಾನವಿನೋದೆ, ಶ್ರೀಮತ್ರಿಭುವನಮಲ್ಲದೇವ ವಿಶಾಳವಕ್ಷಸ್ಥಳನಿವಾಸಿನಿಯರಪ್ಪ ಶ್ರೀಮತು ಪದ್ಮಲದೇವಿಯರು"ಎಂದು ನಿರೂಪಿಸಿ ಅಗ್ರಹಾರ 'ಮಾಂಗೊಳ'ವನ್ನು ಇವಳು ಆಳುತ್ತಿದ್ದಳೆಂದು ಹೇಳಲಾಗಿದೆ. ಈ ಮಾಂಗೊಳವು ಇಂದಿನ 'ಮಾಂಗಳ' ಗ್ರಾಮವೆ ಆಗಿದೆ. ಈ ಊರಿನ ಮಹಾಜನ ಹಾಗು ಊರೊಡೆಯನು ಬಿನ್ನಪಗೆಯ್ಯಲಾಗಿ ಅರಸಿ ಪದ್ಮಲದೇವಿಯು ಕಾರುಣ್ಯದಿಂದ ನಾರಸಿಂಘ ದೇವರಿಗೆ ಸ್ನಾನನೈವೇದ್ಯ, ಅಂಗಭೋಗಕ್ಕೆ ಭೂಮಿಯನ್ನು ದಾನ ನೀಡುತ್ತಾಳೆ.

ಪಿರಿಯರಸಿ ಲಕ್ಷ್ಮಾದೇವಿ :

ವಿಕ್ರಮಾದಿತ್ಯನ ರಾಣಿಯರಲ್ಲಿ ಮೊಟ್ಟಮೊದಲಿಗೆ 'ಪಿರಿಯರಸಿ'ಎಂದು ಕರೆಯಿಸಿಕೊಂಡವಳು ಲಕ್ಷ್ಮಾದೇವಿ. ಜನಪ್ರಿಯಳೂ, ಧಾರ್ಮಿಕ ಮನೋಭಾವದವಳೂ ಆದ ಈಕೆಯನ್ನು ಶಾಸನಗಳು, ಹರಿಹರಾದಿ ಕವಿಗಳು ವರ್ಣಿಸಿದ್ದಾರೆ. ಕ್ರಿ.ಶ 1080 ಡಿಸೆಂಬರ್ 14ಕ್ಕಿಂತ ಪೂರ್ವದಲ್ಲಿಯೇ ಶಾಸನದಲ್ಲಿ ಈಕೆಯನ್ನು 'ಪಿರಿಯರಸಿ ಲಕ್ಷ್ಮಾದೇವಿ' ಎಂದು ಕರೆದಿರುವುದರಿಂದ ಈಕೆಯು ವಿಕ್ರಮಾದಿತ್ಯನ ಜೀವಮಾನದ ಮೊದಲ ದಿನಗಳಲ್ಲಿ ವರಿಸಿದ ರಾಣಿಯರಲ್ಲಿ ಒಬ್ಬಳಾಗಿದ್ದಾಳೆ. ಬಹುಶಃ ಇವಳನ್ನು ಕುಮಾರವೃತ್ತಿಯಿಂದ ಆಳುವಾಗಲೇ ವರಿಸಿರಬೇಕು.

'ವಿಕ್ರಮಾದಿತ್ಯಚಕ್ರಿ ನಿಸರ್ಗೋದಿತ ಪುಣ್ಯದೇವತೆಯೆ ಲಕ್ಷ್ಮಾದೇವಿ ಕ್ರಿ.ಶ 24 ಡಿಸೆಂಬರ್ 1084ರ ಗದಗ ಜಿಲ್ಲೆಯ ರೋಣ ಶಾಸನದಲ್ಲಿದೆ. ಅದರಂತೆ ಕ್ರಿ.ಶ 14 ಡಿಸೆಂಬರ್ 1080 ಡೋಣಿ ಶಾಸನದಲ್ಲಿ 'ಪುರಾಣ ಲಕ್ಷ್ಮೀ' ಎಂದೂ ವರ್ಣಿತಳಾದ ಈಕೆಯ ತಂದೆ ಕಂಕೋಜ, ತಾಯಿ ಮಸಣಿಕವೆನಾಯಕಿತಿ, ತವರೂರು ಬಿಜಾಪುರ ಜಿಲ್ಲೆಯ ಇಂಡಿ ತಾಲೂಕಿನ ಖೇಡಗಿ. ಈ ವಿಷಯ ತ್ರುಟಿತವಾದ ಖೇಡಗಿ ಶಾಸನದಿಂದ ತಿಳಿದು ಬರುತ್ತದೆ. 'ಕಂಕೋಜ' ಹೆಸರಿನ ಕೊನೆಯ 'ಓಜ'ಪದ ಇವರದು ಶಿಲ್ಪಿ ಮನೆತನವೆಂಬುದನ್ನು ಸೂಚಿಸುತ್ತದೆ. ಮಗಳು ಲಕ್ಷ್ಮಾದೇವಿ ರಾಜಕುಮಾರನನ್ನು ವರಿಸುವಾಗ ಕಂಕೋಜ ಸಾಮಾನ್ಯ ಶಿಲ್ಪಿಯಾಗಿದ್ದನೋ, ಒಬ್ಬ ಅಧಿಕಾರಿಯಾಗಿದ್ದನೋ ಸ್ಪಷ್ಟವಾಗುವುದಿಲ್ಲ. ಅಧಿಕಾರಿಯಾಗಿದ್ದರೂ ಚಕ್ರವರ್ತಿ ಪುತ್ರನಿಗೆ ಮಗಳನ್ನು ಕೊಡುವ ಅಂತಸ್ತು ಇವನದಲ್ಲವೆನಿಸುವುದರಿಂದ ಇದು ಪ್ರೇಮವಿವಾಹವಾಗಿರಬಹುದೇ ? ಎಂಬ ಸಂದೇಹ ಬರುತ್ತದೆ. ಒಂದು ವೇಳೆ ಮದುವೆಯ ಕಾಲದಲ್ಲಿ ಇವನು ಸಾಮಾನ್ಯ ಶಿಲ್ಪಿಯೇ ಆಗಿದ್ದರೆ ಇದು ಖಂಡಿತವಾಗಿಯೂ ಪ್ರೇಮ ವಿವಾಹವೆನಿಸುತ್ತದೆ. ಈ ವಿವಾಹದ ಬಳಿಕ ಕಂಕೋಜ ಅಧಿಕಾರಿಯಾಗಿ, ಅವನ ಹೆಂಡತಿ 'ನಾಯಕಿತಿ' ಎಂಬ ವಿಶೇಷಣ ಪಡೆದಿರಲು ಸಾಧ್ಯ.

ಧಾರವಾಡದ ಸೂಡಿ ಕ್ರಿ.ಶ 24, ಡಿಸೆಂಬರ್ 1084ರ ಶಾಸನದಲ್ಲಿ ಈಕೆಯ ದೀರ್ಘ ಪ್ರಶಸ್ತಿ "ತನ್ಮನೋವಲ್ಲಭೆ ಸ್ವಸ್ತ್ಯನವರತ ಪರಮಕಲ್ಯಾಣಾಭ್ಯುದಯ ಸಹಶ್ರ(ಸ್ರ) ಫಳಭೋಗಭಾಗಿನಿ ಸಂಸಾರಸಾರ ಸ್ವಸ್ತಿಸಂಪದಾ ಭೋಗಿನಿ ರಾಯನಾರಾಯಣ ವಿಶಾಳವೃಕ್ಷ(ಸ್ಥ)ಳಸ್ಥಳಹಿತ ಪ್ರತ್ಯಕ್ಷಲಕ್ಷ್ಮೀ ಯೌ(ವನನ)ವಸನ್ತಲಕ್ಷ್ಮೀ ಸಕಳಕಳಾ ಪಲೀಳಾಧ(ರೆ) ವಿಳಾಸವಿದ್ಯಾಧರೆ ವಿಕ್ರಮಾದಿತ್ಯದೇವ ಮನೋರಂಜಿನಿ ಸ್ವಸ್ತಿ ಮದಭಂಜನಿ (ಸವತಿ ಮದಭಂಜನಿ ?) ಚಾಲುಕ್ಯ ರಾಮಹೃದಯಹರ್ಸೋತ್ಕರ್ಷೆ ಸನ್ತತಾನಘ್ಯಮಣಿಕನಕಕಂಕಣವರ್ಷೆ ನಿತ್ಯಪ(ಲಿ)ಯಪುಣ್ಯ ಪ್ರಭಾವಚರಿತ್ರಪವಿತ್ರೆ ಸಲ್ಲಲಿತಗಾತ್ರೆ ಸುಜಾಣಧಾಣೀಯ ಪಾತ್ರಸಿ(ಶಿ) ರೋಮಣಿ ದಾನಚಿನ್ತಾಮಣಿ ಅಮಳಸವತಿಮದಖಣ್ಡನಿ ಸಮಸ್ತಾನ್ತಃಪುರಮುಖಮಣ್ಡನಿ ಶ್ರೀಮತಿ ಭುವನಮಲ್ಲದೇವವಿಶಾಳವಕ್ಷಸ್ಥಳನಿವಾಸಿನಿಯರಪ್ಪ ಶ್ರೀಮತ್ಪಿರಿಯರಸಿ ಲಕ್ಷ್ಮಾದೇವಿಯರ್" ಎಂದು ಬರುತ್ತದೆ.

ಕ್ರಿ.ಶ 1080ರ ಧಾರವಾಡದ ಡೋಣಿ ಶಾಸನದಲ್ಲಿ ಈಕೆಯು ದ್ರೋಣಪುರವನ್ನು ಆಳುತ್ತಿದ್ದಳೆಂದು ತಿಳಿಸುತ್ತದೆ. ಅದರಂತೆ ಕ್ರಿ.ಶ 3 ಜನೆವರಿ 1096ರ ಗದಗನ ಡಂಬಳ ಶಾಸನದಲ್ಲಿ 18 ಅಗ್ರಹಾರಗಳನ್ನೂ, ಧರ್ಮಾಪುರವನ್ನೂ ಆಳುತ್ತಿದ್ದಳೆಂದು ಹೇಳಲಾಗಿದೆ. 'ಧರ್ಮಾಪುರ'ವು 'ಧರ್ಮವೊಳಲಿನ' ಸಂಸ್ಕೃತರೂಪವಾಗಿದೆ. ಇದು ಇಂದಿನ ಡಂಬಳ ಗ್ರಾಮವೇ ಆಗಿದೆ. ದ್ರೋಣಪುರವು ಇಂದಿನ ಡೋಣಿ ಗ್ರಾಮವಾಗಿದೆ. ಧರ್ಮಪುರವು ಮೇಲಿನ 18 ಅಗ್ರಹಾರಗಳಲ್ಲೊಂದಾಗಿತ್ತು. ಈಕೆ ಆಳುತ್ತಿದ್ದುದು ಕೇವಲ ಅಗ್ರಹಾರಗಳನ್ನು ಮಾತ್ರ.

ಶೈವಧರ್ಮಿಯಳಾದ ಇವಳು ದೇಗುಲಗಳಿಗೆ ದಾನ ಬಿಟ್ಟಿದ್ದಾಳೆ. ಈಕೆ ಚಕ್ರವರ್ತಿಯೊಂದಿಗೆ ಕಲ್ಯಾಣನಗರದಲ್ಲಿದ್ದಾಗ ರಾಜಧಾನಿ ಸೂಡಿಯ ಅಚಲೇಶ್ವರ ದೇವಾಲಯದಲ್ಲಿರುವ ಸೋಮೇಶ್ವರ ಪಂಡಿತರಿಗೆ ಕಿಸುಕಾಡು 70ರಲ್ಲಿಯ ಬಾಡ 'ಪೊಂಗರಿ'ಯನ್ನು ದಾನವಾಗಿ ಕೊಟ್ಟ ಉಲ್ಲೇಖ ಕ್ರಿ.ಶ 24 ಡಿಸೆಂಬರ್ 1084ರ ಸೂಡಿ ಶಾಸನದಲ್ಲಿದೆ. ಖೇಡಗಿಯ ಶಾಸನ ಈಕೆ ತನ್ನ ತಂದೆ ತಾಯಿಯೊಂದಿಗೆ ಇದ್ದು, (ಮನೆದೇವರಾದ) ಕಂಕೇಶ್ವರ ದೇವರಿಗೆ ಭೂಮಿ, ನಿವೇಶನ, ಹೂವಿನತೋಟ ದಾನ ಬಿಟ್ಟಿದನ್ನು ತಿಳಿಸುತ್ತದೆ. ಆದ್ದರಿಂದಲೇ ಡಂಬಳ ಶಾಸನ ಈಕೆಯನ್ನು 'ಮಹಾದಾನವಿನೋದೆ' ಎಂದು ಕರೆದಿದೆ.

ಈ ಪೆರ್ಮಾಡಿರಾಯನ ಹೆಂಡತಿ 'ಪರಮ ಶಿವಲಿಂಗಾರ್ಚನಾನಿರತೆ ಗುಣಶಾಂತೆ'ಯಾದ ಲಕುಮಾದೇವಿ, ಶಿವಭಕ್ತೆಯಾದ ಈಕೆ ಶಿವಪೂಜೆಗಾಗಿ ತೆಲುಗು

ಜೋಮಯ್ಯನಿಗೆ ದಿನಂಪ್ರತಿ ವಸ್ತ್ರ, ಧೂಪ, ಕಸ್ತೂರಿ, ಹುವು ಮುಂತಾದ ಪೂಜಾ ಸಾಮಗ್ರಿಗಳನ್ನು ಕಳುಹಿಸುತ್ತಿದ್ದಳು. ಹೀಗಿರುವಾಗ ಒಂದುದಿನ ಜೋಮ್ಮಯ್ಯ ಅರಮನೆಗೆ ಬರುತ್ತಾನೆ. ಅಲ್ಲಿ ಅರಸನು ವಿಷ್ಣು ಪ್ರತಿಮೆಯನ್ನು ಪೂಜಿಸುತ್ತಿದ್ದನು. ಸಮೀಪದಲ್ಲಿಯೇ ಒಬ್ಬ ಬ್ರಾಹ್ಮಣನು ವೈಷ್ಣವ ಪುರಾಣವನ್ನು ಓದುತ್ತಿದ್ದನು. ಅವನು ಪುರಾಣ ಓದುತ್ತ ಶಿವನಿಂದನೆಯನ್ನು ಮಾಡಿದ. ಇದನ್ನು ಕೇಳಿದ ಜೋಮಯ್ಯನು ಅವನನ್ನು ಸಿಟ್ಟಿನಿಂದ ಕೊಲ್ಲುತ್ತಾನೆ. ತನ್ನ ದೆಸೆಯಿಂದಾದ ಶಿವನಿಂದನೆಯನ್ನು ಕೇಳಿ, ಪೆರ್ಮಾಡಿಯ ಅರ್ಜಿಸುತ್ತಿದ್ದ ವಿಷ್ಣು ಪ್ರತಿಮೆ ಕಣ್ಣ ನೀರನ್ನು ಇಕ್ಕುತ್ತದೆ. ಇದನ್ನು ನೋಡಿ ಅರಸ ಜೋಮಯ್ಯನ್ನು ಆಸ್ಥಾನಕ್ಕೆ ಕರೆತರಲು ಆದೇಶ ನೀಡುತ್ತಾನೆ. ಈ ವಿಷಯ ಪೆರ್ಮಾಡಿಯ ಅರಸಿ ಶಿವಭಕ್ತೆ ಲಕುಮಾದೇವಿಗೆ ತಿಳಿಯುತ್ತದೆ. ಆಕೆ ಕಳವಳಗೊಂಡು "ಆಸ್ಥಾನಕ್ಕೆ ಬಂದ ಜೊಮ್ಮಯ್ಯ ಭವಿಯಾದ ಚಕ್ರವರ್ತಿಗೆ ನಮಸ್ಕಾರ ಹೇಳದಿದ್ದರೆ ಅವನ ಕ್ರೋಧಕ್ಕೆ ಗುರಿಯಾಗಬೇಕಾಗುತ್ತದೆ"ಎಂದು ಆಲೋಚಿಸಿ ತನ್ನ ಇಷ್ಟಲಿಂಗವನ್ನು ಸಿಂಗರಿಸಿ ಅರಸನಿಗೆ ಗೊತ್ತಾಗದಂತೆ ಸಿಂಹಾಸನದ ಹಿಂದೆ ಹಿಡಿಯುತ್ತಾಳೆ. ಈ ಸಮಯದಲ್ಲಿ ಜೋಮಯ್ಯನು ಸಭಾಂಗಣವನ್ನು ಪ್ರವೇಶಿಸುತ್ತಲೇ ಕಣ್ಣಿಗೆ ಬಿದ್ದ ಇಷ್ಟಲಿಂಗಕ್ಕೆ ನಮಸ್ಕಾರ ಹೇಳಿ ಭವಿಯ ಹಿಂದಿರದೆ ಮಗ್ಗಲು ಸರಿಯಬೇಕೆಂದು ಇಷ್ಟಲಿಂಗಕ್ಕೆ ಸೂಚಿಸುತ್ತಾನೆ. ಸರಿದ ಲಿಂಗವನ್ನು ನೋಡಿ ಪೆರ್ಮಾಡಿರಾಯನಿಗೆ ಆಶ್ಚರ್ಯವಾಗುತ್ತದೆ. ಆದರೂ ನಿರಪರಾಧಿ ಪುರಾಣಭಟ್ಟನನ್ನು ಕೊಂದುದಕ್ಕೆ ಅರಸನು ಕಾರಣವನ್ನು ಕೇಳುತ್ತಾನೆ. ಆಗ ಜೊಮಯ್ಯನು 'ಶಿವನಿಂದೆ ಮಾಡಿ ಸುಳ್ಳು ಹೇಳಿದುದಕ್ಕೆ ಕೊಂದೆ'ನೆಂದು ಹೇಳುತ್ತಾನೆ. ಇದಕ್ಕೆ ನಿದರ್ಶನವೆಂಬಂತೆ ಆ ಹೆಣದ ಮುಸುಕನ್ನು ತೆರೆಯಲು ಅಲ್ಲಿ ಹುಳದರಾಶಿ ಕಾಣುತ್ತದೆ. ಜೋಮ್ಮಯ್ಯನ ಮಹಿಮೆಯನ್ನು ನೋಡಿ ಪೆರ್ಮಾಡಿ ನಮಸ್ಕರಿಸುತ್ತಾನೆ. ಭದ್ರಾಸನದ ಮೇಲೆ ಕುಳ್ಳಿರಿಸಿ 'ಇರ್ಚ್ಛಾಸಿರ ಹೂಗಳನ್ನು ಪಾದಗಾಣಿಕೆಯಿತ್ತು ಕೊಂಡಾಡುತ್ತಾನೆ.

ಆಗ ಲಕುಮಾದೇವಿಯು ಕಳುಹಿಸಿದ 'ಪೊನ್ನಪೊಟ್ಟಣಮಂ ಹಾರೈಸಿಕೊಂಡು ರನ್ನದ ತೊಡಿಗೆಗಳಂ ಹರುಷದಿಂದ ತೊಟ್ಟು, ದಿವ್ಯವಸ್ತ್ರಮನುಟ್ಟು' ಸಿಂಹಾಸನದ ಮೇಲೆ ಕುಳಿತಿದ್ದ ಇವನಿಗೆ ಅರಸನು ತಾನು ಮಾಡಿದ ತಪ್ಪನ್ನು ಕ್ಷಮಿಸಬೇಕೆಂದು ಭಿನ್ನವಿಸುತ್ತಾನೆ. ಮತ್ತು "ಕಲ್ಯಾಣಕ್ಕೆ ಯೋಜನಾಂತರದೊಳೊಂದು ಸಂವತ್ಸರಕ್ಕೆ ಪನ್ನಿರ್ಚ್ಛಾಸಿರ ಪೊನ್ನನಿಕ್ಕುವ ಪಟ್ಟಣಮಂ ಶಿವಪುರಮಂ ಮಾಡಿ" ಕೊಡುತ್ತಾನೆ. ಮುಂದೆ ಈ ಜೋಮಯ್ಯನನ್ನು ಭೇಟ್ಟಿಯಾಗಲು ಕೊಂಡಗುಳಿಯ ಕೇಶಿರಾಜ ದಂಡನಾಯಕನು ಬರುತ್ತಾನೆ. ಇವನೆದುರು ಜೋಮಯ್ಯ ಕೆಲವು ಪವಾಡಗಳನ್ನು ಮೆರೆಯುತ್ತಾನೆ.

ಈ ರಗಳೆಯಲ್ಲಿ ಹರಿಹರನು ಲಕ್ಷ್ಮಾದೇವಿಯುನ್ನು ಕೇವಲ "ಮಹಾದೇವಿ"ಎಂದು ಕರೆದಿದ್ದಾನೆ. ಲಕ್ಕಣ್ಣ ದಂಡೇಶನು ತನ್ನ ಶಿವತತ್ವ ಚಿಂತಾಮಣಿಯಲ್ಲಿ ಮೇಲಿನ ಕಥೆಯನ್ನೇ ಹೇಳಿದ್ದಾನೆ. ಅದರಲ್ಲಿ ಅವನು 'ಲಕ್ಷ್ಮಾದೇವಿ' ಎಂಬ ಹೆಸರಿಗೆ ಬದಲು 'ಪಟ್ಟಮಹಾದೇವಿ' ಎಂದು ಕರೆದಿದ್ದಾನೆ. ಆದರೆ ಪಟ್ಟಮಹಾದೇವಿಯಾಗಿದ್ದಳೆಂದು ಶಾಸನಗಳು ತಿಳಿಸಿಲ್ಲ. ಹರಿಹರನೂ ಹೇಳಿಲ್ಲ. ಕಾಲದ ದೃಷ್ಟಿಯಿಂದ ಹರಿಹರನು ಲಕ್ಕಣ್ಣದಂಡೇಶನಿಗಿಂತ ಮೊದಲಿಗನಾಗುತ್ತಾನೆ. ಒಂದು ವೇಳೆ ಈಕೆ ಪಟ್ಟಮಹಾದೇವಿಯಾಗಿದ್ದರೆ ಅದನ್ನು ಖಂಡಿತವಾಗಿಯೂ ಹರಿಹರ ಸೂಚಿಸುತ್ತಿದ್ದನು.

ಅಂಗಬ್ಬರಸಿ :

ವಿಕ್ರಮಾದಿತ್ಯನ ರಾಣಿ ಅಂಗಬ್ಬರಸಿಯು ಬಿಜಾಪೂರ ಜಿಲ್ಲೆಯ ದೇವರಗೆಣ್ಣೂರ ಕ್ರಿ.ಶ 1089ರ ಶಾಸನದಲ್ಲಿ ಉಕ್ತಳಾಗಿದ್ದಾಳೆ. ಸೂರ್ಯಗ್ರಹಣದ ದಿವಸ ತರ್ದವಾಡಿ 1000ದಲ್ಲಿಯ ಬಾಗೆ 50ರಲ್ಲಿದ್ದ ಅಗ್ರಹಾರ ಗಂಡೆಗಗ್ರಾಮದ ಶ್ರೀಕೇಶವದೇವರಿಗೆ, ಅಂಗಬ್ಬರಸಿ 'ತನ್ನಾಳ್ಕೆಯಲು ಶ್ರೀಬಲ್ಲವರಸರ್ಗ್ಗೆ ಬಿನ್ನಪಂಗೆಯ್ದು, ದಾನಬಿಟ್ಟ ಉಲ್ಲೇಖವಿದೆ. ಇಲ್ಲಿ 'ಬಲ್ಲವರಸ'ನೆಂದು ಚಕ್ರವರ್ತಿ ವಿಕ್ರಮಾದಿತ್ಯನಾಗಿದ್ದಾನೆ. ಈಕೆ ಆಳುತ್ತಿದ್ದುದು ಗಂಡೆಗಗ್ರಾಮ. ಅದು ಅಗ್ರಹಾರ. ಚಕ್ರವರ್ತಿಗೆ ಕೇಳಿ ದಾನ ಕೊಡುತ್ತಾಳೆ.

ಹಿರಿಯಕೇತಲದೇವಿ :

ಬಳ್ಳಾರಿ ಜಿಲ್ಲೆಯ ಸಿರುಗುಪ್ಪ 1092ರ ಶಾಸನದಲ್ಲಿ ರಾಣಿ ಹಿರಿಯ ಕೇತಲದೇವಿಯನ್ನು ಚಕ್ರವರ್ತಿಯ 'ಪ್ರಿಯಾಂಗನೆ' ಎಂದು ಕರೆದಿದೆ. ಶಾಸನದಲ್ಲಿ 'ಸ್ವಸ್ತಿಯನವರತ ಪರಮ ಕಲ್ಯಾಣಾಭ್ಯೂದಯ ಸಹಸ್ರಫಳಭೋಗಭಾಗಿನಿ ದ್ವಿತೀಯುಲಕ್ಷ್ಮೀ ಮಾನೆ ಕಳಹಂಸ ಯಾನೆಯುಗಣುಪುಣ್ಯ ಲಾವಣ್ಯಸಂಭೋಗಭಾಗಿನಿಯನೇಕದೇಶಭಾ.. ಸಂಗೀತ ವಿದ್ಯಾಧರಿ ಸಕಳಕಳಾಧರಿಯನ್ತಃಪ್ಪುರ ಮುಖಮಣ್ಡನಿ ಪರಗೀತಲಗೋತ್ರನಿಧಾನೆ ಪರಿವಾರಕಟ್ಟದ್ರುಮೆ ಶ್ರೀಮತ್ರಿಭುವನಮಲ್ಲದೇವ ವಿಶಾಟವಕ್ಷಸ್ಥ ಟ...(ಸಿನಿ)ಯರಪ್ಪ ಶ್ರೀಮದಭಿನವ ಸರಸ್ವತಿ'ಎಂದು ಇವಳ ಪ್ರಶಸ್ತಿ ಬರುತ್ತದೆ. ಈಕೆ ಭಲ್ಲಕುಂದೆ 300ರ ತೆಕ್ಕೆಕಲ್ಲು 12ರಲ್ಲಿದ್ದ ಭತ್ತಗ್ರಾಮ ಸಿರುಗುಪ್ಪೆ, ಕೊಳನೂರೆ,..., ಈ ಮೂರು ಊರುಗಳನ್ನು ದುಷ್ಟನಿಗ್ರಹ ಶಿಷ್ಟಪ್ರತಿಪಾಳನದಿಂದ ಆಳುತ್ತಿದ್ದಳು. ಸಿರುಗುಪ್ಪೆಯ ಸ್ವಯಂಭೂ ಕೇತಲೇಶ್ವರ ದೇವರ ಅಂಗಭೋಗ, ಧೂಪ, ದೀಪ, ಪಾತ್ರ ಮೊದಲಾದುದಕ್ಕೆ ಈಕೆಯು ಸೂರ್ಯಗ್ರಹಣದ ದಿವಸ ಸಿರುಗುಪ್ಪೆಯಲ್ಲಿ 32 ಗೇಣ ಗಳೆಯಲ್ಲಿ ಎರಡು ಮತ್ತರು ಗದ್ದೆಯನ್ನು ಕೊಡುತ್ತಾಳೆ. ಅಲ್ಲದೇ ಕರಿಯನೆಲದಲ್ಲಿ 42 ಮತ್ತರು ಭೂಮಿಯನ್ನು ದಾನಬಿಡುತ್ತಾಳೆ. ಸಿರಿಯುರದಲ್ಲಿಯೂ ಈಕೆ ಭೂಮಿಯನ್ನು ದೇವರಿಗಾಗಿ ದಾನ ಬಿಡುತ್ತಾಳೆ. ಈಕೆಯ ಪಾದಪದ್ಮೋಪಜೀವಿಯಾಗಿದ್ದ 'ಸಿಂದ'ವಂಶದ ಮಹಾಸಾಮಂತ ಮನ್ನೆಯ ಚೊಕ್ಕರಸನೂ ದಾನಬಿಟ್ಟ ಉಲ್ಲೇಖ ಈ ಶಾಸನದಲ್ಲಿ ಬರುತ್ತದೆ.

ಅಬ್ಬಲದೇವಿ :

ವಿಕ್ರಮಾದಿತ್ಯನ ರಾಣಿಯಾದ ಅಬ್ಬಲದೇವಿಯ ಉಲ್ಲೇಖ ರಾಯಚೂರ ಜಿಲ್ಲೆಯ ಲಿಂಗಸೂರ ಕ್ರಿ.ಶ 1124ರ ಶಾಸನದಲ್ಲಿ ಬರುತ್ತದೆ. ವಿಕ್ರಮಾದಿತ್ಯನ ಪಾದಪದ್ಮೋಪಜೀವಿಯಾದ ಈಕೆಯ ಪ್ರಶಸ್ತಿಯನ್ನು ಶಾಸನದಲ್ಲಿ "ಸ್ವಸ್ತನವರತ ಪರಮಕಲ್ಯಾಣಾಭ್ಯೂದಯ ಸಹಶ್ರ(ಸ್ರ) ಫಳಭೋಗಭಾಗಿನಿದ್ವಿತೀಯ ಲಕ್ಷ್ಮೀಸಮಾನೆ ಕಳಹಂಸಯಾನೆ ಯಾಶ್ರಿತಜನನಿಧಾನೆ ರೂಪವಿದ್ಯಾಧರಿ ಸಕಳಕಳಾಧರಿ ಕಸ್ತೂರಿಗಾ ಮೋದೆ ದಾನವಿನೋದೆ ಶ್ರೀಮ(ತ್) ತ್ರಿಭುವನಮಲ್ಲದೇವವಿಷಾ (ಶಾ)ಳವಕ್ಷ(:) ಸ್ಥಳನಿವಾಸಿನಿಯರಪ್ಪ ಶ್ರೀಮದಬ್ಬಲದೇವಿ"ಎಂದು ಹೇಳಲಾಗಿದೆ. ಈಕೆಯ ಪ್ರಶಸ್ತಿಯಿಂದ ಇವಳೂ ರೂಪವತಿಯಾಗಿದ್ದುದು, ವಿದ್ಯೆಯನ್ನು, ಕಲೆಗಳನ್ನು ಬಲ್ಲವಳಾಗಿದುದ್ದು ತಿಳಿದುಬರುತ್ತದೆ. ಇವಳು ಕರಡಿಕಲ್ಲು 400ರಲ್ಲಿದ್ದ ಭತ್ತಗ್ರಾಮದ 'ಲಿಂಗ'ವನ್ನು ಆಳುತ್ತಿದ್ದಳು. ಈ 'ಲಿಂಗ' ಗ್ರಾಮವೇ ಇಂದಿನ 'ಲಿಂಗಸೂರು"ಆಗಿದೆ.

ಮೈಳಲದೇವಿ :

ಆರನೇ ವಿಕ್ರಮಾದಿತ್ಯನ ರಾಣಿ ಮೈಳಲದೇವಿಯು ಕ್ರಿ.ಶ 1094ರಲ್ಲಿ ಅಗ್ರಹಾರ ಕನ್ನವಳ್ಳಿಯನ್ನು ಆಳುತ್ತಿದ್ದಳು. ಕನ್ನೊಳ್ಳಿ 1094ರ ಶಾಸನದಲ್ಲಿ ಈಕೆಯನ್ನು ವಿಕ್ರಮಾದಿತ್ಯನ ಪಿರಿಯರಸಿ ಪಟ್ಟ ಮಹಾದೇವಿಯೆಂದು ಕರೆದಿದೆ. ಈಕೆಯ ಪ್ರಶಸ್ತಿಯನ್ನು "ಸ್ವಸ್ತ್ಯನವರತ ಪರಮಕಲ್ಯಾಣಾಭ್ಯುದಯ ಸಹಸ್ರಫಲಭೋಗಭಾಗಿನಿ ದ್ವಿತೀಯಲಕ್ಷ್ಮೀ ಸಮಾನೆ ಕಳಹಂಸಯಾನೆ ಕಲಿಕಾಲಸರಸ್ವತಿ ಪ್ರತ್ಯಕ್ಷಪಾರ್ವ್ವತಿ ಪರಿವಾರಸಮುದ್ಧರಣಿ ಧಾತ್ರೀಜನರಕ್ಷಾಮಣಿ ಸಾಹಸವಿಧ್ಯಾಧರಿ ಸಕಳಕಳಾವತಿ ಶ್ರೀಮತ್ರಿಭುವನಮಲ್ಲ ವಿಶಾಳವಕ್ಷಸ್ಥಳನಿವಾಸಿನಿಯರಪ್ಪ ಪಟ್ಟಮಹಾದೇವಿ"ಎಂದು ಕೊಡಲಾಗಿದೆ. ಈಕೆಯು ವಿಕ್ರಮಾದಿತ್ಯನ ಪಿರಿಯರಸಿಯೂ ಪಟ್ಟಮಹಾದೇವಿಯೂ ಆಗಿದ್ದಳು.

ವಿಕ್ರಮಾದಿತ್ಯನ ಅರಸಿಯರಲ್ಲಿ ಉಪಲಬ್ಧ ಆಧಾರಗಳಿಂದ ಹೇಳುವುದಾದರೆ ಮೈಳಲದೇವಿಯು ಮೊದಲನೆಯ ಪಟ್ಟದರಾಣಿಯಾಗಿದ್ದಾಳೆ. ಮೈಳಲದೇವಿಯನ್ನು ಕ್ರಿ.ಶ 1094ರ ಕನ್ನೊಳ್ಳಿ ಶಾಸನದಲ್ಲಿ 'ಪಟ್ಟಮಹಾದೇವಿ'ಯೆಂದು ಕರೆಯಲಾಗಿದೆ. ಈಕೆ ಕ್ರಿ.ಶ 1107ರ ವರೆಗೆ ಪಟ್ಟಮಹಾದೇವಿಯಾಗಿ ಮೆರೆದಿದ್ದಾಳೆ.

ಧಾರಲದೇವಿ :

ಆರನೇ ವಿಕ್ರಮಾದಿತ್ಯನ ರಾಣಿ ಧಾರಲದೇವಿಯು ಕ್ರಿ.ಶ 1106ರಲ್ಲಿ ಸುರಪೂರ ತಾಲ್ಲೂಕಿನಲ್ಲಿ ಬೊಮ್ಮನಹಳ್ಳಿಯನ್ನು ಆಳುತ್ತಿದ್ದಳು. ಯಾದಗಿರಿ ಜಿಲ್ಲೆಯ ಸುರಪೂರ ತಾಲ್ಲೂಕಿನ ಬೊಮ್ಮನಹಳ್ಳಿ ಗ್ರಾಮದ ಗುಡ್ಡದಲ್ಲಿ ನೆಲಸಮವಾಗುತ್ತದೆ. ಚಿಕ್ಕ ಗುಡಿಯೊಂದರ ಸಮೀಪದ ಶಾಸನದಲ್ಲಿ ಕಾಲವು ವಿಕ್ರಮ ಕಾಲದ 31ನೆಯ ವರ್ಷದ ವ್ಯಯ ಸಂವತ್ಸರದ ಮಾರ್ಗಶಿರ ಮಾಸದ ಶುದ್ಧ ಏಕಾದಶಿಯ ಗುರುವಾರ

ಎಂದಿದ್ದು, ಇದು ಕ್ರಿ.ಶ 1106ರ ಶಾಸನದಲ್ಲಿ, ಕಲ್ಯಾಣ ಚಾಲುಕ್ಯರ ದೊರೆ ತ್ರಿಭುವನಮಲ್ಲ (6ನೆಯ ವಿಕ್ರಮಾದಿತ್ಯ) ಆಳುವಾಗ ಆತನ ರಾಣಿಯಾದ ಧಾರಲದೇವಿಯು ಬೊಮ್ಮನಹಳ್ಳಿಯನ್ನು ಆಳ್ವಿಕೆ ಮಾಡುತ್ತಿದ್ದಾಗ ಮಹಾಮಂಡಲೇಶ್ವರ ರೇವರಸರ ಸಮ್ಮುಖದಲ್ಲಿ ದಂಡನಾಯಕ ಧುರಿಯಯ್ಯ ಮತ್ತು ದಂಡನಾಯಕ ಭೋಗಿಮಯ್ಯರಿಗೆ ತಾನು ನಡೆಸಿದ ವ್ರತನೋಂಪಿಯ ಸಂದರ್ಭದಲ್ಲಿ 25 ಮತ್ತರು ಗದ್ದೆಯನ್ನು ದಾನವಾಗಿ ನೀಡಿದ ವಿಷಯವು ಈ ಶಾಸನದ ಪ್ರಧಾನವಾದ ಸಂಗತಿಯಾಗಿದೆ.

ಈ ಧಾರಲದೇವಿಯು ಜೈನಮಾರ್ಗಾನುಯಾಯಿಯಾಗಿದ್ದಳು ಎಂಬುದಕ್ಕೆ, ಈಕೆ ವ್ರತನೋಂಪಿಯನ್ನು ಆಚರಿಸಿದ್ದು ಹಾಗೂ ಈಕೆಗೆ ಜಿನಪೂಜಾಲತೆ ಎಂಬ ಬಿರುದು ಇದ್ದುದನ್ನೂ ಗಮನಿಸಬೇಕಾಗಿದೆ. ಈಕೆಯನ್ನು ಶಾಸನವು ಅನವರತ ಪರಮಕಲ್ಯಾಣಾಭ್ಯುದಯ ಸಹಸ್ರಪಳೋಗಭಾಗಿನಿ, ದ್ವಿತೀಯ ಲಕ್ಷ್ಮೀಸಮಾನೆ, ಕಳಹಂಸಯಾನೆ, ಅಗಣ್ಯಪುಣ್ಯಲಾವಣ್ಯಮೂರ್ತಿ, ಗುಣದಂಕಕಾರ್ತಿ, ಮತ್ತ ಮದಕರಿ, ರೂಪವಿದ್ಯಾಧರಿ, ಶೃಂಗಾರ ಸಾರಸರ್ವಸ್ವ, ನಿಜಸಾಮ್ರಾಜ್ಯಲಕ್ಷ್ಮೀ ಅತಿಲೋಕಕಲ್ಪಿತೆ, ಪಲವಿಯ ಕಲ್ಪಲತೆ, ಸಕಳ ಭುವನ ವಿಖ್ಯಾತೆ, ಅಜಿವಿತಯೋಧಶ್ವರ ಧರ್ಮದೇವಪ್ರಿಯಾತ್ಮಜೆ, ಪ್ರತ್ಯಕ್ಷಗಿರಿಜೆ, ರಿಪುರಾಯ ಕಂಠೀರವನ ಕೀರ್ತಿಪತಾಕೆ, ಮಹಾಸತಿತಿಳಕೆ, ಸಮಸ್ತ ಸಂತಃಪುರ ಚೂಡಾಮಣಿ, ಶ್ರೀಮತು ತ್ರಿಭುವನಮಲ್ಲದೇವ ವಿಶಾಳವ್ರಕ್ಷಸ್ಥಳ ನಿವಾಸಿನಿಯೆಂದು ಹೊಗಳಿದೆ. ಈ ಹೊಗಳಿಕೆಗಳು ಈಕೆಯ ರೂಪ, ಲಾವಣ್ಯ, ಐಶ್ವರ್ಯ, ಗುಣ, ವಿದ್ಯೆ, ಸಂಪನ್ನತೆಯನ್ನು ಎತ್ತಿ ಹೇಳುತ್ತದೆ.

ಧಾರಲದೇವಿಯು ವ್ರತನೋಂಪಿಯನ್ನು ಮಾಡಿಸಿದುದರ ಕಾರಣವಾಗಿ ಮಹಾಮಂಡಲೇಶ್ವರನಾದ ರೇವರಸನು ಗೋನಾಲದ ಪ್ರಭು, ಮಹಾಪ್ರಧಾನನಾದ, ಶ್ರೀಕರಣ ದಂಡನಾಯಕನಾದ ಧುರಿಯಯ್ಯನಿಗೆ ಹಾಗೂ ದಂಡನಾಯಕ ಜೋಗಿಮಯ್ಯನಿಗೆ 25 ಮತ್ತರು ಭೂಮಿಯನ್ನು ದಾನವಾಗಿ ನೀಡಿದ್ದಾಳೆ. ಈ ದಾನ ಭೂಮಿಯ ಎಲ್ಲೆಗಳು ಬಟ್ಟೆಗಲ್ಲಿಯಿಂದ ತೆಂಕಪಳ್ಳದವರೆಗೆ ಇದ್ದು ವಿಪುಲವಾದ ನೀರಾವರಿ ಭೂಮಿಯಾಗಿತ್ತು. ಈ ದಾನವು ಅರಸರಿಗೆ ಪವಿತ್ರವಾದದ್ದು, ಇವನ ಅರಸರೇ ನೀಡಿರುವುದರಿಂದ ಇದರ ಆದಾಯದಲ್ಲಿ ತೆರಿಗೆ ಪಡೆಯಬಾರದು ಎಂದಿದೆ.

ಈ ದಾನವನ್ನು ಸೂರ್ಯಚಂದ್ರರು ನಕ್ಷತ್ರ ಆಕಾಶಗಳು ಇರುವವರೆಗೆ ಪಾಲಿಸುವವನು ಪರಮಸುಖವನ್ನು ಹೊಂದುತ್ತಾನೆ. ಇದನ್ನು ಹಾಳು ಮಾಡಿದ ದುರಾತ್ಮನಿಗೆ ನರಕವೇ ಗತಿ, ಗಂಗಾಸಾಗರ ಯಮುನಾ ಸಂಗಮನದಲ್ಲಿ ವಾರಣಾಸಿ ಹಾಗೂ ಗಂಗೆಯಲ್ಲಿ ಆತ್ಮಕುಲ ಹಾಗೂ ಬ್ರಾಹ್ಮಣರನ್ನು ಕೊಂದ ಪಾಪ ಬರುತ್ತದೆ ಎಂದು ದಾಖಲಿಸಿದೆ.

ಶಾಪಾಶಯನದ ನಂತರ ಭೋಗಿಮಯ್ಯನ ಹೊಗಳಿಕೆ ಬರುತ್ತದೆ. ಏನನ್ನಾದರೂ ಬಯಸಿ ಯಾಚಿಸಿ ಬಂದವರಿಗೆ ಈತ ಬಂಧು, ಮನಸೋತು

ನೋಡಿದ ಗಣಿಕಾಜನಕ್ಕೆ ಕೊಬ್ಬಿನಿಂದ ನುಗ್ಗಿದ ವೈರಿಬಳಕ್ಕೆ ಕರ್ಣನಂತೆ ಇರುವವನು. ಈತ ಕಚರೇಂದ್ರನಂತೆ ಮನೋಭವನಂತೆ ಆಕಾಳಮೃತ್ಯು ಎಂದು ಜನರೆಲ್ಲ ಭೋಗಿದೇವನನ್ನು ನೋಡುತ್ತಾರೆ. ಈ ಭೋಗಿದೇವನ ತಲೆಯಿಂದ ಇಳಿಬಿದ್ದ ಕೇಶರಾಶಿ ಕೊಬ್ಬೇರಿದ ಭುಜಗಳು, ಸೊಗಸಾದ ನಡೆ ನೋಡಿದರೆ ಮನ್ಮಥನ ರೂಪಕ್ಕಿಂತ ಮಿಗಿಲು ಎಂದು ಹೊಗಳಲಾಗಿದೆ.

ಜಾಕಲಾದೇವಿ :

ಕದಂಬ ಮನೆತನದ ಚೂಡಾಮಣಿ ತಿಕ್ಕನು ಚಾಲುಕ್ಯ ಚಕ್ರವರ್ತಿ ಭುವನಾಶ್ರಯ, ಪ್ರಥ್ವೀವಲ್ಲಭ, ಮಹಾರಾಜಾಧಿರಾಜ, ಪರಮೇಶ್ವರ, ಪರಮಭಟ್ಟಾರಕ, ಸತ್ಯಾಶ್ರಯ ಕುಳತಿಳಕ ಚಾಳುಕ್ಯಾಭರಣ, ತ್ರಿಭುವನಮಲ್ಲ, ಆರನೇ ವಿಕ್ರಮಾದಿತ್ಯನಿಗೆ ತನ್ನ ಪುತ್ರಿಯಾದ ಚಾಕಲದೇವಿಯನ್ನು ಕೊಟ್ಟು ವಿವಾಹ ಮಾಡಿದ್ದನು. ರಾಣಿ ಜಾಕಲಾದೇವಿಯು ಅರಲು 300ರಲ್ಲಿನ ಇಂಗುಣಿಗೆಯನ್ನು ಆಳುತ್ತಿದ್ದಳು.

ಕಲಬುರ್ಗಿ ಜಿಲ್ಲೆಯ ಚಿತ್ತಾಪೂರ ತಾಲ್ಲೂಕಿನ ಇಂಗಳಗಿಯ ಕ್ರಿ.ಶ 1094ರ ಶಾಸನದಲ್ಲಿ ಈಕೆಯ ಉಲ್ಲೇಖ ಬರುತ್ತಿದ್ದು, ಅಲ್ಲಿ "ಸ್ವಸ್ತ್ಯನವರತ ಪರಮ ಕಲ್ಯಾಣಾಭ್ಯೂದಯ ಸಹಸ್ರಫಳ ಭೋಗ ಭಾಗಿನಿ ಸಕಳದೀನಾನಾಥ ಮನೇಸ್ಯನ್ತರ್ಪಣೋದ್ಯೋಗಿನಿ ಸಮಸ್ತಾನ್ತಜ್ಪುರನಿತಂಬಿನಿ ಕದಂಬ ಚೂಡಾಮಣಿ ಚತುರ್ವಿಧದಾನ ಚಿಂತಾಮಣಿ ರಂಭಾವಿಳಾಸೋಪ ಹಸಿತಲನ್ಮೋರ್ತಿದನ್ವಳಯ ವಿಳಸಿತೋಜ್ವಳ ಕೀರ್ತಿ ಕರಿಕಾಲಪಾರ್ಬತಿ ಅಭಿನವ ಸರಸ್ವತಿ ರಾಯಪೇತೋವಶಿಕರಣ ಕರಣ ವಿದ್ಯಾಧರಿ ಸಕಳಕಳಾಧರಿ ಸೀತಾಧ್ಯನೇಕ ಮಹಾಸತಿ ಜನಪತಿ ಬೃತಾಚಾರ ಶಿಳೋದಾರ ವರ್ಣನ ಕಥಾ ಪ್ರಸಂಗೆ ಜಿನಗನ್ಧೋದಕ ಪವಿತ್ರೀ ಕೃತ್ತೋತ್ತಮಾಗಿ ಶ್ರೀಮರ್ಹತಪರಮೇಶ್ವರ ಚಾರುಚರಣಾರ್ಚನ ವಿನೋದೆ ಮೃಗಮದಾಮೋದೆ ಸಜಹ ಬೆಡಂಗಿ ತಿಕ್ಕನಣುಂಗಿ ಶ್ರೀಮತ್ರಿಭುವನಮಲ್ಲದೇವ ವಿಶಾಲ ವಕ್ಷಸ್ಥಳ ನಿವಾಸಿನಿಯರಪ್ಪ ಶ್ರೀಮಜ್ಜಾಕಲದೇವಿಯರು" ಎಂದು ಪ್ರಶಸ್ತಿಯಲ್ಲಿ ಹೇಳಲಾಗಿದೆ. ಅಂದರೆ ಜಾಕಲಾದೇವಿಯು ಮುಖ್ಯಳೂ, ಕದಂಬ ರಾಜಕುಮಾರಿಯೂ ಚತುರ್ವಿಧ ದಾನಗಳನ್ನು ಮಾಡುವವಳೂ, ಎಂಟು ದಿಕ್ಕುಗಳಿಗೂ ಪಸರಿಸಿದ ಕೀರ್ತಿಯುಳ್ಳವಳು, ಕಲಿಗಾಲದಲ್ಲಿ ಪಾರ್ವತಿಯಂತವಳು, ಅಭಿನವ ಸರಸ್ವತಿಯೂ ಆಗಿದ್ದಳು. ಅರ್ಹತ್ಪರಮೇಶ್ವರನ ಪಾದಕಮಲವನ್ನು ಸದಾ ಆರಾಧಿಸುವವಳೂ ಆಗಿದ್ದಳು. ಈಕೆಯು ಸೀತೆ, ಪಾರ್ವತಿ, ರಂಭೆ, ಭೂರಮೆಯಂತೆ ಉತ್ತಮರಿಗೆ ಕಾಮಧೇನುವಿನಂತೆ ಶೋಭಿಸುತ್ತಿದ್ದಳು ಎಂದಿದೆ.

ಇದರಿಂದ ಜಾಕಲದೇವಿ ಕದಂಬ ವಂಶೀಯಳೆಂಬುದು ಸ್ಪಷ್ಟ. ಜಾಕಲಾದೇವಿಯು ಜೈನ ವ್ರತವನ್ನು ಹಿಡಿದಿರುತ್ತಾಳೆ. ಈಕೆಯ ಪರಿಯಾದ ಚಕ್ರವರ್ತಿ ವಿಕ್ರಮಾದಿತ್ಯನು ನಿನ್ನ ವೃತ್ತ ಕೆಡಿಸುತ್ತೆನೆಂದು ಪ್ರತಿಜ್ಞೆ ಮಾಡಿ ಕೆಡಿಸಲು ಬಂದರೂ ಆ ವ್ರತವನ್ನು ಬಿಡದೆ ಪಾಲಸಿದ ಶ್ರೇಯಸ್ಸು ಈಕೆಯದಾಗಿದೆ. ಇದು ಚಕ್ರವರ್ತಿಯ

ದುರುದೇಶವಲ್ಲ. ಇವರಿಬ್ಬರ ನಡುವಿನ ಪ್ರೀತಿ, ರಸಿಕತನ ಕಾರಣವಾಗಿ ವಿಕ್ರಮಾದಿತ್ಯ ತಮಾಷೆಗಾಗಿ ಆಕೆಯನ್ನು ಕಾಡಿಸಿದ್ದಾನೆ. ಜಾಕಲಾದೇವಿ ಚಕ್ರವರ್ತಿಯೊಂದಿಗೆ ಕಲ್ಯಾಣನಗರದಲ್ಲಿ ಇದ್ದಾಗ ಒಬ್ಬ ವ್ಯಾಪಾರಿಯು "ಮಹುಮಾಣಿಕ್ಯ ದೇವರ" ವಿಗ್ರಹವನ್ನು ಆಸ್ಥಾನಕ್ಕೆ ತಂದು ತೋರಿಸುತ್ತಾನೆ. ಆಗ ವಿಕ್ರಮಾದಿತ್ಯನು ತನ್ನ ರಾಣಿ ಜಾಕಲದೇವಿಯ ಮೊಗವನ್ನು ನೋಡಿ ಜಿನಮೂರ್ತಿಯು ಬಹಳ ಸುಂದರವಾಗಿದೆ. ನಿನ್ನ ಕುಲದೈವವಾಗಿರುವ ಇದನ್ನು ನಿನ್ನಾಳ್ಕೆಯ ಊರಿನಲ್ಲಿ ಪ್ರತಿಷ್ಠಾಪಿಸು ಎಂದು ಹೇಳುತ್ತಾನೆ. ಆಕೆಯು ತನ್ನಾಳ್ಕೆಯ ಊರಾದ ಇಂಗುಣಿಗೆಯಲ್ಲಿ ಜಿನಗೃಹವನ್ನು ಮಾಡಿಸಿ ಈ ಮೂರ್ತಿಯನ್ನು ಪ್ರತಿಷ್ಠಾಪಿಸುತ್ತಾಳೆ. ಇಂದ್ರಸೇನ ಭಟ್ಟಾರಕರ ಪಾದ ತೊಳೆದು ಭೂಮಿ ದತ್ತಿ ಬಿಡುತ್ತಾಳೆ. ಅರಲು 300 ರೊಳಗಿನ ಇಂಗುಣಿಕೆಯನ್ನು ತ್ರಿಭೋಗಾಭ್ಯಂತರ ಸಿದ್ಧಿಯಿಂದ ಆಳುತ್ತಿದ್ದಳು. ಈಕೆಯು ವಿಕ್ರಮಾದಿತ್ಯನೊಂದಿಗೆ ಯುದ್ಧಭೂಮಿಗೆ ತೆರಳುತ್ತಿದ್ದಳು. ಈ ವಿಷಯ ಶಾಸನದಲ್ಲಿ ಚಾಲುಕ್ಯ ಚಕ್ರೇಶ್ವರನ ದಿಗ್ವಿಜಯ ಸಮಯದೋಳ್ಕೀರ್ತಿಲಕ್ಷ್ಮೀಯುಂ ಮುದವದರಿರಾಯ ಮದಮದ್ದರ್ದನ ಸಮಯದೊಳ್ವಿಜಯಲಕ್ಷ್ಮೀಯುಮೇನಿಸಿದ್ದಳು ಎಂದು ಬರುತ್ತದೆ.

ಭಾಗಲಾದೇವಿ :

ಚಾಲುಕ್ಯ ತ್ರಿಭುವನಮಲ್ಲನ ರಾಣಿ ಭಾಗಲಾದೇವಿಯು ಮಣಿಯೂರು 12 ಬಳಿಯ ಕರಂಜಿಗೆ ಗ್ರಾಮವನ್ನು ತ್ರಿಭೂಗಾಭ್ಯಂತರಸಿದ್ಧಿಯಿಂದ ಆಳುತ್ತಿದ್ದಳು.

ಕಲಬುರ್ಗಿ ಜಿಲ್ಲೆಯ ಅಫ್ಜಲಪುರ ತಾಲ್ಲೂಕಿನ ಕರಜಿಗಿ ಗ್ರಾಮದ ದರ್ಗಾ ಹತ್ತಿರವಿರುವ ಗೋಡೆಗೆ ಸೇರಿಸಿರುವ ಕಲ್ಲಿನಲ್ಲಿರುವ ಶಾಸನೋಕ್ತ ಕಾಲವು ಚಾಲುಕ್ಯ ತ್ರೀಭುವನಮಲ್ಲ ವಿಕ್ರಮನ ಆಳ್ವಿಕೆಯ 23ನೆಯ ಬಹುಧಾನ್ಯ, ಪುಷ್ಯ ಬ.3, ಆದಿತ್ಯವಾರ, ಉತ್ತರಾಯಣ ಸಂಗ್ರಮಣವೆಂದಿದ್ದು, ಇದು ಕ್ರಿ.ಶ 1099ರ ಶಾಸನದಲ್ಲಿ, ಜಯಲಕ್ಷ್ಮಿಯಂತಿದ್ದ ಪಾಂಡ್ಯವಂಶದ ಭಾಗಲದೇವಿಯನ್ನು ವಿಶೇಷವಾಗಿ ವರ್ಣಿಸಲಾಗಿದೆ. ಈಕೆಯನ್ನು ಪಟ್ಟಮಹಾದೇವಿಯೆಂದು ಕರೆಯಲಾಗಿದೆ. ಧರ್ಮದ ಆಧಿಕ್ಯದಲ್ಲಿ ಈಕೆ ರೇವಕನಿಮ್ಮಡಿಗೆ ಎರಡಷ್ಟು, ಘಟಾಂತಕಿಗೆ ನೂರ್ಮಡಿಯಷ್ಟು, ಹೆಸರಾಂತ ಅತ್ತಿಮಬ್ಬೆ ಐನೂರಷ್ಟು, ಜಿನೇಂದ್ರ ಪಾದಪೂಜಿಸುವ ರಾಜಪತ್ನಿಯರಿಗೆ ಸಾವಿರದಷ್ಟು ಈಕೆ ಮೇಲು ಎಂದು ಹೇಳಿದೆ.

ಭಾಗಲದೇವಿಯು ಮಣಿಯೂರು 12 ಬಳಿಯ ಕರಂಜಿಗೆ ಗ್ರಾಮವನ್ನು ತ್ರಿಭೂಗಾಭ್ಯಂತರಸಿದ್ಧಿಯಿಂದ ಆಳುತ್ತಿದ್ದಾಗ ಅಲ್ಲಿ ಸುಂದರವಾದ ಬಸದಿಯನ್ನು ಮಾಡಿಸಿ, ಅದಕ್ಕೆ ಭೂಮಿ, ತೋಟ, ಗಾಣವನ್ನು ದಾನವಾಗಿ ನೀಡಿದಳು. ಈ ದಾನವನ್ನು ಸದ್ವ್ರತಿಗಳೂ, ಮಹಾವಾದಮಲ್ಲರು ಎಂಬ ಬಿರುದುಗಳನ್ನು ಧರಿಸಿದ್ದ ವಿಮಳಚಂದ್ರಪಂಡಿತ ದೇವರ ಕಾಲನ್ನು ತೊಳೆದು ನೀಡಿದಳೆಂದು ತಿಳಿದು ಬರುತ್ತದೆ.

ತ್ರೈಲೋಕ್ಯ ಮಹಾದೇವಿ :

ಕ್ರಿ.ಶ 1066ರ ಶಾಸನದಲ್ಲಿ ತ್ರೈಲೋಕ್ಯಮಲ್ಲನ ಕಾಲದಲ್ಲಿ ಕದಂಬ ವಂಶದ

ನಾಗವರ್ಮರಸ ಕರಡಿಕಲ್–300ರ ಬಳಿಯ ನವಿಲೆಯಲ್ಲಿ ದಾನ ನೀಡಿದ್ದಾನೆ. ಇದೇ ವರ್ಷ ಇನ್ನೊಂದು ಶಾಸನದಲ್ಲಿ ತ್ರೈಲೋಕ್ಯಮಲ್ಲನ ಪತ್ನಿ ತ್ರೈಲೋಕ್ಯಮಹಾದೇವಿ ನಿಟ್ಟರವೇ–70ರ ಬಳಿಯ ಅಗ್ರಹಾರ ಮುಕ್ಕುಂದೆಯನ್ನು ತ್ರಿಭೋಗಾಭ್ಯಂತರ ಆಳುತ್ತಿದ್ದಂತೆ ಹೇಳಿದೆ.

ಕಲ್ಯಾಣ ತ್ರೈಲೋಕ್ಯಮಲ್ಲನು ರಾಜ್ಯಭಾರ ಮಾಡುತ್ತಿದ್ದಂತೆ ಹೇಳಿದೆ. ಇವನ ಪತ್ನಿ ತ್ರೈಳೋಕ್ಯಮಹಾದೇವಿ. ಇವಳನ್ನು ಶಾಸವು ಸಹಸ್ರಾಫಟಿ ಭೋಗಭಾಮಿನಿ, ದ್ವಿತೀಯ ಲಕ್ಷ್ಮೀಸಮಾನೆ, ಪ್ರತ್ಯಕ್ಷ ಪಾರ್ವತಿ, ಅಗ್ರಮಹಿಷಿ ಮುಂತಾಗಿ ಕರೆದಿದೆ. ಈಕೆ ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದಂತೆ ಹೇಳಿದೆ.

ನಿಟ್ಟರವೆ ಎಪ್ಪತ್ತರ ಬಳಿಯ ಅಗ್ರಹಾರ ಮುಕ್ಕುಂದೆಯನ್ನು ತ್ರಿಭೋಗ್ಯಾಭ್ಯಂತರವಾಗಿ ಈಕೆ ಆಳುತ್ತಿದ್ದು, ತುಂಗಭದ್ರಾ ನದಿಯ ತೀರದ ಕಪಾಳೇಶ್ವರ ದೇವರಿಗೆ 12 ಮತ್ತರು ಕರಿಯ ಭೂಮಿಯನ್ನು ಸೆಟಿಕಬ್ಬೆಯ ಗಡಿಂಬದ ಕೋಲಿನಿಂದ ಅಳೆದು ದಾನ ನೀಡುತ್ತಾಳೆ. ಇದರೊಂದಿಗೆ ಒಂದು ತೋಟ ಮತ್ತು ನಂದಿದೀಪಕ್ಕಾಗಿ ಒಂದು ಗಾಣವನ್ನು ದಾನ ಬಿಡುತ್ತಾಳೆ. ಬಹಳ ಸುಂದರವಾದ ಲಿಪಿಯಲ್ಲಿರುವ ಈ ಶಾಸನದ ಕೊನೆಯ ಭಾಗ ತ್ರುಟಿತವಾಗಿದೆ.

ಮಲೆಯಮತಿ :

ಆರನೇ ವಿಕ್ರಮಾದಿತ್ಯನ ಎರಡನೆಯ ಪಟ್ಟದರಾಣಿಯೇ ಮಲೆಯಮತಿದೇವಿ. ಈಕೆಯು ಕ್ರಿ.ಶ 1107ರಲ್ಲಿ ಪಿರಿಯರಸಿಪಟ್ಟ ಮಹಾದೇವಿ ಯಾಗಿದ್ದುದು ದಿಗ್ಗಾವ ಶಾಸನದಿಂದ ತಿಳಿದು ಬರುತ್ತದೆ. ಈಕೆಯು 1112ರ ವರೆಗೆ ಪಟ್ಟಮಹಾದೇವಿಯಾಗಿದ್ದಳು.

ವಿಕ್ರಮಾದಿತ್ಯನ 'ಪಿರಿಯರಸಿ ಪಟ್ಟಮಹಾದೇವಿ'ಸ್ಥಾನವನ್ನು ಅಲಂಕರಿಸಿದವರಲ್ಲಿ ಮಲೆಯಮತಿದೇವಿ ಒಬ್ಬಳು. ಗುಲಬರ್ಗಾದ ದಿಗ್ಗಾವ ಕ್ರಿ.ಶ 1107ರ ಶಾಸನದಲ್ಲಿ ಈಕೆಯನ್ನು 'ಶ್ರೀಮದ್ರಾಯ ಸರ್ವಜ್ಞನರ್ದ್ಧಾಂಗಿ' 'ಶ್ರೀಮತ್ಪಿರಿಯರಸಿ ಪಟ್ಟಮಹಾದೇವಿ ಶ್ರೃ(ಶ್ರೀ)ಮದಭಿನವ ಸರಸ್ವತಿ ಮಲೆಯಮತೀದೇವಿ' ಎಂದು ಕರೆಯಲಾಗಿದೆ. 'ದಗ್ಘವಿಗೆ'ಯನ್ನು ಆಳುತ್ತಿದ್ದ ಈಕೆಯ ಆಜ್ಞೆಯ ಮೇರೆಗೆ ಮಹಾಮಂಡಳೇಶ್ವರ ಮನ್ನೆಯ ಲೋಕರಸನು ಚಾಲುಕ್ಯ ವಿಕ್ರಮ ವರ್ಷದ 32ನೆಯ ಸರ್ವ್ವಜಿತಸಂವತ್ಸರದ ಮಾರ್ಗಶಿರ ಅಮವಾಸ್ಯೆ ಸೋಮವಾರ ಸೂರ್ಯಗ್ರಹಣದ ದಿವಸ ದಾವಣಭಟ್ಟರು ಮಾಡಿಸಿದ ಸ್ವಯಂಭೂ ಸೋಮೇಶ್ವರದೇವರಿಗೆ 'ಇದೆಮ್ಮ ಮನೆಯ ಧರ್ಮವೆಂದನುರಾಗದಿಂ' ಭೂಮಿ ದಾನಬಿಟ್ಟ ಉಲ್ಲೇಖವಿದೆ.

ಬಳ್ಳಾರಿಯ ಚಿನ್ನತುಂಬಳಮ್ ಕ್ರಿ.ಶ 31 ಡಿಸೆಂಬರ್ 1107ರ ಶಾಸನದಲ್ಲಿ ಈಕೆಯ ಪ್ರಶಸ್ತಿಯನ್ನು "ಸ್ವಸ್ತ್ಯನವರತ ಪರಮ ಕಲ್ಯಾಣಾಭ್ಯುದಯ ಸಹಸ್ರಫಳಭೋಗಭಾಗಿನಿ ದ್ವಿತೀಯಲಕ್ಷ್ಮೀಸಮಾನೆ ಕಳಹಂಸಯಾನೆ ಯನವ ರತವಿತ್ತ

ವಿತರಣವಿಸಿದ್ದ ದೀನಾನಾಥವಂದಿಬ್ರಿಂದಸಂತರ್ಪ್ಪಣಿ ಪಾತ್ರ ಮುಖದರ್ಪ್ಪಣೆ ಚಾಲುಕ್ಯ ರಾಜ್ಯ ಮರಾಜ್ಯಾಭ್ಯೂದಯ ಶುಭಸೂಚನಾನೇಕ ಶುಭಲಕ್ಷಣಲಕ್ಷಿತಾಂಗಿ ರಾಯಸರ್ವಜ್ಞರ್ದ್ಧಾಂಗಿ ಮ್ರಿದ ಮಧುರವಚನರಚನೆ ಚತುರಕಳಾಳಾಪೆ ಗೊತ್ರರತ್ನ ಪ್ರದೀಪೆ ಶ್ರೀಮತು ಪಿರಿಯರಸಿ ತ್ರಿಭುವನಮಲ್ಲ ಪಟ್ಟಮಹಾದೇವಿ ಮಲೆಯಮತಿದೇವಿಯರು"ಎದು ಕೊಡಲಾಗಿದೆ.

ಬಳ್ಳಾರಿ ಜಿಲ್ಲೆಯ ಚಿನ್ನತುಂಬಳಮ್‌ನ ಕ್ರಿ.ಶ 1107ರ ಶಾಸನದಲ್ಲಿ ಈಕೆ ಸಿಂದವಾಡಿ ನಾಡಿನ ಅಗ್ರಹಾರ ತುಂಬಳವನ್ನು ಆಳುತ್ತಿದ್ದಳೆಂದು ಹೇಳಲಾಗಿದೆ. ಶ್ರೀಧರಯ್ಯ ದಂಡನಾಯಕನ ಭಿನ್ನಪದ ಮೇರೆಗೆ ತುಂಬಳದ ಮಹಾಜನರಿಗೆ 'ಧರ್ಮವತ್ತಳೆ'ಯಾಗಿ ಸಿದ್ಧಾಯದ ಪೊನ್ನಿನಲ್ಲಿ ವ್ಯಾಖ್ಯಾನದ ಉಪಾಧ್ಯಾಯರಿಗೆ ಎಂಟು ಗದ್ಯಾಣ, ಪುರಾಣಭಟ್ಟರಿಗೆ ಎಂಟುಗದ್ಯಾಣ, ಋಗ್ವೇದ, ಯಜುರ್ವೇದ ಎರಡು ಖಂಡಿಕೆಯ ಉಪಾಧ್ಯಾಯರಿಗೆ 6 ಗದ್ಯಾಣ, ಅಗ್ನಿಷ್ಟಗೆಯ ಬ್ರಾಹ್ಮಣನಿಗೆ ಎರಡು ಗದ್ಯಾಣ ಒಟ್ಟು 30 ಗದ್ಯಾಣವನ್ನು ಧಾರಾಪೂರ್ವಕವಾಗಿ ಕೊಡುತ್ತಾಳೆ.

ಹೈಹಯ ವಂಶದ ಮಹಾಮಂಡಳೇಶ್ವರ ಅಯ್ಯಣದೇವನು ಈಕೆಯ ಸೇವಕನೆಂದು ಹೇಳಿಕೊಂಡಿದ್ದಾನೆ. ಮನ್ನೆಯ ಲೋಕರಸನೂ ಈಕೆಯ ಸೇವಕನಾಗಿದ್ದನೆಂದು ಈ ಹಿಂದೆಯೇ ಹೇಳಲಾಗಿದೆ. ಇದರಿಂದ ಈ ಮಲೆಯಮತಿದೇವಿಯು ಹೈಹಯ ವಂಶದ ರಾಜಕುಮಾರಿಯಾಗಿದ್ದಿರಬೇಕು.

ಆಳಂಪುರದ ಶಾಸನದ ಕನ್ನೆ 300ರಲ್ಲಿಯ ತುಂಗಭದ್ರ ದಡದ ಮೇಲಿದ್ದ ಚಿಲ್ಲಾರ ಎಂಬ ಗ್ರಾಮವನ್ನು ಬ್ರಹ್ಮೇಶ್ವರದೇವರಿಗಾಗಿ ಸ್ಥಾನಪತಿಯಾದ ಮೋನಿಪಂಡಿತನಿಗೆ ಮಲೆಯಮತಿದೇವಿಯು ಧಾರಾಪೂರ್ವಕವಾಗಿ ಕೊಟ್ಟಿದನ್ನು ಹೇಳುತ್ತದೆ. ಇದೇ ಗ್ರಾಮದ ಇನ್ನೊಂದು ಶಾಸನದಲ್ಲಿ ಆಯಜೆ 300ರಲ್ಲಿದ್ದ ಊಣ್ಡವೇಲಿ ಚಾರುವೇಲಿ, ಗುಡಿಯೂರು ಮತ್ತು ಕದಂಬೂರುಗಳನ್ನು ಕನ್ನೆ 300ರಲ್ಲಿ ಒಂದು ಗ್ರಾಮವನ್ನು ಮಲೆಯಮತಿದೇವಿಯು ಇದೇ ಬ್ರಹ್ಮೇಶ್ವರದೇವರಿಗಾಗಿ ಬಿಟ್ಟ ವಿವರ ಇದೆ. ಇನ್ನೊಂದು ತ್ರುಟಿತ ಶಾಸನದಲ್ಲಲಿಯೂ ಈಕೆ ತೋಟ, ಭೂಮಿ ಮೊದಲಾದುದನ್ನು ಇದೆ ಬ್ರಹ್ಮೇಶ್ವರದೇವರಿಗೆ ಕೊಟ್ಟ ಮಾಹಿತಿ ಇದೆ.

ಆರನೇ ವಿಕ್ರಮಾದಿತ್ಯ ಮತ್ತು ರಾಣಿ ಮಲೆಯಮತಿದೇವಿಯ ಹೊಟ್ಟೆಯಿಂದ ಮೈಳಲದೇವಿ ಎಂಬು ಪುತ್ರಿ ಜನಿಸಿದ್ದಳು. ಈಕೆಯನ್ನು ಕದಂಬ ಜಯಕೇಶಿಗೆ ಮದುವೆ ಮಾಡಿಕೊಡಲಾಗಿತ್ತು. ಇವಳನ್ನು ಮೈಳಲಮಹಾದೇವಿ ಎಂತಲು ಕರೆಯುತ್ತಾರೆ.

ಮೈಳಲದೇವಿಯ ಮದುವೆಯು ಕ್ರಿ.ಶ 1104ಕ್ಕೆ ಮೊದಲು ನಡೆದಿದೆ. ಏಕೆಂದರೆ ಕ್ರಿ.ಶ 11 ಜನೆವರಿ 1104ರ ಕನಕೂರು ಶಾಸನದಲ್ಲಿ ಮದುವೆಯಾದ ಮೇಲೆ ವಿಕ್ರಮಾದಿತ್ಯನು ಜಯಕೇಶಿಗೆ ಶುಭವಾಗಲೆಂದು ಹಾರೈಸಿ ಸೌರಾಷ್ಟ್ರದ ಸೋಮನಾಥ ದೇವರ ಧೂಪಕ್ಕಾಗಿ ಕುಂದೂರು 500ರಲ್ಲಿಯ ಕನಕಾಪೂರವನ್ನು ಜಯಕೇಶಿಯ

ಕೈಯಿಂದ ದಾನ ಬಿಡಿಸುತ್ತಾನೆ. ಗೋಲಿಹಳ್ಳಿ 24 ಫೆಬ್ರವರಿ 1176ರ ಶಾಸನದಲ್ಲಿ ಮೈಳಲದೇವಿಯ ಕುರಿತು ಹೇಳುತ್ತಾ, "ಜನಕಂ ಚಾಲುಕ್ಯ ಪೆರ್ಮಾಡಿನ್ರಿಪಾಳಂ ಮಲಯುಮತಿ ಮಹಾದೇವಿ ಜಗ(ಜನನುತೆ ಚಿತ್ತ) ತಾಯಿತನಗೆನೆ ಮೈಳಲ(ದೇವಿ)ಯನ್ನು ನೋನ್ತರುಮೊಳರ್"ಎಂದು ಹೇಳಲಾಗಿದೆ. ಇದರಿಂದ ಮೈಳಲದೇವಿಯ ತಾಯಿ ಮಲೆಯಮತಿಮಹಾದೇವಿ ತಂದೆ ವಿಕ್ರಮಾದಿತ್ಯನೆಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಈ ಮೈಳಲದೇವಿ ಮತ್ತು ಜಯಕೇಶಿಯ ಪುತ್ರರೇ ವೀರಪೆರ್ಮಾಡಿ ಮತ್ತು ವಿಜಯಾದಿತ್ಯರು.

ಸಿದ್ದಾಪುರ ಶಾಸನವು "ಶ್ರೀಮಜ್ಜಯಕೇಸಿದೇವರುಂ ಮೈಳಲಮಹಾದೇವಿಯರುಂ ಬೊಗೂರ ನೆಲೆವಿಡಿನೊಳು ಸುಖಸಂಖತಾ ವಿನೋದದಿಂ ರಾಜ್ಯಂಗೆಯುತ್ತಮಿರಲು ಎಂದಿದೆ. ಇದರಿಂದ ಇವಳು ಆಡಳಿತ ನಡೆಸುತ್ತಿರುವುದು ತಿಳಿದು ಬರುತ್ತದೆ.

ಗೋವೆಯ ಕದಂಬರ ಎರಡನೆಯ ಜಯಕೇಶಿಯು ಯುದ್ದೋತ್ಸಾಹಿ, ರಾಜ್ಯ ವಿಸ್ತಾರದಲ್ಲಿ ಇವನ ಶ್ರಮದ ಜೊತೆಗೆ ಚಾಲುಕ್ಯ ಚಕ್ರವರ್ತಿಯಾದ ಆರನೆಯ ವಿಕ್ರಮಾದಿತ್ಯನ ಬೆಂಬಲವೂ ಇತ್ತು. ಕ್ರಿ.ಶ 1120ರಲ್ಲಿ ಗೊವಲದೇವನ ಆಳ್ವಿಕೆಗೆ ಕೊಂಕಣ 900, ಪಲಸಿಗೆ 12000, ಕವಡಿದ್ವೀಪ 1,25,000 ವಿಭಾಗಗಳು ಒಳಪಟ್ಟಿದ್ದವು. ಎರಡನೆಯ ಜಯಕೇಶಿಯ (ಕ್ರಿ.ಶ 1125– ಕ್ರಿ.ಶ 1147) ಶಕ್ತಿ ಸಾಮರ್ಥ್ಯಗಳನ್ನು ನೋಡಿ ಮೆಚ್ಚಿದ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನು ತನ್ನ ಮಗಳಾದ ಮೈಳಲದೇವಿಯನ್ನು ಕೊಟ್ಟು ವಿವಾಹ ಮಾಡುತ್ತಾನೆ. ಈ ವಿವಾಹ ಕ್ರಿ.ಶ 1004ಕ್ಕಿಂತ ಪೂರ್ವದಲ್ಲಿಯೇ ನಡೆದಿರಬೇಕು. ಈ ಜಯಕೇಶಿಗೆ ಒಳ್ಳೆಯದಾಗಲಿಯೆಂದು ವಿಕ್ರಮಾದಿತ್ಯನು ಸೌರಾಷ್ಟ್ರದ ಸೋಮನಾಥನಿಗೆ ಕುಂದೂರು 500ರಲ್ಲಿಯ ಕನಕಾಪೂರವನ್ನು ದೂಪಕ್ಕಾಗಿ ಜಯಕೇಶಿಯ ಕೈಯಿಂದ ಬಿಡಿಸುತ್ತಾನೆ. ಈ ವಿಷಯ ಕನಕೂರು ಕ್ರಿ.ಶ 1004ರ ಶಾಸನದಲ್ಲಿ "ಶ್ರೀಸೌರಾಷ್ಟ್ರ ವಿಷಯ ಭೂಷಣನಪ್ಪ ಶ್ರೀ ಸೋಮನಾಥದೇವರ ಧೂಪಕ್ಕಂ ಕೊಟ್ಟು ದೇವರ ಬ್ರಹ್ಮಪುರಿಯಾಗಿ ನಡವುತ್ತಿರಲು ಶ್ರೀಮತು ಕೊಂಕಣಾಧಿಪತಿ ಶ್ರೀಮನ್ಮಹಾಮಂಡಳೇಶ್ವರಂ ಜಯಕೇಸಿ ದೇವರ ವಿವಾಹೋತ್ಸವ ಕಾಲದಲ್ಲಿ ಶ್ರೀಮತ್ತಿರಿಭುವನಮಲ್ಲದೇವರು ಕುಂದೂರೈನೂಱಱ ಬಳಿಯ ಬಾಡಂ ಕನಕಾಪುರವಂ ಶ್ರೀಸೌರಾಷ್ಟ್ರದ ಶ್ರೀಸೋಮನಾಥ ದೇವರ ಧೂಪಕ್ಕೆ ಕೊಟ್ಟೆವದು ನಿನ್ನ ಧರ್ಮ್ಮವಾಗಿ ನೀ ಕುಡೆಂದು ಬೇಡಲು ಬರವೊಳ್ಳಿತ್ತೆಂದಾ ದೇವರಿಗಾರಗಿಯಲು ಧಾರಾಪೂರ್ವ್ವಕಂ ಮಾಡಿ ಜಯಕೇಸಿದೇವ ರಾಮಚಂದ್ರಾರ್ಕ್ಕತಾರಂಬರಂ ಕೊಟ್ಟರು"ಎಂದು ತಿಳಿಸುತ್ತದೆ. ಇದರಿಂದ ಎರಡನೇಯ ಜಯಕೇಶಿಯು ವಿಕ್ರಮಾದಿತ್ಯನ ಪ್ರೀತಿಯ ಅಳಿಯನಾಗಿದ್ದನೆಂದು ಗೊತ್ತಾಗುತ್ತದೆ.

ಗೋಲಿಯಳ್ಳಿ ಕ್ರಿ.ಶ 1176ರ ಶಾಸನದಲ್ಲಿ ಮೈಳಲದೇವಿಯನ್ನು ಕುರಿತು "ಜನಕಂ ಚಳುಕ್ಯ ಪೆರ್ಮಾಡಿ ನೃಪಾಳಂ ಮಲಯಮತಿ ಮಹಾದೇವಿ ಜಗ (ಜನನುತೆ

ಚಿತ್ತ} ತಾಯಿತನಗೆನೆ ಮೈಳಲ(ದೇವಿ)ಯನ್ನು ನೋನ್ತರುಮೊಳರೆ"ಎಂದು ಹೇಳಲಾಗಿದೆ.

ಮುಮ್ಮಿಗಟ್ಟಿ ಕ್ರಿ.ಶ 1124ರ ಶಾಸನದಲ್ಲಿ ಎರಡನೆಯ ಜಯಕೇಶಿಯು ಪಿರಿಯರಸಿ ಮೈಳಲಮಹಾದೇವಿಯೊಂದಿಗೆ ಆಳುತ್ತಿದ್ದದ್ದನ್ನು ಹೇಳುತ್ತದೆ. ಇವರೀರ್ವರಿಗೆ ಶಿವಚಿತ್ತ ಪೆರ್ಮಾಡಿ, ವಿಷ್ಣುಚಿತ್ತ ಪೆರ್ಮಾಡಿ ಎಂಬ ಇಬ್ಬರು ಪುತ್ರರು, ಎರಡನೆಯ ಜಯಕೇಶಿಯ ತರುವಾಯ ಅವನ ಪುತ್ರ ವಿಷ್ಣು ಚಿತ್ತ ಪೆರ್ಮಾಡಿ (ಕ್ರಿ.ಶ 1147–87) ಆನಂತರ ಇವನ ಪುತ್ರ ಮೂರನೆಯ ಜಯಕೇಶಿ (ಕ್ರಿ.ಶ 1187–1225) ಆಳುತ್ತಾನೆ. ಇವರಿಬ್ಬರೂ ಚಾಲುಕ್ಯ ಮನೆತನದ ಕೊನೆಯ ಚಕ್ರವರ್ತಿ ನಾಲ್ಕನೆಯ ಸೋಮೇಶ್ವರನಿಗೆ ಆಶ್ರಯಕೊಟ್ಟಿದಲ್ಲದೆ ಅವನನ್ನು ಬೆಂಬಲಿಸುತ್ತಾರೆ.

ಜಯಕೇಶಿಯ ಪ್ರಶಸ್ತಿ ಧಾರವಾಡ ಕನಕೂರು ಕ್ರಿ.ಶ 1104ರ ಶಾಸನದಲ್ಲಿ ಈ ಮಲಯಮತಿಯು ಬಮ್ಮಟಹಾಳ ಗ್ರಾಮದಲ್ಲಿ ಕೆಲವು ತೆರಿಗೆಗಳನ್ನು ಬಿಡುತ್ತಾಳೆ. ಹೈಹಯ ವಂಶದ ಅಯ್ಯಣದೇವನು ಈಕೆಯ ಪಾದದಂಕಕಾರನೆಂದು ಹೇಳಿಕೊಂಡಿದ್ದಾನೆ. ಈ ಮಲಯಮತಿಯು ಸುರಪುರ ತಾಲೂಕಿನ ಹುಣಸಿ ಗ್ರಾಮದ ಶಾಸನದಲ್ಲಿಯೂ ಉಲ್ಲೇಖಿಳಾಗಿದ್ದಾಳೆ.

ಮಹಾರಾಣಿ ಮಲಯಮತಿದೇವಿಯ ಸೇವಕನಾದ ಅಯ್ಯಣದೇವನು ಬಮ್ಮವಿಹಾಟಿ ಗ್ರಾಮದ ಪ್ರಭುಗಳು ಮತ್ತು ಗಾವುಂಡುಗಳಿಗೆ ಮೂಲಿಗದೆರೆ ತೆಗೆದು ಹಾಕಿ ಭೂಮಿಯನ್ನು ಕೊಡುತ್ತಾನೆ.

ಸಾವಳದೇವಿ :

ಕಲ್ಯಾಣ ಕಲಚುರಿಗಳ ಅರಸನಾದ ಜೋಗಮ ಮತ್ತು ಆತನ ರಾಣಿ ತಾರಾದೇವಿಯ ಮಗಳಾದ ಸಾವಳದೇವಿಯನ್ನು ಕಲ್ಯಾಣ ಚಾಲುಕ್ಯ ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನಿಗೆ ಕೊಟ್ಟು ವಿವಾಹ ಮಾಡಲಾಗಿತ್ತು. ಈ ಸಾವಳದೇವಿಯು ನರೆಯಂಗಲ್ಲು ಅಗ್ರಹಾರವನ್ನು ಆಳುತ್ತಿದ್ದುದು ತಿಳಿದು ಬಂದಿದೆ.

ಕಲ್ಯಾಣ ಚಾಲುಕ್ಯರ ಪೂರ್ವಜರಾದ ಬಾದಾಮಿ ಚಾಲುಕ್ಯರಿಗೂ ಉತ್ತರದ ಕಲಚುರಿ ಅರಸರ ನಡುವೆ ಸಂಘರ್ಷದ ಸಂಬಂಧವಿದ್ದುದನ್ನು ಐಹೊಳೆಯ ಕ್ರಿ.ಶ 1035ರ ಶಾಸನ ಹೇಳುತ್ತದೆ. ಬಾದಾಮಿಯ ಚಾಲುಕ್ಯ ಚಕ್ರವರ್ತಿ ಮಂಗಳೇಶನು ಕೈಕೊಂಡ ದಿಗ್ವಿಜಯ ಯಾತ್ರೆಯಲ್ಲಿ ಕಲಚುರಿ ಮನೆತನದ ಬುದ್ಧರಾಜನನ್ನು ಸೋಲಿಸಿದ್ದಾನೆ. ಹೀಗೆ ಚಾಲುಕ್ಯರಿಗೂ ಕಲಚೂರಿಯರಿಗೂ ಸಂಬಂಧ ಪ್ರಾರಂಭವಾಗಿದ್ದೇ ಸಂಘರ್ಷದಲ್ಲಿ. ಅನಂತರ ಇದು ಸ್ನೇಹ ಮತ್ತು ವೈವಾಹಿಕ ಸಂಬಂಧಗಳಿಗೆ ತಿರುಗಿಕೊಳ್ಳುತ್ತದೆ. ಅದು ಅಂತ್ಯಗೊಂಡದ್ದು ಸಂಘರ್ಷದಲ್ಲಿಯೇ. ಮಂಗಳೇಶನು ಕಲಚೂರಿ ಅರಸನನ್ನು ಸೋಲಿಸಿದುದನ್ನು ಕ್ರಿ.ಶ634 ರ ಐಹೊಳೆಯ ಶಾಸನದಲ್ಲಿ "ಸ್ಫುರನ್ಮಯೂಖೈರಸಿದೀಪಿಕಾ ಸತ್ಯೈಃ ಶ್ರೀಲಲನಾಪರಿಗ್ರಹಮ್"ಎಂದು

ಬರುತ್ತದೆ. ಬುದ್ಧರಾಜನನ್ನು ಮಂಗಳೇಶ ಸೋಲಿಸಿ ಭಾಗೀರಥಿ ನದಿಯ ದಂಡೆಯ ಮೇಲೆ "ಶಕ್ತಿ ಜಯಸ್ತಂಭ"ನಿಲ್ಲಿಸಿದ ವಿವರ ಮಹಾಕೂಟದ ಕ್ರಿ.ಶ 595 ರ ಸ್ತಂಭ ಶಾಸನ ಹೇಳುತ್ತದೆ. ಶಾಸನದಲ್ಲಿ "ಸಗುತ್ತರಾದಿಗ್ವಿಜಯ ವಿಕ್ರ(ಕೃ)ತಭೃದ್ವೀರ್ಭ್ಯದ್ವ ನೃಪ ಮವಜಿತ್ಯ ತಸ್ಯ ವಸುಮಶೇಷಮುಪಗೃಹ್ಯ ಭಾಗೀರಥಿಕುಲೆ ಶಕ್ತಿ ಜಯಸ್ತಮ್ಭ ನಿರೂಪಣೌತ್ಸುಕ್ಯೆನ ಮನಸಾ ಧರ್ಮ್ಮ ಜಯಸ್ತಮ್ಭಶಕ್ತಿ"ಎಂದು ಬರುತ್ತದೆ.

ಆನಂತರ ಕಲಚುರಿ ಮನೆತನದವರು ಚಾಲುಕ್ಯರೊಂದಿಗೆ ಸ್ನೇಹದ ಸಂಬಂಧವೇರ್ಪಡಿಸಿಕೊಳ್ಳುತ್ತಾರೆ. ಇದು ನಂತರ ವೈವಾಹಿಕ ಸಂಬಂಧಕ್ಕೆ ತಿರುಗಿಕೊಳ್ಳುತ್ತದೆ. ಕಲ್ಯಾಣ ಚಾಲುಕ್ಯ ಚಕ್ರವರ್ತಿ ಒಂದನೆಯ ಸೋಮೇಶ್ವರನ ಕಾಲದಿಂದ ಮೇಲ್ಮಟ್ಟಕ್ಕೆ ಬಂದ ಕರ್ನಾಟಕದ ಕಲಚುರಿಗಳು ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ವೈವಾಹಿಕ ಸಂಬಂಧಗಳನ್ನೇರ್ಪಡಿಸಿಕೊಂಡು ಮಹಾ ಮಂಡಳೇಶ್ವರರೆನಿಸಿಕೊಂಡರು. ಜೋಗಮನ ತಂದೆ ಕನ್ನಮನು ಕಲ್ಯಾಣ ಚಾಲುಕ್ಯರ ದಂಡಯಾತ್ರೆಗಳಲ್ಲಿ ಭಾಗವಹಿಸಿ ಚಕ್ರವರ್ತಿಯ ಮನ್ನಣೆಗೆ ಪಾತ್ರನಾಗಿ ಕಲಚುರಿ ಮನೆತನವನ್ನು ಮೇಲ್ಮಟ್ಟಕ್ಕೆ ಏರಿಸುತ್ತಾನೆ. ಚಡಚಣದ ಕ್ರಿ.ಶ 1067ರ ಶಾಸನದಲ್ಲಿ ಮಹಾಮಂಡಳೇಶ್ವರ ಕನ್ನಮರಸನು 'ಲಾಳಚೋಳಬಳ ಜಲಧಿ ಬಡವಾನಳ'ನೆನಿಸಿ ಮಂಗಳವೇಡದಲ್ಲಿ ಆಳುತ್ತಿದ್ದನೆಂದು ಹೇಳಲಾಗಿದೆ. ಹನ್ನೆರಡು ಜನ ಮನ್ನೆಯರನ್ನು ಕೊಂದು 57 ಕಾಳಗಗಳನ್ನು ಗೆದ್ದುದನ್ನು "ಮುಳಿಸಿ ಮುಯ್ಯೊಳ್ ಸೂಳ್ದು ಕ್ಷತ್ರಿಯರನಜಿಸಿ ಕೊಂದು ಬಾಹಾಬಳದಿಂದನಯ್ವತ್ತೇಟ್ಕಾಳೆಗಮನದಟನಿಂ ಗೆಲ್ದು ನಿವ್ವಾ೯ಕುಳಂ ಮಂಗಳಿವೇಡಂ ಬಿಡುದಾಣಂ ತನಗೆನೆ ಜಸಮಂ ತಾಳ್ದಿದಂ ಕ್ರಿಷ್ಣರಾಜ"ಎಂದು ಅದೇ ಶಾಸನ ವಿವರಿಸುತ್ತದೆ. ಇದರಿಂದ ಕಲ್ಯಾಣ ಚಾಲುಕ್ಯರ ಚಕ್ರವರ್ತಿಗಳ ಪರವಾಗಿ ವೆಂಗಿಮಂಡಳದಲ್ಲಿ, ಗುಜರಾತಿನಲ್ಲಿ ಮತ್ತು ದಕ್ಷಿಣದ ಚೋಳರೊಂದಿಗೆ ಯುದ್ಧಮಾಡಿ ಚಕ್ರವರ್ತಿಯ ಪ್ರೀತಿಗಳಿಸಿ ಸ್ನೇಹ ಸಂಬಂಧವನ್ನು ವೃದ್ಧಿಗೊಳಿಸಿದ್ದಾನೆ.

ಈ ಸ್ನೇಹ ಸಂಬಂಧವನ್ನು ಮುಂದೆ ಬಂದ ಕನ್ನಮನ ಪುತ್ರ ಜೋಗಮರಸನು ಮುಂದುವರೆಸಿಕೊಂಡು ಹೋಗಿದ್ದಲ್ಲದೆ ಅದನ್ನು ವೈವಾಹಿಕ ಸಂಬಂಧಕ್ಕೆ ತಿರುಗಿಸುತ್ತಾನೆ. ತನ್ನ ಪುತ್ರಿಯಾದ ಸಾವಳದೇವಿಯನ್ನು ಚಕ್ರವರ್ತಿ ಆರನೆಯ ವಿಕ್ರಮಾದಿತ್ಯನಿಗೆ ಕೊಟ್ಟು ವಿವಾಹ ಮಾಡಿದ್ದಾನೆ. ನರೇಗಲ್ಲಿನ ಶಾಸನದಲ್ಲಿ ಈ ವಿಷಯ ಬರುತ್ತಿದ್ದು, ಈ ಅಗ್ರಹಾರವನ್ನು ರಾಣಿ ಸಾವಳದೇವಿಯು ಆಳುತ್ತಿದ್ದಳು. ಹಿರೆಮುದ್ದನೂರ ಕ್ರಿ.ಶ 1105–06ರ ಶಾಸನವು ಜೋಗಮರಸ ಅಥವಾ ಜೋಗಮರಾಣಿ ದರಿಕಾಡುನಾಡನ್ನು ಆಳುತ್ತಿದ್ದು ಇವನ ರಾಣಿ ತಾರಾದೇವಿಯಾಗಿದ್ದಾಳೆ. ಇವ ಪುತ್ರಿಯೇ ಸಾವಳದೇವಿಯಾಗಿದ್ದು ಈಕೆಯನ್ನು ಆರನೆಯ ವಿಕ್ರಮಾದಿತ್ಯನಿಗೆ ಮದುವೆ ಮಾಡಿ ಕೊಟ್ಟಿದ್ದನ್ನು ಹೇಳುತ್ತದೆ. ಇದು ಜೋಗಮನ ರಾಜನೀತಿಯಾಗಿದೆ. ಚಕ್ರವರ್ತಿಗಳಾದ ಚಾಲುಕ್ಯರೊಂದಿಗೆ ಒಳ್ಳೆಯ ಸಂಬಂಧವನ್ನು ಸಾಧಿಸುವುದಾಗಿದೆ. ಈ ಜೋಗಮರಸನ ಪುತ್ರ ಪೆರ್ಮಾಡಿ

(1118–1140)ಯು ಚಾಲುಕ್ಯರೊಂದಿಗೆ (ವಿಕ್ರಮಾದಿತ್ಯ) ಒಳ್ಳೆಯ ಸಂಬಂಧವನ್ನೇ ಇಟ್ಟುಕೊಂಡಿದ್ದನು. ಅಲ್ಲದೆ ಇವನು ಆರನೆಯ ವಿಕ್ರಮಾದಿತ್ಯನ ಪುತ್ರಿಯನ್ನು ವಿವಾಹವಾಗಿದ್ದನು. ಈ ಪುತ್ರಿಯು ರಾಣಿ ಚಂದಲದೇವಿಯಿಂದ ಜನಿಸಿದವಳಾಗಿದ್ದಾಳೆ.

ಸಾವಳದೇವಿಯು ಅಗ್ರಹಾರ ನರೆಯಂಗಲ್ಲನ್ನು ಆಳುತ್ತಿದ್ದಾಗ ಮಹಾಪ್ರಭು ಕಪ್ಪಿಮಯ್ಯನು ಶಿವದೇವಾಲಯವನ್ನು ಕಟ್ಟಿಸಿದ ಉಲ್ಲೇಖವಿದೆ. ಹಿರೆಮುದ್ದನೂರು ಶಾಸನದಲ್ಲಿ ಈಕೆಯು ತಲೆಕಾಡುನಾಡಿನ ಮತ್ತು ಮಂಗಳವಾಡದ ಒಡೆಯ ಮಹಾಮಂಡಳೇಶ್ವರ ಜೋಗಮನ ಪುರಾಣ ಮತ್ತು ತಾರಾದೇವಿಯರ ಪುತ್ರಿಯೆಂದು ತಿಳಿದುಬರುತ್ತದೆ.

ಕೇತಲಾದೇವಿ :

ತ್ರಿಭುವನಮಲ್ಲದೇವನ ಪಟ್ಟದ ರಾಣಿ ಹಿರಿಯ ಕೇತಲದೇವಿಯ ಕುರಿತು ಕ್ರಿ.ಶ 1133ರ ಶಾಸನದಲ್ಲಿ ಕುಮಾರ ಸೋವರಸನು ತನ್ನ ತಂದೆ ಸಿಂಗರಸನಿಗೆ ಪರೋಕ್ಷವಿನಯಾರ್ಥವಾಗಿ ದಾನ ಮಾಡುತ್ತಾನೆಂದಿದೆ. ಈ ಸಿಂಗರಸನು ವಿಕ್ರಮಾದಿತ್ಯನ ಸೇವೆಯಲ್ಲಿದ್ದು ತ್ರಿಭುವನಮಲ್ಲ ಹಾಗೂ ಕೇತಲದೇವಿಯರ ಗಂಧವಾರಣನೆನಿಸಿದ್ದ. ಅಂದರೆ ವಿಕ್ರಮಾದಿತ್ಯ ಹಾಗೂ ಆತನ ರಾಣಿ ಕೇತಲಾದೇವಿಗೆ ನಂಬಿಕೆಯವನಾಗಿದ್ದು ಇವರ ಆಧಿನನಾಗಿದ್ದನೆಂದು ತಿಳಿಸುತ್ತದೆ. ಆದ್ದರಿಂದ ಕೇತಲಾದೇವಿಯು ರಾಜಕೀಯ ಆಳ್ವಿಕೆ ಮಾಡುತ್ತಿರುವ ವಿಷಯ ತಿಳುದು ಬರುತ್ತದೆ.[109]

ತ್ರಿಭುವನಮಲ್ಲ ದೇವನ ಪಟ್ಟದ ರಾಣಿಯಾದ ಹಿರಿಯ ಕೇತಲದೇವಿಯು ಅನೇಕ ದೇಶಭಾಷೆ ಸಂಗೀತ ವಿದ್ಯಾಧರಿ ಯಾಗಿದ್ದಳು ಎಂದು ಮತ್ತೊಂದು ಶಾಸನವು ಕೊಂಡಾಡಿದೆ. ಅಂದರೆ ಅನೇಕದೇಶಗಳ ಭಾಷೆಯ ಸಂಗೀತದಲ್ಲಿ ಪರಿಣಿತಿಯನ್ನು ಪಡೆದಿದ್ದಳು. ಅವಳನ್ನು ಸಕಳಕಳಾಧರಿ ಎಂದು ಅಭಿನವ ಸರಸ್ವತಿ ಯೆಂದು ಪ್ರಶಂಶಿಸುತ್ತದೆ.

ಮಲ್ಲಣಿದೇವಿ :

ಇವಳು ಆರನೇ ವಿಕ್ರಮಾದಿತ್ಯನ ಮೂರನೇಪಟ್ಟ ಮಹಾದೇವಿಯಾಗಿ ಮಲ್ಲಣಿದೇವಿಯು ಸ್ಥಾನವನ್ನು ಪಡೆದಿರುವುದು ಕ್ರಿ.ಶ 1122ರ ಬಿಮ್ರಾ ಶಾಸನದಿಂದ ತಿಳಿದು ಬರುತ್ತದೆ.

ಆರನೆಯ ವಿಕ್ರಮಾದಿತ್ಯನ ಇಬ್ಬರು ರಾಣಿಯರಾದ ಪಟ್ಟಮಹಾದೇವಿ ಮಲ್ಲಣಿದೇವಿ ಹಾಗೂ ಸುಗ್ಗಲದೇವಿಯರ ಉಲ್ಲೇಖ ಕ್ರಿ.ಶ 1122ರ ನಾಂದೇಡ ಜಿಲ್ಲೆಯ ದೆಗ್ಲೂರ ತಾಲೂಕಿನ ಬಿಮ್ರಾ ಶಾಸನದಲ್ಲಿ ಬಂದಿದೆ. ಪಟ್ಟಮಹಾದೇವಿ ಮಲ್ಲಣಿದೇವಿಯು ಮನೆಯಲ್ಲಿ ವಜ್ರದ ನಿಯೋಗವಿತ್ತು. ವಾಜಿವಂಶದ ವೀರದಂಡನಾಯಕನೊಬ್ಬ ಆಕೆಗೆ ಆಡಳಿತ ಕಾರ್ಯದಲ್ಲಿ ಸಹಾಯಕನಾಗಿದ್ದ ಎಂಬ ಅಂಶವು ಈ ಶಾಸನದಲ್ಲಿ ದಾಖಲಾಗಿದೆ.

ಭಿಮ್ರಾ ಗ್ರಾಮದಲ್ಲಿರುವ ಶಾಸನವನ್ನು ಕಂಬದ ಎರಡು ಮುಖಗಳಲ್ಲಿ ಬರೆಯಲಾಗಿದೆ. ಶಾಸನದಲ್ಲಿ ಕಾಲವು ಚಾಲುಕ್ಯ ವಿಕ್ರಮವರ್ಷ 47, ಶುಭಕೃತ್, ಪುಷ್ಯ, ಶು.5 ಆದಿವಾರ, ಉತ್ತರಾಯಣ ಸಂಕ್ರಾಂತಿಯ ಉಲ್ಲೇಖವಿದ್ದು, ಇದು ಕ್ರಿ.ಶ 1122ರ ಶಾಸನದಲ್ಲಿ, ಕಲ್ಯಾಣ ಚಾಲುಕ್ಯ ದೊರೆ ಆರನೆಯ ವಿಕ್ರಮಾದಿತ್ಯನ ಕಾಲಕ್ಕೆ ಸಂಬಂಧಿಸಿದ್ದಾಗಿದೆ. ಕಲ್ಯಾಣ ಚಾಲುಕ್ಯ ಮನೆತನದ ವಿಸ್ತಾರವಾದ ವಂಶಾವಳಿಯೂ ಇಲ್ಲಿ ದಾಖಲಾಗಿದೆ. ವಿಕ್ರಮಾದಿತ್ಯ ನೃಪ ಮಹಾಪರಾಕ್ರಮಿಯಾಗಿದ್ದ. ಅವನ ಸಾಮ್ರಾಜ್ಯ ತೆಂಕಣದಲ್ಲಿ ಲಂಕಾಪುರಿಯಿಂದ ಬಡಗಲು ಅಯೋಧ್ಯಪುರದ ವರೆಗೆ ಹೆಸರು ಮಾಡಿತ್ತೆಂಬುದನ್ನು ಈ ಶಾಸನ ಹೇಳುತ್ತದೆ. ಅಲ್ಲದೇ "ಆ ವಿಕ್ರಮಾಂಕ ನೃಪತನ ಮನೋವಲ್ಲಭೆ ರಾಯರಾಣಿ ಮುಖತಿಳಕ ಕಳಾಕೋವಿದೆ ನೆಗಳ್ದಲ್ಮಲ್ಲಣಿದೇವಿ ಜಗಜ್ಜನನಿ ಪಟ್ಟಮಹಾದೇವಿಯೆನಲ್" ಎಂದು ನಮೂದಿಸಲಾಗಿದೆ.

ವಿಕ್ರಮನ ರಾಣಿ ಮಲ್ಲಣಿದೇವಿಯ ಉಲ್ಲೇಖವೂ ಇಲ್ಲಿ ಬಂದಿದ್ದು, ಆಕೆಯನ್ನು ಕಳಾಕೋವಿದೆ, ಪಟ್ಟಮಹಾದೇವಿ ಎಂದೂ ಸಂಭೋದಿಸಲಾಗಿದೆ. ಈಕೆಯ ಮನೆಯಲ್ಲಿ ನಾಗವರ್ಮನು ಶುಚಿದಕ್ಷನಾಗಿ 'ಮಾಣಿಕಭಣ್ಡಾರನಿಯೋಗಮಂ' ಹೊಂದಿದ್ದನು. ಅಂದರೆ ಮನೆಯಲ್ಲಿದ್ದ ಮಾಣಿಕ ಭಂಡಾರ ನಿಯೋಗದ ಉಸ್ತುವಾರಿಯನ್ನು ನಾಗವರ್ಮ ನೋಡಿಕೊಳ್ಳುತ್ತಿದ್ದ ಈಗ (ನಾಗವರ್ಮ) ವಾಜಿವಂಶಕ್ಕೆ ಸೇರಿದವನು. ವಾಜಿವಂಶದ ಮತ್ತೊಂದು ಮನೆತನದ ವಿಕ್ರಮಾದಿತ್ಯನ ಪ್ರೀತಿ ವಿಶ್ವಾಸಕ್ಕೆ ಪಾತ್ರವಾಗಿ ಅವನ ಸೇವೆಯಲ್ಲಿ ತೊಡಗಿಕೊಂಡಿತ್ತೆಂಬ ಅಂಶ ಈ ಶಾಸನದಿಂದ ತಿಳಿದು ಬರುತ್ತದೆ. ವಾಜಿವಂಶದ ರೇವಣಯ್ಯಾ ಕಲ್ಲುಕುಂಭರಿಗಾವೆಯಲ್ಲಿ ರೇವಣೇಶ್ವರ ದೇವಾಲಯವನ್ನು ನಿರ್ಮಿಸಿದ ವಿವರವೂ ಬಂದಿದೆ.

ಅಬ್ಬಲದೇವಿ :

ಕಲ್ಯಾಣ ಚಾಲುಕ್ಯರ ದೊರೆ ತ್ರಿಭುವನಮಲ್ಲನ ರಾಣಿ ಅಬ್ಬಲದೇವಿಯ ಕುರಿತು ಕ್ರಿ.ಶ 1124ರ ಶಾಸನದಲ್ಲಿ ಕರಡಿಕಲ್ಮೂನೂರರ ಭತ್ತಗ್ರಾಮ ಲಿಂಗವನ್ನು ಆಳುತ್ತಿದ್ದಂತೆ ಹೇಳಿದೆ. ಆಗ ಅಲ್ಲಿನ ಕಲಿದೇವೇಶ್ವರದೇವರಿಗೆ ದಾನ ನೀಡಿದಂತೆ ಉಲ್ಲೇಖವಾಗಿದೆ.

ತ್ರಿಭುವನಮಲ್ಲನು ಕಲ್ಯಾಣದ ನೆಲೆವೀಡಿನಲ್ಲಿದ್ದಾಗ, ಅವನ ರಾಣಿ ಅಬ್ಬಲದೇವಿಯು ಕರಡಿಕಲ್ಲು–300ರ ಬಳಿಯ ಲಿಂಗವನ್ನು ಆಳುತ್ತಿದ್ದು, ಬನವಾಸಿ ಪುರವರೇಶ್ವರನಾದ ಕದಂಬಕುಲದ ಮಹಾಮಂಡಳೇಶ್ವರ ಮಾಧವತ್ತಿಯರಸ, ಲಿಂಗದ ಆರು ಜನರು ಇದ್ದು, ಊರಿನ ದಕ್ಷಿಣಕ್ಕೆ ದನಜೀವಿಯ ಪಾಳಿಯ ಭಾಗದಲ್ಲಿ, ಮಾಚಿರಾಜನ ಮಕ್ಕಳಾದ ಸಂಕರಸ ಮತ್ತು ನಾಗರಸರು ತಮ್ಮ ಭಾಗಕ್ಕೆ ಬಂದ ಭೂಮಿಯಲ್ಲಿ, ಮೂವತ್ತಾರು ಗೇಣ ಕೋಲಿನಲ್ಲಿ ಅಳೆದು ಮೂರು ಮತ್ತರು ಭೂಮಿಯನ್ನು ಕಲಿದೇವೇಶ್ವರ ದೇವರ ಧೂಪ, ದೀಪ, ನೈವೇದ್ಯಕ್ಕೆಂದು ದಾನ

ನೀಡುತ್ತಾರೆ.

ಈ ಶಾಸನದಲ್ಲಿ ಆರನೇ ವಿಕ್ರಮಾದಿತ್ಯನ ರಾಣಿಯಾದ ಅಬ್ಬಲದೇವಿಯನ್ನು ಸಹಸ್ರಫಲ ಭೋಗಭಾಗಿನಿ, ದ್ವಿತೀಯ ಲಕ್ಷ್ಮೀಸಮಾನೆ, ಕಳಹಂಸೆಯಾನೆ, ರೂಪವಿಧ್ಯಾಧರಿ, ಕಸ್ತೂರಿಕಾಮೋದೆ ಎಂಬ ವಿಶೇಷಣಗಳಿಂದ ಹೊಗಳಲಾಗಿದೆ. ಶಾಸನದ ಕೊನೆಯ ಭಾಗ ಹಾಳಾಗಿದೆ.[89]

ವಿಕ್ರಮಾದಿತ್ಯನ ಸಾಮ್ರಾಜ್ಯವು ದಕ್ಷಿಣ ಹಾಸನ, ತುಮಕೂರಿನಿಂದ ಪೂರ್ವದ ಗೊದಾವರಿ, ಕಡಪಗಳರೆಗೂ, ಪಶ್ಚಿಮದ ಅರಬ್ಬೀ ಸಮುದ್ರದಿಂದ ಉತ್ತರದ ನರ್ಮದಾ ನದಿಯ ತೀರದವರೆಗೂ ವಿಸ್ತರಿಸಿತ್ತು. ಇದಲ್ಲದೇ ಆರನೆಯ ವಿಕ್ರಮಾದಿತ್ಯ ತನ್ನ ಸಾಮ್ರಾಜ್ಯವನ್ನು ನೇಪಾಳದ ವರೆಗೂ ಹೋಗಿ ಗೆಲವು ಪಡೆದು ಆ ಪ್ರದೇಶವನ್ನಾಳಲು ನಾನ್ಯದೇವನನ್ನು ನೇಮಿಸುತ್ತಾನೆ.[90]

ವೈಭವಪೂರ್ವಕ ಆಡಳಿತ ನಡೆಸಿದ ಆರನೇ ವಿಕ್ರಮಾದಿತ್ಯನು ಕಲ್ಯಾಣ ನಾಡಿನಲ್ಲಿ ಶಾಂತಿ ಮತ್ತು ಸುಭಿಕ್ಷತೆಗಳು ನೆಲೆಸಿದರಿಂದ 50 ವರ್ಷಗಳ ಕಾಲ ದಕ್ಷತೆಯಿಂದ ಆಳಿದನು. ದಂಡಾಧೀಶ, ಮುದ್ದರಸ, ಅನಂತಸಾಲ, ಸುರೇಶ್ವರ ಪಂಡಿತ, ಗೋವಿಂದ ದಂಡನಾಯಕ ಕಾಳಿದಾಸರಂತಹ ದಕ್ಷ ದಂಡನಾಯಕರು, ಅಮಾತ್ಯರು,. ಅವನ ಆಡಳಿತದಲ್ಲಿದ್ದಲ್ಲದೇ ಇವನ ರಾಜ್ಯಾಸ್ಥಾನದಲ್ಲಿ ಮಹಾ ಪಂಡಿತರಾದ ಬಿಲ್ಹಣ, ವಿಜ್ಞಾನೇಶ್ವರ, ಎರಡನೇ ಭಾಸ್ಕರರಂತಹ ದಿಗ್ಗಜ ಕವಿ/ಸಾಹಿತಿ ಮತ್ತು ಪಂಡಿತರಿದ್ದರು.[91]

ಹೀಗೆ ಸುದೀರ್ಘವಾಗಿ 50 ವರ್ಷಗಳ ವರೆಗೆ ವೈಭವದಿಂದ ಸಾಮ್ರಾಜ್ಯವನ್ನಾಳಿದ ವಿಕ್ರಮಾದಿತ್ಯನು ಕ್ರಿ.ಶ 1127ರಲ್ಲಿ ಮರಣ ಹೊಂದುತ್ತಾನೆ. ಕಲ್ಯಾಣ ಚಾಲುಕ್ಯರ ಪ್ರಖ್ಯಾತ ಅರಸನ ಮರಣದ ನಂತರ ಮುಂದಿನ ಅರಸರು ಅಷ್ಟೊಂದು ಪ್ರಬಲಶಾಲಿಗಳು ಆಗದೇ ಇರುವುದರಿಂದ ಈ ಬೃಹತ ಸಾಮ್ರಾಜ್ಯ ಕಾಪಾಡಿಕೊಂಡು ಹೋಗುವುದು ಕಷ್ಟವಾಗಿತ್ತು, ಅಷ್ಟೊಂದು ದೊಡ್ಡ ಸಾಮ್ರಾಜ್ಯವನ್ನು ಕಟ್ಟಿದ ಕೀರ್ತಿ ಆರನೇ ವಿಕ್ರಮಾದಿತ್ಯನಿಗ ಸಲ್ಲುತ್ತದೆ.[92]

ಮೂರನೇ ಸೋಮೇಶ್ವರ (ಕ್ರಿ.ಶ 1127–1138)

ಆರನೇ ವಿಕ್ರಮಾದಿತ್ಯ ಮತ್ತು ಕರಹಾಟದ ರಾಜಕುಮಾರಿ ಚಂದಲದೇವಿಯ ಮಗನೇ ಈ ಮೂರನೇ ಸೋಮೇಶ್ವರ. ಈತನು ಹುಟ್ಟಿದ ದಿನಾಂಕದ ಕುರಿತು ಇತಿಹಾಸತಜ್ಞರಲ್ಲಿ ಒಮ್ಮತವಿಲ್ಲ. ಆರನೇ ವಿಕ್ರಮಾದಿತ್ಯ ತರುವಾಯ ಅವನ ಮಗ ಮೂರನೇ ಸೋಮೇಶ್ವರನು ಕ್ರಿ.ಶ 1127ರಲ್ಲಿ ಪಟ್ಟಕ್ಕೆ ಬಂದನು. ಈತ ಶಾಂತಪ್ರಿಯ ಅರಸ. ಈತ ವೆಂಗಿಯ ವ್ಯವಹಾರದಲ್ಲಿ ಚೋಳರೊಂದಿಗೆ ಯುದ್ಧ ಮಾಡಿದಂತೆ ತೋರುತ್ತದೆ.

ಮೂರನೇ ಸೋಮೇಶ್ವರನು ಕ್ರಿ.ಶ 1127 ಫೇಬ್ರವರಿ 20ರಲ್ಲಿ ಅಧಿಕಾರಕ್ಕೆ

ಬಂದ ಮೂರು ತಿಂಗಳುಗಳ ನಂತರದಲ್ಲಿ ಮಹಾಮಂಡಳೇಶ್ವರ ನಂಬಯ್ಯನು ವೆಂಗಿ–6000 ಪ್ರದೇಶವನ್ನು ಆಕ್ರಮಿಸಿದದರಿಂದ ತನ್ನ ಪಟ್ಟಾಭಿಷೇಕದ ನಂತರ ಕೂಡಲೇ ಮೂರನೆಯ ಸೋಮೇಶ್ವರನು ಚಾಲುಕ್ಯ ಸಾಮ್ರಾಜ್ಯದ ಪೂರ್ವದ ಭಾಗಗಳಲ್ಲಿ ಯುದ್ಧಗಳಲ್ಲಿ ತೊಡಗಬೇಕಾಯಿತು. ನಂತರ ನಿಧಾನವಾಗಿ ಮೂರನೆಯ ಸೋಮೇಶ್ವರನು ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡನು. ಗುಂಟೂರು ಜಿಲ್ಲೆಯ ನಾಂದೇಡ್ಲ ಎಂಬಲ್ಲಿ ದೊರಕಿದ ಕ್ರಿ.ಶ 1127ರ ಶಾಸನವೊಂದು ಮಹಾಮಂಡಳೇಶ್ವರ ಅನಂತಪಾಲಯ್ಯನು ಒಂದು ದೇವಾಲಯವನ್ನು ನಿರ್ಮಿಸಿದುದರ ಬಗ್ಗೆ ಮತ್ತು ತ್ರಿಪುರಾಂತಕಂ ಎಂಬಲ್ಲಿ ದೊರಕಿರುವ ಕ್ರಿ.ಶ 1126–27ರ ಶಾಸನವೊಂದು ಅವನು ಚೋಳರನ್ನು ಸೋಲಿಸಿ ಕಾಂಚಿಯವರೆಗೆ ಹಿಮ್ಮೆಟ್ಟಿಸಿ ಅದನ್ನು ಲೂಟಿಮಾಡಿ 'ಚೋಳಕಟಕಾಸೂರೆಕಾರ' ಎಂಬ ಬಿರುದು ಧರಿಸಿದ ಬಗ್ಗೆ ತಿಳಿಸುತ್ತದೆ. ಕೊಲ್ಲೂರಿನ ಒಂದು ಶಾಸನವು ಆನಂದಪಾಲನ ಒಬ್ಬ ಕೆಳಗಿನ ಸಾಮಂತನು ವೆಂಗಿಯ ಉಪ್ಪಿನಕಟ್ಟೆಯಿಂದ ಹಿಡಿದು ಕಾಂಚಿಯವರೆಗೆ ಬೆನ್ನಟ್ಟಿದ್ದನೆಂದು ಹಾಗೂ ಚೋಳರಾಜ್ಯ ನಿರ್ಮೂಲನ ಎಂಬ ಬಿರುದನ್ನು ಹೊಂದಿದ್ದನೆಂದು ತಿಳಿಸುತ್ತದೆ. ಕ್ರಿ.ಶ 1129ರಲ್ಲಿ ಭೂಲೋಕಮಲ್ಲನು ತನ್ನ ಒಡೆಯನೆಂದು ಸಾರಿದ ಮಹಾಮಂಡಳೇಶ್ವರ ಜಾಗಿ ಬೆಟ್ಟರಾಜು ಎನ್ನುವ ಬ್ರಾಹ್ಮಣನೊಬ್ಬನಿಂದ ಮಾಧವಿ ಪಟ್ಟಣದಲ್ಲಿ ನಿರ್ಮಿಸಲ್ಪಟ್ಟ 'ತ್ರಿಮೂರ್ತಿ' ದೇವಾಲಯಕ್ಕೆ ಭೂದಾನ ಮಾಡಿದ ಬಗ್ಗೆ ತಿಳಿಸುತ್ತದೆ. ಕ್ರಿ.ಶ 1131ರಲ್ಲಿ ವೇಲನಾಟಕ ಚೋಳನ ಪತ್ನಿಯಾದ ಸುರಮದೇವಿಯು ಬಾಪಟ್ಲಾದಲ್ಲಿರುವ ಭಾವನಾರಾಯಣ ದೇವಾಲಯಕ್ಕೆ ದಾನ ನೀಡಿದ ಬಗ್ಗೆ ಮತ್ತು ಇದು ಮೂರನೇ ಸೋಮೇಶ್ವರನನ್ನು ತಮ್ಮ ಒಡೆಯನನ್ನಾಗಿ ಒಪ್ಪಿಕೊಂಡ ಬಗ್ಗೆ ತಿಳಿಸುತ್ತದೆ. ಹೀಗೆ ವೆಂಗಿಯ ಉತ್ತರ ಭಾಗವು ಮೂರನೇ ಸೋಮೇಶ್ವರನ ಕಾಲದಲ್ಲಿ ಚಾಲುಕ್ಯರ ಹಿಡಿತದಲ್ಲಿ ಕ್ರಿ.ಶ 1130 ರಿಂದ 31ರ ವೇಳೆಗೆ ಇತ್ತೆಂದು ಹೇಳಬಹುದು.

ಮೂರನೆಯ ಸೋಮೇಶ್ವರನ ಕಾಲದ ದಾಖಲೆಗಳನ್ನು ನೋಡಿದಾಗ ನಂಬಯ್ಯನ ಜಯಂತಿಪುರ ಪ್ರದೇಶದ ಮೇಲೆ ಒಡೆತನ ಸಾಧಿಸಿದಾಗ ಕ್ರಿ.ಶ 1125 ಡಿಸೆಂಬರ್ 25ರಲ್ಲಿ ಮೂರನೆಯ ಸೋಮೇಶ್ವರನು ಅಲ್ಲಿ ವಾಸ್ತವ್ಯ ಹೂಡಿ ಅದರ ಮರುವರ್ಷವೇ ಮಾರ್ಚ 7ರಂದು ಇವನು ನವಿಲೆಯ ಕುಪ್ಪ ಅಥವಾ ಇಂದಿನ ರಾಯಚೂರು ಜಿಲ್ಲೆಯ ನವಲೆಯಲ್ಲಿದ್ದನು. ಕ್ರಿ.ಶ 1129ರಲ್ಲಿ ಇವನು ಹಲ್ಲುನಿಯತೀರ್ಥದಲ್ಲಿ ಇದ್ದನೆಂದು ಮತ್ತು ಸ್ವಭಾವಿಕವಾಗಿ ಈ ಪ್ರದೇಶಗಳಿಗೆ ಅವನು ದಂಡಯಾತ್ರೆಯ ನಿಮಿತ್ತವಾಗಿ ಬಂದಿದ್ದನೆಂದು ಹೇಳಲಾಗಿದೆ. ಇದರ ಮರು ತಿಂಗಳಲ್ಲಿಯೇ ಅವನು ಕಲ್ಯಾಣದಲ್ಲಿದ್ದನು. ನಂತರ ಕರಡಿಕಲ್ಲ ಶಾಸನದ ಪ್ರಕಾರ ಅವನು ಕ್ರಿ.ಶ 1132 ಡಿಸೆಂಬರ್ 2ರಲ್ಲಿ ಬಿಜಾಪೂರ ಜಿಲ್ಲೆಯ ಮಹಿಸೂರ ಎಂಬ ಸ್ಥಳಗಳಿಗೆ ಹೋಗಿದ್ದನು. ಈ ಕೆಲವು ಸ್ಥಳಗಳನ್ನು ಬಿಟ್ಟರೆ ಉಳಿದೆಲ್ಲಾ ಸಮಯದಲ್ಲಿ ಮೂರನೆಯ ಸೋಮೇಶ್ವರನು ರಾಜಧಾನಿ ಕಲ್ಯಾಣದಲ್ಲಿಯೇ ಇದ್ದನು. ಕ್ರಿ.ಶ 1129 ಫೆಬ್ರವರಿ 20ರಲ್ಲಿ ಮೂರನೆಯ ಸೋಮೇಶ್ವರನು ಹಲ್ಲುನಿಯ

ತೀರ್ಥದಲ್ಲಿ ದಂಡಯಾತ್ರೆಗೆಂದು ತಂಗಿದ್ದನು. ಈ ಸಮಯಕ್ಕೆ ಸಂಬಂಧಿಸಿದ ಸಮಕಾಲೀನ ಹೊಯ್ಸಳ ದಾಖಲೆಗಳು ಚಾಲುಕ್ಯರಿಂದ ಸ್ವತಂತ್ರನಾಗಲು ಪ್ರಯತ್ನಿಸುತ್ತಿದ್ದ ವಿಷ್ಣುವರ್ಧನನ್ನು ಹತ್ತಿಕ್ಕಲು ಇವನು ಬಂದಿದ್ದನೆಂದು ತಿಳಿಸುತ್ತದೆ. ಏಕೆಂದರೆ ಕಲ್ಯಾಣ ಚಾಲುಕ್ಯರ ಸಾಮ್ರಾಜ್ಯದ ದಕ್ಷಿಣ ಭಾಗದ ಸ್ಥಿತಿಯು ಅಲ್ಲಿನ ರಾಜಮನೆತನಗಳಾದ ಉಚ್ಚಂಗಿಯ ಪಾಂಡ್ಯರು, ಹಾನಗಲ್ಲ ಕದಂಬರು, ಮತ್ತು ಗೋವೆಯ ಕದಂಬರು ನೀಡುವ ಬೆಂಬಲ ಮತ್ತು ಸ್ವಾಮಿನಿಷ್ಠೆಯನ್ನು ಅವಲಂಬಿಸಿತ್ತು. ಆದ್ದರಿಂದ ವಿಷ್ಣುವರ್ಧನನು ಮೊದಲು ಇವರನ್ನು ಸೋಲಿಸಲು ಪ್ರಯತ್ನಿಸಿ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿಯೇ ವಿಫಲನಾಗಿದ್ದನು. ನಂತರದಲ್ಲಿ ಮೂರನೆಯ ಸೋಮೇಶ್ವರನ ಶಾಂತಿಯುತ ಆಡಳಿತನೀಡಿಯು ಮತ್ತೊಮ್ಮೆ ದಂಗೆ ಏಳುವಂತೆ ವಿಷ್ಣುವರ್ಧನನ್ನು ಪ್ರೇರೇಪಿಸಿತು. ಇದರಿಂದಾಗಿ ಹೊಯ್ಸಳ ವಿಷ್ಣವರ್ಧನನು ಕ್ರಿ.ಶ 1129ರಲ್ಲಿ ಹಾನಗಲ್ಲ ಕದಂಬರನ್ನು ಆಕ್ರಮಿಸಿ ಕ್ರಿ.ಶ 1130ರಲ್ಲಿ ಬಂಕಾಪುರವನ್ನು ಆಕ್ರಮಿಸಿದಾಗ ವಿಷ್ಣುವರ್ಧನನ ದಂಡಯಾತ್ರೆಯನ್ನು ತಡೆಯಲು ದಕ್ಷಿಣಕ್ಕೆ ಬಂದ ಮೂರನೆಯ ಸೊಮೇಶ್ವರನು ಆ ಕಾಲದಲ್ಲಿ ಹನುಮಗೋಳದಿಂದ ಕದಂಬ ತೈಲಪನು ಆಳುತ್ತಿದ್ದಾಗ ಕ್ರಿ.ಶ 1129ರಲ್ಲಿಯೇ ಅವನಿಗೆ ವಿಷ್ಣುವರ್ಧನನ ವಿರುದ್ಧ ಸಹಾಯ ಮಾಡಲು ಬಂದಿದ್ದನೆಂದು ತಿಳವಳ್ಳಿ ಶಾಸನವು ತಿಳಿಸುತ್ತದೆ. ಆದರೆ ಈ ವೇಳೆಗೆ ವಿಷ್ಣುವರ್ಧನನ್ನು ತುಂಗಭದ್ರಾ ನದಿ ಮೇಲ್ಭಾಗದ ಧಾರವಾಡ ಜಿಲ್ಲೆಯ ಕೆಲ ಪ್ರದೇಶಗಳನ್ನು ಗೆದ್ದುಕೊಂಡಿದ್ದನು.[93]

ಕ್ರಿ.ಶ 1129ರಲ್ಲಿ ಮೂರನೇ ಸೋಮೇಶ್ವರನು ಹೊಯ್ಸಳರ ವಿರುದ್ಧ ದಿಗ್ವಿಜಯ ಯಾತ್ರೆಗೆಯ್ಯಲು ದಕ್ಷಿಣ ಮಹಾಮಂಡಳೇಶ್ವರರಾದ ಹೊಯ್ಸಳರ ವಿಷ್ಣುವರ್ಧನನ ವಿರುದ್ಧ ದಾಳಿ ಮಾಡಿ ಜಯಶಾಲಿಯಾಗಿರುತ್ತಾನೆ. ಮೂರನೇ ಸೋಮೇಶ್ವರನ ಪಾದಪದ್ಮೋಪಜೀವಿಯಾಗಿದ್ದ ಕಾಳಿದಾಸ ದಂಡನಾಯಕನು ಸೋಮೇಶ್ವರನ ಆಜ್ಞೇಯ ಮೇರೆಗೆ ಲಾಳ, ಚೋಳ, ಚೇರ್, ಪಂಚಾಳ.. ಗೂರ್ಜ್ಜರ್, ನೇಪಾಳ. ಸಿಂಹಳ, ಕಾಶ್ಮೀರ್, ಮಾಗಧ ಅರಸರನ್ನ ಸೋಲಿಸಿ ಕಪ್ಪ ತಂದೆನೆಂದು ನರಗುಂದದ ಶಾಸನ ತಿಳಿಸಿರುತ್ತದೆ.[94]

ಬೀದರ ಜಿಲ್ಲೆಯ ನಾರಾಯಣಪುರ ಗ್ರಾಮದ ಗುರಪ್ಪ ರಾಚಪ್ಪ ಪೆದ್ದಿ ಅವರ ಮನೆಯ ಮುಂಭಾಗದಲ್ಲಿನ ನಾಲ್ಕು ಕಲ್ಲು ತುಂಡುಗಳ ಮೇಲಿರುವ ಶಾಸನದಲ್ಲಿ ಭೂಲೋಪಮಲ್ಲನು ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದಾಗ ಅವನ ಮಹಾಮಂಡಳೇಶ್ವರನಾಗಿ ಪೆರ್ಮಾಡಿಯರಸನಿರುತ್ತಾನೆ. ಈ ಪೆರ್ಮಾಡಿಯರಸನು ಅಟ್ಟಳೆಯ ಬಳಿಯ ಬೇಡಿಕಯ ರಾಯನಾರಾಯಣಪೂರದ ಮೂಲಸ್ಥಾನ... ದೇವರಿಗೆ ವ್ಯತೀಪಾತ ಸಂಕ್ರಾಂತಿ ನಿಮಿತ್ತವಾಗಿ ಮತ್ತು ಅಕ್ಷತೆ, ಪುಷ್ಪ, ಗಂಧ, ಧೂಪ, ದೀಪಕ್ಕಗಿ 300 ಮತ್ತರು ಭೂಮಿಯನ್ನು ಒಂದು ಮತ್ತರು ಗದೆಯನ್ನು, ಶ್ರೀಕೋದಂಡ ಒಂದು ನಿವೇಶಣವನ್ನು ಸರ್ವನಮಶ್ಯವಾಗಿ ಬಿಟ್ಟ. ಈ ಧರ್ಮವನ್ನು ನಖರರು ನಡೆಸಬೇಕೆಂದು ವಿಧಿಸಿದೆ.[95]

ಕ್ರಿ.ಶ 1131ರಲ್ಲಿ ಕದಂಬ ತೈಲಪನು ಮರಣ ಹೊಂದಿದ ನಂತರ ಮಯೂರವರ್ಮ ಮತ್ತು ಮಲ್ಲಿಕಾರ್ಜುನರು ಅವನ ಉತ್ತರಾಧಿಕಾರಿಗಳಾಗಿದ್ದು ಹೊಯ್ಸಳರ ದಾಳಿ ಎದುರಿಸಬೇಕಾಯಿತು. ನಂತರ ಕ್ರಿ.ಶ 1132ರಲ್ಲಿ ವಿಷ್ಣುವರ್ಧನನು ಬಂಕಾಪುರ ಮತ್ತು ಹಾನಗಲ್ ಪ್ರದೇಶಗಳ ಮೇಲೆ ದಾಳಿ ಮಾಡಿದನು. ಅದರ ಮರುವರ್ಷವೇ ಅವನು ತನ್ನ ದಂಡನಾಯಕ ಬೋಕಣನ ನೆರವಿನಿಂದ ಕದಂಬರ ರಾಜಧಾನಿಯನ್ನು ಲೂಟಿ ಮಾಡಿದನು. ಮೂರನೆಯ ಸೋಮೇಶ್ವರನ ಆಳ್ವಿಕೆಯ 10ನೆಯ ವರ್ಷದಲ್ಲಿ ಹೊರಡಿಸಲಾದ ಯಳವತ್ತಿ ಶಾಸನವು ಮಲ್ಲಿಕಾರ್ಜುನನು ಆಳುತ್ತಿದ್ದಾಗ ಹನುಮಗೋಳದ ವಿರುದ್ಧ ಹೊಯ್ಸಳದೇವನ ದಂಡಯಾತ್ರೆಯ ಸಮಯದಲ್ಲಿ ಸಾಹನಿಕೇಸಿ ಎಂಬುವವನು ಯಳವತ್ತಿ ಗ್ರಾಮವನ್ನು ಮುತ್ತಿದ್ದಾಗ ಆ ಮುತ್ತಿಗೆಯಲ್ಲಿ ಒಬ್ಬ ನಾಯಕನ ಮರಣವನ್ನು ಕುರಿತು ಸ್ಮರಿಸುತ್ತದೆ. ಬೆಲೂರು ಶಾಸನಗಳು ಹೊಯ್ಸಳ ಮುಖ್ಯ ಅಧಿಕಾರಿಯು ಪಾನಂಗಲ್ ಕೋಟೆಯನ್ನು ಗೆದ್ದ ಬಗ್ಗೆ ತಿಳಿಸುತ್ತದೆ.

ಧನ್ನೂರಾ (ಎಚ್) ಬಸವೇಶ್ವರ ದೇವಾಲಯದಲ್ಲಿರುವ ತುಂಡುಕಲ್ಲಿನ ಮೇಲೆ, ಮೊದಲಿಗೆ ತ್ರಿಭುವನಮಲ್ಲನು ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದಾಗ, ಅಟ್ಟಳೆ ನಾಡನ್ನು (ರಾಜನ ಹೆಸರು ಹಾಳಾಗಿದೆ) ಆಳುತ್ತಿರುವಾಗ ಧನವುರ ಗ್ರಾಮದ ಪ್ರಭು ಮಹೇಶ್ವರ ದಂಡನಾಯಕನು ದಾನ ನೀಡಿರುವುದು ಹಾಗೂ ಭೂಲೋಕಮಲ್ಲನು ಆಳ್ವಿಕೆ ಮಾಡುವ ಕಾಲಕ್ಕೆ ದೇವಾಲಯದ ರಿಷಿಯರ್ ಆಹಾರದಾನ, ನಂದಾದೀವಿಗೆಗಾಗಿ 12 ಮತ್ರು ಭೂಮಿ ದಾನ ಮಾಡಿರುವುದು ತಿಳಿದು ಬರುತ್ತದೆ.[96]

ಮೂರನೆಯ ಸೋಮೇಶ್ವರನ ಕ್ರಿ.ಶ 1137–38ರ ಗಣಜೂರು ಶಾಸನವು ಮಲ್ಲಿಕಾರ್ಜುನನು ಲೊಕ್ಕಿಗುಂಡಿ ಕೋಟೆಯನ್ನು ಆಕ್ರಮಿಸಿದ ಬಗ್ಗೆ ತಿಳಿಸುತ್ತದೆ. ಈ ಘಟನೆಯು ಹೊಯ್ಸಳರಿಂದ ಮಲ್ಲಿಕಾರ್ಜುನನು ಕಳೆದುಕೊಂಡ ಪ್ರದೇಶಗಳನ್ನುಪುನಃ ಪಡೆಯಲು ಮಾಡಿದ ಪ್ರಯತ್ನವನ್ನು ಸೂಚಿಸುತ್ತದೆ. ಇದರ ನಂತರ ಹಾನಗಲ್‌ವು ವಿಷ್ಣುವರ್ಧನನ ವಶವಾಗಿರಬಹುದು. ಏಕೆಂದರೆ ಕ್ರಿ.ಶ 1140ರ ವೇಳೆಗೆ ವಿಷ್ಣುವರ್ಧನನು ತನ್ನ ರಾಣಿ ಬಮ್ಮಲದೇವಿಯೊಂದಿಗೆ ಅಲ್ಲಿ ವಾಸಿಸುತ್ತಿದ್ದನು. ವಿಷ್ಣುವರ್ಧನನು ಕದಂಬರ ಎರಡನೆಯ ಜಯಕೇಶಿಯೊಂದಿಗೆ ವೈರತ್ವ ಹೊಂದಿದ್ದು ಇವನು ಗೋವಾ ಪ್ರದೇಶದಲ್ಲಿ ಆಳುತ್ತಿದ್ದು ಪ್ರರಂಭದಲ್ಲಿ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯಲ್ಲಿ ಸ್ವತಂತ್ರನಾಗುವ ವಿಫಲಯತ್ನ ಮಾಡಿದನು. ವಿಕ್ರಮಾದಿತ್ಯನ ಮರಣಾನಂತರ ಅವನು ಪುನಃ ತಲೆ ಎತ್ತಿದ್ದರೂ ಸಹ ವಿಷ್ಣುವರ್ಧನನು ಅವನನ್ನು ಸೋಲಿಸಿದ ಬಗ್ಗೆ ಕ್ರಿ.ಶ 1133ರ ಶಾಸನವು ತಿಳಿಸುತ್ತದೆ. ಇದರಲ್ಲಿ ಅವನು ಬನವಾಸಿ ಮತ್ತು ಹಲಸಿಗೆ ಪ್ರದೇಶಗಳನ್ನು ಆಳುತ್ತಿದ್ದನೆಂದು ಹೇಳಲಾಗಿದೆ. ಕ್ರಿ.ಶ 1135ರ ಶಾಸನವೊಂದು ವಿಷ್ಣುವರ್ಧನನು ಜಯಕೇಶಿಯನ್ನು ಓಡಿಸಿ ಕೆಲ

ಪ್ರದೇಶಗಳನ್ನು ಗೆದ್ದನೆಂದು ಹೇಳುತ್ತವೆ. ಕೊಲ್ಹಾಪುರದ ಶಿಲಾಹಾರ ಎರಡನೆಯ ಭೋಜರಾಜನ ಶಾಸನವೊಂದು ಅವನ ತಂದೆ ವಿಜಯಾದಿತ್ಯನು ಗೋವೆಯಲ್ಲಿ ಕೆಲ ನಾಶಪಡಿಸಲ್ಪಟ್ಟ ಅರಸರ ಅಧಿಕಾರವನ್ನು ಪುನಃ ಸ್ಥಾಪಿಸಿದನೆಂಬ ವಿಷಯ ತಿಳಿಸುವುದರಿಂದ ಜಯಕೇಶಿಗೆ ಇವರು ನೆರವು ನೀಡಿದ್ದರೆಂದು ತಿಳಿಯಲಾಗಿದೆ. ವಿಷ್ಣುವರ್ಧನನ ಶಾಸನಗಳು ಅವನ ರಾಜ್ಯವು ಕೃಷ್ಣಾನದಿಯವರೆಗೆ ವಿಸ್ತರಿಸಿತ್ತೆಂದು ತಿಳಿಸಿದರೂ ಸಹ ಅದು ಉತ್ಪ್ರೇಕ್ಷೆಯಾಗಿದೆ. ಅಲ್ಲದೇ ಅವನ ಅನೇಕ ಶಾಸನಗಳು ವಿಷ್ಣುವರ್ಧನನು ಬನವಾಸಿ, ಹಾನಗಲ್, ಸಾಂತಲಿಗೆ, ಬೆಳೂವೊಲ, ಪುಲಿಗೆರೆ ಮತ್ತು ಹಲಸಿಗೆ ಪ್ರದೇಶಗಳ ಮೇಲೆ ಆಳುತ್ತಿದ್ದನೆಂದು ತಿಳಿಸುತ್ತದೆ. ಆದರೆ ಹಾನಗಲ್ ಕದಂಬರು, ಗೋವೆ ಕದಂಬರು ಈ ಪ್ರದೇಶದಲ್ಲಿ ಆಳುತ್ತಿದ್ದುದನ್ನು ಗಮನಿಸಿದರೆ ವಿಷ್ಣುವರ್ಧನನ ಜಯವು ಕ್ಷಣಿಕವಾಗಿತ್ತೆಂದು ತೋರುತ್ತದೆ. ಈ ಎಲ್ಲಾ ಸಮಯದಲ್ಲಿಯೂ ಕಲ್ಯಾಣ ಚಾಲುಕ್ಯರ ದೊರೆ ಏನು ಮಾಡುತ್ತಿದ್ದನೆಂಬ ಪ್ರಶ್ನೆ ಸಹಜವಾಗಿ ಉದ್ಭವಿಸುತ್ತದೆ. ಈ ಸಂದರ್ಭದ ಯುದ್ಧಗಳಲ್ಲಿ ಮೂರನೆಯ ಸೋಮೇಶ್ವರನು ನೇರವಾಗಿ ಭಾವಹಿಸಿದ ಬಗ್ಗೆ ಉಲ್ಲೇಖವಿಲ್ಲ. ಬಹುಶಃ ಇವನು ತನ್ನ ದಂಡನಾಯಕರನ್ನು ಮತ್ತು ಸೈನ್ಯವನ್ನು ತನ್ನ ಮಾಂಡಲಿಕರ ಸಹಾಯಕ್ಕಾಗಿ ಕಳುಹಿಸಿ ತಾನು ದೂರವಿದ್ದನು. ಉಳಿದ ಮಾಂಡಲಿಕರು ಸಹ ದಂಗೆ ಏಳುವ ಸಂದರ್ಭವಿದ್ದರೂ ಸಹ ಅವರಿಗೆ ತಮ್ಮ ಉಳಿವಿನ ಅವಶ್ಯಕತೆ ಇದ್ದುದರಿಂದ ಅವರು ತಮ್ಮ ಸ್ವಹಿತಕ್ಕಾಗಿ ಚಾಲುಕ್ಯರ ಒಡೆತನವನ್ನು ಒಪ್ಪಿಕೊಳ್ಳುತ್ತಿದ್ದರು. ಹೀಗಾಗಿ ಕಲ್ಯಾಣ ಚಾಲುಕ್ಯರ ಅಧಿಕಾರವು ಸಾವಕಾಶವಾಗಿ ಮೂರನೆಯ ಸೋಮೇಶ್ವರನ ಕಾಲದಲ್ಲಿ ಇಳಿಮುಖವಾಗತೊಡಗಿತು.[97]

ಬೀದರ ಜಿಲ್ಲೆಯ ಗೋರ ಚಿಂಚೋಳಿಯ ವಿಠ್ಠಲ ದೇವಾಲಯದ ಸಮೀಪದಲ್ಲಿರುವ ಕಲ್ಲಿನ ಮೇಲಿರುವ ಶಾಸನದಲ್ಲಿ, ಚಾಲುಕ್ಯ ಅರಸ ಭೂಲೋಕಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಮಹಾಮಂಡಳೇಶ್ವರನಾಗಿ ಹೆಮ್ಮಾಡಿಯರಸನು ಭಲ್ಲುಂಕೆಯ ಉತ್ತರೇಶ್ವರ ದೇವರ ಪ್ರತಿರೂಪವಾಗಿ, ಚಿಕ್ಕ ಉತ್ತರೇಶ್ವರ ದೇವಾಲಯವನ್ನು (ನಿರ್ಮಿಸಿ) ಚಿಂಚವಳ್ಳಿಯ ಸೀಮೆಯಿಂದ ದಕ್ಷಿಣಕ್ಕೆ, ಲಚ್ಚಗಾವೆಯ ಪೂರ್ವಕ್ಕೆ, ಸೊನ್ನಿಕಬ್ಬೆಯ ಹೊಲದಿಂದ ಪಶ್ಚಿಮಕ್ಕೆ 40 ಮತ್ತರು ಹೊಲವನ್ನು ದಾನ ನೀಡಿದನು. ಉತ್ತರೇಶ್ವರದೇವರ ಆಚಾರ್ಯನಾದ ವಿಮಳಾದಿತ್ಯ ಪಂಡಿತನು ಗಾಣವನ್ನೂ, ಅಮ್ಮಗಿಯೆಂಬುವವನು ದೇವಾಲಯದ ಬಾವಿಯ ಜೀರ್ಣೋದ್ಧಾರವನ್ನೂ ಮಾಡಿಸಿದ. ಮೂಲಿಗನಾದ ಚಂದನಾಯಕನು ದೇವರ ನೈವೇದ್ಯಕ್ಕೆಂದು 8 ಮತ್ತರು ಭೂಮಿ, ನಂದಾದೀಪಕ್ಕೆ ಒಂದು ಮತ್ತರು, ಒಂದು ಹೂದೋಟ, ಒಂದು ಮನೆಯನ್ನು ದಾನ ನೀಡಿದ ಉಲ್ಲೇಖವಿದೆ.[98]

ಮೂರನೇ ಸೋಮೇಶ್ವರನ ಹಿರಿಯ ಸಹೋದರನಾದ ಯುವರಾಜ ಮಲ್ಲಿಕಾರ್ಜುನನು ವಿಕ್ರಮಾದಿತ್ಯನ ಪಿರಿಯರಸಿಯೂ ಪಟ್ಟಮಹಾದೇವಿಯ ಮಗನಾಗಿದ್ದಂತೆ ವಿದ್ವಾಂಸರು ಪತ್ತೆ ಹಚ್ಚಿದ್ದಾರೆ. ಆರನೇ ವಿಕ್ರಮಾದಿತ್ಯನು

ಮಲ್ಲಿಕಾರ್ಜುನನ ಶೌರ್ಯ, ಸಾಹಸ ನೋಡಿ ಯುವರಾಜಪಟ್ಟ ನೀಡಿ ಆಳಂದಸಾಸಿರ ವಿಭಾಗವನ್ನು ಆಳ್ವಿಕೆ ಮಾಡಲು ಕೊಡುತ್ತಾನೆ. ಮುಂದೆ ಇವನು ಕ್ರಿ.ಸ 1095ರ ಸುಮಾರಿಗೆ ತರ್ದವಾಡಿ–1000ವನ್ನು ಆಳುತ್ತಿದ್ದನು. ಕ್ರಿ.ಶ 1115ರ ಸುಮಾರಿಗೆ ಕರಹಾಡ 4000ವನ್ನು ಆಳುತ್ತಿದ್ದನೆಂದು ತಿಳಿದು ಬರುತ್ತದೆ. ಇವನ ಕುರಿತು ಕ್ರಿ.ಶ 1123ರ ಉಮರಾಣಿ ಶಾಸನವು ಕೊನೆಯ ಶಾಸನವಾಗಿದೆ. ಮಲ್ಲಿಕಾರ್ಜುನನು 1082 ರಿಂದ 1123ರ ವರೆಗೆ ಯುವರಾಜನಾಗಿದ್ದು ನಂತರ ಮರಣ ಹೊಂದಿರಬಹುದು. ಇವನು ತಂದೆಗೆ ತಕ್ಕಮಗನಾಗಿ ವೀರತನದಿಂದ ರಾಜ್ಯಭಾರ ಮಾಡಿ ಮಹಾಲಕ್ಷ್ಮೀದೇವೀಲಬ್ದವರ ಪ್ರಸಾದಂ, ತ್ಯಾಗವಿನೋದಂ, ಮೂರುರಾಯಕುವರ ಸಾಹಸಮಲ್ಲಂ ಸೇರಿದಂತೆ ಅನೇಕ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದನು. ಇವನ ರಾಣಿ ಪಿರಿಯ ಅರಸಿಯಾದ ಸಿರಿಯಾದೇವಿಯಾಗಿದ್ದು, ಇವಳು ಅಣಂದೂರು–300ರಲ್ಲಿಯ ಮಾರುಡಿಗೆ ಗ್ರಾಮದಲ್ಲಿ ಭೂಮಿಯನ್ನು ದಾನಬಿಟ್ಟಿದ್ದನ್ನು ಕಾಣಬಹುದು. ಇವರಿಬ್ಬರಿಗೆ ಮಹಾದೇವಿ ಎನ್ನುವ ಪುತ್ರಿ ಇದ್ದು ಇವಳಿಗೆ ಮುತ್ತಗೆಯ–30ಅನ್ನು ಆಳುತ್ತಿದ್ದ ವರ್ಧಮಾನ ಪುರವರಾಧೀಶ್ವರನೆನಿಸಿದ ಮಹಾಮಂಡಳೇಶ್ವರ ವಿಕ್ರಮಾದಿತ್ಯನಿಗೆ ಕೊಟ್ಟು ಮದುವೆ ಮಾಡಲಾಗಿತ್ತು.[99]

ಮೂರನೇ ಸೋಮೇಶ್ವರನ ಇನ್ನೊಬ್ಬ ಸಹೋದರನಾದ ಕುಮಾರ ತೈಲಪದೇವನು ಕಂದೂರು 1000 ವಿಭಾಗವನ್ನು ಆಳುತ್ತಿದ್ದನು. ಮೂರನೇ ಸೋಮೇಶ್ವರನು ಚಕ್ರವರ್ತಿಯಾದಾಗ ತೈಲಪನು ಯುವರಾಜನಾಗಿ ಆಳುತ್ತಿದ್ದನು. ಇವನಿಗೆ ಚಾಲುಕ್ಯ ಕಟಕರಕ್ಷಪಾಳ ಎಂಬ ಬಿರುದಿತ್ತು. ಲಕ್ಕಾದೇವಿ ಈ ತೈಲಪನ ಪಟ್ಟಮಹಾದೇವಿಯಾಗಿದ್ದಳು. ಇವರಿಬ್ಬರಿಗೆ ಪೆರ್ಮಾಡಿದೇವ, ಬಿಕ್ಕದೇವ ಎಂಬ ಪುತ್ರರಿದ್ದರು. ಇವರು ಕೋಳೂರಪುರದ ನೆಲವೀಡಿನಲಿದ್ದು ಆಳುತ್ತಿದ್ದ ಉಲ್ಲೇಖ ಭೋಧಪೂರ ಶಾಸನದಲ್ಲಿದೆ. ಮಹಾಮಂಡಳೇಶ್ವರ ದಳವಪರಸರು, ಇಯೂರ್ ಚೋಳಗಾವುಂಡ, ಬಮ್ಮಣನ ಮಗ ಕೇತಗಾವುಂಡ ಇವರು ತೈಲಪನ ಕೆಳಗೆ ಅಧಿಕಾರಿಗಳಾಗಿದ್ದವು. ತೈಲಪನು ಸಿಂಧವಡಿ–1000ವನ್ನು ಆಳುತ್ತಿದ್ದಾಗ ಇವನ ಕೆಳಗೆ ಮಹಾಮಂಡಳೇಶ್ವರನೊಬ್ಬನಿದ್ದುದು ತಿಳಿದು ಬರುತ್ತದೆ.

ಮೂರನೇ ಸೋಮೇಶ್ವರನ ಕಿರಿಯ ಸಹೋದರ ಕುಮಾರ ಜಯಕರ್ಣದೇವ. ಇವನು ಮಹಾಗ್ರಹಾರವಾದ ಸಿಂದಿಗೆಯನ್ನು ತ್ರಿಭೋಗಾಭ್ಯಂತರ ಸಿದ್ಧಿಯಿಂದ ಆಳುತ್ತಿದ್ದನಲ್ಲದೇ, ಕೊಂಡಿ ಭಾಗವನ್ನು ಆಳುತ್ತಿದ್ದನೆಂದು ತಿಳಿದು ಬರುತ್ತದೆ.

ಮೂರನೇ ಸೋಮೇಶ್ವರನಿಗೆ ಇಮ್ಮಡಿ ಜಗದೇಕಮಲ್ಲ ಮತ್ತು ಮೂರನೇ ತೈಲಪ. ಮೂರನೇ ಸೋಮೇಶ್ವರನಿಗೆ ಪಿರಿಯರಸಿ ಬರ್ಮ್ಮಲದೇವಿ ಹಾಗೂ ಪಿರಿಯರಸಿ ರಾಜಲಾದೇವಿಯರು ಇದ್ದರೆಂದು ತಿಳಿದು ಬರುತ್ತದೆ.[100]

ರಾಜಲದೇವಿ :

ಮೂರನೆಯ ಸೋಮೇಶ್ವರನ ಕಿರಿಯರಸಿ ರಾಜಲದೇವಿ. ಈಕೆ ತನ್ನ ಕೈ

ಕೆಳಗಿನ ಅಧಿಕಾರಿಯಾದ ಹನ್ಮತಳ್ಳಿಯ ಹೆಗ್ಗಡೆ ಮಲ್ಲಿಯಣ್ಣ ನಾಯಕನ ಮೂಲಕ ಕ್ರಿ.ಶ 1137ರಲ್ಲಿ ಮಾಣಿಕೇಶ್ವರ ದೇವರಿಗೆ ನಂದಾದೇವಿಗೆಂದು ಕೆಲವು ದಾನಗಳನ್ನು ನೀಡಿದ್ದಾಳೆ.[101]

ಸಾಂಸ್ಕೃತಿಕ ದೃಷ್ಟಿಯಿಂದ ಅವನ ಕಾಲವು ಮಹತ್ವದ್ದು ಸ್ವತಃ ಕವಿಯೂ, ವಿದ್ವಾಂಸನೂ ಆದ ಮೂರನೇ ಸೋಮೇಶ್ವರನು ಸಂಸ್ಕೃತದಲ್ಲಿ ಕ್ರಿ.ಶ 1129ರಲ್ಲಿ ಮಾನಸೋಲ್ಲಾಸ ಅಥವಾ ಅಭಿಷತಾರ್ಥ ಚಿಂತಾಮಣಿ ಎಂಬ ಗ್ರಂಥ ರಚಿಸಿದನು. ಇದು ಅವನ ಗಣ್ಯ ಸಾಧನೆ, ಇದು ರಾಜನೀತಿ, ಯುದ್ಧಕಲೆ, ಚಿತ್ರಕಲೆ, ಸಂಗಿತ, ನೃತ್ಯ, ನಾಟಕ, ವೈದ್ಯಶಾಸ್ತ್ರ, ನ್ಯಾಯಶಾಸ್ತ್ರ ಇತ್ಯಾದಿ ಕಲೆಗಳನ್ನೊಳಗೊಂಡ ವಿಶ್ವಕೋಶದಂತಿದೆ. ಇವನ ಮತ್ತೊಂದು ಕೃತಿ ವಿಕ್ರಮಾಂಕಾಭ್ಯುದಯಂ. ಮೂರನೇ ಸೋಮೇಶ್ವರನಿಗೆ ಸರ್ವಜ್ಞ ಚಕ್ರವರ್ತಿ, ಸರ್ವಜ್ಞರಾಜ, ತ್ರಿಭುವನಮಲ್ಲ ಮತ್ತು ಭೂಲೋಕಮಲ್ಲ ಎಂಬ ಬಿರುದುಗಳಿದ್ದವು.[102] ಸುಮಾರು 11 ವರ್ಷಗಳ ಕಾಲ ವೈಭವದಿಂದ ಸಾಮ್ರಾಜ್ಯವನ್ನಾಳಿದ ಮೂರನೇ ಸೋಮೇಶ್ವರನು ಕ್ರಿ.ಶ 1138ರಲ್ಲಿ ಮರಣಹೊಂದಿರಬೇಕು.

9. ಜಗದೇಕಮಲ್ಲ (ಕ್ರಿ.ಶ 1138–1149) :

ಮೂರನೇ ಸೋಮೇಶ್ವರನ ನಂತರ ಅವನ ಮಗ ಜಗದೇಕಮಲ್ಲನು ಅಧಿಕಾರೂಡನಾದನು.ಇವನಿಗೆ ಕ್ರಿ.ಶ 1097ರ ಹರಸೂರು ಶಾಸನವು ಪೇರ್ಮಜಗದೇಕಮಲ್ಲ ಎಂದು ಹೆಸರಿಸಿದರೆ ಕ್ರಿ.ಶ 1099ರ ಭಾಲ್ಕಿ ಶಾಸನವು ಕುಮಾರ ಹೆಮ್ಮಾಡಿದೇವ ಎಂಬುದಾಗಿ ಹೆಸರಿಸಿದೆ. ಕ್ರಿ.ಶ 1147ರ ನರಗುಂದ ಶಾಸನ ಈತನ ಶೌರ್ಯ ಸಾಹಸಗಳನ್ನು ವರ್ಣಿಸುತ್ತದೆ. ಜಗದೇಕಮಲ್ಲನು ಸಹ ಧಾರ್ಮಿಕ ಕಾರ್ಯಗಳನ್ನು ಮಾಡಿದ್ದಾನೆ. ಮಲ್ಲಗಾವುಂಡ ಮಾಡಿಸಿದ ಮಲ್ಲಿನಾಥ ಜಿನೇಶ್ವರರಂಗಭೋಗಕ್ಕೆ ನಿತ್ಯನಿವೇದ್ಯಕ್ಕೆ ಮಾಟಕೂಟ ಪ್ರಸಾದಕ್ಕೆ ದಾನವನ್ನು ಬಿಡುತ್ತಾನೆ. ಅಗ್ರಹಾರ ಕುಕ್ಕನೂರಿನ ಸಾವಿರ ಮಹಾಜನರ ಪ್ರಿಯ ಮಕ್ಕಳಾದ ಮೂನೂರ್ವರು ಸಾವಿರ ಮಹಾಜನರ ಕೈಯಲ್ಲಿ ತಮ್ಮ ತೋಟಿಗೇಶ್ವರ ದೇವರಿಗೆ ವರ್ಷಂಪ್ರತಿ ತೋಟಗೆಲಸದಲ್ಲಿ ಒಂದು ಹಾಗವನ್ನು ಬಿಟ್ಟಂತೆ ಕುಕನೂರ ಶಾಸನ ತಿಳಿಸುತ್ತದೆ.[1103]

ಜಗದೇಕಮಲ್ಲನ ಕಾಲಘಟ್ಟದಲ್ಲಿ ದೊರೆತ್ತಿರುವ ವಿರಳ ಶಾಸನಗಳಲ್ಲಿ, ಬಸವಕಲ್ಯಾಣ ವಸ್ತು ಸಂಗ್ರಹಾಲಯದಲ್ಲಿ ಕಲ್ಲಿನ ಮೇಲಿರುವ ಕ್ರಿ.ಶ 1142ರ ಶಾಸನದಲ್ಲಿ, ಚಾಲುಕ್ಯ ಜಗದೇಕಮಲ್ಲನ ಆಳ್ವಿಕೆಯಲ್ಲಿ ಅವನ ಅಂತಃಪುರಾಧ್ಯಕ್ಷ ಕನ್ನಡಸಂಧಿವಿಗ್ರಹಿ, ಮನೆವೆರ್ಗ್ಗಡೆ, ದಂಡನಾಯಕ ಮೊದಲಾದ ವಿಶೇಷಣಗಳನ್ನು ಹೊಂದಿದ್ದು, ಪೊಮ್ಮಣಯ್ಯನ ಮಗ ಮಹಾಪ್ರಧಾನನಾದ ಮುದ್ರಾವಣದ ಹೆಗ್ಗಡೆ ಬೀವರಸನು ಅರಮನೆಯ ......ಸ್ವರ ದೇವರ ಪೂಜೆ, ಪುನಸ್ಕಾರ, ಪಂಚೋಪಚಾರ, ನೈವೇದ್ಯ, ನಂದಾದೀಪ ನಡೆಯುತ್ತಿರುವ ವಿಷಯ ತಿಳಿಯುತ್ತದೆ. ಅಲ್ಲದೇ ರಾಜಶ್ರೇಷ್ಠಿ ಅನ್ತಃಪುರಾಧ್ಯಕ್ಷ ಕೇಸಿಮಯ್ಯ, ದೇವದೊಸಿಗ ನಗರ ಜಗದರನಾಯಕ, ನಾಟಕದ

ಭಾಸ್ಕರಭಟ್ಟ, ಬ್ರಾಮಾನ್ತಕ ಅಪ್ಪಣಭಟ್ಟ, ಸಾವಾಸಿ ಸಾಯಿಯಣಭಟ್ಟ ಕಂನಡ ಭ್ರಮಾಂತಕರನ್ನು ಹೆಸರಿಸಿ ಅಲ್ಲಿನ ಅಧಿಕಾರಿಗಳ ಹುದ್ದೆಗಳು ಹಾಗೂ ಅವರ ಹೆಸರಿನ ಪರಿಚಯದ ಇತಿಹಾಸ ನೀಡಿರುವ ಶಾಸನಗಳಲ್ಲಿ ಇದು ಒಂದಾಗಿದೆ.[104]

ಬಸವಕಲ್ಯಾಣ ವಸ್ತು ಸಂಗ್ರಹಾಲಯದಲ್ಲಿಯೇ ಏಳನೆ ಕಲ್ಲಿನ ಮೇಲೆ ಇದೇ ವರ್ಷದ ಅಂದರೆ ಕ್ರಿ.ಶ 1142ರ ಶಾಸನದಲ್ಲಿಯೂ ಸಹ ಜಗದೇಕಮಲ್ಲನ ಆಳ್ವಿಕೆಯಲ್ಲಿನ ಅಂತಃಪುರಾಧ್ಯಕ್ಷ, ಕನ್ನಡ ಸಂಧಿವಿಗ್ರಹಿ, ಮನೆವೆರ್ಗ್ಗಡೆ, ದಂಡನಾಯಕ ಮೊದಲಾದ ವಿಶೇಷಣಗಳನ್ನು ಹೊಂದಿದ್ದ ಬಮ್ಮಣಯ್ಯನ ಮಗನಾದ ದಂಡನಾಯಕ ಭೀವರಸನು ಅರಮನೆಯ ದಕ್ಷಿಣಭಾಗದ ಭೀಮೇಶ್ವರದೇವರ ಪೂಜೆಗೆ ಏರ್ಪಾಟು ಮಾಡಿದ್ದನ್ನು ತಿಳಿಸುತ್ತ. ಸುತ್ತ ಮುತ್ತಲಿನ ಜನರಾದ ಕನ್ನಡ ಭ್ರಮಾಂತಕರು, ಮಳಯಖೇಡ ಸೇಡಿಂಬ, ಅಂಬುಲಿಗೆ, ಉಜ್ಜಣಂಬೆ ಮುಂತಾದ ಪ್ರದೇಶದ ಪ್ರಜೆಗಳು ಅಶೇಷ ನಖರಗಳು, ಪಂಚನಗರಗಳು ಉಭಯದೇಸಿಯರು ಸೇರಿ ಕೆಲವು ದಾನಗಳನ್ನು ನೀಡಿದ್ದು, ಭಾಸ್ಕರ ಭಟ್ಟ, ರೇವರಸ, ಹೊಟ್ಟಳಕೆರೆಯ ಭ್ರಾಮಂತಕರು, ಭುವನಗಿರಿ ಸುವಾಸಿ ಸಾಯಣಭಟ್ಟ, ಕಲುಂಬರಿಗೆಯ ಸಾಯಿಪಯ್ಯನಾಯಕ, ಮಾದಿಮಯ್ಯನಾಯಕ, ಮುದ್ರಾವಣದ ಹಸಿಗ ಸೇಸಮಯ್ಯಾ ನಾಯಕ, ಹೀಗೆ ಬೇರ ಬೇರೆ ಪ್ರದೇಶದ ಜನರ ಹೆಸರುಗಳನ್ನು ತಿಳಿಸುತ್ತ ಭೀಮೇಶ್ವರ ದೇವರಿಗೆ ದಾನ ನೀಡಿದ ವಿವರ ನಮೂದಿಸಲಾಗಿದೆ.[105]

ಬಸವಕಲ್ಯಾಣ ವಸ್ತು ಸಂಗ್ರಹಾಲಯದಲ್ಲಿ ಕಲ್ಲಿನ ಮೇಲಿರುವ ಕ್ರಿ.ಶ 1143ರ ಶಾಸನದಲ್ಲಿ, ಚಾಲುಕ್ಯ ಜಗದೇಕಮಲ್ಲನು ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದಾಗ ಕೋಟಕರ ಪಾಳಕ ಸೋಮಯ್ಯ ಎಂಬುವವನು ಪೆಮ್ಮ ಎಂಬುವವನಿಗೆ ತಳಾರಿಕೆ ಸಂಪಾದನೆಯಾದ ಮುದ್ರಾವಣದಲ್ಲಿ ಸಿಂಪಿಗಗೇರಿಯಲ್ಲಿ ದೇವರ ಮುಂದಿನ ನಾಲ್ಕು ಮನೆ, ಹಾಳಹಾದಿಯಲ್ಲಿನ ಸಿಂಪಿಗರ ಮನೆ ಆರು ಒಟ್ಟು ಸಿಂಪಿಗಗೇರಿಯಲ್ಲಿಯ ಮನೆ 10ನ್ನು ಈ ಮುಂದಿನ ಸಂದರ್ಭಗಳಿಗಾಗಿ ದಾನ ನೀಡುತ್ತಾನೆ. ದೀಪಾವಳಿ, ಬಾದುಮ್ಮೆಯ ಹಣವನ್ನು, ಸಂಕ್ರಾಂತಿಯ ಕವಡಿಕೆಯನ್ನು ಬ್ರಹ್ಮದೇವರ ಗಂಧ, ಅಕ್ಷತೆ, ಹೂವು, ದೀಪ, ಧೂಪ, ದೀಪದ ಎಣ್ಣೆ, ಕಟ್ಟಡದ ಸುಣ್ಣ ಬಳಿಯುವಿಕೆ ಹಾಗೂ ಜಿರ್ಣೋದ್ಧಾರಕ್ಕಾಗಿ ಸಿಂಗಬಕ್ಕ ಎಂವುವವನಿಗೆ ದಾರಾಪೂರ್ವಕವಾಗಿ ಬಿಟ್ಟ ಉಲ್ಲೇಖವಿದೆ.[106]

ಬೀದರ ಜಿಲ್ಲೆಯ ಅಣದೂರ ಗ್ರಾಮದ ಹಿರೇಮಠದ ಹಿಂದೆ ನಿಲ್ಲಿಸಿರುವ ಕಲ್ಲಿನ ಮೇಲಿರುವ ಕ್ರಿ.ಶ 1138ರ ಶಾಸನದಲ್ಲಿ ಜಗದೇಕಮಲ್ಲನು ಪಟ್ಟಬಂಧೋತ್ಸವವನ್ನು ಮಾಡಿಸಿಕೊಂಡು ಪ್ರಥಮ ವರ್ಷದಲ್ಲಿ ರಾಜ್ಯವಾಳುತ್ತಿದ್ದಾಗ ಜಗದೇಕಮಲ್ಲನು ಪಟ್ಟ ಕಟ್ಟಿಸಿಕೊಂಡು ಮಹಾಭೈರವ ಮೈಲಾರದೇವನ ಪಾದಗಳನ್ನು ದರ್ಶಿಸಿ ದೇವಾಲಯಕ್ಕೆ ಕಳಸವನ್ನು ಇಡಿಸಿ, ಆ ಸಮಯದಲ್ಲಿ ಅಣಂದೂರು ಶ್ರೀ ನಾಗೇಶ್ವರ ಅಂಗಭೋಗ, ರಂಗಭೋಗ, ನೈವೇದ್ಯಕ್ಕೆ, ಬ್ರಾಹ್ಮಣರಿಗೆ ತಪೋಧನರಿಗೆ ಅನ್ನದಾನಕ್ಕೆಂದು ಮಹಾಪ್ರದಾನನಾದ ಮನೆವೆರ್ಗ್ಗಡೆ ಅಟ್ಟಳೆನಾಡ ಸಾಮಂತ

ಬಮ್ಮಣಯ್ಯ ದಂಡನಾಯಕನಿಗೆ ಆ ನಾಡಿನ ಮಂನೆಯನಾದ ಮಂಡಳೇಶ್ವರನಾದ ಬದ್ಧರಸನಿಗೆ ರಾಜನು ಆದೇಶಿಸಲು ದತ್ತಿಯನ್ನು ಬಿಟ್ಟನು.[107]

ಇವನ ಕಾಲದಲ್ಲಿ ಚಾಲುಕ್ಯರ ಸಾಮಂತರು ಪ್ರಬಲರಾದರು. ಹೊಯ್ಸಳ ವಿಷ್ಣುವರ್ಧನನು ಸ್ವತಂತ್ರನಾಗಿ ಕೃಷ್ಣಾನದಿಯವರಗೂ ರಾಜ್ಯ ವಿಸ್ತರಿಸಿದನು. ಉಚ್ಚಂಗಿಯ ಪಾಂಡ್ಯರು, ಹಾನಗಲ್ಲಿನ ಕದಂಬರು ಅವನಿಗೆ ಶರಣಾದರು. ಕಳಚೂರಿ ಬಿಜ್ಜಳನು ಪ್ರಬಲನಾದನು. ಮಾಂಡಲಿಕರು ಅವಿಧೇಯರಾಗಿ ಉಳಿದರು. ಅಂತೂ ಚಾಲುಕ್ಯ ಇಳಿಗಾಲ ಆರಂಭವಾಯಿತು. ಇವನು ಸುಮಾರು 13 ವರ್ಷಗಳ ಕಾಲ ರಾಜ್ಯಭಾರ ಮಾಡಿ ಮರಣ ಹೊಂದಿರುತ್ತಾನೆ.[108]

10. ಮೂರನೇ ತೈಲಪ (ಕ್ರಿ.ಶ 1149–1155) :

ಜಗದೇಕಮಲ್ಲನಿಗೆ ಗಂಡು ಮಕ್ಕಳು ಇಲ್ಲದೇ ಇರುವುದರಿಂದ ಮೂರನೇ ಸೋಮೇಶ್ವರನ ಕಿರಿಯ ಮಗನಾದ ಮೂರನೇ ತೈಲಪನು ಅಧಿಕಾರಕ್ಕೆ ಬಂದನು. ಇವನು ಅಸಮರ್ಥ ರಾಜನಾಗಿದ್ದನು. ಸಾಮಂತರ ಪ್ರಾಬಲ್ಯವನ್ನು ಈತನಿಂದ ತಡೆಯಲಾಗಲಿಲ್ಲ. ಗೋವೆಯ ಕದಂಬರು, ಕೊಂಕಣದ ಮೌರ್ಯರು, ಶಿಲಾಹಾರರು, ಸೇವುಣರು ಸ್ವತಂತ್ರರಾಗಿ ಆಳಲಾರಂಭಿಸಿದರು. ಕಾಕತೀಯ ಪ್ರೋಲನು ತೈಲಪನನ್ನು ಸೋಲಿಸಿ ಬಂಧಿಸಿದನು. ಇದೇ ಸಮಯ ಕಾಯುತ್ತಿದ್ದ ಬಿಜ್ಜಳನು ಕ್ರಿ.ಶ 1156ರಲ್ಲಿ ಚಾಲುಕ್ಯ ಸಿಂಹಾಸನವನ್ನು ವಶಪಡಿಸಿಕೊಂಡನು. ಕಲ್ಯಾಣದಿಂದ ತಪ್ಪಿಸಿಕೊಂಡ ತೈಲಪನು ಅಣ್ಣಿಗೇರಿ ಮತ್ತು ಬನವಾಸಿಗಳಿಗೆ ಹೋಗಿ ಅಲ್ಲಿ ಕ್ರಿ.ಶ 1162ರವರೆಗೆ ಆಳಿ ಮರಣಹೊಂದಿದನು.[109]

ಬೀದರ ಜಿಲ್ಲೆಯ ತ್ರಿಪುರಾಂತದ ತ್ರಿಪುರಾಂತ ಕೆರೆಯ ದಂಡೆಯಲ್ಲಿರುವ ಕಲ್ಲಿನ ಮೇಲಿರುವ ಶಾಸನದಲ್ಲಿ, ತೈಲದೇವನ ಮಡಿವಳ ಹಾಗೂ ತ್ರಿಪುರಾಂತಕ ದೇವರ ಮಡಿವಳನಾದ ಮಾಕೆಯ್ಯನಿಗೆ ಭೂ ದಾನವನ್ನು ನೀಡಿದ ವಿಷಯ ಈ ಶಾಸನದಿಂದ ತಿಳಿದು ಬರುತ್ತದೆ.[110]

11. ನಾಲ್ಕನೇ ಸೋಮೇಶ್ವರ (ಕ್ರಿ.ಶ 1185–1189)

ಮೂರನೇ ತೈಲಪನ ಮಗನಾದ ನಾಲ್ಕನೇ ಸೋಮೇಶ್ವರನು ಚಾಲುಕ್ಯ ಸಂತತಿಯ ಕಡೆಯ ದೊರೆ. ಈತ ಚಾಲುಕ್ಯರ ಅಧಿಕಾರವನ್ನು ಪುನಃ ಸ್ಥಾಪಿಸಿದನು. ಕ್ರಿ.ಶ 1183ರಲ್ಲಿ ತನ್ನ ದಂಡನಾಯಕ ಬಮ್ಮಿದೇವನ ಸಹಾಯದಿಂದ ಬಿಜ್ಜಳನ ಮಗನನ್ನು ಸೋಲಿಸಿ ಸಿಂಹಾಸನ ಮರಳಿ ಪಡೆದನು. ಆದರೆ ಸಾಮ್ರಾಜ್ಯದ ಮೇಲೆ ಹತೋಟಿ ಸ್ಥಾಪಿಸಲು ಅಸಮರ್ಥನಾದನು. ಮಾಂಡಲಿಕರು ಚಾಲುಕ್ಯ ಸಾರ್ವಭೌಮತ್ವಕ್ಕೆ ಮಣಿಯಲಿಲ್ಲ. ಈ ಮಧ್ಯೆ ದ್ವಾರಸಮುದ್ರದ ಹೊಯ್ಸಳರು, ವಾರಂಗಲ್‌ನ ಕಾಕತೀಯರು, ಸೇವುಣರು ಪ್ರಬಲರಾದರು. ಕ್ರಿ.ಶ 1189ರಲ್ಲಿ ಹೊಯ್ಸಳ ವೀರಬಲ್ಲಾಳನು ಕಲ್ಯಾಣವನ್ನು ಮುತ್ತಿ ವಶಪಡಿಸಿಕೊಂಡನು. ಅಲ್ಲಿಗೆ ಕಲ್ಯಾಣ ಚಾಲುಕ್ಯರ ಸಾಮ್ರಾಜ್ಯವು ಅಂತ್ಯಗೊಳುತ್ತದೆ.[111]

ಅಧ್ಯಾಯ 2

ಆಡಳಿತ ವ್ಯವಸ್ಥೆ

ಕಲ್ಯಾಣ ಚಾಲುಕ್ಯರ ಅರಸೊತ್ತಿಗೆಯು ಅನುವಂಶೀಯವಾಗಿತ್ತೆಂದು ಹೇಳಲಾಗಿದೆ. ಹಿಂಹಾಸನವು ತಂದೆಯಿಂದ ಹಿರಿಯ ಮಗನಿಗೆ ಬರುತ್ತಿತ್ತು. ಹಿರಿಯ ಮಗನಿಗೆ ಯುವರಾಜ ಪಟ್ಟ ಕಟ್ಟಿ ಅವರಿಗೆ ಶಾಸ್ತ್ರ, ಶಸ್ತ್ರ, ವಿದ್ಯೇಗಳಲ್ಲಿ ತರಬೇತಿ ನೀಡಲಾಗುತ್ತಿತ್ತು. ಇನ್ನುಳಿದ ಮಕ್ಕಳು ಮಹಾಮಂಡಳೇಶ್ವರ, ಮಹಾಸಾಂತರು, ರಾಜಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸುತ್ತಿದ್ದರು. ಒಮ್ಮೊಮ್ಮೆ ಹಿರಿಯ ಮಗನಿಗೆ ಬದಿಗೊತ್ತಿ ಕಿರಿಯ ಸಹೋದರನು ಸಾಮ್ರಾಟನಾಗುವುದನ್ನು ಕಾಣಬಹುದು. ಉದಾಹರಣೆಗಾಗಿ ಮೂರನೇ ಸೋಮೇಶ್ವರನ ದುರಾಡಳಿತವನ್ನು ನೋಡಿ ಆತನ ವಿರುದ್ಧ ಯುದ್ಧಸಾರಿ ಆತನಿಗೆ ಬಂಧಿಖಾನೆಯಲ್ಲಿಟ್ಟು ಆರನೆ ವಿಕ್ರಮಾದಿತ್ಯನು ರಾಜ್ಯಭಾರ ಮಾಡಿರುವುದನ್ನು ಕಾಣಬಹುದು.

ಚಕ್ರವರ್ತಿಯು ಸರ್ವಾಧಿಕಾರಿಯಾಗಿ ಕೇಂದ್ರದ ಆಡಳಿತ ನೋಡಿಕೊಂಡರೆ ತನ್ನ ಕೆಳಗೆ ಪ್ರಾಂತಿಯ ಆಡಳಿತಾಧಿಕಾರಿಗಳಾದ ಮಹಾಮಂಡಳೇಶ್ವರರರು, ಮಂಡಳೇಶ್ವರರು ಅವರ ಕೈಕೆಳಗೆ ಮಹಾಸಾಮಂತರು, ಸಾಮಂತರು ಮತ್ತು ಅವರ ಕೆಳಗೆ ಪ್ರಭುಗಾವುಂಡರು, ಇನ್ನು ಕೆಳಗೆ ಗಾವುಂಡರು ಆಳ್ವಿಕೆ ಮಾಡುತ್ತಿದ್ದರು.

ರಾಜ್ಯದ ಸಪ್ತಾಂಗಗಲ್ಲಿ ಇದು ಅತ್ಯಂತ ಪ್ರಮುಖವಾದ ಅಂಗ. ರಾಷ್ಟ್ರವೆಂಬ ರಥ ನಡೆಯಿಸಿಕೊಂಡು ಹೋಗಬೇಕಾದರೆ ಮಂತ್ರಿಗಳು ಬಹು ಅವಶ್ಯಕ. ರಾಜನೊಬ್ಬನೆ ರಾಜ್ಯದ ಎಲ್ಲ ಕಾರ್ಯಚಟುವಟಿಕೆಗಳನ್ನು ನೋಡಿಕೊಳ್ಳುವುದು ಸಾಧ್ಯವಿಲ್ಲದುದರಿಂದ ಅವನು ತನ್ನ ಕರ್ತವ್ಯದ ಹೊರೆಯ ಸ್ವಲ್ಪ ಭಾಗವನ್ನು ಮಂತ್ರಿಗಳ ಮೇಲೆ ಹೊರಿಸಬೇಕು ಎಂದು ಮಹಾಭಾರತದಲ್ಲಿ ಹೇಳಲಾಗಿದೆ. ಸಹಕಾರದಿಂದ ಸರಕಾರ ಆದುದರಿಂದ ದೊರೆಯು ಮಂತ್ರಿಗಳನ್ನು ನೇಮಿಸಿಕೊಂಡು ಅವರ ಅಭಿಪ್ರಾಯಗಳನ್ನು ಕೇಳಬೇಕೆಂದು ಕೌಟಿಲ್ಯನು ಹೇಳಿದ್ದಾನೆ.

ಮಾನಸೊಲ್ಲಾಸವು ಮಂತ್ರಿಗಳ ಅರ್ಹತೆಗಳನ್ನು ಹೇಳುತ್ತಾ "ಅವನು ಸ್ವದೇಶಿಯಾಗಿರಬೇಕು, ಉತ್ತಮಕುಲದಲ್ಲಿ ಜನಿಸಿದವನಾಗಿರಬೇಕು, ಸತ್ಯಸಂಧನು, ಧರ್ಮಶೀಲನು, ಪ್ರೀಯ ಭಾಷಿಯೂ, ಧರ್ಮಶಾಸ್ತ್ರ ಕೋವಿದನು, ಲೋಕಯಾತ್ರೆಯಲ್ಲಿ

ಅನುಭವಶಾಲಿಯೂ, ಪಂಡಿತ, ದಕ್ಷ, ವಾದಕುಶಲ, ಇತಿಹಾಸ ತಜ್ಞ, ತತ್ವಜ್ಞಾನಿಗಿರಬೇಕೆಂದು" ಹೇಳಿದೆ.

ಚಾಲುಕ್ಯ ಅರಸರು ಇಂತಹ ವಿದ್ವಾಂಸರಾದ ಮಂತ್ರಿಗಳನ್ನೇ ನೇಮಿಸಿಕೊಂಡಿರುವುದಕ್ಕೆ ಅವರ ಶಾಸನಗಳಿಂದ ಉದಾಹರಣೆಗಳು ದೊರೆಯುತ್ತವೆ. ಏವೂರಿನ ಶಾಸನದಲ್ಲಿ (ಕ್ರಿ.ಶ 1077) ರವಿದೇವನು ಹಂತ ಹಂತವಾಗಿ ಉನ್ನತ ಹುದ್ದೆಯನ್ನು ಹೊಂದಿದ ಉಲ್ಲೇಖವಿದೆ. ರವಿದೇವನ ತಂದೆ ಕೊಪ್ಪದೇವನು ಉದಾರ ಚರಿತೆ, ಸೌಜನ್ಯ ಗುಣ, ಶೌಚಾಚಾರಗಳನ್ನು ಹೊಂದಿ ಚಕ್ರವರ್ತಿ ಜಯಸಿಂಹನನ್ನು ಉಪಧಾವಿಶುದ್ಧಾ ಯಿಂದ ಮೆಚ್ಚಿಸಿ ಖಜಾನೆಯ ಭಂಡಾರಿಗೆ ಹುದ್ದೆಯನ್ನು ಪಡೆಯುತ್ತಾನೆ. ಇವನ ಪುತ್ರನೇ ರವಿದೇವ. ಇವನು ತನ್ನ ವಿದ್ಯೆಯಿಂದ ಚಕ್ರವರ್ತಿ ಒಂದನೆಯ ಸೋಮೇಶ್ವರನನ್ನು ಮೆಚ್ಚಿಸಿ ಲಾಳಸಂಧಿವಿಗ್ರಹಿ ಅಧಿಕಾರವನ್ನು ಪಡೆಯುತ್ತಾನೆ. ಮುಂದೆ ಎರಡನೆಯ ಸೋಮೇಶ್ವರನಲ್ಲಿ ಸೇನಾಧಿಪತ್ಯ ದೊಡನೆ ಹೇರಿಸಂಧಿ ವಗ್ರಹಿ ಹುದ್ದೆಯನ್ನು ಪಡೆಯುತ್ತಾನೆ. ಇನ್ನು ಮುಂದೆ ಬಂದ ಚಕ್ರಚವರ್ತಿ ಆರನೆಯ ವಿಕ್ರಮಾದಿತ್ಯನು ಇವನಿಗೆ ಸಕಲ ರಾಜ ಚಿನ್ಹೆಗಳನ್ನು ನೀಡಿ ಗೌರವಿಸುತ್ತಾನೆ.

ಪ್ರಾಚೀನ ಕರ್ನಾಟಕದಲ್ಲಿ ಮಂತ್ರಿ ಪದವಿಯು ತಂದೆಯಿಂದ ಮಗನಿಗೆ ಹರಿದು ಬರುತ್ತಿತ್ತು. ಈ ಪದ್ಧತಿಯು ಕಲ್ಯಾಣಿ ಚಾಲುಕ್ಯರ ಕಾಲದಲ್ಲಿಯೂ ಮುಂದುವರೆಯಿತು. ಉದಾಹರಣೆಗಾಗಿ ಮಂತ್ರಿ ಮಹಾಪ್ರಚಂಡದಂಡನಾಯಕ ಕೇಶವಯ್ಯ ಬೆಳವಲ-300 ಮತ್ತು ಪುರಿಗೇರೆ-300 ವಿಭಾಗಗಳನ್ನು ಆಳುತ್ತಿದ್ದನು. ಕೇಶವರಸನ ಹಿರಿಯಮಗ ವಾವಣರಸನು ಕೇಶವರಸರ ತದಗ್ರ ತನುಜಂ, ಎಡರನೆಯ ಜಯಸಿಂಹನ ಆಳ್ವಿಕೆಯಲ್ಲಿ ಮಂತ್ರಿಯಾಗಿದ್ದು, ಮಹಾಸಂಧಿವಿಗ್ರಹಾಧಿಪತಿ ಹುದ್ದೆಯನ್ನು ಹೊಂದಿದ್ದನು.

ಅನುವಂಶಿಯ ಮಂತ್ರಿ ಪದವಿಗೆ ಸಂಬಂಧಿಸಿದ ಮತ್ತೊಂದು ಉದಾಹರಣೆ, ಕಾಳಿದಾಸ ದಂಡನಾಯಿಕನದು, ಈತನು ದಂಡಾಧೀಶ ಮಧುಸೂಧನನ ಪುತ್ರನಾಗಿದ್ದು, ಚಾಲುಕ್ಯ ಅರಸರ ಮಂತ್ರಿ ಮಂಡಳದಲ್ಲಿ ಪ್ರಮುಖ ಸದಸ್ಯ ಮಂತ್ರಿಯಾಗಿದ್ದು, ಈತನ ತಂದೆಯ ನಂತರ ಕಡಿತವೆಗ್ಗಡೆ ಮತ್ತು ಕನ್ನಡ ಸಂಧಿವಿಗ್ರಹಿ ಹುದ್ದೆಗಳನ್ನು ಹೊಂದಿದ್ದನು. ನಂತರ ಈತನನ್ನು ಮಹಾಪ್ರಧಾನ ಹುದ್ದೆಗೇರಿಸಿ ಕಡಿತವೆಗ್ಗಡೆ ಮತ್ತು ಕನ್ನಡಸಂಧಿವಿಗ್ರಹಿ ಹುದ್ದೆಗಳಲ್ಲಿ ಮುಂದುವರೆಸಲಾಯಿತು.

ದಂಡಾಧೀಶ ಮಧುಸೂಧನನು ಮಹಾನ್ ಹೋರಾಟಗಾರ, ಮುತ್ಸದ್ದಿಯಾಗಿದ್ದು ವಾಣಸ ಮನೆತನಕ್ಕೆ ಸಂಬಂಧಿಸಿದ್ದನು. ಸೋಮೇಶ್ವರರ ಆಳ್ವಿಕೆಯಲ್ಲಿ ಕ್ರಿ.ಶ 1054ರ ವೇಳೆಗೆ ತನ್ನ ಜೀವನದ ಉನ್ನತ ಸ್ಥಾನದಲ್ಲಿದ್ದನು. ನಾಗವಾವಿಯ ಶಾಸನದಲ್ಲಿ ಈತನ ಮನೆತನದ ಸಂಪೂರ್ಣ ಇತಿಹಾಸ, ಸೇನಾಮುತ್ಸದ್ದಿ ಮಧೂಸೂಧನನ ಸಾಧನೆಗಳ ಬಗೆಗೆ ವಿವರಗಳು ದೊರೆಯುತ್ತವೆ. ಈತ ಕಾಳಿದಾಸ ಹಾಗೂ ರಬ್ಬಣಬ್ಬೆಯರ ಮೂರನೆಯ ಮಗನಾಗಿದ್ದು, ಈ ಮನೆತನದ ಅದ್ವಿತಿಯ

ಸದಸ್ಯನಾಗಿದ್ದನು. ಕಾಳಿದಾಸನು ಚಾಲುಕ್ಯ ಮನೆತನದ ಸಂಪದಭಿವೃದ್ಧಿಯ ಕಾರಣೀಪುರುಷನೆಂದು ಕೊಂಡಾಡಲಾಗಿದೆ. ಮಧುಸೂಧನನ ಹಿರಿಯಣ್ಣ ಬಾಚಿರಾಜ, ಚಾಲುಕ್ಯ ಅರಸರ ಸಾರ್ವಭೌಮತ್ವವನ್ನು ಕಾಪಾಡಿದ ಕೀರ್ತಿಗೆ ಪಾತ್ರನಾಗಿದ್ದಾನೆ.

ದಂಡನಾಯಕ ಅನಂತಪಾಲ ಕಲ್ಯಾಣದ ಚಾಲುಕ್ಯರ ಆಡಳಿತದಲ್ಲಿ ಬರುವ ಮೊತ್ತೊಬ್ಬ ಪ್ರಸಿದ್ಧ ದಂಡನಾಯಕ. ಈತ ಚಾಲುಕ್ಯ ಅರಸರಿಗೆ ಅನುಪಮ ಸೇವೆಯನ್ನು ಸಲ್ಲಿಸಿದನಲ್ಲದೇ ಪ್ರಸಿದ್ಧ ಮಂತ್ರಿಯೂ ಆಗಿದ್ದ. ಕ್ರಿ.ಶ 1126ರ ಶಾಸನವೊಂದು ದಂಡನಾಯಕ ಆನಂತಪಾಲನ ಪೂರ್ವಿಕರ ವಿವರಣೆಯನ್ನು ಒದಗಿಸುತ್ತದೆ. ಈತ ಮಹೇಶ್ವರ ದಂಡಾಧೀಪನ ಮಗನಾಗಿದ್ದು, ಚಾಲುಕ್ಯ ಅರಸರಿಗೆ ಅಪೂರ್ವ ಸೇವೆ ಸಲ್ಲಿಸಿ ಚಾಲುಕ್ಯ ಕುಲಮೂಲಸ್ತಂಭ ಎಂಬ ಅಭಿಧಾನವನ್ನು ಪಡೆದುಕೊಂಡಿದ್ದನು. ಮಹೇಶ್ವರ ದಂಡಾಧಿಪ ಭೀಮದಂಡಾಧಿನಾಥನ ಮಗನಾಗಿದ್ದನು. ಈತನು ರಣರಂಗದಲ್ಲಿ ಮಹಾನ ಪರಾಕ್ರಮಿಯಾಗಿದ್ದನು.

ಚಾಲುಕ್ಯ ಅರಸರು ಅನುವಂಶಿಕ ಮಂತ್ರಿ ಪರಿಷತ್ತುನ್ನು ಹೊಂದಿದ್ದರು. ಅರ್ಹರಿದ್ದವರಿಗೆ ಮಾತ್ರ ಅವಕಾಶವಿತ್ತು. ವಡ್ಡರಾಧನೆಯ ಸುಕುಮಾರಚರಿತ್ರೆಯೆಂಬ ಕಥೆಯಲ್ಲಿ ರಾಜನು ತನ್ನ ಮಂತ್ರಿಯ ಸಾವಿನ ನಂತರ ಅವನ ಪದವಿಯನ್ನು ಅವನ ಮಕ್ಕಳಿಗೆ ಕೊಟ್ಟಿದ್ದನು. ಅವರು ಅನರ್ಹರೆಂದು ತಿಳಿದಬಳಿಕ, ಅವರ ಪದವಿಯನ್ನು ಕಿತ್ತುಕೊಂಡಿದ್ದನು, ನಂತರ ಅವರು ಯೋಗ್ಯತೆಯನ್ನು ಸಂಪಾದಿಸಿದ ಮೇಲೆ ಮರಳಿ ಕೊಟ್ಟಿದ್ದನ್ನು ಕಾಣುತ್ತೇವೆ.

ಪ್ರಾಚೀನ ಕರ್ನಾಟಕದ ರಾಜರ ಮಂತ್ರಿಮಂಡಳ ಎಷ್ಟು ಮಂತ್ರಿಗಳಿಂದ ಕೂಡಿತ್ತು ಎಂದು ಹೇಳುವದು ಕಷ್ಟಸಾಧ್ಯ. ನೀತಿಗ್ರಂಥಗಳೂ ಈ ವಿಷಯದಲ್ಲಿ ಒಮ್ಮತದ ಅಭಿಪ್ರಾಯಗಳನ್ನು ಒಳಗೊಂಡಿಲ್ಲ. ಅವು ಮಂತ್ರಿಗಳ ಸಂಖ್ಯೆ ಎಂಟರಿಂದ ಇಪ್ಪತ್ತವರೆಗೆ ಇರಬಹುದೆಂದು ಹೇಳುತ್ತವೆ. ಸೋಮದೇವನು ತನ್ನ ಯಶಸ್ತಿಲಕ ಚಂಪೂಕಾವ್ಯದಲ್ಲಿ ರಾಜನು ಒಬ್ಬ ಮಂತ್ರಿಯನ್ನೆ ಅವಲಂಭಿಸಿರಕೂಡದೆಂದೂ ಹಾಗೆ ಮಾಡಿದರೆ ಬಳ್ಳಿಯೂ ಒಂದೆ ಕೊಂಬೆಯಿರುವ ಮರವನ್ನು ಅವಲಂಭಿಸಿದಂತಾಗುವುದೆಂದೂ ಹೇಳುತ್ತಾನೆ.

ಮಾನಸೊಲ್ಲಾಸವೂ ಅರಸನು ಏಳು ಅಥವಾ ಎಂಟು ಜನ ಮಂತ್ರಿಗಳನ್ನು ನೇಮಿಸಿಕೊಳ್ಳಬೇಕೆಂದು ವಿವರಿಸುತ್ತದೆ. ಆದರೆ ಇವನ ಕಾಲಕ್ಕೆ ಸಂಬಂಧಿಸಿದಂತೆ ಮಂತ್ರಿಗಳ ಸಂಖ್ಯೆ ಎಷ್ಟಿರಬೇಕು, ಎಷ್ಟು ಇದ್ದಿತು, ಎಂಬುದರ ಬಗ್ಗೆ ನೇರ ಹಾಗೂ ನಿರ್ದಿಷ್ಟ ದಾಖಲೆಗಳು ಇಲ್ಲ. ಆದರೆ ಚಾಲುಕ್ಯರ ಮಾಂಡಲೀಕರಾದ ಉತ್ತರ ಕೊಂಕಣದ ಶಿಲಾಹಾರರ ಶಾಸನಗಳು ಆಗಾಗ್ಗೆ ತಮ್ಮ ಪೂರ್ಣಮಂತ್ರಿಮಂಡಳದ ಚಿತ್ರಣವನ್ನು ಒದಗಿಸುವದರ ಜೊತೆಗೆ, ಮಂತ್ರಿಗಳ ಹೆಸರು, ಇಲಾಖೆಗಳನ್ನು ಉಲ್ಲೇಖಿಸುತ್ತವೆ. ಕ್ರಿ.ಶ 1024ರಲ್ಲಿ ಶಿಲಾಹಾರ ದೊರೆ ಚಿತ್ತರಾಜದೇವನ ಮಂತ್ರಿಮಂಡಳದಲ್ಲಿ ಐದು ಜನ ಮಂತ್ರಿಗಳಿದ್ದರೆಂದು ತಿಳಿದು ಬರುತ್ತದೆ. ಚಿಕ್ಕ

ಪ್ರದೇಶವನ್ನು ಆಳಿದ ಚಾಲುಕ್ಯರ ಸಮಕಾಲೀನ ಯಾದವರ ಮಂತ್ರಿಮಂಡಳದಲ್ಲಿ ಕ್ರಿ.ಶ 1069ರಲ್ಲಿ ಏಳು ಜನ ಮಂತ್ರಿಗಳಿದ್ದರೆಂದು ತಿಳಿದು ಬರುತ್ತದೆ.

ಕ್ರಿ.ಶ 1050ರ ಸೂಡಿ ಶಾಸನವು ಅಕ್ಕಾದೇವಿಯು ಕಿಸುಕಾಡು–70, ತೊರೆಗೆರೆ–70 ಮತ್ತು ಮಾಯಿಸವಾಡಿ 140ಗಳನ್ನು ಆಳುತ್ತಿದ್ದಾಗಿನ ಆಕೆಯ ಮಂತ್ರಿಮಂಡಳದ ಪೂರ್ಣ ಚಿತ್ರಣವನ್ನು ನೀಡುತ್ತದೆ. ಇದರ ಪ್ರಕಾರ ಅಕ್ಕಾದೇವಿಯ ಮಂತ್ರಿಮಂಡಳವು ಮನೆವರ್ಗ್ಗಡೆ, ಕಾಳಿದಾಸಯ್ಯ, ತಂತ್ರಪಾಳ, ಮಿಳ್ಳಯ್ಯ, ತಂತ್ರಪಾಳ ಚಟ್ಟಿಮಯ್ಯ, ಪ್ರಧಾನ ದೆಮ್ಮಣ್ಣ, ಅಳಿಯಂ ಚೌಡಿಮಯ್ಯ, ಅಡಪದ, ಚಾವುಂಡರಾಯ,, ತಂತ್ರದ ಸೇನಬೋವ, ದಾಸಿಮಯ್ಯ (ಅಂತು ಸಮಸ್ತ ಪ್ರಧಾನರುಮ್) ಎಂದು ವಿವರಿಸುತ್ತದೆ. ಆದರೆ ಶೋಮೇಶ್ವರ ದೊಡ್ಡ ಸಾಮ್ರಾಜ್ಯವನ್ನು ಸ್ಥಾಪಿಸಿದ್ದು, ಅದರ ವ್ಯಾಪ್ತಿಗನುಗುಣವಾಗಿ ಮಂತ್ರಿಂಡಳದ ಸದಸ್ಯರ ಸಂಖ್ಯೆ ಹೆಚ್ಚಾಗಿದ್ದಿರಬಹುದು.

ಇವನ ಮಂತ್ರಿಮಂಡಳದಲ್ಲಿ ಸಂಧಿವಿಗ್ರಹಕನು ಅತಿಪ್ರಮುಖವಾದ ಸ್ಥಾನವನ್ನು ಹೊಂದಿದ್ದನು. ಇವನ ಸ್ಥಾನ ಇಂದಿನ ಆಧುನಿಕ ವಿದೇಶಾಂಗ ಮಂತ್ರಿಯದಾಗಿತ್ತು. ನೆರೆಯ ರಾಷ್ಟ್ರಗಳೊಡನೆ ರಾಜನು ವ್ಯವಹರಿಸುತ್ತಿದ್ದು ಬಹುಮಟ್ಟಿಗೆ ಇವನ ಮೂಲಕವೇ. ಸಂಧಿ ಮತ್ತು ಸಮರಗಳನ್ನು ನಿಶ್ಚಯಿಸುತ್ತಿದ್ದವನು ಇವನೇ ಪರಾರಾಷ್ಟ್ರಗಳೊಡನೆ ವ್ಯವಹರಿಸಬೇಕಾಗಿದ್ದರಿಂದ ಹಲವಾರು ಭಾಷೆಗಳನ್ನು, ಲಿಪಿಗಳನ್ನು ಬಲ್ಲವನಾಗಿರುತ್ತಿದ್ದನು. ಈತನು ರಾಜನ ಜೊತೆಗೆ ಯುದ್ಧದಲ್ಲಿ ಭಾಗವಹಿಸುತ್ತಿದ್ದನೆಂಬ ವಿಷಯ ಕೆಲ ದಾಖಲೆಗಳಿಂದ ತಿಳಿಯುತ್ತದೆ.

ಸಂಧಿವಿಗ್ರಹಿಯ ಮತ್ತೊಂದು ಮುಖ್ಯ ಕರ್ತವ್ಯ ಶಾಸನಗಳ ದಾನಪತ್ರಗಳ ಪಾಠವನ್ನು ಸಿದ್ಧಪಡಿಸುವುದು. ಆನೇಕ ತಾಮ್ರಪಟಗಳ ಮತ್ತು ಶಾಸನಗಳ ಕೊನೆಯಲ್ಲಿ ಇಂಥ ಮಾತುಗಳು ಕಂಡುಬರುತ್ತವೆ. ಸಂಧಿವಿಗ್ರಹಿಯ ನಾನಾ ಕರ್ತವ್ಯಗಳ ಚಿತ್ರವು ಯತಶ್ತಿಲಕ ಚಂಪೂವಿನಲ್ಲಿ ದೊರಕುತ್ತದೆ. ಪರರಾಷ್ಟ್ರಗಳಿಂದ ಬಂದ ರಾಯಭಾರಿಗಳನ್ನು ಸ್ವಾಗತಿಸಿ, ರಾಜರ ಬಳಿಗೆ ಕರೆದೊಯ್ಯುವುದೂ, ಪರರಾಷ್ಟ್ರಗಳ ರಾಜರುಗಳಿಗೆ ಪತ್ರಗಳನ್ನು ಸಿದ್ಧಪಡಿಸುವದು ಈತನ ಕೆಲಸ, ಒಬ್ಬೊಬ್ಬ ರಾಜನ ಹತ್ತಿರ ಹಲವಾರು ಸಂದಿವಿಗ್ರಹಿಗಳಿದ್ದು, ಅವರಿಗೆ ಮಹಾಸಂಧಿವಿಗ್ರಹಿಯು ಮುಖ್ಯಸ್ಥನಾಗಿದ್ದನೆಂದು ಕಾಣುತ್ತದೆ.[112]

ಆಡಳಿತಾಧಿಕಾರಿಗಳಿಗೆ ಆಡಳಿತದ ವಿಷಯದಲ್ಲಿ ಸಹಾಯ ಮಾಡಲು ಹಲವಾರು ಅಧಿಕಾರಿಗಳನ್ನು ನೇಮಿಸಿಕೊಳ್ಳಲಾಗುತ್ತಿತ್ತು. ಮನಸೊಲ್ಲಾಸ 66 ಅಧಿಕಾರಿಗಳ ಪಟ್ಟಿಯನ್ನು ನೀಡಿದೆ. ಇವರಲ್ಲಿ ಕೆಲವರನ್ನು ಚಾಲುಕ್ಯರ ಶಾಸನಗಳು ಹೆಸರಿಸುತ್ತವೆ. ಆದರೆ ಅವನ ಕಾರ್ಯಸ್ವರೂಪವೇನು? ಎಂಬುದರ ಬಗೆಗೆ ಖಚಿತತೆ ಇಲ್ಲದಿರುವುದರಿಂದ ಶಾಸನಗಳಲ್ಲಿ ಉಲ್ಲೇಖಿತರಾದ ಅಧಿಕಾರಿಗಳ ಪಟ್ಟಿಯನ್ನು ಮಾತ್ರ ನೀಡಲಾಗಿದೆ.

ಅಧಿಕಾರಿಗಳು	**ಕಾರ್ಯವ್ಯಾಪ್ತಿ ಪ್ರದೇಶ (ಭಾಗ)**
ದೇಶಾಧಿಕಾರಿ	ವಿಭಾಗದ ಆಡಳಿತಾಧಿಕಾರಿ (ಮುಖ್ಯಸ್ಥ)
ಗ್ರಾಮಾಧಿಕಾರಿ	ಗ್ರಾಮದ ಆಡಳಿತಾಧಿಕಾರಿ
ಧರ್ಮಾಧಿಕಾರಿ	ನ್ಯಾಯಾಂಗ ಆಡಳಿತಾಧಿಕಾರಿ
ಅರ್ಥಾಧಿಕಾರಿ	ಹಣಕಾಸು ಆಡಳಿತಾಧಿಕಾರಿ
ಕಾಮಧಾರಿ	ಸಂಗ್ರಹಾಗಾರ ಆಡಳಿತಾಧಿಕಾರಿ
ಕೋಶಾಧಿಕಾರಿ	ಬೊಕ್ಕಸ ಆಡಳಿತಾಧಿಕಾರಿ
ಬಲಾಧಿಕಾರಿ	ಸೈನ್ಯದ ಆಡಳಿತಾಧಿಕಾರಿ
ದುರ್ಗಾಧಿಕಾರಿ	ಕೋಟೆಯ ಆಡಳಿತಾಧಿಕಾರಿ
ವಸ್ತ್ರಾಧಿಕಾರಿ	ಉಡುಗೆ ತೊಡುಗೆ ಆಡಳಿತಾಧಿಕಾರಿ
ಭೊಷಾಧಿಕಾರಿ	ಆಭರಣಗಳ ಆಡಳಿತಾಧಿಕಾರಿ
ನಿಷ್ಕಾಧಿಕಾರಿ	ನಾಣ್ಯಗಳ ಆಡಳಿತಾಧಿಕಾರಿ
ವರ್ಣಾಧಿಕಾರಿ	ಜಾತಿ ವರ್ಗಗಳ ಆಡಳಿತಾಧಿಕಾರಿ
ತುಲಾಧಿಕಾರಿ	ಆಳತೆಗಳ ಆಡಳಿತಾಧಿಕಾರಿ
ಮುದ್ರಾಧಿಕಾರಿ	ಮುದ್ರಾಂಕಿತ, ನಾಣ್ಯ ಆಡಳಿತಾಧಿಕಾರಿ
ಮೂಲ್ಯಾಧಿಕಾರಿ	ಬೆಲೆ, ಭತ್ಯೆ & ಸಂಬಳದ ಆಡಳಿತಾಧಿಕಾರಿ
ಧೂತಾಧಿಕಾರಿ	ಗೂಡಚಾರರು ಆಡಳಿತಾಧಿಕಾರಿ
ದುಷ್ಟಾಧಿಕಾರಿ	ಬಂಧಿಖಾನೆಯ ಆಡಳಿತಾಧಿಕಾರಿ
ತೀರ್ಥಾಧಿಕಾರಿ	ಧರ್ಮ,ರಾಜ್ಯ ವ್ಯವಹಾರ ಆಡಳಿತಾಧಿಕಾರಿ
ನಾವಾಧಿಕಾರಿ	ಹಡಗು, ನೌಕೆಯ ಆಡಳಿತಾಧಿಕಾರಿ
ಮಾರ್ಗಾಧಿಕಾರಿ	ಗಡಿ, ಪ್ರವೇಶದ್ವಾರ ಆಡಳಿತಾಧಿಕಾರಿ
ದ್ವಾರಾಧಿಕಾರಿ	ಬಾಗಿಲು, ದ್ವಾರಗಾಳ ಆಡಳಿತಾಧಿಕಾರಿ
ಭಾರಾಧಿಕಾರಿ	ತೂಕಗಳ ಆಡಳಿತಾಧಿಕಾರಿ
ದ್ವೀಪಾಧಿಕಾರಿ	ನಡುಗಡ್ಡೆಗಳ ಆಡಳಿತಾಧಿಕಾರಿ.
ದ್ವಾಷ್ಟಾಧಿಕಾರಿ	ದ್ವಾರಪಾಲಕ ಆಡಳಿತಾಧಿಕಾರಿ

ಮಲ್ಲಾಧಿಕಾರಿ	ಕುಸ್ತಿ ಪಟುಗಳ ವಿಭಾಗ ಆಡಳಿತಾಧಿಕಾರಿ
ಅಂಗಾಧಿಕಾರಿ	ಎ.ಡಿ.ಸಿ ವಿಭಾಗದ ಅಧಿಕಾರಿ
ಯೋಧಾಧಿಕಾರಿ	ಕಾಲ್ದಳದ ಆಡಳಿತಾಧಿಕಾರಿ
ದೇವಾಧಿಕಾರಿ	ದೇವಾಲಯಗಳ ಆಡಳಿತಾಧಿಕಾರಿ
ಶಾಸ್ತ್ರಾಧಿಕಾರಿ	ಶಾಸ್ತ್ರಗಳ ವಿಭಾಗದ ಆಡಳಿತಾಧಿಕಾರಿ
ದಾನಾಧಿಕಾರಿ	ದಾನ, ದತ್ತಿ ಆಡಳಿತಾಧಿಕಾರಿ
ದಂಡಾಧಿಕಾರಿ	ನ್ಯಾಯಾಂಗ ಆಡಳಿತಾಧಿಕಾರಿ
ಗಜಾಧಿಕಾರಿ	ಆನೆಗಳ ವಿಭಾಗದ ಆಡಳಿತಾಧಿಕಾರಿ
ಅಶ್ವಾಧಿಕಾರಿ	ಅಶ್ವಪಡೆಯ ಆಡಳಿತಾಧಿಕಾರಿ
ರಥಾಧಿಕಾರಿ	ರಥ ಪಡೆಗಳ ಆಡಳಿತಾಧಿಕಾರಿ
ಪ್ರಾಣಾಧಿಕಾರಿ	ವೈದ್ಯಕೀಯ ಆಡಳಿತಾಧಿಕಾರಿ
ಶಸ್ತ್ರಾಧಿಕಾರಿ	ಆಯುಧಗಳ ವಿಭಾಗದ ಆಡಳಿತಾಧಿಕಾರಿ
ಚಾಪಾಧಿಕಾರಿ	ಬಿಲ್ಲು ಪಡೆಯ ಆಡಳಿತಾಧಿಕಾರಿ
ಮೃಗಾಧಿಕಾರಿ	ಕಾಡು ಪ್ರಾಣಿಗಳ ಆಡಳಿತಾಧಿಕಾರಿ
ಪಕ್ಷಾಧಿಕಾರಿ	ಪಕ್ಷಿ ಪಂಜರ ಆಡಳಿತಾಧಿಕಾರಿ
ಸ್ನಾನಾಧಿಕಾರಿ	ಸ್ನಾನ, ಅಭ್ಯಂಜನ ಆಡಳಿತಾಧಿಕಾರಿ
ಶುಧಾಧಿಕಾರಿ	ಪಾಕಶಾಲೆ ಆಡಳಿತಾಧಿಕಾರಿ
ತೋಯಾಧಿಕಾರಿ	ಜಲ ಅಥವಾ ನೀರು ಆಡಳಿತಾಧಿಕಾರಿ
ಛತ್ರಾಧಿಕಾರಿ	ಬೆಳ್ಗೊಡೆಯ ಆಡಳಿತಾಧಿಕಾರಿ
ದೀಪಾಧಿಕಾರಿ	ದೀಪಗಳ ವಿಭಾಗ ಆಡಳಿತಾಧಿಕಾರಿ
ತೈಲಾಧಿಕಾರಿ	ಎಣ್ಣೆ ಅಥವಾ ತೈಲ ಆಡಳಿತಾಧಿಕಾರಿ
ಗಾವಾಧಿಕಾರಿ	ದನಕರುಗಳ ಆಡಳಿತಾಧಿಕಾರಿ
ಘಾಸಾಧಿಕಾರಿ	ಹಲ್ಲುಗಾವಲು ಆಡಳಿತಾಧಿಕಾರಿ
ಕ್ಷೀರಾಧಿಕಾರಿ	ಹಾಲಿನ ಆಡಳಿತಾಧಿಕಾರಿ
ಕರ್ಮಾಧಿಕಾರಿ	ಕ್ರಿಯಾ ವಿಧಾನದ ಆಡಳಿತಾಧಿಕಾರಿ

ಶಯ್ಯಾಧಿಕಾರಿ	ಹಾಸಿಗೆಯ ಆಡಳಿತಾಧಿಕಾರಿ
ಕಾಂತಾಧಿಕಾರಿ	ಅಂತಃಪುರದ ಆಡಳಿತಾಧಿಕಾರಿ
ಪುತ್ರಾಧಿಕಾರಿ	ಯುವರಾಜರ ಆಡಳಿತಾಧಿಕಾರಿ
ವಿದ್ಯಾಧಿಕಾರಿ	ಕಲಿಕೆಯ ವಿಭಾಗದ ಆಡಳಿತಾಧಿಕಾರಿ
ವಾದ್ಯಾಧಿಕಾರಿ	ಸ್ವರ ಸಂಗೀತ ವಿಭಾಗ ಆಡಳಿತಾಧಿಕಾರಿ
ಗೀತಾಧಿಕಾರಿ	ನೃತ್ಯ ವಿಭಾಗದ ಆಡಳಿತಾಧಿಕಾರಿ
ಚಿತ್ರಾಧಿಕಾರಿ	ಚಿತ್ರಪಟ ವಿಭಾಗದ ಆಡಳಿತಾಧಿಕಾರಿ
ಪರ್ಣಾಧಿಕಾರಿ	ತೋಟಗಳ ವಿಭಾಗದ ಆಡಳಿತಾಧಿಕಾರಿ
ಖನ್ಯಾಧಿಕಾರಿ	ಗಣಿಗಳ ವಿಭಾಗ ಆಡಳಿತಾಧಿಕಾರಿ
ಶುಲ್ಕಾಧಿಕಾರಿ	ಸುಂಕಗಳ ವಿಭಾಗದ ಆಡಳಿತಾಧಿಕಾರಿ
ಧಾನ್ಯಾಧಿಕಾರಿ	ಉಗ್ರಾಣಗಳ ವಿಭಾಗದ ಆಡಳಿತಾಧಿಕಾರಿ
ಸುಧಾಧಿಕಾರಿ	ಸುಣ್ಣಬಣ್ಣಗಳ ವಿಭಾಗದ ಆಡಳಿತಾಧಿಕಾರಿ
ವಸ್ತ್ರಾಧಿಕಾರಿ	ಉಡುಪು ವಿಭಾಗದ ಆಡಳಿತಾಧಿಕಾರಿ
ಅಸ್ಮಾಧಿಕಾರಿ	ಬೆಲೆಬಾಳುವ ಹರಳುಗಳ ಆಡಳಿತಾಧಿಕಾರಿ
ಮುದ್ರಾಧಿಕಾರಿ	ಅರಮನೆಯ ಮುದ್ರೆಯ ಆಡಳಿತಾಧಿಕಾರಿ

ಮಾನಸೊಲ್ಲಾಸವು ಒಟ್ಟು ಒಂಭತ್ತು ಬಗೆಯ ದುರ್ಗಗಳ ಕುರಿತು ವಿವರಿಸುತ್ತದೆ. ಅವು ಜಲದುರ್ಗ, ಗಿರಿದುರ್ಗ, ಪಾಷಣದುರ್ಗ, ಇಷ್ಟಿಕಾ ದುರ್ಗ, ಮೃತಿಕಾದುರ್ಗ, ಮರುದುರ್ಗ, ದಾರು ದುರ್ಗ ಮತ್ತು ನರದುರ್ಗ.

ಈ ನವದುರ್ಗಗಳಲ್ಲಿ ಆರನೇ ವಿಕ್ರಮಾದಿತ್ಯನ ಕಾಲಕ್ಕೆ ಸಂಬಂಧಿಸಿದ ಕಲ್ಕೇರಿ ಶಾಸನವು ಮೂರು ಬಗೆಯ ದುರ್ಗಗಳ ಕುರಿತು ಉಲ್ಲೇಖಿಸುತ್ತದೆ. ಅವು ಜಲ, ಗಿರಿ ಹಾಗೂ ವನದುರ್ಗಗಳು, ಇವುಗಳಲ್ಲಿ ವಿಫುಲ ಶಾಸ್ತ್ರಾಸ್ತ್ರ, ಆಹಾರ ಧಾನ್ಯ, ಔಷಧಿ, ಸಂಪತ್ತು, ಅಶ್ವ, ಗಜಗಳು, ಯಂತ್ರಗಳು, ನೀರು ಹಾಗೂ ಹುಲ್ಲನ್ನು ಯಥೇಚ್ಚವಾಗಿ ಒಳಗೊಂಡಿರುತ್ತಿದ್ದು, ಅಭೇದ್ಯವಾಗಿರುತ್ತಿದ್ದವು. ಬ್ರಾಹ್ಮಣರು ಕುಶಲಕರ್ಮಿಗಳು ಕೋಟೆಯಲ್ಲಿರುತ್ತಿದ್ದರು. ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ಗುತ್ತಿಕೋಟೆಯು ಅತ್ಯಂತ ಪ್ರಮುಖ ಬಲಿಷ್ಠ ಕೋಟೆಯಾಗಿದ್ದು, ಇಲ್ಲಿಯ ಶಾಸನಗಳು ಕೋಟೆಯ ರಕ್ಷಣೆಗೆ ಬೇಕಾದ ಸಲಕರಣೆಗಳ ಬಗೆಗಷ್ಟೆ ಮಾತನಾಡದೇ, ಅವುಗಳ ಆಡಳಿತದ ಬಗೆಗೂ ಸಂಪೂರ್ಣ ವಿವರವನ್ನು ವಿವರಿಸುತ್ತವೆ.

ಕಲ್ಯಾಣದ ಚಾಲುಕ್ಯರ ಕಾಲದ ಪ್ರಮುಖ ಕೋಟೆಯನ್ನು ಗುತ್ತಿ ಕೋಟೆಯಾಗಿತ್ತು. ಈ ಕೋಟೆಯು ಚಾಲುಕ್ಯ ಹಾಗೂ ಚೊಳರ ಮಧ್ಯದ ನಿರಂತರ ಯುದ್ಧದಲ್ಲಿ ತನ್ನ ನಿರ್ಣಾಯಕ ಪಾತ್ರವನ್ನು ನಿರ್ವಹಿಸಿ, ಚೊಳರಿಂದ ಚಾಲುಕ್ಯರಿಗೆ ಆಗಬಹುದಾಗಿದ್ದ ಅನೇಕ ಗಂಡಾಂತರಗಳನ್ನು ತಡೆದಿದೆ. ಚೊಳರು ಗುತ್ತಿಯ ಮೂಲಕವೇ ಕರ್ನಾಟಕವನ್ನು ಪ್ರವೇಶಿಸುತ್ತಿದ್ದರಾದ್ದರಿಂದ ಈ ಕೋಟೆಯು ಪ್ರಥಮ ಚೋಳರ ಆಕ್ರಮಣಕ್ಕೆ ಒಳಗಾಯಿತೆಂಬ ವಿಷಯ ಶಾಸನಗಳಿಂದ ವ್ಯಕ್ತವಾಗುತ್ತದೆ. ಗುತ್ತಿ ಚೋಳರ ಆಕ್ರಮಣದ ಪ್ರಥಮ ಗುರಿ ಆಗಿದ್ದರಿಂದ ಆರನೆಯ ವಿಕ್ರಮಾದಿತ್ಯ ಅಲ್ಲಿ ಸದಾಕಾಲವು ಬಲಿಷ್ಠ ಜಾಗ್ರತ ಸೈನ್ಯವನ್ನಿಟ್ಟಿದ್ದ.

ಸಾಹಿತ್ಯಿಕ ಹಾಗೂ ಶಾಸನಾಧರಗಳು ಕಲ್ಯಾಣ ಚಾಲುಕ್ಯರ (ಒಂದನೆಯ ಸೋಮೇಶ್ವರನ) ನ್ಯಾಯಾಂಗ ಆಡಳಿತದ ಬಗೆಗೆ ಸಾಕಷ್ಟು ಬೆಳಕನ್ನು ಚೆಲ್ಲುತ್ತವೆ. ಮಾನಸೋಲ್ಲಾಸವು ಅರಸರ ನ್ಯಾಯಾಂಗ ವ್ಯವಸ್ಥೆಯು ಪ್ರಜೆಗಳ ವೈಯಕ್ತಿಕ ಕಾಳಜಿಯೇ ಆಗಿತ್ತೆಂದು ಹೇಳುತ್ತದೆ.

ಸಮಕಾಲೀನ ಮತ್ತೊಂದು ಪ್ರಸಿದ್ಧ ಕೃತಿ ಮಿತಾಕ್ಷರವು ಪ್ರಜಾಪಾಲನೆಯೇ ಅರಸನ ಉನ್ನತ ಕರ್ತವ್ಯವಾಗಿತ್ತೆಂದಿದೆ. ಅನ್ಯಾಯವನ್ನು ತುಳಿದು ಹಾಕುವುದೇ ದಂಡವೆಂದು ಕಾಮಂದಕನು ಹೇಳುತ್ತಾನೆ.

ಚಾಲುಕ್ಯ ಅರಸರು ಕೇಂದ್ರಿಕೃತ ಸರಕಾರವನ್ನು ಸ್ಥಾಪಿಸಿದ್ದು, ಎಲ್ಲ ಅಧಿಕಾರಿಗಳು ಅರಸನ ಕೈಯಲ್ಲಿಯೇ ಕೇಂದ್ರಿಕೃತವಾಗಿದ್ದವು. ನ್ಯಾಯಾಂಗದ ಮುಖ್ಯಸ್ಥ ಅರಸನೇ. ಆತ ಮೇಲ್ಮನವಿಗಳನ್ನು ಸ್ವೀಕರಿಸುತ್ತಿದ್ದನು. ಧರ್ಮಶಾಸ್ತ್ರಗಳ ನಿಯಮಗಳಿಗನುಸಾರವಾಗಿ ತಿರ್ಮಾನಗಳನ್ನು ನಿಷ್ಪಕ್ಷಪಾತವಾಗಿ ನೀಡುತ್ತಿದ್ದನು. ತಿರ್ಮಾನಗಳನ್ನು ನೀಡುವಾಗ ಚಕ್ರವರ್ತಿ ಮುಖ್ಯನಾಯಾಧೀಶ, ಮಂತ್ರಿಗಳ ಜೊತೆಗೆ ಸಮಾಲೊಚಿಸುತ್ತಿದ್ದನೆಂಬ ಸಂಗತಿ ಶಾಸನಗಳಿಂದ ಗುರುತ್ತಾಗುತ್ತದೆ.

ಗ್ರಾಮಗಳಲ್ಲಿ ನಡೆದ ಜಗಳ ಮತ್ತು ಅಪರಾಧಗಳಿಗೆ ಗಾವುಂಡ, ಸೇನಬೋವ, ತಳಾರ ಹಾಗೂ ಗ್ರಾಮದ ಹಿರಿಯರ ಸಮ್ಮುಖದಲ್ಲಿ ತೀರ್ಪನ್ನು ಕೊಡಲಾಗುತ್ತಿತ್ತು. ಇಲ್ಲಿ ನ್ಯಾಯ ಸಿಗದೇ ಹೋದಲ್ಲಿ ನ್ಯಾಯಾರ್ಥಿಗಳು ಮಹಾಸಾಮಂತನಲ್ಲಿಯೂ ಮಹಾಮಂಡಳೇಶ್ವರನ ಆಸ್ಥಾನಕ್ಕೋ ಹೋಗುತ್ತಿದ್ದರು. ಇಲ್ಲಿಯೂ ಸರಿಯಾದ ನ್ಯಾಯ ಸಿಗದೇ ಹೋದರೆ ಅವರು ನೇರವಾಗಿ ಚಕ್ರವರ್ತಿಯಲ್ಲಿಗೆ ಹೋಗಿ ಬಿನ್ನವಿಸುತ್ತಿದ್ದರು. ಚಕ್ರವರ್ತಿಯ ನ್ಯಾಯನಿರ್ಣಯವೇ ಅಂತಿಮ.[113]

ಕ್ರಿ.ಶ 1045ರ ಮೊರಿಂಗೇರಿಯ ಶಾಸನವು, ನೈಷ್ಠಿಕರಲ್ಲದ ತಪೋಧನರನ್ನು ಮಠದಿಂದ ನಾಡರಸರು, ಮೊರಿಂಗೇರಿಯ ಪನ್ನೆರಡು ಮಹಾಜನರು ಸೇರಿ ಓಡಿಸಬೇಕೆಂಬ ಉಲ್ಲೇಖವನ್ನು ಹೊಂದಿದ್ದರೆ, ಆರನೆಯ ವಿಕ್ರಮಾದಿತ್ಯನ ಕಾಲದ ಕ್ರಿ.ಶ 1104ರ ಕುರವತ್ತಿ ಶಾಸನವು, ಮನ್ನೆಯನಾಗಿದ್ದ ಬೊಪ್ಪಯ್ಯನು ಗಂಡರಾಧಿತ್ಯನ ಪೊಳಲನ್ನು ಹೊಕ್ಕು ಅಲ್ಲಿಯ ಸರ್ವಸ್ವವನ್ನು ದೋಚಿ ಕೆಲವು ಬ್ರಾಹ್ಮಣರನ್ನು

ಕೊಲ್ಲುತ್ತಾನೆ. ಅಲ್ಲಿಯ ಮಹಾಜನರು ದೊರೆಗೆ ದೂರಿದಾಗ, ವಿಕ್ರಮಾದಿತ್ಯ ವಿಷಯವನ್ನು ಪರಿಶೀಲಿಸಿ ಬೊಪ್ಪನನ್ನು ಶಿಕ್ಷಿಸಿ ಆತನ ವಂಶಕ್ಕೆ ಮನೆಯರಾರೂ ಇಲ್ಲದಂತೆ ನಿಯಾಮಿಸಿ ಕೊಡಿ ಎಂದು ಸಮಸ್ತ ಪ್ರಧಾನರಿಗೆ, ಮಲೆಯಾಳಪಂಡಿತರಿಗೆ, ಸೋಮೇಶ್ವರ ಭಟ್ಟರಿಗೆ ಆಜ್ಞಾಪಿಸುತ್ತಾನ ಎಂದಿದೆ. ಇದರಿಂದ ಚಕ್ರವರ್ತಿ ತನ್ನ ಅಧಿಕಾರಿ, ಮಂತ್ರಿಗಳ ಜೊತೆಗೆ ಸಮಾಲೋಚಿಸುತ್ತಿದ್ದನೆಂದು ತಿಳಿದು ಬರುತ್ತದೆ.

ಚಕ್ರವರ್ತಿಯ ನ್ಯಾಯನಿರ್ಣಯವೇ ಅಂತಿಮವಾಗಿದ್ದಿತ್ತು, ಮುಖ್ಯ ನ್ಯಾಯಾಧೀಶನನ್ನು ಧರ್ಮಾಧಿಕಾರಿನ್ ಎಂದು ಕರೆಯಲಾಗುತ್ತಿತ್ತು. ಸಾಮಾನ್ಯವಾಗಿ ಈತ ಮಹಾನ್ ಪಂಡಿತ, ಸುಸಂಸ್ಕೃತ, ಧರ್ಮಶಾಸ್ತ್ರ ಪಾರಂಗತನಾಗಿರುತ್ತಿದ್ದನೆಂದು ಮಾನಸೊಲ್ಲಾಸವು ವಿವರಿಸುತ್ತದೆ.

ರಾಜನು ಪ್ರಜೆಗಳ ನೀತಿ ಮತ್ತು ನಡತೆಗಳಿಗೆ ಸಂಬಂಧಿಸಿದಂತೆ ಕೆಲವು ಆಜ್ಞೆಗಳನ್ನು ಹೊರಡಿಸುತ್ತಿದ್ದನು. ಕ್ರಿ.ಶ 1046ರ ಮೈಲಾರ ಶಾಸನದಲ್ಲಿ ಸೋಮೇಶ್ವರನು ಹೊರಡಿಸಿದ ಆಜ್ಞೆ ಈ ರೀತಿಯಿದೆ. ಬೈದವನಿಗೆ ಒಂದು ಪಣ, ಹೊಡೆದವನಿಗೆ ಆರುಪಣ, ಇರಿದವನಿಗೆ ಹನ್ನೆರಡು ಪಣ, ಹಾಗೂ ಕಳ್ಳತನದಿಂದ ವಸ್ತುಗಳನ್ನು ಅಪಹರಿಸಿದವನಿಗೆ ಎಂಟು ಪಣ, ಆಜ್ಞೆಯನ್ನು ಮೀರಿ ಹೋದವನಿಗೆ ಬಹುಶಃ ಹಿಂದೆ ಹೇಳಿದ ದಂಡದ ಜೊತೆಯಲ್ಲಿ ಮತ್ತೇ ಎರಡು ಪಣ ದಂಡ ವಿಧಿಸಲಾಗುತ್ತಿತ್ತೆಂದು ಉಲ್ಲೇಖಹೊಂದಿದೆ. ಈ ಶಾಸನದ ಧಾಟಿಯನ್ನು ನೋಡಿದರೆ ಅಪರಾಧಗಳ ನಿರ್ಣಯವನ್ನು ಊರಿನವರೇ ಮಾಡುತ್ತಿದ್ದರೆಂದು ಯಾವ ಅಪರಾಧಕ್ಕೆ ಎಷ್ಟು ಶಿಕ್ಷೆ, ದಂಡ ಕೊಡಬೇಕೆಂಬುದನ್ನು ಮಾತ್ರ ಚಕ್ರವರ್ತಿಯೇ ನಿರ್ಧರಿಸುತ್ತಿದ್ದಿರಬಹುದೆಂದು ಸ್ಪಷ್ಟವಾಗಿ ತಿಳಿದು ಬರುತ್ತದೆ.

ಮನ್ನೆಯನಾಗಿದ್ದ ಬಪ್ಪಯ್ಯನೆಂಬುವವನು ಅಗ್ರಹಾರವಾಗಿದ್ದ ಗಂಡರಾದಿತ್ಯನ ಪೊಳಲನ್ನು ಹೊಕ್ಕು ಅಲ್ಲಿರುವ ಸರ್ವಸ್ವವನ್ನು ದೋಚಿ ಕೆಲವು ಬ್ರಾಹ್ಮಣರನ್ನು ಕೊಲ್ಲುತ್ತಾನೆ. ಅಲ್ಲಿಯ ಮಹಾಜನರೆಲ್ಲರೂ ನ್ಯಾಯಕ್ಕಾಗಿ ಚಕ್ರವರ್ತಿ ಆರನೇ ವಿಕ್ರಮಾದಿತ್ಯನಿಗೆ ದೂರುತ್ತಾರೆ. ವಿವರ ವಿಕ್ರಮಾದಿತ್ಯನು ವಿಷಯವನ್ನು ಕೇಳಿ ಬೊಪ್ಪನನ್ನು ಶಿಕ್ಷಿಸಿ ಆತನ ವಂಶಕ್ಕೆ ಮನ್ನೆಯರಾರೂ ಇಲ್ಲದಂತೆ ನಿಯಮಿಸಿ ಕೊಡಿ ಎಂದು ಸಮಸ್ತ ಪ್ರಾಧಾನರಿಗೆ, ಮಲೆಯಾಳ ಪಂಡಿತರಿಗೆ, ಸೋಮೇಶ್ವರ ಭಟ್ಟರಿಗೆ ಅಜ್ಞಾಪಿಸುತ್ತಾನೆ. ಇವರು ಬೊಪ್ಪನನ್ನು ಕರೆಸಿ, "ನೀನು ನಿನ್ನ ವಂಶದವರಾರೂ ಪೊಳಲಿನ ಮನ್ನೆಯವನ್ನು ಮಾಡಬಾರದು" ಎಂದು ಆಜ್ಞೆ ಮಾಡುತ್ತಾರೆ. ಇವರ ಆಜ್ಞೆಗೆ ಒಪ್ಪಿದ ಬೊಪ್ಪನು ಆಣೆ ಪತ್ರವನ್ನು ಬರೆದುಕೊಟ್ಟು ಕಲ್ಯಾಣ ಪಟ್ಟಣದ ಈಗಿನ ತ್ರಿಪುರಾಂತ ಕೇರೆ ಪ್ರದೇಶದ ತ್ರಿಪುರಾಂತಕದೇವರ ಬಳಿ (ಕಲ್ಯಾಣದ) ನೀರನ್ನು ಕುಡಿದು ಇವರೆಲ್ಲರ ಸಮ್ಮುಖದಲ್ಲಿ ಮನ್ನೆಯತ್ತವನ್ನು ಬಿಟ್ಟು ಬರುತ್ತಾನೆ. ಈ ವಿಷಯವನ್ನು 32000ದ ಸನ್ನಿಧಾನಕ್ಕೆ ಅಂದರೆ ಗಂಡರಾದಿತ್ಯನ ಪೊಳಲಿನ ಭಾಗದ ಮಹಾಮಂಡಳೇಶ್ವರನಾದ ಪಾಂಡ್ಯನಿಗೆ ಅರಹಿ ಆತನ ಸಮ್ಮುಖದಲ್ಲಿಯೇ

ಈ ವಿಷಯವನ್ನೊಳಗೊಂಡ ಶಾಸನವನ್ನು ಕುರುವತ್ತಿಯಲ್ಲಿ ನೆಡಲಾಗುತ್ತದೆ.

ಇದೇ ರೀತಿ ಯಾವ ಯಾವ ಅಪರಾಧಗಳಿಗೆ ಯಾವ ಯಾವ ಶಿಕ್ಷೆ ವಿಧಿಸುತ್ತಿದ್ದರೆಂಬುದನ್ನು ಸಹ ಕುರ್ತಕೋಟಿಯ ಕ್ರಿ.ಶ 1082ರಲ್ಲಿ ಬರೆಯಲ್ಪಟ್ಟ ಶಾಸನದಲ್ಲಿ ಹೇಳಲಾಗಿದೆ.

ಇರಿದಡೆ ಪನ್ನೆರಡು ಪಣಂ,

ಕಟ್ಟು ಬನ್ದು ಪಯ್ದಡಾರು ಪಣಮುದಂಡಂ

ನೆರೆ ಬಯ್ದಡೆ ಮೂರುಪಣಂ

ಕೇರೆಗೆನ್ದು ದಣ್ಡಮಾಗಿ ನಡೆವುದು ನಿಯತ'

ಇದರಿಂದ ಒಬ್ಬ ವ್ಯಕ್ತಿಗೆ ಇರಿದರೆ ಇರಿಸಿಕೊಂಡ ವ್ಯಕ್ತಿ ಸತ್ತಿರಬಾರದು, ಆಗ ಅಪರಾಧಿ 12 ಪಣವನ್ನು ದಂಡ ಕೊಡಬೇಕು. ಕಳ್ಳತನದಿಂದ ವಸ್ತುಗಳನ್ನು ಅಪರಹಿಸಿದವನಿಗೆ 6 ಪಣ ದಂಡ ಹಾಕಲಾಗುತ್ತಿತ್ತು. ಬೇರೆಯವರಿಗೆ ಆಕಾರಣ ಬೈಯ್ದರೆ 3 ಪಣ ದಂಡವನ್ನು ಕಟ್ಟಬೇಕು. ಈ ದಂಡದಿಂದ ಬಂದ ಹಣವನ್ನು ಕೆರೆಯ ದುರುಸ್ತಿಗೆ ಬಿಡಲಾಗುತ್ತಿತ್ತು. ಈ ದಂಡದ ಪ್ರಮಾಣ ಒಂದು ಪ್ರದೇಶದಿಂದ ಇನ್ನೊಂದ ಪ್ರದೇಶದಲ್ಲಿ ಬೇರೆ ಬೇರೆಯಾಗಿತ್ತೆಂದು ತಿಳಿದು ಬರುತ್ತದೆ.[114]

ಕಲ್ಯಾಣ ಚಾಲುಕ್ಯ ಅರಸರು ಬಲಿಷ್ಠ ಹಾಗೂ ಬೃಹತ್ ಸೈನ್ಯವನ್ನು ಸಂಘಟಿಸಿದ್ದರು. ಕೇಂದ್ರದಲ್ಲಿಯ ಸೈನ್ಯ ಪಡೆಯುನ್ನು ಹೊರತುಪಡಿಸಿ ಪ್ರಾಂತಾಧಿಕಾರಿಗಳು ಸಹ ತಮ್ಮ ಸ್ವಂತ ಸೈನ್ಯಬಲವನ್ನು ಹೊಂದಿದ್ದರೆಂಬ ಮಾಹಿತಿ ಸಮಕಾಲಿನ ಸಾಹಿತ್ಯಕ ಹಾಗಾ ಶಾಸನಗಳ ಆಧಾರಗಳಿಂದ ತಿಳಿದು ಬರುತ್ತದೆ.

ಮೂರನೆಯ ಸೋಮೇಶ್ವರನ ಮಾನಸೋಲ್ಲಾಸ ಆರು ಬಗೆಯ ಸೈನ್ಯ ಪಡೆಗಳನ್ನು ಕುರಿತು ವಿವರಿಸುತ್ತದೆ. ಅವು ಮೌಲ, ಭೃತ್ಯ, ಶ್ರೇಣಿ, ಮಿತ್ರ, ಅಮಿತ್ರ, ಮತ್ತು ಅಟವಿಕ ಎಂಬುದಾಗಿ.

ಚಾಲುಕ್ಯರ ಶಾಸನಗಳು, ಯುದ್ಧದ ವಿಜಯ, ಯುದ್ಧ ಸಾಮಗ್ರಿಗಳನ್ನು ವಿಯಿ ಅರಸರಿಗೆ ಒಪ್ಪಿಸುವ ವರ್ಣನೆಯನ್ನು ಮಾಡುತ್ತ, ಗಜ, ಅಶ್ವ, ಹಾಗೂ ಕಾಲ್ದಗಳ ಬಗೆಗೆ ಮಾತ್ರ ಉಲ್ಲೇಖಿಸುವುದರ ಆಧಾರದ ಮೇಲೆ ಇವರ ಕಾಲದಲ್ಲಿ ತ್ರಿಬಲ್ ಸೈನ್ಯ ಮಾತ್ರವಿದ್ದು, ರಥದಳಗಳಿರಲಿಲ್ಲವೆಂಬ ಸಂಶಯಕ್ಕೆ ಎಡೆ ಮಾಡಿಕೊಡುತ್ತವೆ. ಆದರೆ ಮಾನಸೊಲ್ಲಾಸದಲ್ಲಿ ರಥಾಧಿಕಾರಿ ಎಂಬ ಉಲ್ಲೇಖವಿದ್ದು, ಇವರ ಕಾಲದಲ್ಲಿ ರಥದಳವಿತ್ತೋ ? ಇಲ್ಲವೋ ಎಂಬುದನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲ.

ಇವರ ಕಾಲದಲ್ಲಿ ಮುಖ್ಯದಂಡನಾಯಕ ಇದ್ದು, ಇವನನ್ನು ಮಹಾಸೇನಾಧಿಪತಿ ಎಂದು ಕರೆಯಲಾಗುತ್ತಿತ್ತು. ಈತನೇ ಸಾಮಾನ್ಯವಾಗಿ ರಾಜ್ಯದ ಎಲ್ಲ ಸೈನ್ಯದ

ನಿಯಂತ್ರಣವನ್ನು ಮಾಡುತ್ತಿದ್ದ. ಶಾಸನಗಳು ಇನ್ನೊಬ್ಬ ಸೈನ್ಯಾಧಿಕಾರಿಯನ್ನು ಉಲ್ಲೇಖಿಸುತ್ತಿದ್ದು, ಅವನು ಸೇನಾಧಿಪತಿ ಅಥವಾ ಸೇನಾಪತಿ ಬಹುಶಹ ಮಹಾಸೇನಾಧಿಪತಿ ಮತ್ತು ಸೇನಾಧಿಪತಿ ಹುದ್ದೆಗಳು ಒಂದೇಯಾಗಿರಬಹುದು ಅಥವಾ ಸೇನಾಧಿಪತಿ ಸೈನ್ಯದ ಒಂದು ಭಾಗದ ಮುಖ್ಯಸ್ಥನಾಗಿರಲೂಬಹುದು.

ಅಹಾವಮಲ್ಲ ಸೋಮೇಶ್ವರನ ಬಹುತೇಕ ಶಾಸನಗಳಲ್ಲಿ ಅಂದರೆ ಕ್ರಿ.ಶ 1044–45ರ ಆಡೂರ ಶಾಸನದಲ್ಲಿ, ಅರಸನ ಪಾದಪದ್ಮೋಪಜೀವಿ, ಮಹಾಸಾಮಂತಾಧಿಪತಿ, ಮಹಾಪ್ರಚಂಡ ದಂಡನಾಯಕ ದೇಚಯ್ಯಭಟ್ಟ ಎಂದಿದ್ದರೆ, ಕ್ರಿ.ಶ. 1048ರ ಶಿರೂರ ಶಾಸನವು, ಅರಸನ ಮಹಾಸಾಮಂತ, ಮಹಾದಂಡನಾಯಕ ಮಾದಿಣಯ್ಯ ಎಂದು ಉಲ್ಲೇಖಿಸುತ್ತದೆ.

ಕ್ರಿ.ಶ 1048ರ ಯಕಲಾಪೂರ ಶಾಸನದಲ್ಲಿ 'ಅರಸನ ಪಾದಪದ್ಮೋಪಜೀವಿ ದಂಡನಾಯಕ ಕಾಳಿದಾಸಯ್ಯನ ಮಗ ಕೇಶಿರಾಜ ಎಂದು ಉಲ್ಲೇಖವಿದ್ದರೆ ಮತ್ತೊಂದು ಕ್ರಿ.ಶ 1054ರ ದಿಗ್ಗಾಂವ ಶಾಸನದಲ್ಲಿ ಮಹಾಪ್ರಧಾನ ಮನೆವೆರ್ಗ್ಗಡೆ, ಸೇನಾಧಿಪತಿ ಪ್ರಚಂಡ ದಂಡನಾಯಕ ರನ್ನಪಯ್ಯ ಎಂದು ಉಲ್ಲೇಖವಿದೆ. ಈ ಎಲ್ಲ ಶಾಸನೋಕ್ತ ಪದಗಳಾದ ಮಹಾಪ್ರಚಂಡ ದಂಡನಾಯಕ, ಮಹಾದಂಡನಾಯಕ, ಪ್ರಚಂಡ ದಂಡನಾಯಕ ಹಾಗೂ ದಂಡನಾಯಕ ಇವೂ ಸೈನ್ಯ ಆಧಿಕಾರಿಗಳ ಕ್ರಮವಾದ ಶ್ರೇಣಿಗಳಾಗಿರಬಹುದು ಇಲ್ಲವೆ ಬೇರೆ ಸೈನ್ಯಂಗಳ ಮುಖ್ಯಸ್ಥರಾಗಿರಬಹುದೆಂದು ಕಂಡು ಬರುತ್ತದೆ.

ಚಾಲುಕ್ಯರ ಶಾಸನವೊಂದು, ಕರಿ ತುರಗ ಪಟ್ಟಸಹಾನಿ ಹಾಗೂ ಆನೆ ಸಹಾನಿ ಎಂಬ ಪದಗಳನ್ನು ಒಳಗೊಂಡಿದ್ದು, ಅವರು ಗಜಾಶ್ವಗಳ ಪಡೆಯ ಮೇಲ್ವಿಚಾರಕರಾಗಿರಬಹುದು. ಹೀಗೆ ಪ್ರತಿಯೊಂದು ಸೈನ್ಯದ ಅಂಗಗಳಿಗೆ ಬೇರೆ ಬೇರೆ ಸೈನ್ಯಧಿಕಾರಿಗಳಿರುತ್ತಿರಬಹುದೆಂಬ ವಿಷಯ ತಿಳಿದು ಬರುತ್ತದೆ.

ಇವರ ಕಾಲದಲ್ಲಿ ಸೈನ್ಯದ ನೇಮಕಾತಿ ಎಲ್ಲ ವರ್ಗ, ವರ್ಣದವರಿಗೂ ಮುಕ್ತವಾಗಿಡಲಾಗಿತ್ತು. ಇವರ ಸೈನ್ಯ ವಿಶಾಲ ತಳಹದಿಯ ಮೇಲೆ ರದನೆಯಾಗಿದ್ದು, ಬ್ರಾಹ್ಮಣ ದಂಡನಾಯಕರು, ಕುಶಲಕರ್ಮಿಗಳು, ವರ್ತಕರು ಯುದ್ಧಗಳಲ್ಲಿ ಭಾಗವಹಿಸುತ್ತಿದ್ದರು. ಸೈನಿಕರಿಗೆ ಸಂಬಳ, ಜಾಗೀರ, ಉಂಬಳಿ ಪದ್ಧತಿಯಲ್ಲಿ ಪಾವತಿಸಲಾಗುತ್ತಿತ್ತು. ಈತನ ಸೈನ್ಯ ಬಲಿಷ್ಠ ಶಿಸ್ತು ಹಾಗೂ ಸುಸಂಘಟಿತವಾಗಿತ್ತು.

ವಿಸ್ತಾರವಾದ ಸಾಮ್ರಾಜ್ಯವನ್ನು ಒಬ್ಬನೇ ಚಕ್ರವರ್ತಿ ನಿಯಂತ್ರಿಸುವುದು ಕಷ್ಟವೇ ಸರಿ. ಅದಕ್ಕಾಗಿಯೇ ಸೋಮೇಶ್ವರ ತಾನು ಸ್ಥಾಪಿಸಿದ ವಿಶಾಲ ಸಾಮ್ರಾಜ್ಯವನ್ನು ಆಡಳಿತದ ಅನುಕೂಲತೆಗಾಗಿ ಅನೇಕ ಪ್ರಾಂತಗಳನ್ನಾಗಿ ವಿಂಗಡಿಸಿದ್ದನೆಂಬ ಸಂಗತಿಯೂ ಮತ್ತೇ ಶಾಸನಗಳಿಂದಲೇ ನಮಗೆ ತಿಳಿದು ಬರುತ್ತದೆ. ಈತನ ಕಾಲದ ಶಾಸನಗಳು ಒಟ್ಟು 70ಕ್ಕಿಂತಲೂ ಹೆಚ್ಚು ವಿಭಾಗಗಳ ಹೆಸರುಗಳನ್ನು ಒಳಗೊಂಡಿದ್ದರೂ, ಅವುಗಳ ಹಲವು ದೊಡ್ಡ ವಿಭಾಗಗಳಲ್ಲಿದ್ದ ಚಿಕ್ಕ ಆಡಳಿತ

ಘಟಕಗಲಾಗಿರಬಹುದೆಂದು ತಿಳಿದುಬರುತ್ತದೆ. ಇವರ ಕಾಲದ ಆಡಳಿತದ ದೊಡ್ಡ ವಿಭಾಗಳು, ಗಂಗವಾಡಿ–96000, ನೊಳಂಬವಾಡಿ–32000, ಬನವಾಸಿ–12000, ಫಲಿಯಂಡ–4000, ಕರಹಡ–4000, ರಟ್ಟವಾಡಿ–750000, ಸಿಂಧವಾಡಿ–1000 ಹಾಗೂ ತರ್ದವಾಡಿ 1000 ಮುಂತಾದವುಗಳು. ಉಳಿದೆಲ್ಲ ಚಿಕ್ಕ ವಿಭಾಗಳು ಈ ಮೇಲೆ ಸೂಚಿಸಿದ ವಿಭಾಗಗಳ ಭಾಗಗಳಾಗಿರಬಹುದು. ಇವುಗಳಿಗೆ ಪ್ರಾಂತ, ಕಂಪಣ, ನಾಡು ಮುಂತಾಗಿ ಕರೆಯುತ್ತಿದ್ದರು. ಆದರೆ ಶಾಸನಗಳಲ್ಲಿ ಇವು ಹಲವಾರು ಬಾರಿ ಒಂದರ ಸ್ಥಾನದಲ್ಲಿ ಮತ್ತೊಂದು ಬಳಕೆಯಾಗಿರುವುದರಿಂದ ಇವುಗಳ ನಿರ್ದಿಷ್ಟ ಅರ್ಥ ಮತ್ತು ವ್ಯಾಪ್ತಿ ಹೇಳುವುದು ಕಷ್ಟವೇ ಸರಿ. ಇವುಗಳ ಕುರಿತು ವ್ಯಾಪಕವಾದ ಅಧ್ಯಯನದ ಅವಶ್ಯಕತೆಯಿದೆ. ಪ್ರಾಂತದ ಅಧಿಕಾರಿಗಳು ಸಹ ಕೇಂದ್ರ ಚಕ್ರವರ್ತಿಯಂತೆ ಸ್ವಂತ ಆಡಳಿತವರ್ಗದವರನ್ನು, ಸೈನ್ಯವನ್ನು ಹೊಂದಿರುತ್ತಿತ್ತು. ತಮ್ಮತಮ್ಮ ಆಡಳಿತ ಘಟಕಗಳಲ್ಲಿ ಎಲ್ಲ ರೀತಿಯಿಂದಲೂ ಸ್ವತಂತ್ರರಾಗಿದ್ದರು. ಆದರೆ ಪ್ರತಿಯೊಂದು ಆಡಳಿತ ಘಟಕದ ಮುಖ್ಯಸ್ಥರು ತಮ್ಮ ತಕ್ಷಣದ ಮೇಲಾಧಿಕಾರಿಗಳಿಗೆ ವಿಧೇಯರೂ, ನಿಷ್ಠರೂ ಆಗಿರಬೇಕಾಗುತ್ತಿತ್ತು. ಉದಾಹರಣೆಗಾಗಿ ಗಾವುಂಡನು ಪ್ರಭುಗಾವುಂಡನಿಗೆ, ಪ್ರಭುಗಾವುಂಡರು ತಮ್ಮ ಮಹಾ ಸಾಮಂತರಿಗೆ. ಮಹಾಸಾಮಂತರು ತಮ್ಮ ಮಹಾಮಂಡಳೇಶ್ವರರಿಗೆ ಹಾಗೂ ಎಲ್ಲ ಮಹಾಮಂಡಲೇಶ್ವರರು ಚಕ್ರವರ್ತಿಗೆ ಆಧೀನರಾಗಿರಬೇಕಾಗಿತ್ತು. ವಾರ್ಷಿಕ ಕಪ್ಪು ಕಾಣಿಕೆ, ಬಾಹ್ಯ ಹಾಗೂ ಆಂತರಿಕ ಗಲಭೆ ಸಂದರ್ಭದಲ್ಲಿ ಚಕ್ರವರ್ತಿಗೆ ಸೈನ್ಯ ಸಹಾಯ ಮಾಡುವುದರ ಜೊತೆಗೆ ಚಕ್ರವರ್ತಿಯ ಎಲ್ಲ, ಆಜ್ಞೆಗಳನ್ನು ಇವರು ಪಾಲಿಸಬೇಕಾಗುತ್ತಿತ್ತು.[115]

ಇಂದಿನ ಬೀದರ ಜಿಲ್ಲೆಯ ಬಸವಕಲ್ಯಾಣವು ಕಲ್ಯಾಣ ಚಾಲುಕ್ಯರ ರಾಜಧಾನಿಯಾಗಿ ಮೇರೆದಿದ್ದು, ಕಲ್ಯಾಣಿ ಚಾಲುಕ್ಯರ ಆಳ್ವಿಕೆ ಮಾಡುತ್ತಿದ್ದ ಸಾಮ್ರಾಜ್ಯವನ್ನು ಕಲ್ಯಾಣ ನಾಡೆಂದು ಕರೆಯಲಾಗಿದೆ. ಈ ಬೃಹತ ಸಾಮ್ರಾಜ್ಯದಲ್ಲಿ ಅನೇಕ ಆಡಳಿತ ವಿಭಾಗಗಳಿದ್ದು, ಅವುಗಳನ್ನು ಶಾಸನಗಳಲ್ಲಿ ನಾಡುಗಳೆಂತಲು ಕರೆಯಲಾಗಿದೆ.

ಆಲಂದ ಸಾಸಿರ್, ಗೊಂಕನಾಡು ನೂರಿಪ್ಪತ್ತರುವತ್ತು, ಆರಲು–300, ಸಗರ–300, ಕೆಂಭಾವಿ–24, ಸಕ್ಕರಗೆ–80, ತರ್ದವಾಡಿ ಸಾಸಿರ, ಆರುನೂರುಂಬಾಡ, ಬಾಗೆ–50, ಮುತ್ತಗೆ–30, ಕರಹಾಡೆ–4000, ಪಳಿಯಂಡ–4000, ಪ್ರತ್ಯಣ್ಡಕ–4000, ಬೆಳ್ವಲ–300, ಪುಲಿಗೆರೆ–300, ಮುಳಗುಂದ–12, ಹನುಗುಂದ–30, ಕಿಸುಕಾಡು–70, ಕರಿವಿಡಿ–30, ಪುಲಿಗೆರೆ–300, ಮಾಸವಾಡಿ–140, ಬಾಗಡಗೆ–70, ಹನುಂಗಲ್–500, ನಿಡಗುಂದಗೆ–12, ಕುನ್ದವೂರು–30, ಬನವಾಸಿ, 12,000, ಇಟ್ಟಿಗೆ–30, ರಟ್ಟಪಳ್ಳಿ–70, ಸತ್ತಳಿಗೆ–70, ಬಾಸವುರ–140, ಗಂಗವಾಡಿ–96,000, ಮಹಾರಾಜವಾಡಿ–7000, ಮರುಕಿನಾಡು–300 ಮತ್ತು ಮಲೆನಾಡು ಎರವತ್ತು, ಸಾಂತಳಿಗೆ–1000, ನೊಳಂಬವಾಡಿ–32000, ಕೋಗಳಿ–500, ಬೆಣ್ಣೆವುರ್–12,

ಮುತ್ತಗೆ–30, ಕದಂಬಳಿಗೆ–1000, ಉಚ್ಚಂಗಿ–30, ಸಿಂದವಾಡಿ–1000, ಬಲ್ಲಕುಂದೆ–300, ಕಪ್ಪೆಕಲ್ಲು–12, ಕಣಿಯಕಲ್ಲು, 300, ಎಡದೊರೆ–2000, ಕನ್ನೆ–300, ಪಲಸಿಗೆ–12000, ಕುಂದೂರು–500, ಕುಂದೂರ–12, ಮುಗುಂದ–30, ಕೊಂಕಣ–900, ಅಣಂದೂರು–300, ಅಯ್ಯಣವಾಡಿ–300, ಕುದಿಯ ಪರವಿ–70, ಪುಲಿನಾಡು–70, ಕುಂದೂರ–12, ಬಲ್ಲವಾಡಿ–70 ಮತ್ತು ಸೋಗೆ–12.

ಹೀಗೆ ಕಲ್ಯಾಣ ಚಾಲುಕ್ಯರ ಆಡಳಿತ ವಿಭಾಗಳಲ್ಲಿ ಬೀದರ ಜಿಲ್ಲೆಯಲ್ಲಿಯೂ ಸಹ ಆಡಳಿತ ವಿಭಾಗಗಳಿದ್ದು, ಅವುಗಳನ್ನು ಒಂದೊಂದಾಗಿ ತಿಳಿದುಕೊಳ್ಳಲು ಪ್ರಯತ್ನಿಸೋಣ.

ಅಟ್ಟಳೆ ನಾಡು :

ಅಟ್ಟಳೆನಾಡು ಇಂದಿನ ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಕೆಲವು ಗ್ರಾಮಗಳನ್ನು, ಭಾಲ್ಕಿ, ಹುಮನಾಬಾದ ಮತ್ತು ಬೀದರ ತಾಲೂಕುಗಳನ್ನು, ಆಂಧ್ರಪ್ರದೇಶದ ಝುಹಿರಾಬಾದ ತಾಲೂಕಿನ ಕೆಲವು ಗ್ರಾಮಗಳನ್ನು ಒಳಗೊಂಡಿತ್ತು. ಈ ವಿಭಾಗಕ್ಕೆ ರಂಜೋಳವೇ ಮುಖ್ಯ ಪಟ್ಟಣವಾಗಿತ್ತೆಂದು ಡಾ.ವಿ.ಎಸ್ ಕುಲಕರ್ಣಿಯವರು ಅಭಿಪ್ರಾಯ ಪಟ್ಟಿದ್ದಾರೆ. ರಂಜೋಳ ಶಾಸನದಲ್ಲಿ ಅಟ್ಟಳೆ ನಾಡನ್ನು ಎಲೆಯೊಳುಮಿಗಿಲೆನಿಪ ಕುನ್ತಳ ವಿಷಯೊತ್ತಂಸಂದೆನಿಸಿ ಪಲತೆರೆದಿಂದಟ್ಟಲೆನಾಡು ಚೆಲ್ವಿನಾಗರವಳುಂ.. ಪೊಗರ್ತೆಗೆ ನೆಲೆಯಿನಿಸಿ ಪಟ್ಟಳೆನಾಳ್ಕೆ.. ಎಂದು ವರ್ಣಿಸಲಾಗಿದೆ. ಈ ವಿಭಾಗದಲ್ಲಿ ಒಳಗೊಂಡಿದ್ದ ಶಾಸನೋಕ್ತ ಗ್ರಾಮಗಳೆಂದರೆ ಬೀದರ ಜಿಲ್ಲೆಯ ಹಳೆಯಖೇಡ, ಮರಿಕಲ್ಲು, ಸಿರಿಸಗೆ, ಮಂಗಳಿಗೆ , ಕುಬಟಣ, ಘಟ್ಟಬೋರಿಹಳ್ಳಿ (ಘಾಟಬೋರಳ) ಹಲಹಳ್ಳಿ, ಬಗದಾಳ, ಹಜರಗಿ, ಬೇಮಳಖೇಡಾ ಮತ್ತು ಧನಶ್ರೀ ಇದರ ಉಪ ವಿಭಾಗಗಳಲ್ಲಿ ಭಲ್ಲುಂಕೆ 84ರ ಉಲ್ಲೇಖ ಮಾತ್ರ ಶಾಸನಗಳಲ್ಲಿ ದೊರೆಯುತ್ತದೆ.

ಭಲ್ಲುಂಕೆ 84 :

ಈ ಭಾಗದ ಮುಖ್ಯ ಪಟ್ಟಣವೆಂದರೆ ಇಂದಿನ ಬೀದರ ಜಿಲ್ಲೆಯ ತಾಲೂಕಿನ ಪ್ರಧಾನ ನಗರವಾದ ಭಾಲ್ಕಿ. ಗೋರ್ಟ ಶಾಸನದಲ್ಲಿ ಅಟ್ಟಳೆಯ ಕಂಪನಂ ಭಲುಂಕೆ ಎಂಭತ್ತು ನಾಲ್ಕರ್ ಬಳಿಯ ಬಾಡಂ ಪುಲಿಚರ್ ಎಂಬ, ಭಾಲ್ಕಿ ಶಾಸನದಲ್ಲಿ ಶ್ರೀಮತ್ ರಾಜಧಾನಿ ಪಟ್ಟಣ ಭಲ್ಲುಂಕೆಯ ಎಂದು ಉಲ್ಲೇಖಗಳು ಬರುತ್ತವೆ. ಈ ಭಲ್ಲುಂಕೆ 84ರಲ್ಲಿ ಗೊರಂಟಿ (ಗೋರ್ಟ), ಪುಲಿಚರ್ ನಾಗಾವೆ, ಭಾಲ್ಕಿ ಮೊದಲಾದ ಭಾಲ್ಕಿ ಸುತ್ತಮುತ್ತಲಿನ ಗ್ರಾಮಗಳು ಇದ್ದವು. ನಾಗಾವಿ 12, ಪುಲಿಚರ್ 30 ಇವು ಇದರ ಉಪ ವಿಭಾಗಗಳಾಗಿವೆ.[116]

ವಿಭಜಿಸು ಮತ್ತು ಆಳು ನೀತಿಯನ್ನು ವಿಕ್ರಮಾದಿತ್ಯನು ಚೆನ್ನಾಗಿ ಬಳಸಿದ್ದಾನೆ. ಅಂದು ಮಹಾಮಂಡಳೇಶ್ವರರಲ್ಲಿ ಐಕ್ಯಮತ್ಯವಿದ್ದಿಲ್ಲ. ಹೊಯ್ಸಳರಿಗೂ ಪಾಂಡ್ಯರಿಗೂ

ಆಗುತ್ತಿರಲಿಲ್ಲ. ಇದಕ್ಕೆ ಕಾರಣ ಭೂವ್ಯಾಮೋಹ ಮತ್ತು ಹೊಟ್ಟೆಕಿಚ್ಚಿನ ಸ್ವಭಾವಗಳಾಗಿವೆ. ಮಹಾಮಂಡಳೇಶ್ವರಲ್ಲಿಯೇ ಕಲವರು ಬಲಿಷ್ಠರಾಗಿ ಸೊಕ್ಕಿ ಚಕ್ರವರ್ತಿಯ ವಿರುದ್ಧವೇ ಒಮ್ಮೊಮ್ಮೆ ನಿಲ್ಲುತ್ತಿದ್ದರು. ಈ ಸಮಯದಲ್ಲಿ ಅವರನ್ನು ಸದೆಬಡಿಯಲು ಚಕ್ರವರ್ತಿ ತನ್ನ ಇನ್ನೊಬ್ಬ ಮಹಾಂಂಡಳೇಶ್ವರನನ್ನು ಕಳುಹಿಸುತ್ತಿದ್ದನು. ಉದಾಹರಣೆಗೆ ಹೊಯ್ಸಳ ಬಟ್ಟಿದೇವನು ವಿಕ್ರಮಾದಿತ್ಯನಿಗೆ ಎದುರು ನಿಂತಾಗ ಸಿಂದವಂಶ ಮಹಾಮಂಡಳೇಶ್ವರರನ್ನು, ಪರಮಾರಜಗದ್ದೇವನನ್ನು ಕಳುಹಿಸುತ್ತಾನೆ.[117]

ಘಟ್ಟ 24:

ಕ್ರಿ.ಶ 11ನೇ ಶತಮಾನದ ಹಿಲಾಲಪೂರ ಶಾಸನದಲ್ಲಿ ಮನ್ನೆದಡಿಯ 1000ರ ನೂರುಂಬಾಡದ ಭಾಗವಾಗಿ ಘಟ್ಟ 24 ಇತ್ತೆಂದು ಹೇಳಿದೆ. ಈ ಘಟ್ಟ ಎಂಬುದು ಬಹುಶಃ ಈಗಿನ ಘಾಟಬೋರಳವಿದ್ದಿರಬಹುದು. ಘಟ್ಟ 24ರ ಯೆಕ್ಕಲವಾಡವು ಇಂದಿನ ಹಿಲಾಲಪೂರವಾಗಿದ್ದಿರಬೇಕು. ಈ ಶಾಸನದಲ್ಲಿ ಹಳ್ಳಿಖೇಡ (ಬಿ) ಗ್ರಾಮದ ಉಲ್ಲೇಖವು ಸಹ ಇದೆ.

ಬೀರಿಗೆ 40:

ಬೀದರ ಜಿಲ್ಲೆಯ ತೆಲಗಾಂವ ಕ್ರಿ.ಶ 1081ರ ಶಾಸನದಲ್ಲಿ ಬೀರಿಗೆ (ಇಂದಿನ ಬೀರ್ಗಿ) ಇದರ ಮುಖ್ಯ ಕೇಂದ್ರ ಸ್ಥಾನವಾಗಿತ್ತು. ಇದನ್ನು ಶಾಸನದಲ್ಲಿ ಬಿರ್ಗಿ 40 ಎಂದೂ ಪ್ರಯೋಗಿಸಿದ್ದಾರೆ. ತೇಲ್ಲಿಗಾವೆ ಈ ಬೀರಿಗೆ 40ರಲ್ಲಿತ್ತು ಎಂದು ಉಲ್ಲೇಖಿಸಿದ್ದಲ್ಲದೇ, ಲಂಜವಾಡದ ಹನುಮಂತದೇವರ ಗುಡಿಯ ಮುಂಭಾಗದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲಿರು ಶಾಸನದಲ್ಲಿ ಬೀರಿಗೆ 40ರ ಬಳಿಯ ಲೆಂಜವಾಡ ಎಂದು ಉಲ್ಲೇಖಿಸಲಾಗಿದೆ. ಭಾಲ್ಕಿ ತಾಲೂಕಿನ ಈಗಿನ ಕೆಲವು ಪ್ರದೇಶಗಳನ್ನು ಇದು ತನ್ನ ವ್ಯಾಪ್ತಿಯಲ್ಲಿ ಒಳಗೊಂಡಿತ್ತೆಂದು ಊಹಿಸಬಹುದು.

ಮನ್ನದಡೆ 1000 :

ಮನ್ನೆದಡಿಯ ಉಲ್ಲೇಖ ಜಿಲ್ಲೆಯ ಒಂದೆರಡು ಶಾಸನಗಳಲ್ಲಿ ಬಂದಿವೆ. ಕ್ರಿ.ಶ 1108ರ ಬಸವಕಲ್ಯಾಣದ ಶಾಸನವೊಂದರಲ್ಲಿ ವ್ಯಾಪಾರಿಗಳನ್ನು ಗುರುತಿಸುವಾಗ ಮನ್ನೆದಡಿ ಪಾಳಿಸಾರರು ಎಂದಿದ್ದರೆಚ ಹಿಲಾಲಪುರದ ಶಾಸನದಲ್ಲಿ ಮನ್ನೆದಡೆ ಸಾವಿರದ ನೂರುಂಬಾಡದ ಉಲ್ಲೇಖಗಳು ಬಂದಿವೆ. ಮನ್ನೆದಡಿ ಸಾಸಿರವು ಅಟ್ಟಳೆನಾಡಿನ ದಕ್ಷಿಣಕ್ಕಿದ್ದ ಭಾಗವೆಂದು ತಿಳಿಯಬಹುದು.[118]

ಪಲುಗೆರೆ 60 :

ಕ್ರಿ.ಶ 1077ರ ಅಲವಾಯಿ ಶಾಸನದಲ್ಲಿ ಪಲುಗೆರೆ 60ರ ಮನ್ನೆಯದ ಎಡೆಯರಸರಿಗೆ ತೂವಗಾವೆಯಲ್ಲಿ ತಮಗೆ ಸೇರಿದ ಕಮ್ಮತದಲ್ಲಿ 40 ಮತ್ತರು ಹೊಲವನ್ನು ಕಾಲುತೊಳೆದು ದಾನ ಬಿಟ್ಟಿದ್ದು ತಿಳಿದು ಬಂದಿದು, ಅಟ್ಟಳೆಯ ಸೇನಬೋವ ಅಗ್ಗಯ್ಯ ಎಂಬುವನು ಈ ಶಾಸನವನ್ನು ಬರೆದು ಭಮೋಜ ಕೆತ್ತಿದನ್ನು

ಹೇಳಲಾಗಿದ್ದರಿಂದ ಈ ಪಲುಗೇರೆ 60 ಅಟ್ಟಳೆಯ ಉಪ ವಿಭಾಗವಾಗಿರುವ ಸಾಧ್ಯತೆ ಇರುತ್ತದೆ.[119]

ನಾಗಾವೆ 12 :

ಬೀದರ ಜಿಲ್ಲೆಯ ಇಂಚೂರ ಗ್ರಾಮದ ಹನುಮಂತ ದೇವಾಲಯದ ಸಮೀಪದಲ್ಲಿರುವ ಕಲ್ಲಿನ ಮೇಲಿನ ಕ್ರಿ.ಶ 1104ರ ಶಾಸನದಲ್ಲಿ, ಅಟ್ಟಳೆಯ ಗೊಂಕರಸನು, ಘೋರೇಶ್ವರದೇವರ ಸೇವೆಗಾಗಿ ನಾಗಾವೆ 12ರಲ್ಲಿದ್ದ ಯಿಂಚವೂರಿನಲ್ಲಿ 142 ಮತ್ತರು ಭೂಮಿಯನ್ನು ಬಿಟ್ಟಂತೆ ತಿಳಿಯುತ್ತದೆ.[120]

ಉಜ್ಜಳ :

ಬೀದರ ಜಿಲ್ಲೆಯ ಉಜ್ಜಳಂ ಗ್ರಾಮದಲ್ಲಿರುವ ಕ್ರಿ.ಶ 1120ರ ಶಾಸನದಲ್ಲಿ, ಶಾಸನದ ಎಡಭಾಗದ ಪಾಠವು ತ್ರುಟಿತವಾಗಿದ್ದು ನಾಶವಾಗಿದೆ. ಚಾಲುಕ್ಯ ತ್ರಿಭುವನಮಲ್ಲದೇವ ಆರನೇ ವಿಕ್ರಮಾದಿತ್ಯ ಕಲ್ಯಾಣದ ನೆಲೆವೀಡಿನಿಂದ ಆಳುತ್ತಿದ್ದನೆಂದು ತಿಳಿಸಿದೆ. ಇವನ ಮಹಾಮಂಡಳೇಶ್ವರನಾದ ವೈಸಕುಲದ ಶ್ರೀಯಮರಸನ ಪ್ರಶಸ್ತಿಗಳಿದ್ದು, ಅವನು ಉಬ್ಬಳ ಪ್ರದೇಶವಾಳುತ್ತಿದ್ದನೆಂದು ದಾಖಲಿಸಿದೆ. ಇವನು ಮಲ್ಲ, ಬರ್ಮ್ಮ, ಮೊದಲಾದವರ ಶಿರವನ್ನು ಛೇದಿಸಿದನೆಂದಿದೆ.[121] ಹೀಗೆ ಬೀದರ ಜಿಲ್ಲೆಯಲ್ಲಿ ದೊಡ್ಡ ಮತ್ತು ಸಣ್ಣವು ಸೇರಿ ಒಟ್ಟು ಎಂಟು ಆಡಳಿತ ವಿಭಾಗಗಳಿದ್ದವು.

ಅಧ್ಯಾಯ 3

ಸಾಮಾಜಿಕ ವ್ಯವಸ್ಥೆ

ಕಲ್ಯಾಣ ಚಾಲುಕ್ಯರ ಕಾಲಕ್ಕಾಗಲೇ ಜಾತಿಗಳು ತಮ್ಮದೇ ಆದ ಪ್ರಾಮುಖ್ಯತೆಯನ್ನು ಪಡೆದುಕೊಂಡು ಸಮಾಜದಲ್ಲಿ ಆಳವಾದ ಬೇರುಬಿಟ್ಟಿದ್ದವು. ಅಂದು ಪ್ರಚಲಿತದಲ್ಲಿದ್ದ ಜಾತಿ ಅಥವಾ ವರ್ಣಗಳೆಂದರೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ.

ಬ್ರಾಹ್ಮಣ : ಚಾತುವರ್ಣದಲ್ಲಿ ಬ್ರಾಹ್ಮಣರು ಉನ್ನತ ಸ್ಥಾನವಮಾನಗಳನ್ನು ಹೊಂದಿ ಸಮಾಜದಲ್ಲಿ ಅತ್ಯಂತ ಪ್ರತಿಷ್ಠಿತರೆನಿಸಿದ್ದರು. ರಾಜಕೀಯವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಮುಂದುವರಿದವರಾಗಿದ್ದರು. ಧಾರ್ಮಿಕ ಕ್ಷೇತ್ರದಲ್ಲೂ ಗೌರವಾನ್ವಿತರಾಗಿದ್ದರು. ಆಸನ ವ್ಯಸನಾದಿಗಳ ಚಿಂತೆಯಿಲ್ಲದೆ ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಲೆಂದು ರಾಜ, ಸಾಮಂತರು, ಮಾಂಡಲೀಕ ಅರಸರು, ಊರ ಪ್ರಮುಖರು ಮುಂತಾದವರು ನೂರಾರು ದತ್ತಿಗಳನ್ನು ಬ್ರಾಹ್ಮಣರಿಗೆ ಬಿಟ್ಟುಕೊಟ್ಟುದುದನ್ನು ಶಾಸನಗಳಲ್ಲಿ ಕಾಣುತ್ತೇವೆ. ಅವುಗಳನ್ನು ಬ್ರಹ್ಮದೇಯಗಳೆಂದು ಹೇಳುತ್ತಾರೆ ಮತ್ತು ಗ್ರಾಮಗಳನ್ನು ಅಗ್ರಹಾರಗಳನ್ನಾಗಿ ಪರಿವರ್ತಿಸಿ ಬ್ರಾಹ್ಮಣರಿಗೆ ದಾನ ಮಾಡುತ್ತಿದ್ದರು.

ಬ್ರಾಹ್ಮಣರು ರಾಜಕೀಯ ಕ್ಷೇತ್ರದಲ್ಲಿಯೂ ಬಹುಮುಖ್ಯವಾದ ಪಾತ್ರವನ್ನು ನಿರ್ವಹಿಸುತ್ತಿದ್ದರು. ಮಾಂಡಲಿಕರು, ಸಾಮಂತರು, ಹಲವು ಬ್ರಾಹ್ಮಣರನ್ನು ಮಂತ್ರಿಗಳನ್ನಾಗಿ ನೇಮಿಸಿಕೊಂಡಿದ್ದರು. ಸಿಂದವಂಶದ ಕಣ್ಣರಸನ ಮಗ ಬಾಚಿರಾಜನು ತನ್ನ ಪ್ರಧಾನನಾಗಿ ಬೆನಿಚಿಮಯ್ಯ ಎಂಬ ಬ್ರಾಹ್ಮಣನನ್ನು ನೇಮಿಸಿಕೊಂಡಿದ್ದನು. ವಿಪ್ರಕುಳ ತಿಳಕನಾಗಿದ್ದ ಏಚಣ ಎಂಬ ದಂಡನಾಯಕನನ್ನು ಹೊಯ್ಸಳ ರಾಜ್ಯ ಸಮುದ್ಧರಣ ನೆಂದು ಒಂದು ಶಾಸನದಲ್ಲಿ ಹೇಳಿದೆ. ಇವರನ್ನು ಧರ್ಮಶಾಸ್ತ್ರ ಪ್ರವೀಣರು, ಅಶ್ವಮೇಧ, ಚಂಡಿಕ ಹೋಮ, ಅಗ್ನಿಷ್ಟೋಮಾದ್ಯನೇಕ ಯಜ್ಞಗಳನ್ನು ಮಾಡುತ್ತಿದ್ದರು.

ಕ್ಷತ್ರಿಯರು : ಚಾತುವರ್ಣದಲ್ಲಿ ದ್ವಿತೀಯ ಸ್ಥಾನದಲ್ಲಿರುವ ಇವರು ಆಡಳಿತ ವರ್ಗಕ್ಕೆ ಸೇರಿದವರಾಗಿದ್ದರು, ಸಮಾಜದಲ್ಲಿ ಉನ್ನತ ಸ್ಥಾನದಲ್ಲಿದ್ದರು. ನಯಸೇನ

ಇವರನ್ನು ಕುರಿತು ಭೂಮಂಡಳವನ್ನು ರಕ್ಷಿಸುವ ಕಾರ್ಯದಲ್ಲಿ ನಿರತರಾದವರೆಂದು ಹೇಳಿದ್ದಾನೆ.

ವೈಶ್ಯ: ಚಾತುವರ್ಣದಲ್ಲಿ ವೈಶ್ಯರು ಮೂರನಯವರು ಮುಖ್ಯವಾಗಿ ಇವರು ವ್ಯಾಪಾರಸ್ಥರು ಇವರಲ್ಲಿ ಮುಮ್ಮುರಿದಂಡ, ಗವರೆ, ಗಾತ್ರಿಗ, ಬೀರವಣಿಗ, ಸೆಟ್ಟಿ, ಸೆಟ್ಟಿಗುತ್ತ ಮುಂತಾದ ಪಂಗಡಗಳಿದ್ದವು.

ಶುದ್ರ : ಚಾತುವರ್ಣ ವ್ಯವಸ್ಥೆಯಲ್ಲಿ ಕೊನೆಯ ಸ್ಥಾನದಲ್ಲಿರುವವರು ಶೂದ್ರರು. ಇವರು ಮೇಲಿನ ಮೂರು ವರ್ಣದವರ ಸೇವೆಯನ್ನು ಮಾಡಿಕೊಂಡು ಹೋಗುತ್ತಿದ್ದರಲ್ಲದೇ, ಬೇಸಾಯದ ಕೆಲಸವನ್ನು ಮಾಡಿಕೊಂಡು ಕಷ್ಟಕರ ಜೀವನವನ್ನು ಸಾಗಿಸುತ್ತಿದ್ದರು. ನಯಸೇನನ ಧರ್ಮಾಮೃತದಲ್ಲಿ ಪೊಲೆಯನಂತೆ ವರ್ಣಕ್ಕೆ ಸಲ್ಲದು ಎಂದಿದೆ. ಇದರಿಂದ ಹೊಲೆಯರು ವರ್ಣ ವ್ಯವಸ್ಥೆಯ ಹೊರಗಿದ್ದರೆಂಬುದು ತಿಳಿದು ಬರುತ್ತದೆ. ಅದಕ್ಕಾಗಿಯೇ ಇವರನ್ನ ಪಂಚಮರು, ಅಂತ್ಯಜರು ಎಂದು ಕರೆದಂತೆ ಕಾಣುತ್ತದೆ. ಹೊಲೆಯರು ವಾಸಿಸುವ ಓಣಿ (ಕೇರಿ)ಗಳನ್ನು ನಯಸೇನ ಪೊಲಗೇರಿ ಎಂದು ಕರೆದಿದ್ದಾನೆ. ಇವರ ಮಕ್ಕಳಿಗೆ ಮೇಲ್ವರ್ಗದವರ ಮಕ್ಕಳಂತೆ ರಕ್ಷಣೆ ಮನ್ನಣೆಗಳಿರಲಿಲ್ಲ. ಇವರು ಸತ್ತ ದನಗಳನ್ನು ಹೊತ್ತು ತಂದು ಕೃಷಿಕರಿಗೆ ಬೇಕಾಗುವ ತೊಗಲಿನ ಮಿಣಿ ಮೊದಲಾದ ವಸ್ತುಗಳನ್ನು ಮಾಡಿಕೊಡುತ್ತಿದ್ದರು.

ಆಸ್ಪೃಶ್ಯ ಜಾತಿಗಳಲ್ಲಿ ಹೊಲೆಯರ ನಂತರದ ಸ್ಥಾನ ಮಾದಿಗರದ್ದು, ಇವರಿಗೆ ಜಾಂಬವರೆಂದು ಪದ್ಮಜಾತಿಯವರೆಂದು ಹೆಸರಿವೆ. ಮಾದಿಗರ ಮುಖ್ಯ ಕಸುಬು ಚರ್ಮ ಹದ ಮಾಡುವುದು, ಮೆಟ್ಟು, ಬಾರು ಮೊದಲಾದವುಗಳನ್ನು ತಯಾರಿಸುವುದಾಗಿತ್ತು. ಇದನ್ನೆ ನಯಸೇನ ಮಾದಿಗನಂತೆ ಮೆಟ್ಟೆನ್ನುತ್ತಂ, ಮಾದೆಗನಂತೆ ಮಾರೆತ್ತುವರ್ ಎಂದು ಹೇಳಿದ್ದಾನೆ.

ಇತರ ಜಾತಿಗಳು: ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಇತರ ವೃತ್ತಿಗಳನ್ನು ಮಾಡುವ ಅನೇಕ ಜಾತಿಗಳಿದ್ದವು. ಅವುಗಳಲ್ಲಿ ಮುಖ್ಯವಾಗಿ, ಕಮ್ಮಾರ, ಕುಂಬಾರ, ಅಕ್ಕಸಾಲಿ, ಕಂಚುಗಾರ, ತಳವಾರ, ಬಳೆಗಾರ ಮೊದಲಾದವರು.

ಬೀದರ ಜಿಲ್ಲೆಯ ಭಾಲ್ಕಿಯ ಚೆನ್ನಬಸವೇಶ್ವರ ಕಾಲೇಜಿನಲ್ಲಿ ನಿಲ್ಲಿಸಿರುವ ಕಂಬದ ಮೇಲಿರುವ ಕ್ರಿ.ಶ 1099ರ ಶಾಸನದಲ್ಲಿ ಆರನೇ ವಿಕ್ರಮಾದಿತ್ಯ ತ್ರಿಭುವನಮಲ್ಲನು ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದಾಗ ಅವನ ಮಂಡಳಿಕ ಹೆರ್ಮಾಡಿದೇವನು ರಾಜಧಾನಿ ಭಲ್ಲುಂಕೆಯ ತೈಪುಷದೇವರ ದೀಪದ ಎಣ್ಣೆಗಾಗಿ, ಮೂರು ಗಾಣಗಳನ್ನೂ, ಕಪೀಲೇಶ್ವರ ದೇವರಿಗೆ ಒಂದು ಗಾಣವನ್ನೂ, ಬ್ರಾಹ್ಮಜೀನಾಲಯಕ್ಕೆ ಒಂದು ಗಾಣವನ್ನೂ ಉತ್ತರೇಶ್ವರ ದೇವರ ಶೀಖಣ್ಣ, ಧೂಪ, ನೈವೇದ್ಯಕ್ಕೆ ಆರು ಗದ್ಯಾಣಗಳನ್ನೂ ಭಲ್ಲುಂಕೇಶ್ವರ ದೇವರಿಗೆ ಎಂಟು ಗದ್ದಾಣಗಳನ್ನೂ ನೀಡಿದ ಉಲ್ಲೇಖವಿದೆ. ಹೀಗೆ ಒಂದೇ ಶಾಸನದಲ್ಲಿ ಶೈವ, ವೈಷ್ಣವು ಮತ್ತು ಜೈನ ಧರ್ಮದ ಧಾರ್ಮಿಕ ಸ್ಥಳಗಳಿಗೆ ದಾನಗಳನ್ನು ನೀಡಿದ ಹೆರ್ಮಾಡಿದೇವನು ಇತಿಹಾಸಗಳಲ್ಲಿ

ಸೌಹಾರ್ದಯುತ ರಾಜನೆನ್ನುವದು ಸಾಬೀತು ಪಡಿಸಿದ್ದಾನೆ. ಬೀದರ ಜಿಲ್ಲೆಯಲ್ಲಿ ಕಲ್ಯಾಣ ಚಾಲುಕ್ಯರ ಕಾಲಘಟ್ಟದಲ್ಲಿ ಆಳ್ವಿಕೆ ಮಾಡುತ್ತಿದ್ದ ಚಕ್ರವರ್ತಿಗಳು ಹಾಗೂ ಅವರ ಮಾಂಡಲಿಕರಾದ ಅಟ್ಟಳೆಯ ಸಿಂಧರು ಸೌಹಾರ್ದಯುತವಾಗಿ ಎಲ್ಲ ಧರ್ಮದವರಿಗೆ ಸಮಾನವಾಗಿ ನೊಡಿಕೊಂಡು ಹೋಗುತ್ತಿದ್ದ ಐತಿಹಾಸಿಕ ಸತ್ಯವನ್ನು ಈ ಶಾಸನದಿಂದ ತಿಳಿದು ಬರುತ್ತದೆ.[122]

ಬೀದರ ಜಿಲ್ಲೆಯ ಮುಚಳಂಬ ಗ್ರಾಮದ ರಾಮಲಿಂಗೇಶ್ವರ ಗುಡಿಯ ಎಡಭಾಗದಲ್ಲಿರುವ ಕಲ್ಲಿನ ಮೇಲಿರುವ ಕ್ರಿ.ಶ 1125ರ ಶಾಸನದಲ್ಲಿ ತ್ರಿಭುಮಲ್ಲ ಆರನೇ ವಿಕ್ರಮಾದಿತ್ಯನು ರಾಜಧಾನಿ ಜಯಂತಿಪುರದ ನೆಲೆವೀಡಿನಲ್ಲಿದ್ದಾಗ ರಾಜನಾರಾಯಣಪುರದ ಸ್ಥಲದ ಕಾಲಹಳ್ಳಿಯಾದ ಮುಚ್ಚಳಂಬಿಯ ರಾಮೇಶ್ವರ ದೇವರಿಗೆ ಮೊದಲು ನೀಡಿದ್ದ 80 ಮತ್ತರು ಹೊಲವನ್ನು ಮತ್ತು 12 ಮತ್ತರು ತೊಟವನ್ನು, ಎರಡು ನಿವೇಶನಗಳನ್ನು ಮೊದಲು ನೋಡಿಕೊಳ್ಳುತ್ತಿದ್ದ ಗೊರವರು ಒತ್ತೆ ಇಟ್ಟುಕೊಂಡಿದ್ದರು. ಮಹಾಜನರು ಆ ಒತ್ತೆಕಾರರನ್ನೆಲ್ಲಾ ಒಕ್ಕಲೆಬ್ಬಿಸಿ ಆ ಭೂಮಿಯೆಲ್ಲವನ್ನು ಬಿಡಿಸಿ ದೇವರಿಗೆ ನೀಡಿದರು. ಇದಲ್ಲದೇ ತಮ್ಮ ಧರ್ಮದ ಹಣವನ್ನು ದೇವರಿಗೆ ಸರ್ವಮಾನ್ಯವಾಗಿ ನೀಡಿದರು.

ದೇವರ ನಂದಾದೀಪಕ್ಕೆ ಒಂದು ಗಾಣವನ್ನು, ರಂಗಭೋಗಕ್ಕೆ ಅಲ್ಲಿ ಮಾರಾಟವಾಗುವ ವಸ್ತುಗಳ ಮೇಲೆ ಸುಂಕ ಹೇರಿ ಅದನ್ನು ನೀಡಿದರು. ಸೋವಣ್ಣಿ ದಂಡನಾಯಕನು ಅಗ್ನಿಷ್ಠಿಯ ಮಠದಲ್ಲಿ ಪುರಾಣ ಹೇಳುವ ಭಟ್ಟರು ಮುಂತಾದವರಿಗೆ ದತ್ತಿ ಬಿಟ್ಟಂತೆ ಉಲ್ಲೇಖವಿದೆ. ಹೀಗೆ ಕಲ್ಯಾಣಿ ಚಾಲುಕ್ಯರ ಕಾಲಘಟ್ಟದಲ್ಲಿ ಸಾಮಾಜಿಕವಾಗಿರುವ ಗೋರವರು ಒತ್ತೆ ಇಟ್ಟುಕೊಂಡಿದ್ದ ಭೂಮಿಯನ್ನು ಒತ್ತೆಯಾಗಿಟ್ಟುಕೊಂಡಿದ್ದು, ಮಹಾಜನರು ಅದನ್ನು ಕಸೀದುಕೊಂಡು ದೇವರಿಗೆ ನೀಡಿದನ್ನು ಈ ಶಾಸನದಿಂದ ತಿಳಿದು ಬರುತ್ತದೆ. ಈ ಶಾಸನವು ಆ ಕಾಲಘಟ್ಟದಲ್ಲಿಯೂ ಸಹ ಕೆಲವರು ಭೂಮಿಯನ್ನು ಒತ್ತೆಯಾಗಿಟ್ಟುಕೊಳ್ಳುವ ಪರಿ ಹಾಗೂ ಒತ್ತೆಯಾಗಿಟ್ಟುಕೊಂಡ ಭೂಮಿಯನ್ನು ಮರಳಿ ಪಡೆಯುವ ಸಾಮಾಜಿಕ ಇತಿಹಾಸ ಈ ಶಾಸನದಿಂದ ತಿಳಿದು ಬರುತ್ತದೆ.[123]

ಬೀದರ ಜಿಲ್ಲೆಯ ಮೋರಖಂಡಿ ಗ್ರಾಮದ ಹನುಮಂತ ಗುಡಿಯ ಒಳಗಡೆ ಇರುವ ಕಲ್ಲಿನ ಮೇಲಿರುವ ಕ್ರಿ.ಶ 1079ರ ಶಾಸನದಲ್ಲಿ ತ್ರಿಭುಮಲ್ಲ ಆರನೇ ವಿಕ್ರಮಾದಿತ್ಯನು ಕಲ್ಯಾಣದ ನೆಲೆವೀಡಿನಿಂದ ರಾಜ್ಯಭಾರ ಮಾಡುತ್ತಿದ್ದಾಗ ಅಂಬುಲಗೆಯ ಪ್ರಭು ಮುಖ್ಯನು ತನ್ನ ಊರಿನ ಉತ್ಪತ್ತಿಯನ್ನು ಕನ್ನಡಿ ಭಾಗಿಗಳು ಸಹಿತವಾಗಿ ಕೊಂಡುಕೊಂಡು ಮೋರಖಂಡಿಯ ಸೋಮನಾಥದೇವರಿಗೆ ಧಾರಾಪೂರ್ವಕವಾಗಿ ಬಿಡುತ್ತಾನೆ. ಹೀಗೆ ದೇವರಿಗೆ ದಾನದತ್ತಿ ನೀಡುವಾಗ ಬೇರೆಯವರಿಂದ ಕೊಂಡುಕೊಂಡು ಸಹ ದಾನದತ್ತಿ ಬಿಡುವ ಇತಿಹಾಸವು ಈ ಶಾಸನ ದಿಂದ ತಿಳಿದು ಬರುತ್ತದೆ.[124]

ಬರೂರ ಗ್ರಾಮದ ಪಂಚಾಯಿತಿ ಕಛೇರಿಯ ಎದುರಿನ ಕಟ್ಟೆಯ ಕಲ್ಲಿನ ಕ್ರಿ.ಶ 1115ರ ಶಾಸನದಲ್ಲಿ ತ್ರಿಭುವನಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಬರವೂರ ನಗರದ ಮಾರುವ ಹಾಗೂ ಕೊಳ್ಳುವ ವಸ್ತುಗಳಾದ ಧಾನ್ಯ, ಉಪ್ಪಿಗೆ ಹೊನ್ನಿಗೆ ಎರಡು ಬಳ್ಳ ಬತ್ತವನ್ನೂ ಸೀರೆ, ಎಲೆ–ಅಡಕೆ, ಮೆಳಸು, ಗನ್ನಿಗೆ ಬಂಡ, ಕಿರುಕುಳ ಮೊದಲಾದ ವಸ್ತುಗಳಿಗೆ ಒಂದು ಬೆಳ್ಳಿಯ ಪಾಗವನ್ನು ಬಿಟ್ಟದ್ದನ್ನು ತಿಳಿಸುತ್ತದೆ.[125]

ಕುಟುಂಬ ವ್ಯವಸ್ಥೆ: ಕುಟುಂಬ ಸಮಾಜದ ಒಂದು ಅವಿಭಾಜ್ಯ ಅಂಗ ಅದನ್ನು ಒಂದು ದೃಷ್ಟಿಯಲ್ಲಿ ಪ್ರಥಮ ಸಮಾಜವೆಂದು ಕರೆಯಬಹುದು. ಇದಕ್ಕೆ ಗಂಡು ಹೆಣ್ಣುಗಳ ಸಮಬಂಧವೇ ಮೂಲ, ಅದರ ಉದ್ದೇಶ ಮಾನವನ ಲೈಂಗಿಕ ಜೀವನವನ್ನು ವ್ಯವಸ್ಥೆಗೊಳಿಸಿ ಮನುಕುಲದ ಬೆಳವಣಿಗೆಗೆ ಅವಕಾಸ ಕಲ್ಪಿಸುವುದನ್ನು ಮದುವೆ ಎಂದು ಕರೆಯಲಾಗಿದೆ.

ಮದುವೆಗಳು ಸಾಮಾನ್ಯವಾಗಿ ಸವರ್ಣೆಯಲ್ಲಿಯೇ ನಡೆಯುತ್ತಿರಬೇಕೆಂದು ಇತಿಹಾಸಕಾರರು ಹೇಳುತ್ತಿದ್ದಾದರೂ ಇದು ಸಂಪೂರ್ಣ ನಂಬುವಂತಹದಲ್ಲ. ವಧು–ವರರನ್ನು ಆಯ್ಕೆ ಮಾಡುವ ವಿಷಯವನ್ನು ಶಾಸನಗಳು ಉಲ್ಲೇಖಿಸುವುದಿಲ್ಲ. ಅರಸುಮನೆತನಗಳು ತಮ್ಮ ಸರಿಸಮಾನರಾದ ಇತರ ಅರಸರೊಂದಿಗೆ ಸಂಬಂಧವನ್ನು ಬೆಳೆಸುವುದು ಸಾಮಾನ್ಯವಾದರೂ ಕೆಲವುಸಲ ರಾಜಕೀಯ ಕಾಕ್ಕಾಗಿ ಸಾಮಂತ ಮಾಂಡಲೀಕರೊಂದಿಗೆ ಸಂಬಂಧವನ್ನು ಬೆಳೆಸುತ್ತಿದ್ದುದಕ್ಕೆ ಉದಾಹರಣೆಗಳಿವೆ. ಸಾಮಂತ ಕದಂಬ ಜಯಕೇಶಿ ಆರನೆಯ ವಿಕ್ರಮಾದಿತ್ಯನ ಮಗಳು ಮೈಳಲದೇವಿಯನ್ನು, ವಿಸ್ಣುವರ್ಧನನ ಮಗಳು ಹರಿಯಲದೇವಿಯನ್ನು ಮದುವೆಯಾದುದು ಕಂಡು ಬರುತ್ತದೆ. ಪ್ರಖ್ಯಾತ ದಂಡನಾಯಕ ಆನಂತಪಾಳನ ಸೋದರಿ ಪದ್ಮಾದೇವಿಯನ್ನು ಕೃಷ್ಣನೆಂಬುವ ಮದುವೆಯಾಗಿದ್ದು, ಇವಳನ್ನು ಆರನೆಯ ವಿಕ್ರಮಾದಿತ್ಯನ ದಂಡನಾಯಕ ಗೋವಿಂದರಾಜನ ಸೊಸೆಯೆಂದು ಶಾಸನವೊಂದು ಹೇಳಿದೆ. ಹೀಗೆ ಆಯಾ ಅಂತಸ್ತಿನವರು ತಮಗೆ ಸಮ್ಮತವಾದ ಅಂತಸ್ತಿನವರೊಂದಿಗೆ ಸಂಬಂಧ ಬೆಳೆಸುತ್ತಿದ್ದರೆಂದು ಗೊತ್ತಾತುತ್ತದೆ.

ಒಂದು ಕುಟುಂಬದ ಅಕ್ಕ–ತಂಗಿಯರನ್ನು ಇನ್ನೊಂದು ಕುಟುಂಬದ ಅಣ್ಣ–ತಮ್ಮಂದಿರಿಗೆ ವಿವಾಹ ಮಾಡಿಕೊಡಲಾಗುತ್ತಿತ್ತು. ಈ ಪದ್ಧತಿಯನ್ನು ನಾವು ಇಂದಿಗೂ ಕಾಣಬಹುದು. ಮಹಾಪ್ರಧಾನ ನಿಂಬಣ್ಣಯ್ಯ ತನ್ನ ಇಬ್ಬರು ಹೆಣ್ಣು ಮಕ್ಕಳಾದ ನಾಗಲದೇವಿ ಹಾಗೂ ಗಂಗಣಬ್ಬೆಯರನ್ನು ಶಂಕರಾಚಾರ್ಯ ಹಾಗೂ ಅವನ ತಮ್ಮ ಮಹಾದೇವನಿಗೆ ವಿವಾಹ ಮಾಡಿಕೊಡಲಾಗಿತ್ತು. ಮದುವೆ ಮಾಡಿದುದರ ಪ್ರತಿಭಲವಾಗಿ ಸ್ಥಳೀಯ ದೇವಾಲಯಗಳಿಗೆ ಆಯ ಅಥವಾ ತೆರಿಗೆ ಬಿಟ್ಟಿರುವುದನ್ನು ಕೆಲವು ಶಾಸನಗಳು ಉಲ್ಲೇಖಿಸುತ್ತವೆ. ಮದುವೆ ಸಮಯದಲ್ಲಿ ಮದುವಣಿಗ ಮತ್ತು ಮದುವಣಿಗೆಯರು ತಲಾ ಒಂದು ಪಣವನ್ನು ಕೊಡಬೇಕೆಂದು ಬಳ್ಳಿಗಾವೆಯ ಸಿದ್ಧಿಗರ ಸಂಘವು ತೀರ್ಮಾನಿಸಿ ಆ ಹಣವನ್ನು ಕುಸುಮೇಶ್ವರ ದೇವಸ್ಥಾನಕ್ಕೆ

ಕೊಡಬೇಕೆಂದು ನಿರ್ಧರಿಸುತ್ತಾರೆ. ಇದನ್ನೇ ಹಂದರ ಹಣವೆಂದು ಶಾಸನಗಳನ್ನು ಕರೆದಿರುವುದು. ಅಲ್ಲದೆ ನಯಸೇನನು ಕೂಡ ಗೋತ್ರವನ್ನು ತಿಳಿಯದೆ ಹೆಣ್ಣು ಕೊಡುತ್ತಿರಲಿಲ್ಲ. ಹಾಗೆ ಮಾಡುವವರನ್ನು ಮೂರ್ಖರೆಂದೂ, ಎಗ್ಗರೆಂದು ಜನರು ಭಾವಿಸುತ್ತಿದ್ದರು. ಸೋದರಳಿಯನಿಗೆ ಮಗಳನ್ನು ಕೊಡುತ್ತಿದ್ದರು. ನೈಮಿತ್ತಿಕರಿಂದ ಮುಹೂರ್ತ ಕೇಳಿ ಶುದ್ಧ ಮಾಸದೊಳ್ ತಾರಾಬಲ ಚಂದ್ರಬಲ ಕೂಡಿ ಬಂದಾಗ ಮದುವೆ ಮಾಡುತ್ತಿದ್ದರು. ಶ್ರೀಮಂತರ ಮದುವೆಗಳು ಬಹಳ ವಿಜ್ರಂಭಣೆಯಿಂದ ನಡೆಯುತ್ತಿದ್ದವು. ವಿವಾಹ ಮಂಟಪವನ್ನು ಬಹಳ ಸುಂದರವಾಗಿ ಸಿಂಗರಿಸುತ್ತಿದ್ದರು. ದುಕೋಲಧ್ವಜ, ಮಲಯುಜದ, ಎಳದಳಿರತೋರಣ, ಮುಕ್ತಾವಳಿ, ಪೊಸರಂಗವಲ್ಲಿಗಳು ಅಲ್ಲಿ ಶೋಭಿಸುತ್ತಿದ್ದವು. ಮದುವಣಿಗನನ್ನು ಕೂಡಿಕೊಂಡು ದಿಬ್ಬಣ ಹೊರಡುತ್ತಿತ್ತು. ಮದುಮಗಳ ಶೋಭೆಯೇ ಶೋಭೆಯೆಂದು ಅವರ ತಿಳುವಳಿಕೆ. ಮದುವೆಯ ಮನೆಯ ಒಸಗೆಗೆ ಅಲ್ಲಿಯ ಊಟಕ್ಕೆ ಮರಳುಗೊಂಡವರೂ ಇದ್ದರು. ಪೆರರ ಮನೆಯ ಮದುವೆಯಲ್ಲಿ ಲೋಗರಂ ನೆಂಟರ್ ಮಾಡಿಕೊಳ್ಳುವ ಜಾಣರಿಗೂ ಕೊರತೆಯಿರಲಿಲ್ಲ.

ಕನ್ಯದಾನ, ವಿವಾಹ ಸಮಾರಂಭದ ಆಚರಣೆಗಳ ವಿಷಯ ಕಾವ್ಯಗಳಲ್ಲಿ ವಿವರವಾಗಿ ಬರುತ್ತಿದ್ದರೆ, ಶಾಸನಗಳು ಕೆಲವೇ ಸಂಗತಿಗಳನ್ನು ತಿಳಿಸುತ್ತವೆ. ಆರನೆಯ ವಿಕ್ರಮಾದಿತ್ಯನ ಮಗಳು ಮೈಳಲದೇವಿ ಮತ್ತು ಕದಂಬ ಜಯಕೇಶಿಯರ ವಿವಾಹ ವರ್ಣನೆಯ ಪಧ್ಯವೊಂದು ಹೀಗಿದೆ.

ಮಾವನಾದ ವಿಕ್ರಮಾದಿತ್ಯನು ವಿಭೂತಿಯನ್ನು ಧರಿಸಿಕೊಂಡು ಹೇಮಪರ್ವತದಂತೆ ನಡೆದು ಬಂದು ವಿವಾಹ ಮಂಟಪದಲ್ಲಿ ಕುಳಿತ ಅಳಿಯನ ಪದಗಳನ್ನು ತೊಳೆದು ಮಗಳನ್ನು ಸಂತೋಷದಿಂದ ಧಾರೆಯೆರೆದನೆಂದು ಈ ಪದ್ಯ ಹೇಳುತ್ತದೆ. ಇದರಂತೆ ನಿಜಪ್ರಧಾನದಂಡನಾಥ ಪುತ್ರಿಯಂ ಕನ್ಯಾರತ್ನಮಂ ತಂದು ವಿಷ್ಣುವರ್ಧನದೇವಂ ತಾನೆ ಕಿನಕಳಶವನೆತ್ತಿ ಕೈನೀರೆರೆದು ಕನ್ಯಾದಾನ ಮಾಡುವುದರ ಮೂಲಕ ಬಿಟ್ಟಿಯಣ್ಣನ ವಿವಾಹವನ್ನು ನೆರವೇರಿಸಿದನೆಂಬ ಸಂಗತಿ ಬೇಲೂರಿನ ಶಾಸನದಲ್ಲಿದೆ.

ಮೂರನೆಯ ಸೋಮೇಶ್ವರನು ತನ್ನ ಮಾನಸೊಲ್ಲಾಸದಲ್ಲಿ ವಿವಾಹವರ್ಣನೆಯನ್ನು ಬಹಳ ಸುಂದರವಾಗಿ ಮಾಡಿದ್ದಾನೆ. ವಿವಾಹಮಂಟಪವನ್ನು ಶೋಬಾಯಮಾನವಾದ, ವಿಶಾಲವಾದ, ಮಧ್ಯವೇದಿಕೆಯಿಂದ ವಿರಾಜಿಸುತ್ತಿರುವ , ರೇಶಿಮೆಯ ಪಟ್ಟಿಯಿಂದ ಕೂಡಿದ. ಕಮಾನು ಹೊದಿಕೆಯಿಂದ ಕೂಡಿದ, ಕಂಬ ತೋರಣದಿಂದ ಅಲಂಕೃತವಾದ ದ್ವಾರ, ಗೋಮಯ ಲಿಪ್ತವಾದ ನೆಲ, ಪುಷ್ಪರಾಶಿ ಇವುಗಳಿಂದ ಶೋಭಸುತ್ತಿರಬೇಕು. ಗಣಿಕರು ಹೇಳಿದ ಶುಭಮುಹೂರ್ತದಲ್ಲಿ ಪುಣ್ಯಾಹವಾಚನ ಮಾಡಿ, ಮಧು ಪರ್ಕದಿಂದ ಸಮ್ಮಾನಿತನಾದ ಶ್ವೇತ ವರ್ಷದಿಂದ ವಿಭೂಷಿತನಾದ ಉಂಗುರಗಳಿಂದ ಅಲಂಕೃತನಾದ ಪುತ್ರನನ್ನು ವೇದಿಕೆಯ ಮೇಲೆ

ಮೆಲ್ಲನೆ ಹತ್ತಿರಸಬೇಕು. ಹೀಗೆಯೆ ಮದುವೆ ರೂಪರೇಷೆಗಳನ್ನು ಹೇಳುತ್ತ ಹೋಗುತ್ತಾನೆ. ಮದುವೆಯಲ್ಲಿ ವರನಿಗೆ ಉಡುಗೊರೆಯನ್ನು ಕೊಡುತ್ತಿದ್ದರು. ಇದು ವಧುವಿನ ತಂದೆ ತಾಯಿಗಳು ಮಾಡಬೇಕಾದ ಕರ್ತವ್ಯವಾಗಿದ್ದು, ಕೆಲವು ಸಲ ಆಳುತ್ತಿದ್ದ ಅರಸನೋ, ಮಂತ್ರಿಪ್ರಮುಖರೋ ಇದರಲ್ಲಿ ಸಹಭಾಗಿಗಳಾಗುತ್ತಿದ್ದರು. ಇದು ಪ್ರಭುವರ್ಗದವರಲ್ಲಿ ದೊಡ್ಡ ಪ್ರಮಾಣದಲ್ಲಿ ಮಧ್ಯಮ ಮತ್ತು ಸಾಮಾನ್ಯವರ್ಗದವರಲ್ಲಿ ಅವರ ಗೌರವಕ್ಕೆ ತಕ್ಕಂತೆ ನಡೆಯುತ್ತಿತ್ತು.

ಚಟ್ಟಿಯ ದೇವನೆಂಬ ಗೋವೆಯ ಕದಂಬವಂಶ ರಾಜಕುವರರಿಗೆ ಮುಮ್ಮರಿನೃಪನು ಪುತ್ರಿಯಂ ಸವಿಸ್ತರದೊಳೆಕೊಟ್ಟು, ಅಳಿಯನಿಗೆ 5 ಲಕ್ಷ ಸುವರ್ಣ ನಾಣ್ಯಗಳನ್ನು ಅರ್ಪಿಸಿರುವನು. ಈ ಚಟ್ಟಿದೇವನ ಮಗ ಮೊದಲನೆಯ ಜಯಕೇಶಿದೇವನು ಆರನೆಯ ವಿಕ್ರಮಾದಿತ್ಯನಿಗೆ ತನ್ನ ಮಗಳಂ ಧಾರಾನ್ವಿತಂ ಕೊಟ್ಟು ಪೆರ್ಚ್ಚಿದಲಂಪಂಪಲವ,,,ಯಂ ಕುದುರೆಯಂ ಬಣ್ಡಾರಮಂ ಲೆಕ್ಕವಿಲ್ಲದೆದೆ ತೆಲ್ಲಂಟಿಯಂ ಕೊಟ್ಟನೆಂದು ನರೇಂದ್ರ ಶಾಸನ ತಿಳಿಸಿದೆ. ಆರನೆಯ ವಿಕ್ರಮಾದಿತ್ಯ ಮಗಳಾದ ಮೈಳಲದೇವಿ ಮದುವೆಯಲ್ಲಿ ಅಳಿಯ ಎರಡನೆಯ ಜಯಕೇಶಿಗೆ ನೀಡಿದ ಕಾಣಿಕೆಯನ್ನು,

ಕನರೌದ್ರ್ಯಗ್ರಂಗಳೇನಚ್ಚರಿಯೆ ಪಲವೆನಲ್ ಹೇಮಪುಂಜಂಗಳಂ ರೋ
ಹನಗೇಂದ್ರವ್ರಾತವಿತ್ತೆತ್ತೆನೆ ಪಲವು ಮಹಾರತ್ನ ಪುಂಜಂಗಳಂ ಶ
ಕ್ರನ ಗಂಧೇಭಕ್ಕಮುಚ್ಚೆಶ್ರವದ ಮಹಿಮೆಗಂ ಮೇಲೆನಲ್ಸಂದು ವಂನೂ
ತನ ಭದ್ರೇಭಾಶ್ವಕೋಟಿ ಪ್ರಕರಮನಳಿಯಂಗಿತ್ತನಾ ಕುಂತಳಾಧೀಶಂ॥

ಎಂಬ ಪದ್ಯ ಸೂಚಿಸುತ್ತದೆ. ಇದು ಮದುವೆ ಸಮಾರಂಭದಲ್ಲಿ ಪ್ರಭುವರ್ಗದವರು ವರನಿಗೆ ಕೊಡುವ ಉಡುಗೊರೆ ಮತ್ತು ಮದುವೆಯ ಕಾಲಕ್ಕೆ ಕೈಕೊಳ್ಳುತ್ತಿದ್ದ ದಾನ–ಧರ್ಮವೆಂದು ಹೇಳಬಹುದು.

ಬಹುಪತ್ನಿತ್ವ: ಪ್ರಾಚೀನ ಕಾಲದಲ್ಲಿ ಸಮಾಜವು ಬಹುಪತ್ನಿತ್ವವನ್ನು ಒಪ್ಪಿಕೊಂಡು ಬಂದಿತ್ತು. ಪ್ರಭುವರ್ಗದವರಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುತ್ತಿದ್ದ ಈ ಪದ್ಧತಿ ಸಾಮಾನ್ಯರಲ್ಲಿ ಇರಲಿಲ್ಲವೆನ್ನುವಷ್ಟು ವಿರಳವಾಗಿತ್ತು. ಚಕ್ರವರ್ತಿಗಳು ಮತ್ತು ಇತರ ಸಾಮಂತ ಅರಸರಂತೂ ಬಹುಪತ್ನಿವಲ್ಲಭರಾಗಿದ್ದರು. ಚಾಲುಕ್ಯ ಆರನೇ ವಿಕ್ರಮಾದಿತ್ಯನಿಗೆ ಹೊತ್ತೊಂಬತ್ತು ಜನ ರಾಣಿಯರಿದ್ದ ಸಂಗತಿ ಈವರೆಗಿನ ದಾಖಲೆಗಳಿಂದ ತಿಳಿದುಬಂದಿದೆ. ಮೂರನೆಯ ಸೋಮೇಶ್ವರನಿಗೆ ಬಮ್ಮಲದೇವಿ ಮತ್ತು ರಾಜಲದೇವಿ ಎಂಬ ಇಬ್ಬರು ರಾಣಿಯರಿದ್ದರು. ಈತನ ಸಾಮಂತನಾದ ವಿಷ್ಣುವರ್ಧನನಿಗೆ ಶಾಂತಲದೇವಿ ಎಂಬ ಹೆಸರಿನ ಈರ್ವರು ಬಮ್ಮಲದೇವಿ, ಲಕ್ಷ್ಮೀಮಹಾದೇವಿ, ದೇವಕಿದೇವಿ, ರಾಜಲದೇವಿಯರೆಂಬ ರಾಣಿಯರಿದ್ದರು.

ಪರ್ವ ಎಂಬ ಸಂಸ್ಕೃತ ಪದವು ಪಬ್ಬ, ಹಬ್ಬವೆಂದು ಕನ್ನಡದಲ್ಲಿ

ರೂಪುಗೊಂಡಿವೆ. ಕಲ್ಯಾಣ ಚಾಲುಕ್ಯರ ಕಾಲದ ಶಾಸನಗಳಲ್ಲಿ ಕಾರ್ತಿಕ ಪೌರ್ಣಿಮೆ, (ಗೌರಿಹುಣ್ಣಿಮೆ) ಕಾರ್ತಿಕದ ಅಮವಾಸ್ಯೆ (ದೀಪಾವಳಿ), ಶ್ರಾವಣಶುದ್ಧ (ನಾಗರಪಂಚಮಿ), ಉತ್ತರಾಯಣ ಸಂಕ್ರಾಂತಿ ಮಹಾಪರ್ವ, ಮಾಘದ ಪೌರ್ಣಿಮೆ (ಭಾರತ ಹುಣ್ಣಿಮೆ) ಆಷಾಡದಮವಾಸ್ಯೆ (ನಾರ ಅಮವಾಸ್ಯೆ), ಶ್ರಾವಣದಮವಾಸ್ಯೆ (ಬೆನಕನ ಅಮವಾಸ್ಯೆ) ಜೇಷ್ಠದ ಹುಣ್ಣಿಮೆ (ಕಾರು ಹುಣ್ಣಿಮೆ) ಮುಂತಾದವುಗಳು ಉಲ್ಲೇಖಗೊಂಡಿವೆ. ದೀಪಾವಳಿ, ಯುಗಾದಿಗಳೇ ಮತ್ತು ನೂರಹುಣ್ಣಿಮೆಗಳು ಈ ಕಾಲದ ಶಾಸನಗಳಲ್ಲಿ ಮೂರು ಪರ್ವಗಳ ಹೆಸರುಗಳನ್ನು ಕಾಣಬಹುದು.

ಮೋರನೆಯ ಸೋಮೇಶ್ವರನ ಮಾನಸೊಲ್ಲಾಸ ಗ್ರಂಥವು ಆಹಾರ ವೈವಿದ್ಯತೆಯನ್ನು ಕುರಿತಂತೆ ಸ್ಥೂಲವಾದ ವಿವರಣೆಯನ್ನು ನೀಡುತ್ತದೆ. ಅಲ್ಲದೇ ವಿವಿಧ ಬಗೆಯ ಶಾಖಾಹಾರ ಮತ್ತು ಮಾಂಸಾಹಾರ ಮಾಡುವ ಪದ್ಧತಿಯನ್ನು ಸಹ ತಿಳಿಸುತ್ತದೆ. ದೊಡ್ಡ ಜಾತಿಯ ಹೆಸರು, ಬಿಳಿ ಅವರೆ, ಕಡಲೆ, ಕಪ್ಪು ಉದ್ದು, ಕಾಡು ಕಡಲೆ ಮತ್ತು ಅಲಸಂದೆ ಈ ಕಲಿಂಗಕ, ಮುಂಡಶಾಲಿ, ಸ್ಥೂಲಶಾಲಿ ಮತ್ತು ಸಷಷ್ಠಿಕಶಾಲೆ ಅಕ್ಕಗಳ ಅನ್ನವನ್ನು ಭೋಗಿಸಬೇಕು. ಅಲ್ಲದೇ ಮಂಡಿಕಾ, ಸೋಹಲ, ಕಾಸಾಲ, ಉದ್ದಿನ, ಅಲಸಂದೆಯ ಮತ್ತು ಬಟಾಣೆಯ ದೋಸೆಗಳನ್ನು ಕಟಕರ್ಣ, ಇಡರಿಕಾ, ಮಟಿಕಾ, ಕ್ಷೀರಪ್ರಕಾರ ಮಾಡುವ ಬಗೆಯನ್ನು ಮತ್ತು ಜಿಂಕೆ. ಮೊಲ, ಕುರಿ, ಮೀನು, ಇಲಿ,ಹಂದಿ, ಆಡು, ವಿವಿಧ ಪಕ್ಷಿಗಳು, ಆಮೆ, ಏಡಿ ಮುಂತಾದ ಪ್ರಾಣಿಗಳ ಮಾಂಸದಿಂದ ಚಕ್ಕುಲಿ, ವಡೆ, ಕವಚಂದಿ, ಪುಯಲ ಭಡಿಕೃತ, ಕೃಷ್ಣಪಾಕ, ಭೂಕ್ಷಿಕ, ಕೋಶಲೀ, ಪೂರಭಟ್ಟಾಕ ಪಂಚವರ್ಣಿ, ಅಂತ್ರಶುಂಠಕ, ಮಂಡಲೀಯ, ವರ್ಣಶುಂಠಕ, ಉಪಖಂಡಕ, ಖಾರಖಂಡ, ನಂದ್ಯಾವರ್ತ, ಘೃತಕರ್ಕಟ ಮುಂತಾದ ಆಹಾರವನ್ನು ತಯಾರಿಸುತ್ತಿದ್ದರು.

ಸೋಮೇಶ್ವರನ ಕಾಲದಲ್ಲಿ ವಿವಿಧ ಬಗೆಯ ಪಾನೀಯಗಳನ್ನು ತಯಾರಿಸುತ್ತಿದ್ದರು. ಮಾನಸೊಲ್ಲಾಸ ಗ್ರಂಥವು ಅವುಗಳನ್ನು ತಯಾರಿಸುವ ವಿಧವನ್ನೂ ಸಹ ತಿಳಿಸುತ್ತದೆ. ಹೊಚ್ಚ ಹೊಸ ಬೆಣ್ಣೆಯನ್ನು ಸ್ವಚ್ಚವಾಗಿ ತೊಳೆದು, ನೀರು ಬೆರಸದ ತುಪ್ಪದ ಪಾತ್ರೆಯಲ್ಲಿಟ್ಟು ಮುಂವಾದ ಬೆಂಕಿಯಲ್ಲಿ ಕಾಯಿಸಬೇಕು. ಅದು ಚೆನ್ನಾಗಿ ಕಾಯ್ದಾಗ ಗೋಧಿ ಕಾಳುಗಳನ್ನು ಹಾಕಬೇಕು. ವೀಳೆಯದೆಲೆಯನ್ನು ಹಾಕಿ ಕೆಳಗಿಸಬೇಕು. ಹೀಗೆ ಅನೇಕ ಬಗೆಯ ಪಾನಿಯಗಳ ತಯ್ಯಾರಿಕೆ ವಿಧಾನಗಳು ತಿಳಿಸುತ್ತಾನೆ. ಶರತ್ಕಾಲದಲ್ಲಿ ದಿವ್ಯಜಲವನ್ನು ಹೇಮಂತ ಕಾಲದಲ್ಲಿ ನದೀ ಜಲವನ್ನು ಶಿಶಿರ ಕಾಲದಲ್ಲಿ ತಡಾಗ ಜಲವನ್ನು, ವಸಂತ ಕಾಲದಲ್ಲಿ ಸರೋಜಲವನ್ನು, ಬೇಸಿಗೆಯಲ್ಲಿ ನಿರ್ಝಲವನ್ನು ಮತ್ತು ಮಳೆಗಾಲದಲ್ಲಿ ಭಮಜಲವನ್ನು ಕುಡಿಯಬೇಕು. ಹಂಶೋದಕ ಮತ್ತು ಪದ್ಯಕರವಾದ ನಾರಿಕೇಲ ಜಲವನ್ನು ರಚಿಗೆ ತಕ್ಕಹಾಗೆ ಕುಡಿಯಬೇಕು ಎಂದು ಹೇಳುತ್ತಾನೆ.

ಜನರ ಮನರಂಜನೆಯ ಸಾಧನಗಳ ಉಲ್ಲೇಖ ಮನಸೋಲ್ಲಾಸದಲ್ಲಿ ತುಂಬಾ ಸವಿಸ್ತಾರವಾಗಿ ಬರುತ್ತದೆ. ಇದರಲ್ಲಿ ಅವನು ಇಪತ್ತು ವಿನೋದ, ಇಪ್ಪತ್ತು

ಕ್ರೀಡೆಗಳ ಬಗ್ಗೆ ಉಲ್ಲೇಖಿಸಿದ್ದಾನೆ. ಶಸ್ತ್ರವಿನೋದ, ಶಾಸ್ತ್ರವಿನೋದ, ಗಜವಾಹ್ಯಾಲೀವಿನೋದ, ತುಗವಾಹ್ಯಾಲೀವಿನೋದ, ಅಂಕವಿನೋದ, ಮಲ್ಲವಿನೋದ, ಕುಕ್ಕುಟ ವಿನೋದ, ಲಾವಕವಿನೋದ, ಮೇಷವಿನೋದ, ಮಹಿಷವಿನೋದ, ಪಾರಾವತವಿನೋದ, ಸಾರಮೇಯವಿನೋದ, ಶೈನವಿನೋದ, ಮತ್ಸ್ಯವಿನೋದ, ಮೃತಯಾವಿನೋದ, ಗೀತವಿನೋದ, ವಾದ್ಯವಿನೋದ, ನೃತ್ಯವಿನೋದ, ಕಥಾವಿನೋದ, ಚಮತ್ಕಾರವಿನೋದ, ಕ್ರೀಡೆಗಳಾದ ಬೂಧರಕ್ರೀಡೆ, ವನಕ್ರೀಡೆ, ಅಂದೋಲನಕ್ರೀಡೆ, ಸೇಚನಕ್ರೀಡೆ, ಜಲಕ್ರೀಡೆ, ಶಾದ್ವಲಕ್ರೀಡೆ, ವಾಲುಕಾಕ್ರೀಡೆ, ಜೋತ್ಸಾಕ್ರೀಡೆ, ಸಸ್ಯಕ್ರೀಡೆ, ಮದಿರಾಪಾನಕ್ರೀಡೆ, ಪ್ರಹೇಳಿಕಾಕ್ರೀಡೆ, ಚದುರಂಗಕ್ರೀಡೆ, ಪಾಶಕಕ್ರೀಡೆ, ವರಾಟಿಕಾಕ್ರೀಡೆ, ಫಣಿದಾಕ್ರೀಡೆ, ಫಂಜಿಕಾಕ್ರೀಡೆ, ತಿಮಿರಕ್ರೀಡೆ, ವೀರಕ್ರೀಡೆ, ಪ್ರೇಮಕ್ರೀಡೆ, ಸುರತಕ್ರೀಡೆಗಳ ವಿವರಣೆಯನ್ನು ಮಾನಸೊಲ್ಲಾಸದಲ್ಲಿ ನೀಡುತ್ತಾನೆ. ಇವುಗಳಲ್ಲಿ ಕೆಲವೊಂದು ಕ್ರೀಡೆ ವಿನೊದಗಳು ಇಂದಿಉ ಪ್ರಚಿತದಲ್ಲಿದ್ದುದನ್ನು ಕಾಣಬಹುದು.[126]

ಬೀದರ ಜಿಲ್ಲೆಯ ಉಡಬನಳ್ಳಿ ಗ್ರಾಮದ ಕ್ರಿ.ಶ 12ನೇ ಶತಮಾನದಲ್ಲಿ ಬರೆಯಲ್ಪಟ್ಟ ಶಾಸನದಲ್ಲಿ, ಮಂಡದೇವ ಎಂಬುವವನು ಹೇಳಜಾರಿಗೆ ಭೂದಾನ ನೀಡಿರುವುದು ಕಂಡು ಬರುತ್ತದೆ. ಈ ಹೇಳಜಾರಿ ಯಾರು ?, ಈ ಹೆಸರಿನ ಒಬ್ಬ ಮನುಷ್ಯತೆ, ಅಥವಾ ಇದು ಜಾತಿ ಸೂಚಕ ಪದವೇ, ಅಥವಾ ದೇವರ ಹೆಸರೇ? ಇಂತಹ ಪ್ರಶ್ನೆಗಳಿಗೆ ಉತ್ತರ ಸಿಗಬೇಕಾಗಿದೆ.[127]

ಕಲ್ಯಾಣಿ ಚಾಲುಕ್ಯರ ಕಾಲಘಟ್ಟದಲ್ಲಿ ಪಟ್ಟಣ ಮತ್ತು ಗ್ರಾಮಗಳಲ್ಲಿ ಕೇರಿಗಳಿರುವುದನ್ನು ಕಾಣಬಹುದು. ಉದಾಃ ಬೀದರ ಜಿಲ್ಲೆಯ ಬಸವಕಲ್ಯಾಣ ವಸ್ತುಸಂಗ್ರಹಾಲಯದಲ್ಲಿರುವ ಕ್ರಿ.ಶ 1143ರ ಶಾಸನದಲ್ಲಿ ಜಲದೇಕಮಲ್ಲನು ಕಲ್ಯಾಣದಿಂದ ಆಳ್ವಿಕೆ ಮಾಡುವ ಕಾಲಕ್ಕೆ ಸಿಂಪಿಗೇರಿ ಮತ್ತು ಹಾಳಹಾದಿಯಲ್ಲಿನ ಸಿಂಪಿಗರ ಕೇರಿಯಲ್ಲಿನ ಮನೆಗಳ ಕುರಿತು ತಿಳಿಸಲಾಗಿದೆ.[128]

ಬೀದರ ಜಿಲ್ಲೆಯ ಬಸವಕಲ್ಯಾಣ ವಸ್ತು ಸಂಗ್ರಹಾಲಯದಲ್ಲಿರುವ ನಾಲ್ಕನೆಯ ಕಲ್ಲಿನ ಮೇಲಿರುವ ಶಾಸನದಲ್ಲಿ, ಮುದ್ರಾಣದ ವಡ್ಡವ್ಯವಹಾರಿಯ ಹಣದಲ್ಲಿ ಚಾಮಳಸೆಟ್ಟಿಯ ತಮ್ಮ ಲಖಣಸೆಟ್ಟಿ, ಮಯ್ದುನ ವಾಸಪಸೆಟ್ಟಿಯರು ಗುಜ್ಜರ ಮಲಯವತಿದೇವಿಯ ದೇವಾಲಯವನ್ನು ಮಾಡಿಸಿದರು. ಈ ದೇವಾಲಯದ ಪಶ್ಚಿಮಕ್ಕಿರುವ ನಾರಾಯಣದೇವರ ಪೂಜೆ, ಗನ್ಧಾಕ್ಷತ್ರೆ, ನೈವೆದ್ಯಕ್ಕೆಂದು ಮುಂದ್ರಾವಣದ ನಗರಗಳನ್ನು (ವ್ಯಾಪಾರಿಗಳು) ತಮ್ಮ ದತ್ತಿಯಲ್ಲಿ ಬಂದ ಹಣದಲ್ಲಿ ಮೇಲಿನ ಕಾರ್ಯ್ಗಗಳನ್ನು ನಡೆಸಲು ದತ್ತಿ ಬಿಡುತ್ತಾನೆ. ನಾರಾಯುಣದೇವರ ಧರ್ಮಕಾರ್ಯಗಳಲ್ಲಾಗಲಿ, ಹಣದಲ್ಲಾಗಲಿ, ನಗರಗಳೇ ಒಡೆಯರಾಗಿರುತ್ತಾರೆ. ಗೊವರಿಗಾಗಲೀ, ಬ್ರಾಹ್ಮಣರಿಗಾಗಲೀ ಇದು ಸಲ್ಲುವುದಿಲ್ಲ. ಶಾಸನಾಂತ್ಯದಲ್ಲಿ ಮತ್ತೆ ಈ ಮುದ್ರಾವಣದ ದತ್ತಿಗೆ ನಗರಗಳೇ ಒಡೆಯರೆಂದೂ ಇದು ಬ್ರಾಹ್ಮಣರಿಗೆ ಸಲ್ಲುವುದಿಲ್ಲವೆಂದೂ, ನಗರಗಳೆ ನೇಮಿಸಿದ ಮಾಣಿಯರೇ ದೇವರನ್ನು ಪೂಜಿಸಬೇಕೆಂದು ನಿಬಂಧಿಸಲಾಗಿದೆ. ಹೀಗೆ ಬ್ರಾಹ್ಮಣರಿಗೆ ಆ ದೇವಾಲಯದಲ್ಲಿ ಪೂಜಿಸಲು ನಿಬಂಧನೆ ಹಾಕಿರುವ ಏಕೈಕ ಶಾಸನವು ಇದಾಗಿರಬಹುದು. ಏಕೆಂದರೆ ಇಂತಹ ನಿಬಂಧನೆಗಳು ಹಾಕಿರುವ ಶಾಸನಗಳು ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಬೇರೆ ಕಡೆ ಕಾಣಸಿಗುವುದಿಲ್ಲ.[129]

ಬೀದರ ಜಿಲ್ಲೆಯ ಬಸವಕಲ್ಯಾಣ ವಸ್ತು ಸಂಗ್ರಹಾಲಯದಲ್ಲಿರುವ ಕ್ರಿ.ಶ 12ನೇ ಶತಮಾನದಲ್ಲಿ ಸ್ವಯಂಭು ಹಟಕೇಶ್ವರ ದೇವರ ಪೂರ್ವ್ವ ದಿಕ್ಕಿನ ಭಾಗದ ಇದೇ ಸೀಮೆಯನ್ನು ನಿರ್ದೇಶಿಸಿದೆ ಎಂದಿದ್ದು, ಧರ್ಮವನು ಹಾಳು ಮಾಡಿದವರು ನಾಯಿ, ಕತ್ತೆ (ಜನ್ಮ ತಾಳುವನು) ಎಂದು ಶಾಪಾಶಯವಾಗಿ ಹೇಳಿದೆ.[130]

ಕಲ್ಯಾಣ ಚಾಲುಕ್ಯರ ಕಾಲಘಟ್ಟದಲ್ಲಿ ದಾನ ಮಾಡಿರುವ ಭೂಮಿಗೆ ಮತ್ತು ವಸ್ತುಗಳಿಗೆ ಯಾರಾದರು ಕೇಡು ಮಾಡಬಹುದೆನ್ನುವ ಉದ್ದೇಶದಿಂದ ಹಾಗೆ ಮಾಡದಂತೆ ಅನೇಕ ಶಾಪಾಶಯಗಳನ್ನು ವಿಧಿಸಿರುವ ಶಾಸನಗಳನ್ನು ಕಾಣಹಬುದು. ಹಾಗೆ ಬೀದರ ಜಿಲ್ಲೆಯಲ್ಲಿಯೂ ಕೆಲವು ಕಟ್ಟಳೆಯ ಶಾಪಾಶಯ ಹಾಕಿರುವ ಶಾಸನಗಳಿದ್ದು, ಉದಾಹರಣೆಗಾಗಿ, ಬೀದರ ಜಿಲ್ಲೆಯ ಭಾಟಸಂಘವಿ ಗ್ರಾಮದ ಭಾರತಿ ಮಹಾರಾಜರ ಮನೆಯಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲಿರುವ ಶಾಸನದಲ್ಲಿ, 3 ಮತ್ತರು, 40 ಮತ್ತರೂ ಭೂಮಿಯನ್ನು ಪ್ರಭುಗಳು, ಮನ್ನೆಯರು, ಅರಸರುಗಳು, ತಮ್ಮ ಧರ್ಮವೆಂದು ತಿಳಿದು ಪಾಲಿಸುವರು. ಈ ಕ್ರಮದಲ್ಲಿ ಇದನ್ನು ಕಾಯುವ ಪುರಷನಿಗೆ ಆಯಸ್ಸು, ಯಶಸ್ಸು ಸಿಗಲಿ ಎಂದು ಹಾರೈಸಿದೆ. ಇದನ್ನು ಕಾಯದ ಪಾಪಿಗೆ ಕುರುಕ್ಷೇತ್ರ, ಬಾಣರಾಸಿಯಲ್ಲಿ ಏಳ್ಕೋಟಿ ಮುನೀಂದ್ರರನ್ನು, ಕವಿಲೆಗಳನ್ನು, ವೇದಾಢ್ಯರನ್ನು ಕೊಂದು ತಿಂದ ಮಹಾಪಾಪಕ್ಕೆ ಪಾತ್ರರಾಗುತ್ತಾರೆಂದು ಈ ಶಾಸನ ಸಾರಿ ಸಾರಿ ಹೇಳುತ್ತದೆ.[131]

ಬರೂರ ಗ್ರಾಮದ ಪಂಚಾಯಿತಿ ಕಛೇರಿಯ ಎದುರಿನ ಕಟ್ಟೆಯ ಕಲ್ಲಿನ ಕ್ರಿ.ಶ 1115ರ ಶಾಸನದಲ್ಲಿ ತ್ರಿಭುವನಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಮಾರುವ ಹಾಗೂ ಕೊಳ್ಳುವ ವಸ್ತುಗಳಾದ ಧಾನ್ಯ, ಉಪ್ಪಿಗೆ ಹೊನ್ನಿಗೆ ಎರಡು ಬಳ್ಳ ಬತ್ತವನ್ನೂ ಸೀರೆ, ಎಲೆ–ಅಡಕೆ, ಮೆಳಸು, ಗನ್ನಿಗೆ ಬಂಡ, ಕಿರುಕುಳ ಮೊದಲಾದ ವಸ್ತುಗಳಿಗೆ ಒಂದು ಬೆಳ್ಳಿಯ ಪಾಗವನ್ನು ಬಿಟ್ಟದ್ದನ್ನು ತಿಳಿಸುತ್ತದೆ.[132]

ಅಧ್ಯಾಯ 4

ಆರ್ಥಿಕ ವ್ಯವಸ್ಥೆ

ಒಂದು ನಾಡಿನ ಆರ್ಥಿಕ ವ್ಯವಸ್ಥೆಯೂ ಮುಖ್ಯವಾಗಿ ಆ ನಾಡಿನ ಸಂಪನ್ಮೂಲಗಳನ್ನು ಹಾಗೂ ಮಾನವ ದುಡಿಮೆಯ ಶಕ್ತಿಯನ್ನು ಅವಲಂಬಿಸಿರುತ್ತದೆಯಾದರೂ, ಕೈಗಾರಿಕೆ, ವ್ಯಾಪಾರ, ವಾಣಿಜ್ಯ ಮುಂತಾದವುಗಳು ಕೂಡ ಆ ಪ್ರದೇಶದ ಆರ್ಥಿಕ ಬೆಳವಣಿಗೆಗೆ ಪೂರಕವಾಗಿರುತ್ತದೆ. ಅರ್ಥವ್ಯವಸ್ಥೆಯೂ ತನ್ನ ವಿಶಾಲವಾದ ವ್ಯಾಪ್ತಿ ಹಾಗೂ ವೈವಿಧ್ಯತೆಯಿಂದಾಗಿ ಮಹತ್ವದ ಸ್ಥಾನವನ್ನು ಪಡೆದುಕೊಂಡಿದೆ. ನಮ್ಮ ಪೂರ್ವಜರು ಸಹ ಅರ್ಥವ್ಯವಸ್ಥೆಗೆ ಉನ್ನತ ಸ್ಥಾನವನ್ನು ನೀಡಿದ್ದು, ಪುರುಷಾರ್ಥಗಳಲ್ಲಿ ಅದಕ್ಕೆ ದ್ವಿತೀಯ ಸ್ಥಾನವನ್ನು ಕಲ್ಪಿಸಿದರೂ, ಸಮಾಜದಲ್ಲಿ ಅರ್ಥಕ್ಕೆ ಪ್ರಥಮ ಸ್ಥಾನವೇ ಇದೆ. ಯಾವುದೇ ನಾಡು ಆರ್ಥಿಕವಾಗಿ ಸಂಪದ್ಭರಿತವಾದಾಗ ಮಾತ್ರ ಸಮೃದ್ಧ ಸ್ವಾಭಿಮಾನದ ಬದುಕನ್ನು ನಡೆಸಿ ಸಮಗ್ರ ಸಂಸ್ಕೃತಿಯನ್ನು ಉತ್ತಮಗೊಳಿಸುವದು ಸಾಧ್ಯ.

ಅರ್ಥವ್ಯವಸ್ಥೆಯಲ್ಲಿ ಆ ನಾಡಿನ ಸಂಪನ್ಮೂಲಗಳ ಜೊತೆಗೆ ಸಂಪನ್ಮೂಲಗಳ ಸಮರ್ಪಕ ಹಂಚಿಕೆ, ಅವುಗಳನ್ನು ಸದುಪಯೋಗಪಡಿಸಿಕೊಳ್ಳುವ ಅಲ್ಲಿಯ ಜನರ ಸಂಘಟನಾ ಮನೋಭಾವ ಹಾಗೂ ಕೌಶಲ್ಯವೂ ಕೂಡಾ ಅಷ್ಟೇ ಅವುಗಳನ್ನು ಬಳಸಿಕೊಳ್ಳುವ ಸಾಮರ್ಥ್ಯಗಳಿಗೆ ಅನುಗುಣವಾಗಿ ನಿರ್ಧರಿಸಲ್ಪಡುತ್ತದೆ. ಅರ್ಥ (ಹಣ)ದ ಮೇಲ್ವಿಚಾರಣೆ ರಾಜನಾದರೂ ಅರ್ಥಮೂಲವಾದ ವಾಣಿಜ್ಯ ವ್ಯಾಪಾರಿಗಳ ಕೈಯಲ್ಲಿರುತ್ತಿತ್ತು.

ಭೂಮಿಯೇ ಅಲ್ಲಿನ ಜನಗಳ ಜೀವನ ನಿರ್ವಹಣೆಗೆ ಆಧಾರ ಮತ್ತು ಅವರ ಆರ್ಥಿಕ ಭದ್ರತೆಯ ಸಾಧನವು ಆಗಿರುತ್ತದೆ. ಈತನ ಕಾಲದ ಹೆಚ್ಚಿನ ಶಾಸನಗಳು ಭೂಮಿ ದಾನವನ್ನು ಪ್ರಸ್ತಾಪಿಸುತ್ತವೆ. ಇಂಥ ದಾನದ ಭೂಮಿಯನ್ನು ಕೆಡಿಸಿದವರಿಗೆ ಒದಗುವ ಹಾನಿಯನ್ನು ಅವು ಎತ್ತಿತೋರಿಸಿವೆ. ಇದರಿಂದ ಆ ಕಾಲದಲ್ಲಿಯೂ ಭೂಮಿಗೆ ಬಹಳಷ್ಟು ಪ್ರಾಧಾನ್ಯತೆ ಇದ್ದಿತೆಂದು ತಿಳಿಯುತ್ತದೆ.

ಪ್ರಾಚೀನ ಕಾಲದಲ್ಲಿ ಸಾಗುವಳಿ ಭೂಮಿಯನ್ನು ನಿರುಣ್ಣುವ ತತ್ವದ ಮೇಲೆ ಎರಡು ವಿಧವಾಗಿ ವಿಂಗಡಿಸಿದ್ದರು. ಮಳೆ ನೀರನ್ನು ಆಶ್ರಯಿಸಿದ್ದ ಭೂಮಿಗೆ

ದೇವಮಾತೃಕ ವೆಂದೂ, ನದಿ ಹೊಳೆ,ಹಳ್ಳ, ಕೆರೆ, ಭಾವಿಗಳನ್ನು ಆಶ್ರಯಹಿಸಿದ್ದ ಭೂಮಿಗೆ ನದಿಮಾತೃಕವೆಂದೂ ಕರೆಯಲಾಗುತ್ತಿತ್ತು. ಈ ಸ್ಥೂಲ ವಿಭಜನೆಯು ನೀರಿನ ಆಸರೆ ಮತ್ತು ಬೆಳೆಯುವ ಬೆಳೆಗಳನ್ನು ಆಶ್ರಯಿಸಿ ಮಾಡಿದ ವಿಭಜನೆಯಾದರೆ, ಮಣ್ಣಿನ ಗುಣವನ್ನು ಅನುಸರಿಸಿ ಹೊಲಗಳನ್ನು ಎರೆ ಅಥವಾ ಕರಿಯಕೆಯಿ. ಕಿಸುಕಾಡು, ಕೆಂಗಾಡು, ಮಳಲಕೆಯಿ, ಹೊಂಗೆ ಹರಳಕೆಯಿ ಎಂದು ವಿಭಾಗಿಸಿರುವುದು ಉಂಟು.

ಈ ಶಾಸನಗಳು ಹೊಲಗಳನ್ನು ಪೋಲ್ ಬೆದ್ದಲು ಎಂದು ಕರೆದಿವೆ. ಮಳೆ ನೀರನ್ನು ತಡೆಯಲು ಅನೂಕುಲ ಹೊಂದಿದ್ದ ಗದ್ದೆ ಇವನ ಶಾಸನಗಳಲ್ಲಿ ಗೆರ್ದೆ, ಗಳ್ದೆ ಎಂದು ಬಳಕೆಗೊಂಡಿದೆ. ಇಂದಿಗೂ ಹೊಲ ಮತ್ತು ಗದ್ದೆ ಪದ ಆ ಅರ್ಥದಲ್ಲಿ ಬಳಕೆಯಲ್ಲಿರುವುದನ್ನು ಕಾಣಬಹುದು. ತೋಟಗಾರಿಕೆಯು ಹೆಚ್ಚಾಗಿ ಬಾವಿಯ ನೀರಿನ್ನವಲಂಭಿಸಿರುತ್ತಿತ್ತು. ಇನ್ನೂ ಕೆಲವು ಸಲ ಭೂಮಿಯನ್ನು ಉತ್ತಮ,. ಮಧ್ಯಮ ಮತ್ತು ಕನಿಷ್ಠ ಎಂದೂ ವಿಭಾಗಿಸಿರುವುದುಂಟು.

ಪ್ರಾಚೀನ ಮತ್ತು ಮಧ್ಯಕಾಲೀನ ಕರ್ನಾಟಕದ ಶಾಸನಗಳಲ್ಲಿ ಎಲ್ಲಿಯೂ ರಾಜನು ರೈತರಿಂದ ಹೊಲಗಳನ್ನು ಕಿತ್ತುಕೊಂಡ ನಿದರ್ಶನಗಳಿಲ್ಲ. ರೈತರಿಗೆ ತಮ್ಮ ಹೊಲಗಳನ್ನು ಮಾರುವ, ದತ್ತಿಯಾಗಿ ಬಿಡುವ ಸಂಪೂರ್ಣ ಸ್ವಾತಂತ್ರ್ಯವಿದ್ದಿತು. ಅಲ್ಲದೇ ಎಷ್ಟೋ ಸಂದರ್ಭಗಳಲ್ಲಿ ರಾಜನೇ ಹಣವನ್ನು ಕೊಟ್ಟು ಭೂಮಿಯನ್ನು ಕೊಂಡ ನಿದರ್ಶನಗಳಿಲ್ಲ.

ವಿವಿಧ ವೃತ್ತಿ ಕೆಲಸ ಕಾರ್ಯಗಳಿಗಾಗಿ ಒಬ್ಬ ವ್ಯಕ್ತಿಗೆ ಬಿಡುವ ಭೂದಾನ, ದತ್ತಿಗಳು ಅವನ ಸ್ವಂತ ಮಾಲಿಕತ್ವಕ್ಕೆ ಸೇರಿತ್ತಿತ್ತು. ಕಂಚಗಾರ ಬೆಳಗಲಿಯ ಕ್ರಿ.ಶ 1047ರ ಶಾಸನವು ಮಹಾಮಂಡಲೇಶ್ವರ ಗಂಡರಾದಿತ್ಯರಸರು ಕಂಚಗಾರ ಬೆಳಗಲಿಯ ನಾಗಣ್ಣೋಜರ ವಿಷ್ಣುದೇವಗೆ ಬಿಟ್ಟ ಅರುಮತ್ತರು ಭೂಮಿಯ ಉಲ್ಲೇಖವನ್ನು ತಿಳಿಸುತ್ತದೆ. ಹೀಗೆ ಬಹಳಷ್ಟು ಶಾಸನಗಳಲ್ಲಿ ಭೂಮಿ ದಾನ ಬಿಟ್ಟಿರುವುದು ಕಂಡು ಬರುತ್ತದೆ.

ವ್ಯವಸಾಯ:

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಹೆಚ್ಚಿನ ಶಾಸನಗಳಲ್ಲಿ ದೇವಸ್ಥಾನಗಳಿಗೆ ಬಿಟ್ಟ ಭೂದಾನಗಳನ್ನೇ ಹೇಳುವದರಿಂದ ವ್ಯವಸಾಯುವೇ ಮುಖ್ಯ ಉದ್ಯೋಗವಾಗಿತ್ತೆಂಬುದು ಸ್ಪಷ್ಟವಾಗುತ್ತದೆ.

ವ್ಯವಸಾಯ ಕ್ರಮ ಕುರಿತು ಇವರ ಆಳ್ವಿಕೆ ಶಾಸನಗಳು ಸ್ಪಷ್ಟವಾದ ಚಿತ್ರಣವನ್ನು ಒದಗಿಸುವದಿಲ್ಲ. ಹೊಲ, ಗದ್ದೆ, ತೋಟಗಳಲ್ಲಿ ಬೆಳೆಯುತ್ತಿದ್ದ ಪ್ರಸ್ತಾಪ ಪ್ರಾಸಂಗಿಕವಾಗಿ ಕಾವ್ಯ–ಶಾಸನಗಳಲ್ಲಿ ಬಂದಿವೆ. ಭತ್ತದ ಗದ್ದೆಗಳಿದ್ದು, ಶಾಸನಗಳು ಅವುಗಳನ್ನು ಕಲವೆಗದ್ದೆ ಎಂದು ಕರೆದಿವೆ. ಗದ್ದೆಯಲ್ಲಿ ಬೆಳೆಯುವ ಇನ್ನೊಂದು ಪ್ರಮುಖ ಬೆಳೆ

ಕಬ್ಬು, ಶಾಸನಗಳು ಕಬ್ಬಿನ ಉಲ್ಲೇಖಗಳನ್ನು ಮಾಡದೇ ಇದ್ದಾಗ್ಯೂ ಸಕ್ಕರೆಯ ಕುರಿತು ಮೈಲಾರ 1046ರ ಶಾಸನದಲ್ಲಿ ಉಲ್ಲೇಖಗೊಂಡಿದೆ. ಬೆಲ್ಲಗಳನ್ನು ಕುರಿತು ಉಲ್ಲೇಖಗಳನ್ನು ಒಳಗೊಂಡಿರುವುದರನ್ವಯ ಕಬ್ಬು ಈ ಅವಧಿಯಲ್ಲಿ ಹೇರಳವಾಗಿ ಬೆಳೆಯಲಾಗುತ್ತಿತ್ತೆಂದು ಊಹಿಸಬಹುದಾಗಿದೆ. ಕಲ್ಯಾಣ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟ ಪ್ರದೇಶದಲ್ಲಿ ಮಳೆ ಆಧಾರಿಕ ಭೂಮಿ ಅಧಿಕವಾಗಿದ್ದಿತು. ಕೃಷಿಕರು ಈ ಮಳೆಯನ್ನೇ ನಂಬಿ ಸಾಗುವಳಿ ಮಾಡುತ್ತಿದ್ದರು. ಬೆಳೆಗಾಳುಗಳು ಬೆಳೆಸಲಾಗುತ್ತಿತ್ತು. ವ್ಯವಸಾಯಕ್ಕೆ ಎತ್ತು, ಕತ್ತೆ, ಕೋಣ, ಕುದುರೆಗಳನ್ನು ಬಳಸುತ್ತಿದ್ದರು. ಎತ್ತುಗಳಿಲ್ಲದವರು ನೆರೆಹೊಲದವರಿಂದ ಹೊಲಗಳನ್ನು ಬಿತ್ತಿಸಿಕೊಳ್ಳುತ್ತಿದ್ದರು.

ನೀರಾವರಿ ನಿಶ್ಚಿತ ಮತ್ತು ಉತ್ತಮವಾದ ಫಲಪಡೆಯಲು ನೀರಾವರಿ ಪದ್ಧತಿಯು ಅನಿವಾರ್ಯ ಮಳೆಯನ್ನವಲಂಭಿಸದ ಕೃಷಿ ಉತ್ಪಾದನೆ ಹೆಚ್ಚಿಸಲು ನೀರಾವರಿ ಸಂಪನ್ಮೂಲಗಳು ಅತೀ ಅವಶ್ಯಕ. ವಿಶಾಲ ಭೂಪ್ರದೇಶಕ್ಕೆ ಒಡೆಯನಾದ ಒಂದನೆಯ ಸೋಮೇಶ್ವರನ ಕಾಲದಲ್ಲೂ ನೀರಾವರಿಗೆ ಅನೇಕ ಮೂಲಗಳನ್ನು ಅವಲಂಭಿಸಿರುವುದು ಕಂಡು ಬರುತ್ತದೆ. ಇವರ ಶಾಸನಗಳು ನದಿ, ತೊರೆ, ಕೆರೆ, ಕಟ್ಟೆಹಳ್ಳ, ಕೊಳ್ಳ, ಬಾವಿಗಳನ್ನು ಉಲ್ಲೇಖಿಸುತ್ತವೆ.

ಒಂದನೇ ಸೋಮೇಶ್ವರನ ಶಾಸನಗಳಲ್ಲಿ ತುಂಗಭದ್ರಾ, ಸಿಂಧು-ಗಂಗಾ, ಕೃಷ್ಣ-ಭೀಮಾರಥಿ, ಯಮುನೆ, ಗೋದಾವರಿ, ಮಾಂಜರಾ, ಹಾಗೂ ಘಟಪ್ರಭಾರ ನದಿಗಳ ಉಲ್ಲೇಖಗಳಿದ್ದು, ಈ ನದಿಗಳ ಎಡಬಲ ಭೂಮಿಗಳು ಫಲವತ್ತತೆಯಿಂದ ಕೂಡಿರುವುದನ್ನು ಈಗಲೂ ಕಾಣಬಹುದು. ಈ ನದಿಗಳಿಗೆ ಅಡ್ಡವಾಗಿ ಆಣೆಕಟ್ಟೆಗಳನ್ನು ಕಟ್ಟಿಸಿದ ವಿಷಯು ಮತ್ತು ಈ ನದಿಗಳ ನೀರನ್ನು ವ್ಯವಸಾಯುಕ್ಕೆ ಉಪಯೋಗಿಸುತ್ತಿದ್ದರೋ ಇಲ್ಲವೋ ಎಂಬುದಕ್ಕೆ ಶಾಸನಗಳಲ್ಲಿ ವಿವರಗಳಿಲ್ಲ.

ತೋಟ, ಗದ್ದೆಗಳಲ್ಲಿ ಬಾವಿಗಳಿರುತ್ತಿದ್ದವು. ಕಲ್ಯಾಣ ಚಾಲುಕ್ಯರ ಕೆಲವು ಶಾಸನಗಳಲ್ಲಿ ಬಾವಿಯ ಉಲ್ಲೇಖಗಳನ್ನು ಹೊಂದಿವೆ. ಈತನ ಕೆಲಶಾಸನಗಳು ತೋಟ, ಹೂದೋಟ ಗದ್ದೆಗಳನ್ನು ಉಲ್ಲೇಖಿಸುವುದರಿಂದ ಇವು ಸ್ವಯಂ ನೀರಿನ ವ್ಯವಸ್ಥೆಯನ್ನು ಹೊಂದಿರಬಹುದಾಗಿದೆ ಎಂದು ಊಹಿಸಬಹುದು.

ಬೀದರ ಜಿಲ್ಲೆಯ ಗೋರ ಚಿಂಚೋಳಿಯ ವಿಠ್ಠಲ ದೇವಾಲಯದ ಸಮೀಪದಲ್ಲಿರುವ ಕಲ್ಲಿನ ಮೇಲಿರುವ ಶಾಸನದಲ್ಲಿ ಚಾಲುಕ್ಯ ಅರಸ ಭೂಲೋಕಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಅವನ ಮಹಾಮಂಡಳೇಶ್ವರನಾಗಿ ಹೆಮ್ಮಾಡಿಯರಸನು ಭಲ್ಲುಂಕೆಯ ಉತ್ತರೇಶ್ವರ ದೇವರ ಪ್ರತಿರೂಪವಾಗಿ, ಚಿಕ್ಕ ಉತ್ತರೇಶ್ವರ ದೇವಾಲಯವನ್ನು (ನಿರ್ಮಿಸಿ) ಚಿಂಚವಳ್ಳಿಯ ಸೀಮೆಯಿಂದ ದಕ್ಷಿಣಕ್ಕೆ, ಲಚ್ಚಗಾವೆಯ ಪೂರ್ವಕ್ಕೆ, ಸೊನ್ನಿಕಬ್ಬೆಯ ಹೊಲದಿಂದ ಪಶ್ಚಿಮಕ್ಕೆ 40 ಮತ್ತರು ಹೊಲವನ್ನು ದಾನ ನೀಡಿದನು. ಉತ್ತರೇಶ್ವರದೇವರ ಆಚಾರ್ಯನಾದ ವಿಮಳಾದಿತ್ಯ ಪಂಡಿತನು ಗಾಣವನ್ನೂ, ಅಮ್ಮಗಿಯೆಂಬುವವನು ದೇವಾಲಯುದ ಬಾವಿಯು

ಜೀರ್ಣೋದ್ಧಾರವನ್ನೂ ಮಾಡಿಸಿದ. ಮೂಲಿಗನಾದ ಚಂದನಾಯಕನು ದೇವರ ನೈವೇದ್ಯಕ್ಕೆಂದು 8 ಮತ್ತರು ಭೂಮಿ, ನಂದಾದೀಪಕ್ಕೆ ಒಂದು ಮತ್ತರು, ಒಂದು ಹೂದೋಟ, ಒಂದು ಮನೆಯನ್ನು ದಾನ ನೀಡಿರುತ್ತಾನೆ. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಬಾವಿಗಳು ಮತ್ತು ಕೇರೆಗಳಿಂದ ಹೋದೋಟ ನಿರ್ಮಿಸುತ್ತಿದ್ದರೆನ್ನುವ ಮಾಹಿತಿ ದೊರೆಯುತ್ತಿದ್ದು, ಅದರಂತೆ ಬೀದರ ಜಿಲ್ಲೆಯಲ್ಲಿಯೂ ಸಹ ಬಾವಿಗಳನ್ನು ತೊಡಿದ್ದು ಹಾಗೂ ಹೂದೋಟಗಳನ್ನು ನಿರ್ಮಿಸಿದ್ದು ಈ ಶಾಸನಗಳಿಂದ ತಿಳಿದು ಬರುತ್ತದೆ.[133]

ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಗೋರ್ಟಾ (ಬಿ) ಗ್ರಾಮದ ಹನುಮಂತ ಗುಡಿಯ ಮುಂಭಾಗದಲ್ಲಿರುವ ಕಲ್ಲಿನ ಮೇಲಿರುವ ಶಾಸನದಲ್ಲಿ, ತ್ರಿಭುವನಮಲ್ಲನು ರಾಜಧಾನಿ ಕಲ್ಯಾಣಪುರದಿಂದ ಆಳುತ್ತಿದ್ದಾಗ ಇಗೋರಂಟೆಯ ಕೆಲವರು ನಂದಾದೀಪಕ್ಕೆ ಗಾಣದ ಉತ್ಪತ್ತಿಯಲ್ಲಿ ಸೊಲ್ಲಗೆ ಎಣ್ಣೆಯನ್ನು ತೋಂಟವನ್ನು ನೀಡುತ್ತಾರೆ. ಮಲೋಜನಿಗೆ ಒಂದು ತೋಟವನ್ನು ನೀಡುತ್ತಾರೆ. ದೇವರ ಕೆಲಸ ಮಾಡಿದ ಒಡ್ಡ ಕೇತಬೋವನಿಗೆ ಒಂದು ನಿವೇಶವನ್ನು ಕಮ್ಮಠ ಆಚಾರಿಗೆ ಒಂದು ನಿವೇಶವನ್ನು ನೀಡಿದನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಬೀದರ ಜಿಲ್ಲೆಯಲ್ಲಿಯೂ ಕೇರೆ ಬಾವಿಗಳನ್ನು ನೀರನ್ನು ತೋಟಗಳಲ್ಲಿ ಬಳಸುತ್ತಿದ್ದರೆನ್ನುವ ಇತಿಹಾಸ ತಿಳಿಯುತ್ತದೆ.[134]

ಕಲ್ಯಾಣಿ ಚಾಲುಕ್ಯರ ಕಾಲದಲ್ಲಿ ಭತ್ತ, ಕಬ್ಬು, ಜೋಳ, ಅರಿಷಿಣ, ಹತ್ತಿ, ನೇರಿಲ್, ಈಳೆ, ಕಿತ್ತಳೆ, ತಾಳ, ತುಂಬುರ, ತೆಂಗು, ಅಡಕೆ, ವಿಳ್ಯದೆಲೆ, ಬಾಳೆ, ಮಾವು, ಹಲಸು, ಹುಣಸೆ, ಲಿಂಬೆ, ಮುಂತಾದ ಬೆಳೆಗಳನ್ನು ಬೆಳಸುತ್ತಿದ್ದರು.

ಪ್ರಾಚೀನ ಕಾಲದಲ್ಲಿ ಪಶುಗಳನ್ನು ವ್ಯವಸಾಯ, ಸಾಗಾಣಿಕೆ, ಹೈನು ಹಾಗೂ ಮಾಂಸಗಳಿಗಾಗಿ ಪೋಷಿಸಲಾಗುತ್ತಿತ್ತು. ದನ-ಕರುಗಳು ಕೃಷಿಗೆ ಸಂಬಂಧಿಸಿದ ಶ್ರಮಗಳಲ್ಲಿ ಮನುಷಷ್ಯನೊಂದಿಗೆ ಆಸರೆಯಾಗುತ್ತಿದ್ದವು. ಹಾಲು, ತುಪ್ಪ, ಮೊಸರು, ಗಿಣ್ಣಗಳ ಮೂಲಕ ರೈತನಿಗೆ ಆಹಾರ ಪೂರೈಸುವ ಅವು ಆತನ ಆರ್ಥಿಕ ಪರಿಸ್ಥಿತಿ ಸುಧಾರಿಸುವಲ್ಲಿಯೂ ಸಹಾಯಕವಾಗಿದ್ದವು. ಗೋವುಗಳನ್ನು ಅಪಹರಿಸುವುದು ಇವರ ಕಾಲದಲ್ಲಿ ಜನಜನಿತವಾದ ಸಂಗತಿಯಾಗಿತ್ತು. ಕಾವ್ಯ ಶಾಸನಗಳು ಅದನ್ನು ತುರುಗೋಳ್ ಎಂದು ಕರೆದಿವೆ. ಕರ್ನಾಟಕದ ಹೆಚ್ಚಿನ ಹಳ್ಳಿಗಳಲ್ಲಿ ವೀರಗಲ್ಲುಗಳು ತುರುಗೋಳ್‌ನಲ್ಲಿ ಮರಣಹೊಂದಿದ ವೀರರ ಸ್ಮಾರಕಗಳಾಗಿವೆ. ಬಿಟ್ಟದಾನ ಅಪಹರಿಸುವವರಿಗೆ ಅಂಥ ದೋಷ ತಗಲುತ್ತದೆಯೆಂಬ ಸಂಗತಿ ಶಾಸನ ಫಲಶೃತಿಗಳಲ್ಲಿದೆ.

ಭೂಸಾಗುವಳಿ ಮತ್ತು ಬಾವಿಯಿಂದ ನಿರನ್ನೆತ್ತಲು ಸಾಮಾನ್ಯವಾಗಿ ಎತ್ತುಗಳನ್ನು ಬಳಸುತ್ತಿದ್ದರು. ಸಾರಿಗೆ ವ್ಯವಸ್ಥೆಯಲ್ಲಿ ದನಕರುಗಳ ಪಾತ್ರ ಪ್ರಮುಖವಾಗಿತ್ತು. ಕುದುರೆ, ಎತ್ತು, ಕೋಣ, ಕತ್ತೆಗಳನ್ನು ಸಾರಿಗೆಗೆ ಬಳಸುತ್ತಿದ್ದ

ಸಂಗತಿಯು ಶಾಸನಗಳಲ್ಲಿ ಉಕ್ತವಾಗಿವೆ. ದನಕರುಗಳ ಜೊತೆಗೆ ಕುದುರೆಗಳನ್ನು ವಿಶೇಷವಾಗಿ ಸಾಕುತ್ತಿದ್ದರು. ಸವಾರಿಮಾಡಲು, ಸರಕು ಸಾಗಿಸಲು ಯುದ್ಧಕಾಲದಲ್ಲಿ ಹೋರಾಡಲು ಕುದುರೆ, ಆನೆಗಳನ್ನು ಹೆಚ್ಚಾಗಿ ಬಳಸುತ್ತಿದ್ದರು. ವಿಕ್ರಮಾದಿತ್ಯನು ಚಿತ್ರಕಂಠ ಎಂಬ ಅಶ್ವವನ್ನೇರಿ ಅನೇಕ ಯುದ್ಧಗಳಲ್ಲಿ ಶತ್ರುಗಳನ್ನು ಸೋಲಿಸಿ ತನ್ನ ತಂದೆಯ ರಾಜ್ಯವೈಭವವನ್ನು ಪುನಃ ಸಂಪಾದಿಸಿದನೆಂದು ಶಾಸನಗಳು ಅವನ್ನು ಬಣ್ಣಿಸುತ್ತವೆ.

ಅರ್ಥವ್ಯವಸ್ಥೆಯಲ್ಲಿ ಭೂಮಿಗಿರುವಷ್ಟೇ ಪ್ರಾಧಾನ್ಯ ಕೈಗಾರಿಕೆಗಳಿದೆ. ವ್ಯವಸಾಯ ಹಾಗೂ ಭೂಮೂಲಕ ಕಚ್ಚಾಪದಾರ್ಥಗಳೇ ಕೈಗಾರಿಕೆಗಳ ಮೂಲವಾದುದರಿಂದ ಅವು ಒಂದಕ್ಕೊಂದು ಪೂರಕವಾಗಿವೆ.

ಕಲ್ಯಾಣಿ ಚಾಲುಕ್ಯರ ಅನೇಕ ಶಾಸನಗಳಲ್ಲಿ ಗಾಣದ ಉಲ್ಲೇಖಗಳಿದ್ದು, ಗಾಣಗಳ ಮೇಲೆ ತೆರಿಗೆ ಹಾಕುವುದು, ಗಾಣದೆರೆ ಎಂದು ಕರೆಯಲಾಗುತ್ತಿತ್ತು. ಎತ್ತುಗಾಣ, ಕೈಗಾಣ, ಮೆಟ್ಟುಗಾಣಮ ಎಂಬ ಮುಂತಾದ ಗಾಣಗಳನ್ನು ಕೆಲಶಾಸನಗಳು ಉಲ್ಲೇಖಿಸುತ್ತವೆ. ಗಾಣದ ಕೈಗಾರಿಕ್ಯೋದ್ಯಮವು ಆ ಕಾಲದಲ್ಲಿ ಜಾರಿಯಲ್ಲಿತ್ತು ಎನ್ನುವು ಸ್ಪಷ್ಟ.

ಇಂಗಳೇಶ್ವರ, ಕುಕನೂರ, ತಿಳವಳ್ಳಿ, ಕೋಲಿಮಿಗುಂಡ್ಲ, ಔರಾದ ಮುಂದಾತ ಸ್ಥಳಗಳಲ್ಲಿ ಗಾಣಗಳಿದ್ದುದನ್ನು ಅಲ್ಲಿನ ಶಾಸನಗಳು ತಿಳಿಸುತ್ತವೆ.

ಕಬ್ಬನ್ನು ಗಾಣಕ್ಕೆ ಕೊಟ್ಟು ಹಾಲನ್ನು ತೆಗೆದು ಬೆಲ್ಲ, ಸಕ್ಕರೆಯನ್ನು ಮಾಡುತ್ತಿದ್ದರು. ನಯಸೇನನ ಧರ್ಮಾಮೃತದಲ್ಲಿಯೂ ಶರ್ಕರೆ (ಸಕ್ಕರೆ) ಉಲ್ಲೇಖವಿದೆ.

ದಿನಿತ್ಯದ ಆಹಾರ ಪದಾರ್ಥಗಳಲ್ಲಿ ಬಳಕೆಗೊಳ್ಳುವ ಇನ್ನೊಂದು ಜೀವನಾಂಶ ವಸ್ತು ಉಪ್ಪು, ಇದನ್ನು ಬಹು ಪ್ರಾಚೀನ ಕಾಲದಿಂದಲೂ ತಯಾರಿಸಲಾಗುತ್ತಿತ್ತು. ಕಲ್ಯಾಣ ಚಾಲುಕ್ಯರ ಶಾಸನಗಳಲ್ಲಿ ಉಪ್ಪಿನ ಉಲ್ಲೇಖಗಳಿವೆ. ಶಾಸನಗಳು ಉಪ್ಪಿನಹೇರು ಎಂಬ ಪದವನ್ನು ಉಲ್ಲೇಖಿಸಿದ್ದು, ಹೇರು=ಭಾರ, ಹೊರೆ ಎಂದಾಗುತ್ತದೆ.

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಜೇಡರ ದಾಸಿಮಯ್ಯನವರ ವಚನಗಳಲ್ಲಿಯೇ ಬಟ್ಟೆ ತಯ್ಯಾರಿಕೆ ಕಾರ್ಯ ಜಾರಿಯಲ್ಲಿತ್ತೆಂದು ತಿಳಿದು ಬರುತ್ತದೆ. ಶಾಸನಗಳು ಬಟ್ಟೆನೇಯುವ ಕಾಕದವರನ್ನು ಜೇಡ, ದೇಡ, ಸಾಲಿಗೆ ಎಂದು ಕರೆದಿವೆ. ಜೇಡರ ದಾಸಿಮಯ್ಯನ ಉಲ್ಲೇಖವಿರುವ ಒಂದು ಶಾಸನ ಎಲ್.ಡಿ ಬಾರ್ನೆಟ್ ಅವರ ಸಂಗ್ರಹದಲ್ಲಿರುವುದಾದರೂ, ಈಗ ಮುದನೂರಿನಲ್ಲಿ ಅದು ಕಾಣಸಿಗುವುದಿಲ್ಲ. ಏನಾಯಿತೋ ತಿಳಿದಿಲ್ಲ. ಅಬ್ಬಲೂರಿನ ಸೋಮೇಶ್ವರ ದೇವಾಲಯದ ಶಿವಶರಣರ ಶಿಲಾಪಟ್ಟಿಕೆಯಲ್ಲಿ ಜೇಡರ ದಾಸಿಮಯ್ಯನವರು ದೇವರಿಗೆ ವಸ್ತ್ರವನ್ನು ಕೊಡುತ್ತಿರುವ ಠಾವು ಕಂಡಿರಸಲಾಗಿದೆ.

ಕರ್ನಾಟಕ ಜನರು ಸೌಂದರ್ಯಪ್ರಿಯರಾಗಿದ್ದು, ವಿವಿಧ ನಮೂನೆಯ ಆಭರಣಗಳನ್ನು ಧರಿಸುತ್ತಿದ್ದರು. ಅರಸು ಮನೆತನದವರು, ಶ್ರೀಮಂತರು, ಸಾಮಾನ್ಯ ವರ್ಗದವರು ಸಹ ಆಭರಣಗಳನ್ನು ಧರಿಸುತ್ತಿದ್ದುದನ್ನು ನಾವು ಶಿಲ್ಪಕಲೆಯಲ್ಲಿ ಕಾಣಬಹುದು. ಶಾಸನಗಳಲ್ಲಿ ಈ ಬಗೆಗಿನ ನೇರ ಪ್ರಸ್ತಾಪಗಳಿಲ್ಲದಿದ್ದರೂ ಸಮಕಾಲಿನ ಮುರ್ತಿಶಿಲ್ಪ, ಕಾವ್ಯ ಕೃತಿಗಳು ಈ ವಿಷಯದ ಮೇಲೆ ಬೆಳಕು ಚೆಲ್ಲುತ್ತವೆ. ಕೈಬಳೆ, ಕಂಕಣ, ಕಟಿಸೂತ್ರ, ರಿಂಗ್, ಮುಕುಟ, ಪದಕ ಮುಂತಾದವುಗಳನ್ನು ಶಿಲ್ಪಗಳಲ್ಲಿ ಕಲ್ಲಿಹಾಳದ ಸದೇಶ್ವರ, ಶಿವಪುರದ ಮಲ್ಲಿಕಾರ್ಜುನ, ಯರಗಲ್ಲದ ಸಿದ್ದೇಶ್ವರ, ಕೆಂಭಾವಿಯ ಮಾಳಿಬೇಶ್ವರ, ಬನ್ನಿಗೋಳದ ಶಿವದೇವಾಲಯ, ಲಕ್ಕುಂಡಿಯ ಕಾಶಿವಿಶ್ವೇಶ್ವರ ದೇವಾಲಯಗಳು ಸೇರಿದಂತೆ ಬೀದರ ಜಿಲ್ಲೆಯ ಜಲಂಸಗ್ವಿ ಗ್ರಾಮದಲ್ಲಿರುವ ಶಿವಾದೇವಾಲಯದಲ್ಲಿರುವ ಶಿಲ್ಪಗಳಲ್ಲಿ ಕಾಣಬಹುದು.

ಕಲ್ಯಾಣ ಚಾಲುಕ್ಯರ ಶಾಸನಗಳು, ಬಡಿಗ, ಕಮ್ಮಾರರನ್ನು, ಕುರಿತು ಉಲ್ಲೇಖಿಸಿವೆ. ಆದರೆ ಕಂಚುಗಾರರ ಉಲ್ಲೇಖ ಶಾಸನಗಳಿಲ್ಲ. ಸಮಕಾಲೀನ ಸಾಹಿತ್ಯ ಧರ್ಮಾಮೃತದಲ್ಲಿ ಕಂಚುಗಾರರ ಹಾಗೂ ಅವರು ತಯಾರಿಸಿ ಮಾರುತ್ತಿದ್ದ ವಸ್ತುಗಳು ತಿಳಿದುಬರುತ್ತವೆ.

ಬಡಿಗರು ಬಂಡಿ, ರಥ, ದೋಣಿ, ಹಡಗು, ವ್ಯವಸಾಯಕ್ಕೆ ಬೇಕಾಗುವ ಉಪಕರಣಗಳು ಮನೆಗಳಿಗೆ ಬೇಕಾಗುವ ಸಾಮಾನುಗಳನ್ನು ತಯಾರಿಸುತ್ತಿದ್ದರು. ದೇವಸ್ಥಾನದ ಮಲಗೆಲಸ ಮತ್ತು ಮುರಿದು ಹೋದ ಭಾಗಗಳನ್ನು ಸರಿಪಡಿಸಲು ಬಡಿಗಿಗಳಿಗೆ ದತ್ತಿಬಿಟ್ಟ ಉಲ್ಲೇಖಗಲಿವೆ. ಇವರು ಶಾಸನಗಳನ್ನು ಕೆತ್ತುತ್ತಿದುದೂ ಉಂಟು.

ಕಮ್ಮಾರರು ಕಬ್ಬಿಣದ ಕೆಲಸವನ್ನು ಮಾಡುತ್ತಿದ್ದರು. ಇವರು ಯುದ್ಧಗಳಲ್ಲಿ ಉಪಯೋಗಿಸುವ ಖಡ್ಗ, ಕತ್ತಿ, ಭರ್ಚಿ, ಗುರಾಣಿ, ಕೊಡಲಿ, ಶಿರಸ್ತ್ರಾಣ ಇನ್ನಿತರ ವಸ್ತುಗಳನ್ನು ತಯ್ಯಾರಿಸುತ್ತಿದ್ದರು. ಜೊತೆಗೆ ದೇವರ ಕೆಲಸಗಳನ್ನು ಮಾಡುತ್ತಿದ್ದು ಚಡಚಣ 1057ರ ಶಾಸನವು ದೇವರ್ಗ್ಗೆ.. ಕೆಲಸ ಮ್ಮಾಡಿದ ಕಮ್ಮಾರ...ಗೆ ಧರ್ಮಶಿವಭಳಾರ್ ಬಿಟ್ಟ ಕೆಯ್ಯ ಮತ್ತರ್... ಎಂದಿದೆ.

ವ್ಯವಸಾಯ ಹಾಗೂ ಕೈಗಾರಿಕೆಗಳು ಉತ್ಪಾದನೆಯ ಉದ್ಯಮಗಳಾದರೆ, ವಾಣಿಜ್ಯ ವ್ಯವಹಾರವಾಗಿರುತ್ತದೆ. ಉತ್ಪಾದನಾ ಸ್ಥಳದಲ್ಲಿ ವಸ್ತುಗಳನ್ನು ಖರೀದಿಸಿ ಅನುತ್ಪಾದಕ ಸ್ಥಳಗಳಿಗೆ ಸಾಗಿಸಿ ಮಾರುವುದೇ ವಾಣಿಜ್ಯ ವ್ಯವಹಾರ. ಇದನ್ನು ದೇಶಿಯ, ಅಂತರ್ದೇಶಿಯವೆಂದು ವಿಂಗಡಿಸಬಹುದು. ದೇಶದ ಒಳಭಾಗದಲ್ಲಿಯೇ ನಡೆಯುವ ವಾಣಿಜ್ಯ ವ್ಯವಹಾರವು ದೇಶಿಯವೆನಿಸಿದರೆ, ಪರದೇಶಗಳೊಡನೆ ಮಾಡುವ ವ್ಯವಹಾರ ಅಂತರ್ದೇಶಿಯವೆನಿಸಿಕೊಳ್ಳುತ್ತದೆ. ಕನ್ನಡಿಗರು ಬಹುಪ್ರಾಚೀನಕಾಲದಿಂದಲೂ ಈ ಎರಡು ಬಗೆಯ ವಾಣಿಯ ವ್ಯವಹಾರಗಳಲ್ಲಿ ತೊಡಗಿದ್ದರೆಂಬ ಅಂಶ ಇತಿಹಾಸದಿಂದ ಖಚಿತವಾಗುತ್ತದೆ.

ಸಾಮಾನ್ಯವಾಗಿ ಆಯಾ ರಾಜ್ಯದ ರಾಜಧಾನಿಗಳು, ಕಂಪಣಗಳ ಮುಖ್ಯಸ್ಥಳಗಳು ಹಾಗೂ ಪಟ್ಟಣಗಳು ವ್ಯಾಪಾರಿ ಕೇಂದ್ರಗಲಾಗಿರುತ್ತಿದ್ದವು. ವ್ಯಾಪಾರ ಪ್ರಸಿದ್ಧಿಯಿಂದ ಕೆಂಭಾವಿ–24, ಸಗರ ಮುಂತಾದವುಗಳು ಪ್ರಸಿದ್ಧ ಪಡೆದಿದ್ದವು.

ಅಂಗಡಿಗಳಲ್ಲಿ ಸೆಟ್ಟಿಕುಳಿತು ವ್ಯಾಪಾರ ಮಾಡುತ್ತಿದ್ದರೆ, ಸಣ್ಣಪುಟ್ಟ ವ್ಯಾಪಾರಿಗಳು ಸರಕನ್ನು ತಮ್ಮ ತಲೆಯ ಮೇಲೆ ಹೊತ್ತುಕೊಂಡು ಹೋಗಿ ಮಾರುತ್ತಿದ್ದರು. ಸಂತೆ–ಪೇಟೆಗಳಿಗೆ ಬರುತ್ತಿದ್ದ ಮತ್ತು ಮಾರಾಟವಾಗುತ್ತಿದ್ದ ವಸ್ತುಗಳಲ್ಲಿ, ಜೋಳ, ಭತ್ತ, ಗೋಧಿ, ದವಸ–ಧಾನ್ಯಗಳು, ಜೀವನಾವಶ್ಯಕ ವಸ್ತುಗಳಾದ ಬೆಲ್ಲ. ಸಕ್ಕರೆ, ಉಪ್ಪು, ಎಲೆ, ಅಡಕೆ, ಬಾಡು, ಕಾಯಿ ಹಣ್ಣು ಹಂಪಲಗಳು, ಮೆಣಸು, ಅರಿಷಿಣ, ಶುಂಠಿ, ಜೀರಿಗೆ, ಅಜವಾನ ಮೋದಲಾದ ಸಾಂಬರ ಪದಾರ್ಥಗಳು.

ಬೀದರ ಜಿಲ್ಲೆಯ ಬಸವಕಲ್ಯಾಣ ವಸ್ತುಸಂಗ್ರಹಾಲಯದ ಗೇಟ್ ಸಮೀಪದಲ್ಲಿರುವ ಕಲ್ಲಿನ ಮೇಲಿನ ಕ್ರಿ.ಶ 1097ರ ಶಾಸನದಲ್ಲಿ ಆರನೇ ವಿಕ್ರಮಾದಿತ್ಯನು ಕಲ್ಯಾಣಪುರದಿಂದ ರಾಜ್ಯಭಾರ ಮಾಡುತ್ತಿದ್ದಾಗ ಅವನ ಮನೆವೆಗ್ಗಡೆ, ದಂಡನಾಯಕನಾದ ಮಹದೇವಭಟ್ಟ ಹಾಗೂ ಇವನ ಹೆಜ್ಜುಂಕದ ಕರಣಗಳು ಸೋಮೇಶ್ವರದೇವರ ದೀಪದ ಎಣ್ಣೆಗೆ ಅಲ್ಲಿನ ಉತ್ಪತ್ತಿಯಲ್ಲಿ ನಿತ್ಯವೂ ಅಕ್ಕಿ, ಧಾನ್ಯ, ಒಂದು ಹೇರನ್ನು ನಡೆಸುವಂತೆ ಸೂಚಿಸಿ, ಇದನ್ನು ಅಲ್ಲಿಯ ಒಡ್ಡೆಯಕಾರರು, ಎತ್ತಿನ (ಹೇರಿನ) ವ್ಯಾಪಾರಿಗಳು, ಕೋಣನ (ಹೇರಿಯ) ಸೆಟ್ಟಿಯರು, ಕತ್ತೆಯ (ಹೇರಿನ) ಸೆಟ್ಟಿಯರು ಸೇರಿ ದೇವರ ನೈವೆದ್ಯಕ್ಕೆಂದು ಹೊನ್ನಿಗೆ ಒಂದು ಮಾನ ಭತ್ತ ಬಿಡುತ್ತಾರೆ. ಅದರಂತೆ ತಂಬುಲಿಗರು ಹೇರಿಗೆ ನೂರು ಎಲೆ, ಹೊನ್ನಿಗೆ ಇಪ್ಪತ್ತಡಕೆಯನ್ನು ಬಿಟ್ಟ ಉಲ್ಲೇಖವಿದೆ.[135] ಹೀಗೆ ಈ ಶಾಸನದಲ್ಲಿ ವ್ಯಾಪಾರಿಗಳ ವ್ಯಾಪಾರ ಹಾಗೂ ವ್ಯಾಪಾರ ಮಾಡುವ ವಸ್ತುಗಳ ಇತಿಹಾಸ ತಿಳಿಯುತ್ತದೆ.

ಗೋರ್ಟಾ ಗ್ರಾಮದ ಹಳಂಬರೆ ಮನೆ ಕೊಟ್ಟಿಗೆಯ ಹಾಸುಗಲ್ಲಿನ ಮೇಲಿರುವ ಕ್ರಿ.ಶ 1128ರ ಶಾಸನದಲ್ಲಿ, ಮಲ್ಲೇಶ್ವರ ದೇವರಿಗೆ ಒಂದು ಮತ್ತು ತೋಟ ಹಾಗೂ ಉಜ್ವಳೆಯ ನಾಯಕನ ವ್ರಿತ್ತಿಗಳನ್ನು ಕೊಂಡುಕೊಂಡು ದೇವರ ಅಂಗಭೋಗ, ನಿವೇದ್ಯ, ದೀವಿಗೆ ಮೂರು ಮತ್ತರು ಬಿಟ್ಟಂತೆ ತಿಳಿಸುತ್ತದೆ. ಈ ಶಾಸನದಲ್ಲಿಯೂ ಸಹ ಬೀದರ ಜಿಲ್ಲೆಯಲ್ಲಿ ಕೇರೆ ಅಥವಾ ಬಾವಿಗಳಿಂದ ನೀರನ್ನು ಉಪಯೋಗಿಸಿದ ತೋಟವನ್ನು ನಿರ್ಮಿಸುತ್ತಿದ್ದರೆನ್ನುವುದು ತಿಳಿದು ಬರುತ್ತದೆ.[136]

ಬೀದರ ಜಿಲ್ಲೆಯ ಬಸವಕಲ್ಯಾಣ ವಸ್ತು ಸಂಗ್ರಹಾಲಯದಲ್ಲಿಯೇ ಏಳನೆ ಕಲ್ಲಿನ ಮೇಲೆ ಇದೇ ವರ್ಷದ ಅಂದರೆ ಕ್ರಿ.ಶ 1142ರ ಶಾಸನದಲ್ಲಿಯೂ ಸಹ ಜಗದೇಕಮಲ್ಲನ ಆಳ್ವಿಕೆಯಲ್ಲಿನ ಅಂತಃಪುರಾಧ್ಯಕ್ಷ, ಕನ್ನಡ ಸಂಧಿವಿಗ್ರಹಿ, ಮನೆವೆರ್ಗ್ಗಡೆ, ದಂಡನಾಯಕ ಮೊದಲಾದ ವಿಶೇಷಣಗಳನ್ನು ಹೊಂದಿದ್ದ ಬಮ್ಮಣಯ್ಯನ ಮಗನಾದ ದಂಡನಾಯಕ ಭೀವರಸನು ಅರಮನೆಯ ದಕ್ಷಿಣಭಾಗದ ಭೀಮೇಶ್ವರದೇವರ ಪೂಜೆಗೆ ಏರ್ಪಾಟು ಮಾಡಿದ್ದನ್ನು ತಿಳಿಸುತ್ತ. ಪಟ್ಟಸೂತ್ರ, ಬೇಳುಮುಡಿ,

ಹುಲಿದೋಗಲು ಕೊಡುಗೆಗೆ 1 ಹಾಗ ಹೊನ್ನು, ಹೊದಿಕೆ 20ರ ಲೆಕ್ಕಕ್ಕೆ ಕೊಡುಗೆಯಾಗಿ 1 ಸೀರೆ, ಮಳಯಖೇಡದ ಮಳವೆಗೆ ಒಂದು ಪಣದ ಲೆಕ್ಕದಲ್ಲಿ ಹೊರಗೆ 1 ಪಾಗ, ಅಡಕೆ ಮೆಳಸು, ಜೀರಿಗೆ, ಸುಂಠಿ, ಪಿಪ್ಪಲಿ, ಸಾಸವಿ, ಸದಹುಗ್ಗಿ, ಕೊತ್ತಂಬರಿ, ಓಮ್, ಯಥಾಏಕ್ಕಿ, ಅರಿಸನ, ಅಣಿಲೆ, ಸೈಂಧವ, ಚಾರುಬೀಜ, ಬೆಲ್ಲ, ಸಕ್ಕರೆ, ಜೇಡು ಇವುಗಳನ್ನು ಗ್ರಂನ್ದಿಗ ದ್ರಬ್ಯವೆಂದು ಕರೆದಿವೆ. ಕುಂಕುಮ, ಶ್ರೀಖಂಡ, ಕರ್ಪೂರ ಕಸ್ತೂರಿ, ಸಣಬಿನ ಬಂಡಿ, ತುಪ್ಪ ಇವುಗಳ ಉಲ್ಲೇಖವು ಬಂದಿದೆ.[137]

ದಾರಿ, ಬೀದಿ, ಬಟ್ಟೆಗಳು ಚಿಕ್ಕವಾಗಿದ್ದರೆ, ಪೇರ್ಬಟ್ಟೆ, ರಾಜಬೀದಿಗಳು ಇಂದಿನ ರಾಷ್ಟ್ರೀಯ ಹೆದ್ದಾರಿಗಳಂತೆ ನೇರ ಮತ್ತು ವಿಶಾಸಲವಾಗಿರುತ್ತಿದ್ದವೆನ್ನಬಹುದು. ಆದರೆ ಪೇರ್ಬಟ್ಟೆ ರಾಜಬೀದಿಗಳ ಉಲ್ಲೇಖ ಕಲ್ಯಾಣ ಚಾಲುಕ್ಯರ ಶಾಸನಗಳಲ್ಲಿಲ್ಲ. ಸಾರಿಗೆಗಾಗಿ ಎತ್ತು, ಕೋಣ, ಕತ್ತೆಗಳನ್ನು ಬಳಸುತ್ತಿದ್ದರು. ತೆಪ್ಪ, ದೋಣಿಗಳ ಸಹಾಯದಿಂದ ನದಿ, ಹಳ್ಳಗಳನ್ನು ದಾಟುತ್ತಿದ್ದು, ಇಂಥ ಮಾರ್ಗಗಳಿಗೆ ಕಡುಹುಗೆಳೆನ್ನುತ್ತಿದ್ದರು.

ವ್ಯಾಪಾರವನ್ನೇ ವೃತ್ತಿಯಾಗಿಸಿಕೊಂಡ ವರ್ತಕರಲ್ಲಿ ವಿವಿಧ ಪಂಗಡಗಳಿದ್ದವು. ಅವರಲ್ಲಿ ಗವರೆಗಳು, ಗಾತ್ರಿಗರು, ಬೀರರು, ಬಿರವಣ, ಸೇಟ್ಟಿಗಳು (ಬಣಂಜು) ವೇಳೆಕಾರರು, ತಂಬುಲಿಗರು, ನಕರರು, ಸಾಲಿಗರು, ಮಾಲಗಾರ, ತೆಲ್ಲಿಗರು, ಪರದರು, ನಾನಾದೇಶಿ ಹಾಗೂ ಅರವತ್ತೊಕ್ಕಲು ಮೊದಲಾದ ವರ್ತಕರು, ವರ್ತಕ ಶ್ರೇಣಿಗಳು ಇದ್ದವು.

ದೇವಸ್ಥಾನದ ನಂದಾದೀಪಕೋ, ವಿದ್ಯಾಭ್ಯಾಸಕ್ಕೋ, ಸತ್ರಕ್ಕೋ, ಕರೆಯದುರಸ್ತಿಗೋ, ಹಣವನ್ನು ಕೊಟ್ಟವನು ತನ್ನ ಹಣದ ಬಡ್ಡಿಯಿಂದ ಅವು ನಡೆಯಬೇಕೆಂದು ಇಚ್ಚಿಸಿ ದತ್ತಿಯನ್ನು ಬಿಟ್ಟುಕೊಡುತ್ತಿದ್ದಿರಬಹುದೆಂದು ಶಾಸನಪಾಠಗಳಿಂದ ತಿಳಿದುಬರುತ್ತದೆ. ಕರ್ಮಡಿ 1059ರ ಶಾಸನವು,. ಕದಿರ್ಮಿಡಿಯ ಗಂಗೇಯಜೀಯರಂ ಅಲ್ಲಿಯ ಇನ್ನೂರ್ವ್ವರು ಮಹಾಜನರಿಗೆ ಅನ್ನಚತ್ರ, ಬಬ್ಬಲೇಶ್ವರದೇವರ ಪೂಜೆ, ಪುನಸ್ಕಾರ, ನೈವೇದ್ಯಕ್ಕೆ ಎಪ್ಪತ್ತು ಲೊಕ್ಕಿ ಪೊಂಗದ್ಯಾಣ ಹಾಗೂ ಎಪ್ಪತ್ತು ಗದ್ಯಾಣಗಳನ್ನು ನೀಡಿ ಆ ಹನದ ಬಡ್ಡಿಯಲ್ಲಿಯೇ ಮೇಲಿನ ಕಾರ್ಯಗಳು ನಡೆಯುವಂತೆ ವ್ಯವಸ್ಥೆಗೊಳಿಸಿದ ಸಂಗತಿಯನ್ನು ತಿಳಿಸುತ್ತದೆ. ಆದರೆ ಬಡ್ಡಿದರ ಏನಿತ್ತೋ ಹೇಗಿತ್ತೋ ಎಂಬುದು ಮಾತ್ರ ಗುರುತಾಗುವುದಿಲ್ಲ.

ನಾಣ್ಯಗಳು :

ನಾಣ್ಯಗಳು ವಸ್ತು ವಿನಿಮಯ ಪದ್ಧತಿ ಎಂದು ಕರೆಯಲಾಗುತ್ತದೆ. ನಾಣುಗಳನ್ನು ಟಂಕಿಸುತ್ತಿದ್ದ ಸ್ಥಳಗಳನ್ನು ಕಮ್ಮಟ ಅಚ್ಚಿನ ಟಂಕಸಾಲೆಗಳೆಂದು ಕರೆಯುತ್ತಿದ್ದರು. ಇತನ ಕಾಲದ ವ್ಯಾಪಾರ ವ್ಯವಹಾರಗಳಲ್ಲಿ ಪೊನ್ನಗದ್ಯಾಣ, ಲೊಕ್ಕಿಪೊನ್‌ಗದ್ಯಾಣ, ಗದ್ಯಣ, ದ್ರಮ್ಮ, ಪಣ, ಪೊಂಗೆಪಣ, ಪಾಗ, ಮತ್ತು ಸುವರ್ಣ ಮುಂತಾದ ನಾಣ್ಯ ವಿಶೇಷಗಳು ಬಳಕೆಯಾಗಿವೆ. ಅಂದು ಬಳಕೆಯಲ್ಲಿದ್ದ ನಾಣ್ಯಗಳ

ಪರಸ್ಪರ ಮೌಲಿಕ ಸಂಬಂಧವನ್ನು ರಾಜಾಧಿತ್ಯ ತನ್ನ ಕೃತಿ ವ್ಯವಹಾರ ಗಣಿತದಲ್ಲಿ ಹೀಗೆ ಹೇಳಿದ್ದಾನೆ.

4 ಕಾಣಿ –1 ವೀಸ

5 ವೀಸ –1 ಹಾ(ಪಾ)ಗ

4 ಹಾಗ –1 ಪಣ

10 ಪಣ –1 ಗದ್ಯಾಣ

ಲೀಲಾವತಿ ಗಣಿತ ಕೃತಿಯಲ್ಲಿ ಇನ್ನೂ ವಿವರವಾಗಿ ನಾಣ್ಯಗಳ ಸಂಬಂಧವನ್ನು ಸ್ಪಷ್ಟಪಡಿಸಲಾಗಿದೆ.

1 ವರಹ	= 2 ಹೊನ್ನ
1 ಹೊನ್ನ	= 5 ಹಣ
1 ಹಣ	= 2ಅಡ್ಡ
1 ಅಡ್ಡ	= 2 ಹಾಗ
1 ಹಾಗ	= 2 ಹೊನ್ನ
1 ಹಾಗ	= 2 ಬೆಳೆ
1 ಬೆಳೆ	= 2 ವೀಸ
1 ವೀಸ	= 2 ಅರ್ಧವೀಸ
1 ಅರೇವೀಸ	= 2 ಕಾಣಿ
1 ಕಾಣಿ	= 4 ಗಿದ್ದಾಣೆ

ಇಲ್ಲಿ ವರಹ ಗದ್ಯಾಣವಾಗಿದ್ದು, ಅದು 2 ಹೊನ್ನಗಳಿಗೆ ಸಮಾನವೆನ್ನುವುದನ್ನು ನೋಡಿದರೆ ಶಾಸನಗಳಲ್ಲಿ ಬರುವ 'ಪೋನ್' ಅರ್ಧ ಗದ್ಯಾಣವೇನ್ನಬೇಕಾಗುತ್ತದೆ. ನಾಣ್ಯಗಳಲ್ಲಿ ಕಡಿಮೆ ಬೆಲೆವುಳ್ಳದ್ದು ಗಿದ್ದಾಣೆ ಎಂಬುದು ಸ್ಪಷ್ಟ. ಅರ್ಧಕಾಣಿಯ ಉಲ್ಲೇಖ ಬಸವಣ್ಣನವರ ವಚನದಲ್ಲಿದೆ. ವರಾಹ ಚಾಲುಕ್ಯರ ರಾಜಲಾಂಛನವಾಗಿದ್ದು, ಅವರು ತಮ್ಮ ನಾಣ್ಯಗಳ ಮೇಲೆ ವರಾಹವನ್ನು ಮುದ್ರಿಸುತ್ತಿದ್ದರು. ಆದ್ದರಿಂದಲೇ ನಾಣ್ಯಗಳನದನು ವರಹಗಳೆಂದು ಕರೆಯುವ ಪದ್ಧತಿ ಬೆಲೆದು ಬಂದಿತು. ಇವು ನಾಡಿನಾದ್ಯಂತ ಬಳಕೆಯಲ್ಲಿ ಬಂದವು. ನಂತರ ವರಹಕ್ಕೆ ಬಂಗಾರದ ನಾಣ್ಯ ಎಂಬ ಅರ್ಥ ಬಂದಿತ್ತು. ಆ ನಾಣ್ಯದ ಮೇಲೆ ವರಾಹ ಲಾಂಛನವಿರದಿದ್ದರೂ ಅದನ್ನು ವರಹ ಎಂದೇ ಕರೆಯುತ್ತಿದ್ದರು. ಸುವರ್ಣ್ಣ ನಾಣ್ಯದ ಉಲ್ಲೇಖ ಕೇವಲ ಒಂದು ಶಾಸನದಲ್ಲಿದ್ದು, ಇದು ಉತ್ತರ ಭಾರತದಲ್ಲಿ

ಮೌರ್ಯರ ಮತ್ತು ಗುಪ್ತರ ಕಾಲದಲ್ಲಿ ಚಲಾವಣೆಯಲ್ಲಿದ್ದ ನಾಣ್ಯದ ಹೆಸರಾಗಿದೆ. ಅದು ಗದ್ಯಣದಷ್ಟೇ ತೂಕ ಮತ್ತು ಮೌಲ್ಯವನ್ನು ಹೊಂದಿತ್ತು. ಆದರೆ ಕರ್ನಾಟಕದಲ್ಲಿ ಅಷ್ಟಾಗಿ ಬಳಕೆಯಲ್ಲಿರಲಿಲ್ಲ. ಆದರೆ ಈತನ ಶಾಸನದಲ್ಲಿ ಕ್ವಚಿತ್ತಾಗಿ ಕಾಣಿಸಿಕೊಂಡಿದೆ.

ಈ ನಾಣ್ಯಗಳಲ್ಲದೆ, ರೋಮನ್ ನಾಣ್ಯದ ದ್ರಮ್ಮ ಹೆಸರು ಒಂದು ಶಾಸನದಲ್ಲಿದೆ. ದ್ರಮ್ಮವು ಬಸವಣ್ಣವರ ಕಾಲಕ್ಕೆ ಖೋಟಾನಾಣ್ಯವೆಂದು ಪರಿಗಣಿತವಾಗಿದ್ದಿತೆಂದು ತೋರುತ್ತದೆ. ವಡ್ಡರಾಧನೆಯಲ್ಲಿ ದ್ರಮ್ಮದ ಜೊತೆಗೆ ದೀನಾರ ಎಂಬ ನಾಣ್ಯದ ಹೆಸರು ಬರುತ್ತದೆ. ಆದರೆ ಶಾಸನಗಳಲ್ಲಿ ಎಲ್ಲಿಯೂ ದೀನಾರದ ಪ್ರಸ್ತಾಪವಿಲ್ಲ. ಭಾಸ್ಕರಚಾರ್ಯನ ಲೀಲಾವತಿಯು ದ್ರಮಕ್ಕೆ 16 ಪಣಗಳನ್ನು ಹೇಳಿದೆ. ಹಾಗಾದರೆ ದ್ರಮ್ಮ ಗಣದ್ಯಾಣಕ್ಕಿಂತ ಬೆಲೆಯುಳ್ಳ ನಾಣ್ಯವಾಗುತ್ತದೆ. ಹಣ ಜನಪ್ರೀಯ ಹಾಗೂ ಹೆಚ್ಚು ಬಳಕೆಯಲ್ಲಿರುವ ಬೆಳಿನಾಣ್ಯವಾಗಿತ್ತು. ಇದು ಗದ್ಯಾಣದ ನಂತರದ ಸ್ಥಾನವನ್ನು ಪಡೆದಿದ್ದು, ಕರ್ನಾಟಕದ ಅನೇಕ ಶಾಸನಗಳಲ್ಲಿ ಉಕ್ತಗೊಂಡಿದೆ.

ಪಾಗವೂ ತಾಮ್ರದ, ಪಣದ ನಂತರದ ಸ್ಥಾನ ಹಾಗೂ ಮೌಲ್ಯವನ್ನು ಹೊಂದಿದ್ದು, ಪಣದ 1/4 ಭಾಗ ಮೌಲ್ಯವನ್ನು ಪಡೆದಿತ್ತು. ಇದು ಪಾಗಕ್ಕೆ ಪರ್ಯಾಯವಗಿದ್ದು, ಬಳ್ಳಾರಿ ಹಾಗೂ ಕರ್ನಾಟಕದ ವಿವಿಧ ಭಾಗಗಳಲ್ಲಿ ಬಳಕೆಯಲ್ಲಿದ್ದಿತ್ತು.

ಲೊಕ್ಕಿ ಪೊಂಗದ್ಯಾಣವು ಲೊಕ್ಕಿಗುಂಡಿಯಲ್ಲಿ ಟಂಕಿಸಿದ ಆ ಕಾಲದ ಜನಪ್ರೀಯ ಗದ್ಯಾಣವಾಗಿದೆ.

ಬಂಗಾರದ ನಾಣ್ಯಗಳೆಂದರೆ, ಡೊಂಕಿವಣ, ಪೊನ್ ಅಥವಾ ಹೊನ್ನು ನಿಷ್ಕ, ಹೊಲೆಹೊನ್ನು, ಹಾಳಿಯ ಹೊನ್ನು. ಮಾಡೈ, ಗದ್ಯಾಣ, ಧರಣಪೋನ್, ಪಕ್ಷಿ ವರಾಹ ಹೊನ್, ಕಳಂಜು, ವರಾಹ, ಪುಷ್ಪ, ದಳ ಮುಂತಾದವುಗಳು.

ಬೆಳ್ಳಿ ಮತ್ತು ಇತರ ನಾಣ್ಯಗಳೆಂದರೆ, ಪಣ, ಪಾಗ, ಬೇಳೆ, ವೀಸ, ಕಾಣಿ, ತಾರ, ಕಾಸು, ಕಾಕಿಣಿ ಮುಂತಾದವುಗಳು ಬೆಳ್ಳಿ ಹಾಗೂ ಇತರ ನಾಣ್ಯಗಳಾಗಿದ್ದವು.

ನಾಣ್ಯಗಳನ್ನು ಮುದ್ರಿಸುವ ವಿಷಯದಲ್ಲಿ ಕಲ್ಯಾಣ ಚಾಲುಕ್ಯರ ಕೆಲವು ಶಾಸನಗಳಲ್ಲಿ ಕಾಣಬಹುದು. ಸರಕಾರವು ನಾಣ್ಯಮುದ್ರಿಸುವ ಹಕ್ಕನ್ನು ಖಾಸಗಿ ಒಡೆತನದವರಿಗೆ ವಹಿಸಿತ್ತಾದರೂ, ಅವುಗಳ ಮೇಲೆ ತನ್ನ ನಿಯಂತ್ರಣವನ್ನು ಹೊಂದಿತ್ತೆಂಬುದಾಗಿ ತಿಳಿದು ಬರುತ್ತದೆ. ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಬಂಗಾರದ ನಾಣ್ಯಗಳನ್ನು ಸಾಗಿಸುವುದು ಅಂದಿನ ದಿನಮಾನಗಳಲ್ಲಿ ಅಷ್ಟೊಂದು ಸರಳವಾಗಿರಲಿಲ್ಲ. ಕಮ್ಮಟಗಳು ತಾವುಗಳಿಸಿದ ಲಾಭದಲ್ಲಿಯ ಸ್ವಲ್ಪಭಾಗವನ್ನು ಸ್ಥಳೀಯ ದೇವಾಲಯಗಳ ದೇವರ ಸೇವೆಗಾಗಿ ನೀಡಬೇಕೆಂಬ ನಿರ್ಬಂಧವಿದ್ದಿತು. ಲೋಹದ ಚೂರುಗಳನ್ನು ನಾಣ್ಯದ ಆಕಾರಕ್ಕೆ ಸಿದ್ಧಪಡಿಸುವ ಸ್ಥಳಕ್ಕೆ ಬಿಡಿಗಮ್ಮಟವೆಂದೂ ಅವುಗಳ ಮೇಲೆ ಮುದ್ರೆಯನ್ನು ಟಂಕಿಸುವ ಸ್ಥಳಕ್ಕೆ ಉಂಡಿಗೆಯ

ಕಮ್ಮಟವೆಂದೂ, ನಾಣ್ಯಗಳನ್ನು ಒಂದೇ ಅಳತೆ, ರೂಪ, ಅಲಂಕಾರಕ್ಕೆ ತರುವವರನ್ನು ಸವಕಟ್ಟುಕಾರ ರೆಂದೂ ಕರೆಯುತ್ತಿದ್ದರು. ನಿರ್ದಿಷ್ಟ ಕಮ್ಮಟಗಳಿಂದ ಮುದ್ರಿಸಲ್ಪಡುವ ನಾಣ್ಯಗಳು ಜನಪ್ರೀಯತೆಯನ್ನು ಪಡೆದಿರುತ್ತಿದ್ದವು.[138]

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಲೊಕ್ಕಿಗುಂಡಿಯಲ್ಲಿ ಒಂದು ಟಂಕಶಾಲೆಯನ್ನು ಸ್ಥಾಪಿಸಲಾಯಿತು. ಟಂಕಿಸಲಾದ ನಾಣ್ಯಗಳನ್ನು ಲೊಕ್ಕಿಗುಂಡಿ ಗದ್ಯಾಣ, ಲೊಕ್ಕಿ ಗದ್ಯಾಣ, ಲೊಕ್ಕಿಪೋನ್, ಲೋಕ್ಕಿ ಅಚ್ಚಿನ ಪೋನ, ಲೊಕ್ಕಿ ಶ್ರಾಹೇಯ ಗದ್ಯಾಣ ಎನ್ನುವ ಹೆಸರುಗಳಿಂದ ಕರೆಯುತ್ತಿದ್ದರು.ಮತ್ತೊಂದು ಶಾಸನದಲ್ಲಿ ಈ ಟಂಕಶಾಲೆಯಲ್ಲಿ ಉಪಯೋಗಿಸಲಾಗುತ್ತಿದ್ದ ಆಣಿ, ಕಾಣಿ, ಅಚ್ಚಿನ ಆಣಿ, ಅಚ್ಚಿನ ಮೊಲೆ ಮುಂತಾದ ಸಾಧನಗಳ ಉಲ್ಲೇಖ ಕಾಣಬಹುರುತ್ತದೆ. ಆರನೆಯ ವಿಕ್ರಮಾದಿತ್ಯನ ಶಾಸನವೊಂದರಲ್ಲಿ ಅಚಿಸೆಟ್ಟಿ ಎಂಬ ಟಂಕಶಾಲಾ ಅಧಿಕಾರಿಯನ್ನು ಹೆಸರಿಸಲಾಗಿದೆ. ಇವನಿಗೆ ಅಣಿಕಾರ ಎಂಬ ಹೆಸರು ಇದ್ದಿತು.

ಕಲ್ಯಾಣ ಚಾಲುಕ್ಯರ ಕಾಲದ ಇನ್ನೊಂದು ಟಂಕಶಾಲೆಯ ನಗರವೆಂದರೆ ನರಗುಂದ, ಚಾಲುಕ್ಯ ದೊರೆ ಮೂರನೆಯ ತೈಲಪನ ಕಾಲದಲ್ಲಿ ನರಗುಂದದಲ್ಲಿ ಟಂಕಶಾಲೆಯ ಕಾರ್ಯನಿರ್ವಹಿಸುತ್ತಿದ್ದಿತು. ಇಲ್ಲಿ ಏಚಿಸೆಟ್ಟಿ ಎಂಬ ಟಂಕಶಾಲಾಧಿಕಾರಿ ಇದ್ದನು. ಇವನು ಸಚ್ಚರಿತ್ರನಾಗಿದ್ದುದು ಮಾತ್ರಲ್ಲದೇ ಲೋಹಶಾಸ್ತ್ರದಲ್ಲಿ ನಿಷ್ಣತನಾಗಿದ್ದನು. ಲೋಹವನ್ನು ಪರೀಕ್ಷಿಸಲು ಬೇಕಾದ ಕುಪ್ಪಟಿಯನ್ನು ಇವನು ಯಾವಾಗಲೂ ತನ್ನ ಹತ್ತಿರ ಇಟ್ಟುಕೊಳ್ಳುತ್ತಿದ್ದನು. ಆದುದರಿಂದ ಇವನು ಕುಪ್ಪಟಿ ಏಚಿಸೆಟ್ಟಿ ಎಂದೇ ಪ್ರಖ್ಯಾತನಾಗಿದ್ದನೆಂದು ಶಾಸನ ತಿಳಿಸುತ್ತದೆ. ಇದೇ ಕಾಲದ ಮತ್ತೊಂದು ಟಂಕಶಾಲಡಯು ಸೂಡಿ ಎಂಬ ನಗರದಲ್ಲಿದ್ದಿತ್ತು. ಆರನೆಯ ವಿಕ್ರಮಾದಿತ್ಯನ ಶಾಸನದ ಪ್ರಕಾರ ಇಲ್ಲಿ ಕಮ್ಮಟೇಶ್ವರ ದೇವಾಲಯವಿದ್ದಿತು. ಇಲ್ಲಿ ಸ್ಥಾಪಿಸಲಾಗಿದ್ದ ಟಂಕಶಾಲಡಗೆ ಟಂಕಾಧಿಕಾರಿ ಉತ್ತವೊಜನು ಮುಖ್ಯಾಧಿಕಾರಿಯಾಗಿದ್ದನು.[139]

ಪ್ರಾಚೀನ ಕಾಲದಿಂದಲೂ ಭೂಮಿಯನ್ನು ಒಂದಿಲ್ಲೊಂದು ಸಾಧನದಿಂದ ಅಳೆಯುವ ಪದ್ಧತಿ ಇದೆಯಾದರೂ, ಅದರಲ್ಲಿ ಕೋಲು ಮುಖ್ಯವಾದುದು. ಕಲ್ಯಾಣ ಚಾಲುಕ್ಯರ ಶಾಸನಗಲ್ಲಿ ಗೇಣು, ಕೋಲು, ಕಯ್ಯಿ, ಗಳೆ, ಗಡಿಂಬದಗಳೆ ಮುಂತಾದ ಬೇರೆ ಬೇರೆ ಪ್ರಮಾಣದ ಹಾಗೂ ಹೆಸರಿನ ಅಳತೆಗೋಲುಗಳಿವೆ.[140]

ಬೀದರ ಜಿಲ್ಲೆಯ ಉಡಮನಳ್ಳಿ ಗ್ರಾಮದಲ್ಲಿ ಪ್ರಭುಶೆಟ್ಟಿ ಪಾಟಿಲ್ ರವರ ಹೊಲದಲ್ಲಿ ನಿಲ್ಲಿಸಿರುವ ಕಂಬದ ಮೇಲಿರುವ ಕ್ರಿ.ಶ 1111ರ ಶಾಸನದಲ್ಲಿ, ಆರನೇ ವಿಕ್ರಮಾದಿತ್ಯನು ಮತ್ತು ಜಾವಳ ಮೋಲಯ್ಯನಾಯಕನನ್ನು ಹೆಸರಿಸಿ, ಪರೆವಿಷ್ಣುಭಟ್ಟನು ಭೂದಾನವನ್ನು 4 ಪಿರಿಯ ಕೋಲ ಮತ್ತ ಮೆರಡುಂವರೆ ಅಂತು ಮತ್ತರಿಪ್ಪ ತೈಯ್ದು 25 ಮಾಘಣಿ ಭೂಮಿ ಮತ್ತರೊನ್ದು 1 ಮಂಗಳ ನೀಡಿರುವುದು ಸ್ಪಷ್ಟವಾಗಿದೆ.[141]

ಬೀದರ ಜಿಲ್ಲೆಯ ಮೈನಳ್ಳಿ ಗ್ರಾಮದ ಹನುಮಂತ ದೇವಾಲಯ

ಸಮೀಪದಲ್ಲಿರುವ ಕಲ್ಲಿನ ಮೇಲಿರುವ ಕ್ರಿ.ಶ 1114ರ ಶಾಸನದಲ್ಲಿ ತ್ರಿಭುವನಮಲ್ಲ ಪಸಾಯಿತನಾದ ಮನ್ನಪುಣ್ಯನಾಯಕನು ಇನ್ನಿತರೊಂದಿಗೆ ಸೇರಿಕೊಂಡು ಹಜ್ಜಾನಿ ವೈಜನಾಥದೇವರ ಕಾಲನ್ನು ತೊಳೆದು ಕೋಲ ಮತ್ತರನ್ನು ಬಿಟ್ಟಿರುವುದು ನಮೂದಿಸಲಾಗಿದೆ.[142]

ಬೀದರ ಜಿಲ್ಲೆಯ ಇಂಚೂರ ಗ್ರಾಮದ ಹನುಮಂತ ದೇವಾಲಯದ ಸಮೀಪದಲ್ಲಿರುವ ಕಲ್ಲಿನ ಮೇಲಿನ ಕ್ರಿ.ಶ 1104ರ ಶಾಸನದಲ್ಲಿ, ಅಟ್ಟಳೆಯ ಗೊಂಕರಸನು, ಧೋರೇಶ್ವರದೇವರ ಸೇವೆಗಾಗಿ ನಾಗಾವೆ 12ರಲ್ಲಿದ್ದ ಯಿಂಚವೂರಿನಲ್ಲಿ 142 ಮತ್ತರು ಭೂಮಿಯನ್ನು ಬಿಟ್ಟಂತೆ ತಿಳಿಯುತ್ತದೆ.[143]

ಬೀದರ ಜಿಲ್ಲೆಯ ರಂಜೋಳಖೇಣಿ ಗ್ರಾಮದಲ್ಲಿರುವ ಶಾಸನದಲ್ಲಿ ಭೈರವದೇವನು ತನ್ನ ತಂದೆಯ ಹೆಸರಿನಲ್ಲಿ ಹೆಮೇಶ್ವರ ದೇವಾಲಯವನ್ನೂ, ತಾಯಿಯ ಹೆಸರಿನಲ್ಲಿ ಮೈಳಲೇಶ್ವರ ದೇವಾಲಯವನ್ನು ಕಟ್ಟಿಸಿ ಭೂದಾವನ್ನು ಬಿಡುತ್ತಾನೆ. ಹಜ್ಜರಿಗೆಯಲ್ಲಿ ಊರ ಪೂರ್ವಕ್ಕೆ ಹೆಮೇಶ್ವರದೇವರಿಗೆ 40 ಮತ್ತರು, ಮೈಳಲೇಶ್ವರ ದೇವರಿಗೆ ಅದರ ಉತ್ತರಕ್ಕೆ ಆರು ಮತ್ತರು. ಹಜ್ಜೇಶ್ವರ ದೇವರಿಗೆಮೇಲೆ ಹೇಳಿದ ಭೂಮಿಯಿಂದ ಉತ್ತರಕ್ಕೆ 15 ಮತ್ತರು, ನಂದಾದೀಪಕ್ಕೆ ಮತ್ತರು 13, ಹೇಮೇಶ್ವರದೇವರ ನೈವೇದ್ಯಕ್ಕೆ ಹುಣಸೆಯ ತೋಟ 1, ತಾಳ್ಗ ತೋಟ 1, ಇದಲ್ಲದೇ ಶ್ರೀ ಖಂಡಕ್ಕೆ ಅಮಾತ್ಯರೆ ನೊದಲಾದವರು ನೀಡಿದ್ದು ಎರಡು ಗದ್ಯಾಣ, ಹಳಖೇಢದಲ್ಲಿ ಮಹಾಜನಗಳು ಕಟೊಟಿದ್ದು ಒಂದು ತೋಟ. ಬಾಚಿಕಬ್ಬೆ ಗಾವುಂಡಿ ನೀಡಿದ್ದು ಒಂದು ತೋಟ. ಹೆಮೇಶ್ವರದೇವರ ಬ್ರಹ್ಮಪುರಿಯ ಬ್ರಾಹ್ಮಣರಿಗೆ ದಕ್ಷಿಣದಲ್ಲಿ ಎಡಪದಲ್ಲಿ 60 ಮತ್ತರು, ಶಾಸನದ ಭಾಸ್ಕರನಿಗೆ 50 ಮತ್ತರು ಭೂದಾ ನೀಡಿದ ಉಲ್ಲೇಕವಿದೆ.[144]

ಬೀದರ ಜಿಲ್ಲೆಯ ಅಣದೂರ ಗ್ರಾಮದ ಹಿರೇಮಠದ ಹಿಂದೆ ನಿಲ್ಲಿಸಿರುವ ಕಲ್ಲಿನ ಮೇಲಿರುವ ಕ್ರಿಶ 1138ರ ಶಾಸನದಲ್ಲಿ ಜಗದೇಕಮಲ್ಲನು ಪಟ್ಟಬಂಧೋತ್ಸವವನ್ನು ಮಾಡಿಸಿಕೊಂಡು ಪ್ರಥಮ ವರ್ಷದಲ್ಲಿ ರಾಜ್ಯವಾಳುತ್ತಿದ್ದಾಗ ಜಗದೇಕಮಲ್ಲನು ಪಟ್ಟ ಕಟ್ಟಿಸಿಕೊಂಡು ಮಹಾಭೈರವ ಮೈಲಾರದೇವನ ಪಾದಗಳನ್ನು ದರ್ಶಿಸಿ ದೇವಾಲಯಕ್ಕೆ ಕಳಸವನ್ನು ಇಡಿಸಿ, ಆ ಸಮಯದಲ್ಲಿ ಅಣಂದೂರು ಶ್ರೀ ನಾಗೇಶ್ವರ ಅಂಗಭೋಗ, ರಂಗಭೋಗ, ನೈವೇದ್ಯಕ್ಕೆ, ಬ್ರಾಹ್ಮಣರಿಗೆ ತಪೋಧನರಿಗೆ ಅನ್ನದಾನಕ್ಕೆಂದು ಮಹಾಪ್ರದಾನನಾದ ಮನೆವೆರ್ಗ್ಗಡೆ ಅಟ್ಟಳೆನಾಡ ಸಾಮಂತ ಬಮ್ಮಣಯ್ಯ ದಂಡನಾಯಕನಿಗೆ ಆ ನಾಡಿನ ಮಂನೆಯನಾದ ಮಂಡಳೇಶ್ವರನಾದ ಬದ್ದರಸನಿಗೆ ರಾಜನು ಆದೇಶಿಸಲು ದತ್ತಿಯನ್ನು ಬಿಟ್ಟನು. ಮುಂದೆ ಬದ್ದರಸನ ವಂಶಾವಳಿಯನ್ನು ಶಾಸನ ನೀಡುತ್ತದೆ. ಕಲಿಗೊಂಕ ಇವನ ಮಗ ಬದ್ದೆಗ. ಇವನ ಮಗ ಮಲ್ಲಿದೇವ.

ಗೋಪದೇವನ ವಂಶಾವಳಿಯನ್ನು ಶಾಸನ ಹೀಗೆ ನೀಡುತ್ತದೆ. ವಿಷ್ಣು–

ಬ್ರಹ್ಮ–ವಸಿಷ್ಠ, ಇವನ ಗೋತ್ರವನ್ನೆ ಪಡೆದ ಬೊಪ್ಪಣಭಟ್ಟ, ಇವನ ಮಗ ಉಪೇಂದ್ರ, ಇವನ ತಮ್ಮ ಪ್ರಭು ಬಮ್ಮದೇವ, ಉಪೇಂದ್ರನ ಮಗ ಮಹೇಶ್ವರ. ಇವನ ಪತ್ನಿ ಚಂಗಣಬ್ಬೆ ಇವನ ಮಗ ಗೋವಿಂದ, ಇವನ ಪತ್ನಿ ಚಾಕಣಬ್ಬೆ, ಇವರ ಮಗ ನಾರಾಯಣದೇವ, ಇವನ ಪತ್ನಿ ಸಿರಿದೇವಿ, ಇವರ ಮಗನೇ ಗೋಪದೇವ ದಂಡಾಧೀಶ. ಇವನಿಗೆ ಗೊವಿಂದ ದಂಡಾಧಿಪ ಎಂಬ ಹೆಸರೂ ಇತ್ತು. ಇವರು ನಾರಾಯಣದೇವರ ಪೂಜೆ, ನೈವೆದ್ಯ ಜೀರ್ಣ್ಣೊದ್ಧಾರಕ್ಕೆಂದು ಊರಿನ ಉತ್ತರಕ್ಕೆ ಗುರುಕುಂಟೆಯ ಸ್ಥಳದಲ್ಲಿ ಕಂಬಟಾಣದ ಗಡಿಂಬದಲ್ಲಿ (ಅಳತೆಕೋಲು) ನಿಗರಂಕೋಲು ಎರಡು ಮತ್ತರು, ಊರಿನ ದಕ್ಷಿಣಕ್ಕೆ ಕೆರೆಯ ಕೆಳಗೆ ಎರಡು ಮತ್ತರು ಗದ್ದೆ, ಊರಿನ ಪುರ್ವಕ್ಕೆ ಮೂರು ಮತ್ತರು. ಬ್ರಾಹ್ಮಣರಿಗೆ ಮತ್ತು ತಪೋಧನರ ಭೋಜನಕ್ಕೆಂದು ಎರಡು ಮತ್ತರು ಬಿಡುತ್ತಾರೆ. ದೇವರಿಗೆ ಊರಿನಲ್ಲಿ ನಿಗರಂ ಕೋಲ ಮೂರು ಮತ್ತರು3, ಪ್ರತ್ಯೇಕವಾಗಿ ದ್ರಮ್ಮ ಒಂದು. ದೇವರ ಮುಂದಿನ ಕೇರಿಯಲ್ಲಿ ಎರಡು ಗಾಣ, ಬ್ರಾಹ್ಮಣವ್ರಿತಿಯಾಗಿ 20 ಮತ್ತರು ಹಾಗೂ ಒಂದು ನಿವೇಶವನವನ್ನು ಬಿಡುತ್ತಾರೆ. ಇದಲ್ಲದೆ ಕರಿದು ಕೋಲ ಮತ್ತರು6, ಗದ್ದೆ ಒಂದು ಮತ್ತರು, ಕದಂಬಕೋಲ ಮತ್ತರು 20, ಬನ್ನಣಿ ಬಸವನಿಗೆ ಕರಿದುಕೋಲಲ್ಲಿ ಆರು ಮತ್ತರು ಮತ್ತು ಗದ್ದೆ 27 ಕಂಬ ಇಟ್ಟಂತೆ ಉಲ್ಲೇಖವಿದೆ.[145]

ಬರೂರ ಗ್ರಾಮದಲ್ಲಿರುವ ಕ್ರಿ.ಶ 1113ರ ಶಾಸನದಲ್ಲಿ, ತ್ರಿಭುವನಮಲ್ಲನು ಕಳಾಸಪುರದ ನೆಲೆವೀಡಿನಲ್ಲಿದ್ದಂತೆ ಶಾಸನದಲ್ಲಿ ಹೇಳಿದೆ. ಬರ ಊರಿನಲ್ಲಿ ಚಂದಗಣಾರ್ಯ ಎಂಬುವವನಿದ್ದ ಇವನ ವಂಶದವನಾದ ಹಾಗೂ ಬರವೂರ ಪ್ರಭುವಾಗಿದ್ದ ಆದಿತ್ಯಭಟ್ಟೋಪಾಧ್ಯಾಯನು ಸೂರ್ಯದೇವರ ದೇವಾಲಯವನ್ನು ಪ್ರತಿಷ್ಠಾಪಿಸಿದ. ಪ್ರತಿಷ್ಠೆ ಮಾಡಿದ ಕಾಲದಲ್ಲಿ ಪಿತಿಯ ಕೋಲಿನಲ್ಲಿ ಮೂರು ಮತ್ತರು ಹೊಲವನ್ನು ಮಾಣಿಕೇಶ್ವರದ ಒಂಬತ್ತು ಕೈಯ ನಿವೇಶನ, ಹೂವಿನ ತೋಟ ಮುಂತಾದವನ್ನು ನೀಡುತ್ತಾನೆ. ಅಲ್ಲಿಯ ವ್ಯಾಪಾರಿಗಳು ದೇವರ ದೀಪ, ನಿವೇದ್ಯಂದು ಕತ್ತೆ, ಕೋಣ, ಬಂಡಿ ಮುಂತಾದವುಗಳಲ್ಲಿ ಬಂದು ಮಾಡಿರ ವಸ್ತುಗಳಿಗೆ ಗದ್ಯಾಣಕ್ಕೆ ಬೆಳ್ಳಿಯ ಹಾಗವನ್ನು ಬಿಟ್ಟ ಉಲ್ಲೇಖವಿದೆ.[146] ಹೀಗೆ ಬೀದರ ಜಿಲ್ಲೆಯ ಬಹಳಷ್ಟು ಶಾಸನಗಳಲ್ಲಿ ಅನೇಕ ಪ್ರಕಾರದ ಅಳತೆ ಮಾಪನಗಳ ವಿವರ ದಾಖಲಾಗಿದೆ.

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ವೃತ್ತಿ ತೇರಿಗೆ, ವ್ಯಾಪಾರ ತೆರಿಗೆ, ಸಾಮಾಜಿಕ, ಕೃಷಿ ತೆರಿಗೆ ಮತ್ತು ಧಾರ್ಮಿಕ ತೆರಿಗೆಗಳು ವಿಧಿಸುತ್ತಿದ್ದರು.

ಇವುಗಳಲ್ಲದೇ ಆಸ್ತಿ ಮೇಲೆ ತೆರಿಗೆ ಸಹ ವಿಧಿಸಲಾಗುತ್ತಿತ್ತು. ಕ್ರಿ.ಶ 1110ರ ಶಾಸನವೊಂದ ಕಟ್ಟಿದ ಹೊಸಮನೆಗೆ ಮೊದಲವರ್ಷ ತೆರಿಗೆಯಿಲ್ಲ, ಎರಡನೆಯ ವರ್ಷದಲ್ಲಿ ಅರ್ಧತೆರಿಗೆ, ಮುರನೆಯ ವರ್ಷಕ್ಕೆ ಹಳೆಯಮನೆಗೆ ವಿಧಿಸುವ ಸಾಮಾನ್ಯ ತೆರಿಗೆಯನ್ನು ಮೂರು ಕಂತುಗಳಲ್ಲಿ ಕೊಡಬೇಕಿತ್ತೆಂದು ತಿಳಿಸುತ್ತದೆ.

ಪ್ರಜೆಗಳು ಅರಸನಿಗೆ ಅನೇಕ ರೀತಿಯ ತೆರಿಗೆ ನೀಡುತ್ತಿದ್ದುದಲ್ಲದೇ ವಿಶೇಷ ಸಂದರ್ಭಗಳಲ್ಲಿ ಕಾಣಿಕಗಳನ್ನು ಅರ್ಪಿಸುವ ಸಂಪ್ರದಾಯವಿತ್ತು. ಶಿಗ್ಗಾಂವ ಕ್ರಿ.ಶ 1055ರ ಶಾಸನದಲ್ಲಿ, ಅಂಗ, ವಂಗವ ಕೊಂಗ, ಕಳಿಂಗ, ದ್ರಾವಿಡ, ಮಲಯ, ಮಾಳವ, ವೆಂಗಿ, ಗಾಂಗೇಯ, ಪಾಂಡ್ಯ, ಅರಸರಿಂದ ಕಪ್ಪ ಕಾಣಿಕೆಯನ್ನು ಪಡೆದ ಸಾಧ್ಯತೆಗಳನ್ನು ತಿಳಿಸುತ್ತದೆ. ಅಲ್ಲದೇ ಸಾಮಂತ ರಾಜರಿಂದಲೂ ಸಹ ಕಪ್ಪ ಕಾಣಿಕೆಯನ್ನು ಪಡೆಯುತ್ತಿದ್ದರೆಂದು ತಿಳಿದು ಬರುತ್ತದೆ. ಅದಲ್ಲದೇ ಯುದ್ಧದಲ್ಲಿ ಕೊಳ್ಳೆ ಹೊಡೆದ ಸಂಪತ್ತು ರಾಜ್ಯದಾಯಕ್ಕೆ ಸೇರುತ್ತಿತ್ತು, ಹೈದ್ರಾಬಾದ ರಾಜ್ಯದ ವಸ್ತು ಸಂಗ್ರಹಾಲಯದಲ್ಲಿರುವ ಕ್ರಿ.ಶ 1047ರ ಅಪ್ರಕಟಿಕ ಶಾನವೊಂದು ಒಂದನೆಯ ಸೋಮೇಶ್ವರ ವೆಂಗಿಯಲ್ಲಿ, ವೆಂಗಿ ಮತ್ತು ಕಳಿಂಗದ ಅರಸರನ್ನು ನುಚ್ಚುನೂರುಗೊಳಿಸಿ ಕಪ್ಪು ಕಾಣಿಕೆಯನ್ನು ಸಂಗ್ರಹಿಸಿದನೆಂಬುದಾಗಿ ತಿಳಿಸುತ್ತದೆ.

ಕಲ್ಯಾಣ ಚಾಲುಕ್ಯರ ಶಾಸನಗಳಲ್ಲಿ ಬೆಳಗೆಯ್ಯಿಂ ಪೊಂಗಣೆಯಂ ಫಲತರುವಿಂದೋಲ್ಪಯಂಗಳಿಂ ಕುಸುಮರಜಾನಿಳನಿಂ ಪಗರೆಯ ಪರಿಯಿಂ ತಳರದ ಸಿರಿ ಬಲ್ಲುಕುಂದೆ (ಇಂದಿನ ಬಲಕುಂದಿ) ನಾಳ್ಕೆಸೆದಿರ್ಕು ಎಂದಿದೆ. ಕೋಲಾರ ಜಿಲ್ಲೆಯ ಹುನಕುಂದ ಬಿಜಾಪುರ ಜಿಲ್ಲೆಯ ಹುನಕುಂದಗಳ ಬಳಿ ಚಿನ್ನದ ಗಣಿಗಳ ಅವಶೇಷಗಳಿವೆ. ಇವುಗಳಿಂದ ಬರುವ ಆದಾಯವು ಸರಕಾರಕ್ಕೆ ಸೇರುತ್ತಿತ್ತು. ಆರಣ್ಯಗಳಲ್ಲಿ ವಿಧವಿಧ ಮರಗಳು ಮತ್ತು ಅದರಿಂದ ಬರುವ ಉತ್ಪನ್ನಗಳ ಆದಾಯವು ಸರಕಾಋದ ಬೊಕ್ಕಸಕ್ಕೆ ಸೇರುತ್ತಿತ್ತು.

ಮನಸೊಲ್ಲಾಸ ಕೃತಿಯಲ್ಲಿಯೂ ಕೂಡ ಭೂಮಿ ವಿಸ್ತಾರಕ್ಕೆ ಅನುಗುಣವಾಗಿ ಧಾನ್ಯರೂಪದ ಕರವನ್ನು ತೆಗೆದುಕೊಳ್ಳಬೇಕು. ಧಾನ್ಯದಲ್ಲಿ 1/6, 108/, 1/2 ಭಾಗ ಕರವನ್ನು ತೆಗೆದುಕೊಳ್ಳಬೇಕು ಎಂದಿದೆ.

ಗಣಿಗಳಿಂದ ರಾಜ್ಯಕ್ಕೆ ತುಂಬಾ ಆದಾಯವು ಬರುತ್ತಿದ್ದಿರಬೇಕು. ಸಮಕಾಲಿನ ಸಾಹಿತ್ಯ ಕೃತಿ ಮಾನಸೊಲ್ಲಾಸವು ರಾಜನು ಚಿನ್ನದ ಗಣಿ, ಬಳ್ಳಿಗಾವೆಯ ವರ್ತಕರು ಇಂದ್ರನೀಲ ಚಂದ್ರಕಾಂತ ಮತ್ತು ಮಾಣಿಕ್ಯ, ವಜ್ರ, ವೈಡೂರ್ಯ, ಗೋಮೇಧಕ, ಪುಷ್ಯರಾಗ, ಪದ್ಮರಾಗ ಮುಂತಾದ ರತ್ನಗಳ ವ್ಯಾಪಾರವನ್ನು ಮಾಡುತ್ತಿದ್ದರೆಂದು ವಿವರಿಸುತ್ತದೆ.

ರಾಜನು ಹಣವನ್ನು ರಾಜ್ಯದ ರಕ್ಷಣೆಗಾಗಿ ಬಳಸುತ್ತಿದ್ದರು. ಕೋಟೆ, ಸೈನ್ಯ, ಆಯುಧ, ಅರಮನೆಗಳು ಮತ್ತು ಸರಕಾರಿ ಆದಿಕಾರಿಗಳಿಗಾಗಿ ಖರ್ಚಾಗುತ್ತಿತ್ತೆಂದು ಕಾಣುತ್ತದೆ. ಇವುಗಳಿಗೆ ಮಿಕ್ಕಿ ಉಳಿದ್ದು, ರಾಜನ ವೈಯಕ್ತಿಕ ಜೀವನಕ್ಕೂ ಹಾಗೂ ಸಾರ್ವಜನಿಕ ಕೆಲಸ ಕಾರ್ಯಗಳಿಗೆ ವಿನಿಯೋಗಿಸಲ್ಪಡುತ್ತಿತ್ತು. ಕೆರೆ, ಬಾವಿಗಳನ್ನು, ತುಬು, ಕಾಲುವೆಗಳನ್ನು, ದೇವಾಲಯಗಳ ನಿರ್ಮಾಣ, ಜಿರ್ಣೋದ್ಧಾರಗಳಿಗಾಗಿ ದಾನ ದತ್ತಿಗಳನ್ನಜ ಬಿಡುವುದಕ್ಕೂ ರಾಜ್ಯದ ಆದಾಯ ಖರ್ಚಾಗುತ್ತಿತ್ತು.[147]

ಅಧ್ಯಾಯ 5

ಶಿಕ್ಷಣ ಮತ್ತು ಸಾಹಿತ್ಯ

ಮನುಷ್ಯನು ತನ್ನ ಬದುಕಿನಲ್ಲಿ ಏನನ್ನಾದರೂ ಸಾಧಿಸಲು ನೆರವಾಗುವುದೇ ವಿದ್ಯೆ. ವಿದೆ ಇಲ್ಲದ ಮನುಷ್ಯನು ಪಶುವಿಗೆ ಸಮಾನನೆಂದು ಪರಿಗಣಿಸಲಾಗುತ್ತಿತ್ತು. ಓದು, ಬರಹ ಕಲಿತರೆ ಮಾತ್ರ ವಿದ್ಯೆಯಲ್ಲ. ಕಲಿತ ಓದು, ಬರಹದಿಂದ ಅತ್ಮೋನ್ನತಿಯನ್ನು ಸಾಧಿಸುವುದೆ ವಿದ್ಯೆ.

ವಿದ್ಯಾಭ್ಯಾಸದ ಮಹತ್ವವನ್ನು 'ನೀತಿಶಕತ'ವು ಈ ಕೆಳಗಿನಂತೆ ಬೋಧಿಸುತ್ತದೆ.

"ವಿದ್ಯಾನಾಂ ನರಸ್ಯರೂಪಮಧಿಕಂ ಪ್ರಚ್ಛನ್ನಗುಪ್ತಂಧನಂ

ವಿದ್ಯಾಭೋಗ ಕರಿ ಯಶಸ್ಸುಖರೀ ವಿದ್ಯಾ ಗುರುನಾಂ ಗುರು,

ವಿದ್ಯಾಬಂಧುಜನೋ ವಿದೇಶಗಮನೇ ವಿದ್ಯಾಪಾರಾದೇವತಾ

ವಿದ್ಯರಾಜಸು ಪೂಜಿತಾ ನತುಧನಂ ವಿದ್ಯಾಹೀನಃ ಪಶುಃ ಎಂದಿದೆ.

ಕ್ರಿ.ಶ ಒಂಭತ್ತನೆಯ ಶತಮಾನದ ಆದಿಯವರೆಗೆ ವ್ಯವಸ್ಥಿತ ವಿದ್ಯಾಕೇಂದ್ರಗಳು ಕಾಣಿಸಿಕೊಂಡಿರಲಿಲ್ಲ. ಬೌದ್ಧ ವಿಹಾರಗಳು ವಿದ್ಯಾಸಂಸ್ಥೆಗಳಾಗಿ ಮಾರ್ಪಾಡು ಹೊಂದಿದ್ದನ್ನು ನೋಡಿ, ಅವುಗಳಿಂದ ಪ್ರೇರಣೆಯನ್ನು ಹೊಂದಿ ಬೇರೆ ಧರ್ಮದವರು ಸಹ ತಮ್ಮ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿರಬಹುದೆಂದು ಡಾ. ಎ.ಎಸ್. ಅಲ್ತೇಕರ್ ಅಭಿಪ್ರಾಯಪಟ್ಟಿದ್ದಾರೆ. ಕನ್ನಡ ಶಾಸನಗಳೂ ಇದನ್ನೇ ಪೋಷಿಸುತ್ತವೆ. ಕರ್ನಾಟಕದಲ್ಲಿ ವ್ಯವಸ್ಥಿತ ವಿದ್ಯಾಸಂಸ್ಥೆಯೆಂದರೆ ದೇವಸ್ಥಾನ, ಲಕುಲಿಶ ಪಾಶುಪತ ಶೈವರು ಕರ್ನಾಟಕಕ್ಕೆ ಯಾವಾಗ ಬಂದರೆಂಬುದು ಗೊತ್ತಿಲ್ಲ. ಆದರೆ ಸ್ಥಾನಾಪತಿಗಳಾಗಿದ್ದ ಅವರಿಂದ ದೇವಸ್ಥಾನಗಳು ವಿದ್ಯಾಕೇಂದ್ರಗಳಾಗಿ ಪರಿಣಮಿಸಿದ್ದು, ಬಹುಶಃ ಎಂಟು ಅಥವಾ ಒಂಭತ್ತನೆಯ ಶತಮಾನದ ನಂತರ. ವಿದ್ಯಾದಾನವು ನಡೆಯುತ್ತಿದ್ದುದು ಮುಖ್ಯವಾಗಿ ನಾಲ್ಕು ಕೇಂದ್ರಗಳಲ್ಲಿ ಅಗ್ರಹಾರ, ದೇವಸ್ಥಾನ ಅಥವಾ ಮಠ, ಬ್ರಹ್ಮಪುರಿ ಮತ್ತು ಘಟಿಕಾಸ್ಥಾನ. ಇವುಗಳಲ್ಲಿ ಬ್ರಹ್ಮಪುರಿಯು ಅಗ್ರಹಾರವನ್ನೇ ಹೋಲುವದಾಗಿದೆ.

ಪ್ರಾಥಮಿಕ ಶಿಕ್ಷಣ :

ಪ್ರಾಚೀನ ಮತ್ತು ಮಧ್ಯಕಾಲಿನ ಕರ್ನಾಟಕದಲ್ಲಿ ದೇವಸ್ಥಾನಗಳು ಶೈವಯತಿಗಳ ವಾಸ್ಥಾನವೂ ಆಗಿರುವುದರ ಜೊತೆಯಲ್ಲಿ ಅವು ವಿದ್ಯಾಕೇಂದ್ರಗಲೂ ಆಗಿದ್ದವು. ಇಲ್ಲಿ ನೆಲೆನಿಂತ ಯತಿಗಳು ಮಹಾನ್ ವಿದ್ವಾಂಸರೂ, ಪಂಡಿತರೂ ಆಗಿದ್ದುದರಿಂದ ವ್ಯಕ್ತಿಗಳ ತಪಃಕರ್ಮಗಳ ಜೊತೆಗೆ ವಿದ್ಯಾದಾನವನ್ನೂ ನೀಡುತ್ತಿದ್ದರು. ಭಕ್ತರು ದೇವಸ್ಥಾನಗಳ ಪೂಜಾದಿಗಳಿಗೆ ದತ್ತಿಗಳನ್ನು ಬಿಟ್ಟುಕೊಡುವಾಗ ದೇವಾಲಯಗಳಿಗೆ ಹೊಂದಿಕೊಂಡಿರುವ ಮಠಗಳಲ್ಲಿಯ ವಿದ್ಯಾಭ್ಯಾಸಕ್ಕಾಗಿಯೂ ದತ್ತಿಗಳನ್ನು ಕೊಡಲು ಪ್ರಾರಂಬಿಸಿದರು. ಹೀಗೆ ದೇವಾಗಾರಗಳೂ ಮಠಗಳು ವಿದ್ಯಾಕೇಂದ್ರಗಳಾಗಿ ಪರಿಣಿಮಿಸಿದವು.

ಒಂದನೆಯ ಸೋಮೇಶ್ವರನ ಶಾಸನಗಳು ಹಲವಾರು ದೇವಾಲಯಗಳಲ್ಲಿ ವ್ಯಾಸಂಗ ನಡೆಯುತ್ತಿದ್ದುರ ಬಗ್ಗೆ ವಿವರಣೆಯನ್ನು ಒದಗಿಸುತ್ತವೆ. ಮೊರಿಗೇರೆಯ ಕ್ರಿ.ಶ 1045ರ ಶಾಸನವು ಶ್ರೀಮದ್‌ದುದಯಾದಿತ್ಯನ ಮಹಾದಂಡನಾಯಕ ತಿಕಣ್ಣ ಪ್ರಮುಖ ಲೆಂಕಸಾಸಿರ್ವರು ಮೋರಿಗೇರಿಯಲ್ಲಿ ಉದಯಾದಿತ್ಯರಿಗೆ ಭಿನ್ನಹ ಮಾಡಿಕೊಂಡು ದೇವರ ಉಪಭೋಗಕ್ಕೆ ಪಾದಮೂಲಪರಿವಾರಕ್ಕೆ ಮಠದ ವಿದ್ಯಾದಾನಕ್ಕೆ ಸವಂಟಿಯಪಾಳ ಎಂಬ ಭೂದತ್ತಿಯನ್ನು ನೀಡಿದ ವಿಷಯವನ್ನು ಪ್ರಸ್ತಾಪಿಸಿದರೆ, ಮೇದೂರು ಕ್ರಿ.ಶ 1046ರ ಶಾಸನವು ದೇವಾಲಯಕ್ಕೆ ಹೊಂದಿಕೊಂಡ ಮಠಕ್ಕೆ ಭೂಮಿದಾನ ಬಿಟ್ಟ ವಿಷಯವನ್ನೂ ಭೂಮಿಯನ್ನು ಕಚ್ಚಚ್ಚಾವಿಯ ಗಡಿಂಬದ ಕೋಲಿನಲ್ಲಿ ಅಳೇದ ವಿಷಯವನ್ನೂ ಪ್ರಸ್ತಾಪಿಸುತ್ತದೆ. ಮತ್ತೊಂದು ಕ್ರಿ.ಶ 1066ರ ಶಾಸನವು ತ್ರೈಲೋಕ್ಯಮಲ್ಲ ನೊಳಂಬಪಲ್ಲವ ಪೆರ್ಮಾಡಿ ಜಯಸಿಂಹದೇವ ತರ್ದ್ವವಾಡಿ ಸಾವಿರವನ್ನು ಆಳುತ್ತಿರುವಾಗ ಎಳಮೇಲದ ಉತ್ತರೇಶ್ವರ ದೇವರ ಮಠದಲ್ಲೋದುವ ಮಕ್ಕಳ ಉಪಭೋಗಕ್ಕೆ ಭೂಮಿದಾನ ನಿಡಿದರೆಂಬ ಸಂಗತಿಯನ್ನು ವಿಷದಪಡಿಸುತ್ತದೆ.

ಕ್ರಿ.ಶ 1059ರ ಶಾಸನವು ವಿಪ್ರನಾರಾಯಣದಲ್ಲಿ ಎಲೆಕಾರರು ಪನ್ನವರ್ಣ್ಣದವರು ಹೇರಿಗೆನೂರು ಎಲೆಯನ್ನು, ಅಂದಳಕ್ಕೆ ಐವತ್ತು ಎಲೆಯನ್ನು ನೈಷ್ಠಿಕ ಸ್ಥಾನವಾಗಿದ್ದ ಮೋರಖಂಡಿಯ ಜಾದಿಮಠಕ್ಕೆ ಶಾಸನ ಬರೆಯಿಸಿ ದಾನಬಿಟ್ಟರೆಂದು ಉಲ್ಲೇಖಿಸಿದರೆ, ಕೆಂಭಾವಿಯ ಕ್ರಿ.ಶ 1054ರ ಶಾಸನವು ಮಹಾಮಂಡಳೇಶ್ವರ ರೇವರಸನ ಹೆಂಡತಿ ಮಾಳಿಯಬ್ಬರಸಿ ಕೆಂಭಾವಿಯಲ್ಲಿ ಮಾಳಿಬೇಶ್ವರ ದೇವಸ್ಥಾನ ನಿರ್ಮಿಸಿ ದೇವರ ಅಂಗಭೋಗ, ರಂಗಭೋಗ, ತಪೋಧನರ ಹಾಗೂ ಮಠದಲ್ಲಿ ಓದುವ ವಿದ್ಯಾರ್ಥಿಗಳ ಆಹಾರದಾನಕ್ಕಾಗಿ ಸಾವಿರ ಮತ್ತರು ಭೂಮಿಯನ್ನು ರಾಜಧಾನಿ ಕೆಂಭಾವಿಯ ಪೂರ್ವಭಾಗದಲ್ಲಿ ಬಿಟ್ಟುದುದನ್ನೂ ಸಗರ–ಮೂನೂರರ ನಗರವುರ ಮತ್ತು ಕೆಂಭಾವಿ–ಇಪ್ಪತ್ನಾಲ್ಕರ್ ಬಳಿಯ ಕರಡಿಕಲ್ಲು, ಕೂಡಲಿಗಳನ್ನು ಮನ್ನೆಯ ಸಾಮ್ಯ ಸಹಿತ ದತ್ತಿಯಾಗಿ ಬಿಟ್ಟುದುದನ್ನು ತಿಳಿಸುತ್ತದೆ.

ಅಗ್ರಹಾರ:

ಅಗ್ರಹಾರ ಎಂಬ ಎರಡು ಪದಗಳ ಸಮಾಸವೆಂದೂ, ಅಗ್ರ ಎಂದರೆ ಶ್ರೇಷ್ಠ 'ಆಹಾರ' ಎಂದರೆ ದೇಶ ಅಥವಾ ಸ್ಥಳ. ಒಟ್ಟಾರೆ ಅಗ್ರಹಾರವೆಂದರೆ ಶ್ರೇಷ್ಠರಿಗೆ ಕೊಟ್ಟ ಸ್ಥಳ ಅಥವಾ ಊರು ಎಂದರ್ಥ. ಇವು ಬ್ರಾಹ್ಮಣರಿಗೆ ದತ್ತಿಯಾಗಿ ಬಿಟ್ಟುಕೊಟ್ಟ ಗ್ರಾಮಗಳು. ಆದರೆ ಇಲ್ಲಿ ಬ್ರಾಹ್ಮಣರೇ ಇರಬೇಕೆಂದೆನಿಲ್ಲ ಬೇರೆ ಜಾತಿಯ ಜನಾಂಗಗಳು ಇರುತ್ತಿದ್ದರು. ಅದರೆ ಊರಿನ ಉತ್ಪತ್ತಿಯೆಲ್ಲವೂ ಬ್ರಾಹ್ಮಣರಿಗೆ ಸಲ್ಲುತ್ತಿತ್ತೆಂದು ಡಾ. ಚಿದಾನಂದಮೂರ್ತಿಯವರು ಅಭಿಪ್ರಾಯಪಟ್ಟಿದ್ದಾರೆ. ಒಂದು ಊರನ್ನು ಅಗ್ರಹಾರವಾಗಿ ಪರಿವರ್ತಿಸಿ ವಿದ್ವಾಂಸರಾದ ಬ್ರಾಹ್ಮಣರು ಒಂದೆಡೆ ನೆಲೆಸುವಂತೆ ಮಾಡುವದರಿಂದ ವಿದ್ಯಾರ್ಜನೆಗೆ ವ್ಯವಸ್ಥೆ ಮಾಡಿದಂತಾಗುವದಲ್ಲದೆ ಪುಣ್ಯ ಲಭಿಸುತ್ತದೆಂಬ ಭಾವನೆ ನಮ್ಮ ಪ್ರಾಚೀನರಲ್ಲಿತ್ತು.

ಅಗ್ರಹಾರದಲ್ಲಿ ವಾಸಿಸುವ ಬ್ರಾಹ್ಮಣವಿದ್ವಾಂಸರು ಅಲ್ಲಿಯ ಮಹಾಜನರು ಎಂದೆನಿಸುತ್ತಿದ್ದರು. ಸಾಸಿರ್ವರು, ವಿಪ್ರರು ಎಂದೂ ಇವರನ್ನು ಶಾಸನಗಳಲ್ಲಿ ಕರೆಯಲಾಗಿದೆ. ಇವುಗಳ ವಿದ್ವಾಂಸರ ನೆಲೆಗಲಾದ್ದರಿಂದ ಮಹಾಜನರು ಆ ಕಾಲದಲ್ಲಿ ಪ್ರಚಲಿತವಿದ್ದ ನಾನಾ ವಿದ್ಯೆಗಳಲ್ಲಿ ಪಾಂಡಿತ್ಯಗಳಿಸಿರುತ್ತಿದ್ದರು.

ಹೊಂಬಳದ ಕ್ರಿ.ಶ 1049ರ ಶಾಸನವೊಂದು ಅಗ್ರಹಾರ ಪೊಂಬುಳ್ವದಲ್ಲಿ ನೂರಾಇಪ್ಪತ್ತುಜನ ಮಹಾಜನಗಳು ಷಟ್ಕರ್ಮನಿರತರೂ, ತಪೋನಿಷ್ಠರೂ ಆಗಿ ಸುಖದಿಂದದ್ದರೆಂದು ತಿಳಿಸುತ್ತದೆ.

ಒಂದನೇಯ ಸೋಮೇಶ್ವರನ ಕಾಲದಲ್ಲಿ 14 ಅಗ್ರಹಾರಗಳಲ್ಲಿ ಕ್ರಿ.ಶ 1042ರ ಬೆಂತುರು ಶಾಸನವು ಈತನ ಕಾಲದ ಅಗ್ರಹಾರವನ್ನು ಉಲ್ಲೇಖಿಸುವ ಪ್ರಥಮ ಶಾಸನವಾಗಿದ್ದರೆ, ಕ್ರಿ.ಶ 1064ರ ಗದಗ ಶಾಸನವು ರಾಮರದತ್ತಿ ಮಹಾಗ್ರಹಾರವನ್ನು ಉಲ್ಲೇಖಿಸುವ ಕೊನೆಯ ದಾಖಲೆಯಾಗಿದೆ.

ಚಾಲುಕ್ಯ ಚಕ್ರವರ್ತಿ ತ್ರೈಲೋಕ್ಯಮಲ್ಲ ಅಹವಮಲ್ಲನ ಹುನಗುಂದ ತಾಲೂಕಿನ ನಂದವಾಡಿಗಿ ಶಾಸನದಲ್ಲಿ ಅಣ್ಣೀಗೇರಿಯಲ್ಲಿ ಬ್ರಹ್ಮಪುರಿಯಿದ್ದ ಬಗ್ಗೆ ಶಾಸನದಲ್ಲಿದೆ. ಅದೇ ಚಕ್ರವರ್ತಿಯ ಕಲಬುರ್ಗಿ ಜಿಲ್ಲೆಯ ನಾಗಾವಿ ಶಾಸನದಲ್ಲಿ ಕ್ರಿ.ಶ 1058ರ ತ್ರೈಪುರುಷಶಾಲೆಯ ಮಾಣಿಯರ್ಗ್ಗೆ, ಶಾಲೆಯಲ್ಲೋದುವ ವಿದ್ಯಾರ್ಥಿಗಳಿಗೆ, ಉಪಾಧ್ಯಯರಿಗೆ ಮತ್ತು ಸರಸ್ವತಿ ಭಂಡಾರಗಳಿಗೆ ಭೂಮಿ ದಾನಕೊಟ್ಟ ಬಗ್ಗೆ ಉಲ್ಲೇಖವಿದೆ. ನಾಗಾವಿಯು ಆಗಿನ ಕಾಲದ ಪ್ರಖ್ಯಾತ ಅಗ್ರಹಾರವಾಗಿತ್ತು.

ಬ್ರಹ್ಮಪುರಿಗಳು:

ನಗರಗಳಲ್ಲಿ ಅಥವಾ ಪಟ್ಟಣಗಳಲ್ಲಿ ಬ್ರಾಹ್ಮಣ ವಿದ್ವಾಂಸರು ವಾಸಿಸುವ ಭಾಗವೇ 'ಬ್ರಹ್ಮಪುರಿ'. ಅಗ್ರಹಾರಗಳು ಊರುಗಳಾದರೆ, ಬ್ರಹ್ಮಪುರಿಗಳು ಪಟ್ಟಣಗಳು. ಅಗ್ರಹಾರಗಳಿಗಿಂತ ಬ್ರಹ್ಮಪುರಿಗಳ ಸಂಖ್ಯೆ ಕಡಿಮೆ. ಆಗ್ರಹಾರಗಳ ಬ್ರಾಹ್ಮಣರು ಆ

ಊರುಗಳ ಒಡೆಯರು ಅಥವಾ ಪ್ರಭುಗಳು. ಆದರೆ ಬ್ರಹ್ಮಪುರಿಗಲಿದ್ದ ಬ್ರಾಹ್ಮಣರು ಆ ಊರಿನ ಇತರ ಪಂಗಡಗಳ ಜನರಿದ್ದಂತೆ ಅಷ್ಟೇ. ಅಗ್ರಹಾರದ ಬ್ರಾಹ್ಮಣರಿಗಿದ್ದ ಅಧಿಕಾರ ಇವರಿಗಿರಲಿಲ್ಲ.

ಕ್ರಿ.ಶ 1044ರ ಸೂವಾರಾಮ್ ಶಾಸನವು ಕಪ್ಪೆಕಲ್ಲು (ಕಪಗಲ್) ಗ್ರಾಮದ ಶ್ರೀಧರಯ್ಯಂಗೆ ಬ್ರಹ್ಮಪುರಿಯ ಭೂಮಿಯನ್ನು ದಾನವಾಗಿ ಬಿಟ್ಟ ವಿಷಯವನ್ನು ತಿಳಿಸುತ್ತದೆ. ಇದರನ್ವಯ ಕಪ್ಪೆಕಲ್ಲು ಒಂದು ಪ್ರಸಿದ್ಧ ಬ್ರಹ್ಮಪುರಿಯಾಗಿತ್ತೆಂದು ಊಹಿಸಬಹುದು. ಅದರಂತೆ ವಿಕ್ರಮಪೂರ ಸಹ ಮಧ್ಯಕಾಲಿನ ಪ್ರಸಿದ್ಧ ಬ್ರಹ್ಮಪೂರಯಾಗಿತ್ತು.

ದೇವಸ್ಥಾನ, ಮಠ, ಅಗ್ರಹಾರ, ಬ್ರಹ್ಮಪುರಿಗಳಂತೆ ಘಟಿಕಾ ಸ್ಥಾನಗಳು ಸಹ ವಿದ್ಯಾಕೇಂದ್ರಗಳಾಗಿದ್ದವು. ಆದರೆ ಇವು ಉನ್ನತ ಶಿಕ್ಷಣದ ಕೇಂದ್ರಗಳು. 'ಘಟಕ' ಎಂದರೆ ವೇಳೆಯ ಒಂದು ನಿರ್ದಿಷ್ಟ ಭಾಗ. ಇದು 20 ನಿಮಿಷಕ್ಕೆ ಸಮನಾಗಿದೆ. ವಾತ್ಸಾಯನನು ತನ್ನ ಕಾಮಸೂತ್ರದಲ್ಲಿ ಘಟಾ ಎಂಬುವದನ್ನು ಧಾರ್ಮಿಕ ಸಮ್ಮೇಳನಕ್ಕೆ ಸಮಾನವಾಗಿ ಉಪಯೋಗಿಸಿದ್ದಾನೆ. ಕರ್ನಾಟಕದ ಪ್ರಪ್ರಥಮ ಘಟಿಕಾಸ್ಥಾನವನ್ನು ಉಲ್ಲೇಖಿಸುವ ಶಾಸನ ಕದಂಬ ಕಾಕುಸ್ಥವರ್ಮನ ತಾಳಗುಂದ ಶಾಸನ. ಇದರಲ್ಲಿ ಮಯೂರವರ್ಮನು ತನ್ನ ಆರಂಭದ ಶಿಕ್ಷಣವನ್ನು ಮುಗಿಸಿಕೊಂಡು ಉನ್ನತ ಶಿಕ್ಷಣಕ್ಕಾಗಿ ಕಂಚಿಯ ಘಟಕಾಸ್ಥಾನವನ್ನು ಪ್ರವೇಶಿಸಿದನೆಂದು ಹೇಳಲಾಗಿದೆ. ಕಂಚಿ ಆಗ ಉನ್ನತ ಶಿಕ್ಷಣದ ಪ್ರಸಿದ್ಧ ಕೇಂದ್ರವಾಗಿತ್ತು.

ಕ್ರಿ.ಶ 1058ರ ಶಾಸನವು ನಾಗಾವಿಯು ಈತನ ಕಾಲದ ಪ್ರಸಿದ್ಧ ಅಗ್ರಹಾರವು, ಘಟಿಕಾಸ್ಥಾನವೂ ಆಗಿದ್ದಿತು ಎಂದು ವಿವರಿಸುತ್ತದೆ. ಇದರ ಪ್ರಕಾರ ನಾಗಾವಿ ಮೊದಲು ಅಗ್ರಹಾರವಾಗಿದ್ದು, ನಂತರ ಘಟಿಕಾಸ್ಥಾನವಾಗಿ ಪ್ರಗತಿಹೊಂದಿರಬಹುದಾದ ಸಾಧ್ಯತೆಗಳನ್ನು ಅಲ್ಲಗಲೆಯಲಾಗದು. ಸಾಮಾನ್ಯವಾಗಿ ಘಟಿಕಾಸ್ಥಾನಗಳು ದೇವಾಲಯಗಳಿಗೆ ಹೊಂದಿಕೊಂಡಿರುತ್ತಿದ್ದವು.

ಪ್ರಸ್ತುತ ಶಾಸನವು ದಂಡನಾಯಕ ಕಾಳಿದಾಸಯ್ಯ ಪರಮೇಶ್ವರ ದತ್ತಿಯಾಗಿ ತಾಮ್ರಶಾಸನ ಬರೆಯಿಸಿಕೊಂಡು ಪಡೆದು ನಾಲ್ಕುನೂರು ಜನ ಚತುರ್ವೆದ ಪಾರಗಮಹಾಜನರಿಗೆ ನಾಗಾವಿಯನ್ನು ಅಗ್ರಹಾರವನ್ನಾಗಿ ಮಾಡಿ ನೀಡಿದನೆಂಬ ಸಂಗತಿಯನ್ನೂ ಕುಂತಳದ ಅರಲು–300ಕ್ಕೆ ತಿಳಕಪ್ರಾಯವಾದ ಮಹಾಗ್ರಹಾರ ನಾಗಾವಿಯನ್ನು ಅರಸ ಹೈಹಯಕುಲದ ಅಯ್ಯರಸ, ಸಂಧಿವಿಗ್ರಹಿ ಮಧುವರಪರಸರು ಸೇರಿ ತ್ರೈಪುರಷ ಶಾಲೆ (ಬ್ರಹ್ಮ, ವಿಷ್ಣು, ಮಹೇಶ್ವರ) ಮಧುಸೂಧನ ಆಲಯ, ರಾಮತೀರ್ಥ ಹೆಸರಿನ ರಾಮೇಶ್ವರ ದೇವಾಲಯ ಘಟಿಕಾಸ್ಥಾನ ಕಟ್ಟಿಸಿದರು. ಅರಸ, ಅಯ್ಯರಸರಿಂದ ಮನ್ನೆಯ ಪಡೆದು ಶಾಲೆಯಲ್ಲಿ ವೇದಧ್ಯಯನಮಾಡುವ 200 ಜನರಿಗೆ, 50 ಶಾಸ್ತ್ರಾಧ್ಯಾಯಿಗಳಿಗೆ, ಮೂರು ಜನ ಭಟ್ಟದರ್ಶನ ನ್ಯಾಸ ಪ್ರಭಾಕರ ವ್ಯಾಖ್ಯಾತೃಗಳಿಗೆ, ವೇದವನೋದಿಸುವ ಮೂರು ಜನರಿಗೆ, ಆರುಜನ

ಶಾಲೆಯ ಸರಸ್ವತಿ ಭಂಡಾರಿಗಳಿಗೆ, 257 ಜನರ ಆಶನ ಅಚ್ಛಾಧನಕ್ಕೆ, ಜೀರ್ಣೊದ್ಧಾರ, ಖಂಡಸ್ಫುಟಿತ ವನಸುಧಾಕರ್ಮಕ್ಕೆ, ಗಂಧಾಕ್ಷತೆ, ಧೂಪ, ದೀಪ, ನೈವೇದ್ಯಕ್ಕೆ ಹಾಗೂ ತ್ರೈಪುರುಷ ಶಾಲೆಯ ಪರಿಷಮಾಣಿಯರಿಗೆ ಸರ್ವ್ವನಮಸ್ಯವಾಗಿ ಸಾವಿರ ಮತ್ತರು ಭೂಮಿ ದಾನ ಮಾಡಿದರೆಂಬ ವಿವರಣೆಯನ್ನು ಒದಗಿಸುತ್ತದೆ.

ಬೀದರ ಜಿಲ್ಲೆಯ ಕೋಟಗ್ಯಾಳ ಗ್ರಾಮದ ಮಾರುತಿ ಗುಡಿಯ ಮುಂಭಾಗದಲ್ಲಿರುವ ಕಲ್ಲಿನ ಮೇಲಿನ ಕ್ರಿ.ಶ 1087ರ ಶಾಸನದಲ್ಲಿ

ಬೀದರ ಜಿಲ್ಲೆಯ ಚಂದಾಪೂರ ಮಹಾದೇವ ಮಂದಿರದ ಮುಂಭಾಗದಲ್ಲಿರುವ ಕಲ್ಲಿನ ಮೇಲಿನ ಕ್ರಿ.ಶ 1112ರ ಶಾಸನದಲ್ಲಿ, ಸೂತುವಿನಿಂದ ಹಿಮಾದ್ರಿಯ ಕೋಡಿನವರೆಗಿನ ರಾಜರನ್ನು ಸೋಲಿಸಿ ವೀರ ಹೆಮ್ಮಾಡಿರಾಯನು ವಿಕ್ರಮನ ರಾಜ್ಯವನ್ನು ನಿಲ್ಲಿಸಿರುವ ವಿಷಯ ಈ ಶಾಸನದಿಂದ ತಿಳಿದು ಬರುತ್ತದೆ. ಅದಲ್ಲದೇ ಚಾಲುಕ್ಯ ತ್ರಿಭುವನಮಲ್ಲನು ಜಯನ್ತಿಪುರದ ನೆಲೆವೀಡಿನಿಂದ ರಾಜ್ಯಭಾರ ಮಾಡುತ್ತಿದ್ದಾಗ ಭೋಗ ದೇವಚಟ್ಟೋಪಾಧ್ಯಾಯನ ಮಗ ಲಕ್ಷ್ಮೀಧರಚಟ್ಟೋಪಾಧ್ಯಾಯನು ತಾನು ಬಲ್ಲವರಸನ ಆಮಾತ್ತನ ಭೂಮಿ ದಾನವಾದ, ಸರ್ವನಮಸ್ಯದ ಅಗ್ರಹಾರವಾದ ಚಂದಾವಾರಿ (ಈಗಿನ ಚಂದಾಪೂರ) ಜಂಜರಾತೀರದಲ್ಲಿ ಭೋಗೇಶ್ವರ ದೇವರನ್ನು ಪ್ರತಿಷ್ಠಾಪನೆ ಮಾಡಿದ್ದು ಇರುತ್ತದೆ. ಹೀಗೆ ಚಂದಾಪೂರವು ಅಗ್ರಹಾರವಾಗಿ ಶಿಕ್ಷಣ ಕೇಂದ್ರವಾಗಿರುವುದನ್ನು ಸ್ಪಷ್ಟವಾಗಿದೆ.[148]

ಬೀದರ ಜಿಲ್ಲೆಯ ಲಂಜವಾಡದಲ್ಲಿರುವ ಹನುಮಂತದೇವರ ಗುಡಿಯ ಮುಂಭಾಗದಲ್ಲಿ ನಿಲ್ಲಿಸಿರುವ ಕಲ್ಲಿನ ಮೇಲಿರುವ ಶಾಸನದಲ್ಲಿ, ಚಾಲುಕ್ಯ ತ್ರೈಲೋಕ್ಯಮಲ್ಲನು ಆಳುತ್ತಿದ್ದಾಗ, ಬೀರಿಗೆ 40ರ ಬಳಿಯ ಲೆಂಜವಾಡವನ್ನು, ಮನ್ನೆಯದ ತೆರಿಗೆಗಳಿಂದ ಮುಕ್ತಗೊಳಿಸಿ ಪ್ರಭು ಚಾವುಂಡಯ್ಯನ ಕಾಲನ್ನು ತೊಳೆದು ಶಾಸ್ವತವಾಗಿರುವಂತೆ ಅಗ್ರಹಾರವನ್ನಾಗಿ ಮಾಡಿಕೊಟ್ಟಿದ್ದು ಈ ಭಾಗದಲ್ಲಿ ಅಗ್ರಹಾರವು ಶಿಕ್ಷಣ ನೀಡುತ್ತಿದ್ದ ಇತಿಹಾಸವನ್ನು ತೋರಿಸುತ್ತದೆ.[149]

ಬೀದರ ಜಿಲ್ಲೆಯ ಗೋರ್ಟಾ ಗ್ರಾಮದ ಹಳಂಬರೆ ಮನೆ ಕೊಟ್ಟಿಗೆಯ ಹಾಸುಗಲ್ಲಿನ ಮೇಲಿರುವ ಕ್ರಿ.ಶ 1128ರ ಶಾಸನದಲ್ಲಿ, ಗೊರಂಟೆಯ (ಗೋರ್ಟಾ) ಮಹಾಜನರ ವರ್ಣನೆ ಬಂದಿದ್ದು, ಈ ಅಗ್ರಹಾರದ ವೈಶ್ಯಕುಲದ ಜನರು ನಗರೇಶ್ವರ ದೇವರಿಗೆ ದಾನ ಬಿಟ್ಟಿರುವ ವಿಷುಯ ತಿಳಿಯುತ್ತದೆ. ಅಂದರೆ ಬೀದರ ಜಿಲ್ಲೆಯಲ್ಲಿ ಗೋರ್ಟಾ ಗ್ರಾಮವು ಆ ಕಾಲದಲ್ಲಿ ಅಗ್ರಹಾರವಾಗಿ ಕಾರ್ಯ ನಿರ್ವಹಿಸುತ್ತ ಶಿಕ್ಷಣ ಕೇಂದ್ರವಾಗಿತ್ತು ಎನ್ನುವ ವಿಷಯ ಈ ಶಾಸನದಿಂದ ತಿಳಿದು ಬರುತ್ತದೆ.[150]

ಬೀದರ ಜಿಲ್ಲೆಯ ಬಸವಕಲ್ಯಾಣ ತಾಲೂಕಿನ ಗೋರ್ಟಾ (ಬಿ) ಗ್ರಾಮದ ಹನುಮಂತ ಗುಡಿಯ ಮುಂಭಾಗದಲ್ಲಿರುವ ಕಲ್ಲಿನ ಮೇಲಿರುವ ಶಾಸನದಲ್ಲಿ, ತ್ರಿಭುವನಮಲ್ಲನು ರಾಜಧಾನಿ ಕಲ್ಯಾಣಪುರದಿಂದ ಆಳುತ್ತಿದ್ದಾಗ ಇವನ ಸದ್ಗುರುವಾಗಿ ರುದ್ರಮಿಶ್ರನಿದ್ದ ಎನ್ನುವ ವಿಷಯವು ಈ ಶಾಸನದಿಂದ ತಿಳಿದು ಬರುತ್ತದೆ. ಇವನು

ಗೋವರ್ಧನ ಭಟ್ಟೋಪಾಧ್ಯಾಯ ಮತ್ತು ಅರಸಿಕಬ್ಬೆಯ ಮಗನಾಗಿದ್ದದ್ದನೆಂದು ತಿಳಿದು ಬರುತ್ತದೆ.

ಮೇಲೆ ಉಲ್ಲೇಖಿಸಿರುವ ಕಾಲದಲ್ಲಿ ತ್ರಿಭುವನಮಲ್ಲನು ಘಟ್ಟದ ಬೋರಿವಳದ ಬೀಡಿನಲ್ಲಿದ್ದು ಹಲವು ಮಹಾಯಜ್ಞಗಳನ್ನು ಮಾಡಿಸಿ ಅದರ ದಕ್ಷಣೆಯಾಗಿ ಮೇಲ್ ಅಟ್ಟಳೆಯ ಕಂಪಣದ ಭಲ್ಲುಂಕೆ 84ರ ಬಳಿಯ ಗ್ರಾಮ ಹುಲಿಚೇರು ಗ್ರಾಮವನ್ನು ಅಗ್ರಹಾರ ಗೋರಂಟೆಯಲ್ಲಿ ಮಾಡಿಸಿದ್ದ ರುದ್ರೇಶ್ವರ ಅಂಗಭೋಗ, ರಂಗಭೋಗ, ಗೀತ, ವಾದ್ಯ, ನೃತ್ಯ, ಪಾದಮೂಲ ಪರಿವಾರ, ತಪೋಧನ, ಉಪಾಧ್ಯಾಯ, ವಿದ್ಯಾರ್ಥಿಗಳ ಊಟ-ಬಟ್ಟೆಗೆ, ಖಂಡಸ್ಫುಟಿತ ಜೀರ್ಣ್ನೋದ್ಧಾರಕ್ಕೆ, ಸತ್ರಕ್ಕೆ, ಘಳಿಗೆಗೆ, ಅಗ್ಗಿಟ್ಟಿಕೆಗೆಂದು ತ್ರಿಭೋಗಾಭ್ಯಂತರವಾಗಿ ನೀಡುತ್ತಾನೆ. ಇದಲ್ಲದೆ ಗೋರಂಟೆಯ ಕೆಲವರು ನಂದಾದೀಪಕ್ಕೆ ಗಾಣದ ಉತ್ಪತ್ತಿಯಲ್ಲಿ ಸೊಲ್ಲಗೆ ಎಣ್ಣೆಯನ್ನು ತೋಂಟವನ್ನು ನೀಡುತ್ತಾರೆ. ಮಲೋಜನಿಗೆ ಒಂದು ತೋಟವನ್ನು ನೀಡುತ್ತಾರೆ. ದೇವರ ಕೆಲಸ ಮಾಡಿದ ಒಡ್ಡ ಕೇತಬೋವನಿಗೆ ಒಂದು ನಿವೇಶವನ್ನು ಕಮ್ಮಠ ಆಚಾರಿಗೆ ಒಂದು ನಿವೇಶವನ್ನು ನೀಡಿದನ್ನು ತಿಳಿಸುತ್ತದೆ.[151]

ಚಿಮಕೋಡ ಬಸವೇಶ್ವರ ದೇವಸ್ಥಾನದ ಗೋಡೆಯ ಕಲ್ಲುತುಂಡಿನ ಮೇಲಿರುವ ಶಾಸನದಲ್ಲಿ, ಸರ್ವನಮಸ್ಯದ ಅಗ್ರಹಾರ ಚಿಲ್ಲರಿಗೆಯ ಅಶೇಷ ಮಹಾಜನರ ಸಮ್ಮುಖದಲ್ಲಿ ಸಾತ ಒಡ್ಡಿಯ ಪ್ರಭು ಸಹದೇವನು ಎರಡು ಮತ್ತರು ಭೂಮಿಯನ್ನು ಕೊಂಡುಕೊಂಡು ಆರ್ಯ ಪ್ರಭುದೇವಭಟ್ಟರಿಗೆ ವೃತ್ತಿಯಾಗಿ ನೀಡಿದಂತೆ ಹೇಳಿದೆ.[152] ಹೀಗೆ ಬೀದರ ಜಿಲ್ಲೆಯಲ್ಲಿಯೂ ಅನೇಕ ಅಗ್ರಹಾರಗಳಿದ್ದು, ಅವು ಶಿಕ್ಷಣ ನೀಡುವ ಕಾರ್ಯ ನಿರ್ವಹಿಸುತ್ತಿದ್ದವು ಎನ್ನುವುದಕ್ಕೆ ಈ ಶಾಸನಗಳು ಸಾಕ್ಷಿಯಾಗಿವೆ.

ಅದರಂತೆ ಮುರನೇಯ ಸೋಮೇಶ್ವರನ ಕಾಲದ ಒಂದು ಶಾಸನದಲ್ಲಿ 'ಶ್ರಿಮದಗ್ರಹಾರ ಪಾವರಿಯ ನಾಲ್ನೂರ್ವ್ವದ್ವಿಜೋತ್ತಮರ' ಎಂಬ ಉಲ್ಲೇಖವಿದೆ. ಇದರಿಂದ ಪಾವರಿಯ ಅಗ್ರಾಹರದಲ್ಲಿ 400 ಜನ ವಿದ್ಯಾರ್ಥಿಗಳು ವ್ಯಾಸಾಂಗ ಮಾಡುತ್ತಿದ್ದರೆಂದು ಹೇಳಬಹುದು.[153]

ಅಲ್ಬೆರೂನಿಯು ಪಾಠಶಾಲೆಗಳಲ್ಲಿ ಕಪ್ಪುಹಲಗೆಯ ಮೇಲೆ ಬಿಳಿ ಬಳಪದಿಂದ ಎಡಗಡೆಯಿಂದ ಬಲಕ್ಕೆ ಮಕ್ಕಳು ಬರೆಯುತ್ತಿರೆಂದು ತಿಳಿಸುತ್ತಾನೆ. ತಾಳಕುಂದ ಶಾಸನದಲ್ಲಿ ಋಗ್ವೇದದ ಮಂತ್ರಗಳನ್ನು ಬಾಲಕರಿಗೆ ಬಾಯಿಪಾಥ ಮಾಡಿಸುತ್ತಿದ್ದ ಉಪಾಧ್ಯಾಯನನ್ನು ಶಾಸನವು ಬಾಲಶಿಕ್ಷೆ ಶಾಸ್ತ್ರದವನೆಂದು ಕರೆದಿದೆ. ಕನ್ನಡಕ್ಷರ ಶಿಕ್ಷೆಗಾಗಿ ಕನ್ನಡದ ಉಪಾಧ್ಯರಿಗೆ ದತ್ತಿ ಬಿಟ್ಟುಕೊಟ್ಟ ಉಲ್ಲೇಖವಿದ. ಅಂದರೆ ಪ್ರಾಥಮಿಕ ಹಂತರದಲ್ಲಿಯೇ ಸಂಸ್ಕೃತ, ಕನ್ನಡ ಮಾಧ್ಯಮದ ಮೂಲಕ ವಿದ್ಯಾಭ್ಯಾಸ ನಡೆಯುತ್ತಿರಬಹುದೆಂದು ಊಹಿಸಬಹುದು.[154]

ನಾಗಾವಿ ಘಟಿಕಾಸ್ಥಾನದಲ್ಲಿ ಎರಡು ರೀತಿಯ ಅಧ್ಯಯನ ವ್ಯವಸ್ಥೆ ಇದ್ದಿತು. 1. ವೇದ ಮತ್ತು 2. ಶಾಸ್ತ್ರ.

ಘಟಿಕಾಸ್ಥಾನದಲ್ಲಿ ವೇದಾಧ್ಯಾಯಗಳ ಸಂಖ್ಯೆ ಎರಡುನೂರು ಮತ್ತು ಶಾಸ್ತ್ರಾರ್ಥಾರಿಗಳ ಸಂಖ್ಯೆ ಐವತ್ತು ಇತ್ತು. ಒಟ್ಟು ಎರಡುನೂರಾ ಐವತ್ತು ಮಂದಿ ವಿದ್ಯಾರ್ಥಿಗಳಿದ್ದರು. ಉಪಾಧ್ಯರು ಆರು ಜನರಿರುತ್ತಿದ್ದರು. ಶಾಸ್ತ್ರಾರ್ಥ್ಯಾಯಿಗಳಾದ ಐವತ್ತು ಜನರಿಗಿದ್ದ ಮೂರು ಜನ ಉಪಾಧ್ಯಯರಲ್ಲಿ ಒಬ್ಬರು ಭಟ್ಟದರ್ಶನವನ್ನೂ, ಒಬ್ಬರು ನ್ಯಾಸವನ್ನೂ, ಒಬ್ಬರು ಪ್ರಭಾಕರವನ್ನೂ ಬೋಧಿಸುತ್ತಿದ್ದರು. ಇವರಲ್ಲದೇ ಒಬ್ಬ ಸರಸ್ವತೀ ಭಣ್ಡಾರಿಗನೂ ಇದ್ದ. ಶಾಲೆಯಲ್ಲಿದ್ದ ಗ್ರಂಥ ಭಂಡಾರವನ್ನು ಶಾಸನವು ಸರಸ್ವತೀ ಭಂಡಾರಿಗರಾರ್ವ್ವಗಂ ಎಂದು ಓದಿದ್ದಾರೆ. ಅಂದರೆ ಉಪಾಧ್ಯರ ಸಂಖ್ಯೆಷ್ಟೆ ಗ್ರಂಥಪಾಲಕರು. ಮುಂದುವರಿದ ಶಾಸನಪಾಠದಲ್ಲಿ ಅನ್ತು 257 ಮಾನಸರ ಎಂದು ದಾನ ಪಡೆದವರ ಒಟ್ಟು ಸಂಖ್ಯೆಯನ್ನು ಸೂಚಿಸಲಾಗಿದೆ. ಘಟಿಕಾ ಸ್ಥಾನಗಳಂತಹ ವಿದ್ಯಾಲಯಗಳಲ್ಲಿ ಘಟಿಕಾಸ್ಥಾನ, ದೇವಾಲಯ, ಮಠ ಈ ಮೂರು ಘಟಿಕಗಳೂ ಸಂಯುಕ್ತವಾಗಿದ್ದು ಘಟಿಕಾಸ್ಥಾನವೇ ಪ್ರತ್ಯೇಕ ಆಡಳಿತಾತ್ಮಕ ವ್ಯವಸ್ಥೆಯನ್ನು ಹೊಂದಿದ್ದರೂ, ಮೂರು ಘಟಕಗಳಿಗೆ ಸೇರಿ ಒಬ್ಬನೇ ಸ್ಥಾನಾಧಿಪತಿಯು ಮುಖ್ಯಸ್ಥನಾಗಿರುತ್ತಿದ್ದರು. ಘಟಿಕಾಸ್ಥಾನವು ಉನ್ನತ ಶಿಕ್ಷಣ ಸಂಸ್ಥೆಯಾಗಿದ್ದರಿಂದ ತನ್ನದೇಯಾದ ಕೆಲವು ವಿಶಿಷ್ಟ ಲಕ್ಷಣಗಳನ್ನು ಒಳಗೊಂಡು ಇತರ ಶಿಕ್ಷಣಸಂಸ್ಥೆಗಳಿಗಿಂತಲೂ ಭಿನ್ನವಾಗಿದ್ದನ್ನು ಕಾಣಬಹುದಾಗಿದೆ.

1. ಉನ್ನತ ಮಟ್ಟದ ವಿದ್ವಾಂಸರು

2. ಅಧಿಕ ಸಂಖ್ಯೆ ವಿದ್ಯಾರ್ತಿಗಳು

3. ವ್ಯವಸ್ಥಿತವಾದ ಗ್ರಂಥಾಲಯಗಳು

4. ನಿರ್ದಿಷ್ಟ ವೇಳಾಪಟ್ಟಿ

5. ಧಾರಾಳವಾದ ದೇವಣಿಗೆ

ಇಂತಹ ವೈಶಿಷ್ಟ್ಯಗಳನ್ನು ಒಳಗೊಂಡಿರುವ ಘಟಿಕಾಸ್ಥಾನವು ಇವರ ಕಾಲದಲ್ಲಿ ಇದ್ದವು ಎನ್ನುವುದಕ್ಕೆ ಶಾಸನಗಳು ಆಧಾರವನ್ನು ಒದಗಿಸುತ್ತವೆ. ಅದಲ್ಲರೂ ಗುಲಬರ್ಗಾ ಜಿಲ್ಲೆಯ ನಾಗಾವಿಯು ಘಟಿಕಾಸ್ಥಾನವು ಇದಕ್ಕೆ ಉತ್ತಮ ಉದಾಹರಣೆಯಾಗಿದೆ.

ವಿದ್ಯಾಕೇಂದ್ರಗಳಾದ ಅಗ್ರಹಾರ, ಬ್ರಹ್ಮಪುರಿ, ಘಟಕಾಸ್ಥಾನಗಳಲ್ಲಿ ವೇದಗಳು, ಶಾಸ್ತ್ರಗಳು, ಇತಿಹಾಸ, ವ್ಯಾಕರಣ, ಕೌಮಾರ, ರೂಪಾವತಾರ, ಪಾಣಿನೀಯ ಅಷ್ಟಾಧ್ಯಾಯಿ ಮುಂತಾದ ವ್ಯಾಕರಣಗಳನ್ನು ಬೋಧಿಸಲಾಗುತ್ತಿತ್ತು. ತರ್ಕ, ಜೋತಿಷ್ಯ, ನಾಟಕ, ಪುರಾಣ, ಕಾವ್ಯ ಅರ್ಥಶಾಸ್ತ್ರ, ಭರತಶಾಸ್ತ್ರ, ವಾತ್ಸಾಯನನ ಕಾಮಸೂತ್ರ, ಹದಿನೆಂಟು ಸ್ಮೃತಿಗಳು, ಹದಿನೆಂಟು ಪುರಾಣಗಳು, ಷಡ್ದರ್ಶನಗಳನ್ನೂ

ಅಭ್ಯಸಿಸಲಾಗುತ್ತಿತ್ತು. ಶೈವರು ಶಿವಾಗಮನಗಳನ್ನು ಅದಲ್ಲೂ ವಿಶೇಷವಾಗಿ ಲಕುಲೀಶನಿಂದ ಉಕ್ತವಾದುದೆಂದು ಹೇಳುವ ಲಾಕುಳಾಗಮನವನ್ನು ಅಭ್ಯಸಿಸುತ್ತಿದ್ದರು. ಇತಿಹಾಸ ಗಣಿತ, ವ್ಯಾಖ್ಯಾನ ಕಲೆಗಳ ಜೊತೆಗೆ ಶಾಸ್ತ್ರಾಸ್ತ್ರ ವಿದ್ಯೆಯನ್ನು ಕಲಿಸಲಾಗುತ್ತಿತ್ತು. ನೀತಿಶಾಸ್ತ್ರಕ್ಕೆ ಹೆಚ್ಚಿನ ಆದ್ಯತೆ ಕೊಡಲಾಗುತ್ತಿತ್ತು. ಪಂಚಾಂಗ, ಧರ್ಮಶಾಸ್ತ್ರ, ಛಂದಸ್ಸು, ಗಾಂಧರ್ವ, ವಿದ್ಯೆ, ಧನುರ್ವಿದ್ಯೆ, ಗಜಶಾಲೆ, ಹಯಶಾಸ್ತ್ರ ಹೀಗೆ ಹತ್ತು ಹಲವು ವಿಷಯಗಳಲ್ಲಿ ವಿದ್ಯಾರ್ಥಿಗಳಿಗೆ ಉತ್ತಮ ಬೋಧನೆಯನ್ನು ಒದಗಿಸಲಾಗುತ್ತಿತ್ತು. ಸ್ತ್ರೀಯರಿಗೆ ಸಂಗೀತ, ನೃತ್ಯ, ವೀಣಾ ವಿದ್ಯೆಗಳನ್ನು ಕಲಿಸಿಕೊಡಲಾಗುತ್ತಿತ್ತು.

ಕಲ್ಯಾಣ ಚಾಲುಕ್ಯರ ಕಾಲದ ಶಾಸನಗಳಲ್ಲಿ ಯುದ್ಧರಂಗದಲ್ಲಿ ಕೆಲಸ ಮಾಡುತ್ತಿದ್ದ ವೈದ್ಯರನ್ನು ಹೆಸರಿಸಿಲ್ಲ. ಆದರೆ ಪಂಪ, ನಯಸೇನರು ತಮ್ಮ ಕೃತಿಗಳಲ್ಲಿ ವೈದ್ಯ ವಿಜ್ಞಾನದ ಬಳಕೆಯ ಬಗೆಗೆ ಹಲವು ವಿವರಗಳನ್ನು ಒದಗಿಸಿದ್ದಾರೆ.

ಕನ್ನಡದ ಆದಿಕವಿ ಪಂಪ ಸೈನಿಕರ ಆನೆಗಳ, ಕುದುರೆಗಳ, ಪುಣ್ಗಳ ನುಡಿಯಲುಂ ಓವಲುಂ ಬಂದ ಮರ್ದ್ದುಬೆಜ್ಜರನ್ನೂ, ಸೈನಿಕರ ಮೈಯಲ್ಲಿ ಉಡಿದ ಬಾಣಗಳನ್ನೂ, ಖಡ್ಗದ ಚೂರುಗಳನ್ನು, ಅಯಸ್ಕಾಂತದೊರಿ ಹೊರತೆಗೆಯುತ್ತಿದ್ದವರನ್ನು ಉಲ್ಲೇಖಿಸಿದ್ದಾನೆ. ಅಗ್ನಿಭೂತಿ, ವಾಯುಭೂತಿ ಸಹೋದರರು ಕಲಿತ ವಿದ್ಯೆಗಳಲ್ಲಿ ಚರಕ, ಆಶ್ವಿನಿಮತ, ಸುಸ್ರುತ ಮೊದಲಾದ ನರವೈದ್ಯರುಗಳಿದ್ದುದ್ದನ್ನು ವಡ್ಡಾರಾಧನೆ ತಿಳಿಸುತ್ತದೆ. ಪುಟ್ಟ ವಿಶ್ವಕೋಶ ದಂತಿರುವ ಎರಡನೆಯ ಚಾವುಂಡರಾಯನ ಲೋಕೋಪಕಾರಂದಲ್ಲಿ ವೃಕ್ಷಾಯುರ್ವೇದ, ನರಾದಿವೈದ್ಯ ಪ್ರಕರಣ, ವಿಷವೈದ್ಯ ಈ ಭಾಗಗಳು ವೈದ್ಯಕ್ಕೆ ಸಂಬಂಧಿಸಿದುವುಗಳಾಗಿವೆ. ಕ್ರಿ.ಶ 1071ರ ಕಾಲದ ಅಮ್ಮೀನಭಾವಿಯ ಶಾಸನವೊಂದು ಬಿಬ್ಬಣ್ಣನೆಂಬುವನನ್ನು ವೈದ್ಯಾಂಬುರಾಶಿ ಕುಳತಿಳಕಂ ಎಂದು ಬಣ್ಣಿಸಿದೆ. ಚಾಲುಕ್ಯವಂಶದ ರಾಜಕುಮಾರ ಕೀರ್ತಿವರ್ಮ, ಗೋವೈದ್ಯ ಗ್ರಂಥ ರಚಿಸಿದ್ದಾನೆ. ನಯುಸೇನ ಸ್ವತಃ ವೈದ್ಯವನ್ನು ಬಲ್ಲವನಾಗಿರಬೇಕು, ಇಲ್ಲವೇ ನೋಡಿ ತಿಳಿದಿರಬೇಕು. ಆದುದರಿಂದಲೇ ಅವನ ಧರ್ಮಾಮೃತದಲ್ಲಿ ವೈದ್ಯಕ್ಕೆ ಮನಸ್ಪತಿಗೆ ಚಿಕಿತ್ಸೆಗೆ ಸಂಬಂಧಿಸಿದ ಹಲವಾರು ವಿಷಯಗಳು ಬರುತ್ತವೆ. ಅದರಂತೆ ಮಂತ್ರವೈದ್ಯ ಮತ್ತು ಶಸ್ತ್ರವೈದ್ಯಗಳೆಂಬ ಎರಡು ರೀತಿಯ ಚಿಕಿತ್ಸಾ ವಿಧಾನಗಳನ್ನು ಬಸವಣ್ಣನವರು ಹೆಸರಿಸಿದ್ದಾರೆ.

ಕ್ರಿ.ಶ 1053ರ ಹೆಬ್ಬೈಲು ಶಾಸನದಲ್ಲಿ ಚಿತ್ತಾರಿ ಕೇತೋಜನ ಮಗಂ ಬಡ್ಡಗಿ ಆಯ್ವೋಜಂ ಈ ಶಾಸನದ ಕಲ್ಲಂ ಗೆಯ್ದಂ ಎಂದು ಹೇಳಿದೆ. ಬಹುಶಃ ಹೊಸ ದೇವಾಲಯಗಳ ನಿರ್ಮಾಣ ಸ್ಥಳಗಳು ಶಿಲ್ಪಿಗಳಿಗೆ, ಬಡಿಗ, ಕಮ್ಮಾರ, ಕಂಚುಗಾರಂತಹ ವೃತ್ತಿ ನಿರತರಿಗೆ ತರಬೇತಿ ಕೇಂದ್ರಗಳಾಗಿರುತ್ತಿದ್ದವು ಎಂದು ಊಹಿಸಬಹುದಾಗಿದೆ.

ಅಧ್ಯಯನ ಮುಗಿದ ನಂತರ ಈಗಿನಂತೆ ವರ್ಷದ ಕೊನೆಯಲ್ಲಿ ಪರೀಕ್ಷೆಗಳು ನಡೆಯಿಸುವ ಸಂಪ್ರದಾಯವು ಆ ಕಾಲದಲ್ಲಿ ಇದ್ದಿದಿಲ್ಲ. ವಿದ್ಯಾರ್ಥಿಯೂ ಹಿಂದಿನ ಪಾಠವನ್ನು ಒಪ್ಪಿಸಿದ ಮೇಲೆ ಮುಂದಿನ ಪಾಠಕ್ಕೆ ಹೊಗುತ್ತಿದ್ದುದರಿಂದ ವಿದ್ಯಾರ್ಥಿಗಳಿಗೆ

ದಿನಿತ್ಯವು ಪರೀಕ್ಷೆಯೇ ಆಗಿರುತ್ತಿತ್ತು. ಪರೀಕ್ಷಕರ ಪ್ರಶ್ನೆಗಳಿಗೆ ವಿದ್ಯಾರ್ಥಿಯೂ ಸಮರ್ಪಕವಾಗಿ ಉತ್ತರಿಸಬೇಕಾಗಿತ್ತು. ಅನಂತರ ಅವನ ಆ ವರೆಗಿನ ವಿದ್ಯಾಭ್ಯಾಸದ ವಿಷಯಗಳಿಗೆ ತಕ್ಕಂತೆ ಕ್ರಮಿತ ಕ್ರಮಬದ್ಧವಾಗಿ ವೇದಾಭ್ಯಾಸ ಮಾಡಿದವನು, ಷಡಂಗಿ ಷಡಂಗಗಳ ಅಭ್ಯಾಸಮಾಡಿದವನು, ದ್ವೇದಿ, ತ್ರಿವೇದಿ, ಚತುರ್ವೇದಿ ಇತ್ಯಾದಿ ಪದವಿಗಳನ್ನು ನೀಡಲಾಗುತ್ತಿತ್ತು. ಇವುಗಳು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲ, ಘಟಿಕಾ ಸ್ಥಾನಗಳಲ್ಲಿ ನಡೆಸಲಾಗುತ್ತಿದ್ದ ಸ್ಪರ್ಧಾತ್ಮಕ ಪರಿಕ್ಷೆಯಲ್ಲಿ ಗೆಲವು ಪಡೆದವನು ಘಟಿಕಾ ಸಾಹಸಿ, ಘಟಿಕಾ ಸಾಹಿಸಯೇ, ಘಳಿಸಾಸಿ, ಘೈಸಾಸಿ ಎಂಬ ಹೆಸರಿನಿಂದಲೂ ಕರೆಯಲಾಗುತ್ತಿತ್ತು.[155]

ಜಿನ ಬಸದಿಗಳ ನಿರ್ವಹಣೆ ಸಾಮಂತರಸರು, ಅವರ ಬಂಧು ಬಳಗದವರು ನಿರ್ವಹಿಸುತ್ತಿದ್ದರು. ಸಾಮಂತ, ಮಾರ್ತಾಂಡನ ತಮ್ಮ ಮುತ್ತಯ್ಯ ಮುಗದ ಗ್ರಾಮದಲ್ಲಿದ್ದ ಸಮಕ್ಯರತ್ನಾಕರ ಬಸದಿಯ ಜೀರ್ಣೋದ್ಧಾರವನ್ನು ಮಾಡಿಸಿ ಅಲ್ಲೊಂದು ನಾಟಕಶಾಲೆ ಕಟ್ಟಿಸಿ ತನ್ನ ಹೆಸರಿನಿಂದ ಕೀರ್ತಿಸ್ತಂಭವನ್ನು ಸ್ಥಾಪಿಸಿದನು.[156]

ಕಲ್ಯಾಣ ಚಾಲುಕ್ಯರ ಭುವನೈಕ ಮಲ್ಲನ ಪ್ರಧಾನಿ ಅಡಪದ ಅಗ್ಗಳಯ್ಯನು ಕ್ರಿ.ಶ 1073–74ರಲ್ಲಿ ಮುಚ್ಚನಾಡ ಪಾಡಿಯಲ್ಲಿ 'ಬುದ್ಧಸೇನ ಜಿನಾಲಯ'ವನ್ನು ಇಕ್ಕೂರಿತಿಯಲ್ಲಿ, 'ವೈದ್ಯರತ್ನಾಕರ ಜಿನಾಲಯ'ವನ್ನು ಕಟ್ಟಿಸಿದನು. ಅಗ್ಗಳಯ್ಯನು ನರವೈದ್ಯ ಹಾಗೂ ಗಾವುಂಡನಾಗಿದ್ದನೆಂದು ಶಿರೂರು ಶಾಸನ ತಿಳಿಸಿದೆ. ಈತನು ಆಯುರ್ವೇದ ಮತ್ತು ಶಸ್ತ್ರಚಿಕಿತ್ಸೆಯಲ್ಲಿ ನಿಪುಣನಾಗಿದ್ದ ಪ್ರಧಾನಿ ಅಡಪದ ಅಗ್ಗಳಯ್ಯನಿಗೆ ಚಾಲುಕ್ಯ ಸಾಮ್ರಾಟ ಜಯಸಿಂಹದೇವನು ತನ್ನ ಪೊಟ್ಟಲಕೆರೆ ನೆಲೆವೀಡಿನಿಂದ ಮಹಾಸಾಮಂತ ಪ್ರತಿಪತ್ತಿಯನ್ನು ಕ್ರಿ.ಶ 1034ರಲ್ಲಿ ನೀಡಿ ಮನ್ನಣೆ ತೋರಿದನು.[157]

ಸಾಹಿತ್ಯ:

ಬಾದಾಮಿ ಚಾಲುಕ್ಯರ ಕಾಲಘಟ್ಟದಿಂದ ಪ್ರಾರಂಭವಾದ ಸಾಹಿತ್ಯವು ಕಲ್ಯಾಣ ಚಾಲುಕ್ಯರ ಕಾಲಾವಧಿಯ ಶ್ರೀಮಂತಿಕೆಯ ಶೀಖರಕ್ಕೇರಿತ್ತು ಎಂದರೆ ತಪ್ಪಾಗಲಾರದು. ಕಲ್ಯಾಣ ಚಾಲುಕ್ಯರ ಕಾಲಘಟ್ಟದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಅಘಾದ ಸಾಧನೆಯನ್ನು ಮಾಡಿರುವ ಸಾಹಿತಿಗಳು, ಸಾಹಿತ್ಯದ ಅನೇಕ ಪ್ರಕಾರದ ಪ್ರಥಮ ಕೃತಿಗಳು ಇವರ ಕಾಲಘಟ್ಟದಲ್ಲಿ ಬರೆಯಲ್ಪಟ್ಟಿರುವುದನ್ನು ಕಾಣಬಹುದು. ಬಾದಾಮಿ ಚಾಲುಕ್ಯರ ಪುಲಿಕೇಶಿಯ ಮಗ ಚಂದ್ರಾದಿತ್ಯನ ಮಗಡದಿ ವಿಜಯಭಟ್ಟಾರಿಕೆ ಕರ್ನಾಟಕದ ಪ್ರಥಮ ಕವಯತ್ರಿಯಾಗಿ ಗೋಚರಿಸುತ್ತಾಳೆ. ಇವರು ರಚಿಸಿರಬಹುದಾದ ಅನುಪಲಬ್ಧ ಕೌಮುದಿಮಹೋತ್ಸವವೆಂಬ ನಾಟಕ ಸಂಸ್ಕೃತ ಭಾಷೆಯಲ್ಲಿದ್ದುದಾಗಿ ತಿಳಿದು ಬರುತ್ತದೆ.[158]

ಶಾಸನಗಳು ನಡೆದ ಸಂಗತಿಯನ್ನು ಯಥಾವತ್ತಾಗಿ ನಿರೂಪಿಸುವುದರಿಂದ ಅವುಗಳ ವಸ್ತು ಬಹುಮಟ್ಟಿಗೆ ಸೀಮಿತವಾಗಿರುತ್ತವೆ. ಶಾಸನಗಳಲ್ಲಿ ದಾನಶಾಸನಗಳ

ಸಂಖ್ಯೆಯೆ ಹೆಚ್ಚಿರುವುದರಿಂದ ಇಲ್ಲಿ ವಿಷಯ ವೈವಿದ್ಯತೆಯ ಕೊರತೆಯನ್ನು ಕಾಣಬಹುದು. ಈ ಕೊತೆಯ ಮಧ್ಯದಲ್ಲಿಯೂಕೆಲವು ಜನ ಶಾಸನ ಕವಿಗಳು ತಮ್ಮ ಪ್ರತಿಭೆ ಪಾಂಡಿತ್ಯ ಮೆರೆದಿದ್ದಾರೆ. ಪ್ರಾರಂಭದ ದಾನ ಶಾಸನಗಳು ರಾಜನ ಆಳ್ವಿಕೆ, ದಾನ ಕೊಟ್ಟವರ ಹೆಸರು, ದಾನದ ವಿಷಯಗಳನ್ನು ಮಾತ್ರ ಒಳಗೊಂಡಿರುತ್ತಿದ್ದವು. ಕ್ರಮೇಣ ಆಳುವ ಅರಸರ, ದಾನಕೊಟ್ಟವರ, ಸ್ವೀಕರಿಸಿದವರ ಮತ್ತು ಅರ ಪ್ರದೇಶಗಳ ವರ್ಣನೆಯಿಂದ ಶಾಸನಗಳ ಹರವು ವಿಸ್ತಾರವಾಯಿತು. ಆಗ ಶಾಸನಗಳು ಸಿದ್ಧ ಚಂಪೂಕಾವ್ಯ ಶೈಲಿಯಲ್ಲಿ ಅಳವಡಿಸಿಕೊಂಡವು.

ದಾನ ಶಾಸನಗಳೆ ಹೆಚ್ಚಿರುವ ಈತನ ಶಾಸನಗಳಲ್ಲಿ ಕನ್ನಡ ಭಾಷೆಗೆ ಪ್ರಮುಖ ಸ್ಥಾನ ಸಂಸ್ಕೃತ ಭಾಷೆಗೆ ಎರಡನೆಯ ಸ್ಥಾನ ದಕ್ಕಿದೆ. ಸಾಹಿತ್ಯದ ದೃಷ್ಟಿಯಿಂದಲೂ ಇವರ ಶಾಸನಗಳು ಗಮನಾರ್ಹವಾಗಿವೆ.

ಇವರ ಕಾಲಾವಧಿಯ ಮುಗದ, ಮೋರಿಗೇರಿ, ಸಾನಿಗರಂ, ಹೆಬ್ಬೈಲು ಕೆಂಭಾವಿ, ಬೋಧನ, ಕೊಟ್ಟಪಳ್ಳಿ, ಹಿರೇಹಡಗಲಿ, ನಾಗಾವಿ ಮತ್ತು ಸಂಗಮ ಶಾಸನಗಳು ಸಾಕಷ್ಟು ದೀರ್ಘವಾಗಿದ್ದು, ಸೊಗಸಾದ ವರ್ಣನೆಗಳಿಂದ ಕೂಡಿವೆ. ಬೀದರ ಜಿಲ್ಲೆಯ ರಂಜೋಳಖೇಣಿಯಲ್ಲಿ ದೊರೆತ್ತಿರುವ ಶಾಸನಗಳಲ್ಲಿ ಎರಡು ಶಾಸನಗಳು ಸುದೀರ್ಘ ಇತಿಹಾಸವನ್ನು ಹೇಳುವ ಶಾಸನಗಳಾಗಿವೆ. ಈ ಶಾಸನಗಳಲ್ಲಿ ಕಲ್ಯಾಣ ಚಾಲುಕ್ಯರ ಮೂಲ ದೊರೆಯಿಂದ ಹಿಡಿದು ಮಹಾಮಾಂಡಳೇಶ್ವರ ರಾಜನ ಪರಿಚಯದೊಂದಿಗೆ ಆ ಪ್ರದೇಶವನ್ನು ಸೊಗಸಾಗಿ ವರ್ಣಿಸಲಾಗಿದೆ.

ಶಾಸನ ಕವಿಗಳು:

ಕೆಲವೊಂದು ಶಾಸನಗಳಲ್ಲಿ ಶಾಸನ ಕವಿಗಳು ತಮ್ಮ ಹೆಸರುಗಳು ಹೇಳಿಕೊಂಡಿದ್ದಾರೆ. ಮೋರಿಗೇರೆಯ ಕ್ರಿ.ಶ 1045ರ ಶಾಸನದಲ್ಲಿ ಬೇಸುನುಮಂ ನಡೆಯಿಸುವ ರೂವಾರಿ ಮುಉಚ್ಚೊಜಂಗೆ ಮತ್ತರ್ಪ್ಪನ್ನೆರಡು ನೆಟ್ಟವಂಗೆ ಮತ್ತರ್ಪ್ಪನ್ನೆರಡು ಎಂಬ ಉಲ್ಲೇಖ ಹೊಂದಿದ್ದು, ಈ ಶಾಸನವನ್ನು ಬರೆದವರು ನಾಗಮಯ್ಯನು. ಅದನ್ನು ಕಂಡರಿಸಿದನು ಅಗ್ಗಳೋಜನ ಮಗ ಮುಚ್ಚೋಜ ಎಂಬುದು ಸ್ಪಷ್ಟ. 68 ಸಾಲುಗಳಲ್ಲಿರುವ ಈ ದೀರ್ಘವಾದ ಶಾಸನವೂ ವೃತ್ತ, ಕಂದಪದ್ಯ, ಗದ್ಯದಿಂದ ಕೂಡಿದ್ದು, ಹಳೆಗನ್ನಡದ ಜೊತೆಗೆ ಸ್ವಲ್ಪ ಸಂಸ್ಕೃತ ಮಿಶ್ರಿತಭಾಷೆಯಲ್ಲಿ ರಚಿಸಲ್ಪಟ್ಟಿದೆ. ಲಿಪಿಮಾತ್ರ ಹಳೆಗನ್ನಡದಲ್ಲಿದೆ. ಹೀಗೆ ನಾಗಮ್ಮ, ಚವಯ್ಯ, ಮಹಾದೇವಯ್ಯ, ನಿನಮರ್ಮಪಂಡಿತ, ನಾಗವಮಯ್ಯ,ದೇಮರಸ, ಮಲ್ಲ, ವಿಷ್ಣಯ್ಯ, ಧರ್ಮೋಜ, ಜಕ್ಕಣ್ಣಮಯ್ಯ, ಗೊವಿಂದ, ಚಾವುಂಡರಾಯ, ಚಂಗದೇವಯ್ಯ, ಸೋಮನಾಥ, ವಾವಣಯ್ಯ, ಬ್ರಹ್ಮೇಶ್ವರಜೀಯರ್, ಕೇತಿಸೆಟ್ಟಿ, ಮಾಧವಯ್ಯ, ಬರ್ಮ್ಮದೇವ, ಬಸವಣಯ್ಯಂ, ವಿಷ್ಣು, ವಿದ್ಯಾಧರಂ, ಭಟ್ಟೋಪಾಧ್ಯಯ, ಕೊಮ್ಮೋಜ, ಕೇಶವರಾಜ, ಭಾಸ್ಕರ್, ಸುಬ್ಬ, ನಯಸೇನರು.

ಬೀದರ ಜಿಲ್ಲೆಯವರು ಚಾಲುಕ್ಯರ ಕಾಲದ ಕೆಲವು ಶಾಸನಗಳ ಕಾವ್ಯತ್ಮಕವಾಗಿ

ಮತ್ತು ಚಂಪು ಶೈಲಿಯಲ್ಲಿ ಬರೆದಿದ್ದು ಕಂಡು ಬರುತ್ತವೆ. ಅಂತಹ ಕೆಲವೊಂದು ಮಹತ್ವದ ಶಾಸನಗಳಲ್ಲಿರುವ ವಿಯವನ್ನು ತಿಳಿದುಕೊಳ್ಳೋಣ.

ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಅಳವಾಯಿ ಗ್ರಾಮದ ಕ್ರಿ.ಶ 1077ರ ಶಾಸನದಲ್ಲಿ, ಚಾಲುಕ್ಯ ಆರನೇ ವಿಕ್ರಮಾದಿತ್ಯನು ಆಳುತ್ತಿದ್ದನೆಂದು, ಆವನ ಆಡಳಿತದಲ್ಲಿ ಮನ್ನೆಯ ಎಡೆಯರಸನು ತೂವಗಾವೆಯಲ್ಲಿ ತಮ್ಮ ಒಡೆತನದ ಕಮ್ಮತದಲ್ಲಿ ನಲವತ್ತು ಮತ್ತರು ಭೂಮಿಯನ್ನು ಮರಿಕಲ್ಲ ಕಮಳಸಿರಿ ಕಂತಿಯರಿಗೆ ಪಾದ ತೊಳೆದು ದಾನ ಮಾಡಿದನೆಂದು ಶಾಸನ ತಿಳಿಸಿ, ಈ ಶಾಸನವು ಅಟ್ಟಳೆಯ ಅಗ್ಗಳಯ್ಯನು ಬರೆದಿರುತ್ತಾನೆಂದು ಕವಿಯ ಪರಿಚಯದೊಂದಿಗೆ ಭಮೋಜ ಎನ್ನುವವನು ಕೆತ್ತಿದ್ದಾನೆಂದು ತಿಳಿದು ಬರುತ್ತದೆ. ಹೀಗೆ ಒಂದೇ ಶಾಸನದಲ್ಲಿ ಶಾಸನ ಬರೆದವರ ಹೆಸರು ಮತ್ತು ಶಾಸನ ಕೆತ್ತಿದವರ ಹೆಸರು ದಾಖಲಿಸಿರುವ ಕಲ್ಯಾಣ ಚಾಲುಕ್ಯರ ಕೆಲವೇ ಕೆಲವು ಶಾಸನಗಳಲ್ಲಿ ಬೀದರ ಜಿಲ್ಲೆಯ ಅಳವಾಯಿ ಗ್ರಾಮದಲ್ಲಿರುವ ಈ ಶಾಸನವು ಒಂದಾಗಿದೆ.[159]

ಬಸವಕಲ್ಯಾಣ ಮೂಸಿಯಂನಲ್ಲಿರುವ ಶಾಸನವೊಂದು ಕ್ರಿ.ಶ 1100ಕ್ಕೆ ಸೇರಿದ್ದರ ಶಾಸನದಲ್ಲಿ, ಕಲ್ಯಾಣದಲ್ಲಿ ಮುಂಚೆ ಹಲವಾರು ಜಿನಾಲಯಗಳನ್ನು ನಿರ್ಮಿಸಿದ್ದರು. ಕಾಲಾಂತರದಲ್ಲಿ ಅವುಗಳು ಶಿಥಿಲಗೊಂಡು, ದಾನಚಿಂತಾಮಣಿಯು (ಅತ್ತಿಮಬ್ಬೆ) ಅವುಗಳನ್ನು ಜೀರ್ಣೋದ್ಧಾರ ಮಾಡಿಸಿದಳೆಂದು ತಿಳಿಸುವುದಲ್ಲದೇ ಈ ಶಾಸನದಲ್ಲಿ ಈಶರಾಂಕ, ಪೆರ್ಮಾಡಿ, ರಚ್ಚಮಲ್ಲ, ರವಿಯಣ, ಮುಂತಾದವರ ಹೊಗಳಿಕೆಯ ಪದ್ಯಗಳಿವೆ. ಈ ಶಾಸನದ ಕೆಲವು ಭಾಗ ಕಾವ್ಯತ್ಮಕವಾಗಿದೆ. ಉದಾಃ; ಪೆಂಪಂ ಪೊಂಬಳಿಗೆಟ್ಟ ನರಕಿ ಕರೆಂಬ ತಕ್ಕಿನಾಳಂ ಬೆಂಕೊಳ್ವ ನಿಂನ್ನಂ ದಾನಗಜದುದ್ದಾನಿಯನಿಶ್ವರ ಸಮನ್ತು ಬಣ್ಣಿಸಲಳವೆ॥

ಧರೆಯಂ ವ್ಯಾಪಿಸಿ ಸಪ್ರಭೂದರಮುಮಂ.... ಯ್ದತ್ತ ವಾರಾಸಿಯಂ ಭರದಿಂದ ದಾಂಟಿ ಬಳಿಕ್ಕೆ ದಿಗ್ಗಜದ ಬೆನ್ನೊಳ್ಪಿನ್ದ ಕುಂನ್ದೇನ್ದು ಸುನ್ದರ ತಾರಾಚಳತಾರಹಾರ ಹರಹಾಸಾಕಾಶ ಸಂಕಾಶ ಭಾಸುರ ಕೀರ್ತ್ತಿಪ್ರಿಯನ್ನಿಶ್ವರಾಂಕನೆಸೆದಂ ವಿಶ್ವಂಭರಾ ಭಾಗದೊಳ॥ ಎಂದು ಕಾವ್ಯತ್ಮಕವಾಗಿ ಬರೆಯಲಾಗಿದೆ. ಈ ಶಾಸನವನ್ನು ಮೂಕರಾಜನು ರಚಿಸಿದನೆಂದು ಶಾಸನವು ತಿಳಿಸಿದೆ.[160]

ಬೀದರ ಜಿಲ್ಲೆಯ ಬಸವಕಲ್ಯಾಣ ವಸ್ತು ಸಂಗ್ರಹಾಲಯದಲ್ಲಿರುವ ಕ್ರಿ.ಶ 12ನೇ ಶತಮಾನದ ಶಾಸನವನ್ನು ಸೇನಬೋವ ಕೇಶವ ಪಂಡಿತನು ಬರೆದಿರುತ್ತಾನೆ.[161]

ಬೀದರ ಜಿಲ್ಲೆಯ ರಂಜೋಳಖೇಣಿ ಗ್ರಾಮದಲ್ಲಿರುವ ಶಾಸನದಲ್ಲಿ ಭೈರವದೇವನ ಕಾಲದ ಶಾಸನವನ್ನು ಭಾಸ್ಕರ ಎನ್ನುವವನಿಗೆ ಬರೆದಿದ್ದು, ಈ ಶಾಸನ ಬರೆದಿರುವ ಭಾಸ್ಕರನಿಗೂ ಸಹ 50 ಮತ್ತರು ಭೂದಾನ ನೀಡಿರುವ ಉಲ್ಲೇಖ ಈ ಶಾಸನದಲ್ಲಿದೆ. ಹೀಗೆ ಶಾಸನವನ್ನು ಬರೆದ ಕವಿಗೆ ಭೂಮಿಯನ್ನು ದಾನ ನೀಡಿರುವುದನ್ನು ಸಾಬೀತು ಪಡಿಸುವ ಏಕೈಕ ಶಾಸನ ಇದಾಗಿದೆ ಎಂದರೂ

ತಪ್ಪಾಗಲಾರದು.[162]

ಕವಿಗಳು ಮತ್ತು ಕವಿ ಸಾಹಿತ್ಯ :

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕನ್ನಡ ಸಾಹಿತ್ಯ ಉತ್ತುಂಗ ಸ್ಥಿತಿಯಲ್ಲಿತ್ತು. ಸಾಹಿತ್ಯ ಒಂದು ನಾಡಿನ ಸಂಸ್ಕೃತಿಯ ಸಂಕೇತ, ಆ ನಾಡಿನ ಮಹತ್ವವನ್ನು ಹೆಚ್ಚಿಸುವ ಶ್ರೀಮಂತ ಮಾಧ್ಯಮ. ಸಾಹಿತ್ಯವು ಸಂಸ್ಕೃತಿ ಮತ್ತು ನಾಗರಿಕರೆಗಳ ನಿಧಿಯೂ ಹೌದು. ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಹಲವಾರು ಉತ್ತಮ ಕೃತಿಗಳು ರಚನೆಯಾಗಿ ಕನ್ನಡ ಸಾಹಿತ್ಯವು ಸಮೃದ್ಧಿಯಾಯಿತು. ಚಾಲುಕ್ಯರ ಆಶ್ರಯದಲ್ಲಿ ರಚಿತವಾದ ಮುಖ್ಯ ಕೃತಿಗಳೆಂದರೆ,

1. ರನ್ನ (ಕವಿ ಚಕ್ರವರ್ತಿ)– ಅಜಿತ ಪುರಾಣ, ಸಾಹಸ ಭೀಮ ವಿಜಯ (ಗದಾಯುದ್ಧ) ಪರಶುರಾಮ ಚರಿತೆ, ಚಕ್ರೇಶ್ವರ ಚರಿತೆ, ರನ್ನಕಂದ,
2. ಒಂದನೇ ನಾಗವರ್ಮ– ಕರ್ನಾಟಕ ಕಾದಂಬರಿ, ಚಂದೊಂಬುದಿ
3. ಎರಡನೇ ಚಾವುಂಡರಾಯ– ಲೋಕೋಪಕಾರ (ವೈದ್ಯಶಾಸ್ತ್ರ ಕೃತಿ)
4. ಚಂದ್ರರಾಜ– ಮದನತಿಲಕ (ಕಾಮಶಾಸ್ತ್ರ)
5. ಶಾಂತಿನಾಥ– ಸುಕುಮಾರ ಚರಿತೆ (ಚೆಂಪು)
6. ಜೇಡರ ದಾಸಿಮಯ್ಯ– ವಚನಗಳು
7. ಎರಡನೇ ಜಗದೇಕಮಲ್ಲ– ಸಂಗೀತ ಚೂಡಾಮಣಿ
8. ಬ್ರಹ್ಮಶಿವ– ಸಮಯ ಪರೀಕ್ಷೆ
9. ನಾಗವರ್ಮಾಚಾರ್ಯ– ಚಂದ್ರಚೂಡಾಮಣಿ ಶತಕ
10.ಶ್ರೀಧರಾಚಾರ್ಯ–ಚಾತಲ ತಿಲಕ (ಕನ್ನಡದ ಮೊದಲ ಜ್ಯೋತಿಷ ಶಾಸ್ತ್ರ)
11. ಎರಡನೇ ನಾಗವರ್ಮ–ಕಾವ್ಯಾವಲೋಕನ (ಶೃಂಗಾರ), ಭಾಷಾಭೂಷಣ (ವ್ಯಾಕರಣ), ಅಭಿದಾನ ವಸ್ತುಕೋಶ (ನಿಘಂಟು)
12. ದುರ್ಗಸಿಂಹ– ಕನ್ನಡ ಪಂಚತಂತ್ರ
13. ಸೋಮನಾಥ ಜಗದ್ದಳ– ಕರ್ನಾಟಕ ಕಲ್ಯಾಣಕಾರಕ
14. ಪರ್ಶ್ವದೇವ– ಸಂಗೀತಮಯಸಾರ
15. ನಯಸೇನ– ಧರ್ಮಾಮೃತ

16. ಕೀರ್ತಿವರ್ಮ– ಗೋವೈದ್ಯ

17. ನಾಗಚಂದ್ರ (ಅಭಿನವ ಪಂಪ) ಮಲ್ಲಿನಾಥ ಪುರಾಣ, ರಾಮಚಂದ್ರ ಚರಿತಾ ಪುರಾಣ.

18 ವಾದಿರಾಜ– ಪಾರ್ಶ್ವನಾಥ ಚರಿತೆ, ಯಶೋಧರ ಚರಿತೆ

19. ಉದಯಾದಿತ್ಯ– ಉದಯಾದಿತ್ಯ ಅಲಂಕಾರ (ಅಲಂಕಾರ ಶಾಸ್ತ್ರ)[163]

20. ಬಿಲ್ಹಣ– ವಿಕ್ರಮಾಂಕದೇವಚರಿತಂ

21. ವಿಜ್ಞಾನೇಶ್ವರ–ಮಿತಾಕ್ಷರ ಸಂಹಿತೆ (ಕಾನೂನು ಸಂಹಿತೆ)

22 ಎರಡನೇ ಭಾಸ್ಕರಚಾರ್ಯ–ಲೀಲಾವತಿ

23.ಮೂರನೇ ಸೋಮೇಶ್ವರ– ಮಾನಸೊಲ್ಲಾಸ (ಅಭಿಲಾಷಿತಾರ್ಥ ಚಿಂತಾಮಣಿ)

ಹೀಗೆ ಬಹಳಷ್ಟು ಕವಿಗಳು ಕನ್ನಡ ಮತ್ತು ಸಂಸ್ಕೃತ ಭಾಷೆಯಲ್ಲಿ ಸಾಹಿತ್ಯವನ್ನು ರಚಿಸಿದ್ದು, ಇವರೆಲ್ಲರೂ ಕಾವ್ಯಪರಿಚಯವನ್ನು ನೀಡದೇ ನೇರವಾಗಿ ಬೀದರ ಜಿಲ್ಲೆಯ ಪ್ರದೇಶಗಳಲ್ಲಿಯೇ ಇದ್ದುಕೊಂಡು ಇಲ್ಲಿಯೇ ಬಾಳಿ ಬದುಕಿ ಇಲ್ಲಿಯೇ ಸಾಹಿತ್ಯ ರಚಿಸಿದ ಪ್ರಮುಖ ಕವಿಗಳ ಪರಿಚಯವನ್ನು ಅಭ್ಯಾಸಿಸೋಣ.

1. ವಿಜ್ಞಾನೇಶ್ವರ–ಮಿತಾಕ್ಷರ:

ಅಟ್ಟಳೆ ನಾಡು ಮಾಸೆಯಮಾಡು ಗ್ರಾಮದ ಸೋಮರಾಜ ಮತ್ತು ಭಾಗ್ಯವನಿತೆ ಎಂಬ ದಂಪತಿಗಳಿಗೆ ಕೌಶಿಕಗೋತ್ರ ಲಲಾಮನೆನಿಸಿ ವಿಜ್ಞಾನೇಶ್ವರ ಜನಸುತ್ತಾನೆ. ವಿಜ್ಞಾನೇಶ್ವರನ ನಿಜನಾಮ ಕಂಚ ಎಂಬುದಾಗಿದ್ದು, ವಿಜ್ಞಾನೇಶ್ವರ ಎಂಬುದು ಆತನ ಬರಹನಾಮವಾಗಿರಬಹುದು ಅಥವಾ ಇಲ್ಲವೇ ಬಿರುದುನಾಮವೂ ಆಗಿರಬಹುದು. ಕಂಚ ಅತ್ಯಂತ ಪ್ರತಿಭಾಸಂಪನ್ನ ವ್ಯಕ್ತಿಯಾಗಿದ್ದು, ವಿಶೇಷವಾದ ಜ್ಞಾನವುಳ್ಳವನಾದ್ದರಿಂದ ಅವನಿಗೆ ಅನ್ವರ್ಥವಾಗಿಯೂ ವಿಜ್ಞಾನೇಶ್ವರ ಎಂಬ ಹೆಸರು ಬಂದಿರಲು ಸಾಧ್ಯ.

ವಿಜ್ಞಾನೇಶ್ವರನ ಹೆಂಡತಿ ಕೇತಿಕಬ್ಬೆ, ಅವರಿಗೆ ನಾಲ್ವರು ಪುತ್ರು. ಕಾಮದೇವ, ಸೋಮದೇವ, ಮಾರಸಿಂಗ ಮತ್ತು ಬೀಚಿರಾಜ. ಇವರಲ್ಲಿ ಕೊನೆಯವನಾದ ಬೀಚಿರಾಜನು ಹೆಚ್ಚು ಪ್ರಸಿದ್ಧಿಗೆ ಬಂದು ಪೆರ್ಗಡೆ (ಹಿರೇಗೌಡ) ವೃತ್ತಿಯನ್ನು ಕೈಕೊಂಡು, ಅಲ್ಲದೇ ಅಲಂದೆ 1000 ಉಪ ವಿಭಾಗದ ಗೊಂಗಕನಾಡಿನಲ್ಲಿಯ ಮರತೂರು ಗ್ರಾಮದಲ್ಲಿದ್ದು ಶಿವಾಲಯವನ್ನು ಕಟ್ಟಿಸುತ್ತಾನೆ.

ಮರ್ತೂರ ಗ್ರಾಮದ ಕಾಳಿಂಗೇಶ್ವರ ದೇವಸ್ಥಾನದಲ್ಲಿರುವ ಕ್ರಿ.ಶ 1123ರ

ಶಾಸನದಲ್ಲಿ,

ಶ್ರೀಯಂ ಶ್ರೀಪದ್ಮನಾಭಂಗಖಿಳ ಭುವನುಸ್ತುತ್ಯೆಯಾಗಿರ್ದ್ದಿ ವಾಣಿ
ಶ್ರೀಯಂ ಶ್ರೀ ಪದ್ಮಗರ್ಭಂಗಮರಪರಿವ್ರಿಢಶ್ರೀ
ಯನಿಂದ್ರಂಗೆ ವೀರಶ್ರೀಯಂ ಶ್ರೀ ನಂದಿಕೇಶಂ ಪ್ರಮಥ ಸಮಿತಿ
ಗೀಶಾಂಫ್ರಿಪಂಕೇಜಭಕ್ತಿ ಶ್ರೀ
ಯಂ ಮಾಹೇಶ್ವರಗ್ಗಿತ್ತನುಪಮನೆಸೆದಂ ಪಾರ್ವ್ವತೀಶಂ ಮಹೇಶಂ॥
ಶ್ರೀಧರ ನೆಗರ್ದ್ದೆ ಪೊಕ್ಕುಳ ತಾಮರೆಯೊಳ್ ಪುಟ್ಟಿದಜನ
ಪೆರ್ಮ್ಮಗನತುಳಂ ಭಾವಜನಿಕಾಶನಬುಧಿವೃತಾವನಿ ಪರಿರಕ್ಷಪಾಳಕಂ
ಮಾನವ್ವಂ ॥ ಕಾರಣ ಪುರುಷಂ ನೆಗರ್ದ್ದಾ ನೀ
ರಜಭವಾತ್ಮಜಗೆ ಧರೆ ಪೊಗಳ್ವಿನೆಗಂ ಹಾರೀತನೊಗೆದನುದದಿಗ
ಭೀರಂ ಬಾಲಾರ್ಕ್ಕತೇಜನಸದೃಶಮಹಿಮಂ॥ ಜಳರುಹ ಮಿತ್ರನ
ಮೃದುಪದ ಜಳಜಯುಗಕ್ಕೆಯ್ದುಗೆಂದುಜ ಭಕ್ತಿಯೊಳಿತ್ತಾ
ಚುಳುಕಜಲದಿಂದಮೊಗೆದಂ ಬಳಯುತನಪ್ರತಿಮನ
ಭೆಯನಭಿಜನದವಳಂ॥ ಮರಳಹಿತಂಮೆನಿಪ ಚುಳಕಜಳ
ದೊಳೊಗೆದಾಗಳಿನಾಗವಿಸದ್ರಸಮಹಿಮಂ ಚಳಿಕ್ಕ ನೃಪವೆಸರಂತಳೆ
ದಾಳ್ದಂ ಜಳಧಿವ್ರಿತ ಮಹೀಮಂಡಳಮಂ ॥ ಆತನ ವಂಶಜರಖಿಳ ಧರಾ
ತಳಮಂ ಮುದದಿನಾಳ್ದರರೆಬಗ್ಗುಣವಿಖ್ಯಾತರ್ವ್ವಿರಾಂಬುಧಿ
ಸಂಜಾತರ್ಚ್ಚಾಳುಕ್ಯ ವಾರ್ದ್ಧಿ
ವರ್ದ್ಧನ ಚಂದ್ರರ್ ॥ ಭೂನುತನಾಶ್ರಿತ ಪ್ರಕರ ಕಲ್ಪಕುಜಾತನೆನಿಪ್ಪ
ಸೋಮನಂತಾ ನರನಾಥನಿಂ ಕಿರಿಯನಂ ಕರಪೋಂಕದ
ವಿಕ್ರಮಾರ್ಜುನಂ ಭಾನುನಿಭಪ್ರಭು ಹಯ
ಪುರುಂದರನನ್ಯ ವಧೂಮರಸು ತಂ ದಾನ ವಿನೋದನುದ್ದತ ನೃಪೇ
ಂದ್ರಪುರ ತ್ರಿಪುರ ತ್ರಿಯಂಬಕಂ॥ ಅರಿರಾಯಮಕುಟ ತಾಡಿತ ಚರಣನೆನಲುನೆ
ತಾಡಿತ ಚರಣನೆನಲುನೆ
ಗರ್ದ್ದಿ ವಿಕ್ರಮಾಂಕನ ರತ್ನೋತ್ಕರ ನಿಚಿತಮಕುಟ ತಾಡಿತ

ಚರಣಂ ವಿಜ್ಞಾನದೇವರೇಂ ಕೇವಳಮೇಂ॥
ನೀರಜಭವನಿಭರುದಧಿಗಭೀರರ್ವ್ವಿಜ್ಞಾನದೇವರವರ ಮನೆಯೊಳ್
ಕಾರಣ ಪುರುಷರು ನಾಲ್ವರುಮೋರನ್ತೆ ವಿಪುಲ ಭಾಗ್ಯದೊಳು
ಗುಣಗಣದೋಳ್ ॥ ಕಲಿತನದೊಳುಗಭೀರತೆಯೊ
ಳುನ್ನತಿಯೊಳು ಹರಹಾಸಕಾಶ
ನಿರ್ಮ್ಮಳತರ ವ್ರಿತ್ತಿಯೊಳು ಸರಭಮೆಯ್ದದಕೇಸರಿ ಕುಂಭಜನ್ಮ
ನೆಂಜಲಿಸದ ವಾರ್ದ್ಧಿ ದಾನವಕುಳಾಂತಕನೆತ್ತದ
ಮೇರು ರಾಹುಮಂಡಲಿಸದ ಚಂದ್ರನೆಂಬುದಮಿ
ಳಾವನಿ ಪೆರ್ಗ್ಗಡೆ ಕಾಮದೇವನಂ ॥ ಗರುಡನೊಳಂಚೆ ಮಂದರದೊ
ರೆಂದ್ರ ಮಹೋಕ್ಷದೊಳಿಕ್ಷವಂಬುಜೋದ್ಧರನೊ
ಳಗಾರಿ ಕಂಜವನಮಿತ್ರನೊಳ್ಗಿಂದು ಪಯರ್ಪ್ಪಿಯೋಧಿ
ಯೊಳು ಸರನಿದಿ ಕಾಮನಿಂ ಕಿರೇಯ ಪೆರ್ಗ್ಗಡೆ ಸೋಮನೊಳನ್ಯ
ಮಾನವದ್ಧೊರೆಪಡಿಪಾಟಿ ಪಾಸಟಿಸಮಂ
ತೊಣೆ ತೋಡನೆ ದೋಷಮಲ್ಲದೆ ॥ ವಿಯಾಂಭೋರಾಸಿ ವಿದ್ವ
ಜ್ಜನ ಮುಖಕಮಳ ಅನೀಕ ಪಂಕೇಜ ಮಿತ್ರಂ ಮನುಮಾರ್ಗ್ಗಂ
ನಿತ್ಯತೇಜಂ ನಿರುಪಮಮಹಿಮಂ ನಿಮ್ಮಳಂ
ನಿರ್ವ್ವಿಕಾರಂ ದ್ಯೂನದೀಡಿಂಡೀರಪಿಂಡಪ್ರಖರನಿಭ ಲಸತ್ಕೀರ್ತಿ
ಸಾಮಾನ್ಯನೇ ಸೋಮನ ತಮ್ಮಂ ಮಾರಸಿಂಗ ನಿಜಕುಳಕುಮುದಾ
ನಂದ ಸಂಪೂರ್ಣಚದ್ರಂ । ಅನತಾರಾತಿ ಕುಳಾಂಬುಜಂ ಕರ
ಮದಸ್ತಂಭೇರಮುಂ ಕಾಮಿ
ನೀಜನ ಲೀಲಾಲಿ ಲಸತ್ ವಿಲೋದನ ಚಕೋರೀ ಪುರ್ಣ್ನಚಂದ್ರಂ
ಲಸದ್ವಿನಯಾಂಭೋನಿಧಿ ಮಾರಸಿಂಗನನುಜಂ ಶ್ರೀ ಬೀಚಿರಾ
ಜಂ ಜಗಜ್ಜನ ಚಿನ್ತಾಮಣಿ ರಾ
ಜಪೂಜಿತನಿಲಾಲೋಕೈಕ ಕಲ್ಪದ್ರುಮಂ ॥ ಪತಿಭಕ್ತೆ ವಿಮಳಲುಳಿ
ತಾಯತಲೋಚನೆ ಕಮಳವದನೆ ಘಟಕುಚಯುಗೆ ಸನ್ನುತಕೀರ್ತಿ ಬೀಚಿ

ರಾಜನ ಸತಿ ಚಾಮಲದೇವಿಯೆಂದು ಪೊಗಟ್ಬುದು ಲೋಕಂ॥ ಎನೆ
ನೆಗೆಟ್ದವರಾನ್ವಯವೇನ್ತೆನೆ ಅಟ್ವಳೆನಾಡೋಲೆಸೆವ
ಮಾಸೆಯಮಡು ಸದ್ವಿನು
ತ ಶಿವಾಲಯಚಯದಿಂದನುಪಮಿತ ವನಾಳಿಯಿಂದೆ ಸೊಗಯಿಸಿ
ತೋರ್ಕ್ಕುಂ ॥ ಆ ಗ್ರಾಮವಿಲಾಸಿನಿಲಯಸಗ್ಯೆವ ಕಾಳಾ
ಪದಂತಿರೆಸೆವಂ ಪೋಣರ್ದ್ದತ್ಯುಗ್ರಾರಿ ಘನಸಮೀರಮದಗ್ರ
ಯಶಂ ಸೋಮರಾಜನೂರ್ಜ್ಜಿತ ತೇಜಂ ॥ ಭೂಮಿಗೆ
ದೊರೆಸ್ವೈರಸೆಯೊಳು ಸೋಮನಸತಿ
ಭಾಗ್ಯವನಿತೆ ಪತಿಹಿತದೆಡೆಯೊಲು ಕಾಮಿನಿಯರೊಳಧೀಕವೆನಲು
ಸಾಮಾನ್ಯದ ಕಾನ್ತೆಯಲ್ಲಿ ಯನುಪಮಿತಾಂಗೀ ॥ ಅವರ ತನೂ
ಬವಂ ನೆಗಟ್ದ ಕೌಶಿಕಗೋತ್ರಲಲಾಮನಂಬುಜೋದ್ಭವ
ಕುಲದೀಪಕಂ ಬುಧನಿಕಾಯ ವಿಪತ್ತಿ ತಿಮಿರಾರಿ
ಪಾರ್ವ್ವತೀಧವಪದಪಂಕಜಭ್ರ
ಮರನಿಷ್ಪ ವಿಶಿಷ್ಪ ಜನಾಳಿನೇತ್ರಕ್ಕೆರವವನಚಂದ್ರನುಜ್ಜಳ
ಯಶೋನಿಧಿ ಕುಂಚನತರ್ಕ್ಯ ವಿಕ್ರಮಂ ॥ ಇಂತೆನಿಸಿ
ನೆಗಟ್ದ ಕಂಚನಕಾಂತೆ
ಮಹೀಕಾಂತೆಗೀಂದುಕಾಂತೆಗೆ ಲಕ್ಷ್ಮೀಕಾಂತೆಗೆ ನಳಕಾಂತೆಗೆ ರಘು
ಕಾಂತೆಗೆ ದೊರೆ ಕೇತಿಕಬ್ಬೆ ಮರಗುಣಗಣದೊಳು ॥ ಅನತಾರಾ
ತಿಯನಿಕ್ಕಲುಂ ಮಜಗೆ ವಂದಿದ್ದಾತನಂ ಕಾಯಲುಂ ಕನಕಬ್ರಾತಮ
ನರ್ಥಿ ಸಂಕುಲದೆಡರ್ವ್ವೋರ್ಪ್ವನಾರ್ತ್ತೀಯಲುಂ ವಿನಯಾಂಬೋನಿಧಿ
ಕಾಮನುಂ ಜಿತಮದ ಶ್ರೀ ಸೋಮನಂ ಮಾರಸಿಂಗಮನುಮತ್ಯೂ
ರ್ಜ್ಜಿತ ಬೀಚಿರಾಜನುಮವರ್ಗ್ಗಾನಂದದಿಂ ಪುಟ್ಟಿದರುಂ॥
ಅವರೊಟಗಧಿಕಂ ಬೀಚಣ
ನವದತ್ತ ಯಶೋಭಿರಾಮನೆಸೆವ ಕುಂಭಿರ್ಜ್ಜನ ವಿನಮಿತ್ತೋತ್ತ
ಮಾಂಗಂ ಭುವನಸ್ತುತಂ ಧರ್ಮ್ಮಭೂಮಿಯಂ ಪ್ರಕಟಿಸಿದಂ

ಶ್ರೀ ರಮಣನೆ ನೀನೆ ಜಯಶ್ರೀ ರಮಣನೆ ಸತ್ಯಪರನೆ ಬೀಚಣ
ಕೀರ್ತ್ತಿ ಶ್ರೀ ರಮಣನಾಗೆ ಪಡೆದ್ಯೆ ಶ್ರೀರಮ
ಣ ನನನ್ತ ಕೋಟಿಕಲ್ಪಾಯುವರಂ ॥ ನಿನಗಾಯುಶ್ರೇಯಮಂ ಮಾಡಿದನ
ಮಳಯಶಂ ಶಂಕರದೇವದೇವಂ ದ್ಯುನದೀಚಿತ್ತಪ್ರಿಯಂ ಪಾಣ್ಡುರ
ವಿಮಳತನುತ್ತಾರ ಸಂಕಾಶ ಶಂಖಧ್ವನಜಾರ್ಕ್ಕಂ॥ (ಇ) ಭೇಂದ್ರ
ಚಂದ್ರಪ್ಪ
ಬಳಜಳಧರಂ ಕ್ಷೀರವಾರಾಸಿ ಫೇನೋಜ್ವಟ ರಾಗದ್ರಾಜಹಂಸಂ
ಶಿವನೊಸೆಯೆ ಸದಾನಂದಮುಂ ಬೀಚಿ ನಿನ್ನೋಳ್ ॥ಕಂದ॥ ನು
ಡಿದಿರ್ದ್ದೆರಡಂ ನುಡಿಯಂ ಪಿಡಿದುದನಾದ್ಯಂತವೈಯ್ದೆ ಪಿಡಿವಂ...
ಕಡುಗಲಿ ವಿವೇಕಿ ಬೀಚಂ ತೊಡರ್ವ್ವಡೆ ಜನನೊಸೆ
ನೋಡಿದಂ ದಾನವಿನೋದಂ ॥ಚಿ
ತ್ರಲತಿಕೆ ॥ ಜಳಧಿಯ ಗುಂಪು ಮಂದರದ ಪೆಂಪು ಧರಿತ್ರಿಯ
ದಿಂಪು ಬೀಚಿಯೋಲ್ಮಳಯಜದಂಪು ಮಲ್ಲಿಗೆಯ ಕಂಪು
ವಿನೋದದ ಸೊಂಪು ಚಾಗದೊಟ್ಟೈಳಸುವಲಂಪು ತನ್ನ ಮನದೊ
ಳ್ಗೆಡೆಗೊಂಡಿರೆ ಶಾಂತಚಿತ್ತದಿಂ ಬಳೆದನುರಾಗಮೆಂಬ ಲತೆ ಪರ್ವ್ವಿದು
ದೀ ಭುವನತ್ರಯಂಗಳಂ ॥ ಸ್ಥಿರಮಾಗೆ ಪರಮನಿತ್ತುದು ಪರಮಾ
ಯುವನ್ತಕೋಟಿ ಕಲ್ಪಾಯುವರಂ ಸ್ಥಿರಮಕ್ಕೆ ಬು
ಧ ಸಮೂಹಂ ಪರಸೆ ಸದಾನಂದದಿಂದಮಾಯುಂ ಶ್ರೀಯುಮಂ॥ ಸರನಿಧಿ
ವೃತಭೂತಲದೊಲು ಕರಚೆಲ್ವಂ ಕುಂತಳವಾವನೀತಳ
ಮದರೊಳು ಕರಚೆಲ್ವಿನಲಂದೆಸಾಸಿರಮದರೊಳೆಚೆಲ್ವನೆತ್ತಿ.
ಗೊಂಕನಾಡು ॥ ಆ ವಿಷಯಕ್ಕಧಿನಾಥಂ ಭಾವಜನಿಭನಮಳ
ಕೀರ್ತ್ತಿ ರಿಪು ನೃಪಕುಳ ವಿದ್ರಾವಣನಿವನೆನೆ ನೆಗಳ್ದ ಕೇವಳಮೇ
ಬಿಬ್ಬಭೂಪನಪ್ರತಿರೂಪಂ ॥ ಶ್ರೀವರನವನ ತನೂಜಂ
ಪಾಕದ್ವಿಟು ವಿಭವನೆನಿಪ ಗೊಂಕನೃಪಾಳಂ ಲೋಕೆಂದು ವಿಶದ
ಕೀರ್ತ್ತಿಪತಾಕಂ ಕಮನೀಯಗಾತ್ರನುತ್ಪಳನೇತ್ರಂ ॥ ಗ

೭೦

ಣ್ಡರಗಣ್ಡಂ ರಿಪುನ್ರಿಪಸುಂಡಾಳಂ ಮ್ರಿಗೇಂದ್ರನೆನಿಪ
ಗೊಂಕನತನಯಂ ಚಂಡಪರಾಕ್ರಮವಾಹವಸೌಂಡನೆನಲು
ನೆಗಳ್ದನಲ್ದೆ ಕತ್ತನೃಪಾಳಂ ॥
ಎನೆನೆಗಳ್ದ ಕತ್ತಭೂಪನತನಯಂ ಸಂಗ್ರಾಮರಾಮನಸದ್ರಿಸ
ಮಹಿಮಂ ಮನುಜಮನೋಜಂ ರಿಪುನೃಪವನಜವನಾನೀಕಮ
ತ ಸಸಾಂಕಂ ಗೊಂಕಂ ॥ ಆ ವಿಷಯಾಂತರಾಳದೊಳಗಾನತ ಸಾಳಿವ
ನಾಳಿಯಿಂ ಲಸದ್ದೇವ ಗ್ರಿಹಾಳಿಯಿಂ ಸುಕಪಿಕಾಲಿಯಿನೊಪ್ಪುವ
ನಂದನಾಳಿಯಿಂ ತೀವಿ ಸಮಸ್ತ ದಿಕುತಟದೊಳೊಪ್ಪುವ ವಾಪಿ
ತಟಾಕರಾಜಿಯುಂ ಭಾವಿಸಿ ನೋರ್ಪ್ಪಡಂತು
ಮರಿತೊರಮರೇಂದ್ರಪುರಕ್ಕ ಮಗ್ಗಳಂ ॥
ಎಸೆವ ಪುರವರದ ವಿಪ್ರಪ್ರಸರಂ ನಿಖಿಳಾರ್ತ್ಥ ಶಾಸ್ತ್ರಪಾರಂಗತರ
ರ್ತ್ಥಿಸುವ ಭವಪ್ಪಿರಿದು ರಣರಸಿಕರ್ಪ್ಪತಿಹಿತೆಯರೆನಿಪರಲ್ಲಿಯ ಸತಿ
ಯರು ॥ ಕೇಡಿಲ್ಲದ ಧರ್ಮ್ಮಮನಾಂ ಮಾಡುವೆನೆಂದರ್ತ್ತಿಯಿಂದೆ
ಪೆರ್ಗ್ಗಡೆ ಬೀಚಂ ನೋಡಿ ತತು ಪುರದೊಳಾದಂ
ನಾಡಾಡಿಗಳುಂಬಮಪ್ಪ ಬೀಯಮಂ
ಮೆರೆದು ॥ ಇದು ವಿಶ್ವಕರ್ಮ್ಮ ನಿರ್ಮ್ಮಿತಮಿದು ಪುಣ್ಯದಪುಂಜ
ಮೆಂದು ವಿಬ್ದನಿಕಾಯಂ ಮುದದಿನಭಿವರ್ಣ್ಣಿಸಲು
ಶಿವನ ಸದನಮನೆತ್ತಿಸಿದನೊಸೆದು ಕೀರ್ತ್ತಿವಿಲಾಸಂ ॥
ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪೃಥ್ವೀವಲ್ಲಭ ಮಹಾರಾ
ಜಾಧಿರಾಜ ಪರಮೇಶ್ವರ ಪರಮಭಟ್ಟಾರಕ
ಸತ್ಯಾಶ್ರಯಕುಳತಿಳಕ ಚಾಳುಕ್ಯಾಭರಣಂ
ಶ್ರೀ ಮತ್ತ್ರಿಭುವನಮಲ್ಲದೇವರ ವಿಜಯರಾಜ್ಯಮುತ್ತ ರೋತ್ತರಾಭಿವೃದ್ಧಿ
ಪ್ರವರ್ದ್ಧಮಾನಮಾಚಂದ್ರಾರ್ಕ್ಕತಾರಂ ಸಲುತ್ತ
ಶ್ರೀಮತ್ ಜಯನ್ತಿಪುರದ ನೆಲೆ
ವೀಡಿನೊಳ್ ಸುಖಸಂಕಥಾವಿನೋದದಿಂದ ರಾಜ್ಯಂಗೆಯ್ಯುತ್ತಮಿರೆ ॥

ಸ್ವಸ್ತಿಯಮನಿಯಮ ಸ್ವಾಧ್ಯಾಯ ಧ್ಯಾನಧಾರಣ
ಮೌನಾನುಷ್ಠಾನ ಜಪಸಮಾ
ಧಿಶೀಲಸಂಪನ್ನರುಂ ಶ್ರೀಮತ್ತ್ರಿಭುವನಮಲ್ಲದೇವರ ಪರಮಾ
ರಾಧ್ಯರುಮಪ್ಪ ಶ್ರೀಮತ್ ವಿಜ್ಞಾನೇಶ್ವರ ಭಟ್ಟಾರಕ
ದೇವರ ಮಗಂ ಸ್ವಸ್ತಿಸಮ
ಸ್ತಗುಣಸಪನ್ನರಪ್ಪ ಶ್ರೀಮತುಪೆರ್ಗ್ಗಡೆ ಬೀಚಿರಾಜ
ಮರಿತೂರಲು ಪ್ರತಿಷ್ಠೆಯಂ ಮಾಡಿಸಿದ ಮಹಾದೇವರ್ಗ್ಗಂ
ಕೇಶವದೇವರ್ಗ್ಗಂ ಶ್ರೀ ಸ್ವಸ್ತಿ ಸಮಧಿಗತ
ಪಞ್ಚಮಹಾಶಬ್ದ ಮಹಾಮಣ್ಡಲೇಶ್ವರ ಕದನಮಹೇಶ್ವರ ವಿಜಯ
ಲಕ್ಷ್ಮೀಕಾಂತ ತುರಗರೇವನ್ತನಲಂದೆವೆಡಂಗ ಮನ್ನೆಯ
ಸಿಂಗ ಸತ್ಯರಾಧೇಯ ಸಾಹಸವೈ
ನತೇಯ ನೀತಿಚಾಣಕ್ಯನಮೋಘವಾಕ್ಯ ಪರೋಪಕಾರ ವ್ಯಾಪಾರಪಾ
ರಾಯಣ ವೈರಿನಾರಾಯಣ ಸುಜನಜನುಕುಮುದಹಿಮಕರ ಬನ್ಧು
ಜನಕಮಳದಿವಾಕರ ಗುಣರತ್ನಭೂಷಣ ಶಿಷ್ಟಜನ ಪೋಷಣ
ದೇವದ್ವಿಜಗುರು ಪಾಧಾರಾಧಕ ಪರಬಳಸಾಧಕ
ದಾನವಿನೋದ ಮೃಗಮದಾಮೋದ
ನಾಮಾದಿ ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮನು ಮಹಾಮಣ್ಡಳೇ
ಶ್ವರಂ ಬಿಜ್ಜರಸರುಂ ಗೊಂಕರಸರುಂ ಪ್ರಭುಮುಖ್ಯವಾಗಿ
ಶ್ರೀಮಾಚ್ಚಾಳುಕ್ಯ ವಿಕ್ರಮವರ್ಷದ 48ನೆಯ ಶೋಭಕೃ
ತು ಸಂವತ್ಸರದ ಮಾಘ ಶುದ್ಧ 7 ವಡ್ಡವಾರ ಸೂರ್ಯಗ್ರಹಣ
ನಿಮಿತ್ತವಾಗಿ ಶ್ರೀ ಬಿಜ್ಜೇಶ್ವರ ದೇವರ್ಗ್ಗೆ ಊರಿಂ ಪಡು
ವಣ ಬೇವಿನಕೆಱೆಯ ಕೆಯ್ಯಿಂದ ತೆಂ
ಕ ಹೋಚನ ಬಾವಿಗೆ ಹೋದ ಹೋಚಿವಾಡೆಯಿಂ ಪಡುವಲು
ದೇವರಂಗಭೋಗಕ್ಕಂ ಪೂಜೆಗಂ ಚೈತ್ರಪವಿತ್ರಕ್ಕಂ
ನಿವೇದ್ಯಕಂ ಬೊಂತೇಶ್ವರಗಡಿಂಬದ ಫಲೆಯ ಪಿರಿಯ ಮ

ತ್ತನ್ನಾಲ್ಕು ಪಂಚಮಹಾಶಬ್ದಮಂ ಧೂಪ ಜಾಗಟೆಯುಂ
ಬಾರಿಸುವ ಹಱಿಕಾಱರ್ಗ್ಗೆ ಮತ್ತರೆರಡು
ಇಪ್ಪೋರ್ತ್ತಿನ ಸಂಜೆಯೊಳಾದೇವರ್ಗ್ಗೆ ಸುಖದಿಂದ ಭೋಗಮಾರ್ಪ್ಪ
ಸಂಖವಾಳಿಂಗ ಕಮ್ಮವರನೂರು ಅನ್ತು ಸರ್ವನಮ್ಯವಾಗಿ ಬಿಟ್ಟಿ
ಮತ್ತರು 6 ಕಮ್ಮ 600 ಯೂರಿಂ ಮೂಡಣ
ಸಜ್ಜೆವಾರಿಸಿ ಬಿಟ್ಟ ತೋಟದಿಂದ ಬಡ
ಗಲು ತೋಟಕ್ಕೆ ಬಿಟ್ಟ ಕಾಲಡಿಯ ಮತ್ತರು 1 ನಂದಾದೀವಿಗೆ
ಎಣ್ಣೆಗೆ ಗಾಣಂಗಳಲು ಧಾರೆಯೆಣ್ಣೆ
ಮಾರಿದ ಭತ್ತದಲು ಪೊಂಗೆಸ
ಲಗೆವತ್ತಂ ತಂಬುಲಿಗರ್ಮ್ಮರಿದೆಲೆಯ ಹೇರಿಂಗೆಯೆಲೆ ಇರ್ಪ್ಪ
ತ್ತೈದು ಮಾಡಿದ ಪೊಂಗೆಯಡಕೆ 10 ಮಾಟಿಸೆಟ್ಟಿ
ಪ್ರತಿಷ್ಠೆಯಂ ಮಾಡಿಸಿದ
ಸೂರ್ಯ್ಯದೇವರ್ಗ್ಗೆ ನಿವೇದ್ಯಕ್ಕೆ ನಟ್ಟ(ಳ)ವಾರದ ಬಟ್ಟೆಯಿಂ
ಮೂಡ ಮೂಲಿಗಗೆಯಿಂದಂ ಬಡಗಲು ಬಿಟ್ಟ ಕಮ್ಮ 450
ಇನ್ತೀ ಧರ್ಮ್ಮಮಂ ಪ್ರತಿಪಾಳಿಸಿದವರ್ಗ್ಗೆ
ವಾರಣಾಸಿ ಕುರುಕ್ಷೇತ್ರದೊಳು ಸಾಸಿರ ಕವಿಲೆಯಂ ಕೋಡುವಂ
ಕೊಳಗಮಂ ಸುವರ್ಣ್ಣದೊಳು ಪಂಚರತ್ನದೊಳಂ
ಕಟ್ಟಿಸಿಯುಭಯಮುಖಿ
ಗೊಟ್ಟ ಫಳಮಕ್ಕು । ಈ ಧರ್ಮ್ಮಮನಲಿದವಂ ವರಣಾಸಿ
ಯೊಳು ಕವಿಲೆಯುವಂ ಬ್ರಾಹ್ಮಣರುಂ ತನ್ನ
ಸ್ವಹಸ್ತ ದಿಂದಳಿದ ಪಾತಕ
ನಕ್ಕುಂ ಸಾಮಾನ್ಯೋಯಂ ಧರ್ಮ್ಮಸೇತು ನೃಪಾಣಾಂ ಕಾಲೇಕಾಲೇ
ಪಾಲನೀಯೋ ಭವದ್ಭಿಃ ಸರ್ವ್ವಾನೇತಾನ್ ಭಾಗಿನಃ
ಪಾರ್ತ್ಥಿವೇಂದ್ರಾನ್ ಭೂ
ಯೋ ಭೂಯೋ ಯಾಚತೇ ರಾಮಚಂದ್ರಃ ॥ ಸ್ವದತ್ತಾಂ ಪರದತ್ತಾಂ

ವಾಯೋಹರೇತಿ ವಸುಂಧರಾಂ ॥ ಷಷ್ಠಿರ್ವ್ವರ್ಷ

ಸಹಸ್ರಾಣಿ ವಿಷ್ಠಾಯಾಂ ಜಾಯ

ತೇ ಕ್ರಿಮಿಃ ॥ ಊರೊಡೆಯರಕ್ಕು ಮನ್ನೆಯರೂರಾಳ್ವರಸಕ್ಕು ನಾಡ

ತೊಂಡೆಯರಿರ್ಕ್ಕಿನ್ನಾರಾದೊಡಮೀ ಧರ್ಮ್ಮಮಂನಳಿದವ

ರೋರನ್ತಿರೆ ರೌರವಕ್ಕೆ ಗ

ಳಗಳನಿಳಿವರು ॥ ಪ್ರಿಯದಿಂದಿದನ್ನೆದೆ ಕಾವಪುರುಷಂಗಾಯುಂ

ಮಹಾಶ್ರೀಯುಂಮಕ್ಕುಂ ಕಾಯದ ಪಾತಕಂಗೆ ಪಲವುಂ

ತೀರ್ತ್ಥಂಗಳೊಳ(ಂ)

ವಾರಣಾಶಿಯೊಳತ್ಯುಗ್ರ ಮುನೀಂದ್ರರಂ ಪಸುಗಳಂ ವೇದಾಢ್ಯರಂ

ಕೊಂದ ಮಿಕ್ಕಯಶಂ ಪೊರ್ದ್ದುಗುಮೆಂದು ಸಾರಿದಪುದೀ

ಶೈಲಾಕ್ಷರಂ ದಾತ್ರಿಯೊಳ್ ॥

ಶ್ರೀಮತ್ ಕುಳಕರ್ಣಿ ಕುನಿಗೆ ಭೈರವಂ ನಾಮಣನ

ಬರೆಪಂ ಮಂಗಳಮಹಾಶ್ರೀ ಶ್ರೀ ॥

ಶಾಸನದ ಗದ್ಯಾನುವಾದ :

ಶ್ರೀಯನ್ನು ವಿಷ್ಣುವಿಗೆ (ಪದ್ಮನಾಭಂಗೆ), ವಾಕ್ಶ್ರೀಯನ್ನು ಬ್ರಹ್ಮನಿಗೆ, ದೇವತೆಗಳ ಸೇವಾ ಸಂಪದವನ್ನು ಇಂದ್ರನಿಗೆ, ವೀರ ಸಂಪದವನ್ನು ನಂದಿಕೇಶ ಮೊದಲಾಗಿ ಪ್ರಮಥ ಸಮಿತೆಗೆ ಹಾಗೂ ಈಶ್ವರ ಪದಪಂಕಜ ಭಕ್ತಿಯನ್ನು ಮಾಹೇಶ್ವರ ಭಕ್ತಗಣಕಿತ್ತು ಪಾರ್ವತೀಶನು ಬೆಳಗಿದನು.

ವಿಷ್ಣು, ವಿಷ್ಣುವಿನ ನಾಭಿ ಕಮಲದಲ್ಲಿ ಬ್ರಹ್ಮನ ಜನನ. ಆತನ ಬ್ರಾಹ್ಮಾಂಡದಲ್ಲಿ ಸಮುದ್ರಗಳಿಂದ ಸುತ್ತವರಿಯಲ್ಪಟ್ಟ ಈ ಭೂಮಿಯಲ್ಲಿ ಮಾನವೂ, ಬ್ರಹ್ಮನ ಆ ಪುತ್ರನ ಪುತ್ರ ಹಾರೀತ (ಮುನಿ) ಹಾರೀತನ ಚುಳುಕ ಜಳದಲ್ಲಿ, ಆರ್ಘ್ಯ ಬಿಡುವ ಬೊಗಸೆಯ ನೀರಿನಲ್ಲಿ, ಚಳಿಕ ಎಂಬ ಹೆಸರಿನ ರಾಜನು, ಬಲುಯುತನಾದವನು ಜನ್ಮವೆತ್ತಿ ಈ ಮಹೀಮಂಡಳವನ್ನು ಆಳಿದನು. ಆತನ ವಂಶದಲ್ಲಿ ಅನೇಕ ರಾಜರು ರಾಜ್ಯವಾಳಿದರು. ಚಾಲುಕ್ಯ ವಂಶವೆಂಬ ಸಮುದ್ರಕ್ಕೆ ಆನಂದವನ್ನು ನೀಡುವ ಚಂದ್ರರಾಗಿ ಮೆರೆದರು. ಅವರಲ್ಲಿ ಸೋಮನೆಂಬುವವನು (ಎರಡನೇ ಸೋಮೇಶ್ವರ) ಮತ್ತು ವಿಕ್ರಮಾರ್ಜುನ (ಆರನೇ ವಿಕ್ರಮಾದಿತ್ಯ) ಎಂಬುವರು ಅಣ್ಣ ತಮ್ಮಂದಿರು ಆ ಅಣ್ಣ ತಮ್ಮಂದಿರು ಬಹಳ ವೀರರಾಗಿದ್ದು ದಾನ ನಿಡುವುದರಲ್ಲಿ ಕಲ್ಪವೃಕ್ಷದಂತೆ ಇದ್ದರು. ಮತ್ತೆ ವೈಭವದಲ್ಲಿ ಇಂದ್ರನಿಗೂ, ತೇಜಸ್ಸಿನಲ್ಲಿ ಸೂರ್ಯನಿಗೂ ಸಮನಾಗಿದ್ದರು.

ಕಿರಿಯನಾದ ವಿಕ್ರಮಾದಿತ್ಯನು ಉದ್ಧತರನ್ನು ಮುರಿಯುವಲ್ಲಿ ತ್ರಿಪುರಾರಿಗೆ– ತ್ರಿಯಂಬಕನಿಗೆ– ಸಮನಾಗಿದ್ದನು. ಆತನ ಪಾದಕ್ಕೆ ಅನೇಕ ಜನ ಮಾಂಡಲಿಕರು, ಮಹಾಮಂಡಲಿಕರು ನತಮಸ್ತಕರಾಗಿದ್ದರು. ಆತನ ಪಾದಗಳು ಅವರ ಕರೀಟಗಳಿಂದ– ಅಲ್ಲಿನ ಹೊಳೆಯುವ ರತ್ನಗಳ ಬೆಳಕಿನಿಂದ–ಅಲಂಕೃತವಾಗಿ ಬೆಳಗಿದವು. ಅಂತಹ ಶ್ರೇಷ್ಠ ವ್ಯಕ್ತಿ ವಿಕ್ರಮಾಂಕನು ಪಾದಮುಟ್ಟಿ ನಮಸ್ಕರಿಸುತ್ತಿದ್ದನು. ಮತ್ತು ಆತನ ಕಿರೀಟದೊಳಗಿನ ವಜ್ರವೈಢೂರ್ಯಗಳು ವಿಜ್ಞಾನೇಶ್ವರರ ಪಾದಗಳನ್ನು ಬೆಳಗಿದವು. ಕಾರಣ ವಿಜ್ಞಾನೇಶ್ವರರೂ ಕೇವಲರಲ್ಲ, ಅರ್ಥಾತ್ ಶ್ರೇಷ್ಠರು. ಅವರು ಬ್ರಹ್ಮನ ಹಾಗೆ ಬುದ್ಧಿವಂತರು ಮತ್ತು ಸಾಗರದ ಹಾಗೆ ಗಂಭೀರ ಸ್ವಭಾವದವರು.

ಆ ವಿಜ್ಞಾನೇಶ್ವರರ ಮನೆಯಲ್ಲಿ ನಾಲ್ವರು ಕಾರಣಪುರುಷರು, ವಿಪುಳ ಭಾಗ್ಯವಂತರು ಮತ್ತು ಒಳ್ಳೆಯ ಗುಣಗಣಗಳನ್ನು ಪಡೆದವರು ಇರುವರು. ಆ ನಾಲ್ವರೂ ಶುದ್ಧಚರಿತ್ರು. ಅವರೆಂದರೆ, ಕಾಮ, ಸೋಮ, ಮಾರಸಿಂಘ ಹಾಗೂ ಬೀಚಿರಾಜ. ಇವರಲ್ಲಿ ಬೀಚಿರಾಜನು ರಾಜಪೂಜಿತ, ಜಗಜ್ಜನ ಚಿಂತಾಮಣಿ ಮತ್ತು ಲೋಕೈಕ ಕಲ್ಪಧ್ರುಮ, ಬೀಚಿರಾಜನ ಸತಿ ಸುಂದರಾಂಗಿ, ಚಾಮಲದೇವಿ, ಆಕೆ ಸನ್ನುತ ಕೀರ್ತಿವಂತಳು.

ಅಟ್ಟಳೆ ನಾಡು ಶಿವಾಲಯದಿಂದ ವನಗಳಿಂದ ಶೋಭಾಯಮಾನವಾಗಿ ಅದು ತೋರುತ್ತದೆ ಸೊಗಯಿಸಿದೆ. ಅಲ್ಲಿ ಕೌಶಿಕ ಗೋತ್ರದ ಕುಟುಂಬವೊಂದರ ಮುಖ್ಯಸ್ಥ ಸೋಮ. ಆತನ ಸತಿ ಭಾಗ್ಯವನಿತೆ. ರೇಖೆಗಳಲ್ಲಿ ಹೀಗೆ ತೋರಿಸಬಹುದು.

ಅಟ್ಟಳೆನಾಡಿನಲ್ಲಿ 'ಮಾಸಿಮಾಡು' ಗ್ರಾಮ

ಕೌಶಿಕ ಗೋತ್ರ ಕುಟುಂಬದಲ್ಲಿ

ಸೋಮ (ಸಮೀರ ಯಶ)

ಹೆ. ಭಾಗ್ಯವನಿತೆ (ಭಾಗ್ಯಮ್ಮ)

ಕಂಚ (ಯಶೋನಿಧಿ, ಆತರ್ಕ್ಯ ವಿಕ್ರಮ)

ಹೆಂ. ಕೇತಿಕಬ್ಬೆ

ಕಾಮ್, ಸೋಮ್, ಮಾರಸಿಂಘ, ಬೀಚಿರಾಜಹೆಂ. ಚಾಮಲದೇವಿ

ಬೀಚಿರಾಜನು ಆ ಸೋದರರರಲ್ಲಿ ಅತ್ಯಂತ ಅಧಿಕನಾಗಿ ದಾನಾದಿ ಧರ್ಮಕಾರ್ಯಗಳಿಂದ ಪ್ರಸಿದ್ಧನಾಗಿದ್ದನು. ಆತನು ಶಂಕರನ ಮೇಲೆ ಭಕ್ತಿಯಿಂದ ವಿಶ್ವಕರ್ಮನೇ ಕಟ್ಟಿದಂತೆ ವಿಸ್ತಾರವಾದ ಪುಣ್ಯದ ಪುಂಜದಂತೆ ಇರುವ ಶಿವಾಲಯವನ್ನು ಕಟ್ಟಿಸಿದನು. ಅದರ ಜೊತೆಗೆ ಕೇಶವ ದೇವರಿಗೂ ದೇವಾಲಯವನ್ನು ಕಟ್ಟಿಸಿದನು. ಆ ಆಲಂದೆ–1000 ಭೂ ಭಾಗದಲ್ಲಿರುವ ಈ ದೇವಾಲಯಗಳಿಗೆ ಆ ನಾಡಪ್ರಭು ಗೊಂಕರಸನು ಮತ್ತು ಆತನ ಪುತ್ರ ಕತ್ತ ನೃಪಾಳನು ಸೇರಿ ಚಾಲುಕ್ಯ ಚಕ್ರವರ್ತಿ

ಶ್ರೀಮತ್ ತ್ರಿಭುವನಮಲ್ಲ 6ನೆಯ ವಿಕ್ರಮಾದಿತ್ಯನ ಪರಮಾರಾಧ್ಯ (=ಪರಮ ಪೂಜನೀಯರಾದ) ಗುರುಗಳಾದ ಶ್ರೀ ವಿಜ್ಞಾನೇಶ್ವರರ ಮಗ (ಶಿಷ್ಯ)ನಾದ ಬೀಚಿರಾಜನ ಉಸ್ತುವಾರಿಗೆ ದೇವಾಲಯಗಳ ಖರ್ಚಿಗೆಂದು, ಅಲ್ಲಿ ನಡೆದ ಪೂಜೆ ಪುರಸ್ಕಾರಗಳಿಗೆಂದು ಚೈತ್ರದ ಹಬ್ಬಕ್ಕೆಂದು–ದೇವರ ನೈವೇದ್ಯಕ್ಕೂ ಮತ್ತು ಆ ದೇವಾಲಯದಲ್ಲಿ ಸೇವೆ ಸಲ್ಲಿಸುವ ಸಿಬ್ಬಂದಿಯ ಜೀವನೋಪಾಯಕ್ಕೆಂದೂ ಚಾಲುಕ್ಯ ವಿಕ್ರಮ ವರ್ಷ 48, ಶೋಭಕೃತು ಸಂವತ್ಸರದ ಮಾಘಶುದ್ಧ 7 ಶನಿವಾರದಂದು (ಕ್ರಿ.ಶ 1123, ಜನವರಿ 6) ಚಕ್ರವರ್ತಿಯು ಶ್ರೀಮತ್ ಜಯನ್ತೀಪುರ (ಬನವಾಸಿ) ರಾಜಧಾನಿಯಿಂದ ರಾಜ್ಯವಾಳುತ್ತಿರಲು ಶುಭಮುಹೂರ್ತದಲ್ಲಿ ದಾನದತ್ತಿಗಳನ್ನು ನೀಡಿದರು.

1. ಶ್ರೀ ಬಿಬ್ಬೇಶ್ವರ ದೇವರ್ಗ್ಗೆ ಆ ಊರ ಪಶ್ಚಿಮ ದಿಕ್ಕಿನಲ್ಲಿ ಬೇವಿನ ಕೆರೆಯ ಹೊಲದಿಂದ ಹೋಚನ ಬಾವಿಗೆ ಹೊಗುವ ಪಶ್ಚಿಮದಲ್ಲಿ ದೇವರ ಅಂಗಭೋಗಕ್ಕೆ ಚೈತ್ರ ಪವಿತ್ರಕ್ಕೆ, ನಿವೇದ್ಯಕ್ಕೆ ಎಂದು ಬೊಂತೇಶ್ವರ ಗಡಿಂಬದ ಘಟಿಯ (ಬೊಂತೇಶ್ವರ ದೇವಾಲಯದ ಆಳತೆಯ ಕೋಲಿನಿಂದ) ಆಳತೆಯ ಹಿರಿಯ ನಾಲ್ಕು ಮತ್ತರಭೂಮಿಯನ್ನು ನೀಡಲಾಯಿತು. 2. ದೇವಾಲಯದಲ್ಲಿ ಪಂಚಮಹಾಶಬ್ದ ಸಂಗೀತ ನುಡಿಸಲು ಕಲಾಕಾರರಿಗೆ, ಸೇವಕರಿಗೆ ಮತ್ತರ 2; 3. ದೇವಾಲಯದಲ್ಲಿ ಸಂಧ್ಯಾ ಸಮಯಗಳೆರಡರಲ್ಲಿಯೂ ದೇವರ "ಸುಖದ ಭೋಗದ ಸೇವೆಗೆ" ಭೂಮಿಯನ್ನು ಕೊಟ್ಟಿದ್ದು ಕಮ್ಮ–ಆರನೂರು ಒಟ್ಟು ಬಿಟ್ಟ ಭೂಮಿ ಮತ್ತರ 6 ಹಾಗೂ ಕಮ್ಮ 600, 3. ತೋಟಭೂಮಿ ಕಾಲಡಿಯ ಮತ್ತರ –1, 4. ನಂದಾ ದೀವಿಗೆಗೆ ಊರಲ್ಲಿ ಗಾಣಗಳನ್ನು ನಡೆಸುವವರು ಕೊಡಬೇಕಾದದ್ದು ಎಣ್ಣೆಧಾರೆ. 5. ಊರಿನಲ್ಲಿ ಭತ್ತ ಮಾರಿದವರು ಕೊಡಬೇಕಾದ ತೇರಿಗೆ ಹೊನ್ನಿಗೆ ಸಲಗೆವತ್ತ, 6. ತಂಬಲಿಗೆರು (ಎಲೆಗಾರರು) ಮಾರಿದ ಎಲೆಯ ಹೇರಿಗೆ ಎಲೆ–25, 7. ಅಡಕೆ ಮಾರಿದ ಹೊನ್ನಿಗೆ–10, 8. ಮಾರಿಸೆಟ್ಟಿ ಮಾಡಿಸಿದ ಸೂರ್ಯ ದೇವಾಲಯಕ್ಕೆ ಕೊಟ್ಟ ಭೂಮಿ ಕಮ್ಮ–450.ಈ ದಾನ ದತ್ತಿಗಳನ್ನು ನಡೆಸಿದವರಿಗೆ ಪುಣ್ಯ ಮತ್ತು ನಡೆಸದವರಿಗೆ ಪಾಪವು ಸಂಘಟಿಸುತ್ತದೆ. ಶಾಪಾಶಯಗಳ ಪದ್ಯಗಳನ್ನು ಉದ್ಧರಿಸಿದೆ. ಈ ಶಾಸನವನ್ನು ಕುಳಕರ್ಣಿ ಭೈರವನ ನಾಮಣ್ಣನು ಬರೆದಿದ್ದಾನೆ.

ವಿಜ್ಞಾನೇಶ್ವರನನ್ನು ಕುರಿತು ಶಾಸನದಲ್ಲಿ ಬರುವ ಮತ್ತೊಂದು ಉಲ್ಲೇಖ ವಿಜ್ಞಾನೇಶ್ವರನ ಬಗ್ಗೆ ಅಚ್ಚರಿಯನ್ನುಂಟು ಮಾಡುತ್ತದೆ. ವಿಜ್ಞಾನೇಶ್ವರ "ಉಚ್ಚಳ ಯಶೋನಿಧಿ, ಆತರ್ಕ್ಯ ವಿಕ್ರಮ" ಎಂದು ಹೇಳಿರುವುದರಿಂದ ಕಂಚ ಅನೇಕ ಯುದ್ಧಗಳನ್ನು ಗೆದ್ದಿರಲು ಸಾಧ್ಯ. ಆದ್ದರಿಂದ ವಿಜ್ಞಾನೇಶ್ವರ ಕೇವಲ ಶಾಸ್ತ್ರಪಂಡಿತನಷ್ಟೆ ಅಲ್ಲ, ಶಸ್ತ್ರಪಂಡಿತನೂ ಆಗಿರಲು ಸಾಧ್ಯ.

ಶಾಸನವು ವಿಜ್ಞಾನೇಶ್ವರನ ಗುಣಸ್ವಭಾವದ ಮೇಲೂ ಸ್ಪಷ್ಟ ಬೆಳಕು ಚೆಲ್ಲುತ್ತದೆ. ಯಮ, ನಿಯಮ, ಸ್ವಾಧ್ಯಾಯ, ಧ್ಯಾನ, ಧಾರಣ, ಮೌನಾನುಷ್ಠಾನ ಜಪ ಮತ್ತು

ಸಮಾಧಿ ಗುಣಗಳನ್ನು ಕರಗತಗೊಳಿಸಿಕೊಂಡಿದ್ದ ವಿಜ್ಞಾನೇಶ್ವರ, ಚಾಲುಕ್ಯ ಚಕ್ರವರ್ತಿ ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯನ ಪರಮಾರಾಧ್ಯ ವ್ಯಕ್ತಿಯಾಗಿದ್ದರು. ವಿಕ್ರಮಾದಿತ್ಯನ ಕಿರೀಟ ಧರಿಸಿದ ಶಿರವು ವಿಜ್ಞಾನೇಶ್ವನ ಪಾದಗಳಿಗೆ ವಂದಿಸಿದಾಗ ಅವನ ಕಿರೀಟ ವಿಜ್ಞಾನೇಶ್ವರನ ಪಾದಗಳನ್ನು ಸ್ಪರ್ಶಿಸುತ್ತಿತ್ತು. ಅತ್ಯಂತ ವೈಭವಯುತ ಸಾಮ್ರಾಜ್ಯದ ಬಲಿಷ್ಠ ಚಕ್ರವರ್ತಿ ತನ್ನ ಶಿರವಿಟ್ಟು ವಿಜ್ಞಾನೇಶ್ವರನ ಪಾದಗಳಿಗೆ ನಮಸ್ಕರಿಸುತ್ತಿದ್ದನೆಂದರೆ ವಿಜ್ಞಾನೇಶ್ವರ, ಅಸಾಮಾನ್ಯ ಪ್ರತಿಭೇ ಮತ್ತು ಪಾಂಡಿತ್ಯದ ಗಣಿಯಾಗಿದ್ದನೆಂದು ತಿಳಿದುಬರುತ್ತದೆ.

ವಿಜ್ಞಾನೇಶ್ವರರು ಸೋಮೇಶ್ವರನ ಕಾಲದಲ್ಲೇ ಚಕ್ರವರ್ತಿಯ ಅತ್ಯಂತ ಆಪ್ತೇಷ್ಟರೂ, ಗೌರವಾನ್ವಿತರೂ ಆಗಿರುತ್ತಾರೆ. ಮಹಾರಾಜ ಸೋಮೇಶ್ವರ ನಡೆಯುತ್ತಿದ್ದುದು ವಿಜ್ಞಾನೇಶ್ವರರ ಮಾರ್ಗದರ್ಶನದಲ್ಲೇ. ರಾಜಕೀಯ ಅಥವಾ ರಾಜಕೀಯೇತರವಾದ ಯಾವುದೇ ಮಹತ್ವದ ನಿರ್ಣಯಗಳ ಹಿಂದೆ ವಿಜ್ಞಾನೇಶ್ವರರ ಛಾಪು ಇರಲೇಬೇಕು. ಕಲ್ಯಾಣ ಚಾಲುಕ್ಯ ವಂಶದ ಮೊದಲನೇ ಸೋಮೇಶ್ವರ ಹಾಗೂ ನಂತರ ಪಟ್ಟಕ್ಕೆ ಬಂದ ಆತನ ಪುತ್ರ ಆರನೆಯ ವಿಕ್ರಮಾದಿತ್ಯನ ಆಳ್ವಿಕೆ 'ಸುವರ್ಣಯುಗ'ವಾಗಿದ್ದರೆ, ವಿಜ್ಞಾನೇಶ್ವರರು ಆ ಸುವರ್ಣ ಯುಗದ ಹಿಂದಿನ ನೈತಿಕ ಬಲ, ಪ್ರೇರಕ ಶಕ್ತಿ, ಆಧ್ಯಾತ್ಮಿಕ ಅಧ್ವರ್ಯ. ಈ ಇಬ್ಬರು ಮಹಾನ್ ಚಕ್ರವರ್ತಿಗಳ ಸ್ನೇಹಿತ. ಮಾರ್ಗದರ್ಶಕ, ಗುರು, ದಾರ್ಶನಿಕ ಎಲ್ಲರೂ ವಿಜ್ಞಾನೇಶ್ವರರಾಗಿದ್ದರು. ವಿಜ್ಞಾನೇಶ್ವರರ ಪ್ರೇರಣೆ ಇಲ್ಲದಿದ್ದಲ್ಲಿ ಕಲ್ಯಾಣ ಚಾಲುಕ್ಯದ್ವಯರ ಕೀರ್ತಿ ಪತಾಕೆ ಬಾನೆತ್ತರಕ್ಕೆ ಹಾರುವುದು ಸಾಧ್ಯವಿತ್ತೊ ಇಲ್ಲವೋ ಹೇಳಲು ಬಾರದು.

ಸೋಮೇಶ್ವರ ಮಹಾರಾಜ ಒಂದು ಬಾರಿ ಅತ್ಯಂತ ಸಂದಿಗ್ಧ ಪರಿಸ್ಥಿತಿಗೆ ಸಿಲುಕಿರುತ್ತಾನೆ. ಚಕ್ರವರ್ತಿ ಸ್ವತಃ ಅಹವಮಲ್ಲನಾಗಿದ್ದರೂ ತನ್ನ ಸಾಮ್ರಾಜ್ಯದ ಭವಿಷ್ಯದ ಬಗ್ಗೆ ಒಂದು ಹಂತದಲ್ಲಿ ಕಳವಳಕ್ಕಿಡಾಗಿರುತ್ತಾನೆ. ತನ್ನ ಚೊಚ್ಚಲು ಮಗ ಎರಡನೇ ಸೋಮೇಶ್ವರ ಬೇಜವಾಬ್ದಾರಿ, ಅಪ್ರತಿಮಶೂರನೆಂದು ಹೆಸರು ಗಳಿಸಿದ್ದ ಆತನ ತಮ್ಮ ವಿಕ್ರಮಾದಿತ್ಯನ ಬಗ್ಗೆ ದಿನೇ ದಿನೇ ಬೆಳೆಯುತ್ತಿದ್ದ ಈರ್ಷೆ, ಮತ್ಸರ, ಚಕ್ರವರ್ತಿಯನ್ನು ಸಂಕಟಕ್ಕೀಡು ಮಾಡಿರುತ್ತದೆ. ದುರ್ಜನರ ಸಹವಾಸದಿಂದ ದುಷ್ಟನಾಗಿ ಬೆಳೆಯುತ್ತಿದ್ದ ಜೇಷ್ಠ ಪುತ್ರನಿಗೆ ಯುವರಾಜ ಪಟ್ಟ ತೊಡಿಸುವ ಇಚ್ಛೆ ಚಕ್ರವರ್ತಿಗೆ ಇರುವುದಿಲ್ಲ. ಹಾಗೆಂದು ಚೊಚ್ಚಲ ರಾಜಕುಮಾರನ ಅಂತರ್ಗತ ರಾಜಕೀಯ ಅಧಿಕಾರದ ಹಕ್ಕನ್ನು ಸಾಮ್ರಾಟ ಕಡೆಗಣಿಸುವ ಹಾಗೂ ಇರಲಿಲ್ಲ. ತನ್ನ ಮೊದಲನೆಯ ಮಗನೇನಾದರೂ ತನ್ನ ತರುವಾಯ ಸಿಂಹಾಸನವೇರಿದರೆ ಕಲ್ಯಾಣ ಸಾಮ್ರಾಜ್ಯಕ್ಕೆ ಭವಿಷ್ಯ ಇಲ್ಲ ಎಂಬುದು ಸೋಮೇಶ್ವರ ಮಹಾರಾಜನ ಅಂತರಾತ್ಮಕ್ಕೆ ಹೊಳೆದಿರುತತದೆ. ಆತನ ಅಂತರಾಳದಲ್ಲಿ ತನ್ನ ಎರಡನೆ ಮಗ, ಸದ್ಗುಣ ಸಂಪನ್ನ, ಕೆಚ್ಚೆದೆಯ ಕಲಿ, ಮಹಾಪ್ರತಾಪಿ ವಿಕ್ರಮಾದಿತ್ಯನನ್ನೇ ಯುವರಾಜನನ್ನಾಗಿ ಮಾಡಬೇಕೆಂಬ ಅಂದೋಲೊನ ಎದ್ದಿರುತ್ತದೆ. ಆದರೆ ಹೀಗೆ ಮಾಡುವುದರಿಂದ ತಾನಾಗಿಯೇ ಅಣ್ಣ ತಮ್ಮಂದಿರಲ್ಲಿ ದಾಯಾದಿ ಸಂಘರ್ಷವನ್ನು ಹುಟ್ಟುಹಾಕಿ ಅಧಿಕಾರದ ಹೋರಾಟಕ್ಕೆ

ದಾರಿ ಮಾಡಿಕೊಟ್ಟಂತಾಗುತ್ತದೆ ಎಂಬ ಅಳುಕು ಅವನನ್ನು ಕೊರೆಯುತ್ತಿರುತ್ತದೆ.

ಅಹವಮಲ್ಲ ಸೋಮೇಶ್ವರನಿಗೆ ವರ್ತಮಾನಕ್ಕಿಂತ ಭವಿಷ್ಯ ಬಹಳ ಕಾಡುತ್ತಿರುತ್ತದೆ. ತನ್ನ ಪೂರ್ವಜರು ಹಾಗೂ ತಾನು ಕಷ್ಟುಪಟ್ಟು ಕಟ್ಟಿದ ಕಲ್ಯಾಣ ಸಾಮ್ರಾಜ್ಯ ತನ್ನ ಉಂಡಾಡಿ ಮಗನಿಂದ ಅವನತಿ ಕಾಣಬಾರದೆಂಬ ಕಳಕಳಿ ಅವನನ್ನು ಬಾಧಿಸುತ್ತದೆ. ಅವನು ಯಾವುದಾದರೂ ಉಚಿತ ನಿರ್ಣಯವನ್ನು ತೆಗೆದುಕೊಳ್ಳೇ ಬೇಕಾದ ಅನಿವಾರ್ಯ ಸಂದರ್ಭ ಬಂದಿರುತ್ತದೆ. ತಾನು ಬದುಕಿರುವಾಗಲೇ ಭವಿಷ್ಯದ ಸಾಮ್ರಾಜ್ಯಕ್ಕೆ ಬಲಿಷ್ಠ ಕವಚನವನ್ನು ತೊಡಿಸುವ ಪರಮ ಆಶಯ ಆತನದು. ತನ್ನ ಸಂಕಲ್ಪ ಸಿದ್ಧಿಗೆ ಸಾಧನವಾಬಲ್ಲವನೆಂದರೆ ತನ್ನ ಎರಡನೆಯ ಮಗ ವಿಕ್ರಮ ಮಾತ್ರ. ಹಿರಿಯ ಮಗನನ್ನು ಎದುರು ಹಾಕಿಕೊಂಡು ಕಿರಯವನಿಗೆ ಪಟ್ಟಕಟ್ಟುವುದರಿಂದ ಆಗಬಹುದಾದ ಅನಾಹುತವನ್ನು ಎದುರಿಸಲೂ ಚಕ್ರವರ್ತಿ ಸೋಮೇಶ್ವರ ಸಿದ್ಧನಿಲ್ಲ. ಆದರೆ ಹಿರಿಯ ಮಗನಿಗೆ ಒಪ್ಪಿಸಿದ ಅದರ ಅವಸಾನಕ್ಕೆ ಕಾರಣವಾಗುವ ದುರಂತಕ್ಕೂ ಆತ ಸುತರಾಂ ಸಿದ್ಧನಿಲ್ಲ. ತೀವ್ರ ಮಾನಸಿಕ ತಿಕ್ಕಾಟದಿಂದ ಕ್ಷೋಭೆಗೊಂಡ ಚಕ್ರವರ್ತಿ ತನ್ನ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಗುರು ವಿಜ್ಞಾನೇಶ್ವನಲ್ಲಿಗೆ ಬರುತ್ತಾನೆ.

ವಿಜ್ಞಾನೇಶ್ವರರು, ಸೋಮೇಶ್ವರ ಮಹಾರಾಜನ ಎಲ್ಲ ಪುತ್ರರಿಗೂ ಗುರುಗಳೇ, ರಾಜಕುಮಾರರಿಗೆ ಶಾಸ್ತ್ರ–ಶಸ್ತ್ರ ಅಭ್ಯಾಸವನ್ನು ಮಾಡಿಸಿದವರೇ ಅವರು. ವಿಕ್ರಮನಿಗಿಂತ ಅವನ ಅಣ್ಣ ಸೋಮೇಶ್ವರ ಎಲ್ಲದರಲ್ಲೂ ದುರ್ಬಲನೆಂಬುದು ವಿಜ್ಞಾನೇಶ್ವರರಿಗೆ ಚೆನ್ನಾಗಿ ಗೊತ್ತು. ಆದರೆ ಇದೇ ಕಾರಣಕ್ಕಾಗಿ ಸಂಪ್ರದಾಯವನ್ನು, ಶಿಷ್ಟಾಚಾರವನ್ನು ಅತಿಕ್ರಮಿಸಿ ಹಿರಿಯ ಸಹೋದರ ಸೋಮೇಶ್ವರನಿಗೆ ರಾಜ್ಯತಪ್ಪಿಸಿ ಕಿರಿಯ ವಿಕ್ರಮನಿಗೆ ಯುವರಾಜ ಪಟ್ಟಕಟ್ಟುವುದು ಅವರಿಗೂ ಸರಿ ಎನಿಸುವುದಿಲ್ಲ.

ವಿಕ್ರಮನಿಗೆ ರಾಜಕೀಯ ಮಹತ್ವಾಕಾಂತೆ ಇರುವುದಿಲ್ಲ. ತಂದೆ–ತಾಯಿ ಗುರುಗಳನ್ನು ಅತ್ಯಂತ ಆದರದಿಂದ ಕಾಣುತ್ತಿದ್ದ ವಿಕ್ರಮ ಅವರು ಹಾಕುವ ಗೆರೆಯನ್ನು ಎಂದೂ ದಾಟುವವನಲ್ಲ. ಸದ್ಗುಣಗಳ ಖನಿಯಾಗಿದ್ದ ವಿಕ್ರಮಾದಿತ್ಯ ಯುವರಾಜನಾಗುವ ಕನಸು ಕಾಣುವ ಸಾಧ್ಯತೆಯೂ ಇರಲಿಲ್ಲ. ಇದು ಚಕ್ರವರ್ತಿ ಸೋಮೇಶ್ವರ ಹಾಗೂ ಗುರು ವಿಜ್ಞಾನೇಶ್ವರ ಇಬ್ಬರಿಗೂ ಚೆನ್ನಾಗಿ ಗೊತ್ತು.

ಆದಾಗ್ಯೂ ವಿಜ್ಞಾನೇಶ್ವರರು, ವಿಕ್ರಮನನ್ನು ಒಂದು ಸಲ ಪರೀಕ್ಷಿಸಿ ನೋಡುವಂತೆ ಸಾಮ್ರಾಟ ಸೋಮೇಶ್ವರನಿಗೆ ಸೂಚಿಸುತ್ತಾರೆ. ಹಾಗೂ ವಿಕ್ರಮನಿಗೆ ಯುವರಾಜ ಪದವಿಯ ಆಮಿಷವನ್ನು ಒಡ್ಡಿ ಆತನ ಸಾಚಾತನವನ್ನು ಪರೀಕ್ಷಿಸುವಂತೆ ವಿಜ್ಞಾನೇಶ್ವರರು ಅಪ್ಪಣೆ ಕೊಡಿಸುತ್ತಾರೆ.

ಗುರುಗಳ ಸಲಹೆ ಕೇಳಿ ಚಕ್ರವರ್ತಿ ಚಕಿತನಾಗುತಾನೆ. ದಿನದ 24 ಗಂಟೆ ಕಾಲ ತಾನು ರಾಜಕಾರಣದಲ್ಲಿ ಮುಳುಗಿದ್ದರೂ ತನಗೇ ಹೊಳೆಯದ ಈ ಉಪಾಯ ರಾಜಕೀಯ ಅಧಿಕಾರದಿಂದ ಗಾವುದ ದೂರದಲ್ಲಿರುವ ವಿಜ್ಞಾನೇಶ್ವರರಿಗೆ ಇಂತಹ

ನೇರ ಹಾಗೂ ಸರಳ ಆದರೆ ಅಷ್ಟೆ ಪರಿಣಾಮಕಾರಿಯಾದ ಮಾರ್ಗೋಪಾಯ ಹೊಲೆದದ್ದು ಮಹಾರಾಜಲ್ಲಿ ಸಂತಸ ಆಶ್ಚರ್ಯ ಏಕಕಾಲಕ್ಕೆ ಉಂಟುಮಾಡುತ್ತದೆ.

ವಿಜ್ಞಾನೇಶ್ವರರರ ಸಲಹೆಯನ್ನು ಚಕ್ರವರ್ತಿ ಶಿರಸಾವಹಿಸಿ ಪಾಲಿಸುತ್ತಾನೆ. ತನ್ನ ಎರಡನೆಯ ಮಗನ ರಾಜಕೀಯ ಆಕಾಂಕ್ಷೆಯನ್ನು ಪರೀಕ್ಷಿಸಲು ವಿಕ್ರಮನಿಗೆ ಯುವರಾಜನನ್ನಾಗಿ ಮಾಡಲು ತಾನು ಉತ್ಸುಕನಾಗಿರುವುದಾಗಿ ಸಾಮ್ರಾಟ ಹೇಳುತ್ತಾನೆ. ವಿಕ್ರಮಾದಿತ್ಯ ತನ್ನ ಸಹಜ ಸ್ವಭಾವಕ್ಕನುಗುಣವಾಗಿ ತಂದೆಯ ಪ್ರಸ್ತಾವನೆಯನ್ನು ಸಾರಾಸಗಟಾಗಿ ತಿರಸ್ಕರಿಸುತ್ತಾನೆ. ತಂದೆಯ ಅಣತಿಯ ಮೇರೆಗೆ ತಾನು ಯಾವ ಸಂದರ್ಭದಲ್ಲೂ ಕೂಡ ತನ್ನ ಅಣ್ಣನಿಗೆ ಅನುಕೂಲಕರವಾಗಿ ನಿಷ್ಠೆಯಿಂದ ನಡೆದುಕೊಳ್ಳುವುದಾಗಿಯೂ ಮತ್ತು ಕಲ್ಯಾಣ ರಾಜ್ಯದ ಹಿತಾಸಕ್ತಿಯ ಪ್ರಶ್ನೆ ಬಂದಾಗ ರಕ್ತ ಸಂಬಂಧವನ್ನು ಕಡೆಗಣಿಸಿ ಕಲ್ಯಾಣ ರಕ್ಷಣೆಗಾಗಿ ಟೊಂಕಕಟ್ಟಿ ನಿಲ್ಲುವುದಾಗಿ ತಂದಗೆ ವಚನ ನೀಡುತ್ತಾನೆ.

ಅತ್ಯಂತ ಕ್ಲಿಷ್ಟಕರವಾದ ಸಮಸ್ಯೆಯೊಂದನ್ನು ಸಹ ಅತ್ಯಂತ ಸರಳ ರೀತಿಯಿಂದ ಬಗೆಹರಿಸುವ ವಿಜ್ಞಾನೇಶ್ವರನ ಅಸಾಧರಣ ಕೌಶಲ್ಯಕ್ಕೆ ಈ ಐತಿಹಾಸಿಕ ಘಟನೆಯೇ ಸಾಕ್ಷಿ.

ತಂದೆ ಸೋಮೇಶ್ವರ ಎಷ್ಟೊಂದು ಪ್ರೀತಿ–ಅದರ–ಗೌರವದಿಂದ ಕಂಡಿದ್ದನೋ ಆತನ ಮಗ ವಿಕ್ರಮಾದಿತ್ಯನೂ ಕೂಡ ವಿಜ್ಞಾನೇಶ್ವರರನ್ನು ಅಷ್ಟೇ ಪ್ರೀತ್ಯಾದರಗಳಿಂದ ಕಾಣುತ್ತಾನೆ. ವಿಜ್ಞಾನೇಶ್ವರನ ಮಾತೆಂದರೆ ವಿಕ್ರಮನಿಗೆ ವೇದವಾಕ್ಯವಿದ್ದಂತೆ. ತನ್ನ ಅಣ್ಣನ ಬೇಜವಾಬ್ದಾರಿತನ ಕುತ್ಸಿತ ಬುದ್ಧಿ, ಹಾಗೂ ದುರ್ನೀತಿಗಳಿಂದಾಗಿ ವಿಕ್ರಮಾದಿತ್ಯ ಬಹಳಷ್ಟು ಕಷ್ಟಕಾರ್ಪಣ್ಯವಮಾನವನ್ನು ಎದುರಿಸುತ್ತಾನೆ. ನೋವನ್ನೆಲ್ಲ ನುಂಗಿ ನಲಿವನ್ನು ಮಾತ್ರ ಇತರರೊಂದಿಗೆ ಹಂಚಿಕೊಳ್ಳುವ ಸ್ವಭಾವ ಅವನದು. ತಂದೆಗೆ ನೀಡಿದ ಕಲ್ಯಾಣ ರಾಜ್ಯದ ರಕ್ಷಣೆಯ ವಚನವನ್ನು ಅವನು ಯಾವುದೇ ಎಗ್ಗಿಲ್ಲದೆ ಪಾಲಿಸುತ್ತಾನೆ. ತಂದೆಯ ಮರಣದ ನಂತರ ಕಾಯಾ–ವಾಚಾ–ಮನಸಾ ವಿಕ್ರಮಾದಿತ್ಯ ಕಲ್ಯಾಣ ಸಾಮ್ರಾಜ್ಯದ ಕಲ್ಯಾಣವನ್ನು ಮತ್ತು ಸಹೋದರನ ಶ್ರೇಯೋಭಿವೃದ್ಧಿಯನ್ನು ಮಾತ್ರ ಬಯಸುತ್ತಾನೆ.

ಆದರೆ ಅಣ್ಣನ ದುರಾಡಳಿತ, ದುರಾಚಾರ, ಪ್ರಜಾಪೀಡನೆ ದಿನೇ ದಿನೇ ವೃದ್ಧಿಸುತ್ತಲೇ ಹೋಗುತ್ತದೆ. ಎರಡನೇ ಸೋಮೇಶ್ವರ, ಸ್ವಾರ್ಥಸಾಧಕರು, ಹೊಗಳು ಭಟ್ಟರ ಪ್ರಭಾವಲಯಕ್ಕೆ ಸಿಲುಕಿ ರಾಜ್ಯ ಪರಿಪಾಲನಾ ಕರ್ತವ್ಯವನ್ನು ಮರೆತು ಐಷಾರಾಮಿ ಬದುಕನ್ನು ಸಾಗಿಸುತ್ತಿರುತ್ತಾನೆ. ಕಲ್ಯಾಣ ಸಾಮ್ರಾಜ್ಯದ ವೈರಿಗಳು ಕಲ್ಯಾಣವನ್ನು ಕಬಳಿಸಲು ಸಂಚು ಹೂಡಿ ಸನ್ನದ್ಧರಾಗುತ್ತಾರೆ. ಎರಡನೇ ಸೋಮೇಶ್ವರ ಸ್ವತಃ ತಾನು ದುರ್ಗತಿಯತ್ತ ಧಾವಿಸುವುದರ ಜೊತೆಗೆ ಕಲ್ಯಾಣ ರಾಜ್ಯವನ್ನು ದುರಂತದ ಅಂಚಿಗೆ ಕೊಂಡೊಯ್ಯುತ್ತಾನೆ. ಇನ್ನೇನು, ಕಲ್ಯಾಣ ಕೈತಪ್ಪಿ ಹೋಗುವ ಅಪಾಯ ಎದುರಾದಾಗ ತನ್ನ ತಂದೆಗೆ ನೀಡಿದ ವಚನವನ್ನು ಪಾಲಿಸಲು ವಿಕ್ರಮಾದಿತ್ಯ

ಕಂಕಣ ಬದ್ಧನಾಗುತ್ತಾನೆ. ಕಲ್ಯಾಣ ಶತ್ರುಗಳನ್ನೆಲ್ಲ ಸದೆಬಡಿದು ಅವರೊಂದಿಗೆ ಕೈ ಜೋಡಿಸಿದ ಕಲ್ಯಾಣ ಚಕ್ರವರ್ತಿ ತನ್ನ ಸ್ವಂತ ಸಹೋದರ ಎರಡನೇ ಸೋಮೇಶ್ವರನನ್ನು ಕೂಡ ಅತ್ಯಂತ ಭಾರವಾದ ಹೃದಯದಿಂದ ಎದುರಿಸಲು ಸಿದ್ಧನಾಗುತ್ತಾನೆ.

ದುಷ್ಟ ಸೋಮೇಶ್ವರನಿಂದ ಬಹಿಷ್ಕೃತನಾಗಿಯೇ ಉಳಿದ್ದ ವಿಕ್ರಮ ಮಾರುವೇಷದಲ್ಲಿ ಕಲ್ಯಾಣ ಪ್ರವೇಶಿಸಿ ಅದರ ದುರ್ಗತಿಯನ್ನು ಕಣ್ಣಾರೆ ಕಂಡು ಮಮ್ಮಲನೆ ಮರುಗುತ್ತಾನೆ. ಕಲ್ಯಾಣದ ಅವನತಿಯಿಂದ ಕಂಗೆಟ್ಟಿದ ವಿಕ್ರಮನಿಗೆ ಮುಂದೇನು ಮಾಡುವುದೆಂದು ತೋರುವುದಿಲ್ಲ. ಅಣ್ಣ ಸೋಮೇಶ್ವರ ತನ್ನ ತಾಯಿ ಬಾಚಲಾದೇವಿಯನ್ನು ಕೂಡ ಒಂದು ರೀತಿಯ ಗೃಹ ಬಂಧನಕ್ಕೆ ಈಡು ಮಾಡಿರುತ್ತಾನೆ. ತಾಯಿಯ ಯಾವೊಂದು ಹಿತನುಡಿಯೂ ಕೂಡ ಅಧಿಕಾರದ ಐಶ್ವರ್ಯದ ಮತ್ತಿನಲ್ಲಿ ಮುಳುಗಿ ಹೋಗಿರುವ ಸೋಮೇಶ್ವರನ ಬುದ್ಧಿ ಮತ್ತು ಹೃದಯಗಳಿಗೆ ತಟ್ಟುವುದೇ ಇಲ್ಲ. ತಾಯಿಯ ದುರವಸ್ಥೆಯನ್ನು ಕಂಡು ವಿಕ್ರಮ ವಿಹ್ವಲಗೊಳ್ಳುತ್ತಾನೆ. ಆದರೆ ಪರಿತಾಪದಿಂದ ಪರಿಸ್ಥಿತಿಯನ್ನು ಸುಧಾರಿಸುವ ಹಾಗಿಲ್ಲ. ತಾಯಿಯ ನಂತರ ಕಲ್ಯಾಣದಲ್ಲಿ ತಾನು ಕಾಣಲೇಬೇಕಾಗದ ಮತ್ತೊಬ್ಬ ವ್ಯಕ್ತಿ ಎಂದರೆ ಗುರು ವಿಜ್ಞಾನೇಶ್ವರರು.

ವಿಕ್ರಮನ ಆಗಮನದಿಂದ ವಿಜ್ಞಾನೇಶ್ವರರಿಗೆ ಮಹದಾನಂದವಾಗುತ್ತದೆ. ಪತನದ ಹಾದಿಯಲ್ಲಿದ್ದ ಕಲ್ಯಾಣ ಸಾಮ್ರಾಜ್ಯವನ್ನು ಪುನರ್ ಪ್ರತಿಷ್ಠಾಪಿಸುವ ಕರ್ತವ್ಯದ ಹೊಣೆಯನ್ನು ವಿಕ್ರಮನ ಹೆಗಲಿಗೆ ತೊಡಿಸಲು ಅವರು ಕಾತುರರಾಗಿರುತ್ತಾರೆ. ಎರಡನೇ ಸೋಮೇಶ್ವರನ ಆಡಳಿತದಲ್ಲಿ ಸಜ್ಜನರು, ಸಚ್ಚಾರಿತ್ರವುಳ್ಳವರಾರಿಗೂ ತಮ್ಮ ಪಾತ್ರ ನಿರ್ವಹಿಸುವ ಅವಕಾಶವೇ ಇರುವುದಿಲ್ಲ. ದುಷ್ಟರೂ, ಸಮಾಜ ಘಾತುಕರೂ, ಸ್ವಾರ್ಥ ಸಾಧಕರು ಹಾಗೂ ಹೋಗಳು ಭಟರಿಂದ ನಿರ್ಮಿತವಾದ ಭದ್ರಕೋಟೆಯೊಳಗೆ ಬಂದಿಯಾಗಿರುತ್ತಿದ್ದ ದ್ವಿತೀಯ ಸೋಮೇಶ್ವರ ತನ್ನ ತಂದೆಯ ಪರಮ ಮಿತ್ರರೂ, ರಾಜಗುರುಗಳು, ಶ್ರೇಷ್ಠ ಪಂಡಿತರೂ ಆದ ವಿಜ್ಞಾನೇಶ್ವರರನ್ನು ಸಂಪೂರ್ಣವಾಗಿ ಉಪೇಕ್ಷಿಸಿಬಿಡುತ್ತಾನೆ. ವಿಜ್ಞಾನೇಶ್ವರರು ಅನೇಕ ಸಲ ಅವನನ್ನು ಕಂಡು ಮಾತನಾಡುವ ಅವಕಾಶಕ್ಕಾಗಿ ಪರದಾಡಿ ಸೋತು ಸೂಕ್ತ ಕಾಲಾವಕಾಶದ ನಿರೀಕ್ಷಣೆಯಲ್ಲಿರುತ್ತಾರೆ. ವಿಕ್ರಮನ ಆಗಮನ ಅವರಿಗೆ ಸಹಜವಾಗಿ ಸಂತಸವನ್ನೊಂಟು ಮಾಡುತ್ತದೆ.

ಚಕ್ರವರ್ತಿ ಮೊದಲನೇ ಸೋಮೇಶ್ವರನ ಮರಣಾನಂತರ ರಾಜಕಾರಣದಲ್ಲಿ ಧರ್ಮ ಪರಿಪಾಲನೆಯ ವಿಷಯಗಳಲ್ಲಿ ರಾಜನೊಂದಿಗೆ ಚರ್ಚೆ ನಡೆಸುವ ಆಪ್ತಾಲೋಚನೆಯಲ್ಲಿ ತೊಡಗುವ ಚಟುವಟಿಕೆಯಿಂದ ವಿಜ್ಞಾನೇಶ್ವರರನ್ನು ಪ್ರಜ್ಞಾಪೂರ್ವಕವಾಗಿ, ಬಲವಂತವಾಗಿ ವಿಮುಖಗೊಳಿಸಲಾಗಿರುತ್ತದೆ. ಈ ಸಂದರ್ಭವನ್ನು ಕೂಡ ವಿಜ್ಞಾನೇಶ್ವರರು ಸುವರ್ಣಾವಕಾಶವೆಂದು ಭಾವಿಸಿ

ಯಾಜ್ಞವಲ್ಕ್ಯಸ್ಮೃತಿ ಹಾಗೂ ಇತಗರ ಸ್ಮೃತಿಗಳ ಅಧ್ಯಯನದಲ್ಲಿ ತೊಡಗುತ್ತಾರೆ. ಪ್ರಾಚೀನ ಭಾರತೀಯ ಧರ್ಮಶಾಸ್ತ್ರಗಳ ಸಮಗ್ರ ಅಧ್ಯಯನದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ವಿಜ್ಞಾನೇಶ್ವರರು ಯಾಜ್ಞವಲ್ಕ್ಯ ಸ್ಮೃತಿಗೆ ವ್ಯಾಖ್ಯಾನ ಬರೆಯುವ ತಮ್ಮ ಮಹತ್ವಕಾಂಕ್ಷಿ ಮಿತಾಕ್ಷರ ಕೃತಿ ರನೆ ಕಾರ್ಯದಲ್ಲಿ ಮೊದಲಾಗುತ್ತಾರೆ.

ಕಲ್ಯಾಣ ರಾಜ್ಯವನ್ನು ದುರ್ಗತಿಯಿಂದ ರಕ್ಷಿಸಲು ವಿಜ್ಞಾನೇಶ್ವರರು ಮಾಡಿದ ಪ್ರಯತ್ನಗಳೆಲ್ಲವೂ ವಿಫಲವಾಗಿರುತ್ತವೆ. ಸ್ವತಃ ತಾಯಿಯನ್ನೆ ಧಿಕ್ಕರಿಸಿದ್ದ ಎರಡನೆಯ ಸೋಮೇಶ್ವರ ಗುರುಗಳನ್ನು ಆದರಿಸುತ್ತಾನೆಯೇ? ತಮ್ಮ ಕಣ್ಣೆಎದುರಲ್ಲೆ ಕಲ್ಯಾಣ ಸಾಮ್ರಾಜ್ಯ ಅವನತಿಯತ್ತ ದಾಪುಗಾಲು ಹಾಕುತ್ತಿರುವುದನ್ನು ಕಂಡೂ ಅದನ್ನು ತಪ್ಪಿಸಲು ವಿಜ್ಞಾನೇಶ್ವರರು ಏನನ್ನೂ ಮಾಡುವ ಸ್ಥಿತಿಯಲ್ಲಿರಲಿಲ್ಲ. ಸೋಮೇಶ್ವರನನ್ನು ಕಾಣುವುದೇ ಅವರಿಗೆ ದುಸ್ತರವಾಗಿರುತ್ತದೆ. ಇನ್ನು ಅವನೊಂದಿಗೆ ಮಾತನಾಡುವುದೆಂತು ? ಧರ್ಮಜಾಗೃತಿಯನ್ನುಂಟು ಮಾಡುವ ಮಾತಂತೂ ದೂರವೇ ಉಳಿಯಿತು. ಚಕ್ರವರ್ತಿ ಮೊದಲನೇ ಸೋಮೇಶ್ವರನ ಅಂತರಂಗದ ದನಿಯಾಗಿದ್ದು ಅವನ ಸನ್ಮಾರ್ಗದರ್ಶಕರಾಗಿದ್ದ ವಿಜ್ಞಾನೇಶ್ವರರು ಎರಡನೇ ಸೋಮೇಶ್ವರರನ ಕಾಲದಲ್ಲಿ ಅನಾಸಕ್ತಿ ಯೋಗಕ್ಕೆ ನಿರ್ಲಿಪ್ತ ಧೋರಣೆಗೆ ಕಾಲದ ಬಲವಂತದಿಂದ ಒಳಗಾಗುತ್ತಾರೆ. ಏನಾದರೂ ಮಾಡಿ ಹೇಗಾದರೂ ಮಾಡಿ ಕಲ್ಯಾಣವನ್ನು ಕಾಪಾಡಲೇಬೇಕೆಂಬ ಉತ್ಕಟ ತುಡಿತದಲ್ಲೇ ಅವರು ಕಾಲ ತಳ್ಳುತ್ತಿರುತ್ತಾರೆ. ಎರಡನೇ ಸೋಮೇಶ್ವರನ ಅಧಃಪತನವೇ ಚಾಲುಕ್ಯ ವಂಶದ, ಚಾಲುಕ್ಯ ಸಾಮ್ರಾಜ್ಯದ ಅಧಃಪತನಕ್ಕೆ ಕಾರಣವಾಗದಿರಲೆಂದು ಮೌನದಿಂದಲೇ ಪ್ರಾರ್ಥಿಸುತ್ತಿರುತ್ತಾರೆ.

ವಿಕ್ರಮ ಹಾಗೂ ವಿಜ್ಞಾನೇಶ್ವರರು ಸಾಮ್ರಾಜ್ಯ ರಕ್ಷಣೆಯ ವಿಚಾರವಾಗಿ ದೀರ್ಘ ಸಮಾಲೋಚನೆಯಲ್ಲಿ ತೊಡಗುತ್ತಾರೆ. ತನ್ನ ಅಣ್ಣ ಕಲ್ಯಾಣದಲ್ಲಿ ಏನೆಲ್ಲ ಅನಾಹುತಗಳನ್ನು ಮಾಡಿದ್ದರೂ ಅವನನ್ನು ಸರಿದಾರಿಗೆ ತರುವುದು ಹೇಗೆ ಎಂಬುದನ್ನೇ ವಿಕ್ರಮ ಯೋಚಿಸುತ್ತಾನೆಯೇ ಹೊರತು ಅವನನ್ನು ಪದಚ್ಯುತಗೊಳಿಸಬೇಕೆಂಬ ವಿಚಾರ ಅವನ ಮನಸ್ಸಿನ ಯಾವ ಮೂಲೆಯಲ್ಲಿಯೂ ಇರುವುದಿಲ್ಲ. ಚಾಲುಕ್ಯ ವಂಶವನ್ನು ಚಾಲುಕ್ಯ ಸಾಮ್ರಾಜ್ಯವನ್ನು ಅವನತಿಯಿಂದ ಪಾರುಮಾಡುವ ಉಪಾಯವನ್ನು ಸೂಚಿಸುವಂತೆ ವಿಕ್ರಮ ವಿಜ್ಞಾನೇಶ್ವರರಲ್ಲಿ ಬೇಡುತ್ತಾನೆ.

ಎರಡನೆಯ ಸೋಮೇಶ್ವರನ ದುಷ್ಟಾಟ್ಟಹಾಸದ ಪರಾಕಾಷ್ಠೆಯನ್ನು ಕಂಡಿದ್ದ ವಿಜ್ಞಾನೇಶ್ವರರಿಗೆ ರಾಜನನ್ನು ಸನ್ಮಾರ್ಗಕ್ಕೆ ತರುವ ನಂಬಿಕೆಯಾಗಲೀ, ವಿಶ್ವಾಸವಾಗಲೀ ಉಳಿದಿರುವುದಿಲ್ಲ. ಭಾರತೀಯ ರಾಜನೀತಯ ಚತುರೋಪಾಯಗಳಾದ ಸಾಮೋಪಾಯ, ದಾನೋಪಾಯ, ಭೇದೋಪಾಯ ಹಾಗೂ ದಂಡೋಪಾಯಗಳ ಪೈಕಿ ಕೊನೆಯದನ್ನು ಮಾತ್ರ ಸೋಮೇಶ್ವರನ ಮೇಲೆ ಪ್ರಯೋಗಿಸುವುದು ಅಗತ್ಯವೂ,

ಅನಿವಾರ್ಯವೂ ಎಂಬ ದೃಢ ನಿರ್ಧಾರಕ್ಕೆ ವಿಜ್ಞಾನೇಶ್ವರರು ಆಗಲೇ ಬಂದಿರುತ್ತಾರೆ. ಚಕ್ರವರ್ತಿಯ ಪಾಪದ ಕೊಡ ತುಂಬಿರುವುದರಿಂದ ಐಶ್ವರ್ಯ ಹಾಗೂ ಅಧಿಕಾರದ ಮದದಲ್ಲಿ ಆತನು ಅಂಧನಾಗಿರುವುದರಿಂದ ಯಾವುದೇ ಸದ್ವಿಚಾರ ಅವನ ಬುದ್ಧಿಗೆ, ಮನಸ್ಸಿಗೆ ನಾಟುವ ಸಾಧ್ಯತೆ ಇರಲಿಲ್ಲ.

ಸಾಮೋಪಾಯಕ್ಕೆ ಸೋಮೇಶ್ವರ ಖಂಡಿತ ಒಲಿಯುವವನಲ್ಲ. ದಾನೋಪಾಯ ಪ್ರಯೋಗ ನಿಷ್ಫಲ. ಯಾಕೆಂದರೆ ಸೋಮೇಶ್ವರ ಸ್ವತಃ ರಾಜ. ಇನ್ನು ಭೇದೋಪಾಯ, ಅದರಲ್ಲಿ ಸಾಕ್ಷಾತ್ ಸಾಮ್ರಾಟನೇ ಪ್ರವೀಣ, ಭೇದವನ್ನೊಂಟು ಮಾಡುವುದರಲ್ಲಿ ಅವನನ್ನು ಮೀರಿಸುವವರು ಯಾರು ಇರಲಿಲ್ಲ. ಚೋಳರಲ್ಲಿ ಭೇದವನ್ನೊಂಟು ಮಾಡಿ ಅಧಿರಾಜೇಂದ್ರನನ್ನು ಹತ್ಯೆಗೈಯುವ ಷಡ್ಯಂತ್ರವನ್ನು ರೂಪಿಸಿ ಕುಲೋತ್ತುಂಗ ಚೋಳನನ್ನು ಚೋಳ ಸಿಂಹಾಸನದ ಮೇಲೆ ಕೂರಿಸಿದ್ದಾನೆ ಸೋಮೇಶ್ವರ.

ವಿಕ್ರಮನಿಗಾದರೋ, ಧರ್ಮ ಸಂಕಟ, ತಾನು ಚೋಳೇಂದ್ರ ವೀರರಾಜೇಂದ್ರನ ಅಳಿಯನಾದ ಮೇಲೆ ವಂಶ ಪರಂಪರೆಯಿಂದ ಬಂದಿದ್ದ ಚೋಳ–ಚಾಲುಕ್ಯರ ಹಗೆತನಕ್ಕೆ ಕೊನೆ ಹಾಡಿದಂತಾಗುತ್ತದೆ ಎಂದು ವಿಕ್ರಮ ನಂಬಿದ್ದ. ಆದರೆ ವೀರರಾಜೇಂದ್ರನ ಮರಣದ ನಂತರ ಕಲ್ಯಾಣದ ಸೋಮೇಶ್ವರ, ಚೋಳರಲ್ಲಿ ಭೇದವನ್ನು ಸೃಷ್ಟಿಸಿ ಯುವರಾಜ ಆಧಿರಾಜೇಂದ್ರನನ್ನು ಹತ್ಯೆಗೈಯ್ಯುವಂತೆ ಮಾಡಿ ಚೋಳ ಕುಲೋತ್ತುಂಗನನ್ನು ಚೊಳ ಸಿಂಹಾಸನದ ಮೇಲೆ ಕೂಡಿಸುತ್ತಾನೆ. ತಾನು ಯಾವ ಸದುದ್ದೇಶಕ್ಕಾಗಿ ಚೋಳ ರಾಜಕುಮಾರಿಯ ಪಾಣಿಗ್ರಹಣ ಮಾಡಿದ್ದನೋ ಅದೇ ಇಂದು ಚಾಲುಕ್ಯ ವಂಶಕ್ಕೆ ಮುಳುವಾಗುವಂತೆ ಮಾಡಿದ ತನ್ನ ಅಣ್ಣ ಸೋಮೇಶ್ವರನ ವಿಧ್ವಂಸಕ ನೀತಿಯ ಬಗ್ಗೆ ವಿಕ್ರಮನಿಗೆ ಸಂಕಟವಾಗುತ್ತದೆ. ಅದು ಬರೀ ಸಂಕಟವಷ್ಟೇ ಅಲ್ಲ, ಧರ್ಮಸಂಕಟ ಕೂಡ. ಕುಲೋತ್ತುಂಗ ಚೋಳನನ್ನು ಶಿಕ್ಷಿಸಲು ಹೋದರೆ ಅಣ್ಣ ಸೋಮೇಶ್ವರ ಅಡ್ಡ ಬರುತ್ತಾನೆ. ಅವನನ್ನು ಸಿಕ್ಷಿಸದೇ ಹೋದರೆ ಕಲ್ಯಾಣ ಸಾಮ್ರಾಜ್ಯಕ್ಕೆ ಅಪಾಯ ತಪ್ಪಿದಲ್ಲ. ಆದರೆ ಅಣ್ಣನ ವಿರುದ್ಧ ಹೊರಾಡುವುದಕ್ಕೆ ಅವನ ಮನಸ್ಸು ಹಿಂಜರಿಯುತ್ತದೆ.

ಗುರು ವಿಜ್ಞಾನೇಶ್ವರರಿಗೆ ಸಾಮ್ರಾಜ್ಯದ ಸುರಕ್ಷತೆಯ ಮುಂದೆ ಯಾವೊಂದು ರಕ್ತ ಸಂಬಂಧ, ಭಾವನಾತ್ಮಕ ವಿಚಾರಗಳು ಗೌಣವಾಗಿ ಕಾಣುತ್ತದೆ. ಅಣ್ಣ ಸೋಮೇಶ್ವರನ ಬಣ್ಣ ಬಯಲು ಮಾಡಲಿಕ್ಕಾದರು ವಿಕ್ರಮ, ಚೋಳ ಕುಲೋತ್ತುಂಗನ ಮೇಲೆ ಆಕ್ರಮಣ ಮಾಡಬೇಕೆಂದು ಅವರು ಸೂಚಿಸುತ್ತಾರೆ. ಅಣ್ಣ ಅಡ್ಡ ಬರದಿದ್ದರೆ ಕುಲೋತ್ತುಂಗನನ್ನು ಕೆಳಗಿಳಿಸಿ ತನಗೆ ಬೇಕಾದವರನ್ನು ಸಿಂಹಾಸನದ ಮೇಲೆ ಕೂಡಿಸಬಹುದೆಂದು ವಿಜ್ಞಾನೇಶ್ವರರು ಅಪ್ಪಣೆ ಕೊಡಿಸುತ್ತಾರೆ. ಒಂದು ವೇಳೆ ಅಣ್ಣ ಅಡ್ಡ ಬಂದರೆ ಅವನನ್ನು ಎದುರಿಸಲೇ ಬೇಕೆನ್ನುತ್ತಾರೆ ವಿಜ್ಞಾನೇಶ್ವರರು.

ಆದರೆ ಅಣ್ಣನೊಂದಿಗೆ ಅದರಲ್ಲೂ ಒಡಹುಟ್ಟಿದ ಅಣ್ಣನೊಂದಿಗೆ ಯುದ್ಧ

ಮಾಡುವುದು ವಿಕ್ರಮನಿಗೆ ಬೇಡವಾಗಿರುತ್ತದೆ. ಒಂದು ವೇಳೆ ಅಣ್ಣನನ್ನು ಮಣಿಸದಿದ್ದರೆ ಕಲ್ಯಾಣ ಹಾಗೂ ಚಾಲುಕ್ಯ ಸಾಮ್ರಾಜ್ಯ ಹಾಳಾಗುವುದು ಖಂಡಿತ. ಐಷಾರಾಮಿ ಜೀವನ ಕ್ರಮದಿಂದ ದುರ್ಬಲನಾಗಿರುವ ಸೋಮೇಶ್ವರನನ್ನು ಮಟ್ಟಹಾಕಿ ಕಲ್ಯಾಣವನ್ನು ವಶಪಡಿಸಿಕೊಳ್ಳಲುಕ ಚೋಳರಾದಿಯಾಗಿ ಕಲ್ಯಾಣದ ವೈರಿಗಳೆಲ್ಲ ಕೈಕಲೆಸುವ ಸಾಧ್ಯತೆಯನ್ನು ತಳ್ಳಿಹಾಕುವಂತಿಲ್ಲ. ಕಲ್ಯಾಣವೂ ಉಳಿಯಬೇಕು, ಸೋಮೇಶ್ವರನೂ ಮುಂದುವರೆಯಬೇಕು ಎಂಬ ವಿಕ್ರಮನ ಆಪೇಕ್ಷೆ ಯಾವ ರೀತಿಯಿಂದಲೂ ಕಾರ್ಯಸಾಧುವಾಗಿರಲಿಲ್ಲ.

ವಿಕ್ರಮ ಮಹಾನ್ ಪರಾಕ್ರಮಿ. ಆದರೆ ಯುದ್ಧಭೂಮಿಯಲ್ಲಿ ಅಣ್ಣನ್ನುಇ ಎದುರಿಸುವ ಕಲ್ಪನೆಯಿಂದ ಅವನು ಮಾನಸಿಕವಾಗಿ ಕುಗ್ಗುತ್ತಾನೆ. ಮಾನಸಿಕ ಕ್ಷೋಭೆಗೆ ಒಳಗಾಗುತ್ತಾನೆ. ಇಂತಹ ಸೂಕ್ಷ್ಮ ಹಾಗೂ ಸಂಕೀರ್ಣ ಸಂದರ್ಭದಲ್ಲಿ ವಿಜ್ಞಾನೇಶ್ವರರ ಪಾತ್ರ ಅತ್ಯಂತ ನಿರ್ಣಯತ್ಮಕವಾಗುತ್ತದೆ. ವಿಜ್ಞಾನೇಶ್ವರರು ವಿಕ್ರಮಾದಿತ್ಯನಿಗೆ ಅಣ್ಣನ ವಿರುದ್ಧ ಯುದ್ಧಕ್ಕೆ ಸನ್ನಧರಾಗಲು ತಿಳಿಸಿರುತ್ತಾರೆ. ಅಣ್ಣನನ್ನು ಸರಿ ದಾರಿಗೆ ತರಲು ಕಲ್ಯಾಣವನ್ನು ಕಾಪಾಡಲು ದಂಡೋಪಾಯವೊಂದೇ ತನ್ನ ಪಾಲಿಗೆ ಬಂದಿರುವುದಕ್ಕೆ ವಿಕ್ರಮ ವ್ಯಥೆ ಪಡುತ್ತಾನೆ. ಆದರೆ ವಿಜ್ಞಾನೇಶ್ವರರ ನೈತಿಕ ಹಾಗೂ ಅಧ್ಯಾತ್ಮಿಕ ಪ್ರೇರಣೆಯಿಂದಾಗಿ ವಿಕ್ರಮ ಅನಿವಾರ್ಯ ಕಾರ್ಯಕ್ಕೆ ಕೈಹಾಕಿ ಚಾಲುಕ್ಯ ಸಾಮ್ರಾಜ್ಯವನ್ನು ಒಂದು ಖಚಿತವಾದ ಅಧೋಗತಿಯಿಂದ ಉಳಿಸುತ್ತಾನೆ.

ಕಲ್ಯಾಣದ ಜನ ನಿಟ್ಟುಸಿರು ಬಿಡುತ್ತಾರೆ. ಎಲ್ಲಡೆ ಹರ್ಷ, ಸಂತೋಷ, ಶಾತಿ, ನೆಮ್ಮದಿ ನೆಲೆಗೊಳ್ಳುತ್ತದೆ. ವಿವಕ್ರಮಾದಿತ್ಯ ಭರತ ವರ್ಷ ಕಂಡ ಅತ್ಯಂತ ಬಲಿಷ್ಠ ಜನಾನುರಾಗಿ ಚಕ್ರವರ್ತಿಗಳ ವಿರಳ ಪಂಕ್ತಿಗೆ ಸೇರುತ್ತಾನೆ. ಆತನ ಆಳ್ವಿಕೆಯಲ್ಲಿ ಸಾಹಿತ್ಯ, ಸಂಸ್ಕೃತಿ, ಕಲೆಗಳು ತಮ್ಮ ಉಚ್ಛ್ರಾಯ ಸ್ಥಿತಿಯನ್ನು ಕಂಡುಕೊಳ್ಳುತ್ತವೆ. ಪಂಡಿತರು, ಸಜ್ಜನರು, ವಿವೇಕಿಗಳು ಅಧಿಕಾರದ ಎಲ್ಲ ವಲಯಗಳಲ್ಲಿ ಪ್ರಮುಖ ಸ್ಥಾನಗಳನ್ನು ಅಲಂಕರಿಸುತ್ತಾರೆ. ಅಂತೆಯೇ ಭಾರತದ ಇತಿಯಹಾಸದಲ್ಲಿ ವಿಕ್ರಮಾದಿತ್ಯನ ರಾಜ್ಯಭಾರವನ್ನು ಸುವರ್ಣಯುಗ ಎಂದು ಕರೆದರೂ ಉತ್ಪ್ರೇಕ್ಷೆ ಆಗಲಾರದು.

ಈ ಸುವರ್ಣ ಯುಗದ ಸಂಸ್ಥಾಪನೆಯ ಹಿಂದಿನ ಕರ್ತೃತ್ವ ಶಕ್ತಿ, ನೈತಿಕಬಲ, ಅಧ್ಯಾತ್ಮಿಕ ಸ್ಥೈರ್ಯವೆಂದರೆ ವಿಜ್ಞಾನೇಶ್ವರರು. ಈ ಯುಗದಲ್ಲೇ ವಿಜ್ಞಾನೇಶ್ವರರು ಮಿತಾಕ್ಷರ ಕೃತಿ ರಚನೆ ಮಾಡಿ, ಸಾರ್ವಕಾಲಿಕ ಶ್ರೇಷ್ಠರಾಗಿ ಇತಿಹಾಸ ಎಂದೆಂದೂ ಮರೆಯದ ಮಹಾನುಭಾವರಾಗಿ ಮೈದಳೆಯುತ್ತಾರೆ.

ಸ್ವತಃ ಪ್ರತಿಭಾಸಂಪನ್ನರೂ, ಪಾಂಡಿತ್ಯ ಪ್ರವೀಣರೂ ಆಗಿದ್ದ ವಿಜ್ಞಾನೇಶ್ವರರು ಇತರರ ಪ್ರತಿಭೆ, ಪಾಂಡಿತ್ಯಗಳನ್ನು ಅತ್ಯಂತ ಗೌರವಾದರಗಳಿಂದ ಕಾಣುತ್ತಿದ್ದರು. ಪಂಡಿತರಲ್ಲಿ ಸಾಮಾನ್ಯವಾಗಿ ಮನೆಮಾಡುವ ಗರ್ವ, ಅಹಂಕಾರ, ಮೇಲರಿಮೆ, ಇತರರನ್ನು ತುಚ್ಛವಾಗಿ ಕಾಣುವ ಪ್ರವೃತ್ತಿ ಎಲ್ಲವುಗಳಿಂದ ಮುಕ್ತರಾಗಿದ್ದ ವಿಜ್ಞಾನೇಶ್ವರರು

ಗುಣಕ್ಕೆ ಮತ್ಸರವಿಲ್ಲ ಎಂಬ ಉಕ್ತಿಯನ್ನು ಸಾರ್ಥಕಗೊಳಿಸಿದವರು.

ಅತ್ಯಂತ ಗೌರವರ್ಣದ ವ್ಯಕ್ತಿಯೊಬ್ಬ ಒಂದು ಬಾರಿ ವಿಜ್ಞಾನೇಶ್ವರರನ್ನು ಕಾಣಲು ಬರುತ್ತಾನೆ. ಅವನ ಭೌತಿಕ ವ್ಯಕ್ತಿತ್ವವೇ ಅವನು ಕಲ್ಯಾಣ ನಾಡಿನವನಲ್ಲ ಎಂದು ಸಾರಿ ಹೇಳುತ್ತದೆ. ಗುರು ವಿಜ್ಞಾನೇಶ್ವರರನ್ನು ಹುಡುಕಿಕೊಂಡು ಬರುವ ವ್ಯಕ್ತಿ ತನ್ನ ಪರಿಚಯ ಮಾಡಿಕೊಳ್ಳುತ್ತಾನೆ. ಆಗಮಿಸಿದ ಆಗಂತುಕ ಬೇರಾರೂ ಆಗಿರದೆ ಸಾಕಷ್ಟು ಹೆಸರು ಮಾಡಿದ್ದ ಕಾಶ್ಮೀರದ ಕವಿ ಬಿಲ್ಹಣ.

ಭೋಲೋಕದ ಸ್ವರ್ಗವೆಂದು ಖ್ಯಾತವಾಗಿದ್ದರೂ ಕಾಶ್ಮೀರದಲ್ಲಿ ಬಡತನ ತಾಂಡವವಾಡುತ್ತಿರುತ್ತದೆ. ಕಲ್ಯಾಣದ ಚಕ್ರವರ್ತಿ ವಿಕ್ರಮಾದಿತ್ಯನ ಕೀರ್ತಿ ಅದಾಗಲೇ ಕಾಶ್ಮೀರಕ್ಕೆ ಹರಡಿರುತ್ತದೆ. ವಿಕ್ರಮಾದಿತ್ಯ ಕವಿಕುಲಾರಾಧಕ ಎಂಬ ವಿಷಯವನ್ನು ಬಿಲ್ಹಣ ಕೇಳಿರಲು ಸಾಕು. ಆದರೆ ವಿಕ್ರಮಾದಿತ್ಯನ ವಶಸ್ಸಿನ ಹಿಂದೆ ಅವನ ಕೀರ್ತಿ ಕಲಶದ ಬುನಾದಿ ಗುರು ವಿಜ್ಞಾನೇಶ್ವರ ಎಂಬುದು ಬಿಲ್ಹಣನಿಗೆ ಗೊತ್ತಿಲ್ಲದ ವಿಷಯವೇನಲ್ಲ.

ವಿಜ್ಞಾನೇಶ್ವರರ ಅಸಾಮಾನ್ಯ ಪಾಂಡಿತ್ಯ ಪ್ರತಿಭೆಗಳಿಗೆ ಬಿಲ್ಹಣ ಮಾರು ಹೋಗುತ್ತಿರುತ್ತಾರೆ. ರಾಜಾಶ್ರಯಕ್ಕಾಗಿ ಅನೇಕ ಕಡೆಗಳಲ್ಲಿ ತಿರುಗಿ ಸೂಕ್ತ ಆಶ್ರಯ ದೊರಕದೇ ಇದ್ದಾಗ ಬಿಲ್ಹಣನಿಗೆ ಕಲ್ಯಾಣದ ನೆನಪಾಗುತ್ತದೆ. ಕಲ್ಯಾಣದ ಕೀರ್ತಿ, ವೈಭವಗಳಿಂದ ಪ್ರಭಾವಿತನಾದ ಬಿಲ್ಹಣ ಕವಿ ರಾಜಾಶ್ರಯ ಯಾಚಿಸಿ ಕಲ್ಯಾಣಕ್ಕೆ ಆಗಮಿಸುತ್ತಾನೆ. ಆದರೆ ಆತ ನೇರವಾಗಿ ಚಕ್ರವರ್ತಿಯ ಬಳಿ ಹೋಗುವುದಿಲ್ಲ. ವಿಜ್ಞಾನೇಶ್ವರರಲ್ಲಿ ಪೂಜ್ಯಭಾವನೆ ತಾಳಿದ್ದ ಬಿಲ್ಹಣ ನೇರವಾಗಿ ಕಾಣಲು ಬಂದದ್ದು ಅವರನ್ನೇ. ವಿಜ್ಞಾನೇಶ್ವರರಿಂದಲೇ ತನ್ನ ಕಾವ್ಯಕಮಲ ವಿಕ್ರಮಾದಿತ್ಯನ ಆಸ್ಥಾನದಲ್ಲಿ ಅರಳಲು ಸಾಧ್ಯ ಎಂಬುದನ್ನು ಬಿಲ್ಹಣ ಮನಗಂಡಿರುತ್ತಾನೆ.

ವಿಜ್ಞಾನೇಶ್ವರಿಗಾದರೋ ಬಿಲ್ಹಣ ಕವಿ ರಾಜಾಶ್ರಯ ಬಯಸಿ ಕಲ್ಯಾಣಕ್ಕೆ ಆಗಮಿಸಿದ್ದು ಅಪಾರ ಸಂತೋಷವನ್ನುಂಟು ಮಾಡುತ್ತದೆ. ವಿಕ್ರಮನ ಒಡ್ಡೋಲಗದಲ್ಲಿ ಖಾಲಿಯೇ ಇದ್ದ ಆಸ್ಥಾನ ಕವಿಯ ಸ್ಥಾನವನ್ನು ತುಂಬಲು ಬಿಲ್ಹಣ ಅತ್ಯಂತ ಯೋಗ್ಯ ವ್ಯಕ್ತಿ ಎಂಬುದನ್ನು ಆತನ ಕಾವ್ಯ ಪಾಂಡಿತ್ಯವನ್ನು ಮನದಟ್ಟು ಮಾಡಿಕೊಂಡ ವಿಜ್ಞಾನೇಶ್ವರರು ಭಾವಿಸುತ್ತಾರೆ. ಬಿಲ್ಹಣನಿಗೆ ಆದರದಿಂದ ಬರಮಾಡಿಕೊಂಡು ಚಕ್ರರ್ತಿವಿಕ್ರಮಾದಿತ್ಯನಿಗೆ ಪರಿಚಯ ಮಾಡಿಕೊಡುತ್ತಾರೆ. ತನ್ನ ಅಪ್ರತಿಮ ಕಾವ್ಯ ರಚನಾ ಪ್ರತಿಭೆಯಿಂದ ಬಿಲ್ಹಣ ಕವಿ ವಿಕ್ರಮಾದಿತ್ಯ ಮತ್ತು ವಿಜ್ಞಾನೇಶ್ವರರ ಮೇಲೆ ವಿಶೇಷ ಪ್ರಭಾವ ಬೀರುತ್ತಾರೆ.

ಬಿಲ್ಹಣನ ಆಶುಕಾವ್ಯ ಪ್ರತಿಭೆಯಿಂದ ಇಡೀ ಸಭಾಸದನ ನಿಬ್ಬರಗಾಗುತ್ತದೆ. ಸಾಮ್ರಾಟ್ ವಿಕ್ರಮಾದಿತ್ಯನಂತೂ ಆನಂದ ತುಲಿತನಾಗಿ ಬಿಲ್ಹಣನನ್ನು ಬರಮಾಡಿಕೊಂಡು ಆತನನ್ನು ವರಕವಿ ಎಂಬು ಸಂಬೋಧಿಸಿ ಆಸ್ಥಾನ ಕವಿಯೆಂಬುದಾಗಿ ಘೋಷಿಸುತ್ತಾನೆ. ತನ್ನ ಪಕ್ಕದಲ್ಲೆ ಬಿಲ್ಹಣನಿಗೆ ಆಸನದ ವ್ಯವಸ್ಥೆಯನ್ನು

ಮಾಡುತ್ತಾನೆ.

ಮಿತಾಕ್ಷರವಿಲ್ಲದ ಹಿಂದು ನ್ಯಾಯಶಾಸ್ತ್ರ ಭಾರತೀಯ ನ್ಯಾಯ ಪದ್ಧತಿಯ ಬೆಳವಣಿಗೆ ಊಹಿಸುವುದು ಕಷ್ಟ ಇಂದಿಗೂ ಯಾವುದೇ ಧರ್ಮಸೂಕ್ಷ್ಮದ ಸಂಘರ್ಷ ಏರ್ಪಟ್ಟಾಗ, ವಿಷಯಗಳ ಪ್ರತಿಪಾದನೆಯಲ್ಲಿ ಅರ್ಥೈಸುವಲ್ಲಿ ಗೊಂದ ಉಂಟಾದಾಗ ಭಾರತದ ಸುಪ್ರೀಂ ಕೋರ್ಟ ಮೊಲೆ ಹೋಗುವುದು ಮೀತಾಕ್ಷಕ್ಕೆ. ತನ್ನ ಜನಪರ ಕಾಳಜಿ, ಪ್ರಗತಿಪತ ಧೋರಣೆಯಿಂದಾಗಿ, ಸಂಕೀರ್ಣ ವಿಷಯಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ, ಮನವರಿಕೆಯಾಗುವಂತೆ ವ್ಯಾಖ್ಯಾನಿಸುವ ವಿಶೇಷ ಕೌಶಲದಿಂದಾಗಿಯೇ ಮಿತಾಕ್ಷರ ಭಾರತೀಯ ನ್ಯಾಯಶಾಸ್ತ್ರಕ್ಕೆ ಅಸ್ತಿವಾರ ಹಾಕಲು ಕಾರಣವಾಯಿತು. ಹಿಂದು ನ್ಯಾಯ ವ್ಯವಸ್ಥೆ ಧಾರ್ಮಿಕ ಮೂಲಭೂತ ಕಟ್ಟಳೆಗಳಲ್ಲಿ ನರಳುತ್ತಿದ್ದಾಗ ಅದನ್ನು ವೈಜ್ಞಾನಿಕವಾಗಿ , ತಾರ್ಕಿಕವಾಗಿ, ಮಾನವೀಯ ಮೌಲ್ಯಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿ ಭಾರತದಾದ್ಯಂತ ಸರ್ವಮಾನ್ಯಗುವಂತೆ ಮಾಡಿದ ಶ್ರೇಯಸ್ಸು ಮಿತಾಕ್ಷರಕ್ಕೆ ಸಲ್ಲುತ್ತದೆ.

ಭಾರತೀಯ ಸಾಮಾಜಿಕ, ರಾಜಕೀಯ, ನ್ಯಾಯಿಕ ಪದ್ಧತಿಯನ್ನು ಮಾನವೀಯ ನೆಲೆಗಟ್ಟಿನಲ್ಲಿ ವ್ಯಾಖ್ಯಾನಿಸುವ ಅತ್ಯಂತ ಮಹತ್ವದ ಸ್ಮೃತಿ. ರಾಜ್ಯಾಂಗ, ಕಾರ್ಯಾಂಗ, ನ್ಯಾಯಾಂಗ ಹೇಗೆ ಜನಪರವಾಗಿರಬೇಕೆಂಬುದನ್ನು ಅದು ಸಾರುತ್ತದೆ. ಸಾಮಾಜಿಕ ವ್ಯವಸ್ಥೆಯನ್ನು ಕಾಪಾಡಿಕೊಂಡು ಬರಲು ಯಾಜ್ಞವಲ್ಕ್ಯಸ್ಮೃತಿ ಎಲ್ಲ ಅಗತ್ಯ ಅಂಶಗಳನ್ನು, ಹಕ್ಕುಗಳನ್ನು ಕರ್ತವ್ಯಗಳನ್ನು ಜವಾಬ್ದಾರಿಗಳನ್ನು ಪ್ರತಿಪಾದಿಸುತ್ತದೆ. ಆಚಾರ, ವಿಚಾರ, ವ್ಯವಹಾರ, ಧಾರ್ಮಿಕ, ನಡವಳಿಕೆ, ಪ್ರಯಶ್ಚಿತ್ತ ಮಾಲಕ, ನೌಕರ ಸಂಬಂಧ, ತೆರಿಗೆ ಪದ್ಧತಿ, ಮದುವೆ ಮುಂಜಿ ಇತ್ಯಾದಿ ಸಾಮಾಜಿಕ ವಿಧಿ-ವಿಧಾನಗಳು, ಒಂದೇ ಎರಡೇ, ಹಲವು ಹತ್ತು ಸಂಗತಿಗಳನ್ನು ಅತ್ಯಂತ ಮೌಲಿಕವಾಗಿ ಸರ್ವರಿಗೂ ಸಮ್ಮತವಾಗುವ ರೀತಿಯಲ್ಲಿ ಯಾಜ್ಞವಲ್ಕ್ಯಸ್ಮೃತಿ ಪ್ರತಿಪಾದಿಸುತ್ತದೆ.

ಯೋಗೀಶ್ವರ ಯಾಜ್ಞವಲ್ಕ್ಯ ಮುನಿಗಳು ಸ್ಮೃತಿಕಾರರ ಸಾಲಿನಲ್ಲಿ ಅಗ್ರಗಣ್ಯರು. ಈ ಜಗತ್ತು ಕಂಡ ಅಪರೂಪದ ತತ್ವಜ್ಞಾನಿ ಹಾಗೂ ದಾರ್ಶನಿಕರು. ಯಾಜ್ಞವಲ್ಕ್ಯಸ್ಮೃತಿ ಪ್ರತಿಪಾದಿಸುತ್ತದೆ.

ಯೋಗೀಶ್ವರ ಯಾಜ್ಞವಲ್ಕ್ಯ ಮುನಿಗಳು ಸ್ಮೃತಿಕಾರರ ಸಾಲಿನಲ್ಲಿ ಅಗ್ರಗಣ್ಯರು. ಈ ಜಗತ್ತು ಕಂಡ ಅಪರೂಪದ ತತ್ವಜ್ಞಾನಿ ಹಾಗೂ ದಾರ್ಶನಿಕರು. ಯಾಜ್ಞವಲ್ಕ್ಯರು ಚತುರ್ವೇದ ಪಂಡಿತರಷ್ಟೆ ಅಲ್ಲ, ಯೋಗಶಾಸ್ತ್ರ ಪ್ರವೀಣರೂ, ಸ್ಮೃತಿಕಾರರೂ ಆಗಿದ್ದಾರೆ. ಗುರು ವೈಶಂಪಾಯನರಲ್ಲಿ ಯಜುರ್ವೇದ ಅಭ್ಯಾಸ ಮಾಡಿದ ಯಾಜ್ಞವಲ್ಕ್ಯರು ವಿಶ್ವಕ್ಕೆ ನೀಡಿದ ಅಧ್ಯಾತ್ಮಿಕ ಕೊಡುಗೆ ಅಪಾರವಾಗಿದೆ.

ಯಜ್ಞವಲ್ಕ್ಯರ ಜೀವಿತ ಕಾಲವನ್ನು ನಿಖರವಾಗಿ ನಿರ್ಧರಿಸಲು ಸಾಧ್ಯವಾಗಿಲ್ಲವಾದರೂ ಸ್ಮೃತಿ ರಚನೆಯ ಕಾಲ ಕ್ರಿ.ಶ 100 ಎಂದು ಹಲವು

ಸಂಶೋಧಕರು ಅಭಿಪ್ರಾಯ ಪಡುತ್ತಾರೆ. ಯಾಜ್ಞವಲ್ಕ್ಯ ಸ್ಮೃತಿಯಲ್ಲಿನ ವಾಕ್ಯಗಳು ಹತ್ತು ಮತ್ತು ಹನ್ನೊಂದನೆಯ ಶತಮಾನಗಳಲ್ಲಿ ಭಾರತದ ಅನೇಕ ಶಿಲಾಶಾಸನಗಳಲ್ಲಿ ಕಂಡುಬಂದಿರುವುದರಿಂದ ಹತ್ತನೆಯ ಶತಮಾನದ ಆಚೆ ನೂರಾರು ವರ್ಷಗಳಿಗೂ ಮುಂಚಿನ ಕೃತಿ ಯಾಜ್ಞವಲ್ಕ್ಯ ಸ್ಮೃತಿಯಾಗಿರಬಹುದೆಂದು ಸಂಶೋಧಕರು ಅಭಿಪ್ರಾಯ ಪಡುತ್ತಾರೆ. ಸ್ಮೃತಿಯ ಕೆಲವು ಭಾಗಗಳು ಪಂಚತಂತ್ರದಲ್ಲೂ ಕಾಣಸಿಗುವುದರಿಂದ ಯಾಜ್ಞವಲ್ಕ್ಯಸ್ಮೃತಿಯ ರಚನೆ ಐದನೆಯ ಶತಮಾನಕ್ಕಿಂತಲೂ ಮುಂಚೆಯೇ ಆಗಿರಲಿಕ್ಕೆ ಸಾಧ್ಯವೆಂದು ದೃಢವಾಗಿ ನಂಬಲಾಗಿದೆ. ಮನುಸ್ಮೃತಿಗೆ ಹೋಲಿಸಿದ್ದಲ್ಲಿ ಯಾಜ್ಞವಲ್ಕ್ಯಸ್ಮೃತಿಯು ಸಂಕ್ಷಿಪ್ತವೂ, ವೈಜ್ಞಾನಿಕವೂ ಮತ್ತು ಪ್ರಾಯೋಗಿಕವೂ ಆಗಿದೆ.

ಮಾನವೀಯ ಸ್ಪಂದನೆಯ ಯಾಜ್ಞವಲ್ಕ್ಯಸ್ಮೃತಿಗೆ ವಿಜ್ಞಾನೇಶ್ವರ ಮಾರು ಹೋಗಿ, ವಿಜ್ಞಾನೇಶ್ವರ ಎಲ್ಲ ಸ್ಮೃತಿಗಳನ್ನು ಅಧ್ಯಯನ ಮಾಡಿ ಅವುಗಳ ಸಾರವನ್ನು ಅರಿತವನಾಗಿದ್ದು, ಅವುಗಳೆಲ್ಲದರ ಪೈಕಿ ಹೃದಯಕ್ಕೆ, ಮನಸ್ಸಿಗೆ, ಬುದ್ಧಿಗೆ ಅತಿಯಾಗಿ ತಾತಕಿದ್ದೆಂದರೆ ಯಾಜ್ಞವಲ್ಕ್ಯ ಸ್ಮೃತಿ. ಇಂತಹ ಅಮೋಘವಾದ ಧಾರ್ಮಶಾಸ್ತ್ರಕ್ಕೆ ವಿಜ್ಞಾನೇಶ್ವರ ಬರೆದ ಅಮೋಘ ವ್ಯಾಖ್ಯಾನವೇ "ಮಿತಾಕ್ಷರ". ಧರ್ಮಸೂಕ್ಷ್ಮಗಳನ್ನು ಮತ್ತು ಧರ್ಮಸಮ್ಮತವಾದ, ಮಾನವೀಯ ಮಿಡಿತಗಳಿಗೆ ಸ್ಪಂದಿಸುವ ನ್ಯಾಯವಿಧಾನ, ವ್ಯವಸ್ಥೆಯನ್ನು ಸಂಕ್ಷಿಪ್ತವಾಗಿ ಸಮಗ್ರವಾಗಿ ಮತ್ತು ಸುಂದರವಾಗಿ ಚಿತ್ರಿಸುವ ಮಿತಾಕ್ಷರ ಬಂಗಾಲ ಪ್ರಾಂತವೊಂದನ್ನು ಹೊರತುಪಡಿಸಿ ಭಾರತಾದ್ಯಾಂತ ಪ್ರಚಲಿತದಲ್ಲಿದ್ದು, ಮಾನ್ಯತೆಯನ್ನು ಪಡೆದಿದೆ. ಬಂಗಾಲದಲ್ಲಿ ಮಾತ್ರ ಜೀಮೂತ ವಾಹನನ 'ದಾಯಭಾಗ' ಚಲಾವಣೆಯಲ್ಲಿದ್ದು ಅದು ಮುಖ್ಯವಾಗಿ ಆಸ್ತಿ ವಿಭಜನೆ ಮತ್ತು ವಾರಸುದಾರಿಕೆಗೆ ಸಂಬಂಧಿಸಿದ ನ್ಯಾಯ ಶಾಸ್ತ್ರಗ್ರಂಥವಾಗಿದೆ.

ಮಿತಾಕ್ಷರ ಯಾಜ್ಞವಲ್ಕ್ಯಸ್ಮೃತಿಯ ವ್ಯಾಖ್ಯಾನವಾಗಿದೆ. ಧರ್ಮಶಾಸ್ತ್ರಗಳಿಗೆ ಅನೇಕ ನಿಬಂಧಗಳನ್ನು ಬರೆಯಲಾಗಿದ್ದರೂ, ಅವುಗಳಲ್ಲಿ ಕೆಲವು ಮಾತ್ರ ಮಹತ್ವದ ಸ್ಥಾನ ಪಡೆದಿದ್ದು, ಸಮಾಜ ಒಪ್ಪಿ ಅನುಸರಿಸಿಕೊಂಡು ಬಂದಿದ್ದಷ್ಟೇ ಅಲ್ಲ, ಭಾರತದ ನ್ಯಾಯಾಲಯಗಳು ಪ್ರಾಚೀನ ಕಾಲದಲ್ಲಿಯೂ ಮತ್ತು ಆಧುನಿಕ ಯುಗದಲ್ಲಿಯೂ ಅವುಗಳನ್ನು ವ್ಯಾಪಕ ರೀತಿಯಲ್ಲಿ ಅನುಷ್ಠಾನಗೊಳಿಸಿವೆ. ಅಂತಹ ಕೆಲವು ಮಹತ್ವಪೂರ್ಣ ವ್ಯಾಖ್ಯಾನಗಳೆಂದರೆ,

1. ವಿಜ್ಞಾನೇಶ್ವರನ 'ಮಿತಾಕ್ಷರ'
2. ಜೀಮೂತವಾಹನನ 'ದಾಯಭಾಗ'
3. ದೇವಣ್ಣಭಟ್ಟನ 'ಸ್ಮೃತಿ ಚಂದ್ರಿಕಾ'
4. ಚಂದೇಶ್ವರನ 'ವಿವಾದ ರತ್ನಾಕರ'
5. ಮಾಧವಾಚಾರ್ಯರ 'ಪರಾಶರ ಮಾಧವೀಯ'

6. ವಾಚಸ್ಪತಿ ಮಿಶ್ರನ 'ವಿವಾದ ಚಿಂತಾಮಣಿ'
7. ಲಕ್ಷ್ಮೀದೇವಿಯ 'ವಿವಾದ ಚಂದ್ರ'
8. ಪ್ರತಾಪರುದ್ರದೇವನ 'ಸರಸ್ವತಿ ವಿಲಾಸ'
9. ರಘುನಂದನನ 'ದಾಯತತ್ವ'
10. ವರದರಾಜರ 'ವ್ಯವಹಾರ ನಿರ್ಣಯ'
11. ನೀಲಕಂಠಭಟ್ಟನ 'ವ್ಯವಹಾರ ಮಯೂಖ'
12. ಮಿತ್ರಮಿತ್ರನ 'ವೀರಮಿತ್ರೋದಯ'
13. ಕಮಲಾಕರನ 'ನಿರ್ಣಯ ಸಿಂಧು'
14. ಅಪರಾರ್ಕನ 'ಯಾಜ್ಞವಲ್ಕ್ಯಧಾರ್ಮಶಾಸ್ತ್ರ'
15. ನಂದಪಂಡಿತನ 'ದತ್ತಕ ಮೀಮಾಂಸ'
16. ಕುಬೇರನ 'ದತ್ತಕ ಚಂದ್ರಿಕಾ'
17. ಶ್ರೀಕೃಷ್ಣ ತರ್ಕಾಲಂಕಾರನ 'ದಾಯಕರ್ಮ ಸಂಗ್ರಹ'

ಈ ವ್ಯಾಖ್ಯಾನಗಳ ಪೈಕಿ ಹಲವು ಭಾರತದ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಅಥವಾ ಒಂದಕ್ಕಿಂತ ಹೆಚ್ಚಿನ ಪ್ರದೇಶದಲ್ಲಿ ಜಾರಿಯಲ್ಲಿದ್ದವು. ಮಾನ್ಯತೆ ಪಡೆದಿದ್ದವು. ಆದರೆ ಭಾರತದ ತುಂಬೆಲ್ಲ ಜಾರಿಯಲ್ಲಿ, ಬಳಕೆಯಲ್ಲಿದ್ದ ಏಕೈಕ ಧರ್ಮಶಾಸ್ತ್ರ ನಿಬಂಧವೆಂದರೆ ವಿಜ್ಞಾನೇಶ್ವರನ 'ಮಿತಾಕ್ಷರ'.

ಒಂದು ವಿಷಯವನ್ನು ಹತ್ತಾರು ಕ್ರಮಗಳಿಂದ ವ್ಯಾಖ್ಯಾನಿಸುತ್ತ ವಿಶ್ಲೇಷಿಸುತ್ತ ನೂರಾರು ಪುಟಗಳಲ್ಲಿ ಹೇಳಿ, ಕೊನೆಗೆ ಏನನ್ನೂ ಹೇಳದಿರುವಷ್ಟು ಸಂಕೀರ್ಣವೂ, ಜಟಿಲವೂ ಮಾಡುವಂತಹ ಆಧುನಿಕ ನ್ಯಾಯವೇತ್ತರ ನಿದರ್ಶನಗಳಿಗೆ ಕೊರತೆ ಏನಿಲ್ಲ. ಆದರೆ ವಿಜ್ಞಾನೇಶ್ವರ ಅತ್ಯಂತ ಕ್ಲಿಷ್ಟದಾಯಕ ವಿಷಯಗಳನ್ನು ಅತ್ಯಂತ ಸುಲಭವಾಗಿ, ಸಂಕ್ಷಿಪ್ತವಾಗಿ, ಸರ್ವಮಾನ್ಯವಾಗಿ ಹೇಳುವ ಕಲೆಯನ್ನು ಕರಗತ ಮಾಡಿಕೊಂಡಿದ್ದನೆಂದು ಕಾಣುತ್ತದೆ. ಸುಮಾರು ಒಂದು ಸಹಸ್ರಮಾನದ ಅನಂತರವೂ ಮಿತಾಕ್ಷರ ತನ್ನ ಪ್ರಸ್ತುತತೆಯನ್ನು ಮಹತ್ವವನ್ನು ಕಾಪಾಡಿಕೊಂಡು ಬಂದಿರುವುದಕ್ಕೆ ಮೂಲ ಕಾರಣವೆಂದರೆ ವಿಜ್ಞಾನೇಶ್ವರ ಪ್ರತಿಪಾದಿಸುವ ನ್ಯಾಯನಿರ್ಣಯವು ಗಟ್ಟಿಯಾದ ಮಾನವೀಯ ನೆಲೆಗಟ್ಟಿನ ಮೇಲೆ ನಿಂತಿರುವುದೇ ಆಗಿದೆ. ತನ್ನ ಜನಪರ ಕಾಳಜಿ ಪ್ರಗತಿಪರ ಧೋರಣೆಯಿಂದಾಗಿ ಇಪ್ಪತ್ತೊಂದನೆ ಶತಮಾನದ ಅತ್ಯಾಧುನಿಕ ವಿಜ್ಞಾನ ಯುಗದಲ್ಲೂ ಮಿತಾಕ್ಷರ ಪ್ರಾರಸಂಗಿಕವಾಗಿ ಉಳಿದುಕೊಂಡು ಬರಲು ಸಾಧ್ಯವಾಗಿದೆ.

ದಾಯಭಾಗದ ಪ್ರಕಾರ ತಂದೆ ಸಾಯುವವರೆಗೆ ಪಿತ್ರಾರ್ಜಿತ ಆಸ್ತಿಯಲ್ಲಿ

ಮಗನಿಗೆ ಯಾವುದೇ ಹಕ್ಕು ಪ್ರಾಪ್ತವಾಗುವುದಿಲ್ಲ. ತಂದೆಯ ಮರಣಾನದಂವರವಷ್ಟೆ ಆಸ್ತಿಯ ವಿಭಜನೆ. ಪಾಲುದಾರಿಕೆ ಸಾಧ್ಯ. ಆದರೆ ಮಿತಾಕ್ಷರದಲ್ಲಿ ತಂದೆ ಬದುಕಿರುವಾಗಲೇ ಮಗನಿಗೆ ಪುರ್ವಜರ ಆಸ್ತಿಯ ಮೇಲಿನ ಹಕ್ಕು ಜನ್ಮತಃ ಬರುತ್ತದೆ.

ದೇಶದ ಬೇರೆ ಬೇರೆ ಭಾಗಗಳಲ್ಲಿ, ಸಾಮಾಜಿಕ ಬದಲಾವಣೆಗಳಿಗೆ ಅನುಗುಣವಾಗಿ ಮತ್ತು ಅದಕ್ಕೆ ಪೂರಕವಾಗಿ ಜಾರಿಯಲ್ಲಿದ್ದ ಸಂಪ್ರದಾಯ ರೂಢಿ ಆಚರಣೆಗಳಿಗೆ ತಕ್ಕಂತೆ ಸ್ಥಳೀಯ ಅವಶ್ಯಕತೆಗಳನ್ನು ಮನಗಂಡು ಸೂಕ್ತ ಮಾರ್ಪಾಟಿನೊಂದಿಗೆ 'ಮಿತಾಕ್ಷರ' ಪದ್ಧತಿಯನ್ನು ಒಪ್ಪಿಕೊಂಡು ಬಳಕೆಗೆ ತರಲಾಗಿತ್ತು.

ಮಿತಾಕ್ಷರ ಮೇಲೆಯೇ ಹಲವಾರು ವ್ಯಾಖ್ಯಾನ ಕೃತಿಗಳು ರಚಿತವಾಗಿರುವುದನ್ನು ಗಮನಿಸಿದರೆ ಅದರ ಅಂತಃಸತ್ವ ಗುಣಾತ್ಮಕ ಗಟ್ಟಿತನ ಮತ್ತು ಮಹತ್ವದ ಅರಿವಾದಿತು. ಮಿತಾಕ್ಷರದ ಮೇಲೆ ಬರೆಯಲಾದ ಮೂರು ವ್ಯಾಖ್ಯಾಸನಗಳು ಗಮನ ಸೆಲೆಯುತ್ತವೆ. ಅವುಗಳೆಂದರೆ,

ಸುಬೋಧಿನಿ: ಮಿತಾಕ್ಷರದ ಮೇಲಿನ ಎಲ್ಲಾ ವ್ಯಾಖ್ಯಾನಗಳಲ್ಲೆ 'ಸುಬೋಧಿನಿ' ಹೆಚ್ಚು ಪ್ರಸಿದ್ಧವಾದದ್ದು. ಮಿತಾಕ್ಷರದಲ್ಲಿನ ಅನೇಕ ಕ್ಲಿಷ್ಟಕರ್ ಅಂಶಗಳನ್ನು ವಿಶ್ವೇಶ್ವರಭಟ್ಟ 'ಸುಬೋಧಿನಿ'ಯಲ್ಲಿ ಸರಳಿಗೊಳಿಸಿದ್ದಾನೆ. ಹಿಂದೂ ನ್ಯಾಯದ ಮೇಲಿನ ಅನೇಕ ಪ್ರಶ್ನೆಗಳನ್ನು ನಿರ್ಣಯಿಸುವ ಸಂದರ್ಭದಲ್ಲಿ ಅನೇಕ ಪ್ರಕರಣಗಳನ್ನು ಬಗೆಹರಿಸುವ ಸಂದರ್ಭದಲ್ಲಿ ಉಚ್ಚ ನ್ಯಾಯಾಲಯಗಳು ಈ ಕೃತಿಯನ್ನು ಧಾರಾಳವಾಗಿ ಬಳಸಿಕೊಂಡಿವೆ. ಹೀಗೆ ಬಾಳಂಭಟ್ಟಿ ಹಾಗೂ ವೈಜಯಂತಿ–ದತ್ತಕ ಮೀಮಾಂಸ ವ್ಯಾಖ್ಯಾನ ಬರೆದಿದ್ದಾರೆ.

ಮೀತಾಕ್ಷರ ಪಿತ್ರಾರ್ಜಿ ಆಸ್ತಿಯನ್ನು ಕೇವಲ ಮಕ್ಕಳಿಗೆ ಆದರಲ್ಲೂ ಗಂಡುಮಕ್ಕಳಿಗೆ ಹಾಗೂ ಅವರ ವಿಧವಾ ತಾಯಿಗೆ ಮಾತ್ರ ಸೀಮಿತಗೊಳಿಸಿ ಕೌಟುಂಬಿಕ ಭದ್ರತೆಯನ್ನು ಕಲ್ಪಿಸಿ ಕೊಡುತ್ತದೆ. ವಿಜ್ಞಾನೇಶ್ವರ ಸಪಿಂಡ ಶಬ್ದವನ್ನು ಅತ್ಯಂತ ವೈಜ್ಞಾನಿಕವಾಗಿ ಅರ್ಥೈಸಿದರೆ, ಜೀಮೂತವಾಹನ ಸಪಿಂಡತೆಗೆ ಧಾರ್ಮಿಕ ಆಚರಣಾ ಕ್ರಮಕ್ಕೆ ಒತ್ತು ಕೊಟ್ಟಿದ್ದಾನೆ. ಒಂದು ಸ್ಥಿರ ಸ್ವತ್ತನ್ನು ಒಬ್ಬನಿಗೆ ಭೋಗ್ಯಕ್ಕೆ ಹಾಕಿ ಅನಂತರ ಇನ್ನೊಬ್ಬರಿಗೆ ಅದೇ ಸ್ವತ್ತನ್ನು ಮಾರಾಟ ಮಾಡಿದಾಗ ಮೊದಲನೆಯ ವ್ಯವಹಾರಕ್ಕೆ ಮಾತ್ರ ಕಾನೂನಿನ ಮನ್ನಣೆ ಇರುತ್ತದೆ. ಎರಡನೆಯ ವ್ಯವಹಾರ ಊರ್ಜಿತವಾಗುವುದಿಲ್ಲ. ಪಿತ್ರಾರ್ಜಿತ ಆಸ್ತಿಗೆ ಪ್ರತಿಯೊಬ್ಬ ಮಗನಿಗೂ ಸಮಾನವಾದ ಹಕ್ಕು ಹುಟ್ಟಿನಿಂದಲೇ ಬರುತ್ತದೆ. ಅದು ತಂದೆ ಸತ್ತ ಮೇಲಷ್ಟೆ ಬರಬೇಕಾಗಿಲ್ಲ. ಅಷ್ಟೆ ಯಾಕೇ ಗರ್ಭಸ್ಥ ಶಿಶುವಿಗೂ ಕೂಡ ಸಮಾನ ಹಕ್ಕು ಇರುತ್ತದೆ.

ಹೀಗೆ ಮಿತಾಕ್ಷರವು ಸ್ತ್ರೀಯರಿಗೆ ಹಕ್ಕು, ವ್ಯಭಿಚಾರಕ್ಕೆ ಜಜನೇಂದ್ರಿಯವನ್ನು ಕತ್ತರಿಸಿ ಹಾಕುವಂತಹ ಹಾಗೂ ಮರಣದಂಡನೆಗೆ ಗುರುಪಡಿಸುವಂತಹ ಹಾಗೂ ಹೇಯ ಕೃತ್ಯಕ್ಕೆ ಅನುಮತಿ ನೀಡಿದ ಸ್ತ್ರೀಗೂ ಮರಣ ದಂಡನೆಯೇ ಇತ್ತು.

ಮಿತಾಕ್ಷರದಲ್ಲಿ ಅನೇಕ ಜನಪರ ಕಾಳಜಿಗಳನ್ನು ಹೊಂದಲಾಗಿದೆ. ಗ್ರಾಹಕರ ಕಾಳಜಿ, ಕಾರ್ಮಿಕರ ಕಾಳಜಿ ಪರಿಸರ ಕಾಳಜಿ, ಪಶು ಪ್ರೇಮ, ನ್ಯಾಯದ ಕಾಳಜಿ, ಪಕ್ಕಾ ನ್ಯಾಯ ವ್ಯವಸ್ಥೆ, ವ್ಯವಹಾರ ಸೇರಿದಂತೆ ಅನೇಕ ವಿಷಯಗಳ ಕುರಿತು ವಿವರಿಸಲಾಗಿದೆ. ಕ್ಷುಲ್ಲಕ ವಿವಾದಗಳಿಗೆ ದಂಡನೆಗಳು ಮತ್ತು ವಿಶೇಷ ರಕ್ಷಣೆ ಹಿಂದು ಅವಿಭಕ್ತ ಕುಟುಂಬ, ದತ್ತಕ ಪದ್ಧತಿ ಹೀಗೆ ಅನೇಕ ವಿಷಯಗಳ ಕುರಿತು ತಿಳಿಸಲಾಗಿದೆ.[164]

2. ಬಿಲ್ಹಣನ ವಿಕ್ರಮಾಂಕದೇವ ಚರಿತಂ :

ಜೇಷ್ಠಕಲಶ ನಾಗಾದೇವಿಯರ ಪುತ್ರನಾಗಿ ಬಿಲ್ಹಣನು ಕಾಶ್ಮೀರ ಬ್ರಾಹ್ಮಣ ಕುಟುಂಬದಲ್ಲಿ ಜನೀಸಿದ್ದು, ಇವನಿಗೆ ಇಷ್ಟಾರಾಮ ಮತ್ತು ಆನಂದರರು ಹಿರಿಯ ಸಹೋದರರಾಗಿದ್ದರು. ಇವರು ಶಾಸ್ತ್ರಾಧ್ಯಯನವನ್ನು ಪುರೈಸಿ ಪ್ರಕಾಂಡ ಪಾಂಡಿತ್ಯವನ್ನು ಸಂಪಾದಿಸಿದ್ದನು. ಇವನು ಚತುಃಷಷ್ಠಿ ಕಲೆಗಳಲ್ಲಿಯೂ ವಿಶೇಷ ಪ್ರಾವಿಣ್ಯ ಪಡೆದವನಾಗಿದ್ದನು. ಈತನು ಕಾಶ್ಮೀರದಿಂದ ದೇಶಸಂಚಾರ ಪ್ರಾರಂಭಿಸಿ, ಮೊದಲಿಗೆ ಮಥುರಾಗೆ ಹೋಗಿ ಅಲ್ಲಿ ಅಲ್ಲಿಯೆ ಕೆಲವು ವಿದ್ವಾಂಸರನ್ನು ಗೆಲ್ಲುತ್ತಾನೆ. ವೃದಾವನದಲ್ಲಿ ಕೆಲವು ದಿನಗಳ ವಾಸ, ಕಾನ್ಯಕಬ್ಜದಲ್ಲಿಯೂ ಸಹ ವಾಸ ನಂತರ ಪ್ರಯಾಗ (ಅಲಹಾಬಾದ ನಗರ)ಕ್ಕೆ ಭೇಟಿ ನೀಡುತ್ತಾನೆ. ಅಲ್ಲಿಂದ ಕಾಶಿಗೆ ಬಂದು ಅಲ್ಲಿ ಕರ್ಣದೇವನ ಆಸ್ಥಾನದಲ್ಲಿ ಪ್ರಖ್ಯಾತ ಪಂಡಿತ ಗಂಗಾಧರನನ್ನು ಶಾಸ್ತ್ರದಲ್ಲಿ ಸೋಲಿಸಿ ಅವರ ಪೂರ್ವಿಕರೊಡನೆಯೂ ವಾದದಲ್ಲಿ ಗೆದ್ದು ಬಿಲ್ಹಣನು ತನ್ನ ಪಾಂಡಿತ್ಯವನ್ನು ಪ್ರದರ್ಶನ ಮಾಡಿದ ನಂತರ ಸೀತಾರಾಮರ ಕುರಿತಾಗಿ ಕಾವ್ಯ ಬರೆದು, ನಂತರ ಅಲ್ಲಿಂದ ಅಯೋಧ್ಯಕ್ಕೆ ಬಂದು ಅಲ್ಲಿಯೂ ಸಹ ಗಂಗಾಧರನನ್ನು ಸೋಲಿಸಿ ನೇರವಾಗಿ ಭೋಜನ ಧಾರಾನಗರಕ್ಕೆ ಹೋಗುವಷ್ಟರಲ್ಲಿ ರಾಜ ಭೋಜನು ತೀರಿಕೊಂಡಿದ್ದನು. ಕವಿಗೆ ಆತನ ಆಸ್ಥಾನದಲ್ಲಿರಬೇಕೆನ್ನುವ ಬಯಕೆ ಈಡೆರದೇ ಇರುವುದರಿಂದ ಧಾರಾನಗರದಿಂದ ಬೇಸರಗೊಂಡ ನೇರವಾಗಿ ಗುರ್ಜರ ದೇಶಕ್ಕೆ ಹೋದನು. ಗುರ್ಜರದ ಮಾರ್ಗದಲ್ಲಿ ಹೀನರು, ಅಪವಿತ್ರರು, ಅಸಹ್ಯ ಶಬ್ದಗಳಲ್ಲಿ ಮಾತಾಡುವವರು, ಕೊಳಕು ಬಟ್ಟೆ ಧರಿಸುವ, ಸಂಸ್ಕಾರ ರಹಿತ ಗುಜರಾತಿಗಳನ್ನು ಕಂಡು ಸಂತಾಪಕ್ಕೊಳಗಾದನು.

ಕಕ್ಷಬಂಧಂ ವಿದಧತಿ ನ ಯೆ ಸರ್ವದೈವಾವಿಶುದ್ಧ
ಸ್ತದಾಶಾಂತೆ ಕಿಮಪಿ ಭಜತೆ ಯಜ್ಜುಗುಪ್ಸಾಸ್ಪದತ್ವಮ್
ತೇಷಾ ಮಾರ್ಗೆ ಪರಿಚಯವಶಾದರ್ಜಿತಂ ಗುರ್ಜರಾಣ
ಯ: ಸಂತಾಪಂ ಶಿಥಿಲಮಕರೋತ್ಸೋಮನಾಥಂ ವಿಲೋಕ್ಸ್

ಈ ಪರಿಹಾರಕ್ಕಾಗಿ ದ್ವಾದಶ ಜ್ಯೋತಿರ್ಲಿಂಗಗಳಲ್ಲಿ ಒಂದಾದ ಸೋಮನಾಥನ ದರ್ಶನವನ್ನು ಪಡೆದನು. ಪವಿತ್ರ ತೀರ್ಥದ ದರ್ಶನದಿಂದ ಗುಜರಾತ ಪ್ರಾಂತದಲ್ಲಿ

ಅನುಭವಿಸಿದ ಹೀನಯಾತನೆಗೆ ಕವಿ ಪರಿಹಾರ ಕಂಡುಕೊಂಡನು. ಅಲ್ಲಿಂದ ರಾಮೇಶ್ವರ ಹೋಗಿ ತಿರುಗಿ ಹೋಗುವಾಗ ಕವಿ ಕರ್ನಾಟಕ ಪ್ರಾಂತ್ಯದ ಕಲ್ಯಾಣ ನಗರಕ್ಕೆ ಭೇಟಿಯಿತ್ತನು.

ಚಕಾರಕಲ್ಯಾಣಮಿತಿ ಕ್ರಮಾದಸೌ
ಪುರಂ ಪರಾಧ್ಯೆ ಪುರ್ಥಿವಿಪುರಂದರ
ಯದುಚ್ಚಹಮಾರ್ಯವಲಿದೀಪಸಂಪದಾಂ
ವಿಭಾವ್ಯತೆ ಕಂಜಲಸನಿಭಂ ನಭಃ

ಕಲ್ಯಾಣ ನಗರವು ಅಹಮಲ್ಲನಿಂದ ನಿರ್ಮಿತವಾಗಿದ್ದು ಆರನೇ ವಿಕ್ರಮಾದಿತ್ಯನಿಂದ ರಾಜಧಾನಿ ಪ್ರದೇಶವಾಗಿ ಆಳಲ್ಪಡುತ್ತಿತ್ತು. ನಂತರದ ದಿನಗಳಲ್ಲಿ ಕಲ್ಯಾಣಿ ಚಾಲುಕ್ಯರ ವಂಶವು ಉತ್ತುಂಗದ ಸ್ಥಾನಕ್ಕೇರಿತು. ರಾಜ್ಯಭಾರ ನಿರ್ವಹಿಸುತ್ತಿದ್ದ ಆರನೇ ವಿಕ್ರಮಾದಿತ್ಯನು ಬಹುಪ್ರತಾಪಿ ಮತ್ತು ರಸಿಕನಾಗಿದ್ದನು. ರಾಜಸಭೆಯಲ್ಲಿ ಹೊಸಹೊಸ ವಿದ್ವಾಂಸರ ಪ್ರವೇಶವಾಗುತ್ತಿರುವುದರಿಂದ ರಾಜನನ್ನು ಕಂಡು ಮಾತಾಡಿಸುವುದು ಕಷ್ಟದ ಕಾರ್ಯವೆನ್ನಿಸುತ್ತಿತ್ತು. ಬಿಲ್ಹಣಿಗೆ ಈ ವಿಯದಲ್ಲಿ ಸಂಕಷ್ಟ ಎದುರಾಗಲಿಲ್ಲ. ಅವನ ದಿಗ್ವಿಜಯವನ್ನು ಕೇಳಿದಂತ ವಿಕ್ರಮಾದಿತ್ಯನಿಗೆ ಕವಿ ಬಿಲ್ಹಣ ಬಂದಿರುವ ವಿಷಯ ಗೊತ್ತಾದಾಗ ಕವಿಗೆ ಆದರದ ಸಮ್ಮಾನವು ದೊರೆಯಿತು.

ಆಸ್ಥಾನದ ಪಂಡಿತರಿಗೆ ಬಿಲಹ್ಣನನ್ನು ಕಂಡು ಆಸುಯೇ ಉಂಟಾಯಿತು. ಈಗ ತಾನೇ ಬಂದಂಥ ಕವಿಗೆ ಆದರದ ಸಮ್ಮಾನ ಮತ್ತು 'ವಿದ್ಯಾವತಿ' ಬಿರುದುನಿಂದ ಸನ್ಮಾನಿಸಿದರು. ಧನಕನಕಾದಿಗಳನ್ನು, ಜೊತೆಯಲ್ಲಿ ನೀಲವರ್ಣಭತ್ರ ಮುಂತಾದ ವಸ್ತುಗಳನ್ನು ಬಹುಮಾನವಾಗಿ ಪಡೆದ ಬಿಲ್ಹಣನು ಬಹಳ ಕಾಲ ಕಲ್ಯಾಣ ನಗರಿಯಲ್ಲೆ ಉಳಿದು ರಾಜನ ಅಬಿಷ್ಠ ಈಡೇರಿಸಲು ರಾಜ್ಯಾಶ್ರಯವನ್ನು ಪಡೆದ ಋಣ ತೀರಿಸಲು ಹದಿನೆಂಟು ಸರ್ಗಾತ್ಮಕವಾದ 'ವಿಕ್ರಮಾಂಕದೇವಚರಿತೆ' ಮಹಾಕಾವ್ಯವನ್ನು ರಚಿಸಿ ರಾಜನಿಗೆ ಅದನ್ನು ಕಾಣಿಕೆಯಾಗಿ ಸಮರ್ಪಿಸಿದನು. ಬಿಲ್ಹಣನು ಆರನೇ ವಿಕ್ರಮಾದಿತ್ಯನಲ್ಲಿ ವಿಜ್ಞಾನೇಶ್ವರ ಜೊತೆಗೂಡಿ ಆಸ್ಥಾನದ ಪ್ರಧಾನ ಕವಿಯ ಪಟ್ಟವನ್ನು ಸ್ವೀಕರಿಸುವ ಭಾಗ್ಯ ಲಭಿಸಿತು. ಐತಿಹಾಸಿಕ ಮಹಾಕಾವ್ಯವಾಗಿರುವ ಈ ವಿಕ್ರಮಾಂಕದೇವಚರಿತವು ಹದಿನೆಂಟು ಸರ್ಗಗಳಿಂದ ಕೂಡಿದ್ದು ಒಟ್ಟು 1653 ಶ್ಲೋಕಗಳು ಸರಳ ಸಂಸ್ಕೃತದಲ್ಲಿಯೇ ಸುಲಭವಾಗಿ ಅರ್ಥವಾಗುವಂತೆ ರಚಿಸಲ್ಪಟ್ಟಿದೆ.

ಪ್ರಾರಂಭದ ಏಳು ಸರ್ಗಗಳಲ್ಲಿ ಮುಖ್ಯವಾಗಿ ಐತಿಹಾಸಿಕ ಅಂಶಗಳೇ ತುಂಬಿವೆ. ಕಲ್ಯಾಣ ಚಾಲುಕ್ಯರ ಸಮಗ್ರ ರಾಜವಂಶದ ಚಿತ್ರವಿದೆ. ಎಂಟರಿಂದ ಹತ್ತರನೇ ಸರ್ಗಗಳಲ್ಲಿ ರಾಜಕುಮಾರು ಚಂದಲದೇವಿಯೊಂದಿಗಿನ ನಾಯಕನ ಪರಿಣಯ–ಪ್ರಣ ಪ್ರಸಂಗ, ಹನ್ನೊಂದನೆಯ ಸರ್ಗದಲ್ಲಿ ವಸಂತ ಋತುವಿನ ಶಂಗಾರದ ಚಿತ್ರಣ, ಹನ್ನೆರಡನೆಯ ಸರ್ಗದಲ್ಲಿ ಗ್ರಿಷ್ಮ, ಹದಿಮೂರನೆಯ ಸರ್ಗದಲ್ಲಿ

ವರ್ಷಕಾಲ, ಹದಿನಾಲ್ಕನೆಯ ಸರ್ಗದಲ್ಲಿ ಶರತ್ಕಾಲ್, ಹದಿನಯುದನೆಯ ಸರ್ಗದಲ್ಲಿ ಕೌಟುಂಬಿಕ ಕಲಪದ ಉಲ್ಲೇಖ, ಹದಿನಾರನೆಯ ಸರ್ಗದಲ್ಲಿ ಹೇಮಂತ ಋತು, ಹದಿನೇಳನೆಯ ಸರ್ಗದಲ್ಲಿ ಚೋಳರ ಪರಾಜಯ, ಹದಿನೆಂಟಯ ಸರ್ಗದಲ್ಲಿ ಕವಿಯ ವಂಶ, ಭಾರತಯಾತ್ರೆಯ ವೃತ್ತಾಂತಗಳೆಲ್ಲವನ್ನೂ ರೊಚಕವಾಗಿ ಮನಮೋಹಕವಾಗಿ ಹೇಳಿಕೊಂಡಿದ್ದಾನೆ.

ಪ್ರಥಮ ಸರ್ಗ– ಮಂಗಲಾಚರಣೆ, ಕವಿ ಮತ್ತು ಕಾವ್ಯ ಪ್ರಶಂಸೆ, ರಾಜಾ ಅಹವಮಲ್ಲ ಮತ್ತು ಪೂರ್ವಜರ ವರ್ಣನೆ (118 ಶ್ಲೋಕಗಳು). ದ್ವಿತೀಯ ಸರ್ಗ –ಚಾಲುಕ್ಯರ ರಾಜಧಾನಿ ಕಲ್ಯಾಣದ ವರ್ಣನೆ, ಸಂತನಾಕ್ಕಾಗಿ ಅಹವಮಲ್ಲನ ತಪಸ್ಸು, ಶಂಕರನಿಂದ ವರಪ್ರದಾನ ಮತ್ತು ಸೋಮದೇವನ ಜನನ, (91 ಶ್ಲೋಕಗಳು), ತೃತೀಯ ಸರ್ಗ– ವಿಕ್ರಮಾದಿತ್ಯನ ಜನ್ಮ ಮತ್ತು ಬಾಲ್ಯದ ವರ್ಣನೆ, ಜಯಸಿಂಹನ ಜನನ, ಸೋಮದೇವನ ಯುವರಾಜಪಟ್ಟ (77 ಶ್ಲೋಕಗಳು), ಚತುರ್ಥ ಸರ್ಗ– ವಿಕ್ರಮಾದಿತ್ಯನ ದಿಗ್ವಿಜಯ, ಅಹವಮಲ್ಲನ ಮೃತ್ಯು, ಸೋಮದೇವನ ರಾಜ್ಯಭಾರ ಮತ್ತು ಅನ್ಯಾಯ, ತಮ್ಮ ಜಯಸಿಂಹನೊಡನೆ ವಿಕ್ರಮಾದಿತ್ಯನ ಕಲ್ಯಾಣ ತ್ಯಾಗ, ವಿಕ್ರಮಾಂಕನಿಂದ ಸೋಮದೇವನ ಸೇನೆಯ ಪರಾಜಯ (120 ಶ್ಲೋಕಗಳು), ಪಂಚಮ ಸರ್ಗ– ವಿಕ್ರಮಾದಿತ್ಯನಿಂದ ದ್ರವಿಡ, ಕೇರಳ, ಚೋಳ, ನೇಪಾಳ ಮುಂತಾದ ದೇಶದ ದಿಗ್ವಿಜಯ, ಕಪ್ಪಸ್ವೀಕಾರ, ಚೋಳರಾಜನ ಮಗಳ ಜೊತೆ ತುಂಗಭದ್ರ ತಟದಲ್ಲಿ ವಿವಾಹ, (89 ಶ್ಲೋಕಗಳು), ಷಷ್ಠ ಸರ್ಗ– ಚೋಳರಾಜನ ಮೃತ್ಯು, ವೆಂಗಿರಾಜನಿಂದ ಚೊಳದೇಶ ಸ್ವೀಕಾರ, ವೆಂಗಿರಾಜ ಮತ್ತು ಸೋಮದೇವರನ್ನು ವಿಕ್ರಮಾಂಕ ಸೋಲಿಸಿದ್ದು, ಸೋಮದೇವನ ಸೆರೆ, ಜಯಸಿಂಹನಿಗೆ ವನವಾಸ ಪ್ರಾಪ್ತಿ, ವಿಕ್ರಮಾದಿತ್ಯನ ಕಲ್ಯಾಣ ಗಮನ (99 ಶ್ಲೋಕಗಳು), ಸಪ್ತಮ ಸರ್ಗ– ಕಲ್ಯಾಣಪ್ರವೇಶ, ವಸಂತ ವರ್ಣನೆ, ವಿರಹಿಗಳಿಗೆ ಚೈತ್ರದ ಆಗಮನದಿಂದಾಗುವ ಸಂತೋಷದ ನಿರೂಪಣೆ (77 ಶ್ಲೋಕಗಳು), ಅಷ್ಟಮ ಸರ್ಗ– ಕರಹಾಟ ರಾಜನಲ್ಲಿ ವಿಕ್ರಮನು ದೂತನನ್ನು ಕಳುಹಿಸಿದ್ದು, ಸ್ವಯಂವರದಲ್ಲಿ ಪಾಲ್ಗೊಳ್ಳಲು ನಿರ್ಧರಿಸಿದ್ದು, ಸ್ವಯಂವರ ಕನ್ನೆಯ ವರ್ಣನೆ, ಉಪಸ್ಥಿತ ರಾಜರುಗಳ ವರ್ಣನೆ, ಚಂದ್ರಲೇಖೆಯಿಂದ ವಿಕ್ರವಾದಿತ್ಯನ ಪಾಣಿಗ್ರಹಣ (151 ಶ್ಲೋಕಗಳು), ದಶವು ಸರ್ಗ– ವಿವಾಹಮಹೋತ್ಸವ, ವನವಿಹಾರ, ಜಲವಿಹಾರ ಮತ್ತು ಪುಷ್ಪವಚಯ (91 ಶ್ಲೋಕಗಳು), ಏಕಾದಶ ಸರ್ಗ– ಸಂಧ್ಯಾ, ಚಂದ್ರೋದಯ, ಸೂರ್ಯಾಸ್ತ, ಪ್ರಭಾತ ಮುಂತಾದವುಗಳ ವರ್ಣನೆ (95 ಶ್ಲೋಕಗಳು), ದ್ವಾದಶ ಸರ್ಗ– ಗ್ರಿಷ್ಮದಲ್ಲಿ ವಿಕ್ರಮಾದಿತ್ಯನು ಕರಹಾಟದಿಂದ ಕಲ್ಯಾಣಕ್ಕೆ ಹೊರಟಿದ್ದು, ನಗರ ನಾರಿಯರ ಚೇಷ್ಟೆಯ ವರ್ಣನೆ, ಗ್ರೀಷ್ಮಋತುವಿನ ವರ್ಣನೆ (78 ಶ್ಲೋಕಗಳು), ತ್ರಯೋದಶ ಸರ್ಗ– ವರ್ಷಾಋತು ವರ್ಣನೆ, ನವಿಲು, ಹಂಸ, ಮೋಡ, ನದಿ, ಪರ್ವತ, ಸೂರ್ಯಸಮಯ, ಮುಂತಾದವುಗಳ ಚಿತ್ರಣ (90 ಶ್ಲೋಕಗಳು), ಶರದ್ ಋತು ವರ್ಣನೆ, ಜಯಸಿಂಹನಿಗೆ ದೂತನಿಂದ ವಿಕ್ರಮನ ಸದುಪದೇಶ, ಜಯಸಿಂಹನಿಂದ

ನಿರಾಕರಣೆ, ಇಬ್ಬರಲ್ಲೂ ಯುದ್ಧದ ತಯಾರಿ ಮತ್ತು ಸೇನೆಯ ಪ್ರಯಾಣ (72 ಶ್ಲೋಕಗಳು), ಪಂಚದಶ ಸರ್ಗ ಜಯಸಿಂಹ ಮತ್ತು ವಿಕ್ರಮರ ಯುದ್ಧ, ಜಯಸಿಂಹನ ಸೋಲು, ಯುದ್ಧದಿಂದ ಪಲಾಯನ ಮತ್ತು ಸೆರೆ. (87 ಶ್ಲೋಕಗಳು), ಷೋಡಶ ಸರ್ಗ– ಹೇಮಂತ, ಶಿಶಿರ ಮತ್ತು ಮೃಗಬೇಟೆಯ ವರ್ಣನೆ (53 ಶ್ಲೋಕಗಳು), ಸಪ್ತದಶ ಸರ್ಗ– ವಿಕ್ರಮಾದಿತ್ಯನ ದಾನ, ಧರ್ಮ ವರ್ಣನೆ, ಪ್ರಜಾಪಾಲನೆ, ಕೆರೆ, ನಗರ, ಮಂದಿರ ನಿರ್ಮಾಣ, ಸಂತಾನೋತ್ಪತ್ತಿ, ಚೋಳರಾಜನೊಂದಿಗೆ ಯುದ್ಧ ಮತ್ತು ವಿಕ್ರಮನ ಗೆಲುವು, ಕೆಲಕಾಲ ಕಾಂಚಿಯಲ್ಲಿ ವಾಸ, ನಂತರ ಕಲ್ಯಾಣಗಮನ (68 ಶ್ಲೋಕಗಳು), ಅಷ್ಟಾದಶ ಸರ್ಗ– ಕಾಶ್ಮೀರವರ್ಣನೆ, ಕಾಶ್ಮೀರದ ರಾಜರ ವರ್ಣನೆ, ಕವಿ ಮತ್ತು ಪುರ್ವಜರ ಚರಿತ್ರೆ, ಕವಿಯ ದೇಶ ಪರ್ಯಟನ ಮತ್ತು ಸ್ವರಚಿತ ಕೃತಿಗಳ ವಿವರ (108 ಶ್ಲೋಕಗಳು).

3. ಭಾಸ್ಕರಚಾರ್ಯ ವಿರಚಿತ ಲೀಲಾವತೀ :

ಲೀಲಾವತಿಯ ಕೃರ್ತ ಎರಡನೇ ಭಾಸ್ಕರ ಎನ್ನುವುದು ಎಲ್ಲರಿಗೂ ತಿಳಿದಿರುವ ವಿಷಯ. ಆದರೆ ಈ ಎರಡನೇ ಭಾಸ್ಕರ ಎಲ್ಲಿಯವನು ಎನ್ನುವುದಕ್ಕೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಕೆಲವು ವಿದ್ವಾಂಸರು ಎರಡನೇ ಭಾಸ್ಕರ್ (ಬಿಜಾಪೂರ) ವಿಜಯಪೂರ ದವನೆಂದು ವಾದಿಸುತ್ತಿದ್ದರೆ, ಇನ್ನು ಕೆಲವರು ಬೀದರ ದವನೆಂದು ಹೇಳುತ್ತಾರೆ. ಮುಂದುವರೆದು ಇನ್ನು ಕೆಲವರು (ಪಾಟಣ) ಪಾಟ್ನೆ/ಬಹಾಲದವನೆಂದು ಹೇಳುತ್ತಾರೆ. ಹೀಗೆ ಮೂರು ಸ್ಥಳಗಳ ಹೆಸರುಗಳು ಉಲ್ಲೇಖಗೊಂಡಿವೆ. ಕೆಲವು ವಿದ್ವಾಂಸರಂತು ಭಾಸ್ಕರನು ವಿಜಯಪೂರದವನೆಂದು ಹೇಳುತ್ತ ಇತಿಹಾಸ ಪುಟಗಳಲ್ಲಿ ದಾಖಲಿಸಿಯೇ ಬಿಟ್ಟಿದ್ದಾರೆ. ಸದ್ಯಕ್ಕೆ ಎರಡನೇ ಭಾಸ್ಕರನ ಕುರಿತಿ ಬಹಳಷ್ಟು ಕೃತಿಗಳಲ್ಲಿ ವಿಜಯಪೂರದನೆಂದೇ ದಾಖಲಿಸಲಾಗಿದೆ.

ಆದ್ದರಿಂದ ಮೊದಲಿಗೆ ಈ ಭಾಸ್ಕರ್ ಯಾರು ? ಇವನು ಎಲ್ಲಿಯವನು ? ಎನ್ನುವುದು ಪ್ರಥಮವಾಗಿ ತಿಳಿದುಕೊಂಡು ನಂತರ ಈತನ ಕೃತಿಗಳ ಕುರಿತು ತಿಳಿದುಕೊಳ್ಳೋಣ. ಭಾಸ್ಕರನು ತನ್ನ ಜನ್ಮಸ್ಥಾನ, ಜನ್ಮಕಾಲ ಮತ್ತಿತರ ಕೆಲವು ಸಂಗತಿಗಳ ವಿವರಗಳನ್ನು ತಾನು ರಚಿಸಿದ ಗ್ರಂಥ ಸಿದ್ದಾಂತ ಶಿರೋಮಣಿಯಲ್ಲಿ ತಿಳಿಸಿದ್ದಾನೆ.

ಸದ್ಯಾದ್ರಿ ಪರ್ವತದ ಬಳಿಯ ವಿ(ಬಿ)ಜ್ಜಡಬಿಡ ಅಥವಾ ಬಿಜ್ಜಳನಬೀಡು ಎಂಬ ಸ್ಥಳದವನೆಂದೂ, ಶಾಲಿವಾಹನ ಶಕೆ 1036ರಲ್ಲಿ ಕ್ರಿ.ಶ 1114ರಲ್ಲಿ ಜನ್ಮತಾಳಿದನೆಂದು ಮತ್ತು 'ಸಿದ್ಧಾಂತಶಿತೋಮಣಿ' ಗ್ರಂಥವನ್ನು ತನ್ನ 36ನೆಯ ವಯಸ್ಸಿನಲ್ಲಿ, ಅಂದರೆ ಕ್ರಿ.ಶ 1150ರಲ್ಲಿ ಬರೆದನೆಂದೂ ತಿಳಿದು ಬರುತ್ತದೆ. ಬೀಡ ಪಟ್ಟಣವು ಕಲ್ಯಾಣ ಚಾಲುಕ್ಯರಾಜ ಮೂರನೆಯ ಸೋಮೇಶ್ವರನ (ಆಳ್ವಿಕೆ 1127–1138) ಹಾಗೂ ಆತನಮಗ ಮೂರನೇ ತೈಲಪ (ಆಳ್ವಿಕೆ 1151–1156) ಸಾಮಂತನಾದ ಬಿಜ್ಜಳನ ಆಳ್ವಿಕೆಯಲ್ಲಿ ಇದ್ದುದರಿಂದ, ಅದನ್ನು ಬಿಜ್ಜನಬೀಡು ಎಂದು ಕರೆಯಲಾಗಿದೆ ಎಂದು ಉಲ್ಲೇಖಿಸಿದ್ದಾರೆ.

ಈ ಬಿಜ್ಜಳಬೀಡು ಇಂದಿನ ಕರ್ನಾಟಕದ ವಿಜಯಪೂರ ಅಥವಾ ಬಿಜಾಪೂರ ಎಂದು ಕೆಲವರು ಗುರುತಿಸಿದರೆ, ಇನ್ನು ಕೆಲವು ವಿದ್ವಾಂಸರು ಅದು ಬೀದರ ಪಟ್ಟಣವೆಂದು ಗುರುತಿಸುತ್ತಾರೆ. ಮೊಗಲಚಕ್ರವರ್ತಿ ಅಕಬರನ ಆಜ್ಞೆಯ ಮೇರೆಗೆ 'ಲೀಲಾವತೀ'ಯನ್ನು ಪರ್ಶಿಯನ್ ಭಾಷೆಗೆ ಭಾಷಾಂತರಿಸಿದ (ಆತನ ಮಂತ್ರಿ ಅಬುಲ್ ಫಜಲ್‌ನ ಸಹೋದರ) ಅಬುಲ್ ಫೈಜಿಯು (ಕ್ರಿ.ಶ 1587) ಭಾಸ್ಕರನಜನ್ಮಸ್ಥಾನ 'ವೇದರ' (ಬೀದರ) ಎಂದು ತಿಳಿಸಿರುವುದರಿಂದ, ಭಾಸ್ಕರನ ಜನ್ಮಸ್ಥಾನವು ಇಂದಿನ ಬೀದರ ಎಂದು ಗುರುತಿಸಿದ್ದಾರೆ.

ಇದಲ್ಲದೇ ಭಾಸ್ಕರಚಾರ್ಯನು ಬೀದರ ಜಿಲ್ಲೆಯನೇ ಇರಬಹುದೆಂಬ ಅಂಶಕ್ಕೆ ಭಾಸ್ಕರಚಾರ್ಯ ಬಾಳಿ ಬದುಕಿದ ಕಾಲಮಾನದ ಬೀದರ ಜಿಲ್ಲೆಯಲ್ಲಿ ದೊರೆತಿರುವ ಶಾಸನಗಳಲ್ಲಿ ಆತನ ಹೆಸರು ಉಲ್ಲೇಖವಾಗಿದ್ದು ಇನ್ನಷ್ಟು ಪುಷ್ಠಿ ನೀಡುತ್ತವೆ.

ಬಸವಕಲ್ಯಾಣ ಕೋಟೆಯಲ್ಲಿರುವ ವಸ್ತು ಸಂಗ್ರಹಾಲಯದಲ್ಲಿರುವ ಕ್ರಿ.ಶ 1142ರ ಶಾಸನದಲ್ಲಿ, ವಿಶೇಷ ವ್ಯಕ್ತಿಗಳ ಹೆಸರುಗಳನ್ನು ಉಲ್ಲೇಖಿಸಿದ್ದು, ಅಂತಹ ವಿಶೇಷ ವ್ಯಕ್ತಿಗಳಲ್ಲಿ ನಾಟಕದ ಭಾಸ್ಕರಭಟ್ಟ ಮತ್ತು ಇನ್ನೊಬ್ಬ ಭಾಸ್ಕರ್ ಭಟ್ಟರ ಹೆರುಗಳಿದ್ದು, ಶಾಸನದ ಮುಂದಿನ ಭಾಗ ಓದಲು ಬರಲಾದಂತಹ ಸ್ಥಿತಿಯಲ್ಲಿರುವುದರಿಂದ ಮುಂದಿನ ವಿಷಯ ತಿಳಿದು ಬಂದಿರುವುದಿಲ್ಲ. ನಂತರ ಮತ್ತೆ ಕೆಲವು ವಿಶೇಷ ವ್ಯಕ್ತಿಗಳ ಹೆಸರುಗಳು ಉಲ್ಲೇಖಿಸಿದ್ದು ಇರುತ್ತದೆ.[165]

ಬಸವಕಲ್ಯಾಣ ವಸ್ತು ಸಂಗ್ರಹಾಲಯದಲ್ಲಿರುವ ಕ್ರಿ.ಶ 1142ರ ಇನ್ನೊಂದು ಶಾಸನದಲ್ಲಿಯು ಸಹ ಭಾಸ್ಕರಭಟ್ಟನು ಬಹಳಷ್ಟು ಜನರೊಂದಿಗೆ ಸೇರಿ ಭೀಮೇಶ್ವರ ದೇವರಿಗೆ ದಾನ ನೀಡಿದ ಉಲ್ಲೇಖವಿದೆ.[166]

ಬಸವಕಲ್ಯಾಣ ವಸ್ತು ಸಂಗ್ರಹಾಲಯದಲ್ಲಿರುವ ಕ್ರಿ.ಶ 1108ರ ಶಾಸನದಲ್ಲಿ ಚಾಲುಕ್ಯ ತ್ರಿಭುವನಮಲ್ಲ ಜಯಂತಿಪುರದ ನೆಲೆವಿಡಿನಿಂದ ರಾಜ್ಯವಾಳುತ್ತಿದ್ದಾಗ ಬಿಜ್ಜನಮರೆಕಲ್ಲಿನ ಪಶ್ಚಿಮಕ್ಕಿರುವ ಹೂವಿನಗೆಲ್ಲ ಬಾದುಂಬೆಯ ಸಮೀಪದಲ್ಲಿನ ಕೊಪ್ಪೇಶ್ವರ ದೇವರ ಬಳಿಯ ನಾರಾಯಣದೇವರಿಗೆ, ಅಲ್ಲಿಂದ ದಕ್ಷಿಣಕ್ಕಿರುವ ಮಹಾದೇವರಿಗೆ ವಿನಾಯಕನಿಗೆ ತಿಂಗಳಿಗೂ ದೀಪದ ಎಣ್ಣೆ ದಾನ ನೀಡಿರುವುದು ತಿಳಿಯುತ್ತದೆ. ಇಲ್ಲಿ ಮುಖ್ಯವಾಗ ಬಿಜ್ಜನಮರೆಕಲ್ಲು ಎನ್ನುವ ಪ್ರದೇಶದ ಹೆಸರು ಮುಖ್ಯವಾಗಿದೆ. ಈ ಶಾಸನದಿಂದ ಬಿಜ್ಜನ–ಬಿಜ್ಜಳ ಮರೆಕಲ್ಲು ಎನ್ನುವ ಪ್ರದೇಶವು ಬೀದರದಲ್ಲಿರುವ ಕುರಿತು ತಿಳಿದು ಬರುತ್ತಿದ್ದಲ್ಲದೇ ಭಾಸ್ಕರಚಾರ್ಯನು ಬಿಜ್ಜಳ ದವನು ಎಂದು ಹೇಳಿರುವುದು ಬಹುಶಃ ಅದು ಬಿಜ್ಜಳ ಮರೆಕಲ್ಲು ಸಹ ಆಗಿರಲು ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ.[167]

ಅದರಂತೆ ಉಜ್ಜಳಂ ಗ್ರಾಮದಲ್ಲಿ ದೊರೆತಿರುವ ಕ್ರಿ.ಶ 1120ರ ಶಾಸನದಲ್ಲಿ ಆರನೇ ವಿಕ್ರಮಾದಿತ್ಯನ ಆಳ್ವಿಕೆ ನಡೆಯುತ್ತಿದ್ದಾಗ ಅವನ ಸಾಮಂತನಾಗಿ

ಶ್ರೀಯಮರಸನು ಉಜ್ಜಳವನ್ನು ಆಳುತ್ತಿದ್ದನೆಂಬ ಅಂಶವು ತಿಳಿದು ಬರುವುದಲ್ಲದೇ ಈ ಅರಸನು ಮಲ್ಲ, ಬರ್ಮ್ಮ ಎಂಬುವವರ ಮರಮಾಂಗ ಮತ್ತು ಶೀರವನ್ನ ಛೇದಿಸಿದವನೆಂದು ಹೇಳಿದ್ದು ಕಂಡು ಬರುತ್ತದೆ. ಬಹುಶಃ ಭಾಸ್ಕರಚಾರ್ಯನು ಈ ಉಜ್ಜಳ=ಬಿಜ್ಜಳದವನಾಗಿದ್ದು, ತನ್ನ ಗ್ರಾಮ ಉಜ್ಜಳವನ್ನು ವಿಜ್ಜಳ ಬಿಡು ಎಂದು ಹೇಳಿಕೊಂಡಿರುವ ಸಾಧ್ಯತೆಯು ಇರುತ್ತದೆ.[168]

ತ್ರಿಪುರಾಂತ ಸಮೀಪದಲ್ಲಿರುವ ಅಂಬಿಗರ ಚೌಡಯ್ಯನ ಗವಿಯ ಗೋಪುರದ ಎಡಗೊಡೆಯಲ್ಲಿರುವ ಕಲ್ಲಿನ ಮೇಲಿರುವ ಶಾಸನದಲ್ಲಿ, ಶಿಖರದಿನುದಯಂಗೆಯ್ದ ಭಾಸ್ಕರನನ್ತೆ ಭಾಸ್ಕರದೇವರಂ ಶಂಖ ಚಕ್ರ ಗದಾಧರನ ಮನುಷ್ಯಮೂರ್ತಿಯಂತು..... ಎಂದು ಉಲ್ಲೇಖಿಸಿದೆ.[169]

ಬೀದರ ಜಿಲ್ಲೆಯ ರಂಜೋಳಖೇಣಿ ಗ್ರಾಮದಲ್ಲಿರುವ 12ನೇ ಶಮಾನದ ಕಾಲಘಟ್ಟದಲ್ಲಿ ಬರೆಯಲ್ಪಟ್ಟ ಶಾಸನದಲ್ಲಿ ಭೈರವದೇವನ ಕಾಲದ ಶಾಸನವನ್ನು ಭಾಸ್ಕರ ಎನ್ನುವವನು ಬರೆದಿದ್ದು, ಈ ಶಾಸನ ಬರೆದಿರುವ ಭಾಸ್ಕರನಿಗೂ ಸಹ 50 ಮತ್ತರು ಭೂದಾನ ನೀಡಿರುವ ಉಲ್ಲೇಖ ಈ ಶಾಸನದಲ್ಲಿದೆ. ಶಾಸನವನ್ನು ಬರೆದ ಕವಿಗೆ ಭೂಮಿಯನ್ನು ದಾನ ನೀಡಿರುವುದನ್ನು ಸಾಬೀತು ಪಡಿಸುವ ಏಕೈಕ ಶಾಸನ ಇದಾಗಿದೆ ಎಂದರೂ ತಪ್ಪಾಗಲಾರದು.[170]

ಹೀಗೆ ಭಾಸ್ಕರನು ಬಾಳಿ ಬದುಕಿನ ಕಾಲಘಟ್ಟದಲ್ಲಿ ಬೀದರ ಜಿಲ್ಲೆಯ ಕೆಲವು ಶಾಸನಗಳಲ್ಲಿ ಅವನ ಉಲ್ಲೇಖ ಆಗಿರುವುದರಿಂದ ಮತ್ತು ಬಿಜ್ಜಳ=ಉಜ್ಜಳ=ಬಿಜ್ಜನ ಹೆಸರುವುಳ್ಳ ಗ್ರಾಮಗಳು ಸಹ ಬೀದರ ಜಿಲ್ಲೆಯಲ್ಲಿರುವುದರಿಂದ ಹಾಗೂ ಅಬುಲ್ ಫೈಜಿಯು (ಕ್ರಿ.ಶ 1587) ಭಾಸ್ಕರನಜನ್ಮಸ್ಥಾನ 'ಬೀದರ' ಎಂದು ತಿಳಿಸಿರುವುದರಿಂದ, ಭಾಸ್ಕರನ ಜನ್ಮಸ್ಥಾನವು ಇಂದಿನ ಬೀದರವೇ ಆಗಿದೆ ಎನ್ನುವುದೆ ಸೂಕ್ತವಾಗಿದೆ.

ಭಾಸ್ಕರನ ಮೊಮ್ಮಗನಾದ ಚಂಗದೇವನು ದೇವಗಿರಿಯ ರಾಜ ಸಿಂಘಣನ ಪ್ರಮುಖ ಖಗೊಳಶಾಸ್ತ್ರಜ್ಞ (ಜ್ಯೋತಿಷಿ=ದೈವಜ್ಞ) ಆಗಿದ್ದನು. ಚಂಗದೇವನು ತನ್ನ ಅಜ್ಜ ಭಾಸ್ಕರನ ಕೃತಿಗಳ ಅಧ್ಯಯನ ಮತ್ತು ಅಧ್ಯಾಪನಗಳ ಮುಂದುವರಿಕೆಗಾಗಿ ಶಾಲಿವಾಹನ ಶಕೆ 1129ರಲ್ಲಿ (ಅಂದರೆ ಕ್ರಿ.ಶ 1207 ರಲ್ಲಿ) ಪ್ರತ್ಯೇಕ ಮಠವೊಂದನ್ನು ಸ್ಥಾಪಿಸಿರುತ್ತಾನೆ.[171]

ಭಾಸ್ಕರನ ಕೃತಿಗಳು:

ಭಾಸ್ಕರನು ರಚಿಸಿದ ಕೃತಿಗಳೆಲ್ಲವೂ ಸಂಸ್ಕೃತ ಭಾಷೆಯಲ್ಲಿವೆ. ಅವುಗಳಲ್ಲಿ ಸುಪ್ರಸಿದ್ಧವಾದ ಮೂರು ಕೃತಿಗಳು ಇಂತಿವೆ.

1. ಲೀಲಾವತಿ : ಇದು ಅಂಕಗಣಿತ, ಜ್ಯಾಮಿತಿ (ರೇಖಾಗಣಿತ) ಮತ್ತು ಕ್ಷೇತ್ರಗಣಿತಗಳನ್ನೊಳಗೊಂಡ ಪ್ರಾಚೀನ ಭಾರತೀಯ ಗಣಿತದ ಪಾಣೀಗಣಿತ ಪಂಗಡಕ್ಕೆ

ಸೇರಿದ ಅತ್ಯಂತ ಜನಪ್ರಿಯವಾದ ಕೃತಿಯಾಗಿದೆ.

2. ಬೀಜಗಣಿತ : ಇದು ಏಕಘಾತೀಯ ಅನಿರ್ಣೀತ ಸಮೀಕರಣ (ಕುಟ್ಟಕ), ದ್ವಿಘಾತೀಯ ಅನಿರ್ಣೀತ ಸಮೀಕರಣ (ವರ್ಗಪ್ರಕೃತಿ)ಗಳ ವಿಶ್ಲೇಷಣೆಯನ್ನು ಒಳಗೊಂಡ, ಸರ್ವಮಾನ್ಯ ಹಿಂದೂ–ಬೀಜಗಣಿತದ ಪ್ರಮಾಣಗ್ರಂಥದ ರೂಪದಲ್ಲಿದೆ.,

3. ಸಿದ್ಧಾಂತಶಿರೋಮಣಿ: ಮೂಲ ಗ್ರಂಥದೊಡನೆ ಸ್ವತಃ ಭಾಸ್ಕರನೇ ಬರೆದ 'ವಾಸನಾಭ್ಯಾಷ್ಯ' ಅಥವಾ 'ಮಿತಾಕ್ಷರ' ಎಂಬ ವ್ಯಾಖ್ಯಾನ–ವನ್ನೊಳಗೊಂಡ ಇದು ಹಿಂದೂ ಖಗೋಳಶಾಸ್ತ್ರದ ಪ್ರಮಾಣ ಗ್ರಂಥವಾಗಿದೆ. 'ಗ್ರಹಗಣಿತ' ಮತ್ತು 'ಗೋಲಾಧ್ಯಾಯ' ಎಂಬ ಎರಡು ಭಾಗಗಳನ್ನು ಹೊಂದಿದ್ದರೂ ಪ್ರತಿಯೊಂದು ಭಾಗವನ್ನು ಪ್ರತ್ಯೇಕಕೃತಿ ಎಂದು ಪರಿಗಣಿಸಬಹುದಾಗಿದೆ.

ಲೀಲಾವತೀ, ಬೀಜಗಣಿತ, ಗ್ರಹಗಣಿತ ಮತ್ತು ಗೋಲಾಧ್ಯಾಯಗಳ ಪೈಕಿ ಪ್ರತಿಯೊಂದನ್ನು ಪ್ರತ್ಯೇಕವಾದ ಗ್ರಂಥ ಎಂದು ಪರಿಗಣಿಸಬಹುದಾಗಿದ್ದರೂ, ಸಾಮಾನ್ಯವಾಗಿ 'ಜ್ಯೋತ್ಪತ್ತಿ'ಯನ್ನೊಳಗೊಂಡ ಈ ನಾಲ್ಕು ಕೃತಿಗಳನ್ನು ಸಿದ್ಧಾಂತಶಿರೋಮಣಿಯ ನಾಲ್ಕು ಭಾಗಗಳೆಂದು, ಅವೆಲ್ಲವುಗಳು ಒಟ್ಟಿಗೆ ಸೇರಿದ ಬೃಹತ್ಕೃತಿಯನ್ನು ಸಿದ್ಧಾಂತಶಿರೋಮಣಿ ಎಂದು ಹೇಳಲಾಗುತ್ತದೆ. ಖಗೋಳಶಾಸ್ತ್ರದ ಮೇಲೆ ಕೈಪಿಡಿಯ ರೂಪದಲ್ಲಿ ರಚಿಸಿರುವ 'ಕರಣಕುತೂಹಲ' (ಕ್ರಿ.ಶ 1183) ಮತ್ತು ಲಲ್ಲನ (ಕ್ರಿ.ಶ 748) 'ಶಿಷ್ಯಧೀವೃದ್ಧಿದ' ತಂತ್ರದಮೇಲಿನ ಭಾಷ್ಯಗ್ರಂಥ ಭಾಸ್ಕರನ ಇನ್ನೆರಡು ಕೃತಿಗಳಾಗಿವೆ. 'ಸರ್ವತೋಭದ್ರಯಂತ್ರ' ಮತ್ತು 'ವಸಿಷ್ಠತುಲ್ಯ' ಎಂಬಕೃತಿಗಳೂ ಭಾಸ್ಕರನೇ ರಚಿಸಿದವುಗಳಾಗಿವೆ ಎಂದು ಹೇಳಲಾಗಿದೆ. ಆದರೆ 'ಬೀಜೋಪನಯ'ವು ಆತನ ಕೃತಿ ಎಂಬುದು ವಿವಾದಾಸ್ಪದವಾದ ಸಂಗತಿಯಾಗಿದೆ.

ಲೀಲಾವತೀ:

ಇದು ಸಾಮಾನ್ಯ ವ್ಯವಹಾರಕ್ಕೆ ಅವಶ್ಯವಿರುವ ಗಣಿತದ ತಿಳಿವಳಿಕೆಯನ್ನು ನೀಡುವ ಕೃತಿಯಾಗಿದೆ. ಭಾಸ್ಕರನು ಇದರಲ್ಲಿ ಸಂಖ್ಯಾಸ್ಥಾನದ ಹೆಸರುಗಳು, ವಿವಿಧ ಅಳತೆಯಮೂಲಮಾನಗಳು, ಸಂಕಲನ, ವ್ಯವಕಲನ ಇತ್ಯಾದಿ ಎಂಟು ಮೂಲಭೂತ ಪ್ರಕ್ರಿಯೆಗಳು, ವ್ಯಸ್ತವಿಧಿ, ಇಷ್ಟಕರ್ಮ, ಸಂಕ್ರಮಣ, ತ್ರೈರಾಶಿಕ, ಶ್ರೇಢಿ, ಕ್ಷೇತ್ರಗಣಿತ, ಕುಟ್ಟಕ, ಅಂಕಪಾಶ ಇತ್ಯಾದಿ ವಿಷಯಗಳನ್ನು ಸುಸಂಬದ್ಧ ರೀತಿಯಲ್ಲಿ ಹೊಂದಿಸಿ, ಮನೋರಂಜಕವಾದ ಉದಾಹರಣೆಗಳ ಮೂಲಕ ಮನಮುಟ್ಟುವಂತೆ ಸುಲಲಿತವಾಗಿ ನೆನಪಿನಲ್ಲಿಟ್ಟುಕೊಳ್ಳುವುದಕ್ಕೆ ಅನುಕೂಲವಾಗುವಂತೆ ಸುಮಾರು 270 ಶ್ಲೋಕಗಳಲ್ಲಿ ಬರೆದಿದ್ದಾನೆ. ಉದಾಹರಣೆ ಲೆಕ್ಕದಲ್ಲಿ ನಿರೂಪಿತ ವಿಷಯ ಮತ್ತು ಅಭಿವ್ಯಕ್ತವಾಗುವ ರಸಕ್ಕೆ ತಕ್ಕದಾದ ಛಂದಸ್ಸನ್ನು ಬಳಸಿದ್ದಾನೆ. ಇದನ್ನು ಇಂದಿಗೂ ಸಂಸ್ಕೃತ ಮಾಧ್ಯಮದ ಪಾಠಶಾಲೆಗಳಲ್ಲಿ ಪಠ್ಯವೆಂದು ಬಳಸುತ್ತಿರುವುದು ಇದರ ಜನಪ್ರಿಯತೆಗೆ ಸಾಕ್ಷಿಯಾಗಿದೆ.

ಅಕ್ಬರನು ಸಂಸ್ಕೃತ ಗ್ರಂಥಗಳನ್ನು ಪರ್ಷಿಯನ್ ಭಾಷೆಗೆ ಭಾಷಾಂತರಿಸಲು ಆಜ್ಞೆಯನ್ನು ಹೊರಡಿಸಿದನು. ಅದನ್ನು ಆತನ ಅಸ್ಥಾನಿಕ ಅಬುಲ್ ಫೈಜಿಯು ಕ್ರಿ.ಶ 1587ರಲ್ಲಿ ನೆರವೇಸಿದನು. ಫೈಜಿ ಮಾಡಿದ ಲೀಲಾವತೀಯ ಭಾಷಾಂತರದ ಪ್ರಸ್ತಾವನೆಯಲ್ಲಿ, ಭಾಸ್ಕರನು ತನ್ನ ಸಿದ್ಧಾಂತಶಿರೋಮಣಿಯ ಪ್ರಥಮಭಾಗಕ್ಕೆ 'ಲೀಲಾವತೀ' ಎಂದು ಹೆಸರಿಡಲು ಕಾರಣವಾದ ಕೂತೂಹಲಕರವಾದ ಪ್ರಸಂಗವೊಂದನ್ನು ತಿಳಿಸಿದ್ದಾನೆ.

ಲೀಲಾವತಿ ರಚಿತವಾದ ಕಾಲ ಕ್ರಿ.ಶ 1150 ದಿಂದಲೂ ಅನೇಕರು ಅದಕ್ಕೆ ಭಾಷ್ಯಗಳನ್ನು ಬರೆದಿದ್ದಾರೆ. ಸಂಸ್ಕೃತ ಭಾಷ್ಯಕಾರರಲ್ಲಿ ಪರಮೇಶ್ವರ (ಸು.ಕ್ರಿ.ಶ 1430) ಗಣೇಶ ದೈವಜ್ಞ (ಕ್ರಿ.ಶ 15145), ಮುನೀಶ್ವರ (ಸು.ಕ್ರಿ.ಶ 1635) ಮತ್ತು ರಾಮಕೃಷ್ಣ (ಕ್ರಿ.ಶ 1687) ಪ್ರಮುಖರಾಗಿದ್ದಾರೆ. ಲೀಲಾವತೀಯ ಭಾಷ್ಯಗಳಲ್ಲಿ ಕೆಲವು ಮಾತ್ರ ಪ್ರಕಟವಾಗಿದ್ದು, ಅವುಗಳ ಪೈಕಿ ಗಣೇಶ ದೈವಜ್ಞನಭಾಷ್ಯವು ಪಠ್ಯವನ್ನು ವಿವರಿಸುವ ಮತ್ತು ನಿಯಮ ಅಥವಾ ಸೂತ್ರಗಳಿಗೆ ಉಪಪತ್ತಿಯನ್ನು ಒದಗಿಸುವ ಒಳ್ಳೆಯ ಭಾಷ್ಯಗ್ರಂಥವಾಗಿದೆ. ಆದಾಗ್ಯೂ ಕೇರಳದ ಆರ್ಯಭಟೀಯ ಪರಂಪರೆಯ ಶಂಕರವಾರಿಯರ್ (ಕ್ರಿ.ಶ 1500–15690) ರಚಿಸಿರುವ 'ಲೀಲಾವತೀ'ಯ ಮೇಲಿನ ಭಾಷ್ಯ 'ಕ್ರೀಯಾಕ್ರಮಕರಿ' ಸರ್ವೋತ್ಕೃಷ್ಟ ಭಾಷ್ಯಗ್ರಂಥವಾಗಿದೆ. ಶಂಕರನು ರಚಿಸಿದ ಭಾಷ್ಯವು ಶ್ಲೋಕ 199ರವರೆಗೆ ಮಾತ್ರ ಇದ್ದು ಅಪೂರ್ಣವಾಗಿತ್ತು. ಆತನ ಮರಣಾನಂತರ ನಾರಾಯಣ ಮಹಿಷಮಂಗಲಂ (ಕ್ರಿ.ಶ 1540–1610) ಎಂಬುವನು ಅದರ ಮಿಕ್ಕಭಾಗವನ್ನು ತನ್ನ ಹದಿನೆಂಟನೆಯ ವಯಸ್ಸಿನಲ್ಲಿ ಪೂರ್ಣಗೊಳಿಸಿದನು.;

ಭಾರತೀಯ ಪ್ರಾದೇಶಿಕ ಭಾಷೆಗಳಲ್ಲಿಯೂ ಲೀಲಾವತೀಯ ಭಾಷ್ಯಗ್ರಂಥಗಳಿವೆ. ಆಧುನಿಕ ವಿದ್ವಾಂಸರು ಲೀಲಾವತೀಯನ್ನು ಭಾಷಾಂತರಿಸಿದ್ದಾರೆ. ಭಾಷ್ಯವನ್ನು ಬರೆದಿದ್ದಾರೆ. ಸಂಪಾದಿಸಿ ಹೊಸ ಸಂಸ್ಕರಣಗಳನ್ನು ಹೊರತಂದಿದ್ದಾರೆ. ಎಚ್. ಟಿ ಕೋಲ್‌ಬ್ರುಕ್ ಅವರ ಆಂಗ್ಲ ಅನುವಾದವು ಮೂಲ ಸಂಸ್ಕೃತಪಠ್ಯ ಹಾಗೂ ಗಂಗಾಧರನ 'ಗಣಿತಾಮೃತಸಾಗರಿ' (ಸು. ಕ್ರಿ.ಶ 1420) ಸೂರ್ಯದಾಸನ "ಗಣಿತಾಮೃತ ಕೂಪಿಕಾ' (ಕ್ರಿ.ಶ 1538), ಗಣೇಶದೈವಜ್ಞನ ಬುದ್ಧಿವಿಲಾಸಿನಿ (ಕ್ರಿ.ಶ 1545) ರಂಗನಾಥನ ಮಿತಭಾಷಿಣಿ (ಕ್ರಿ.ಶ 1643), ರಾಮಕೃಷ್ಣದೇವನ 'ಮನೋರಂಜನ' (ಕ್ರಿ.ಶ 1748ಗಿಂತ ಮುಂಚೆ) ಮತ್ತಿತರ ಭಾಷ್ಯಗಳನ್ನಾಧರಿಸಿದ್ದಾಗಿದೆ.

ಲೀಲಾವತಿ ಆಧ್ಯಯ–1ರಲ್ಲಿ ಭಾಸ್ಕರನು, ಯಾರು ಸ್ಮರಿಸಿದಾಕ್ಷಣ ಭಕ್ತಜನರ ವಿಘ್ನಗಳನ್ನು ನಿವಾರಿಸಿ ಸಂತೋಷವನ್ನು ಉಂಟುಮಾಡುವನೋ, ದೇವರುಗಳಿಂದ ವಂದಿಸಲ್ಪಟ್ಟ ಪಾದಗಳನ್ನು ಉಳ್ಳವನಾಗಿರುವನೋ, ಅಂತಹ ಗಜಾನನನ್ನು ನಮಸ್ಕರಿಸಿ, ನಾನು (ಭಾಸ್ಕರಾಚಾರ್ಯ), ಬುದ್ಧಿವಂತರಿಗೆ ಉಲ್ಲಾಸವನ್ನು ಉಂಟು ಮಾಡುವಂತಹ, ಸ್ಪಷ್ಟವಾದ ಕೆಲವೇ ಅಕ್ಷರಗಳನ್ನು, ಮೃದುವಾದ ದೋಷರಹಿತ ಲಾಲಿತ್ಯಪೂರ್ಣ ಪದಗಳನ್ನು ಹೊಂದಿರುವ 'ಲೀಲಾವತೀ' ಎಂಬ ಪಾಟೀಗಣಿತವನ್ನು ಹೇಳುತ್ತಿರುವೆ ಎಂದು ಪ್ರಾರಂಭಿಸುತ್ತಾನೆ.

ಬೀಜಗಣಿತ :

ಉನ್ನತ ವ್ಯಾಸಂಗದಲ್ಲಿ ಇದು ಪಠ್ಯವಾಗಿತ್ತು. ಭಾಸ್ಕರನು ತಾನು ಬ್ರಹ್ಮಗುಪ್ತ (ಕ್ರಿ.ಶ 628), ಶ್ರೀಧರ (ಕ್ರಿ.ಶ 750), ಪದ್ಮನಾಭ (ಕ್ರಿ.ಶ 778) ಮುಂತಾದ ಪ್ರಾಚೀನ ಆಚಾರ್ಯರ ಕೃತಿಗಳಲ್ಲಿನ ಸಾರವನ್ನು ಸಂಗ್ರಹಿಸಿ ವಿಷಯವನ್ನು ಸುಲಭವಾದ ಶೈಲಿಯಲ್ಲಿ ಸಾಮಾನ್ಯರಿಗೂ ತಿಳಿಯುವಂತೆ ನಿರೂಪಿಸಿರುವೆನು ಎಂದಿದ್ದಾನೆ. ಚಿಹ್ನೆ ಅವ್ಯಕ್ತದ ಸಂಕೇತಗಳು, ಸಂಕಲನ ವ್ಯವಕಲನ ಇತ್ಯಾದಿ ಎಂಟು ಮೂಲಭೂತ ಪ್ರಕ್ರಿಯೆಗಳು ಶೂನ್ಯಸಂಬಂಧಿಗಣಿತ, ಕರಣಿಗಳು, ಕುಟ್ಟಕ, ವರ್ಗಪ್ರಕೃತಿ, ಏಕವರ್ಣ–ಸಮೀಕರಣ, ಅನೇಕವರ್ಣ–ಸಮೀಕರಣ, ಮಧ್ಯಮಾಹರಣ ಮತ್ತು ಭಾವಿತ ಮುಂತಾದ ವಿಷಯ ಕುರಿತು ವಿವರವಾಗಿ ಚರ್ಚಿಸಲಾಗಿದೆ. ವರ್ಗಪ್ರಕೃತಿಗೆ ಸೂಚಿಸಿರುವ 'ಚಕ್ರವಾಲ' ವಿಧಾನದ ಚರ್ಚೆಗೆ ಒಂದು ಪ್ರತ್ಯೇಕ ಅಧ್ಯಯವನೇ ಮೀಸಲಾಗಿರಿಸಿದ್ದಾನೆ. ಬೀಜಗಣಿತದ ಕೆಲವು ವಿಷಯುಗಳು ತುಸು ಕ್ಲಿಷ್ಟಕರವಾಗಿರುವುದರಿಂದ, ಈ ಕೃತಿಯು ಲೀಲಾವತೀಯಷ್ಟು ಜನಪ್ರಿಯವಾಗಿಲ್ಲ. ಆಟ್ ಅಲ್ಲಾಹ್ ರಶ್ದೀಯು 'ಭಾಸ್ಕರೀಯ ಬೀಗಣೀತ'ವನ್ನು ಕ್ರಿ.ಶ 1635ರಲ್ಲಿ ಫಾರ್ಸಿ ಭಾಷೆಗೆ ಭಾಷಾಂತರಿಸಿದ್ದಾನೆ.

ಸಿದ್ಧಾಂತ ಶಿತೋಮಣಿ:

ಗ್ರಹಗಳ ಸ್ಥಿತಿಗತಿಗಳ ಬಗ್ಗೆ ತಿಳಿಸುವ 'ಗ್ರಹಗಣಿತ' ಮತ್ತು ಖಗೋಳದ ಲೆಕ್ಕಾಚಾರವನ್ನು ವಿವರಿಸುವ 'ಗೋಲಾಧ್ಯಾಯ'ಗಳು ಇದರ ಎರಡು ಭಾಗಗಳಾಗಿವೆ. ಮೂಲಗ್ರಂಥದೊಡನೆ 'ವಾಸನಾಭಾಷ್ಯ' ಅಥವಾ 'ಮಿತಾಕ್ಷರ' ಎಂದೂ ಕರೆದಿರುವ ಭಾಷ್ಯವು ಇದೆ. ಲಕ್ಷ್ಮೀದಾಸ, ನೃಸಿಂಹ (ಕ್ರಿ.ಶ 1621), ಮುನೀಶ್ವರ (ಕ್ರಿ.ಶ 1638/1645) ಮತ್ತು ರಾಮಕೃಷ್ಣ ಈ ಕೃತಿಗೆ ಭಾಷ್ಯವನ್ನು ಬರೆದ ಇತರ ಭಾಷ್ಯಕಾರರಾಗಿದ್ದಾರೆ. ಸಫ್ದರ್ ಅಲಿಖಾನ್ ರಚಿತ 'ಝೀಜ್ ಸರುಮಣಿ' (ಕ್ರಿ.ಶ 1797) ಗ್ರಂಥವು ಸಿದ್ಧಾಂಥಶಿರೋಮಣಿಯ ಪರ್ಷಿಯನ್ ಭಾಷಾಂತರ ವಾಗಿರಬಹುದೆಂದು ಭಾವಿಸಲಾಗಿದೆ.

ಜ್ಯೋತ್ಪತ್ತಿ :

ಭಾಸ್ಕರನು ಸಿದ್ಧಾಂತ ಶಿರೋಮಣಿಯ ಗೋಲಾಧ್ಯಾಯದಲ್ಲಿ ಜ್ಯೋತ್ಪತ್ತಿ ಎಂಬ ವಿಷಯವನ್ನು ಬೇರೆ ಬೇರೆ ಎರಡು ಸ್ಥಾನಗಳಲ್ಲಿ ಚರ್ಚಿಸಿದ್ದಾನೆ. ಮೊದಲನೆಯ ಬಾರಿಗೆ ಐದನೆಯ ಅಧ್ಯಾಯವಾಗಿರುವ ಸ್ಫುಟಗತಿವಾಸನಾದಲ್ಲಿ ಮೊದಲ ಆರು ಶ್ಲೋಕಗಳನ್ನು ಅದಕ್ಕಾಗಿ ಮೀಸಲಾಗಿರಿಸಿದ್ದಾನೆ. ಈ 6 ಶ್ಲೋಕಗಳಲ್ಲಿ ಜ್ಯೋತ್ಪತ್ತಿಗೆ ಸಂಬಂಧಿಸಿದ ಮೂಲಭೂತ ಉತ್ಪನ್ನಗಳ ವ್ಯಾಖ್ಯೆಗಳನ್ನು ಮತ್ತು ಕೆಲವು ಪ್ರಾಥಮಿಕ ಸಂಗತಿಗಳನ್ನು ಹಾಗೂ ನಿಯಮಗಳನ್ನು ಹೇಳಿದ್ದಾನೆ. ಈ ಜ್ಯೋತ್ಪತ್ತಿಯು 25 ಶ್ಲೋಕಗಳನ್ನೊಳಗೊಂಡಿದೆ. ಇದನ್ನು 'ಗೋಲಾಧ್ಯಾಯ'ದ ಕೊನೆಯ ಅಂದರೆ 14ನೆಯ ಅಧ್ಯಾಯವೆಂದು ಪರಿಗಣಿಸಬಹುದಾಗಿದೆ.[172]

4. ಸೋಮೇಶ್ವರ ವಿರಚಿತ ಮಾನಸೋಲ್ಲಾಸ :

ಕರ್ನಾಟಕ ಇತಿಹಾಸದುದ್ದಕ್ಕೂ ಅನೇಕ ಅರಸರುಗಳು ಸಾಹಿತ್ಯಸೃಷ್ಟಿಗೆ ಆಶ್ರಯ ನಿಡಿದುದಲ್ಲದೇ ಸಾಹಿತ್ಯವನ್ನು ಸೃಷ್ಟಿಸುತ್ತ ಬಂದಿದ್ದಾರೆ. ಅಂತಹ ದೊರೆಗಳಲ್ಲಿ ಮೂರನೆಯ ಸೋಮೇಶ್ವರನೂ ಒಬ್ಬನು. ಮೂರನೆಯ ಸೋಮೇಶ್ವರನು ತಂದೆಯ 60 ವರ್ಷಗಳಷ್ಟು ಸುದೀರ್ಘ ಆಳ್ವಿಕೆಯ ಕಾರಣದಿಂದ ತನ್ನ ಬಿಡುವಿನ ವೇಳೆಯಲ್ಲಿ ಸಾಹಿತ್ಯ, ಶಾಸ್ತ್ರ, ವ್ಯಾಸಾಂಗದಲ್ಲಿ, ವಿದ್ಯಾ ವಿನೋದದಲ್ಲಿ ಕಳೆದನೆಂದು ತೋರುತ್ತದೆ. ಇದರ ಫಲವಾಗಿ ಮನಸೊಲ್ಲಾಸ ನಾಮಪ್ರಸಿದ್ಧಿಯ ಅಭಿಲಾಷಿತಾರ್ಥ ಚಿಂತಾಮಣಿ ರಚಿತವಾಯಿತು. ಸೋಮೇಶ್ವರನು ತಾನು ಅದರ ಕರ್ತೃನೆಂದು ಪ್ರಸ್ತುತ ಕೃತಿಯ ಮಧ್ಯೆ ಮಧ್ಯೆ ಹೇಳಿಕೊಂಡಿರುವನಲ್ಲದೇ ಅಂತ್ಯದ ಪ್ರಶಸ್ತಿಯಲ್ಲಿ ನೇರವಾಗಿ ತನ್ನ ಹೆಸರನ್ನು ಹೇಳಿಕೊಂಡಿದುದರ ಕನ್ನಡ ಪಾಠ ಈ ರೀತಿಯಾಗಿದೆ.

ಶ್ರೀಮದ್ಬುಲೋಕಮಲ್ಲ ಶ್ರೀ ಸೋಮೇಶ್ವರದೇವ ವಿರಚಿತ ಅಭಿಲಾಷಿತಾರ್ಥ ಚಿಂತಾಮಣಿಯೆನಿಸಿದ ಮಾನಸೋಲ್ಲಾಸದಲ್ಲಿ... ಹೀಗೆ ಇನ್ನು ನಾಲ್ಕು ಸಲ ಹೇಳಿಕೊಂಡಿದ್ದಾನೆ. ಈ ಕೃತಿ ಕ್ರಿ.ಶ 1129ರಲ್ಲಿ ಅಂದರೆ ಮೂರನೆಯ ಸೋಮೇಶ್ವರನು ಪಟ್ಟಕ್ಕೆ ಬಂದ ಎರಡನೆಯ ವರ್ಷದಲ್ಲಿ ಬರೆಯಲ್ಪಟ್ಟಿದೆ.

ಮಾನಸೋಲ್ಲಾಸ ಐದು ವಿಂಶತಿಯಾಗಿ ವಿಭಾಗಿಸಲ್ಪಟ್ಟಿದೆ. ಪ್ರತಿಯೊಂದು ವಿಂಶತಿಯಲ್ಲಿ 70 ಅಧ್ಯಾಯಗಳಿವೆ. ಹೀಗೆ 5 ವಿಂಶತಿ 100 ಅಧ್ಯಾಯಗಳಲ್ಲಿ ವಿನ್ಯಾಸಗೊಂಡಿದೆ. ಒಂದೊಂದು ಅಧ್ಯಾಯದಲ್ಲಿ ಬಹಳಷ್ಟು ಒಳ ವಿಭಾಗಗಳನ್ನು ಮಾಡಿಕೊಳ್ಳಲಾಗಿದೆ. ಉದಾಃ ದ್ವಿತೀಯ ವಿಂಶತಿಯ ಅಮಾತ್ಯಾಧ್ಯಾಯದಲ್ಲಿ ಮಂತ್ರಿ ಲಕ್ಷಣ, ಪುರೋಹಿತ ಲಕ್ಷಣ, ಪಂಚಾಂಗ ನಿರ್ಣಯ, ಜ್ಯೋತಿರ್ವಿದ್ ಗಣಕ ಲಕ್ಷಣ, ಧರ್ಮಾಧಿಕಾರಿ ಲಕ್ಷಣ, ಕೋಶಾಧ್ಯಕ್ಷ, ಗಣಕ ಲಕ್ಷಣ, ಪ್ರತಿಹಾರ ಲಕ್ಷಣ, ಸಂಧಿವಿಗ್ರಹಿಕ ಲಕ್ಷಣ, ಲೇಖಕ ಲಕ್ಷಣ, ಸಾರಥಿ ಲಕ್ಷಣ, ಸೂದ ಲಕ್ಷಣ, ಅಂತಃಪುರ ರಕ್ಷಕರ ಮತ್ತು ಕುಮಾರ ಪರಿಪಾಲಕರ ಲಕ್ಷಣ ಈ ವಿವರಗಳಿವೆ.

ಎಲ್ಲಾ ಅಧ್ಯಾಯ ಸೇರಿ ಒಟ್ಟು ಸುಮಾರು 8000 ಶ್ಲೋಕಗಳು ಈ ಕೃತಿಯಲ್ಲಿವೆ. ಪ್ರಥಮ ವಿಂಶತಿಯಲ್ಲಿ 300 ಶ್ಲೋಕ, ದ್ವಿತೀಯ ವಿಂಶತಿಯಲ್ಲಿ 1200 ಶ್ಲೋಕ, ತೃತಿಯ ವಿಂಶತಿಯಲ್ಲಿ 1820, ಚತುರ್ಥ ವಿಂಶತಿಯಲ್ಲಿ 1725+1494=3219 ಶ್ಲೋಕ, ಪಂಚಮಿ ವಿಂಶತಿಯಲ್ಲಿ 1375 ಶ್ಲೋಕಗಳಿರುವುದನ್ನು ಒಳಗೊಂಡಿದೆ.

ಪ್ರಥಮ ವಂಶತಿಯಲ್ಲಿ 1. ಅಸತ್ಯ ವರ್ಜನಾಧ್ಯಾಯ, 2. ಪರದ್ರೋಹ ವರ್ಜನಾಧ್ಯಾಯ, 3. ಅಗಮ್ಯ ವರ್ಜನಾಧ್ಯಾಯ, 4. ಅಭಕ್ಷ್ಯ ವರ್ಜನಾಧ್ಯಾಯ, 5. ಅಸೂಯಾ ವರ್ಜನಾಧ್ಯಾಯ, 6. ಪತಿತಸಂಗ ವರ್ಜನಾಧ್ಯಾಯ, 7. ಕ್ರೋಧ ವರ್ಜನಾಧ್ಯಯ, 8. ಸ್ವಾತ್ಮಸ್ತುತಿ ವರ್ಜನಾಧ್ಯಾಯ, 9. ದಾನಾಧ್ಯಾಯ, 10. ಪ್ರಿಯ ವಚನಾಧ್ಯಾಯ, 11. ಇಷ್ಟಾಪೂರ್ತಾಧ್ಯಾಯ, 12. ಅಶೇಷ ದೇವತಾ ಭಕ್ತಾಧ್ಯಾಯ, 13. ಗೋವಿಪ್ರ ತರ್ಪಣಾಧ್ಯಾಯ, 14. ಪಿತೃತರ್ಪಣಾಧ್ಯಾಯ, 15. ಅತಿಥಿ ಪೂಜನಾಧ್ಯಾಯ, 16. ಗುರು ಶೂಶ್ರೂಷಣಾಧ್ಯಾಯ, 17. ತಪೋಧ್ಯಾಯ, 18. ತೀರ್ಥಸ್ನಾನಾಧ್ಯಾಯ, 19. ವೈದ್ಯಾಧ್ಯಾಯ, 20 ಶರಣಾಗತ ರಕ್ಷಣಾಧ್ಯಯ ಎಂಬ 20 ಅಧ್ಯಾಯಗಳಿವೆ.

ರಾಜ್ಯಸ್ಥಿರತೆಯ ಕಾರಣಗನ್ನೊಳಗೊಂಡ ಮತ್ತು ಸಂಪ್ರಾಪ್ತವಾದ ರಾಜ್ಯವನ್ನು ಸ್ಥಿರಗೊಳಿಸುವ ಕಾರಣಗಳನ್ನು ದ್ವಿತೀಯ ವಿಂಶತಿಯು ತಿಳಿಸುತ್ತದೆ.

ಈ ವಿಂಶತಿಯಲ್ಲಿ 1. ಸ್ವಾಮ್ಯಧ್ಯಾಯ, 2. ಅಮಾತ್ಯಾಧ್ಯಾಯ, 3. ರಾಷ್ಟ್ರಾಧ್ಯಾಯ, 4. ಕೋಶಾಧ್ಯಾಯ, 5. ದುರ್ಗಾಧ್ಯಾಯ, 6. ಬಲಾಧ್ಯಾಯ, 7. ಸುಹೃದಧ್ಯಾಯ, 8. ಪ್ರಭುಶಕ್ತ್ಯಧ್ಯಾಯ, 9. ಮಂತ್ರಶಕ್ತ್ಯಧ್ಯಾಯ, 10. ಉತ್ಸಾಹಶಕ್ತ್ಯಧ್ಯಾಯ, 11. ಸಂಧ್ಯಧ್ಯಾಯ, 12. ವಿಗ್ರಹಾಧ್ಯಾಯ, 13. ಯಾತ್ರಾಧ್ಯಾಯ, 14. ಅಸನಾಧ್ಯಾಯ, 15. ಆಶ್ರಯಾಧ್ಯಾಯ, 16. ದ್ವೈದೀಭಾವಾಧ್ಯಾಯ, 17. ಸಾಮಾಧ್ಯಾಯ, 18. ಭೇದಾಧ್ಯಾಯ, 19. ದಾನಾಧ್ಯಾಯ, 20 ದಂಡಾಧ್ಯಾಯ ಎಂಬ 20 ಅಧ್ಯಾಯಗಳಿವೆ.

ಸುಸ್ಥಿರಗೊಂಡ ರಾಜ್ಯದ ಉಪಭೋಗಗಳನ್ನು ವಿವರಿಸುವ ತೃತಿಯ ವಿಂಶತಿಯಲ್ಲಿ, 1. ಗೃಹೋಪಭೊಗ, ಸ್ನಾನಭೋಗ, 3. ಪಾದುಕಾಭೋಗ, 4. ತಾಂಬೂಲಭೋಗ, 5. ವಿಲೇಪನಭೋಗ, 6. ವಸ್ತ್ರೋಪಭೋಗ, 7. ಮಾಲ್ಯೋಪಭೋಗ, 8. ಭೂಷೋಪಭೋರ್ಗ, 9. ಅಸನೋಪಭೋಗ, 10. ಚಾಮರೋಪಭೋಗ, 11. ಆಸ್ಥಾನಭೋಗ, 12. ಪುತ್ರಭೋಗ, 13. ಅನ್ನಭೋಗ, 14. ಪಾನೀಯ ಭೋಗ, 15. ಪಾದಾಭ್ಯಾಂಗೋಪಭೋಗ, 16. ಯಾನೋಪಭೋಗ, 17. ಛತ್ರೋಪಭೋಗ, 18.ಶಯ್ಯಾಭೋಗ, 19. ಧೂಪಭೋಗ, 20. ಸ್ತ್ರೀಭೋಗ ಎಂಬ 21. ಅಧ್ಯಾಯಗಳಿವೆ.

ಚತುರ್ಥ ವಿಂಶತಿಯಲ್ಲಿ ಪ್ರಮೋದಜನಕ ರಾಜವಿನೋದಗಳಾದ 1. ಶಸ್ತ್ರವಿನೋದ, 2. ಶಾಸ್ತ್ರವಿನೋದ, 3. ಗಜವಾಹ್ಯಾಲೀ ವಿನೋದ, 4. ತುರಗವಾಹ್ಯಾಲೀ ವಿನೋದ, 5. ಅಂಕವಿನೋದ, 6. ಮಲ್ಲವಿನೋದ, 7. ಕುಕ್ಕುಟವಿನೋದ, 8. ಲಾವಕವಿನೋದ, 9. ಮೇಷವಿನೋದ, 10. ಮಹಿಷವಿನೋದ, 11. ಪಾರಾವತವಿನೋದ, 12. ಸಾರಮೇಯ ವಿನೋದ, 13. ಶ್ಯೇನವಿನೋದ, 14. ಮತ್ಸ್ಯವಿನೋದ, 15. ಮೃಗಯಾವಿನೋದ, 16. ಗೀತವಿನೋದ, 17. ವಾದ್ಯವಿನೋದ, 18. ನೃತ್ಯವಿನೋದ, 19. ಕಥಾವಿನೋದ ಮತ್ತು 20. ಚಮತ್ಕಾರ ವಿನೋದಗಳಿವೆ.

ರಾಜನಿಗೆ ಸುಖವನ್ನುಂಟು ಮಾಡುವ ಕ್ರೀಡೆಗಳನ್ನು ಪಂಚಮ ವಿಂಶತಿಯು ತಿಳಿಸುತ್ತದೆ. 1. ಭೋಧರಕ್ರೀಡೆ, 2. ವನಕ್ರೀಡೆ, 3. ಅಂದೋಲನಕ್ರೀಡೆ, 4. ಸೇಚನಕ್ರೀಡೆ, 5. ಜಲಕ್ರೀಡೆ, 6. ಶಾದ್ವಲಕ್ರೀಡೆ, 7. ವಾಲುಕಾಕ್ರೀಡೆ, 8. ಜೋತ್ಸಾಕ್ರೀಡೆ, 9. ಸಸ್ಯಕ್ರೀಡೆ, 10. ಮದಿರಾಪಾನಕ್ರೀಡೆ, 11. ಪ್ರಹೇಳಿಕಾಕ್ರೀಡೆ, 12. ಚತುರಂಗಕ್ರೀಡೆ,

13. ಪಾಶಕ್ರೀಡೆ, 14. ವರಾಟಿಕಾಕ್ರೀಡೆ, 15. ಫಣಿದಾಕ್ರೀಡೆ, 16. ಫಂಜಿಕಾಕ್ರೀಡೆ, 17. ತಿಮಿರಕ್ರೀಡೆ, 18. ವೀರಕ್ರೀಡೆ, 19. ಪ್ರೇಮಕ್ರೀಡೆ, 20. ಸುರತಕ್ರೀಡೆ.

ಗ್ರಂಥದ ಕೊನೆಯಲ್ಲಿ ಈ ಶಾಸ್ತ್ರವನ್ನು ಕೇಳಿದವನಿಗೆ ಧರ್ಮದಲ್ಲಿ ಆಸಕ್ತಿಯೂ, ಆರ್ಥಶಾಸ್ತ್ರದಲ್ಲಿ ಕುಶಲತೆಯೂ ರಾಜನೀತಿಯಲ್ಲಿ ವಿಚಕ್ಷಣತೆಯೂ ಉಂಟಾಗುವುದೆಂದು ಸೇವೆ ಮಾಡುವುದರಲ್ಲಿ ದಕ್ಷತೆಯೂ, ಸಾಹಿತ್ಯದಲ್ಲಿ ನಿಪುಣತೆಯೂ, ತರ್ಕಗಳಲ್ಲಿ ಪಟುತ್ವವೂ, ಛಂದಸ್ಸು ಮತ್ತು ಅಲಂಕಾರಗಳ ಜ್ಞಾನವೂ,, ಶಾಸ್ತ್ರವಿದ್ಯೆಯಲ್ಲಿ ಜಾಣ್ಮೆಯೂ, ಆನೆ–ಕುದುರೆಗಳ ಸವಾರಿಯಲ್ಲಿ ಚಾತುರ್ಯವೂ, ಮಲ್ಲವಿದ್ಯೆಯಲ್ಲಿ ವಿಶೇಷ ಜ್ಞಾನವೂ, ಯುದ್ಧದಲ್ಲಿ ತಿಳಿವೂ, ಸಂಗೀತ ವಿದ್ಯೆಯಲ್ಲಿ ನೈಪುಣ್ಯವೂ ಉಂಟಾಗುತ್ತದೆ. ಇದರಲ್ಲಿ ಸಂಶಯವಿಲ್ಲ. ಮಾನಸೋಲ್ಲಾಸ ಎಂಬ ಈ ಶಾಸ್ತ್ರವು ಕಾಮಧೇನು ಎಲ್ಲ ವಿಷಯಗಳನ್ನು ತಿಳಿಸಿಕೊಡುವಲ್ಲಿ ಇದಕ್ಕೆ ಸಮನಾದ ಇನ್ನೊಂದು ಶಾಸ್ತ್ರಗ್ರಂಥ ಇಲ್ಲ. ಇದನ್ನು ಓದುವುದರಿಂದ ಬ್ರಾಹ್ಮಣವನ್ನು ಜ್ಞಾನವನ್ನು, ಕ್ಷತ್ರಿಯನು ರಾಜ್ಯವನ್ನು, ವೈಶ್ಯನು ಐಶ್ವರ್ಯವನ್ನು, ಶೂದ್ರನು ಉತ್ತಮ ವೃತ್ತಿಯನ್ನು ಪಡೆಯುವರು ಎಂದು ಹೇಳಿದ್ದಾನೆ.

ಸೋಮೇಶ್ವರನ ಮತ್ತೊಂದು ಕೃತಿಯಾದ ‘ವಿಕ್ರಮಾಂಕಾಭ್ಯುದಯಂ’ದಲ್ಲಿ ಕರ್ನಾಟಕದ ಭೂಮಿಯು ವಿಶಾಲವಾದ ಜನಪದ ಮಾರ್ಗಗಳನ್ನು ಒಳಗೊಂಡಿದ್ದು, ನಾನಾರೀತಿಯ ಜನರು ನಗರ ಗ್ರಾಮಗಳಲ್ಲಿ ವಾಸಿಸುತ್ತಿದ್ದರು. ಅಲ್ಲದೇ ಗೋದಾವರಿ, ಭೀಮರತಿ, ಕೃಷ್ಣವೇಣಿ, ಮಲಪ್ರಭಾ, ತುಂಗಭದ್ರಾ ಮುಂತಾದ ಪುಣ್ಯತಮ ನದಿಗಳಿಂದ ಕೂಡಿದ ಈ ಭೂಮಿಯ ವಿಂಧ್ಯ. ಸಹ್ಯಾದ್ರಿ, ಹೇಮಕೂಟ, ಮಲಯ, ಶ್ರೀಶೈಲ, ಕಿಷ್ಕಿಂದ, ಋಷ್ಯಮುಖ ಮೊದಲಾದ ಪರ್ವಗಳ ಅಧಿಷ್ಠಿತ ತಾಣವಾಗಿತ್ತು. ಇಲ್ಲಿನ ವನಗಳು ಸೌಂದರ್ಯದಿಂದ ಕೂಡಿದ್ದು, ಸೂರ್ಯನ ಕಿಣಗಳು ಭೂಮಿಯನ್ನು ಸ್ಪರ್ಶಿಸಲಾರದಷ್ಟು ದಟ್ಟವಾಗಿದ್ದವು. ಇಲ್ಲಿನ ಜಲಪಾತದ ನೀರು ಅಮೃತಕ್ಕೆ ಸಮಾನವಾಗಿತ್ತು.

ಇಲ್ಲಿಯ ಕರ್ನಾಟಕದ ಜನರು ಸಕಲ ವೇದ, ಸ್ಮೃತಿ, ಪುರಾಣ, ಇತಿಹಾಸ ವಿಷಯಗಳನ್ನು ಅಧ್ಯಯನ ಮಾಡಿದ್ದಲ್ಲದೆ ನಿತ್ಯ ನೆಮಿತ್ತಿಕ ಕಾರ್ಯಗಳನ್ನು ಮಾಡುತ್ತಿದ್ದರು. ದೇವತೆಗಳಿಗೆ ಹವಿಸ್ಸನ್ನು ಅರ್ಪಿಸುವುದಕ್ಕಾಗಿ ಯಾಗಗಳನ್ನು ಮಾಡುತ್ತಿದ್ದರು. ಇವರು ವ್ಯಾಪಾರ ಮಾಡುವಾಗ ಸುಳ್ಳನ್ನು ಹೇಳದೇ ಸತ್ಯದಿಂದ ವ್ಯಾಪಾರ ಮಾಡುತ್ತಿದ್ದವರು. ಎಲ್ಲ ಜನರು ಪುಣ್ಯಾತ್ಮವಾದ ಕರ್ಮಗಳನ್ನು ಮಾಡುತ್ತಿದ್ದರು. ಸೂಕ್ಷ್ಮ ಮತಿಗಳಾಗಿದ್ದರು. ಪರೋಪಕಾರಿಗಳಾಗಿದ್ದರೆಂದು ವರ್ಣಿಸಿದ್ದಾನೆ.

ಕಲ್ಯಾಣ ರಾಜಧಾನಿಯು ದೇವತೆಗಳು ವಾಸಿಸುವ ವಿಲಾಸದಂತೆ ಇತ್ತು. ಕುತೂಹಲವನ್ನು ಕೇರಳಿಸುವಂತಹ ಭವನಗಳು ಈ ಕಲ್ಯಾಣ ರಾಜಧಾನಿಯು ಅಮರಾವತಿಯನ್ನು ಮೀರಿಸುವಷ್ಟು ಸೊಬಗನ್ನು ಹೊಂದಿತ್ತು. ಭವನಗಳೆಲ್ಲವೂ

ರತ್ನ ಮಾಣಿಕ್ಯಗಳಿಂದ ನಿರ್ಮಿಸಲಾಗಿದ್ದವು. ಕೋಟೆಯ ಸುತ್ತಲೂ ಇರುವ ಜಲದಿಂದ ಅವೃತವಾದ ಕಂದಕಗಳು ಸಮುದ್ರದಷ್ಟು ಆಳವನ್ನು ಹೊಂದಿದ್ದವು. ಕೋಟೆಯ ಗೋಡೆಗಳು ಹಿಮಾಲಯ ಪರ್ವತದಷ್ಟು ಎತ್ತರವಾಗಿದ್ದವೆಂದು ಹೇಳಿದ್ದಾನೆ.

ಕೈಲಾಸ ಪರ್ವತದಷ್ಟು ಸ್ವಚ್ಛದಿಂದ ಕೂಡಿದ್ದ ಇಲ್ಲಿಯ ದೇವಾಲಯಗಳು ಪುಣ್ಯತಮ ಸ್ವರ್ಗಕ್ಕೆ ಸಮವಾಗಿದ್ದು, ತೇಜಸ್ಸಿನಿಂದ ಕೂಡಿದ್ದವು. ಇಂತಹ ದೇವಾಲಯಗಳಲ್ಲಿ ಯಾವಾಗಲೂ ನೃತ್ಯ ಗೀತಾದಿಗಳು ನಡೆಯುತ್ತಿದ್ದವು. ಕರ್ನಾಟಕ, ಆಂದ್ರ, ಗೂರ್ಜನರ್, ಮಹಾರಾಷ್ಟ್ರ, ದ್ರಾವಿಡ, ಪ್ರದೇಶದಿಂದ ಬಂದಿರುವ ನರ್ತಕೀಯರು ರೇವಕಲೋಕದಿಂದ ಇಳಿದು ಬಂದ ಅಪ್ಸರಾ ಸ್ತ್ರೀಯರೇ ನರ್ತಿಸಲು ಬಂದಿದ್ದಾರೆನ್ನುವಷ್ಟು ಅವರು ಸುಂದರವಾಗಿದ್ದರು. ಇಲ್ಲಿಯ ವೇಶ್ಯಾಸ್ತ್ರೀಯರು ಸಕಲ ಕಾಮಿನಿ ಜನರ ಹೃದಯವನ್ನು ಅಪಹರಿಸುಷ್ಟು ಸೌಂದರ್ಯವನ್ನು ಹೊಂದಿದವರಾಗಿದ್ದರು, ಸುಮಧುರ ವಸಂತಕಾಲದ ಕೋಗಿಲೆಯ ಕಂಠವನ್ನು ಹೊಂದಿದ್ದರು. ರಂಭೆ, ಊರ್ವಶಿ, ಮೇನಕೆಯರು ಇವರ ಮುಂದೆ ನಾಚಿಹೋಗುವಷ್ಟು ಈ ಸ್ತ್ರೀಯರು ಸುಂದರವಾಗಿದ್ದರು ಎಂದು ತಿಳಿಸುತ್ತಾನೆ.

ಅಹಮಲ್ಲ ಸೋಮೇಶ್ವರನ ಗುಣಗಳನ್ನು ವರ್ಣಿಸಿದ ಮೇಲೆ ಆತನ ಪೂರ್ವ ವಂಶಾವಳಿಯನ್ನು ಇಲ್ಲಿ ಕೊಡಲಾಗಿದೆ. ನಂತರ ಅಹವಮಲ್ಲ ಸಿಂಹಾಸನವನ್ನೇರಿದ್ದಾಗ ಅವನಿಗೆ ವಿಸ್ತಾರವಾದ ಸಾಮ್ರಾಜ್ಯವಿತ್ತು. ಆದರೆ ಅವನಿಗೆ ನೆಮ್ಮದಿ ಇರಲಿಲ್ಲ. ಇದಕ್ಕೆ ಕಾರಣ ಅಹವಮಲ್ಲನ ಕನಸಿನಲ್ಲಿ ಅವನ ಪೂರ್ವಜರು ಬಂದು ನೀನು ದೇವರಿಗೆ ಋಷಿಗಳಿಗೆ ದಾನದತ್ತಿ ನೀಡಿ ವೇದಗಳನ್ನೋದಿ ಯಜ್ಞಗಳನ್ನು ಮಾಡಿ ದೇವರುಣವನ್ನು ತೀರಿಸಿದ್ದೀಯ ಆದರೆ ನಮ್ಮ ಋಣವನ್ನು ನೀನಿನ್ನೂ ತೀರಿಸಿಲ್ಲ. ತೀರಿಸಲು ಆಗುವುದಿಲ್ಲ. ಏಕೆಂದರೆ ನಿನಗೆ ಪುತ್ರರಿಲ್ಲ ಎಂದು ಹೇಳುತ್ತಾರೆ.

ಮಹಾದೇವಿಯೂ ಕೂಡ ಮಗುವಿಲ್ಲದೇ ಶೋಭಿಸಲು ಸಾಧ್ಯವಿಲ್ಲವೆಂದು ದುಃಖಿಸುತ್ತಿರುವಾಗ ಅಹವಮಲ್ಲನು ದಾನ ತಪಸ್ಸುಗಳನ್ನು ಮಾಡಿದರೆ ಅಸಾಧ್ಯವಾದದ್ದು ಯಾವುದಿದೆ ವಿಪ್ರರನ್ನು ಸಂತೊಷಗೊಳಿಸಿದರೆ ಅಲಭ್ಯವಾದುದು ಯಾವುದಿದೆ ಪರಮೇಶ್ವರನನ್ನು ಆರಾಧಿಸಿದರೆ ದುರ್ಲಭವು ಯಾವುದಿದೆ. ಆದ್ದರಿಂದ ನೀನು ದುಃಖಿತಳಾಗಬೇಡ ಎಂದು ಸಮಾಧಾನಪಡಿಸುತ್ತಾನೆ.

ನಂತರ ಚತುಶಾಸ್ತ್ರ ಪಂಡಿತರನ್ನು ಕರೆಯಿಸಿ ತನಗೆ ಪುತ್ರಪ್ರಾಪ್ತಿಯಾಗಲು ಪುರಾಣ ಧರ್ಮಗಳಲ್ಲಿ ಹೇಳಿದ ವಿಷಯಗಳನ್ನು ತಿಳಿದುಕೊಂಡು ಷೋಡಶ ಮಹಾದಾನಗಳನ್ನು ಮಾಡಲು ತೃಪ್ತಿಗೊಂಡ ಶಿವನು ಕನಸನಲ್ಲಿ ಸನ್ಯಾಸಿ ವೇಷದಿಂದ ಬಂದು ರಾಜನೇ ನಿನ್ನ ಈ ಆರಾಧನೆ ಸಾಕು ಬೇಗನೆ ನಿನಗೊಬ್ಬ ಪುತ್ರನು ಜನಿಸುತ್ತಾನೆ. ಆದರೆ ನನ್ನನ್ನು ಹೆಮ್ಮೆ ಮತ್ತು ಆಡಂಬರದಿಂದ ಪೂಜಿಸಿದುದರಿಂದ ನಿನಗೆ ಜನಿಸುವ ಪುತ್ರನು ಸಂಪೂರ್ಣವಾಗಿ ರಜಸ್ ಮತ್ತು ತಮಸ್ ಗುಣಗಳಿಂದ ಕೂಡಿರುತ್ತಾನೆ. ಎಂದು ಹೇಳುತ್ತಾನೆ. ಈ ಮಾತನ್ನು ಕೇಳಿದ ಅಹವಮಲ್ಲದೇವನು

ನಾನು ಮಾಡಿದ ಕಾರ್ಯವೂ ವ್ಯರ್ಥವಾಯಿತು ಎಂದು ದುಃಖಿತನಾಗಿ ಶ್ರೀಪರ್ವತಕ್ಕೆ ಹೋಗಿ ತುಂಗಭದ್ರೆಯಲ್ಲಿ ಮಿಂದು ಬ್ರಹ್ಮೇಶ್ವರನನ್ನು ಪೂಜಿಸಿ ಮಲ್ಲಿಕಾರ್ಜುನದ ದರ್ಶನವನ್ನು ಪಡೆದು ಕಠಿಣ ತಪ್ಪಸ್ಸನಾಚರಿಸುತ್ತಾನೆ. ಇದರಿಂದ ಸಂಪ್ರೀತನಾದ ಶಿವನು ನಿನ್ನ ಮನೆಯಲ್ಲಿ ಹುಟ್ಟಲು ನಾನು ನಾರಾಯಣನನ್ನು ಕೇಳಿಕೊಂಡಿದ್ದೇನೆ ಎಂದು ತಿಳಿಸುತ್ತಾನೆ. ಇಂಥ ಪವಿತ್ರವರವನ್ನು ಪಡೆದರೂ ಸಂತುಷ್ಟನಾಗದೇ ಮತ್ತೊಬ್ಬ ಮಗನ ಸಲುವಾಗಿ ಪ್ರಾರ್ಥಿಸುತ್ತಾನೆ. ಇದರಿಂದ ಕುಪಿತನಾದ ಶಿವನು ಓ ರಾಜ ಅತಿಯಾಸೆ ಗತಿಗೇಡು ಶ್ರೇಷ್ಟವಾದ ವರವನ್ನು ಪಡೆದುಕೊಂಡಿದ್ರೂ ನಿನಗೆ ತೃಪ್ತಿಯಿಲ್ಲ. ಆದುದರಿಂದ ನಿನಗೆ ಮೂರನೆಯವನಾಗಿ ಒಬ್ಬ ದುಷ್ಟ ಮಗನು ಜನಿಸುತ್ತಾನೆ. ನೀನು ಮರಳಿ ಹೋಗು ಎಂದು ತಿಳಿಸುತ್ತಾನೆ. ನಂತರ ಅಹವಮಲ್ಲನು ಶ್ರೀಪರ್ವತ ಶಿಖರವನ್ನು ಇಳಿದು ತನ್ನ ಗಜ, ಕುದುರೆ, ಪದಾತಿದಳದೊಂದಿಗೆ ಮರಳಿ ಪಟ್ಟಣಕ್ಕೆ ಬಂದನು. ಆಗ ಎಲ್ಲಾ ಸ್ತ್ರೀಯರು ನೃತ್ಯ ವಿನೋದಗಳ ಮೂಲಕ ಕಲ್ಯಾಣಪುರಿಯಲ್ಲಿ ಇವನನ್ನು ಸ್ವಾಗತಿಸಿದರು.

ಕೆಲವು ದಿನಗಳು ಕಳೆಯಲು ರಾಣಿಯು ಗರ್ಭಧರಿಸಿದಳು. ಇದರಿಂದ ಅವಳು ಹಲವು ಪದಾರ್ಥಗಳನ್ನು ತಿನ್ನುವ ಬಯಕೆ ವ್ಯಕ್ತಿಪಡಿಸಿದಳು. ಪರಿವಾಳ ಶುಕಪಕ್ಷಿಗಳನ್ನು ಪ್ರೀಸಿಸಲಿಲ್ಲ ಉತ್ತಮವಾದ ಅರಮನೆಯಲ್ಲಿ ಬಿಟ್ಟು ಕತ್ತಲಿನ ಕೋಣೆಯಲ್ಲಿ ವಾಸಿಸುವ ಇಚ್ಚೆಯನ್ನು ಹೊಂದಿದಳು. ಕ್ರೂರಮೃಗವು ತನ್ನ ಹರಿತವಾದ ಹಲ್ಲಿನಿಂದ ಕಚ್ಚಿ, ಕೋಳಿ ಹಂದಿ ಇವುಗಳನ್ನು ನೋಡುತ್ತಿದ್ದಳು. ತನ್ನ ಸಖಿಯರಿಗೆ ಕಣ್ಣು ಮುಚ್ಚಿ ಕೆಲವು ಪ್ರದೇಶಗಳಿಗೆ ಹೋಗಲು ತಿಳಿಸಿ ಅವರು ಬಿದ್ದನಂತರ ಅವಳು ಸಂತೊಷ ಹೊಂದುತ್ತಿದ್ದಳು. ದುಷ್ಟಗ್ರಹಗಳು ಉಗ್ರವಾಗಿರುವ ಸಮಯದಲ್ಲಿ ಶುಭಗ್ರಹಗಳು ನೀಚಸ್ಥಾನವನ್ನು ಹೊಂದಿದ್ದಾಗ ದೇವಿಯು ಸೋಮದೇವನಿಗೆ ಜನ್ಮವನ್ನು ನೀಡಿದಳು.

ಸೋಮದೇವನು ಬಾಲ್ಯದಲ್ಲಿಯೇ ಸಾಧುಗಳನ್ನು ಪೀಡಿಸಲು ಪ್ರಾರಂಭಿಸಿದನು. ದುಷ್ಟಹುಡುಗರ ಸಹವಾಸವನ್ನು ಬೆಳೆಸಿದನು. ಬ್ರಾಹ್ಮಣರನ್ನು ಭಕ್ತಿಯಿಂದ ನಮಸ್ಕರಿಸಲಿಲ್ಲ. ಸಾಧುಪಕ್ಷಿಗಳನ್ನು ಕೊಲ್ಲಹತ್ತಿದನು. ಸತ್ಪುರುಷರ ಚಿತ್ರಗಳನ್ನು ಕಂಡರೆ ಅಣಕಿಸುತ್ತಿದ್ದನು. ಇಂತಹ ಮಗನಿಂದ ಅಹವಮಲ್ಲನು ಚಿಂತಾಕ್ರಾಂತನಾಗಿ ಇನ್ನೊಬ್ಬ ಮಗನು ಎಂದು ಹುಟ್ಟುವನು ಎಂದು ಕಾಲಕಳೆಹತ್ತಿದ್ದನು. ಇದಾದ ಕೆಲ ದಿನಗಳ ನಂತರ ಶುಭನಕ್ಷತ್ರ ಶುಭಗ್ರಹಗಳು ಉಚ್ಚಸ್ಥಾನದಲ್ಲಿರುವಾಗ ಸೂರ್ಯೋದಯ ಸಮಯದಲ್ಲಿ ಕೌಶಲ್ಯ ರಾಮಚಂದ್ರ ಹುಟ್ಟಿದಂತೆ ಚಾಲುಕ್ಯ ಗೋತ್ರವನ್ನು ಪಾವನಗೊಳಿಸುವಂತಹ ಪುತ್ರನು ಜನಿಸಿದನು. ಮಗು ಹುಟ್ಟಿದಂತೆ ಚಾಲುಕ್ಯ ಗೋತ್ರವನ್ನು ಪಾವನಗೊಳಿಸುವಂತಹ ಪುತ್ರನು ಜನಿಸಿದನು. ಮಗು ಹುಟ್ಟಿದ ಸಂತೊಷದಿಂದ ದುಂದುಭಿನಾದವು ಮೊಳಗಿತು. ಸ್ತ್ರೀಯರು ಆನಂದದಿಂದ ತೇಲಾಡಿದರು. ಕೆಲವರು ಮಾಲೆಯಿಂದ ಹೊಡೆಯುತ್ತಿದರೆ ಕೆಲವರು ಆಲಂಗಿಸುತ್ತಿದ್ದರು. ಹಿಗೆ ಅಹವಮಲ್ಲನನ್ನು ಛೇಡಿಸುತ್ತ ಅಂತಃಪುರವನ್ನು ಪ್ರವೇಶಿದರು

ನಂತರ ಜೋತಿಷಿಗಳು ನವಗ್ರಹಗಳು ಒಳ್ಳೆಯ ಸ್ಥಾನದಲ್ಲಿವೆ. ಸಪ್ತಸಾಗರಗಳಿಂದ ಆವೃತವಾದ ಈ ಭೂಮಿಯನ್ನು ಪಾಲನೆ ಮಾಡುತ್ತಾನೆ. ಅಷ್ಟದಿಕ್ಪಾಲಕರನು ತನ್ನ ವಶಮಾಡಿಕೊಳ್ಳುತ್ತಾನೆ. ಕೃತಯುಗ ಜೀವನವನ್ನು ಪುನರುಜ್ಜೀವನಗೊಳಿಸುತ್ತಾನೆ. ಆದ್ದರಿಂದ ಈತ ಹುಟ್ಟಿದ ಘಳಿಗೆ ಉತ್ತಮವಾಗಿದೆ ಎಂದು ನುಡಿಯುತ್ತಾರೆ.

ಅನಂತರ ಜಾತಕ ಕರ್ಮಸಂಸ್ಕಾರ ಮಾಡಿ ಧನಾದಿಗಳನ್ನು ದಾನ ಮಾಡುತ್ತಾರೆ. ಹದಿಮೂರನೆಯ ದಿನ ನಾಮಸಂಸ್ಕಾರ ಕಾರ್ಯಕ್ರಮ ನಡೆಯುತ್ತದೆ ಹೀಗೆ ವಿವಿಧ ಸಂಸ್ಕಾರಗಳನ್ನು ಆಚರಿಸುತ್ತ ಆರು ತಿಂಗಳ ನಂತರ ಒಂದು ಶುಭಮಹೂರ್ತದಲ್ಲಿ ಬ್ರಾಹ್ಮಣರೊಂದಿಗೆ ವೇದಾದಿಗಳನ್ನು ಪಠಿಸುವುದರಿಂದ ಅನ್ನಪ್ರಾಶನ ಸಂಸ್ಕಾರವನ್ನು ಮಾಡಿದ ಎಲ್ಲಾ ಜನರ ಮನೋಧರ್ಮವನ್ನು ಈಡೇರಿಸುತ್ತೇನೆ ಎಂಬಂತೆ ಅಸ್ಪಷ್ಟವಾದ ಮಾತುಗಳನ್ನು ಆಡಲು ಪ್ರಾರಂಭಿಸಿದ.

ಹನ್ನೊಂದನೆಯು ವಯಸ್ಸಿನಲ್ಲಿ ವಶಿಷ್ಠಗೋತ್ರ ಸಂಭೂತರಾದ ರುದ್ರಾಮಿತ್ರ ಎಂಬ ಪುರೋಹಿತರಿಂದ ಕುಲದೇವತಾ ನಮಸ್ಕಾರದ ಮೂಲಕ ಉಪನಯನವನ್ನು ಮಾಡಿಸಿದನು. ಆಮೇಲೆ ಧನುರ್ವಿದ್ಯೆ, ಮಲ್ಲವಿದ್ಯೆ, ಖಡ್ಗವಿದ್ಯೆ ಮೊದಲಾದವುಗಳನ್ನು ಕಲಿಯುವುದಕ್ಕಾಗಿ ಗುರುಗಳ ಬಳಿ ವಿಕ್ರಮಾದಿತ್ಯನನ್ನು ಕಳುಹಿಸಲಾಯಿತು. ಎಲ್ಲಾ ನದಿಗಳು ಸಮುದ್ರವನ್ನು ಸೇರುವಂತೆ ಎಲ್ಲಾ ಐಶ್ವರ್ಯವೂ ರಾಜಭೋಕ್ಕಸ ಸೇರುವಂತೆ ಎಲ್ಲಾ ಅಪರ್ಸರೆಯರೂ ಇಂದ್ರನನ್ನು ಸೇರುವಂತೆ ಎಲ್ಲಾ ವಿದ್ಯೆಗಳು ಅವನನ್ನು ಕೂಡಿಕೊಂಡವು.

ವಿಕ್ರಮಾದಿತ್ಯನಿಗೆ ಹದಿನಾರು ವರ್ಷಗಳು ತುಂಬಿದಾಗ ಯುವರಾಜ ಅಭಿಷೇಕವನ್ನು ಮಾಡಿಸಿ, ಶತ್ರುಗಳನ್ನು ಸಂಹರಿಸಲು, ಲಕ್ಷ್ಮೀಯನ್ನು ಬೆಳೆಸಲು, ಪರರಾಜ್ಯಗಳನ್ನು ವಶಪಡಿಸಿಕೊಳ್ಳಲು, ಜಗದ ದಾರಿದ್ರ್ಯವನ್ನು ಹೋಗಲಾಡಿಸಲು, ತನ್ನ ಮಗನ ಶೌರ್ಯ, ಸಾಹಸವನ್ನು ತಿಳಿದುಕೊಳ್ಳಲು ಮಂತ್ರಿಗಳ ಜೊತೆಗೆ ಸಮಾಲೋಚನೆ ಮಾಡಿ ದಿಗ್ವಿಜಯಕ್ಕೆ ಕಳುಹಿಸಬೇಕೆಂದು ಅಹವಮಲ್ಲನು ನಿಶ್ಚಯಿಸಿದನೆಂದು ತಿಳಿಸುತ್ತಾನೆ.

ಹೀಗೆ ವಿಕ್ರಮಾಂಕಾಭ್ಯೂದಯಂದಲ್ಲಿ ಚಾಲುಕ್ಯರ ಪೂರ್ವವಂಶಾವಳಿ ಮತ್ತು ಮೂರನೆಯ ಸೋಮೇಶ್ವರನ ತಂದೆಯಾದ ವಿಕ್ರಮಾದಿತ್ಯನ ಜನನ ಬಾಲ್ಯದ ವಿವರವು ಬಹಳ ಸುಂದರವಾಗಿ ಮುಡಿಬಂದಿದೆ.[173]

ಅಧ್ಯಾಯ 6

ಮಹಿಳೆಯರ ಸ್ಥಾನಮಾನ

ಸಾಮಾನ್ಯ ಮಹಿಳೆಯನ್ನು ಕುರಿತು ಶಾಸನಗಳು ಏನನ್ನು ಹೇಳದಿದ್ದರೂ, ಅವರಿಗೆ ಸಂಬಂಧಿಸಿದ ಸಾರ್ವತ್ರಿಕ ಸಂಗತಿಗಳನ್ನು ಈ ಕಾಲದ ಕವಿಗಳು, ಲೇಖಕರು ಪ್ರಾಸ್ತಾಪಿಸಿರುವುದು ಗಮನಾರ್ಹವಾಗಿದೆ. ಅಂದು ಮದುವೆಯಾಗದ ಹುಡುಗಿಯರು ಹಲ್ಲುಜ್ಜಬಾರದೆಂಬ ಸಾಮಾಜಿಕ ನಡವಳಿಕೆ ಇದ್ದಿತೆಂದು ಕಾಣುತ್ತದೆ. ಸೌಂದರ್ಯವತಿ, ಸ್ನೇಹಶೀಲಳಾದ ಪತ್ನಿ ಪುಣ್ಯಫಲದಿಂದ ದೊರಕುತ್ತಾಳೆಂದು ಅಂದಿನ ಜನರು ನಂಬಿದ್ದರು. ನೈಮಿತ್ಯಕರಿಂದ ಮೂಹೂರ್ತ ಕೇಳಿ ಶುದ್ಧಮಾಸದಲ್ಲಿ ಚಂದ್ರಬಲ, ತಾರಾಬಲ, ಕೂಡಿಬಂದರೆ ಮದುವೆ ಮಾಡುತ್ತಿದ್ದರು. ಶ್ರೀಮಂತರ ಮದುವೆಗಳು ಬಹಳ ವಿಜ್ರಂಭಣೆಯಿಂದ ನಡೆಯುತ್ತಿದ್ದವು. ದುಕೂಲಧ್ವಜ, ಮಾವಿನ ಎಳದಳಿರು ತೋರಣ, ಮುಜಕ್ತಾವಳಿ ಹೊಸರಂಗವಲ್ಲಿ ಇತ್ಯಾದಿಗಳಿಂದ ಮದುವೆ ಮಂಟಪವನ್ನು ಆಲಂಕರಿಸುತ್ತಿದ್ದರು. ಮದುಮಕ್ಕಳನ್ನು ಸಿಂಗರಿಸುತ್ತಿದ್ದರು. ಮದುವೆ ಮನೆಗಳಲ್ಲಿ ಭರ್ಜರಿ ಊಟವಿರುತ್ತಿತ್ತು.

ಈ ಕಾಲದಲ್ಲಿ ಅವಿಭಕ್ತ ಕುಟುಂಬ ಪದ್ಧತಿಯು ಆಸ್ತಿತ್ವದಲ್ಲಿದ್ದು, ಗಂಡ ಹೆಂಡತಿ, ಮಕ್ಕಳು, ಅಜ್ಜ, ಅಜ್ಜಿ, ಎಲ್ಲರೂ ಒಂದಾಗಿ ಕೂಡಿಬಾಳುತ್ತಿದ್ದರು. ಧನದಾನ್ಯ, ವಸ್ತ್ರವಾಹನ, ಸುಶೀಲಗುಣಗಳುಳ್ಳ ವನಿತೆ, ಸುಕುಮಾರರಿಂದ ಕೂಡಿದ ಸುಖ ಸಂಸಾರಗಳಿದ್ದವು. ಇಂತಹ ಕುಟುಂಬಗಳಲ್ಲಿ ಯಾರ ಹಂಗೂ ಇಲ್ಲದೆ ತಮಗೆ ಸರಿಸಾಟಿ ಯಾರೂ ಇಲ್ಲವೆಂದು ಬಾಳುತ್ತಿದ್ದರು. ಹೆಂಡತಿಯಿಂದಲೇ ಸಂಸಾರದಲ್ಲಿ ಸದ್ಗತಿಯುಂಟು ಎಂದು ಭಾವಿಸಿದರು. ಬಿಲ್ಹಣ ತನ್ನ ವಿಕ್ರಮಾಂಕ ದೇವಚರಿತಂ ಕಾವ್ಯದಲ್ಲಿ ಚಾಲುಕ್ಯ ನೃಪ, ಒಂದನೆಯ ಸೋಮೇಶ್ವರನಿಗೆ ಪುತ್ರೋತ್ಸವವಾದ ಸಂದರ್ಭವನ್ನು ಆತ ಅನುಭವಿಸಿದ ಅಮಿತಾನಂದವನ್ನು ಅತ್ಯಂತ ಸುಂದರವಾಗಿ ವರ್ಣಿಸಿದ್ದು, ಇಂದ್ರ ಸಮಾನನೂ ಕ್ಷಿತೀಶ್ವರನೂ ಆದ ಅಹವಮಲ್ಲದೇವನಿಗೆ ಪತ್ನಿ ಬಾಚಲದೇವಿಯಲ್ಲಿ ಮನೋಹರವಾದ ಮಗನು ಶುಭಮೂಹುರ್ತದಲ್ಲಿ ಜನಿಸಿದನು. ಇದರಿಂದ ಸಂತುಷ್ಠನಾದ ರಾಜನು ಅತಿ ಸಮೃದ್ಧವಾದ ಉತ್ಸವವನ್ನು ಅನುಭವಿಸಿದ ವಿಶೇಷವಾದ ಸುಖವನ್ನು ಪಡೆದನು.

ಪ್ರಾಚೀನ ಕಾಲದಲ್ಲಿ ಪ್ರಚಲಿತವಿದ್ದ ಬಹುಪತ್ನಿತ್ವವು ಮಧ್ಯಕಾಲೀನ ಕರ್ನಾಟಕದಲ್ಲಿಯೂ ಸಮಾಜದಿಂದ ಮನ್ನಿಸಲ್ಪಟ್ಟಿತ್ತು. ಆ ಕಾಲಕ್ಕೆ ಪ್ರಭುವರ್ಗದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರುವ ಈ ಪದ್ಧತಿ ಸಾಮಾನ್ಯರಲ್ಲಿ ಇಲ್ಲವೆನ್ನುವಷ್ಟು ವಿರಳವಾಗಿತ್ತು. ಬ್ರಾಹ್ಮಣಂ, ನಾಲ್ಕು ಜನರನ್ನು, ಕ್ಷತ್ರೀಯ ಮೂರು ಜನರನ್ನು, ವೈಶ್ಯ ಇಬ್ಬರನ್ನು ಶೂದ್ರ ಒಬ್ಬಳನ್ನು ಮದುವೆಯಾಗಬಹುದೆಂದು ಅಲ್ಬೆರೂನಿ ಗುರುತಿಸಿದ್ದನ್ನು ಎಚ್.ಎಲ್ ನಾಗೇಗೌಡರು ಪ್ರವಾಸಿ ಕಂಡ ಇಂಡಿಯಾದಲ್ಲಿ ದಾಖಲಿಸಿದ್ದಾರೆ. ನಮ್ಮ ರಾಜಮಹಾರಾಜರಂತೂ ಯಾವಾಗಲೂ ಬಹುಪತ್ನಿತ್ವವಲ್ಲಭರು. ಒಂದನೆಯ ಸೋಮೇಶ್ವರನಿಗೆ ಎಂಟು ಜನ ಪತ್ನಿಯರಿದ್ದರೆ, ಆತನ ಮಗ ಆರನೇ ವಿಕ್ರಮಾದಿತ್ಯನಿಗೆ ಹತ್ತೊಂಬತ್ತು ಜನ ರಾಣಿಯರಿದ್ದರು.

ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಸಾಧನೆಯನ್ನು ಮೆರೆದ ಅನೇಕ ಸ್ತ್ರೀಯರನ್ನು ಶಾಸನಗಳು ಪರಿಚಯಿಸುತ್ತವೆ. ಈ ಹಿಂದಿನ ಅಧ್ಯಯನದಲ್ಲಿ ರಾಣಿಯರು ಆಳ್ವಿಕೆ ಮಾಡಿ ಅಪ್ರತಿಮ ಸಾಧನೆ ಮಾಡಿರುವ ಇತಿಹಾಸವನ್ನು ಪರಿಚಯಿಸಲಾಗಿದೆ. ಆದ್ದರಿಂದ ಈ ಅಧ್ಯಯದಲ್ಲಿ ಆಳ್ವಿಕೆ ಮಾಡಿದ ರಾಣಿಯರನ್ನು ಹೊರತು ಪಡಿಸಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಸಾಧನೆ ಮಾಡಿದವರ ಪರಿಚಯ ನೀಡಲಾಗಿದೆ. ಐವೂರ ಶಾಸನೂಕ್ತ ದಂಡನಾಯಕ ರವಿದೇವನ ಪತ್ನಿ ಹೆಬ್ಬಲದೇವಿ ಮೃಧುಮಧುರವಾಧಿನಿ, ಸಕಳಕಳಾ ಪ್ರವೀಣೆ ಆಗಿದ್ದಳು. ಅತ್ತಿಮಬ್ಬೆ ಹಲವಾರು ಜೈನಬಸದಿಗಳನ್ನು ಕಟ್ಟಿಸಿದಲ್ಲದೆ, ಸಾಹಿತ್ಯಕ್ಕೆ ಪ್ರೋತ್ಸಹ ನೀಡಿದಳು. ಹೊಂಬಳದ 1049ರ ಶಾಸನದಲ್ಲಿ ಮಾಣಿಕ್ಯಾಂಬಿಕೆಯನ್ನು ವಿದ್ವಜ್ಜನುತೆ ಎಂದು ಕೊಂಡಾಡಿದೆ. ಶಾಂತಿನಾಥ ತನ್ನ ಸುಕುಮಾರ ಚರಿತೆಯಲ್ಲಿ 1068ರ4ಲ್ಲಿ ನಾಗಶ್ರೀಯನ್ನು ಶಿಕ್ಷಣದ ವಿವಿಧ ವಿಷಯಗಳಲ್ಲಿ ಪಂಡಿತಳೆಂದು ವರ್ಣಿಸಿದ್ದಾನೆ. ಇದೇ ವಿಷಯವನ್ನು ಭ್ರಾಜಿಷ್ಣು ತಮ್ಮ ವಡ್ಡಾರಾಧನೆಯಲ್ಲಿಯೂ ಸಹ ನಾಗಶ್ರೀ ಅಶಿಕ್ಷಿತಳಾಗಿದ್ದು, ಜೈನ ಗುರು ಸೂರ್ಯಮಿತ್ರ ಭಟಾರ್‌ರ ಹರಕೆಯಿಂದ ಒಮ್ಮಿಂದೊಮ್ಮಲೇ ಮಹಾನ್ ಪಂಡಿತಳಾದಳೆಂದು ತಿಳಿಸಲಾಗಿದೆ.

ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರಿಗೆ ಸ್ವಾತಂತ್ರವ್ಯವಿದ್ದಂತೆ ಧಾರ್ಮಿಕ ಕ್ಷೇತ್ರವೂ ಮುಕ್ತದ್ವಾರವೆನಿಸಿತ್ತು. ಸರ್ವಧರ್ಮಗಳ ಬಗೆಗಿನ ಅಭಿಮಾನ ಚಾಲುಕ್ಯರಾಣಿಯರಿಗೆ ಪರಂಪರಾಗತವಾಗಿ ಬಂದ ಬಳುವಳಿಯೆನ್ನಬೇಕು. ಸೋಮೇಶ್ವರನ ರಾಣಿಯರು ಇದಕ್ಕೆ ಹೊರತಾಗಿರಲಿಲ್ಲ. ದೇವಸ್ಥಾನ ನಿರ್ಮಾಣ, ದಾನದತ್ತಿಗಳನ್ನು ಬಿಟ್ಟು ಕೊಡುವ, ದೇವಸ್ಥಾನದ ಆಡಳಿತ ವ್ಯವಸ್ಥೆಯನ್ನು ನೋಡುವ ರೀತಿ, ಶೈವರ್ಧಮದ ಲಕುಲೀಶ, ಪಾಶುಪತ, ಕಾಳಾಮುಖರ ಕರ್ತವ್ಯವಾಗಿದ್ದಂತೆ, ಜೈನ ಬಸದಿ ನಿರ್ಮಾಣ, ಅವುಗಳ ಜೀರ್ಣೋದ್ಧಾರಕ್ಕೆ ದತ್ತಿ ಜೈನ ಧರ್ಮದವರ ಕೆಲಸವೆನ್ನಿಸಿತ್ತು.

ಪುರುಷ ಮತ್ತು ಸ್ತ್ರೀ ಸಮಾಜದ ಅವಿಭಾಜ್ಯ ಅಂಗಗಳಿದ್ದು ಒಂದೇ ನಾಣ್ಯದ ಎರಡು ಮುಖಗಳಂತೆ ಪರಸ್ಪರ ವಿರುದ್ಧವಾಗಿದ್ದರು ಒಂದಕ್ಕೊಂದು

ಪೂರಕವಾಗಿವೆ. ಕೌಟುಂಬಿಕ ಜೀವನದ ಸರ್ವರಂಗಗಳನ್ನು ಸ್ಥಾಪಿಸಿರುವ ಮಹಿಳೆ ಮನುಕುಲದ ಚರಿತ್ರೆಯ ಆರ್ಧಭಾಗವನ್ನು ವ್ಯಾಪಿಸಿದ್ದಾಳೆ.

ಸ್ತ್ರೀ ಸಮಾಜಕ್ಕೆ ಸಂಬಂಧಿಸಿದಂತೆ ಇಲ್ಲಿ ಸಿಗುವ ವಿವರಗಳು ಅತ್ಯಂತ ವಿರಳವೆನಿಸಿದರೂ ಶಿಗ್ಗಾಂವ ಶಾಸನವೂ "ಸ್ವಸ್ತ್ರನವರತ ಪರಮ ಕಲ್ಯಾಣಾಭ್ಯುದಯ ಸಹಸ್ರ ಫಲಭೋಗಭಾಗಿನಿ, ದ್ವಿತಿಖ ಲಕ್ಷ್ಮೀಸಮಾನೆ, ತ್ಯಾಗನಿಧಾನೆ, ಶೃಂಗಾರ ಗಂಗಾ ತರಂಗಿಣಿ ದಾಣ ಚಿಂತಾಮಣಿ, ಗಿರಿಲಬ್ಬ ವರಪ್ರಸಾದೆ ಚಂಪಕಾಮೊದೆ, ವಿವೇಕ ವಿದ್ಯಾಧರಿ, ಸಕಲಕಲಾಧರಿ, ಗೋತ್ರಪವಿತ್ರೆ, ದುವ್ವಾಂಕುರ ಶ್ಯಾಮಗಾತ್ರೆ ಯಸ್ಥಾನ ರಂಜನೆ ಸವತಿಮದಭಂಜನೆ/ಉಪ್ಪಟ್ಟ ವರ್ಷೆ/ಧರ್ಮಸಂಕರ್ಷೆ, ಶ್ರೀಮಾನ್ ಹರಿಗ ಮನಸ್ಸರೋವರ ರಾಜಹಂಸಿ, ಸುಭಗ ವಿಳಾಸಿ, ಹರಿಗನರ್ದ್ಧಾಂಗಿನಿ ಪರಿವಾರ ಸುರಭಿಯರಪ್ಪ ಶ್ರೀ ಮಲ್ಲಚ್ಚಲದೇವಿಯರು, ಶ್ರೀವಧುವಾಗಿ ರಂಜಿಸಿ ಮಹೋನ್ನತಿಯಂ ಪಡೆದುದ್ಧಕೀರ್ತಿ ಲೀಲಾವತಿಯಿಂದ ಬಣ್ಣಿಪುದು ಲಚ್ಚಲಾದೇವಿಯನೀ ಜಗಜ್ಜನ ವಂಗಾಂಗ ಮಗಧ ಕೊಂಗ ಕಳಿಂಗಾಗ ದ್ರವಿಳಮಳಯ ಮಾಳವ ವೆಂಗೀ ಗಾಂಗೇಯ ಪಾಣ್ಡ್ಯ ಮಣ್ಡಲಿಕಾಂಗನೇಯರ್ ನಿನಗೆ ದೊರೆಯೇ ಲಚ್ಚಲದೇವಿ, ವಿನಯದ ಮೇರೆ ಧರ್ಮ್ಮದ ತವರ್ಮ್ಮನೆ ಸತ್ಯದ ಜನ್ಮಭೂಮಿ ಮಾಂತಂನದ ಗುನ್ತಿ ಚಾಗದ ಮಹಾನಿಧಿ ಪೆಂಪಿನ ರತ್ನರಾಶಿ ಸಜ್ಜನಿಕೆಯ ರಮ್ಮ ಹೆರ್ಮ್ಮಮರಿವಿಂಗೆರೆವಟ್ಟು ವಿದಗ್ಧ ಮುಗ್ಧ ಸಜ್ಜನನುತೆಯೆಂದು ಬಣ್ಣಿಪುದು ಲಚ್ಚಲದೇವಿಯನೀ ಜಗಜ್ಜನ ಎಂದು ಆಕೆ ವಿದ್ಯಾದಾನಕ್ಕೆ ಬಿಟ್ಟ ದತ್ತಿಯನ್ನು ವಿವರಿಸುತ್ತದೆ. ಇದರಿಂದ ಲಚ್ಚಲದೇವಿಯ ರೂಪ–ಲಾವಣ್ಯ, ಸಂಪತ್ತು, ವಿದ್ವತ್ತು, ಸಹನೆ, ಪರೋಪಕಾರ, ದಾನ–ಧರ್ಮ, ಧೈರ್ಯ ಗುಣಗಳ ಸ್ವಷ್ಟ, ಚಿತ್ರಣವು ದೊರೆಯುತ್ತದೆ.

ಅರಸನ ಸಹೋದರಿ ಅಕ್ಕಾದೇವಿ ಕಾಸಕ್ಕಬ್ಬೆ ಮಾಳಿಯಬ್ಬರಸಿ ಮುಂತಾದವರು ಸಾಮಾಜಿಕ, ಧಾರ್ಮಿಕ, ರಾಜಕೀಯ ಹಾಗೂ ಆಡಳಿತ ಕ್ಷೇತ್ರಗಳಲ್ಲಿ ಮೆರೆದ ಸಾಧನೆ, ತೋರಿದ ಸಾಹಸ, ತ್ಯಾಗ, ಔದಾರ್ಯ, ದಾನ ಬುದ್ಧಿಗಳನ್ನು ಬಹುವಿಧವಾಗಿ ಶಾಸನಗಳು ಕೊಂಡಾಡುತ್ತವೆ. ಹೀಗೆ ಉನ್ನತ ವರ್ಗದ ಸ್ತ್ರೀಯರು ಪುರುಷರೊಡನೆ ಸರಿಸಮಾನರಾಗಿ ವಿವಿಧ ಕ್ಷೇತ್ರಗಳಲ್ಲಿ ಭಾಗವಹಿಸುತ್ತಿದ್ದರು. ಆದರೆ ಸಾಮಾನ್ಯ ವರ್ಗದ ಸ್ತ್ರೀಯರು ಯಾವುದೇ ಕಾರ್ಯಗಳಲ್ಲಿ ಭಾಗವಹಿಸಿದ ಉಲ್ಲೇಖಗಳು ಕಂಡುಬರುವುದಿಲ್ಲ. ಒಟ್ಟಿನಲ್ಲಿ ಸಮಾಜದಲ್ಲಿ ಗೌರವದ ಸ್ಥಾನ ಹೊಂದಿದ ಮಹಿಳೆಯರು ಈ ಕಾಲದ ಪ್ರಭಾವಪೂರ್ಣ ಶಕ್ತಿಯಾಗಿ ಬಾಳಿ ಬೆಳಗಿದ್ದಾರೆ.[174]

ಬೀದರ ಜಿಲ್ಲೆಯ ಭಾತಂಬ್ರ ಗ್ರಾಮದ ಪ್ರಭು ಬಿರಾದಾರ ಅವರ ಹೊಲದಲ್ಲಿರುವ ಕಲ್ಲಿನ ಮೇಲಿರುವ ಶಾಸನದ ಮೇಲೆ ಜಯಸಿಂಹನ ಮಹಾಪ್ರಧಾನ ಇಂದ್ರದಂಡನಾಯಕನ ತಾಯಿ ಮೈಲಲ... ಅನ್ನ ಶಾಂತಿಯನ್ನು ಮಾಡಿ, ವೀರದೇವರಿಗೆ ಗಣಮಠದ ವೃತ್ತಿಯಾಗಿ ತಲ್ಲಿಗಾಂವೆಯಲ್ಲಿ 2 ಮತ್ತರು ಭೂಮಿ, 2 ಮನೆಗಳನ್ನು ನೀಡಿರುತ್ತಾಳೆ. ದಂಡನಾಯಕನ ತಾಯಿ ಮೈಲಲ...ಯು ಅನ್ನ ದಾಸೋಹ

ಮಾಡಿದಲ್ಲದೇ ದೇವರಿಗೆ ದಾನ ನೀಡಿ ಮಹಿಳೆಯರು ದಾನಧರ್ಮಗಳನ್ನು ಎತ್ತಿದ ಕೈ ಎನ್ನುವುದನ್ನು ಸಾಬೀತು ಪಡಿಸಿದ್ದು ಈ ಶಾಸನದಿಂದ ತಿಳಿದು ಬರುತ್ತದೆ.[175]

ಬೀದರ ಜಿಲ್ಲೆಯ ಬಸವಕಲ್ಯಾಣ ಮೂಸಿಯಂನಲ್ಲಿರುವ ಕ್ರಿ.ಶ 1100ಕ್ಕೆ ಸೇರಿದ್ದರ ಶಾಸನದಲ್ಲಿ, ಕಲ್ಯಾಣದಲ್ಲಿ ಮುಂಚೆ ಹಲವಾರು ಜಿನಾಲಯಗಳನ್ನು ನಿರ್ಮಿಸಿದ್ದರು. ಕಾಲಾಂತರದಲ್ಲಿ ಅವುಗಳು ಶಿಥಿಲಗೊಂಡು, ದಾನಚಿಂತಾಮಣಿಯು (ಅತ್ತಿಮಬ್ಬೆ) ಅವುಗಳನ್ನು ಜೀರ್ಣೋದ್ಧಾರ ಮಾಡಿಸಿದಳೆಂದು ಶಾಸನ ತಿಳಿಸಿದೆ.

ಜೈನಧರ್ಮದಲ್ಲಿ ಉತ್ಸಾಹಿಗಳೂ, ಸಜ್ಜನರೂ, ಕ್ಷಮಾಗುಣದವರೂ, ಚತುರ್ವಿಧ ದಾನಿಗಳೂ, ಪರಮೋತ್ಸಾಹ ಗಣ್ಯರಾದ ದೇವಪಾರ್ಯ, ಪಟ್ಟಪ, ಭರತ, ಶ್ರೀಮತ ರಾಮದೇವ ಎಂಬುವರು ಕಲ್ಯಾಣದ ಗೋಷ್ಠಿಯ ಸದಸ್ಯರಾಗಿದ್ದರು, ಚಂದ್ರಪ್ರಭ ಜಿನಾಲಯವನ್ನು ಜೀರ್ಣೋದ್ಧಾರ ಮಾಡಿಸಿದ್ದಾಗಿ ಶಾಸನ ತಿಳಿಸುತ್ತದೆ. ಜೀರ್ಣೋದ್ಧಾರ ಕಾರ್ಯದಲ್ಲಿ ಉತ್ಸಾಹದಿಂದ ಭಾಗವಹಿಸಿದ ಜಕ್ಕಣಬ್ಬೆಯು ಮುನಿಗಳ ಆಹಾರದಾನಕ್ಕಾಗಿ ವ್ಯವಸ್ಥೆ ಮಾಡಿದಳು. ಜಿನಾಲಯದಲ್ಲಿ ಪ್ರತಿಷ್ಠಾಪಿಸಲು ಸಹಸ್ರಕೂಟ ಜಿನಬಿಂಬನ್ನು ವೈಜಪಯ್ಯನ ಹಿರಿಯ ಪುತ್ರ ಹೀರಪಾಂಕನು ಮಾಡಿಸಿಕೊಟ್ಟನೆಂದು ತಿಳಿಸಿದೆ. ಜಿನಾಲಯದ ಮುಂಭಾಗದಲ್ಲಿ ಈಶ್ವರಸೆಟ್ಟಿಯು ಮಾನಸ್ತಂಭವನ್ನು ಮಾಡಿಸಿದನು. ಈಶ್ವರರಾಂಕ, ರಚ್ಚಮಲ್ಲ, ಪೆರ್ಮಾಡಿ ರವಿಯಣ ಮೊದಲಾದವರ ದಾನಗುಣಾದಿಗಳನ್ನು ಶಾಸನವು ಹೊಗಳಿದೆ. ಈ ಶಾಸನವನ್ನು ಮೂಕರಾಜನು ರಚಿಸಿದನೆಂದು ಶಾಸನವು ತಿಳಿಸಿದೆ. ಈ ಶಾಸನದಲ್ಲಿ ಇಬ್ಬರು ಮಹಿಳೆಯರು ಆ ಕಾಲಘಟ್ಟದಲ್ಲಿ ಸಕ್ರಿಯವಾಗಿ ಭಾಗವಹಿಸಿ ಜೀನಾಲಯಗಳ ಜೀರ್ಣೋದ್ಧಾರ ಮತ್ತು ಗೋಷ್ಠಿ ಸಮಯದಲ್ಲಿ ಊಟದ ವ್ಯವಸ್ಥೆ ಮಾಡಿರುವ ಸಾಧನೆ ಕಂಡು ಬರುತ್ತದೆ.[176]

ಬೀದರ ಜಿಲ್ಲೆಯ ಔರಾದನ ಅಮರೇಶ್ವರ ಕನ್ಯಾಪ್ರೌಢಶಾಲೆಯಲ್ಲಿ ಗೋಡೆಗೆ ಒರಗಿಸಿರುವ ಕಲ್ಲಿನ ಮೇಲಿರುವ ಶಾಸನದಲ್ಲಿ, ದಂಡನಾಯಕನ ಪತ್ನಿ ನಾಗಾಂಬಿಕೆ ಎಂಬುವಳು ವಿಖ್ಯಾತವಾದ ಅಮರವಾಡಿಕೆ ನಗರದಲ್ಲಿ ಪ್ರಾರ್ಶ್ವನಾಥ ತೀರ್ಥಂಕರರ ಜಿನಾಲಯವನ್ನು ಮಾಡಿಸಿದಳೆಂದು ಶಾಸನ ತಿಳಿಸುತ್ತದೆ.[177]

ಬೀದರ ವಸ್ತು ಸಂಗ್ರಹಾಲಯದಲ್ಲಿರುವ ಕಲ್ಲು ತುಂಡಿನ ಮೇಲೆ ಗುರುವಿನ ಮಗನು ಸತ್ತಾಗ ಚಂಡಕಾರಾಧನೆ ಮಾಡಿಸಿದಂತೆಯೂ ಸೆರೆಸಿಕ್ಕ ವೊಂಬೈನೂರು ಹೆಂಗಸರನ್ನು ತಾಯಿಯಂತೆ ಕಂಡಂತೆಯೂ ಅನೇಕ ವೀರರನ್ನು ಗೆದ್ದು ಪೈಠಾಣದಲ್ಲಿ ಚಾಲುಕ್ಯ ಅರಸನ ಕೈಗಿತ್ತಂತೆಯೂ, ಚಾಲುಕ್ಯರಾಯ ಪ್ರತಿಷ್ಠಾಪನನೆಂಬ ಬಿರುದನ್ನು ಪಡೆದಂತೆಯೂ ವಿವರಣೆ ಇದೆ.[178]

ಈ ಶಾಸನದಲ್ಲಿ ಎರಡು ವಿಷಯಗಳು ಕಂಡು ಬರುತ್ತವೆ. ಒಂದು ಯುದ್ಧಗಳಲ್ಲಿ ಜಯಗಳಿಸಿದವರು ಮಹಿಳೆಯ ಮೇಲೆ ಎಸಗುವ ಅತ್ಯಾಚಾರ ಇನ್ನೊಂದು ಸೇರೆ ಸಿಕ್ಕ ಮಹಿಳೆಯರಿಗೆ ತಾಯಿಯ ಸಮಾನವಾಗಿ ನೋಡಿದ ಐತಿಹಾಸಿಕ ಸತ್ಯ.[179]

ಬೀದರ ಜಿಲ್ಲೆಯ ವಸ್ತು ಸಂಗ್ರಹಾಲಯದಲ್ಲಿರುವ ಕಲ್ಲಿನ ಮೇಲೆ ಕಾಕತಿಯ ರುದ್ರದೇವನ ಹೊಗಳಿಕೆಯಿಂದ ಶಾಸನ ಆರಂಭವಾಗಿದೆ. ಈ ರುದ್ರದೇವನಿಗೆ ರಾಯಜಗದಳ ಎಂಬ ಬಿರುದಿದ್ದಂತೆ ತಿಳಿಯುತ್ತದೆ. ರಾಜನಾದ ಮಹದೇವನು 9 ಲಕ್ಷ ಸೈನ್ಯದೊಡನೆ ದೇವಗಿರಿಗೆ ಮುತ್ತಿಗೆ ಹಾಕಿ ಜಯವನ್ನು ಪಡೆದನಂತೆ. ಇವನ ಮಗ ಕಾಕತಿಪುರವರಾಧೀಶ್ವರ ಮೂರರಾಯ ಜಗದ್ದಳ, ಹರಿರಾಯದಾಡಿದಡಕ್ಕ ಸೇಊಣ ಬಳಜಳದಿ ಬಡವಾನಳ ಮುಂತಾದ ವಿಶೇಷಣಗಳನ್ನು ಹೊಂದಿರುವ ರುದ್ರ ಎಂಬುವವನು ಓರುಂಗಲ್ಲ ನೆಲೆವೀಡಿನಿಂದ ರಾಜ್ಯಭಾರ ಮಾಡುತ್ತಿದ್ದ. ಇವನ ಮಗಳಾದ ರುದ್ರಮದೇವಿಯು ಬಂಗಾಳ, ಗುಜ್ಜೆ, ಮಗಧ, ಸೇವುಣ, ಮಾಳವ ಮೊದಲಾದ ಅರಸರನ್ನು ಗೆದ್ದಿದ್ದಳೆಂದು ವರ್ಣಿಸಿದೆ. ಈಕೆಯ ರಾಜ್ಯಭಾರವನ್ನು ಉದ್ದರಿಸುವವನು ಸರ್ಪವಂಶ (ಸಿಂಧ) ಭೈರವಭೂಪ, ವಿಷ್ಣುವಿಗೆ ಗರುಡ, ರಾಮನಿಗೆ ಹನುಮಂತನಿದ್ದಂತೆ, ರುದ್ರಮದೇವನಿಯ ಶೌರ್ಯಸಂಪತ್ತಿಗೆ ಈತನೇ ಕಾರಣನೆಂಬಂತೆ ಹೇಳಿದೆ. ದ್ರವಿಳನಿಂದ ಆನೆಗಳನ್ನೂ, ಕಾಂಬೋಜನಿಂದ ಕುದುರೆಗಳನ್ನೂ, ಯಾದವನಿಂದ ದೇಶವನ್ನು ತಂದು ರುದ್ರಮದೇವಿಗೆ ಇತ್ತನಂತೆ. ಮೈಳಲದೇವಿಯ ಮಗನಾದ ಈತನ ತನ್ನ ಸಹೋದರರ ಸಂಗಡ ರಾಜ್ಯಭಾರ ಮಾಡುತ್ತಿದ್ದನೆಂದು ತಿಳಿಸುತ್ತದೆ.[180] ಈ ಶಾಸನದಲ್ಲಿ ಕಾಕತೀಯ ರಾಣಿ ರುದ್ರಮಾದೇವಿಯು ಕಲ್ಯಾಣ ಚಾಲುಕ್ಯರ ಪತನದ ನಂತರ ತನ್ನ ಸಾಮ್ರಾಜ್ಯ ಬೀದರವರೆಗೆ ವಿಸ್ತರಿಸಿದಳೆನ್ನುವ ಇತಿಹಾಸ ತಿಳಿಸುತ್ತದೆ.

ಬೀದರ ಜಿಲ್ಲೆಯ ರಂಜೋಳಖೇಣಿ ಗ್ರಾಮದಲ್ಲಿರುವ ಶಾಸನದಲ್ಲಿ ಭೈರವದೇವನು ತನ್ನ ತಂದೆಯ ಹೆಸರಿನಲ್ಲಿ ಹೆಮೇಶ್ವರ ದೇವಾಲಯವನ್ನೂ, ತಾಯಿಯ ಹೆಸರಿನಲ್ಲಿ ಮೈಳಲೇಶ್ವರ ದೇವಾಲಯವನ್ನು ಕಟ್ಟಿಸಿ ಭೂದಾವನ್ನು ಬಿಡುತ್ತಾನೆ. ಅದಲ್ಲದೇ ಒಬ್ಬ ಮಹಿಳೆ ಜಾಕಿಕಬ್ಬೆ ಗಾವುಂಡಿಯು ಒಂದು ತೋಟವನ್ನು ನೀಡಿದ್ದು ಸಹ ಈ ಶಾಸನದಿಂದ ತಿಳಿದು ಬರುತ್ತದೆ.[181]

ಬೀದರ ಜಿಲ್ಲೆಯ ಜಲಸಂಗಿ ಗ್ರಾಮದಲ್ಲಿರುವ ಶಾಸನ ಸುಂದರಿಯ, ಶಾಸನದಲ್ಲಿ ಆರನೇ ವಿಕ್ರಮಾದಿತ್ಯನು ಏಳು ಸಮುದ್ರಗಳ ಆಚೆಯು ಪ್ರಸಿದ್ಧನಾಗಿದ್ದನೆಂದು ತಿಳಿಸುತ್ತದೆ. ಈ ಕಲಾಕೃತಿಯು ಆ ಕಾಲದ ಮಹಿಳೆಯರ ಸ್ಥಿತಿಗತಿಯನ್ನು ತೋರಿಸುತ್ತದೆ. ಕಲ್ಯಾಣ ಚಾಲುಕ್ಯರ ಕಾಲಘಟ್ಟದಲ್ಲಿ ಉನ್ನತ ವರ್ಗದ ಮಹಿಳೆಯರು ವಿದ್ಯಾಭ್ಯಾಸ ಮಾಡುತ್ತಿದ್ದರೆನ್ನುವ ಅಂಶವನ್ನು ಪ್ರದರ್ಶಿಸುತ್ತದೆ.[182]

ಭಾಸ್ಕರವಿರಚಿತ ಲೀಲಾವತಿ ಕೃತಿಯಿಂದ ಗಣಿತ ಅಧ್ಯಯನದೊಂದಿಗೆ ಇನ್ನೊಂದು ಐತಿಹಾಸಿಕವಾದಂತಹ ಸಂಗತಿ ಬೆಳಕಿಗೆ ಬರುತ್ತದೆ. ಅದೇನೆಂದರೆ ಆ ಕಾಲಘಟ್ಟದಲ್ಲಿಯೂ ಮಹಿಳೆಯರು ಗಣಿತ ಅಧ್ಯಯನ ಮಾಡಿದ್ದಿರಹುದು. ಅದಕ್ಕೆ ಭಾಸ್ಕರಚಾರ್ಯನು ತನ್ನ ಗಣಿತ ಪ್ರಶ್ನೆಗಳನ್ನು ಗೆಳೆಯ, ವಿದ್ವಾಂಸನೆ, ವಣಿಕ ಶ್ರೇಷ್ಠನೆ, ಹೇ ಗಣಕನೇ, ಗಣಿತಜ್ಞರನ್ನು ಪ್ರಶ್ನೆ ಮಾಡುವುದರ ಜೊತೆಗೆ ಗೆಳತಿ,

ಲೀಲಾವತಿ, ಕಲ್ಯಾಣಿ, ಹೇ ಬಾಲೇ, ಹೇ ಪ್ರೀಯ ಸಖಿ, ಹೇ ಬಾಲೆ ಚಂದಲಾಕ್ಷಿ,, ಹೆ ಜಿಂಕೆಯ ಕಣ್ಣಿನವಳೆ, ಎಲೆ ಬಾಲೆ ಎಂದು ಕರೆದು ಅವರಿಗೆ ಗಣಿತ ಪ್ರಶ್ನೆಗಳನ್ನು ಮಾಡಿದ್ದಾನೆ. ಭಾಸ್ಕರ್‌ಚಾರ್ಯ ಬಾಳಿ ಬದುಕಿದ ಬ್ರಾಹ್ಮಣ ಸಮುದಾಯದ ಮಹಿಳೆಯರು ಸಹ ವಿದ್ಯಾವಂತರಾಗಿದ್ದರು, ಅವರು ಸಹ ಗಣಿತ ಅಧ್ಯಯನ ಮಾಡುತ್ತಿದ್ದಿರಬಹುದೆನ್ನುವ ವಿಷಯವು ಆತನು ಉಚ್ಚರಿಸಿರುವ ಸರ್ವನಾಮಗಳಿಂದ ತಿಳಿದು ಬರುತ್ತದೆ.[183]

ವೇಶ್ಯೆ ಅಥವಾ ಸೂಳೆಯರು: ಪ್ರಾಚೀನ ಹಾಗೂ ಮಧ್ಯಕಾಲಿನ ಕರ್ನಾಟಕದಲ್ಲಿ ವೇಶ್ಯೆಯರಿದ್ದರು. ದೇವರ ಹೆಸರಿನಲ್ಲಿ ಬಿಟ್ಟ ಈ ಸೂಳೆಯರಲ್ಲಿ ವಿವಿಧ ವರ್ಗಗಳಿರುವುದನ್ನು ಚನ್ನಕ್ಕಾ ಎಲಿಗಾರ ಅವರು ಪತ್ತೆ ಹಚ್ಚಿದ್ದಾರೆ. ಈ ವರ್ಗಗಳಲ್ಲೊಂದಾದ ರಂಗಭೋಗದ ಸೂಳೆಯರಲ್ಲಿ ಮಹತ್ವದ ಒದಂಗ ಈ ಕಂಭದ ಸೂಳೆಯರು. ಇಂಥ ಇಪ್ಪತ್ತು ಕಂಭದ ಸೂಳೆಯರು ಮುಳಗುಂದದ ಸ್ವಯಂಭೂದೇವಾಲಯದಲ್ಲಿದ್ದರು. ನಯಸೇನನಂತೂ ಈ ಕಾಲದ ಸೂಳೆಯನ್ನು ಕುರಿತು ಸಾಕಷ್ಟು ಹೇಳಿದ್ದಾನೆ. ಇದರಿಂದ ಮಧ್ಯಕಾಲಿನ ಸಾಮಾಜಿಕ ವ್ಯವಸ್ಥೆಯಲ್ಲಿ ಈ ಪದ್ಧತಿ ಒಂದು ಪರಂಪರೆ ಎನ್ನುವಂತೆ ಬೆಳೆದುಬಂದಿರುವುದು ಸ್ಪಷ್ಟವಾಗುತ್ತದೆ.

ಸೂಳೆ ಎಂಬಪದಕ್ಕೆ ಪರ್ಯಾಯವಾಗಿ ನಯಸೇನ ವೇಶ್ಯೆಯರು, ಗಣಿಕೆಯರು ಮತ್ತು ಬೆಲೆವೆಣ್ಣುಗಳು ಎಂದೂ ಇವರಲ್ಲಿ ಬರುವುವರನ್ನು ವಿಟರು, ಬೊಜಂಗರು, ಮಿಂಡರೆಂದು ಕರೆದಿದ್ದಾನೆ. ಅಂದಿನ ನಗರ ಮತ್ತು ಗ್ರಾಮಗಳಲ್ಲಿ ಸೂಳೆಯರ ಕೇರೆಗಳಿದ್ದವು. ನಗರ ಸೂಳೆಯನ್ನು ಪುರದ ಸೂಳೆಯರೆಂದೂ ನಯಸೇನ ಕರೆದಿದ್ದಾನೆ. ಸೂಳೆಯರ ಶೃಂಗಾರ ಮಾಡಿಕೊಂಡು ತಮ್ಮ ಚೆಲುವನ್ನು ಇನ್ನಷ್ಟು ಹೆಚ್ಚಿಸಿಕೊಳ್ಳುತ್ತಿದ್ದರು. ಹೊಸದಾಗಿ ಸೂಳೆಗಾರಿಕೆ ಮಾಡುವವರಿಗೆ ಪುರುಷರನ್ನು ಆಕರ್ಷಿಸುವ ಕಲೆಯನ್ನು ಮುದಸೂಳೆಯರು ಕಲಿಸಿಕೊಡುತ್ತಿದ್ದರು. ಏಕೆಂದರೆ ನಯವಿಲ್ಲದ ಸೂಳೆಯರನ್ನು ಭೋಜಂಗರು ಒಪ್ಪುತ್ತಿರಲಿಲ್ಲ. ಪ್ರಾಯದ ಸೂಳೆಯರ ಗಳಿಕೆ ಸಾಮಾನ್ಯವಾಗಿ ಹೆಚ್ಚಿಗೆ ಇರುತ್ತಿತ್ತು. ಇಂಥವರಲ್ಲಿಗೆ ದೊಡ್ಡ ವ್ಯಕ್ತಿಗಳು ಬರುವುದರಿಂದ ಇವರು ಶ್ರೀಮಂತರೆನಿಸಿಕೊಳ್ಳುತ್ತಿದ್ದರು. ಕೆಲವು ಜನ ಸೂಳೆಯರಂತೂ ಕೇವಲ ಶ್ರೀಮಂತರಿಗೆ ಮಾತ್ರ ಲಭ್ಯವಿರುತ್ತಿದ್ದರು. ಇನ್ನೂ ಕೆಲವರು ಬಡಸೂಳೆಯರಾಗಿಯೇ ಇದ್ದರು. ಬಡ ಬೊಜಂಗರು ಇಂಥ ಸೂಳೆಯರನ್ನು ಹೊಗಳಿ ಸಂತಸ ಪಡುತ್ತಿದ್ದರು.

ಹೊಳೆ 'ಅನವೇರಿ' 1048ರ ಶಾಸನವು ರಟ್ಟಪಳ್ಳಿ–70ರ ಪವಿತ್ರ ಸ್ಥಳ ರಾಮತೀರ್ಥಕ್ಕೆ ಅನೆವರಿ ಕೊಟ್ಟಿದ್ದನು. ಹಾಗೂ ದೇವಾಲಯದ ಕಂಭದ ಸೂಳೆ ಕಾಳಬ್ಬೆಗೆ ಐಯ್ದುಮುತ್ತರ್ ಭೂದಾನ ನೀಡಿದ್ದನ್ನು ಉಲ್ಲೇಖಿಸಿದರೆ ಕಲ್ಕೇರಿ 1055ರ ಶಾಸನವು ಬೆಂಗೆರಿಯ ಭೋಗದ ಸೂಳೆಯರಿಗೆ ಸರ್ವಬಾದಾಪರಿಹಾರವಾಗಿ ಹನ್ನೆರಡು ಮನೆಗಳನ್ನು ದತ್ತಿ ಬಿಟ್ಟರೆಂಬ ವಿಷಯವನ್ನು ವಿವರಿಸುತ್ತದೆ. ಅದರಂತೆ

ಶಿಗ್ಗಾಂವ 1055 ಶಾಸನವು ಪಾನುಂಗಲಯ್ನೂರರ ಕಂಪಣದ ಮಹಾಮಂಡಳೇಶ್ವರ ಸತ್ಯಾಶ್ರಯ ದೇವರು ದೇವಪುರದ ಜಲಗದ ಸೂಳೆಯರಿಗೆ ಇಪ್ಪತ್ನಾಲ್ಕು ಮತ್ತರು ಹಾಗೂ ಸೂಳೆ ಏಳಂಗೆ ಐದು ಮತ್ತರು ಭೂದಾನ ಮಾಡಿದ ವಿಷಯ ವರ್ಣಿಸುತ್ತದೆ.[184]

ಕುಂದೂರಿನ ಶಾಸನವು ತಿಳಿಸುವ ಹಾಗೆ ಕೆಲವು ಸೂಳೆಯರು ಸೇರಿ 100 ಗದ್ಯಾಣ ಹೊನ್ನನ್ನು ಶಿವಾಲಯಕ್ಕೆ ದಾನ ನೀಡಿದರು. ಶ್ರೀಕಲಿದೇವರ ತೊತ್ತಾದ ಪಾತ್ರದ ಸಿರಿಯವ್ವೆಯು ತನ್ನ ಮನೆಯನ್ನೆ ಕಲಿದೇವರಿಏ ದಾನವಾಗಿ ನೀಡಿದಳು. ಈ ಸಂದರ್ಭದಲ್ಲಿ ತನ್ನ ವಂಶದಲ್ಲಿ ಯಾರಾದರೂ ಈ ಮನೆಯಲ್ಲಿ ವಾಸಿಸಿದರೆ ದೇವರ ನಂದಾದೀವಿಗೆಗೆ 2 ಪಣ ಕೊಡಬೇಕೆಂದು ಅಣತಿಯನ್ನು ಕೊಡ ಮಾಡಿದ್ದಾಳೆ. ಇದು ಇವರ ಸಾಮಾಜಿಕ ಬದ್ಧತೆಯನ್ನು ಎತ್ತಿ ತೋರಿಸುತ್ತದೆ.[185]

ಒಟ್ಟಿನಲ್ಲಿ ಹೇಳಬೇಕೆಂದರೆ, ಕಲ್ಯಾಣ ಚಾಲುಕ್ಯರ ಆಡಳಿತದಲ್ಲಿ ಮೇಲ್ವರ್ಗದ ಮಹಿಳೆಯರಿಗೆ ಉನ್ನತ ಸ್ಥಾನಮಾನಗಳಿದ್ದವು. ಮಧ್ಯಮ ವರ್ಗದ ಬಹಳಷ್ಟು ಮಹಿಳೆಯರಿಗೆ ಮನೆಯಲ್ಲಿ ಧಾರ್ಮಿಕ ಕಾರ್ಯಗಳನ್ನು ಮಾಡುವುದನ್ನು ಹೊರತು ಪಡಿಸಿದರೆ ಇವರು ನಾಲ್ಕು ಗೋಡೆಗಳ ಮಧ್ಯದಲ್ಲಿ ಬಂಧನದಲ್ಲಿದ್ದು ಮಕ್ಕಳಿಗೆ ಜನ್ಮನೀಡುವ ಯಂತ್ರಗಳಾಗಿ ಬಾಳಿ ಬದುಕಿದರು. ಇವರಲ್ಲಿ ಕೆಲವರು ಮೆಟ್ಟಿನಿಂತು ಪ್ರತಿಭಟಿಸಿದ್ದು ಸಹ ಕಾಣಬಹುದು. ಇನ್ನುಳಿದಂತೆ ಕೆಳಹಂತ ಮಹಿಳೆಯ ಸ್ಥಿತಿ ಸೂಚನಿಯವಾಗಿತ್ತು.

ಅಧ್ಯಾಯ 7

ಧಾರ್ಮಿಕ ವ್ಯವಸ್ಥೆ

ಕನ್ನಡ ನಾಡಿನ ಇತಿಹಾಸದಲ್ಲಿ ಕಲ್ಯಾಣ ಚಾಲುಕ್ಯರ ಕಾಲಘಟ್ಟದಲ್ಲಿ ಬೌದ್ಧ, ಜೈನ, ವೈಷ್ಣವ ಹಾಗೂ ಶೈವ, ವೈದಿಕ ಧರ್ಮಗಳು ಕಾಣಿಸಿಕೊಳ್ಳುತ್ತವೆ. ಇವುಗಳಲ್ಲಿ ಯಾವುದು ಮೊದಲು ಯಾವುದು ಅನಂತರ ಎಂದು ಖಚಿತವಾಗಿ ಹೇಳುವುದು ಕಷ್ಟವಾದರೂ ತೀರ ಪ್ರಾಚೀನ ಕಾಲದಲ್ಲಿಯೇ ಕರ್ನಾಟಕ ವೈದಿಕ ಸಂಸ್ಕೃತಿಯ ಗಾಢ ಪ್ರಭಾವಕ್ಕೆ ಒಳೋಗಾಗಿತ್ತೆನ್ನಬಹುದು. ಆದರೆ ವೈದಿಕ ಸಂಸ್ಕೃತಿಯ ಚಾತುರ್ವರ್ಣ ಪದ್ಧತಿಯಿಂದ ಕ್ರಮೇಣ ಜಾತಿಗಳಾಗಿ ಶೋಷಣೆ ಹೆಚ್ಚಿದಂತೆ ಬೌದ್ಧ, ಜೈನಧರ್ಮಗಳು ಜನ್ಮ ತಾಳಿ, ತಮ್ಮ ಕ್ರಿಯಾಶೀಲತೆಯನ್ನು ಹೆಚ್ಚಿಸಿಕೊಂಡವು. ಕಾಲಗತಿಸಿದಂತೆ ಸ್ಥಳೀಯ ಮತಪ್ರಭೇದಗಳು ಇವುಗಳೊಂದಿಗೆ ಕೂಡಿದವು ಕೊನೆಗೊಮ್ಮೆ ಇವುಗಳಿಂದ ಬೇಸತ್ತ ಜನತೆಗೆ ಹನ್ನೆರಡನೆಯ ಶತಮಾನದ ಶಿವಶರಣರು ಹೊಸ ಸಿದ್ಧಾಂತವನ್ನು ಮುಂದಿಟ್ಟರು.

ಬೌದ್ಧ ಧರ್ಮ:

ಪ್ರಾಚೀನ ಮತ್ತು ಮಧ್ಯಕಾಲಿನ ಕರ್ನಾಟಕದಲ್ಲಿನ ಬೌದ್ಧ ಮತದ ಪ್ರಸಾರ ಪ್ರಭಾವ ಕುರಿತು ಹಲವಾರು ಸಂಗತಿಗಳು ಈಗ ತೀಳಿದುಬಂದಿವೆ. ಸನ್ನತಿ, ಐಹೊಳೆ, ಚಂದ್ರವಳ್ಳಿ, ಕದರಿ, ಬಳ್ಳಿಗಾವೆ, ತೊರ್ಕೆ, ಕೋಳಿವಾಡ, ಬನವಾಸಿ, ಡಂಬಳ, ಇಂಡಿ ಮೊದಲಾದ ಊರುಗಳಲ್ಲಿ ದೊರೆತ ಪ್ರಾಕ್ತನ ಅವಶೇಷಗಳು, ಶಾಸನಗಳು, ದೀಪವಂಶ ಮಾಹಾವಂಶ ಗ್ರಂಥಗಳು ಹೊಯೆನ್ಸತ್ಸಾಂಗ್ ಮೊದಲಾದ ಪ್ರವಾಸ ಕಥನಗಳು ಕರ್ನಾಟಕದಲ್ಲಿ ಬೌದ್ಧ ಧರ್ಮದ ಅಸ್ತಿತ್ವವನ್ನು ತಿಳಿಸುವ ಪ್ರಮುಖ ಆಕರಗಳಾಗಿವೆ. ಬೌದ್ಧ ಧರ್ಮ ಮಾನವಪರ ಕಾಳಜಿಯನ್ನು ಹೊಂದಿ, ಅತ್ಯಂತ ಜನಪ್ರೀಯತೆಯನ್ನು ಪಡೆದು, ಜಗತ್ತಿನ ಶ್ರೇಷ್ಠಧರ್ಮವೆಂದು ಪರಿಗಣಿತವಾಯಿತು.

ಡಂಬಳದ ಕ್ರಿ.ಶ ಹನ್ನೊಂದನೆಯು ಶತಮಾನದ ಶಾಸನವೊಂದು " ನಮೋ ಬುದ್ಧಾಯ" ಎಂದು ಪ್ರಾರಂಭವಾಗುತ್ತದೆ. ಇದೇ ಶಾಸನದಲ್ಲಿ ತಾರಾಭಗವತಿಯ ಪ್ರಾರ್ಥನೆಯಿದೆ. ಅಲ್ಲದೇ ಅಲ್ಲಿ ಸಂಗವಯ್ಯ ಸೆಟ್ಟಿ ಎಂಬುವನು ಕಟ್ಟಿಸಿದ ಆರ್ಯತಾರಾದೇವಿಯ ವಿಹಾರ, ಆ ಊರಿನ ಹದಿನಾರು ಸೆಟ್ಟಿಗಳು ಮಾಡಿಸಿದ

ಬೌದ್ಧ ವಿಹಾರಗಳ ಪ್ರಸ್ತಾಪವಿದೆ. ಈ ವಿಹಾರಗಳಲ್ಲಿಯ ಬೌದ್ಧವಿಗ್ರಹಗಳ ಪೂಜಾದಿಗಳಿಗೆ ದತ್ತಿಕೊಟ್ಟ ವಿವರವಿದೆ. ಇದರಿಂದ ಡಂಬಳ ಒಂದು ಕಾಲದಲ್ಲಿ ಬೌದ್ಧ ಧರ್ಮದ ಕೇಂದ್ರವಾಗಿತ್ತೆಂದು ಸ್ಪಷ್ಟವಾಗುತ್ತದೆ. ಮುಳಗುಂದದ ಸಮೀಪದ ಕೋಳಿವಾಡದಲ್ಲಿಯೂ ಒಂದು ತಾರಾವಿಗ್ರಹ ದೊರೆತಿದ್ದು, ಅದರ ಮೇಲೆ ಯೇಧರ್ಮಾಹೇತು ಪ್ರಭಾವಹೀತಂ ತೇಷಾಂ ತಥಾಗತಾ ಎಂಬ ಪ್ರಸಿದ್ಧ ಬೌದ್ಧ ಚೂರ್ಣಿಯನ್ನು ಕೆತ್ತಲಾಗಿದೆ. ಇವು ಕರ್ನಾಟಕದಲ್ಲಿ ಬೌದ್ಧ ಧರ್ಮದ ನೆಲೆಯನ್ನು ಸ್ಪಷ್ಟಪಡಿಸುತ್ತವೆ.

ಕರ್ನಾಟಕದಲ್ಲಿ ಬೌದ್ಧಧರ್ಮ ಕ್ರಿ.ಶ ಹತ್ತನೆಯ ಶಮಾನದ ಹೊತ್ತಿಗೆ ಇಳಿಮುಖವಾಗಿತ್ತಾದರೂ, ಇನ್ನು ಅಲ್ಲಲ್ಲಿ ಜೀವಂತವಾಗಿ ಉಳಿದತ್ತೇನ್ನಬಹುದು. ಬಳ್ಳಿಗಾವೆ, ಭೈರವಾಡಗಿ, ಡಂಬಳ ಕೆಲ ಸ್ಥಳಗಳಲ್ಲಿ ಬೌದ್ಧರಿದ್ದರು. ಕ್ರಿ.ಶ 1067ರ ಶಾಸನವೊಂದರಿಂದ ಬಳ್ಳಿಗಾವೆಯಲ್ಲಿ ಮಂತ್ರಿಯಾಗಿದ್ದ ರೂಪಯ್ಯಭಟ್ಟ ಪ್ರಸಿದ್ಧ ಬೌದ್ಧವಿಹಾರ ಸ್ಥಾಪಿಸಿ ಉಂಬಳಿ ಕೊಟ್ಟನೆಂಬುದು ತಿಳಿಯುತ್ತದೆ. ನಾಗಿಯಕ್ಕ, ತಾರಾಭಗವತಿಯರು ಪ್ರತಿಮೆಮಾಡಿಸಿದ ವಿಷಯಗಳು ತಿಳಿದು ಬರುತ್ತದೆ.

ಕ್ರಿ.ಶ 1104ರ ಮುಳಗುಂದ ಶಾಸನದಲ್ಲಿ ಅಲ್ಲಿಯ ವೀರನಾರಾಯಣ ದೇವರ ಸನ್ಯಾಸಿಯೊಬ್ಬನನ್ನು "ಬೌದ್ಧ ಮದೇಭಪಂಚಾನನ" ಎಂದು ಮುಳಗುಂದದಲ್ಲಿ ಬೌದ್ಧಭಿಕ್ಷುಗಳು ದಾಸಿಯರು ಇದ್ದ ಬಗೆಗೆ ನಯಸೇನನ ಧರ್ಮಾಮೃತದಿಂದ ತಿಳಿದು ಬರುತ್ತದೆ. ನಯಸೇನನ ಕಾಲಕ್ಕಾಗಲೇ ಬೌದ್ಧ ಧರ್ಮವನ್ನು ಹಳಿಯುವ, ವಾದ–ವಿವಾದಗಳಲ್ಲಿ ಭಿಕ್ಷುಗಳನ್ನು ಸೋಲಿಸುವ ಒತ್ತಾಪೂರ್ವಕವಾಗಿ ಮತಾಂರಿಸುವ ಪ್ರಕ್ರಿಯೆಗಳು ನಡೆದಿದ್ದವೆಂದು ತೋರುತ್ತದೆ. ಹನ್ನೆರಡನೆಯ ಶತಮಾನದ ಸುಮಾರಿಗೆ ವೀರಶೈವ ಧರ್ಮದ ಪ್ರಾಬಲ್ಯದಿಂದಾಗ ಜೈನಧರ್ಮಕ್ಕೂ ಸಂಕಷ್ಟದ ಪರಿಸ್ಥಿತಿ ಉಂಟಾಗಿತ್ತು. ಅದೂ ತನ್ನ ಅಸ್ತಿತ್ವವನ್ನುಳಿಸಿಕೊಳ್ಳಲು ಹೆಣಗುತ್ತಿತ್ತು. ಇದಕ್ಕೂ ಅಲ್ಪ ಪ್ರಮಾಣದಲ್ಲಿರಬಹುದಾದ ಬೌದ್ಧರನ್ನು ಮತಾಂತರಿಸಲು ಅದು ಮಾಡಿದ ಪ್ರಯತ್ನದ ಸುಳಿವನ್ನು ನಯಸೇನನ ಧರ್ಮಾಮೃತದಲ್ಲಿಯ ಸತ್ಯವ್ರತದ ಕಥೆಯ ಬೌದ್ಧಧರ್ಮದ ಸಂಘಶ್ರೀಯ ಮಗಳು ಕಮಲಶ್ರೀಯನ್ನು ಧನದಮಹಾರಾಜ ಮದುವೆಯಾಗಿ ಜೈನ ಧರ್ಮ ಸ್ವೀಕರಿಸುವಂತೆ ಮತ್ತು ಆಕೆಯ ತಂದೆ ಜೈನಧರ್ಮಾವಲಂಬಿಯಾಗುವಂತೆ ಮಾಡಿದುದರಿಂದ ತಿಳಿಯಬಹುದು.

ಜೈನಧರ್ಮ:

ಜೈನಧರ್ಮವು ಕರ್ನಾಟಕಕ್ಕೆ ಯಾವಾಗ ಆಗಮಿಸುತ್ತೆನ್ನುವುದರ ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಆದರೆ ಇದು ಕರ್ನಾಟಕಕ್ಕೆ ಬಂದು ಕನ್ನಡಿಗರ ಸಾಹಿತ್ಯ ಸಂಸ್ಕೃತಿಯನ್ನು ಸಮೃದ್ಧಿಗೊಳಿಸಿದುದರ ಬಗೆಗೆ ಹೆಮ್ಮೆಯಿದೆ. ಎಲ್ಲರಲ್ಲಿ ಒಮ್ಮತವಿದೆ. ಇದು ಕರ್ನಾಟಕವನ್ನಾಳಿದ ರಾಜರ, ಸಾಮಂತರ ಆಶ್ರಯ ಪಡೆದು, ಮಾಡಿದ ಕಾರ್ಯ, ರೂಪಿಸಿದ ಮೌಲ್ಯಗಳಿಂದಾಗಿ ಎರಡನೇ ಶತಮಾನದಿಂದ ಹತ್ತನೆಯ

ಶತಮಾನದ ಸುಮಾರಿಗೆ ಈ ಧರ್ಮ ಅತ್ಯುನ್ನತ ಸ್ಥಾನಕ್ಕೆರಿದುದು ಐತಿಹಾಸಿಕ ಸತ್ಯವಾಗಿದೆ.

ಈ ಅವಧಿಯಲ್ಲಿ ಜೈನಧರ್ಮ ಅಲ್ಲಲ್ಲಿ ಗಟ್ಟಿಯಾಗಿ ನೆಲೆನಿಂತಿರುವುದಾದರೂ ಅದರ ಒಟ್ಟಾರೆ ಬಲ ಕುಸಿಯುತ್ತಿರುವುದ ಸ್ಪಷ್ಟವಾಗಿ ಕಂಡು ಬರುತ್ತದೆ. ಕನ್ನಡ ನಾಡಿನ ಹೊನವಾಡ, ಚಾಂದಕವಟೆ, ಕನ್ನನೂರು, ಬಾಬಾನಗರ, ಇಂಡಿ, ಇಂಗಳೇಶ್ವರ, ಹುಲ್ಲೂರ, ಗುಂಡಕರ್ಜಗಿ, ತಮದಡ್ಡಿ, ಯರಗಲ್, ಅಗರಖೇಡ, ದೇವೂರ, ಹೂವಿನಹಿಪ್ಪರಗಿ, ಕಲ್ಯಾಣ, ವಿಜಾಪೂರ ಈ ಮೊದಲಾದ ಗ್ರಾಮಗಳಲ್ಲಿ ಜೈನಧರ್ಮ ಪರಿಸರಿಸಿರುವುದು ಕಂಡುಬರುತ್ತದೆ.

ಕಲ್ಯಾಣ ಚಾಲುಕ್ಯರ ಪರಧರ್ಮಸಹಿಷ್ಣುತೆ ಜೈನಧರ್ಮಕ್ಕೆ ವರದಾನವಾಗಿ ಪರಿಣಮಿಸಿತು. ಎರಡನೆಯ ತೈಲಪ ಮತ್ತು ಅವನ ಮಗ ಇರಿವಬೆಡಂಗ ಅನೇಕ ಜೈನ ಮಂತ್ರಿಗಳನ್ನು ದಂಡಾಧೀಶರನ್ನು ನೇಮಿಸಿಕೊಂಡಿದ್ದರು. ಅಂಥ ದಂಡಾಧೀಪತಿಗಳಲ್ಲಿ ನಾಗವುಂಯ್ಯನು ಒಬ್ಬ. ಈತನ ಮೊಮ್ಮಗಳು ಪರಮಜಿನಭಕ್ತೆಯೂ ಆದ ಅತ್ತಿಮಬ್ಬೆ ಲಕ್ಕುಂಡಿಯಲ್ಲಿ ಜೈನಧರ್ಮದ ಏಳ್ಗೆಗಾಗಿ ಶ್ರಮಿಸುತ್ತಿದ್ದಳು. ಪೊನ್ನ–ರನ್ನರು ಈ ದೊರೆಗಳ ಆಶ್ರಯದಲ್ಲಿಯೇ ಇದ್ದರು. ಮಹಾಕವಿ ಪಂಪ ತೈಲಪನ ಸಾಮಂತನಾಗಿದ್ದ ಅರಿಕೇಸರಿಯಲ್ಲಿ ಆಶ್ರಯಪಡೆದಿದ್ದನು.

ಜೈನಧರ್ಮದ ಬಗೆಗೆ ಅಪಾರ ಶ್ರದ್ಧೆ ಹೊಂದಿದ್ದ ಒಂದನೇ ಸೋಮೇಶ್ವರ ಮತ್ತು ಮೂಲ್ ಜಿನಭಕ್ತಳಾದ ಬಾಚಲಾದೇವಿಯ ಮುಕ್ತದಾನದತ್ತಿಗಳಿಂದಾಗಿಯೂ, ಈ ಧರ್ಮ ಹೆಚ್ಚು ಜನಪ್ರೀಯತೆಯನ್ನು ಪಡೆದು ಅರಸುಮನೆತನದವರಿಂದ ಸಾಮಾನ್ಯ ಜನರು ಈ ಧರ್ಮದ ಬೆಳವಣಿಗೆಗೆ ಅನೇಕ ದಾನ–ದತ್ತಿಗಳನ್ನು ನೀಡಿದ ನಿದರ್ಶನಗಳು ಶಾಸನದಲ್ಲಿವೆ.

ಚಾಲುಕ್ಯ ರಾಜಕುಮಾರಿ ಅಕ್ಕದೇವಿಯು ಜೀನಾಲಯಕ್ಕೆ ಭೂಮಿದಾನವನ್ನು ನೀಡಿರುವ ಸಂಗತಿಯು ಕ್ರಿ.ಶ 1047ರ ಅರಸಿಬೀದಿ ಶಾಸನದಲ್ಲಿದೆ. ಚಾವುಂಡರಾಯನ ಹಿರಿಯ ರಾಣಿ ದೇಮಲದೇವಿ ಜೈನಬಸದಿಗೆ ದಾನ ನಿಡಿದ ವಿಷಯ ತಿಳಿಯುತ್ತದೆ. ಹೀಗೆ ಕರ್ನಾಟಕದ ಅನೇಕ ಕಡೆಗಳ ಶಾಸನಗಳಲ್ಲಿ ಜೈನ ಧರ್ಮದ ಕುರಿತು ಉಲ್ಲೇಖಗಳು ಸಿಗುತ್ತವೆ.

ಜೈನಧರ್ಮವನ್ನು ತಮ್ಮ ರಾಷ್ಟ್ರೀಯ ಧರ್ಮವನ್ನಾಗಿರಿಸಿಕೊಂಡಿದ್ದ ಗಂಗ ಅರಸರ ರಾಜಕುಮಾರಿ ಬಾಚಲದೇವಿಯನ್ನು ಸೋಮೇಶ್ವರ ವಿವಾಹವಾಗಿದ್ದನು. ಇದು ಜೈನ ಧರ್ಮದವರೊಂದಿಗೆ ಇದ್ದ ಇವರ ಅನ್ಯೋನ್ಯ ಸಂಬಂಧಕ್ಕೆ ಸಾಕ್ಷಿಯಾಗಿದೆ.

ಜೈನಧರ್ಮ ಕ್ರಿಸ್ತ ಪೂರ್ವದಿಂದಲೂ ಕರ್ನಾಟಕದಲ್ಲಿ ಹರಡಿ ಹತ್ತನೆಯ ಶತಮಾನದ ಸುಮಾರಿಗೆ ಬಹುಮುಖವಾಗಿ ಬೆಳವಣಿಗೆ ಹೊಂದಿದ್ದಿತು. ಆದರೆ ಈ ಧರ್ಮದ ಆಚರಣೆಯಲ್ಲಿ ಮುಂದೆ ತಾತ್ವಿಕ ಭಿನ್ನಾಭಿಪ್ರಾಯಗಳು ಉಂಟಾಗಿ

ಬೇರೆ ಬೇರೆ ಶಾಖೆಗಳು ಉದಯಿಸಿದವು. ಅವುಗಳಲ್ಲಿ ಶ್ವೇತಾಂಬರ, ದಿಗಂಬರ ಮತ್ತು ಯಾಪನೀಯ ಶಾಖೆಗಳು ಪ್ರಮುಖವಾದವು. ಕರ್ನಾಟಕದಲ್ಲಿ ಬಹುಮಟ್ಟಿಗೆ ಪ್ರಚಾರದಲ್ಲಿದ್ದುದು ದಿಗಂಬರ ಪಂಥ ಮತ್ತು ಯಾಪನೀಯ ಪಂಥಗಳು.[186]

ಯಾಪನೀಯ ಸಂಘ:

ಮೂಲಸಂಘದ ನಂತರ ಕಾಣಬರುವ ಪ್ರಬಲ ಜೈನ ಸಂಘವೆಂದರೆ ಯಾಪನೀಯ ಸಂಘ, ಇದು ಮೂಲ ಸಂಘದಿಂದಲೇ ಕವಲೊಡೆದ ಶಾಖೆಯಾಗಿದೆ. ಈ ಸಂಘದ ಹರವು ವಿಸ್ತಾರವಾದುದು. ಇದರಲ್ಲಿ ಕಾಣೂರು ಗಣವು ಸೇರಿದೆ. ಅಲ್ಲದೇ ಸೂರಸ್ತಗಣದ ಪ್ರಸ್ತಾಪವು ಹೆಚ್ಚಿನ ಪ್ರಮಾಣದಲ್ಲಿದೆ. ಸೂರಸ್ತಗಣವು ಕಾಣೂರುಗಣವು ಒಂದೇ ಪರಂಪರೆಯ ಕವಲುಗಳು, ಅಂದರೆ ಸಮಾನ ಮೂಲದವು, ಯಾಪನೀಯ ಹೃದಯದ ಚೀಲಗಳು. ಕ್ರಿಶ ಎರಡನೆಯ ಶತಮಾನದಿಂದ ಕಲ್ಯಾಣ ಚಾಲುಕ್ಯರ ಕಾಲಾವಧಿಯಲ್ಲಿ ಯಾಪನೀಯ ಸಂಘ ಪ್ರಚಾರದಲ್ಲಿತ್ತು.

ಕಲ್ಯಾಣದಲ್ಲಿ ಕ್ರಿ.ಶ. ಎರಡನೆಯ ಶತಮಾನದ ಮಧ್ಯಭಾಗದಲ್ಲಿ ಇಲ್ಲಿಗೆ ಪ್ರವೇಶಿಸಿತೆಂದು ದಾಖಲೆಗಳು ತಿಳಿಸಿವೆ. ದೇವಸೇನ ಸೂರಿಯ (ಕ್ರಿ.ಶ 934) ತನ್ನ ದರ್ಶನಸಾರ ಎಂಬ ಪ್ರಾಕೃತ ಕೃತಿಯಲ್ಲಿ ಯಾಪನೀಯ ಸಂಘದ ಆವಿಷ್ಕಾರ ತೇದಿಯನ್ನು ನಮೂದಿಸಿದ್ದಾನೆ.

ಕಲ್ಯಾಣೇ ವರಣಯರೇ ದುಣ್ಣಿಸವಿ ಪಂಚ ಉತ್ತರೇ ಜಾದೇ ಜಾವಣಿಯ ಸಂಘ ಬಾವೋ ಸಿರಿಕಲಸಾದೋ ಹುಸೇವಡದೋ॥ (26) ವಿಕ್ರಮ ಸಂವತ್ಸರ 205ರಲ್ಲಿ, ಅದಂರೆ ಕ್ರಿ.ಶ 148ರಲ್ಲಿ, ಶ್ರೀಕಲಶ ಎಂಬ ಶ್ವೇತಾಂಬರ ಸಾಧುವು ಜಾವಣಿಯ ಸಂಘವನ್ನು ಸ್ಥಾಪನೆ ಮಾಡಿದನು. ವಡ್ಡಾರಾಧನೆ ಗ್ರಂಥದಲ್ಲು ಜಾಪುಲಿ ಸಂಘವು ಇದೆ ಹಿನ್ನೆಲೆಗೆ ಹೊಂದಿಸಿ ಹೇಳಲಾಗಿದೆ. ಯಾಪನೀಯ ವೃಕ್ಷವು ಕಲ್ಯಾಣಪಟ್ಟಣದಲ್ಲಿ ಮೊಳಕೆಯೊಡೆದು ಪಲಾಶಿಕೆಯಲ್ಲಿ ಪಲ್ಲವಿಸಿತು. ಗಂಗರು, ಕದಂಬರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು ಅದಕ್ಕೆ ನೀರೆರೆದು ನೆರಳಿತ್ತರು. ಕಲ್ಯಾಣವು ಚಾಲುಕ್ಯರ ರಾಜಧಾನಿಯಾಗುವುದಕ್ಕಿಂತ ಎಂಟನೂರು ವರ್ಷ ಮುಂಚೆಯೇ ಜೈನರ್ ಯಾಪನೀಯರ ಕೇಂದ್ರವಾಗಿತ್ತು. ಚಾಲುಕ್ಯ ಚಕ್ರವರ್ತಿ ಅಹವಮಲ್ಲ ತ್ರೈಲೋಕ್ಯಮಲ್ಲ, ಸೋಮೇಶ್ವರದೇವರನು ಯಾಪನೀಯ ಸಂಘದ ಭೀಮಚೇಂದ್ರ ಭಟ್ಟಾರಕರ ಶಿಷ್ಯನಾದ ಮೌನಿಚಂದ್ರ ಸಿದಾಂತ ದೇವನ ಕಾಲನ್ನು ತೊಳೆದು, ನದುಕುಲಿಗೆಯ ಬಸತಿಯ ಸಂರಕ್ಷಣೆಗೆಂದು ನಗದು ಪಣ, ದೇವಭೋಗ, ಪೊನ್ನ ಗದ್ಯಾಣ ಮೊದಲಾದುದನ್ನು ಕ್ರಿಶ 1064ರಲ್ಲಿ ದಾನವಿತ್ತುದನ್ನು ರಾಮಚಂದ್ರಪುತ ಶಾಸನ ದಾಖಲಿಸಿದೆ.

ಯಾಪನೀಯ ಸಂಘಗಳಿಸಿದ ರಾಜಮಾನ್ಯತೆಯ ಸ್ಪಷ್ಟ ಉಲ್ಲೇಖಗಳು ಕ್ರಿಶ 5ನೇ ಶತಮಾನದ ಶಾಸನಗಳಲ್ಲಿ ಉತ್ಕೀರ್ಣವಾಗಿವೆ. ಕರ್ನಾಟಕ ಭೌಗೋಳಿಕ ಸೀಮೆಯಲ್ಲಿ, ಜೈನ ಸಮಾಜದೊಳಗೆ ಸಮಾವೇಶಗೊಂಡ ಕೆಳವರ್ಗದವರೆನಿಸಿಕೊಂಡ

ನರಳುತ್ತಿದ್ದ ಜಾತಿ ವರ್ಗಗಳಿಂದ ಮತಾಂತರಗೊಂಡು ಬಂದು ಸೇರಿದವರಿಗೂ ಸಾಂತ್ವನಗೊಳಿಸಿದ ಪಂಥ ಯಾಪನೀಯ. ಯಾಪನೀಯರಿಗೂ ಮೊದಲೇ ಇದ್ದ ತೆಳ್ಳನೆಯ ಎಳೆಗಳನ್ನು ಇವರು ಮಜಬೂತಾಗಿ ಹುರುಗೊಳಿಸಿ ಜಿನಮತವನ್ನು ಜನಮತವಾಗಿಸಲು, ಜನಪ್ರಿಯತೆಗಾಗಿ ಜಗ್ಗಿದರು. ಅತ್ತ ದಿಗಂಬರರಿಂದ ಸ್ವಲ್ಪ ಇತ್ತ ಶ್ವೇತಾಂಬರರಿಂದ ತುಸು ಸೂತ್ರಗಳನ್ನು ಸ್ವೀಕರಿಸಿ ಒಂದು ಮಧ್ಯ ಮಾರ್ಗವನ್ನು ಜನಪಥವನ್ನು ತೆರೆದರು. ಜನಮತದ ಬೇಡಿಕೆಗಳು ಬಲವಾದಾಗ ಧರ್ಮವೂ ಬಾಗಬೇಕಾಗುತ್ತದೆಂಬುದನ್ನು ಅರಿತ ಮುನ್ನೋಟದ ಮತಾಚಾರ್ಯರು ಹಿಡಿದ ಸಮನ್ವಯ ಸೂತ್ರದ ಮಶಾಲು ಯಾಪನೀಯ ಸಂಘ. ಯಕ್ಷಪರಿಕಲ್ಪನೆ, ಶಿಲ್ಪವಿನ್ಯಾಸ, ಮೂರ್ತಿ ರಚನೆ, ಪ್ರತಿಷ್ಠಾಪನೆ, ಪೂಜಾವಿಧಾನ ಇವಿಷ್ಟು ಯಾಪನೀಯ ಯತಿಗಣದ ಕೊಡುಗೆ. ಗೃಹಸ್ಥ–ಶ್ರಾವಕ ವೃಂದಕ್ಕೆಯಕ್ಷ ಲೋಕವನ್ನು ಕಲ್ಪಿಸಿಕೊಟ್ಟವರು ಯಾಪನೀಯರು. ಕನ್ನಡ ಸಾಹಿತ್ಯ ಜಗತ್ತಿಗೆ ಯಕ್ಷಯಕ್ಷಿಯರನ್ನು ಕೊಟ್ಟವರು ಯಾಪನೀಯರು.

ಬ್ರಹ್ಮಶಿವ ಕವಿಯ ಕಾವ್ಯ ಯಾಪನೀಯದ ವ್ಯಾಖ್ಯಾನ ಗ್ರಂಥ, ಆತನ ಯಾಪನೀಯದ ವಕ್ತಾರನಾಗಿ ಆ ಪಂಥದ ಕಡೆಯ ಕಾಲದ ಘಟ್ಟದಲ್ಲಿ ನಿಂತು ಕೃತಿ ರಚನೆ ಮಾಡಿದವನು. ಯಾಪನೀಯ ಸಿದ್ಧಾಂತ ಪರಂಪರೆಯ ಪ್ರತಿಧ್ವನಿ ಸಂಸ್ಕೃತ, ಪ್ರಾಕೃತ, ಕನ್ನಡ ಸಾಹಿತ್ಯದಲ್ಲಿಯೂ ಅನುರಣಿತವಾಗಿದೆ. ಶಿವಕೋಟಿ (ಕ್ರಿ.ಶ2ನೆಯ ಶತಮಾನ), ಆಚಾರ್ಯ ಉಮಾಸ್ವಾಮಿ (ಕ್ರಿ.ಶ 350–75), ನಾಗಕುಲವಿಮಲ್ ಸೂರಿ (ಕ್ರಿ.ಶ 473), ಸಿದ್ದಸೇನ ದಿವಾಕರ (ಕ್ರಿ.ಶ 400–444), ಜಟಾಸಿಂಹನಂದಿ (ಕ್ರಿ.ಶ 7ನೇ ಶತಮಾನ), ಅಪಭ್ರಂಶಕವಿ ಸ್ವಯಂಭು (ಕ್ರಿ.ಶ 7ನೇ ಶತಮಾನ) ಪ್ರಸಿದ್ಧ ವೈಯಾಕರಣಿ ಶಾಕಟಾಯನ (ಪಾಲ್ಯಕೀರ್ತಿ, ಕ್ರಿ.ಶ 840), ಅಪರಾಜಿತಸೂರಿ (ಸು. 9–10ನೇ ಶತಮಾನ) ಭ್ರಾಜಿಷ್ಣು (ಸು. ಕ್ರಿ.ಶ 800) ಮೋದಲಾದ ಲೇಖಕರು ಯಾಪನೀಯ ಸಂಘ ಸಿದ್ಧಾಂತಕ್ಕೆ ಸ್ಪಂದಿಸಿದವರು. ಕ್ರಮವಾಗಿ ಇವರ ಕೃತಿಗಲಾದ ಆರಾಧನಾ (ಮೊಲಾರಾಧನಾ, ಬೃಹದಾರಾಧನಾ, ಭಗವತೀ ಆರಾಧನಾ), ತತ್ವಾರ್ಥ ಸೂತ್ರ, ಪುಮಚರಿಯ (ಪದ್ಮಚರಿತ), ನ್ಯಾಯಾವತಾರ, ವರಾಂಗ ಚರಿತ, ರಿಟ್ಟಣೇಮಿಚರಿಯ (ಹರಿವಂಶ), ಶಾಕಟಾಯನ ವ್ಯಾಕರಣ, ವಿಮಲೋಧಯ ಟೀಕಾ, ಆರಾಧನಾ ಕರ್ಣಾಟಕ ಟೀಕಾ) ಇವುಗಳಲ್ಲೆಲ್ಲ ಯಾಪನೀಯ ತತ್ವಗಳು ಹೊಳಲುಗೊಡುತ್ತವೆ.

ಕದಂಬರ, ಗಂಗರ, ಬಾದಾಮಿ ಚಾಲುಕ್ಯರ ರಾಷ್ಟ್ರಕೂಟರ, ಕಾಲದಿಂದ ಕಲ್ಯಾಣ ಚಾಲುಕ್ಯರ ಕಾಲದವರೆಗಿನ ಸಹಸ್ರಮಾನವು ಯಾಪನೀಯ ಸುವರ್ಣಯುಗ, ಆ ಹೊಂಗಾಲವು ತನ್ನ ಏಳಿಗೆಯ ತುತ್ತ ತುದಿಯನ್ನು ಮುಟ್ಟಿದ್ದನ್ನು ಕಲ್ಯಾಣ ಚಾಲುಕ್ಯರ ಆಡಳಿತದಲ್ಲಿ. ಕ್ರಿಶ ಎರಡನೇ ಶತಮಾನದಿಂದ ಹನ್ನೆರಡನೆಯ ಶಮಾನದ ವರೆಗೆ ಪ್ರಬಲವಾಗಿದ್ದ ಯಾಪನೀಯ ಸಂಘವು ರಾಜರೂ, ಪ್ರಜೆಗಳೂ ಪುರಸ್ಕರಿಸಿ ಪೋಷಿಸಿದರು. ಅದರ ಉದಾರನೀತಿಯು ಒಟ್ಟು ಜೀವಪರವಾಗಿ ಮಿಡಿದ ಶಿಷ್ಟ

ಸಂಪ್ರದಾಯ, ಸಂಪ್ರದಾಯಿಕ ಸದ್ಭಾವದ ಜೀವಧ್ವನಿಯಾಗಿ, ಸಮಾಜ ಮುಖಿಯಾಗಿ ಹೊರಳುತ್ತ, ಧರ್ಮ ಸಾಮರಸ್ಯದ ಸುವರ್ಣ ಮಾಧ್ಯಮವಾಗಿ ಯಾಪನೀಯ ಮಾಡಿದ ಸಾಧನೆ, ಪಡೆದ ಸಿದ್ಧಿ ಶ್ಲಾಘನಿಯವಾಗಿದೆ. ಈ ಪಂಥ ಉತ್ತರದತ್ತ ದಾಂಗುಡಿಯಿಟ್ಟು ಹಬ್ಬದೆ ಹೋದದ್ದು ಸೂಜಿಗವೇನಲ್ಲ. ಅಲ್ಲಿ ಇದರ ಅವಶ್ಯಕತೆ ಇರಲಿಲ್ಲ. ಉತ್ತರದಲ್ಲಿ ಶ್ವೇತಾಂಬರ ಪಂಥ ಈ ಬಗೆಯ ಚಟುವಟಿಕೆ ನಡೆಸಿತ್ತು. ಆದ್ದರಿಂದ ಯಾಪನೀಯ ದಕ್ಷಿಣದಲ್ಲಿ ಹುಟ್ಟಿ, ಬೆಳೆದು, ಕಡೆಗೆ ಇಲ್ಲಿಯೇ ಕೊನೆಯಸಿರೆಳೆಯಿತು. ಸುಮಾರು ಒಂದು ಸಾವಿರ ವರ್ಷಗಳವೆಗೆ ಬೀಳೆಳುಗಳನ್ನು ತಾಳಿಕೊಂಡು ಬಂದಿದ್ದ ಯಾಪನೀಯ ಸಂಘ ಕಡೆಗೆ ದಿಗಂಬರ ಮುಖ್ಯವಾಹಿನಿಯಲ್ಲಿ ಕೂಡಲಸಂಗಮಗೊಂಡಿತ್ತು.

ಯಾಪನೀಯರು ಮಂತ್ರ–ತಂತ್ರ–ಯಂತ್ರಗಳನ್ನು ಜಾರಿಗೆ ತಂದವರು. ಭೂತ ಪ್ರೇತ ಪಿಶಾಚಗಳನ್ನು ಓಡಿಸುವವರೆಂದು ಪ್ರಸಿದ್ಧಿ ಪಡೆದವರು. ಕರ್ನಾಟಕದ ಸಂದರ್ಭದಲ್ಲಿ ಯಕ್ಷೀ ಆರಾದನೆಯ ಉದ್ಘಾಟಕರು ಯಾಪನೀಯರೇ.[187]

ಕ್ರಿ.ಶ 2ನೇ ಶತಮಾನದಲ್ಲಾಗಲೇ ಪ್ರಸಿದ್ಧ ಜೈನ ಕೇಂದ್ರವಾಗಿದ್ದು, ಯಾಪನೀಯ ಸಂಘ ಪರಂಪರೆಯ ಮುನಿಗಳ ನೆಲೆವೀಡಾಗಿತ್ತೆಂಬುದು ಖಚಿತವಾಗುತ್ತದೆ. ಈ ನಗರದ ಜೈಶಂಕರ ಕಾಲೋನಿಯಲ್ಲಿ ಆರ್.ಎಂ ಷಡಕ್ಷರಯ್ಯ ಅವರು ಕ್ರಿ.ಶ ಸುಮಾರು 2ನೆಯ ಶತಮಾನದಷ್ಟು ಪ್ರಾಚೀನ ಜನವಸತಿಯ ನೆಲೆಯನ್ನು ಬೆಳಕಿಗೆ ತಂದಿದ್ದಾರೆ. ಈ ನೆಲೆಯೂ ಕಲ್ಯಾಣ ನಗರದಲ್ಲಿ ಅಂದು ಜೈನ ವಸತಿ ಇತ್ತೆಂಬುದನ್ನು 'ದರ್ಶನಸಾರ'ದ ನಿರೂಪಣೆಯನ್ನು ಧೃಡಿಕರಿಸುತ್ತದೆ.[188]

ಹೀಗೆ ಬೀದರ ಜಿಲ್ಲೆಯಲ್ಲಿ ಎರಡನೇ ಶತಮಾನದಿಂದ ಚಾಲ್ತಿಯಲ್ಲಿದ್ದ ಜೈನ ಧರ್ಮದ ಕುರಿತು ಕಲ್ಯಾಣ ಚಾಲುಕ್ಯರ ಮುಂಚೆ ಶಾಸನಗಳು ಲಭ್ಯವಿಲ್ಲ. ಬಸದಿಗಳು ಬೇರೆ ಪ್ರದೇಶಗಳಲ್ಲಿ ನಾಶವಾದಂತೆ ಬೀದರ ಜಿಲ್ಲೆಯಲ್ಲಿಯೂ ನಾಶವಾಗಿರಬಹುದು. ಬೀದರ ಜಿಲ್ಲೆಯಲ್ಲಿ ಜೈನ ಶಾಸನಗಳು ಒಟ್ಟು 18 ಶಾನಗಳು ಲಭ್ಯವಾಗಿವೆ.

ಪ್ರಥಮ ಶಾಸನವು ಕ್ರಿ.ಶ 1099ರಲ್ಲಿ ಜೈನ ಧರ್ಮ ಕುರಿತು ದಾಖಲಾದ ಶಾಸನವಿದ್ದು, ಈ ಶಾಸನದಲ್ಲಿ ಹೇರ್ಮಡಿದೇವನು ಬ್ರಹ್ಮಜೀನಾಲಯಕ್ಕೆ ದಾನ ನೀಡಿದಂತೆ ಹೇಳಿಕೊಂಡಿದ್ದಾರೆ.

ನಂತರ ಬಸವಕಲ್ಯಾಣ ಮೂಸಿಯಂನಲ್ಲಿರುವ ಶಾಸನವೊಂದು ಕ್ರಿ.ಶ 1100ಕ್ಕೆ ಸೇರಿದ್ದರ ಶಾಸನದಲ್ಲಿ, ಕಲ್ಯಾಣದಲ್ಲಿ ಮುಂಚೆ ಹಲವಾರು ಜಿನಾಲಯಗಳನ್ನು ನಿರ್ಮಿಸಿದ್ದರು. ಕಾಲಾಂತರದಲ್ಲಿ ಅವುಗಳು ಶಿಥಿಲಗೊಂಡು, ದಾನಚಿಂತಾಮಣಿಯು (ಅತ್ತಿಮಬ್ಬೆ) ಅವುಗಳನ್ನು ಜೀರ್ಣೋದ್ಧಾರ ಮಾಡಿಸಿದಳೆಂದು ಶಾಸನ ತಿಳಿಸಿದೆ. ಚಂದ್ರಪ್ರಭಾನಾಥನ ಜಿನಾಲಯವನ್ನು ರಚ್ಚಮಲ್ಲ, ಪೇರ್ಮಾಡಿ, ಈಶ್ವರ, ರವಿಯಣ, ಎಂಬುವರು ಜೀರ್ಣೋದ್ಧಾರ ಮಾಡಿಸಿ ಸ್ಥಿರವಾಗಿ ಉಳಿಸಿಕೊಂಡರು ಎಂದಿದೆ.

ಜೈನಧರ್ಮದಲ್ಲಿ ಉತ್ಸಾಹಿಗಳೂ, ಸಜ್ಜನರೂ, ಕ್ಷಮಾಗುಣದವರೂ, ಚತುರ್ವಿಧ ದಾನಿಗಳೂ, ಪರಮೋತ್ಸಾಹ ಗಣ್ಯರಾದ ದೇವಪಾರ್ಯ, ಪಟ್ಟಪ, ಭರತ, ಶ್ರೀಮತಿ ರಾಮದೇವ ಎಂಬುವರು ಕಲ್ಯಾಣದ ಗೋಷ್ಠಿಯ ಸದಸ್ಯರಾಗಿದ್ದರು, ಚಂದ್ರಪ್ರಭ ಜಿನಾಲಯವನ್ನು ಜೀರ್ಣೋದ್ಧಾರ ಮಾಡಿಸಿದ್ದಾಗಿ ಶಾಸನ ತಿಳಿಸುತ್ತದೆ. ಜೀರ್ಣೋದ್ಧಾರ ಕಾರ್ಯದಲ್ಲಿ ಉತ್ಸಾಹದಿಂದ ಭಾಗವಹಿಸಿದ ಜಕ್ಕಣಬ್ಬೆಯು ಮುನಿಗಳ ಆಹಾರದಾನಕ್ಕಾಗಿ ವ್ಯವಸ್ಥೆ ಮಾಡಿದಳು. ಜಿನಾಲಯದಲ್ಲಿ ಪ್ರತಿಷ್ಠಾಪಿಸಲು ಸಹಸ್ರಕೂಟ ಜಿನಬಿಂಬನ್ನು ವೈಜಪಯ್ಯನ ಹಿರಿಯ ಪುತ್ರ ಹೀರಪಾಂಕನು ಮಾಡಿಸಿಕೊಟ್ಟನೆಂದು ತಿಳಿಸಿದೆ. ಜಿನಾಲಯದ ಮುಂಭಾಗದಲ್ಲಿ ಈಶ್ವರಸೆಟ್ಟಿಯು ಮಾನಸ್ತಂಭವನ್ನು ಮಾಡಿಸಿದನು. ಈಶ್ವರರಾಂಕ, ರಚ್ಚಮಲ್ಲ, ಪೆರ್ಮಾಡಿ ರವಿಯಣ ಮೊದಲಾದವರ ದಾನಗುಣಾದಿಗಳನ್ನು ಶಾಸನವು ಹೊಗಳಿದೆ. ಈ ಶಾಸನವನ್ನು ಮೂಕರಾಜನು ರಚಿಸಿದನೆಂದು ಶಾಸನವು ತಿಳಿಸಿದೆ.[189]

ಅದರಂತೆ ಗೋರ್ಟಾ ಗ್ರಾಮದ ಪೂರ್ವಕ್ಕೆ ಗುರಪ್ಪ ಕನಕಟ್ಟೆ ಹೊಲದಲ್ಲಿರುವ ಕಲ್ಲಿನ ಮೇಲಿರುವ ಕ್ರಿ.ಸ 1118ರ ಶಾಸನದಲ್ಲಿ ಸಿಂಗಿಸೆಟ್ಟಿ ಎಂಬುವನು ಬಹುಶಃ ಸಲ್ಲೇಖನ ವೃತ್ತ ಕೈಗೊಂಡು ಸ್ವರ್ಗಸ್ಥನಾದಂತಿದೆ.[190]

ಗೋರ್ಟಾ ಗ್ರಾಮದ ಗುರಪ್ಪ ಕನಕಟ್ಟೆ ಹೊಲದಲ್ಲಿರುವ ಇನ್ನೊಂದು ಕಲ್ಲಿನ ಮೇಲೆ ಕ್ರಿ.ಶ 1133ರ ಶಾಸನದಲ್ಲಿ, 'ಭೂಯಾದಾ ವೀರಸೇನಸ್ಯ ಶಾಸನಂ' ಎಂದು ಎರಡು ಬಾರಿ ಹೇಳಿದೆ. ವೀರಸೇನನ ಶಿಷ್ಯ ಸಿದ್ಧಾಂತದೇವನ ವರ್ಣನೆಯಿದೆ. ತ್ರಿಭುವನಸೇನಸಿದಾಂತದೇವರು ಅಭಿನವ ಗಣಧರನಂತಿದ್ದನೆಂದೂ, ಸಂಸಾರಗಳಿಗೆ ಅಂತ್ಯ ಹಾಡಲೆಂದೇ ಜನಿಸಿದರೆಂದೂ, ಶುದ್ಧ ಚಾರಿತ್ರ್ಯ ಉಳ್ಳವರೆಂದೂ ಶಾಸನವು ಹೊಗಳಿದೆ. ಇವನು ಸಮಾಧಿಮರಣದಿಂದ ಪರಮಾತ್ಮ ತತ್ವವನ್ನು ಹೊಂದಿದರೆಂದು ಶಾಸನವು ತಿಳಿಸುತ್ತದೆ.[191]

ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಧನ್ನೂರ (ಎಚ್) ಗ್ರಾಮದ ಬಸವೇಶ್ವರ ದೇವಾಲಯದಲ್ಲಿರುವ ಶಾಸನದಲ್ಲಿ, ಎರಡನೇ ಸೋಮೇಶ್ವರ (ಭೂಲೋಕಮಲ್ಲದೇವ)ನ ಆಳ್ವಿಕೆ ಕಾಲದಲ್ಲಿ ಪ್ರಭುಗಾವುಂಡ ಮಹೇಶ್ವರನ ಪುತ್ರ ಮಲ್ಲದೇವ ಹಾಗೂ ಮಲ್ಲದೇವ ಪುತ್ರರಾದ ಗೋಪದೇವ, ಪ್ರಧಾನಿ ಕಾಳಿಮಯ್ಯರು ಸೇರಿ ಜಿನಾಲಯದ ಮುನಿಗಳ ಆಹಾರಕ್ಕಾಗಿ ನಂದಾದೀವಿಗೆಗೆ ದಾನ ನೀಡಿರುವುದನ್ನು ಕಾಣಬಹುದು.[192]

ಬೀದರ ಜಿಲ್ಲೆಯ ಕಮಠಾಣಾ ಪಾರ್ಶ್ವನಾಥ ಜಿನಾಲಯವಿದ್ದು, ಆ ಜೀನಾಲಯದಲ್ಲಿ ಪಾರ್ಶ್ವನಾಥ ತೀರ್ಥಂಕರನ ಶಿಲ್ಪದ ಪಾದಪೀಠದಲ್ಲಿರುವ ಶಾಸನದಲ್ಲಿ, ಮೂಲ ಸಂಘಕ್ಕೆ ಸೇರಿದ ರೇಚಿಸೆಟ್ಟಿಯರು ಪಾರ್ಶ್ವನಾಥ ತೀರ್ಥಂಕರನ ಶಿಲ್ಪವನ್ನು ಪ್ರತಿಷ್ಠಾಪಿಸಿದಂತೆ ತಿಳಿಯಬಹುದಾಗಿದೆ.[193]

ಬೀದರ ಜಿಲ್ಲೆಯ ಔರಾದನ ಅಮರೇಶ್ವರ ಕನ್ಯಾಪ್ರೌಢಶಾಲೆಯಲ್ಲಿ ಗೋಡೆಗೆ

ಒರಗಿಸಿರುವ ಕಲ್ಲಿನ ಮೇಲಿರುವ ಶಾಸನದಲ್ಲಿ, ದಂಡನಾಯಕನ ಪತ್ನಿ ನಾಗಾಂಬಿಕೆ ಎಂಬುವಳು ವಿಖ್ಯಾತವಾದ ಅಮರವಾಡಿಕೆ ನಗರದಲ್ಲಿ ಪ್ರಾರ್ಶ್ವನಾಥ ತೀರ್ಥಂಕರರ ಜಿನಾಲಯವನ್ನು ಮಾಡಿಸಿದಳೆಂದು ಶಾಸನ ತಿಳಿಸುತ್ತದೆ.[194]

ಬರೂರ ಗ್ರಾಮದ ಪಂಚಾಯಿತಿ ಕಛೇರಿಯ ಎದುರಿನ ಕಟ್ಟೆಯ ಕಲ್ಲಿನ ಕ್ರಿಶ 1115ರ ಶಾಸನದಲ್ಲಿ ತ್ರಿಭುವನಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ, ಬರವೂರ ಪ್ರಭುವಾದ ಆದಿತ್ಯಭಟ್ಟನ ಮಗ ಚಂದಗೇವಭಟ್ಟ, ಮಾರಸ್ವಾಮಿ ಭಟ್ಟೋಪಾಧ್ಯಾಯ, ರುದ್ರಭಟ್ಟ, ಮಲ್ಲಿದೇವಭಟ್ಟ, ಈ ಐವರು ಮಹಾಜನರು ಪಂಚಮಠಸ್ಥಾನದವರು, ನಗರ (ವ್ಯಾಪಾರಿಗಳು), ಎಲೆವ್ಯಾಪಾರಿಗಳು ಅಟ್ಟಳೆ–300ರ ಬಳಿಯ ಮನ್ನೆಯರು, ಕಿಳಟ್ಟಳೆ ನೂರೈವರು, ಛಪ್ಪನ್ನ ಹೆಜ್ಜುಂಕ ವೆರ್ಗ್ಗಡೆಗಳು ಸೇರಿ ಬರವೂರ ನಗರದ ಬಸದಿಯ ಶಾಂತನಾಥದೇವರಿಗೆ ದೇವರ ಅಂಗಭೋಗ, ನೈವೇದ್ಯ, ಖಂಡಸ್ಫುಟಿತ ಜೀರ್ಣೋದ್ಧಾರ, ಋಷಿಗಳ ಮತ್ತು ಅಜ್ಜಿಯರ ಆಹಾರದಾನಕ್ಕೆ ದತ್ತಿ ಬಿಡುತ್ತಾರೆ. ದಾನದ ವಿವರ ಇಂತಿದೆ. ತಾವು ಮಾರುವ ಹಾಗೂ ಕೊಳ್ಳುವ ವಸ್ತುಗಳಾದ ಧಾನ್ಯ, ಉಪ್ಪಿಗೆ ಹೊನ್ನಿಗೆ ಎರಡು ಬಳ್ಳ ಬತ್ತವನ್ನೂ ಸೀರೆ, ಎಲೆ–ಅಡಕೆ, ಮೆಳಸು, ಗನ್ನಿಗೆ ಬಂಡ, ಕಿರುಕುಳ ಮೊದಲಾದ ವಸ್ತುಗಳಿಗೆ ಒಂದು ಬೆಳ್ಳಿಯ ಪಾಗವನ್ನು ಬಿಟ್ಟಿದ್ದನ್ನು ತಿಳಿಸುತ್ತದೆ.[195]

ಬೀದರ ಜಿಲ್ಲೆಯ ಅಮರೇಶ್ವರ ಕನ್ಯಾಪ್ರೌಢಶಾಲೆಯಲ್ಲಿ ಗೋಡೆಗೆ ಒರಗಿಸಿರುವ ಕಲ್ಲಿನ ಮೇಲಿರುವ ಶಾಸನದಲ್ಲಿ, ನಾಗಾಂಬಿಕೆ ಎಂಬುವವಳು ಅಮರವಾಡಿಕೆಯಲ್ಲಿ ಪಾರ್ಶ್ವನಾಥನ ಬಸದಿಯನ್ನು ಕಟ್ಟಿಸಿದಂತೆ ತಿಳಿಸುತ್ತದೆ.[196]

ವೈಷ್ಣವ ಧರ್ಮ:

ವೈದಿಕ ಧರ್ಮದಲ್ಲಿ ಉಂಟಾದ ಎರಡು ಪ್ರಭೇದ (ವೈಷ್ಣವ, ಶೈವ)ಗಳಲ್ಲಿ ವೈಷ್ಣವ ಧರ್ಮವೂ ಒಂದು. ಕ್ರಿಸ್ತ ಪೂರ್ವದಲ್ಲಿಯೇ ದಕ್ಷಿಣ ಭಾರತವನ್ನು ಪ್ರವೇಶಿಸಿದ ಈ ಧರ್ಮ ಕ್ರಿ.ಶ ನಾಲ್ಕನೆಯ ಶತಮಾನದ ವೇಳೆಗಾಗಲೇ ಕರ್ನಾಟಕದಲ್ಲಿ ಜನಪ್ರಿಯವಾಗಿದ್ದಿತು. ಕಲ್ಯಾಣ ಚಾಲುಕ್ಯರು ವೈಷ್ಣವ ಮತಾವಲಂಬಿಗಳಾಗಿದ್ದು, ತಮ್ಮ ವಂಶ ಪ್ರಶಸ್ತಿಯಲ್ಲಿ ತಮ್ಮ ರಾಜಲಾಂಛನವಾದ 'ವರಾಹ'ವನ್ನು ಭಗವಾನ ನಾರಾಯಣನೇ ಅನುಗ್ರಹಿಸಿದನೆಂದು ಹೇಳಿಕೊಂಡಿದ್ದಾರೆ. ಕರ್ನಾಟಕದಲ್ಲಿ ದೊರೆಯುವ ಅತೀ ಪ್ರಾಚೀನ ವಿಷ್ಣು ದೇವಾಲಯವು ಇವರ ಪೂರ್ವಜರದ್ದೆ. ಕ್ರಿ.ಶ 578ರಲ್ಲಿ ಮಂಗಳೇಶನಿಂದ ಕೊರೆಯಿಸಲ್ಪಟ್ಟ ಗುಹಾಲಯವೇ ಪ್ರಥಮ ವೈಷ್ಣವ ಗುಹಾಲಯವಾಗಿದೆ. ಯಜ್ಞಯಾಗಾದಿಗಳಿಗೂ ವರ್ಣಾಶ್ರಮ ಧರ್ಮಕ್ಕೂ ಪ್ರಾಧಾನ್ಯವನ್ನು ಕೊಟ್ಟಿದ ವೈದಿಕ ಧರ್ಮದ ಅಕ್ಕಪಕ್ಕದಲ್ಲಿಯೇ ಮೂಲತಃ ಅದಕ್ಕಿಂತ ಭಿನ್ನವಾದ ವೈಷ್ಣವ ಧರ್ಮ ಬೆಳೆದುಕೊಂಡು ಬಂದಿತ್ತು. ಇದನ್ನು ಭಾಗವತ, ಸಾಸ್ವತ, ಏಕಾಂತಿಕ, ಧರ್ಮವೆಂದೂ ಕರೆಯುವದುಂಟು. ಈ ಧರ್ಮದ ಸ್ಥಾಪಕ ಕ್ಷತ್ರಿಯನಾದ ಕೃಷ್ಣ ವಾಸುದೇವ.

ಇವರ ಕಾಲದಲ್ಲಿ ಅನೇಕ ವೈಷ್ಣವ ಮಂದಿರಗಳು ಹಾಗೂ ದೇವಾಲಯಗಳು ನಿರ್ಮಾಣಗೊಂಡಿದ್ದರೂ, ಇಂದು ಅವು ಹೆಚ್ಚಿನ ಸಂಖ್ಯೆಯಲ್ಲಿ ಉಳಿದಿಲ್ಲ. ಇವರ ಕಾಲದ ಶಾಸನಗಳಲ್ಲಿ ದೇವಾಲಯಗಳಿಗೆ ದಾನ ನೀಡಿರುವ ಉಲ್ಲೇಖಗಳು ಕಾಣಸಿಗುತ್ತವೆ.

ಕ್ರಿ.ಶ. 10ನೇ ಶತಮಾನದವರೆಗೂ ದಕ್ಷಿಣ ಭಾರತದಲ್ಲಿ ಪ್ರಾಮುಖ್ಯತೆಯನ್ನು ಪಡೆದ ಈ ಧರ್ಮವು 10ನೆಯ ಶತಮಾನದ ನಂತರ ಆಂತರಿಕ ದೌರ್ಬಲ್ಯ ಮತ್ತು ಬಾಹ್ಯ ಆಘಾತಗಳಿಂದಾಗಿ ಕುಸಿಯುತ್ತ ನಡೆದರೂ ಕಲ್ಯಾಣ ಚಾಲುಕ್ಯರ ಸಾಮಂತರಾದ ಸವದತ್ತಿಯ ರಟ್ಟರು, ಹೊಯ್ಸಳರು, ಕೋಲ್ಹಾಪುರದ ನಿಂಬಸಾಮಂತರ ಆಶ್ರಯದಲ್ಲಿ ಕೆಲಕಾಲಬಾಳಿತು.

ಶೈವಧರ್ಮ:

ಭಾರತದಲ್ಲಿ ಶೈವಧರ್ಮ ಅಸ್ತಿತ್ವವನ್ನು ಬಹು ಪ್ರಾಚೀನ ಕಾಲದಿಂದಲೂ ಕಾಣಬಹುದು. ಶಿವನ ಆರಾಧನೆಯ ಉಲ್ಲೇಖ ವೇದಗಳಿಗಿಂತಲೂ ಹಿಂದೆ ಕಾಣಬಹುದು. ಕರ್ನಾಟಕದಲ್ಲಿ ಶೈವ ಧರ್ಮದ ಇತಿಹಾಸ ಶಾತವಾಹನರ ನಂತರ ಆಡಳಿತಕ್ಕೆ ಬಂದ ಬ್ರಾಹ್ಮಣ ದೊರೆಗಳಾದ ಕದಂಬರ ಕಾಲದಲ್ಲಿ ತಿಳಿದುಬರುತ್ತದೆ. ನಂತರ ಅಧಿಕಾರಕ್ಕೆ ಬಂದ ಬಾದಾಮಿ ಚಾಲುಕ್ಯರ ಕಾಲದಲ್ಲಿ ಇದು ಪ್ರಾಮುಖ್ಯತೆ ಹಾಗೂ ರಾಜಾಶ್ರಯವನ್ನು ಪಡೆಯಿತೆಂಬುದು ಅವರ ಕಾಲದ ದೇವಾಲಯ ಶಾಸನ ಹಾಗೂ ಕ್ರಿ.ಶ ಏಳನೆಯ ಶತಮಾನದಲ್ಲಿ ಭಾರತಕ್ಕೆ ಭೇಟಿ ನೀಡಿದ ಚೀನಾ ಪ್ರವಾಸಿ ಹೂ–ಯೆನ್ ತ್ಸಾಂಗನ ಬರವಣಿಗೆಗಳಿಂದ ತಿಳಿದುಬರುತ್ತದೆ. ಇಲ್ಲಿಯ ದೇವಾಲಯಗಳಲ್ಲಿ ಮುಕ್ಕಾಲುಪಾಲು ಶೈವದೇವಾಲಯಗಳೇ ಆಗಿವೆ. ಈ ಶಾಖೆಯು ನಾಡಿನ ಉದ್ದಗಲಗಳಲ್ಲಿ ಹರಡಿಕೊಂಡಿತ್ತು.

ಕರ್ನಾಟಕದಲ್ಲಿ ಬೆಳೆದು ಬಂದ ಶೈವ ಧರ್ಮದಲ್ಲಿ ಕಾಪಾಲಿಕರ ಸಂಖ್ಯೆ ಇಲ್ಲವೆನ್ನುವಷ್ಟು ಕಡಿಮೆ. ಪಾಶುಪತ ಕಾಳಾಮುಖರು ಸಾಕಷ್ಟು ಪ್ರಮುಖ ಹಾಗೂ ವೀರಶೈವರು ಅತ್ಯಂತ ಪ್ರಭಾವಿಪಾತ್ರವಹಿಸಿರುವುದು ಸ್ಪಷ್ಟವಾಗುತ್ತದೆ.

ಕಲ್ಯಾಣಿ ಚಾಲುಕ್ಯರ ಕಾಲಘಟ್ಟದಲ್ಲಿ ಅನೇಕ ಶೈವ ಧರ್ಮದ ದೇವಾಲಯಗಳನ್ನು ನಿರ್ಮಿಸಿದ್ದಲ್ಲದೇ ದಾನದತ್ತಿಗಳನ್ನು ಬಿಟ್ಟಿರುವುದು ಕಾಣಬಹುದು. ಕಲ್ಯಾಣ ಚಾಲುಕ್ಯರ ಕಾಲಘಟ್ಟದಲ್ಲಿ ಧಾರ್ಮಿಕ ಸಮರಸ ಮತ್ತು ಸಹಿಷ್ಣುತಾಭಾವವನ್ನು ಹೊಂದಿದವರಾಗಿದ್ದರಿಂದ ಅವರ ಆಳ್ವಿಕೆಯಲ್ಲಿ ಶೈವಧರ್ಮ ತನ್ನ ಪರಾಕಷ್ಟತೆಯನ್ನು ಮುಟ್ಟಿತೆನ್ನಬಹುದು. ಶಿವನು ಅತ್ಯಂತ ಶ್ರೇಷ್ಠನಾದ ದೇವರೆಂದು ತಿಳಿಯಲಾಗಿತ್ತು. ಮುದನೂರಿನ ದೇವರ ದಾಸಿಮಯ್ಯನು ಕ್ರಿ.ಶ 980–1040ರ ಇಮ್ಮಡಿ ಜಯಸಿಂಹನನ್ನು ಶೈವಧರ್ಮಕ್ಕೆ ಮತಾಂತರಗೊಳಿಸಿದನೆಂದು ದೇವರದಾಸಿಮಯ್ಯನ ಪುರಾಣದಿಂದ ತಿಳಿದು ಬರುತ್ತದೆ. ಇಮ್ಮಡಿ ಜಯಸಿಂಹನ ಪತ್ನಿ ಸಗ್ಗಲದೇವಿ ದೇವರದಾಸಿಮಯ್ಯನ ಪರಮಭಕ್ತತೆ. ಒಂದನೆಯ ಸೋಮೇಶ್ವರನು ಮೊದಲಿಗೆ

ಜೈನನಾಗಿದ್ದು, ಅನಂತರ ಶೈವಧರ್ಮವನ್ನು ಸ್ವೀಕರಿಸಿದನೆಂದು ಹೇಳಲಾಗುತ್ತದೆ.

ಇಷ್ಟಲ್ಲದೇ ಒಬ್ಬನೇ ವ್ಯಕ್ತಿ ವಿಭಿನ್ನ ಧರ್ಮಪರಂಪರೆಗಳನ್ನು ಪಾಲಿಸುತ್ತಿದ್ದ ಉದಾಹರಣೆಗಳಿಗೆ ಕೊರತೆಯಿಲ್ಲ. ಜಯಸಿಂಹನ ಕ್ರಿ.ಶ 1022ರ ಶಾಸನ (ಬೇಲೂರು)ದಲ್ಲಿ ದಾನಕರ್ತೆ ಅಕ್ಕಾದೇವಿ ಜೀನ, ಬುದ್ಧ, ಆನಂತ, ವಿಷ್ಣು, ರುದ್ರರೆಂಬ ನಾನಾದೇವರುಗಳಿಗೆ ಸಂಬಂಧಿಸಿದ ಧರ್ಮಗಳ ವಿಧಿನಿಯಮಗಳನ್ನು ಪಾಲಿಸುತ್ತಿದ್ದಳೆಂದು ತಿಳಿಸಲಾಗಿದೆ. ಅವಳು ಬ್ರಹ್ಮ, ವಿಷ್ಣು, ಮಹೇಶ್ವರರನ್ನೊಳಗೊಂಡ ತ್ರೈಪುರುಷದೇವಾಲಯವನ್ನು ನಿರ್ಮಿಸಿದಳು.

ಕ್ರಿ.ಶ 11ನೇ ಶತಮಾನದ ಹಿಲಾಲಪೂರ ಶಾಸನದಲ್ಲಿ ಮನ್ನೆದಡಿಯ 1000ರ ನೂರುಂಬಾಡದ ಭಾಗವಾಗಿ ಘಟ್ಟ 24 ಇತ್ತೆಂದು ಹೇಳಿದೆ. ಈ ಶಾಸನದಲ್ಲಿ ಬಸವೇಶ್ವರ ದೇವರ ಉಲ್ಲೇಖವು ಸಹ ಇದೆ.[197]

ರಾಮಾನುಜನು ಕರ್ನಾಟಕಕ್ಕೆ ಬಂದಿದ್ದು ನೀಲಕಂಠ ಶಾಸ್ತ್ರಿಗಳ ಪ್ರಕಾರ ಕ್ರಿ.ಶ 1098 ರಿಂದ ಕ್ರಿ.ಶ 1122ರ ವರೆಗೆ, ಅಂದರೆ 24 ವರ್ಷಗಳ ಕಾಲ, ಆತ ಕರ್ನಾಟಕದಲ್ಲಿದ್ದ, ಶೈವರಾದ ಚೋಳರ ಆಳ್ವಿಕೆಯಲ್ಲಿ ವೈಷ್ಣವ ಪಂಥವನ್ನು ಎತ್ತಿಹಿಡಿಯುತ್ತಿದ್ದ ರಾಮಾನುಜನಿಗೆ ಕಿರುಕುಳ ಹೆಚ್ಚಾದ್ದರಿಂದ ಅವನು ಕರ್ನಾಟಕದಲ್ಲಿ ಆಶ್ರಯ ಪಡೆಯಬೇಕಾಯಿತೆಂಬ ಇತಿಹಾಸಕಾರರ ಸಾಮಾನ್ಯ ನಿಲುವನ್ನು ನೀಲಕಂಠ ಶಾಸ್ತ್ರಿ ಸಮರ್ಥಿಸುವುದಿಲ್ಲ. ರಾಮಾನುಜರು ಕರ್ನಾಟಕದಲ್ಲಿ 124 ಮಠಗಳನ್ನು ಸ್ಥಾಪಿಸಿ ತನ್ನ ಪಂಥದವರನ್ನು ಅಲ್ಲಿ ಪ್ರತಿಷ್ಠಾಪಿಸಿದರು

ವೈಷ್ಣವ ಪಂಥದ ಇನ್ನಿಬ್ಬರು ಪ್ರಮುಖ ತತ್ವಶಾಸ್ತ್ರಜ್ಞರಿದ್ದಾರೆ. ಅವರಿಬ್ಬರೂ ಕರ್ನಾಟಕದವರೇ, ಎಲ್ಲಿಂದಲೋ ಬಂದು ಕರ್ನಾಟಕವನ್ನು ಸೇರಿಕೊಂಡವರಲ್ಲ. ಅವರು ಮಧ್ವ ಮತ್ತು ನಿಂಬಾರ್ಕ. ಮಧ್ವನು ಉಡುಪಿಯ ಬಳಿಯ ಪಾಜಕದವನು. ನಿಂಬಾರ್ಕನು ಬಳ್ಳಾರಿ ಪ್ರದೇಶದವನು. ಇಬ್ಬರು ಶಂಕರ–ರಾಮಾನುಜರಂತೆ ತಮ್ಮ ವೈಷ್ಣವ ಸಿದ್ಧಾಂತಗಳನ್ನು ಮಂಡಿಸಲು ಬ್ರಹ್ಮಸೂತ್ರಗಳಿಗೆ ಭಾಷ್ಯಗಳನ್ನು ಬರೆದಿದ್ದಾರೆ.[198]

ವೈದಿಕ ಧರ್ಮ

ವೇದಕಾಲದಿಂದಲೂ ಈ ನಾಡಿನ ಜನಜೀವನದ ಮೇಲೆ ಪ್ರಭಾವನ್ನು ಬೀರಿದ್ದ ವೈದಿಕ ಧರ್ಮದ ಆಚಾರ–ವಿಚಾರಗಳಿಗೆ ಕಲ್ಯಾಣ ಚಾಲುಕ್ಯರ ಕಾಲದಲ್ಲಿಯೂ ಚಾಲನೆ ದೊರೆಯಿತು. ಬ್ರಾಹ್ಮಣರಿಗೆ ಹೆಚ್ಚಿನ ಪಾವಿತ್ರ್ಯತೆ, ಪುರಸ್ಕಾರ, ಪ್ರೋತ್ಸಾಹಗಳು ಲಭಿಸಿದವು. ಕೇವಲ ಧಾರ್ಮಿಕ ಆಚರಣೆಗಳಲ್ಲದೇ, ರಾಜಕೀಯ ರಂಗದಲ್ಲಿಯೂ, ಸಾಹಿತ್ಯ, ಶಿಕ್ಷಣ ಕ್ಷೇತ್ರಗಳಲ್ಲಿಯೂ ಕಾರ್ಯ ನಿರ್ವಹಿಸುತ್ತಿದ್ದರು. ದಂಡನಾಯಕರಾಗಿ, ಸಂಧಿವಿಗ್ರಹಿಗಳಾಗಿ, ಸರ್ವಾಧಿಕಾರಿಗಳಾಗಿ, ಊರೊಡೆಯುರಾಗಿಯೂ ಸೇವೆಗೈದಿರುವುದಕ್ಕೆ ನಿದರ್ಶನಗಳು ಶಾಸನಗಳಲ್ಲಿವೆ.

ಶೈವ–ಶ್ರೀವೈಷ್ಣವ, ಶೈವ–ಜೈನಧರ್ಮಗಳ ಸಂಘರ್ಷದ ವೇಳೆಯಲ್ಲಿ ಮತ

ಮತಗಳ ತೆಗಳಿಕೆ ಮತ್ತು ಸಹಿಷ್ಣುತೆಗಳ ಉಲ್ಲೇಖಗಳೆರಡೂ ದೊರತಿವೆ. ಜೈನ–ಶೈವರ ನಡುವೆಯೇ ಹೆಚ್ಚು ವಿರಸವಿದ್ದುದ್ದನ್ನು ಸಮಕಾಲೀನ ಶಾಸನಗಳು ಹಾಗೂ ಸಾಹಿತ್ಯ ಕೃತಿಗಳು ತಿಳಿಸುತ್ತವೆ. ಕ್ರಿ.ಶ 1055ರ ಶಾಸನದಲ್ಲಿ "ತೊಲಗದೆ ಜೈನಮಾರ್ಗ್ಗದೊಳ್ ನಿಶ್ಚಳರಪ್ಪುದು ದೇವಪುತ್ರರಂ ಸಲೆನೆಗಳ್ದಿವಿಕೊಗಳಿ ಬರ್ದ್ದಿನ ವೃತ್ತಿಯ ಮಾನ್ಯ ಕಾರರುಂ ತೊಲಗಿಸುವ ಧರ್ಮ್ಮಮಂ ಮರೆದುದೆಯ್ವಕೆ ಕಾಳುಕುರೆಯಿಕ್ಕದವರ್ಪ್ಪೊಲೆಯವರ್ಗ್ಗೆ ವೃತ್ತಿಯಣಮಾಗದು ವೃತ್ತಿಗೆ ಮಾರ್ಕೆ ಭವ್ಯರಂ, ಅಡಗಿನ ಬಸನಿಗರ್ಗ್ಗಂ ಕಳ್ಗುಡಿವವರ್ಗ್ಗಂ ವೃತ್ತಿಲೋಪಮೆಂಬಗೀ ನುಡಿಯಂ ಕಡೆಗಣ್ಣಿಸಿಸದೆ ಮೊದಲಿಂದಂ ಕಿಡಿಪುದವಂ ಸ್ಥಾನಗುರುಗಳುಂ ಪೂರ್ಬ್ಬಿಗರುಂ" ಎಂದು ವಿವರಣಾತ್ಮಕವಾದ ಕೋಗಳಿಯ ಶಾಸನದಲ್ಲಿ ಜೈನಮಾರ್ಗದಲ್ಲಿ ನಿಶ್ಚಲರಾಗಿರಬೇಕಾದದ್ದನ್ನು ತಿಳಿಸುವಾಗ ಶೈವಮತವನ್ನು ತೆಗಳಲಾಗಿದೆ. ಅಂತಹ ತೆಗಳಿಕೆಯ ಸಂದರ್ಭದಲ್ಲೇ ವೃತ್ತಿಯ ಮೇಲೆ ಹಿಡಿತವಿರಿಸಕ್ಕೊಳ್ಳೋಲು ಪ್ರಯತ್ನ ನಡೆದಿದೆ. ಅವರವರ ದುರಭ್ಯಾಸಗಳನ್ನೆ ನೆಪಮಾಡಿಕೊಂಡು ವೃತ್ತಿ ಮೇಲೆ ಅಧಿಕಾರವಿರಿಸಿಕೊಳ್ಳಲು ಪ್ರಯತ್ನಿಸಿದ ಕಾಣರವೂ ಅನ್ಯಧರ್ಮಗಳ ಬೆಳವಣಿಗೆಗೆ ಒಂದು ಕಾರಣವೆನ್ನಬಹುದು. ಕ್ರಿ.ಶ 1094 ಚನ್ನರಾಯಪಟ್ಟಣದ ಶಾಸನದಲ್ಲಿ "ಮಲೆಯದೇ ಶಾಂಖ್ಯಮಟ್ಟಮಿರು ಭೌತಿಕಪೊಂಗಿ ಕಡಂಗಿ ಬಾಗದಿರ್ತ್ತೊಲತೊಲ ಬುದ್ಧ ಬೌದ್ಧ ತಲೆದೊ ವೈಷ್ಣವಡಂಗಡಂಗು ವಾಗ್ಬರದ ಪೊಡರ್ಪ್ಪುವೇಡಗಡ ಚಾರ್ಬ್ಬಕ ಚಾರ್ವಕ ನಿಮ್ಮ ದರ್ಪ್ಪಮಂ" ಎಂಬಲ್ಲಿ ಅನ್ಯಮತ ದೂಷಣೆಯು ಸ್ಪಷ್ಟವಾಗಿದೆ. ಅಬ್ಬಲೂರಿನ ಏಕಾಂತದ ರಾಮಯ್ಯನ ಪ್ರಸ್ತಾಪವಿರುವ ಶಾಸನವಂತೂ ಜೈನ ಮತ್ತು ಶೈವರ ನಡುವಿನ ಹಿಂಸಾಪ್ರಚೋದಕ ಹೋರಾಟವನ್ನೇ ದಾಖಲು ಮಾಡಿದೆ. "ಆಳಾಪಂ ಬೇಡ ನಯ್ಯಾಯಿಕ ನಿಜಮತಮಂ ನಚ್ಚದಿರ್ಸ್ಸಾಂಖ್ಯ ಮಾಣ್ವಾಚಾಳತ್ವಂ ಸಲ್ಲ ಮೀಮಾಂಸಕ ತೊಡರೆದೆಲೆ ಬೌದ್ಧ ಪೊಪೋಗು" ಎಂದು ಶಾಬನೂರಿನ ಕ್ರಿ.ಶ 11285ರ ಶಾಸನವು ಶ್ರೀಪಾದ ತ್ರೈವಿದ್ಯದೇವ ಎಂಬ ಜೈನಗುರುವನ್ನು ಹೊಗಳುವ ಸಂದರ್ಭದಲ್ಲಿ ಅನ್ಯಮತಗಳನ್ನು ತೆಗಳಿದೆ.

ಚೋಳರು ಶೈವಧರ್ಮಿಯರಾಗಿದ್ದು, ಇವರ ದಾಳಿಗಳು ಹಿಂಸಾಕೃತ್ಯಗಳು ಜೈನ ಧರ್ಮವು ಸಂಕಷ್ಟಕ್ಕೆ ಸಿಲುಕಲು ಮತ್ತೊಂದು ಕಾರಣವಾಯಿತು. ಚೋಳನೃಪ ರಾಜರಾಜನ ಉತ್ತರಾಧಿಕಾರಿ ಎರಡನೆಯ ರಾಜೇಂದ್ರ ಅನೇಕ ಜೈನ ಮಂದಿರಗಳಿಗೆ ಬೆಂಕಿಯಿಟ್ಟು ನಾಶಗೈದನು. ಒಂದನೆಯ ಸೋಮೇಶ್ವರನ ಕಾಲದಲ್ಲಿ ನಡೆದ ಚೋಳರ ಅವ್ಯಾಹತ ದಾಳಿಗಳು ಜೈನರ ಪ್ರಾಣಹಾನಿ, ಮಾನಹಾನಿ ಹಾಗೂ ಜೈನಮಂದಿರಗಳ ವಿನಾಶಕ್ಕೆ ಕಾರಣವಾದವು. ಅನೇಕ ಬಸದಿಗಳು, ಶೈವ ಮತ್ತು ವೈಷ್ಣವ ದೇವಾಲಯಗಳಾಗಿ ರೂಪ ಪಡೆದವು. ಇದು ನಿಜಕ್ಕೂ ಶೋಚನಿಯ.

ಹತ್ತನೆಯ ಶತಮಾನದ ಹೊತ್ತಿಗೆ ಕಾಶ್ಮೀರದಿಂದ ಬಂದ ಶೈವರು ತಮ್ಮ ಅಪಾರಪಾಂಡಿತ್ಯದಿಂದ ಜನಮನವನ್ನು ಅರಸರ ಚಿತ್ತವನ್ನು ತಮ್ಮತ್ತ ಸೆಳೆದುಕೊಳ್ಳಲು ಮುಂದಾದರು. ತಮ್ಮ ತಮ್ಮ ಪ್ರಾಶಸ್ತ್ಯಕ್ಕಾಗಿ ಮತ–ಮತಗಳಲ್ಲಿ ನಡೆದ ಮೇಲಾಟದಲ್ಲಿ

ಶೈವ ಮತ್ತು ವೈದಿಕ ಮತಗಳದೇ ಮೇಲುಗೈಯಾಗಿತ್ತು. ಅನ್ಯಧರ್ಮಿಯರು ಶೈವ ಜೈನ ಬಸದಿಗಳನ್ನು ಒಡೆದು ಶಿವಲಿಂಗಗಳನ್ನು ಪ್ರಾತಿಷ್ಠಾಪಿಸಿದ ಬಗೆಗೆ ನಿದರ್ಶನಗಳಿವೆ. ಅಂಥವರನ್ನು 'ಜೈನ ಮೃತ ಬೇಂಟೆಕಾರ', ' ಜೈನ ಕುಠಾರ' ' ಜಿನಸಮಯವನದಯಹನ ದಾವಾನಳ'ರು ಎಂದು ಪರಿಪರಿಯಾಗಿ ಶಾಸನಗಳಲ್ಲಿ ಹೇಳಲಾಗಿದೆ.

ಶಾಸನಗಳಂತೆಯೇ ಸಮಕಾಲೀನ ಸಾಹಿತ್ಯ ಕೃತಿಗಳು ಕೆಲವು ಅನ್ಯಮತ ದೂಷಣೆ ಮಾಡಿವೆ. ಅವುಗಳಲ್ಲಿ ಬಹುಮುಖ್ಯವಾದುದು ಬ್ರಹ್ಮಶಿವನ 'ಸಮಯ ಪರೀಕ್ಷೆ' ಮತ್ತು ನಯಸೇನ 'ಧರ್ಮಾಮೃತ'. ಎರಡೂ ಕೃತಿಗಳು ಜೈನ ಧರ್ಮವನ್ನು ಹೊಗಳಿ ಶೈವ ಧರ್ಮವನ್ನು ತೆಗಳಲೆಂದೇ ರಚಿತವಾದಂತಿವೆ.

ಒಂದೆಸೆಯೊಳ್ ಜಿನಬಿಂಬವ
ನೊಂದೆಸೆಯೊಳ್ ಲಿಂಗ ವಿಷ್ಣುಬಿಂಬ ಮನವನಂ॥
ತೊದೆಡೆಯೊಳ್ಪಜಿಸುವಾ
ಸಂದೇಹಿಗೆ ಜೈನನೆಂಬ ಪೆಸರೆಂತೆಗುಂ॥
ಹೆಂಡತಿ ಮಹೇಶ್ವರಿ ಗಡ
ಗಂಡಂ ಜೈನಂಗಡವನ ಮಕ್ಕಳ್ಗಡಮಾ
ರ್ತಂಡಂತೆ ಭಕ್ತರೆನಿಪಾ
ಭಂಡಂಗುತ್ತಮದ ಜೈನವೆಸರೆಂತೆಸೆಗುಂ ॥
ಹೆಂಡಂತಿವೆರಸಿದ ದೆಯ್ವಂ
ಹೆಂಡಂತಿಪೂಜಿಪಡೆ ಪೆಂಡರಲ್ಲದ ದೆಯ್ವಂ॥
ಗಂಡಂಗಾಪ್ತಂ ಗೊರವ
ತಂಡಕ್ಕಂ ಬೇರೆ ಮೂರ್ತಿ ಮಾಹೇಶ್ವರರೊಳ್॥
ದಯೇ ಮೂಲಂ ಧರ್ಮ್ಮಕ್ಕಂ
ದಯೆ ಜೈನದೊಳಲ್ಲದಿಲ್ಲ ಮುಗ್ಧಜನಂಗ ॥
ಳ್ದಯೆ ತಮಗುಂಟ್ರೆಂಗರ್ನ್ನಿ
ರ್ದ್ದಯರಪ್ಪುನರೆ ಯುತಿರ್ದ್ದುಮೋಹಿಸುತ್ತಿರ್ಪ್ಪರ್॥

ಮೇಲೆ ಉಲ್ಲೆಖಿಸಿದ ಬ್ರಹ್ಮಶಿವನ 'ಸಮಯ ಪರೀಕ್ಷೆಯ' ಕೆಲವು ಪದ್ಯಗಳು ಅವನ ಸಮಕಾಲಿನ ಧಾರ್ಮಿಕ ಪರಿಸ್ಥಿತಿಯ ಪರಿಚಯ ಮಾಡುತ್ತವೆ.

ಜೈನ ಮತ್ತು ಶೈವ ಮತಗಳು ಪರಸ್ಪರ ತೆಗಳಿಕೆಯಲ್ಲಿ ನಿರತವಾಗಿದ್ದ ಸಮಯದಲ್ಲೇ ಅನ್ಯಮತ ಸಹಿಷ್ಣುತೆಯ ಬಗೆಗೆ ಮತೀಯ ಹಾರ್ದಿಕ ಸಂಬಂಧಗಳ ಬಗೆಗೆ ಶಾಸನೊಲ್ಲೇಖಗಳಿವೆ. ಆದರೆ ಇವು ಮಹಾಜನಗಳ ವರ್ಣನೆ ಅಥವಾ ದೇವತಾಸ್ತುತಿಗಳ ಸಂದರ್ಭದಲ್ಲಿ ಮಾತ್ರ ವ್ಯಕ್ತವಾಗಿದೆ. ಉದಾಹರಣೆಗಾಗಿ,

ಅನೇಕ ತರ್ಕ ವ್ಯಾಕರಣ ಪುರಾಣ ಕಾವ್ಯ ನಾಟಕ
ವಾತ್ಸಯನಾದಿ ವಿದ್ಯಾ ಸಾರಾಸಾರಾ ವಿಚಾರ ಚಾರು
ಚತುರ ಚತರುಆನನರುಂ ಸಕಲ ದಗನ್ತರ
ವೈಶೇಷಿಕ ಲೋಕಾಯತ ಶಾಖ್ಯ ಬೌದ್ಧರುಹತ
ಮೀಮಾಂಸ ಸರೋವರ ರಾಜಹಂಸರುಂ"

ಎಂದು ಪರಿಯ ಕೆರೆಯೂರಿನ ಮಹಾಜನರನ್ನು ಬಾಳಂಬಿಡ್‌ನ ಶಾಸನ ಹೊಗಳಿದೆ.

ಸ್ವಮತಾಭಿಮಾನದ ಸಂದರ್ಭದಲ್ಲಿ ಅನ್ಯಮತದ ತೆಗಳಿಕೆ, ಮತೀಯ ಸೌಹಾರ್ದತೆ ಎರಡಕ್ಕೂ ಶಾಸನೊಲ್ಲೇಖಗಳು ದೊರೆಯುತ್ತವೆ. ಪೂರಕವಾಗಿ ಸಮಕಾಲಿನ ಸಾಹಿತ್ಯವೂ ನೆರವಾಗುತ್ತದೆ. ಮತೀಯ ವಿಡಂಬನ, ತೆಗಳಿಕೆ ಸೌಹಾರ್ದತೆ,. ಸಹಿಷ್ಣುತೆ ಎಲ್ಲಕ್ಕೂ ದೇವಾಲಯಗಳೇ ಮೂಲಸ್ಥಾನವಾಗಿದ್ದುದ್ದು ಸ್ಪಷ್ಟವಾಗಿದೆ. ಇದಕ್ಕೆ ಅಬ್ಬಲೂರಿನ ಶಾಸನೋಲ್ಲೇಖವು ಬಹಳ ಮಹತ್ವದ ಉದಾಹರಣೆಯಾಗಿದೆ.[199]

ಅಧ್ಯಾಯ 8

ಕಲೆ ಮತ್ತು ವಾಸ್ತುಶಿಲ್ಪ

ದೇವಾಲಯಗಳು, ದೇವಾಲಯ ಶಿಲ್ಪಕಲೆಯು ಸಮಾಜದ ನಾಡಿಯನ್ನು ಹಿಡಿದು ನಡೆಯಿಸುವ ಸಾಂಸ್ಕೃತಿಕ ಕೇಂದ್ರಗಳಾಗಿ ಕಂಡು ಬರುತ್ತವೆ. ಹಳೆಯ ದೇವಾಲಯಗಳ ಪ್ರಾಮುಖ್ಯತೆ ಕಡಿಮೆಯಾಗಿ ಹೊಸ ಪಿಳಿಗೆಯ ಹೋಸ ಮಾದರಿಯ ದೇವಾಲಯಗಳು ಇಂದು ನಿರ್ಮಾಣಗೊಳ್ಳುತ್ತಲೇ ಇವೆ. ಕಲ್ಯಾಣ ಚಾಲುಕ್ಯರ ಕಾಲದ ದೇವಾಲಯಗಳ ಪ್ರಾಮುಖ್ಯತೆ ಇಂದಿಗೂ ಕಡಿಮೆಯಾಗದೇ ಅವು ಇವತ್ತಿಗೂ ಸಾಕಷ್ಟು ಸಾಂಸ್ಕೃತಿಕ ಮಹತ್ವ ಪಡೆದು ಮುನ್ನಡೆದುಕೊಂಡು ಬಂದಿವೆ.

ಹಂತಹಂತವಾಗಿ ವಿಕಸನಗೊಂಡು ಬೆಳೆದು ಬಂದ ದೇವಾಲಯಗಳು ಕಲ್ಯಾಣ ಚಾಲುಕ್ಯರ ಆಳ್ವಿಕೆಯಲ್ಲಿ ಉತ್ತುಂಗ ಶಿಖರ ಮುಟ್ಟಿ ನಾಡಿನ ಜನರ ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಯ ಕೇಂದ್ರಗಳಾಗಿ ಪ್ರಾಮುಖ್ಯತೆಗಳಿಸಿಕೊಂಡವು. ಕಲ್ಯಾಣ ಚಾಲುಕ್ಯರ ಶಾಸನಗಳು ದೇವಾಲಯ ನಿರ್ಮಾಣ, ನಿರ್ವಹಣೆಗಳಿಗೆ ಹಲವು ಪ್ರೇರಣೆ ಪ್ರಭಾವ ಬಿರಿದ್ದನು ಹೇಳುತ್ತವೆ. ಅಂತವುಗಳಲ್ಲಿ ಧರ್ಮ ಪ್ರಸಂಗ, ಪರೋಕ್ಷ ವಿನಯ, ಸಂಪತ್ತಿನ ವಿನಿಯೋಗ ಹಾಗೂ ವಿಶೇಷ ಸಂದರ್ಭ ಅಂದರೆ ಅರಸರು ಯುದ್ಧದಲ್ಲಿ ವಿಜಯಿಯಾದರೆ, ಬಹಳ ದಿವಸಕ್ಕೆ ಗಂಡು ಮಕ್ಕಳನ್ನು ಪಡೆದರೆ, ನಾಡಿನ ಜನತೆಯ ಹಿತಕ್ಕೆ ಇತ್ಯಾದಿ ಪ್ರಭಾವದಿಂದ ದೇವಾಲಯ, ಮೂರ್ತಿಶಿಲ್ಪ ಪ್ರತಿಷ್ಠೆ, ಕೆರೆ–ಕಟ್ಟೆ, ಸತ್ರ, ಶಾಲೆ, ಅರವಟ್ಟಿಗೆ ಇತ್ಯಾದಿಗಳನ್ನು ಕಟ್ಟಲು, ಜೀಣೋದ್ಧಾರಗೊಳಿಸಲು ದಾನ ನೀಡುವ ಸಂಪ್ರದಾಯ ಬೆಳೆದು ಬಂದಿತ್ತು.

ಕಲ್ಯಾಣ ಚಾಲುಕ್ಯರ ಕಾಲದಲ್ಲಿ ಶೈವ ದೇವಾಲಯಗಳು, ವೈಷ್ಣವ ದೇವಾಲಯಗಳು, ಜೈನ ಬಸದಿಗಳು ಸೇರಿದಂತೆ ಅನೇಕ ದೇವಾಲಯಗಳು ನಿರ್ಮಾಣವಾಗಿವೆ.[200]

ಕಲ್ಯಾಣ ಚಾಲುಕ್ಯರ ತಮ್ಮ ಪೂರ್ವಿಕರಾದ ಬಾದಾಮಿ ಚಾಲುಕ್ಯರ ವಾಸ್ತುಶೈಲಿ ಅನುಸರಿಸಿ ಅಸಂಖ್ಯಾತ ದೇವಾಲಯಗಳನ್ನು ಬಸದಿಗಳನ್ನು ನಿರ್ಮಿಸಿ ತಮ್ಮ ಕಲಾ ಶ್ರೀಮಂತಿಕೆಯನ್ನು ಮೆರೆದಿದ್ದಾರೆ. ರಾಜರನ್ನು ಅನುಸರಸಿ ರಾಣಿಯರು,

ದಂಡನಾಯಕರು, ವರ್ತಕರು, ಸಂಘ ಸಂಸ್ಥೆಗಳು ದೇವಾಲಯಗಳ ನಿರ್ಮಾಣದಲ್ಲಿ ತೊಡಗಿದರು. ಕಲ್ಯಾಣ ಚಾಲುಕ್ಯ ಸಾಮ್ರಾಜ್ಯದಲ್ಲಿ ಶೈವ ಧರ್ಮ ಪ್ರಾಬಲ್ಯ ಗಳಿಸಿದ್ದರಿಂದ ನೂರಾರು ಶೈವ ದೇವಾಲಯಗಳು ನಿರ್ಮಾಣವಾದವು. ಪ್ರಾರಂಭ ದೇವಾಲಯಗಳು ರಾಷ್ಟ್ರಕೂಟ ವಾಸ್ತು ಲಕ್ಷಣಗಳನ್ನು ಅನಂತರವು ಚಾಲುಕ್ಯ ಶೈಲಿಯ ಲಕ್ಷಣಗಳನ್ನು ರೂಡಿಸಿಕೊಂಡವು. ಬಾದಾಮಿ ಚಾಲುಕ್ಯರ ಕಲಾಶೈಲಿ ಈಗ ಅಭಿವೃದ್ಧಿಗೊಂಡಿತು. ಚಾಲುಕ್ಯ ದೇವಾಲಯಗಳ ಮುಖ್ಯಲಕ್ಷಣಗಳೆಂದರೆ, 1. ಪ್ರವೇಶದ್ವಾರದ ಬಾಗಿಲುವಾಡವು ವಿಫುಲವಾದ ಅಲಂಕಾರದ ಕೆತ್ತನೆಗಳಿಂದ ಕೂಡಿರುವುದು. 2. ಗರ್ಭಗುಡಿ, ಅಂತರಾಳ, ನವರಂಗ, ಕೈಸಾಲೆಗಳನ್ನು ಹೊಂದಿರುವುದು, ಚಚ್ಚೌಕಾರದ ಕಂಬಳು, ತಳ ವಿನ್ಯಾಸ, ಗರ್ಭಗೃಹದ ಮೇಲೆ 30–40 ಅಡಿ ಎತ್ತರದ ಶಿಖರಗಳು. 3. ಕೆಲವು ದೇವಾಲಯಗಳನ್ನು ನಕ್ಷತ್ರಾಕಾರದ ತಳ ವಿನ್ಯಾಸದ ಮೇಲೆ ನಿರ್ಮಿಸಿದರು. ಆದರೆ ಜಗತಿ ಇಲ್ಲ. ಕಲೆಗೆ ನೀಲಿ ಬಣ್ಣದ ಬಳಪದ ಕಲ್ಲನ್ನು ಬಳಸಿರುವುದು. 4. ಏಕಕೂಟ, ದ್ವಿಕೂಟ, ತ್ರಿಕೂಟಾಚಲ ದೇವಾಲಯಗಳ ನಿರ್ಮಾಣ, ಆದರೆ ತ್ರಿಕುಟಾಚಲ ದೇವಾಲಯಗಳೇ ಹೆಚ್ಚು. 5. ಆಯತಾಕಾರದ ದೇವಾಲಯಗಳ ನಿರ್ಮಾಣ, 6. ಗರ್ಭಗುಡಿಯ ಸುತ್ತ ಪ್ರದಕ್ಷಿಣಪಥ ಇಲ್ಲದಿರುವುದು ಅಥವಾ ಅದು ಒಳಗಡೆ ಇರುವುದು. 7. ಪ್ರವೇಶದ್ವಾರವು ಮುಂದಕ್ಕೆ ಬದಲ ಪಕ್ಕಕ್ಕೆ ಇಟ್ಟಿರುವುದು. ಅದನ್ನು ಆಲಂಕಾರಗೊಳಿಸಿರುವುದು, 8. ನಯವಾದ ತಿರುಗು ಕಂಬಗಳ ಕೆತ್ತನೆ ಮತ್ತು ಜಾಲಂಧ್ರಗಳನ್ನು ಬಿಡಿಸಿರುವುದು, 9. ದೇವಾಲಯದ ಗೋಡೆಗಳನ್ನು ವಿಫುಲವಾದ ಕೆತ್ತನೆಗಳಿಂದ ಅಲಂಕರಿಸಿರುವುದು, ಇತ್ಯಾದಿ.[201]

ಬೀದರ ಜಿಲ್ಲೆಯ ಭಾಲ್ಕಿಯಲ್ಲಿ ಹತ್ತನೆಯ ಶತಮಾನದಲ್ಲಿ ಮೊದಲ ಬಾರಿಗೆ ದೇವಾಲಯುವೊಂದನ್ನು ಕಟ್ಟಲಾಯಿತು. ಅದಕ್ಕಿಂತ ಹಿಂದೆ ಅಲ್ಲಿ ದೇವಾಲಯಗಳಿದ್ದವೆಂದು ಹೇಳಲು ಸೂಚನೆಗಳಿಲ್ಲ. ಆದರೆ ಕ್ರಿ.ಶ 1000–1200ರ ನಡುವಲ್ಲಿ ಭಾಲ್ಕಿ ತಾಲೂಕಿನಲ್ಲಿ 12 ದೇವಾಲಯಗಳು ಮೇಲೆದ್ದವು. ಬಸವಕಲ್ಯಾಣ ತಾಲೂಕಿನಲ್ಲಿ 33 ದೇವಾಲಯಗಳು, ಹುಮನಾಬಾದ ತಾಲೂಕಿನಲ್ಲಿ 4 ದೇವಾಲಯಗಳು, ಬೀದರ ತಾಲೂಕಿನಲ್ಲಿ 6 ದೇವಾಲಯಗಳು ನಿರ್ಮಾಣಗೊಂಡವು.

1. ಶಿವಾ (ಈಶ್ವರ) ದೇವಾಲಯ ಜಲಸಂಗಿ:

ಹುಮನಾಬಾದ ಪಟ್ಟಣದಿಂದ ಉತ್ತರದ ಕಡೆಗೆ ಸುಮಾರು 8 ಕಿ.ಮೀ ಅಂತರದಲ್ಲಿರುವ ಪ್ರಾಚೀನ ಗ್ರಾಮವೇ ಜಲಸಂಗಿ. ಈ ಗ್ರಾಮದಲ್ಲಿ 11ನೇ ಶತಮಾನದಲ್ಲಿ ಕಲ್ಯಾಣದ ಚಾಲುಕ್ಯ ಅರಸ 6ನೇ ವಿಕ್ರಮಾದಿತ್ಯನು ಪ್ರಸಿದ್ಧ ಕಲ್ಮೇಶ್ವರ ದೇವಾಲಯವನ್ನು ನಿರ್ಮಿಸಿದನು. ನಕ್ಷತ್ರ ಆಕಾರವಿರುವ ದೇವಾಲಯದ ಹೊರಭಾಗದಲ್ಲಿ ಸುಮಾರು 30 ಆಕರ್ಷಕ ಮದನಿಕಾ ಶಿಲ್ಪಗಳಿವೆ. ಪ್ರವೇಶದ್ವಾರದ ಬಾಗಿಲುವಾಡವು ವಿಫುಲವಾದ ಅಲಂಕಾರದ ಕೆತ್ತನೆಗಳಿಂದ ಕೂಡಿದೆ. ಗರ್ಭಗುಡಿ, ಅಂತರಾಳ, ನವರಂಗ, ಕೈಸಾಲೆಗಳನ್ನು ಹೊಂದಿರುವುದು, ಚಚ್ಚೌಕಾರದ ಕಂಬಳು,

ತಳ ವಿನ್ಯಾಸ, ಗರ್ಭಗೃಹದ ಮೇಲೆ 30–40 ಅಡಿ ಎತ್ತರದ ಶಿಖರಗಳು. ನಯವಾದ ತಿರುಗು ಕಂಬಗಳ ಕೆತ್ತನೆ ಮತ್ತು ಜಾಲಂಧ್ರಗಳನ್ನು ಬಿಡಿಸಿರುವುದು, ದೇವಾಲಯದ ಗೋಡೆಗಳನ್ನು ವಿಪುಲವಾದ ಕೆತ್ತನೆಗಳಿಂದ ಅಲಂಕರಿಸಿರುವುದು,.ಉದಾಃ ಮಗುವಿಗೆ ಎತ್ತುಕೊಂಡಿರುವ ಮಹಿಳೆಯ ಶಿಲೆ, ನಾಟ್ಯ ಗಣಪತಿಯ ನಟನಾ ಭಂಗಿ ಕಲಾ ಪ್ರೀಯರನ್ನು ಆಕರ್ಷಿಸುತ್ತದೆ. ಸುಂದರ ಭಂಗಿಯಲ್ಲಿರುವ ವೀರಭದ್ರ, ದಕ್ಷಿಣಾಮೂರ್ತಿ, ದುರ್ಗಾ, ವರಾಹ, ಅವತಾರ, ದರ್ಪಣ ಸುಂದರಿ, ನರಸಿಂಹ ಅವತಾರದ ಶಿಲ್ಪಗಳು, ಕಾವ್ಯಕನ್ನಿಕೆ, ಶಾಸನ ಬರೆಯುವ ಸುಂದರಿ, ಗಂಧರ್ವ ಕನ್ನೆ ಮುಂತಾದವು ಗಮನಾರ್ಹವಾಗಿವೆ. ಆರನೆ ವಿಕ್ರಮಾದಿತ್ಯನ ಪರಾಕ್ರಮವನ್ನು ಹೊಗಳಿ ಶಾಸನವನ್ನು ಬರೆಯುವ ಶಾಸನ ಸುಂದರಿಯ ಶಿಲ್ಪವು ಆಕರ್ಷಕವಾಗಿದೆ. ಶಾಸನದ ಅರ್ಥ ಹೀಗೆದೆ. ಚಾಲುಕ್ಯ ವಂಶದ ಆರನೇ ವಿಕ್ರಮಾದಿತ್ಯನಿಗೆ ಸಪ್ತದ್ವೀಪಗಳಲ್ಲಿಯೂ ಶ್ರೇಷ್ಠನಾದ ದೊರೆ ಎಂದು ಬಣ್ಣಿಸಿದೆ.

ಈ ದೇವಾಲಯದಲ್ಲಿ ಹಲವಾರು ಆಭರಣಗಳನ್ನು ಧರಿಸಿದ ಸ್ತ್ರೀ ಕಲಾಕೃತಿಗಳ ಶಿಲ್ಪ ಆಕರ್ಷಕವಾಗಿದೆ. ಈ ದೇವಾಲಯವು ಜಲಸಂಗಿ ಗ್ರಾಮದ ಕೆರೆಯ ದಡದ ಮೇಲಿದ್ದು, ಕೆರೆಯ ಹತ್ತಿರ ಹೋಗಿ ಈ ದೇವಾಲಯವನ್ನು ನೋಡಿದ್ದಾಗ ಮನಸ್ಸು ಪುಳಕಿತವಾಗುತ್ತದೆ. ಅಂತಹ ಆಕರ್ಷಕ ರೀತಿಯಲ್ಲಿ ಈ ದೇವಾಲಯವನ್ನು ಕಟ್ಟಲಾಗಿದೆ.

2. ಶಿವಾ ದೇವಾಲಯ ನಾರಾಯಣಪೂರ:

ಬಸವಕಲ್ಯಾಣದಿಂದ ಪೊರ್ವಕ್ಕೆ ಸುಮಾರು 5 ಕಿ.ಮೀ ಅಂತರದಲ್ಲಿರುವುದೇ ನಾರಾಯಣಪುರ ಗ್ರಾಮವಿದೆ. ಈ ಗ್ರಾಮವು ಐತಿಹಾಸಿಕವಾಗಿ ಪ್ರಸಿದ್ಧವಾಗಿದೆ. ಈ ಗ್ರಾಮದಲ್ಲಿ ಶಿವಾ ದೇವಾಲಯವಿದ್ದು, ಇದು ನೋಡಲು ಬಹಳ ಸುಂದರವಾಗಿದೆ. ಈ ದೇವಾಲಯವದ ಶಿಲಾ ಬಾಲಕಿಯರ ಶಿಲ್ಪಗಳು, ಪೌರಾಣಿಕ ಪುರುಷರ ಶಿಲ್ಪಗಳು ಮೂರು ಭಾಗಗಳಲ್ಲಿ ಕಂಡು ಬರುತ್ತದೆ. ಮುಂಭಾಗದಲ್ಲಿ ದೇವಸ್ಥಾನಕ್ಕೆ ಹೋಗುವ ಮುಖ್ಯದ್ವಾರವಿದ್ದು, ಒಳಗಡೆ ಹೋದಾಗ ಅನೇಕ ಶಿಲ್ಪಗಳನ್ನು ಮನಮೋಹಕವಾಗಿ ಕೆತ್ತಿದ್ದು ನೋಡಲು ಸಿಗುತ್ತವೆ. ಹೀಗೆ ಶಿಲೆಗಳು ಹಾಗೂ ಗೋಡೆಯ ಕೆತ್ತನೆಯ ಶೈಲಿ ಹಾಗೂ ಜಲಸಂಗಿ ಶಿವಾ ದೇವಾಲಯದ ಕೆತ್ತನೆಯ ಶೈಲಿಯು ಒಂದೇ ರೀತಿಯದ್ದಾಗಿದೆ. ಈ ದೇವಾಲಯದಲ್ಲಿ ಒಬ್ಬ ಮಹಿಳೆಯು ಉಡುಪು ಧರಿಸುತ್ತಿರುವ ಶಿಲ್ಪವು ಬಹಳ ಮನಮೋಹಕವಾಗಿದ್ದಲ್ಲದೇ ಮಗುವನ್ನು ಎತ್ತಿಕೊಂಡಿರುವ ಸ್ತ್ರೀಯ ಮೂರ್ತಿಯು ಕಲಾಕಾರನ ಕೈಚಳಕವನ್ನು ತೋರಿಸುತ್ತದೆ. ಈ ದೇವಾಲಯದ ಪಕ್ಕದಲ್ಲಿ ಇನ್ನೊಂದು ದೇವಾಲಯವಿದ್ದಂತೆ ಕಂಡು ಬಂದರು, ಅದು ಈಗ ಹಾಳಾಗಿದೆ. ಅದೇ ರೀತಿಯಲ್ಲಿ ಈ ಗ್ರಾಮದಲ್ಲಿ ಕಲ್ಯಾಣ ಚಾಲುಕ್ಯರ ಕಾಲಘಟ್ಟದಲ್ಲಿ ನಿರ್ಮಿಸಿರುವ ಇನ್ನೊಂದು ದೇವಾಲಯವು ಸಹ ಇದೆ. ಅದೇ ರೀತಿನ ಊರಿನ ಹೊರಗಡೆ ಇರುವ ಇನ್ನೊಂದು ದೇವಾಲಯದಲ್ಲಿ ವಿಷ್ಣುವಿನ ಕರಿಕಲ್ಲಿನಿಂದ ಕೆತ್ತನೆ ಮಾಡಿದ ಬಹಳಷ್ಟು ಸುಂದರವಾದ ಮೂರ್ತಿ ಇದೆ.

3. ರಾಮಲಿಂಗ (ಬಿಜ್ಜೇಶ್ವರ) ದೇವಾಲಯ ಬನ್ನಳ್ಳಿ :

ಹುಮನಾಬಾದ ಪಟ್ಟಣದಿಂದ ಸುಮಾರು 22 ಕಿ.ಮೀ ಅಂತರದಲ್ಲಿರುವ ಮತ್ತು ಚಿಟಗುಪ್ಪ ಪಟ್ಟಣದಿಂದ ಸುಮರು 8 ಕಿ.ಮೀ ಅಂತರದಲ್ಲಿರುವ ಗ್ರಾಮವೇ ಬನ್ನಳ್ಳಿ. ಈ ಗ್ರಾಮದಲ್ಲಿರುವ ರಾಮಲಿಂಗ ದೇಗುಲವು ಸಹ ಕಲ್ಯಾಣಿ ಚಾಲುಕ್ಯರ ಕಾಲಘಟ್ಟದಲ್ಲಿ ನಿರ್ಮಿಸಲಾಗಿದೆ. ಜಲಸಂಗಿ ದೇವಾಲಯ, ನಾರಾಣಪುರ ದೇವಾಲಯ ಹಾಗೇಯೇ ಬನ್ನಳ್ಳಿಯಲ್ಲಿಯ ದೇವಾಲಯದ ಕಲಾ ಕೃತಿಗಳು ಸಹ ಹೊಲುತ್ತೆದೆ. ಅಲ್ಲದೇ ಬನ್ನಳ್ಳಿ ಗ್ರಾಮದಲ್ಲಿಯ ದೇವಾಲಯದಲ್ಲಿ ಬಹಳಷ್ಟು ಶೀಲೆಗಳಿದ್ದು ಒಂದು ಶಾಸನ ಸಹ ಇಲ್ಲಿ ಲಭ್ಯವಾಗಿದೆ. ಈ ದೇವಾಲಯದಲ್ಲಿ ಗಣೇಶ ಮೂರ್ತಿಯು ಸಹ ಬಹಳ ಚನ್ನಾಗಿ ಕೆತ್ತಿದ್ದು ಕಂಡು ಬರುತ್ತದೆ. ರಾಮನು ಬಾಣು ಹೊಡೆಯುವುದನ್ನು ಶಿಲೆಯಲ್ಲಿ ಕೆತ್ತಲಾಗಿದೆ. ಈ ರೀತಿ ರಾಮನು ಬಾಣ ಹೊಡೆಯುವ ಶಿಲೆಯ ಕಲಾ ಕೃತಿಯೂ ಈ ಭಾಗದಲ್ಲಿ ಎಲ್ಲಿಯೋ ನೋಡಲು ಸಿಗುವುದಿಲ್ಲ. ಈ ದೇವಾಲಯದಲ್ಲಿ ಸುಮಾರು 12 ಆಕರ್ಷಕ ಮದನಿಕಾ ಹಾಗೂ ಪೌರಾಣಿಕ ಪುರಷರ ಶಿಲ್ಪಗಳಿವೆ. ಇಲ್ಲಿರುವ ಪೌರಾಣಿಕ ಪುರುಷರ ಶೀಲೆಗಳನ್ನು ಇಲ್ಲಿನ ಜನರು ದೇವರೆಂದು ನಂಬಿ ಪೂಜಿಸುತ್ತಾರೆ. ಮುಖ್ಯದ್ವಾರದಲ್ಲಿ ಮತ್ತು ಗರ್ಭಗುಡಿಯ ದ್ವಾರದಲ್ಲಿ ಬಹಳಷ್ಟು ಜನರ ಶಿಲೆಗಳು ಕಾಣಸಿಗುತ್ತವೆ. ಈ ದೇವಾಲಯವು ಅಪೂರ್ಣವಾದ ಕೆತ್ತನೆಯಿಂದ ಕೂಡಿದೆ. ಯಾವುದೋ ಕಾರಣಾಂತರಗಳಿಂದ ಈ ದೇವಾಲಯದ ರಚನೆ ಸಂಪೂರ್ಣವಾಗಿಲ್ಲ. ಹಾಗೂ ಸದ್ಯ ಶಿಥಿಲವ್ಯವಸ್ಥೆಯಲ್ಲಿದೆ.

4. ಸೋಮೇಶ್ವರ ದೇವಾಲಯ ಮೋರಖಂಡಿ :

ಬಸವಕಲ್ಯಾಣ ಪಟ್ಟಣದಿಂದ ಪಶ್ಚಿಮಕ್ಕೆ ಸುವಾರು 4 ಕಿ.ಮೀ ಅಂತರದಲ್ಲಿರುವ ಗ್ರಾಮವೇ ಮೋರಖಂಡಿ. ಈ ಗ್ರಾಮದಲ್ಲಿ ರಾಷ್ಟಕೂಟರ ಕಾಲದಲ್ಲಿ ಮಾನ್ಯಖೇಡಕ್ಕಿಂತ ಮುಂಚೆ ರಾಜಧಾನಿಯಾಗಿ ಮೇರೆದಿರುವ ಐತಿಹಾಸಿಕ ಗ್ರಾಮವಾಗಿದೆ. ಈ ಗ್ರಾಮದಲ್ಲಿ ಕಲ್ಯಾಣ ಚಾಲುಕ್ಯರ ಕಾಲಘಟ್ಟದಲ್ಲಿ ನಿರ್ಮಿಸಿರುವ ಸೋಮೇಶ್ವರ ದೇವಾಲಯವಿದ್ದು, ಈ ದೇವಾಲಯವು ಸಹ ಅಪೂರ್ಣವಾಗಿದ್ದು, ಸಂಪೂರ್ಣವಾಗಿ ಕಟ್ಟಿರುವುದಿಲ್ಲ. ಆದರೆ ದೇವಾಲಯದ ರಚನೆಯು ಪೂರ್ಣಪ್ರಮಾಣದಲ್ಲಿ ಕಾಣುತ್ತದೆ.

5. ಉಮಾ ಮಹೇಶ್ವರ ದೇವಾಲಯ:

ಬಸವಕಲ್ಯಾಣ ಪಟ್ಟಣದಿಂದ ಸುಮಾರು 16 ಕಿ.ಮೀ ಅಂತರದಲ್ಲಿ ಉಮಾಪೂರ ಗ್ರಾಮವಿದೆ. ಈ ಗ್ರಾಮದಲ್ಲಿ 12ನೇ ಶಮಾನದಲ್ಲಿ ಕಟ್ಟಲ್ಪಟ್ಟ ಉಮಾ ಮಹೇಶ್ವರ ದೇವಾಲಯವಿದೆ. ಈ ದೇವಾಲಯದ ರಚನಾ ಶೈಲಿ ಮತ್ತು ಜಲಸಂಗಿ, ನಾರಾಯಣಪೂರ, ಮೋರಖಂಡಿ ಮತ್ತು ಬನ್ನಳ್ಳಿ ದೇವಸ್ಥಾನಗಳ ರಚನಾ ಶೈಲಿಗಳಿಂದ ಭಿನ್ನವಾಗಿದೆ. ಸದ್ಯಕ್ಕೆ ಈ ಗ್ರಾಮದಲ್ಲಿ ದೇವಸ್ಥಾನ ಪ್ರಾಂಗಣದಲ್ಲಿ

ಶಿವಾ, ಪಾರ್ವತಿ ಮತ್ತು ಗಣೇಶ ಮೂರ್ತಿಗಳನ್ನು ಸ್ಥಪಾಸಿರುತ್ತಾರೆ. ಅಲ್ಲದೇ ಈ ಸ್ಥಾನದಲ್ಲಿಯೂ ಅನೇಕ ಮನಮೋಹಕ ಶಿಲ್ಪಗಳು ಕಾಣಬಹುದಾಗಿದೆ.

6. ರಂಜೋಳ ಖೇಣಿಯಲ್ಲಿರುವ ವೀರಗಲ್ಲುಗಳು:

ರಂಜೋಳಖೇಣಿಯಲ್ಲಿ ಹನುಮಾನ ದೇವಸ್ಥಾನದಲ್ಲಿ ಮೂರು ಶಾಸನಗಳಿದ್ದು, ಅವುಗಳ ಜೋತೆಯಲ್ಲಿ ಎರಡು ವೀರಗಲ್ಲುಗಳಿವೆ. ಆನೆಯ ಮೇಲಿರುವ ಸೈನಿಕನೊಂದಿಗೆ ಈ ಭಾಗದ ಪಾದಾಳು ಸೈನಿಕ ವೀರನು ಯುದ್ಧ ಮಾಡುತ್ತ ಆನೆಯ ಮುಖಕ್ಕೆ ಖಡ್ಗದಿಂದ ತಿವಿಯುತ್ತಿರುವ ಶಿಲೆಯು ಬಹಳ ಅದ್ಭುತವಾಗಿರುವುದಲ್ಲದೇ ಈ ಭಾಗದ ವೀರತನವನ್ನು ಪ್ರದರ್ಶಿಸುತ್ತದೆ.

7. ಅಲಿಯಂಬರ ಗ್ರಾಮದಲ್ಲಿರುವ ವೀರಗಲ್ಲುಗಳು

ಈ ಗ್ರಾಮದ ಹೊರವಲಯದಲ್ಲಿ ಪಶ್ಚಿಮ ದಿಕ್ಕಿನ ಕಡೆಗಿರುವ ಒಂದು ದೊಡ್ಡ ಆಲದ ಮರದ ಕೆಳಗಡೆ ವೀರಗಲ್ಲಿದ್ದು, ಒಬ್ಬ ವೀರನು ಎದುರಾಳಿಯೊಂದಿಗೆ ಹೊರಾಡುತ್ತಿರುವ ಶಿಲ್ಪವಿದೆ. ಅಲ್ಲದೇ ಅಲ್ಲಿ ಇನ್ನು ಪೌರಾಣಿಕ ದೇವತೆಗಳ ಶಿಲ್ಪಗಳು ಸಹ ಕಾಣಬಹುದಾಗಿದೆ. ಅದಲ್ಲದೇ ಆ ಗ್ರಾಮದ ಮಧ್ಯಭಾಗದಲ್ಲಿರುವ ದೇವಸ್ಥಾನದ ಹೊರಡೆಯಲ್ಲಿ ಒಂದು ಕಂಬವಿದ್ದು, ಅ ಕಂಬದ ನಾಲ್ಕು ಕಡೆ 24ನೇ ತೀರ್ಥಾಂಕರರ ಮುರ್ತಿಯಿದ್ದು, ಅದು ತುಂಡಾಗಿದ್ದು, ಅದರ ಮೇಲ್ಭಾಗದ ಸಂಪೂರ್ಣವಾಗಿ ಹಾಳಾಗಿದೆ. ಅದಲ್ಲದೇ ಕೈ ಇರುವ ಒಂದು ಜೈನ ಶಿಲೆಯು ಸಹ ಇಲ್ಲಿದೆ.

8. ಮರಖಲ್ ಗ್ರಾಮದಲ್ಲಿರುವ ವೀರಗಲ್ಲುಗಳು:

ಮರಖಲ್ ಗ್ರಾಮದಲ್ಲಿರುವ ಹನುಮಾನ ದೇವಸ್ಥಾನದಲ್ಲಿ ಐತಿಹಾಸಿಕ ಶಾಸನ ಜೊತೆಯಲ್ಲಿ ಸುಮಾರು ನಾಲ್ಕು ವೀರಗಲ್ಲುಗಳಿದ್ದು, ಅದರಲ್ಲಿರುವ ಒಂದು ವೀರಗಲ್ಲಿನಲ್ಲಿ ಕುದುರೆಯ ಮೇಲೆ ಖಡ್ಗವನ್ನು ಹಿಡಿದುಕೊಂಡು ಬರುತ್ತಿರುವ ವೈರಿಯ ಮೇಲೆ ಕಾಲ್ದಾಳು ವೀರನು ಖಡ್ಗವನ್ನು ಹಿಡಿದುಕೊಂಡು ವೈರಿಯ ಮೇಲೆ ಎರಗಿ ವೈರಿಯ ಎದೆಯ ಮೇಲೆ ಖಡ್ಗವನ್ನು ಚುಚ್ಚುತ್ತಿರುವ ಸರಿಸುಮಾರು ಎರಡುವರಿ ಅಡಿಯಷ್ಟು ಎತ್ತರವಿದೆ. ಈ ವೀರ ಕೆಳಗಡೆ ಸೈನಿಕರು ಮರಣಹೊಂದಿರುವುದು ಸಹ ಕಾಣುವ ಹಾಗೆ ಅತ್ಯೂತ್ತಮವಾಗಿ ಕೆತ್ತಲಾಗಿದೆ.ಇನ್ನುಳಿದ ವೀರಗಲ್ಲುಗಳು ಸಹ ಅಷ್ಟೆ ಸುಂದರವಾಗಿ ಕೆತ್ತಿದ್ದು, ಈ ಭಾಗದ ವೀರತವನ್ನು ಪ್ರದರ್ಶಿಸಲು ಇಂದಿಗೂ ಸಾಕ್ಷಿಯಾಗಿ ನಿಂತಿವೆ.

9. ಮೊಗದಾಳ ಗ್ರಾಮದಲ್ಲಿರುವ ನಂದಿ ವಿಗ್ರಹ:

ಮೋಗದಾಳ ಗ್ರಾಮದಲ್ಲಿರುವ ವೀರಪ್ಪಾ ಪೊಲೀಸ್ ಪಾಟೀಲ್ ರವರ ಹೊಲದಲ್ಲಿ ಒಂದು ನಂದಿ ವಿಗ್ರಹವಿದೆ. ಈ ನಂದಿ ವಿಗ್ರಹವು ಎರಡುವರೆ ಎತ್ತರ ಮತ್ತು 4 ಅಡಿ ಉದ್ದವಿರುವ ಬೃಹತ ವಿಗ್ರಹವಿದ್ದು, ನಂದಿಯ ಪ್ರತಿಯೊಂದು

ಭಾಗವು ಕಲಾಕಾರನು ಬಹಳ ಚನ್ನಾಗಿ ಕೆತ್ತಿದ್ದಾನೆ. ಬಹುಷ್ಯ ಇದು ಬೀದರ ಜಿಲ್ಲೆಯಲ್ಲಿಯೇ ದೊಡ್ಡದಾಗ ಕಲ್ಯಾಣಿ ಚಾಲುಕ್ಯರ ಕಾಲದ ನಂದಿ ವಿಗ್ರಹವೆಂದರೂ ತಪ್ಪಾಗಲಾರದು. ಹೀಗೆ ಬೀದರ ಜಿಲ್ಲೆಯಲ್ಲಿ ಅಲ್ಲಲ್ಲಿ ಕೆಲವು ಶಿಲೆಗಳು, ವೀರಗಳು ದೊರೆಯುತ್ತ ಹೋಗುತ್ತವೆ.

ಅದಲ್ಲದೇ ಬೀದರ ಜಿಲ್ಲೆಯ ಆಯಾ ಭಾಗಗಳಲ್ಲಿ ಕಲ್ಯಾಣ ಚಾಲುಕ್ಯರ ಕಾಲಘಟ್ಟದ ಇತಿಹಾಸ ಪುಟಗಳಲ್ಲಿ ದೊರೆಯುವ ದೇವಾಲಯಗಳ ಹೆಸರುಗಳ ಪಟ್ಟಿಯನ್ನು ಈ ಕೆಳಗಿನಂತೆ ನೀಡಲಾಗಿದೆ.

ಬೀದರ ಜಿಲ್ಲೆ ಭಾಲ್ಕಿ ತಾಲೂಕಿನಲ್ಲಿ ಕ್ರಿ.ಶ 1000–1200ರ ನಡುವಲ್ಲಿ ನಿರ್ಮಿಸಲಾದ ದೇವಾಲಯಗಳು.

ಕ್ರ.ಸಂ	ದೇವಾಲಯದ	ಊರು
1.	ತ್ರೈಪುರುಷ ದೇವಾಲಯ	ಭಾಲ್ಕಿ
2.	ಕಪಿಲೇಶ್ವರ ದೇವಾಲಯ	ಭಾಲ್ಕಿ
3.	ಉತ್ತರೇಶ್ವರ ದೇವಾಲಯ	ಭಾಲ್ಕಿ
4.	ಭಲ್ಲುಂಕೇಶ್ವರ ದೇವಾಲಯ	ಭಾಲ್ಕಿ
5.	ವೀರದೇವ ದೇವಾಲಯ	ಭಾತಂಬ್ರ
6.	ಉತ್ತರೇಶ್ವರ ದೇವಾಲಯ	ಗೋರಚಿಂಚೋಳಿ
7.	ಭೋಗೇಶ್ವರ ದೇವಾಲಯ	ಚಂದಾಪುರ
8.	ಕೇಶವ ದೇವಾಲಯ	ಕೊಟಗ್ಯಾಲ
9.	ಧೋರೇಶ್ವರ ದೇವಾಲಯ	ಇಂಚೂರು
10.	ಷಷ (ಹೆಸರು ತಿಳಿಯದು)	ಲಂಜವಾಡ
11.	ಜೈನ ಬಸದಿ (ಹೆಸರು ತಿಳಿಯದು)	ಹಲಸಿ
12.	ಜೈನ ಬಸದಿ (ಹೆಸರು ತಿಳಿಯದು)	ಧನ್ನೂರು

ಏತನ್ಮಧ್ಯೆ, ನೆರೆಯ ಬಸವಕಲ್ಯಾಣ ತಾಲೂಕಿನಲ್ಲಿ ಹತ್ತನೆಯ ಶತಮಾನದ ಕೊನೆಯವರೆಗೆ ಒಂದೂ ದೇವಾಲಯದ ನಿರ್ಮಾಣ ಉಲ್ಲೇಖ ಪಡೆದಿಲ್ಲವಾದರೂ ಮುಂದಿನ ಇನ್ನೂರು ವರ್ಷಗಳಲ್ಲಿ ಮೂವತ್ತಮೂರು ದೇವಾಲಯಗಳನ್ನು ಕಟ್ಟಲಾಯಿತೆಂದು ಅನುಮಾನಿಸಲು ನಮ್ಮಲ್ಲಿ ಸಾಮಗ್ರಿಗಳಿವೆ.

ಬೀದರ ಜಿಲ್ಲೆ ಬಸವಕಲ್ಯಾಣ ತಾಲೂಕಿನಲ್ಲಿ ಕ್ರಿ.ಶ 1000–1200ರ

೧೦೦

ನಡುವಲ್ಲಿ ನಿರ್ಮಿಸಲಾದ ದೇವಾಲಯಗಳು.

ಕ್ರ.ಸಂ	ದೇವಾಲಯದ	ಊರು
1.	ಬ್ಹ್ಮ ದೇವಾಲಯ	ಬಸವಕಲ್ಯಾಣ
2.	ಮಲಯಮತಿ ದೇವಾಲಯ	ಬಸವಕಲ್ಯಾಣ
3.	ಭೀಮೇಶ್ವರ ದೇವಾಲಯ	ಬಸವಕಲ್ಯಾಣ
4.	ಸ್ವಯಂಭು ಹಾತಕೇಶ್ವರ ದೇವಾಲಯ	ಬಸವಕಲ್ಯಾಣ
5.	ಮಹಾದೇವ ದೇವಾಲಯ	ಬಸವಕಲ್ಯಾಣ
6.	ಕಪ್ಪೇಶ್ವರ ದೇವಾಲಯ	ಬಸವಕಲ್ಯಾಣ
7.	ವಿನಾಯಕ ದೇವಾಲಯ	ಬಸವಕಲ್ಯಾಣ
8.	ಕೇಶವ ದೇವಾಲಯ	ಬಸವಕಲ್ಯಾಣ
9.	ಸೋಮೇಶ್ವರ ದೇವಾಲಯ	ಬಸವಕಲ್ಯಾಣ
10.	ನಾರಾಯಣ ದೇವಾಲಯ	ಬಸವಕಲ್ಯಾಣ
11.	ನಾರಾಯಣ ದೇವಾಲಯ (2)	ಬಸವಕಲ್ಯಾಣ
12.	ಚಂದ್ರಪ್ರಭ ಜಿನಾಲಯ	ಬಸವಕಲ್ಯಾಣ
13.	ಷಷ (ಹೆಸರು ತಿಳಿಯದು)	ಬಸವಕಲ್ಯಾಣ
14.	ಮಹಾದೇವ ದೇವಾಲಯ	ನಾರಾಯಣಪೂರ
15.	ಕೇಶವ ದೇವಾಲಯ	ನಾರಾಯಣಪೂರ
16.	ಮೂಲಸ್ಥಾನ ದೇವರಸ ದೇವಾಲಯ	ನಾರಾಯಣಪೂರ
17.	ಕೋದಂಡ ದೇವಾಲಯ	ನಾರಾಯಣಪೂರ
18.	ದೇವಿಯೋರ್ವಳ ದೇವಾಲಯ (ಹೆಸರು ತಿಳಿಯದು)	ನಾರಾಯಣಪೂರ
19.	ಹರಿಮೂಲಗಾಹಣ್ಣನ ಬೀದಿಯ ದೇವಾಲಯ	ನಾರಾಯಣಪೂರ
20.	ಕುಂಭೇಶ್ವರ ದೇವಾಲಯ	ಗೋರ್ಟಾ
21.	ನಗರೇಶ್ವರ ದೇವಾಲಯ	ಗೋರ್ಟಾ
22.	ಮಲ್ಲೇಶ್ವರ ದೇವಾಲಯ	ಗೋರ್ಟಾ
23.	ರುದ್ರೇಶ್ವರ ದೇವಾಲಯ	ಗೋರ್ಟಾ
24.	ರುದ್ರೇಶ್ವರ ದೇವಾಲಯ (2)	ಗೋರ್ಟಾ
25.	ಪದ್ಮಾವತಿಯ ಜೈನ ದೇವಾಲಯ	ಗೋರ್ಟಾ
26.	ಗೋಹಿಲೇಶ್ವರ ದೇವಾಲಯ	ಗೌರ
27.	ಕೇಶವದೇವ ದೇವಾಲಯ	ಗೌರ
28.	ರಾಮೇಶ್ವರ ದೇವಾಲಯ	ಮುಚಳಂಬ
29.	ಸೋಮೇಶ್ವರ ದೇವಾಲಯ	ಮೋರ್ಖಂಡಿ
30.	ತ್ರಿಪುರಾಂತಕ ದೇವಾಲಯ	ತ್ರಿಪುರಾಂತ
31.	ಪಂಪೇಶ್ವರ ದೇವಾಲಯ	ಹಳ್ಳಿ
32.	ಷಷ (ಹೆಸರು ತಿಳಿಯದು)	ಸೋಳದಾಬಕ
33.	ಜೈನ ಬಸದಿ (ಹೆಸರು ತಿಳಿಯದು)	ಉಜ್ಜಳಂ[202]

ಬೀದರ ಜಿಲ್ಲೆ ಹುಮನಾಬಾದ ತಾಲೂಕಿನಲ್ಲಿ ಕ್ರಿ.ಶ 1000–1200ರ ನಡುವಲ್ಲಿ ನಿರ್ಮಿಸಲಾದ ದೇವಾಲಯಗಳು.

ಕ್ರ.ಸಂ	ದೇವಾಲಯದ	ಊರು
1.	ಸಮರದೇವತೆ ದೇವಾಲಯ	ಘಾಟಬೋರಳ
2.	ಶಿವಾ ದೇವಾಲಯ	ಜಲಸಂಗಿ
3.	ಹಜ್ಜೇಶ್ವರ ದೇವಾಲಯ	ಹಿಲಾಲಪುರ
4.	ಬಿಜ್ಜೇಶ್ವರ ದೇವಾಲಯ	ಬನ್ನಳ್ಳಿ

ಬೀದರ ಜಿಲ್ಲೆ ಬೀದರ ತಾಲೂಕಿನಲ್ಲಿ ಕ್ರಿ.ಶ 1000–1200ರ ನಡುವಲ್ಲಿ ನಿರ್ಮಿಸಲಾದ ದೇವಾಲಯಗಳು.

ಕ್ರ.ಸಂ	ದೇವಾಲಯದ	ಊರು
1.	ಬ್ರಹ್ಮೇಶ್ವರ ದೇವಾಲಯ	ರಂಜೋಳಖೇಣಿ
2.	ಮೈಳಲೇಶ್ವರ ದೇವಾಲಯ	ರಂಜೋಳಖೇಣಿ
3.	ನಾಗೇಶ್ವರ ದೇವಾಲಯ	ಅಣದೂರ

4.	ಸೂರ್ಯ ದೇವಾಲಯ	ಬರೂರ
5.	ಶಾಂತನಾಥ ಬಸದಿ	ಬರೂರ
6.	ಪಾರ್ಶವನಾಥ ತೀರ್ಥಂಕರ ಜೈನ ದೇವಾಲಯ	ಕಮತಾಣಾ

ಹೀಗೆ ಬೀದರ ಜಿಲ್ಲೆಯಲ್ಲಿ ಸರಿ ಸುಮಾರು ಒಟ್ಟು 55 ದೇವಸ್ಥಾನಗಳ ಹೆಸರುಗಳು ಶಾಸನಗಳಲ್ಲಿ ಉಲ್ಲೇಖವಾಗಿದ್ದು, ಇವುಗಳಲ್ಲಿ ಕೆಲವೊಂದು ದೇವಾಲಯಗಳು ಕಟ್ಟಲ್ಪಟ್ಟರೆ ಇನ್ನು ಕೆಲವು ದೇವಸ್ಥಾನಗಳು ಅಷ್ಟೊಂದು ದೊಡ್ಡ ಪ್ರಮಾಣದಲ್ಲಿ ಕಟ್ಟಡಗಳ ರಚನೆಯಾಗದೇ ಕೇವಲ ಮೂರ್ತಿ ಸ್ಥಾಪನೆ ಮಾಡಿ ಪೂಜೆ ಮಾಡುತ್ತಿರಬಹುದೆಂದು ಅಂದಾಜಿಸಲಾಗಿದೆ. ಏಕೆಂದರೆ ಕೆಲವೊಂದು ದೇವಸ್ಥಾನಗಳ ಕುರುಹುಗಳು ಸಹ ಆ ಗ್ರಾಮಗಳಲ್ಲಿ ಕಾಣಸಿಗುವುದಿಲ್ಲ.

ಗ್ರಂಥಋಣ

1) ಸಮಗ್ರ ಕರ್ನಾಟಕ ಇತಿಹಾಸ, ಲಕ್ಷ್ಮೀ ಮುದ್ರಣಾಲಯ,2011, ಕೆ.ಎನ್ ಅಶ್ವಥಪ್ಪಾ, ಪುಟ ಸಂಖ್ಯೆ 176

2) ಕನ್ನಡ ವಿಶ್ವವಿದ್ಯಾಲಯ ಹಂಪಿ, ಶಾಸನ ಸಂಪುಟ–8, ಪುಟ ಸಂ. 96

3) ಸಮಗ್ರ ಕರ್ನಾಟಕ ಇತಿಹಾಸ, ಲಕ್ಷ್ಮೀ ಮುದ್ರಣಾಲಯ,2011, ಕ.ಎನ್ ಅಶ್ವಥಪ್ಪಾ, ಪುಟ ಸಂಖ್ಯೆ 177

4) ಅದೇ ಪುಟ ಸಂಖ್ಯೆ 177

5) ಚರಿತ್ರೆ ಮಾಲೆ2 ಕರ್ನಾಟಕ ಚರಿತ್ರೆ, ಸಂಪುಟ–2 ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ಪ್ರಧಾನ ಸಂಪಾದಕರು, ಪ್ರೋ.ಷೇಕ್ ಅಲಿ, ಸಂಪುಟ ಸಂಪಾದಕರು ಪ್ರೋ.ಬಿ ಸುರೇಂದ್ರರಾವ ಪುಟ ಸಂ. 79

6) ಸಮಗ್ರ ಕರ್ನಾಟಕ ಇತಿಹಾಸ, ಲಕ್ಷ್ಮೀ ಮುದ್ರಣಾಲಯ,2011, ಕ.ಎನ್ ಅಶ್ವಥಪ್ಪಾ, ಪುಟ ಸಂಖ್ಯೆ 176–188

7) ಚರಿತ್ರೆ ಮಾಲೆ2 ಕರ್ನಾಟಕ ಚರಿತ್ರೆ, ಸಂಪುಟ–2 ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ಪ್ರಧಾನ ಸಂಪಾದಕರು, ಪ್ರೋ.ಷೇಕ್ ಅಲಿ, ಸಂಪುಟ ಸಂಪಾದಕರು ಪ್ರೋ.ಬಿ ಸುರೇಂದ್ರರಾವ ಪುಟ ಸಂ. 79

8) ಒಂದನೇ ಸೋಮೇಶ್ವರ ಜೀವನ ಮತ್ತು ಸಾಧನೆಗಳು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಭೋಗಪ್ಪ ಗುರುಬಸಪ್ಪ (ಅಸ್ಕಿ) ರವರು ಮಂಡಿಸಿದ ಮಹಾಪ್ರಬಂಧ ಪುಟ ಸಂ. 15

9) ಕರ್ನಾಟಕವನ್ನಾಳಿದ ರಾಣಿಯರು, ಶಕೀಲ್ ಐ.ಎಸ್. ಉಸ್ಮಾನ ಶಿಕ್ಷಣ ಸಂಸ್ಥೆ, ಪುಟ ಸಂ. 29

10) ಅದೇ ಪುಟ ಸಂಖ್ಯೆ. 30 ರಿಂದ 35

11) ಸಮಗ್ರ ಕರ್ನಾಟಕ ಇತಿಹಾಸ, ಲಕ್ಷ್ಮೀ ಮುದ್ರಣಾಲಯ,2011, ಕ.ಎನ್ ಅಶ್ವಥಪ್ಪಾ, ಪುಟ ಸಂಖ್ಯೆ 177

12) ಚರಿತ್ರೆ ಮಾಲೆ2 ಕರ್ನಾಟಕ ಚರಿತ್ರೆ, ಸಂಪುಟ–2 ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ಪ್ರಧಾನ ಸಂಪಾದಕರು, ಪ್ರೋ.ಷೇಕ್ ಅಲಿ, ಸಂಪುಟ ಸಂಪಾದಕರು ಪ್ರೋ.ಬಿ ಸುರೇಂದ್ರರಾವ ಪುಟ ಸಂ. 79

13) ಸಮಗ್ರ ಕರ್ನಾಟಕ ಇತಿಹಾಸ, ಲಕ್ಷ್ಮೀ ಮುದ್ರಣಾಲಯ,2011, ಕ.ಎನ್ ಅಶ್ವಥಪ್ಪಾ, ಪುಟ ಸಂಖ್ಯೆ 177

14) ಒಂದನೇ ಸೋಮೇಶ್ವರ ಜೀವನ ಮತ್ತು ಸಾಧನೆಗಳು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಭೋಗಪ್ಪ ಗುರುಬಸಪ್ಪ (ಅಸ್ಕಿ) ರವರು ಮಂಡಿಸಿದ ಮಹಾಪ್ರಬಂಧ ಪುಟ ಸಂ. 15

15) ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–8, ಪುಟ ಸಂ. 44

16) ಅದೇ ಪುಟ ಸಂ. 99

17) ಚರಿತ್ರೆ ಮಾಲೆ2 ಕರ್ನಾಟಕ ಚರಿತ್ರೆ, ಸಂಪುಟ–2 ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ಪ್ರಧಾನ ಸಂಪಾದಕರು, ಪ್ರೋ.ಷೇಕ್ ಅಲಿ, ಸಂಪುಟ ಸಂಪಾದಕರು ಪ್ರೋ.ಬಿ ಸುರೇಂದ್ರರಾವ ಪುಟ ಸಂ. 80

18) ಒಂದನೇ ಸೋಮೇಶ್ವರ ಜೀವನ ಮತ್ತು ಸಾಧನೆಗಳು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಭೋಗಪ್ಪ ಗುರುಬಸಪ್ಪ (ಅಸ್ಕಿ) ರವರು ಮಂಡಿಸಿದ ಮಹಾಪ್ರಬಂಧ ಪುಟ ಸಂ. 15

19) ಚರಿತ್ರೆ ಮಾಲೆ2 ಕರ್ನಾಟಕ ಚರಿತ್ರೆ, ಸಂಪುಟ–2 ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ಪ್ರಧಾನ ಸಂಪಾದಕರು, ಪ್ರೋ.ಷೇಕ್ ಅಲಿ, ಸಂಪುಟ ಸಂಪಾದಕರು ಪ್ರೋ.ಬಿ ಸುರೇಂದ್ರರಾವ ಪುಟ ಸಂ. 80

20) ಕಲ್ಯಾಣ ಚಾಲುಕ್ಯರ ಸಮಕಾಲಿನ ಅರಸುಮನೆತನದವರೊಂದಿಗೆ ಹೊಂದಿದ ಸಂಬಂಧಗಳು ಒಂದು ಅಧ್ಯಯನ ಪುಟ ಸಂಖ್ಯೆ 199

21) ಸಮಗ್ರ ಕರ್ನಾಟಕ ಇತಿಹಾಸ, ಲಕ್ಷ್ಮೀ ಮುದ್ರಣಾಲಯ,2011, ಕ.ಎನ್ ಅಶ್ವಥಪ್ಪಾ, ಪುಟ ಸಂಖ್ಯೆ 178

22) ಅದೇ ಪುಟ ಸಂಖ್ಯೆ 178

23) ಕರ್ನಾಟಕವನ್ನಾಳಿದ ರಾಣಿಯರು, ಶಕೀಲ್ ಐ.ಎಸ್. ಉಸ್ಮಾನ ಶಿಕ್ಷಣ ಸಂಸ್ಥೆ, ಪುಟ ಸಂ. 29

24) ಚರಿತ್ರೆ ಮಾಲೆ2 ಕರ್ನಾಟಕ ಚರಿತ್ರೆ, ಸಂಪುಟ–2 ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ಪ್ರಧಾನ ಸಂಪಾದಕರು, ಪ್ರೋ.ಷೇಕ್ ಅಲಿ, ಸಂಪುಟ ಸಂಪಾದಕರು ಪ್ರೋ.ಬಿ ಸುರೇಂದ್ರರಾವ ಪುಟ ಸಂ. 81,82

25) ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–8, ಪುಟ ಸಂ. 11

26) ಸಮಗ್ರ ಕರ್ನಾಟಕ ಇತಿಹಾಸ, ಲಕ್ಷ್ಮೀ ಮುದ್ರಣಾಲಯ,2011, ಕ.ಎನ್ ಅಶ್ವಥಪ್ಪಾ, ಪುಟ ಸಂಖ್ಯೆ 178–179

27) ಚರಿತ್ರೆ ಮಾಲೆ2 ಕರ್ನಾಟಕ ಚರಿತ್ರೆ, ಸಂಪುಟ–2 ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ಪ್ರಧಾನ ಸಂಪಾದಕರು, ಪ್ರೋ.ಷೇಕ್ ಅಲಿ, ಸಂಪುಟ ಸಂಪಾದಕರು ಪ್ರೋ.ಬಿ ಸುರೇಂದ್ರರಾವ ಪುಟ ಸಂ. 82

28) ಕಲ್ಯಾಣ ಚಾಲುಕ್ಯರ ಸಮಕಾಲಿನ ಅರಸುಮನೆತನದವರೊಂದಿಗೆ ಹೊಂದಿದ ಸಂಬಂಧಗಳು ಒಂದು ಅಧ್ಯಯನ ಪುಟ ಸಂಖ್ಯೆ 137–138

29) ಅದೇ ಪುಟ ಸಂಖ್ಯೆ 139

30) ಚರಿತ್ರೆ ಮಾಲೆ2 ಕರ್ನಾಟಕ ಚರಿತ್ರೆ, ಸಂಪುಟ–2 ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ಪ್ರಧಾನ ಸಂಪಾದಕರು, ಪ್ರೋ.ಷೇಕ್ ಅಲಿ, ಸಂಪುಟ ಸಂಪಾದಕರು ಪ್ರೋ.ಬಿ ಸುರೇಂದ್ರರಾವ ಪುಟ ಸಂ. 83,84

31) ಒಂದನೇ ಸೋಮೇಶ್ವರ ಜೀವನ ಮತ್ತು ಸಾಧನೆಗಳು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಭೋಗಪ್ಪ ಗುರುಬಸಪ್ಪ (ಅಸ್ಕಿ) ರವರು ಮಂಡಿಸಿದ ಮಹಾಪ್ರಬಂಧ ಪುಟ ಸಂ. 26 ಮತ್ತು 27

32) ಒಂದನೇ ಸೋಮೇಶ್ವರ ಜೀವನ ಮತ್ತು ಸಾಧನೆಗಳು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಭೋಗಪ್ಪ ಗುರುಬಸಪ್ಪ (ಅಸ್ಕಿ) ರವರು ಮಂಡಿಸಿದ ಮಹಾಪ್ರಬಂಧ ಪುಟ ಸಂ. 35

33) ಒಂದನೇ ಸೋಮೇಶ್ವರ ಜೀವನ ಮತ್ತು ಸಾಧನೆಗಳು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಭೋಗಪ್ಪ ಗುರುಬಸಪ್ಪ (ಅಸ್ಕಿ) ರವರು ಮಂಡಿಸಿದ ಮಹಾಪ್ರಬಂಧ ಪುಟ ಸಂ. 36,37

34) ಕಲ್ಯಾಣ ಚಾಲುಕ್ಯರ ಸಮಕಾಲಿನ ಅರಸುಮನೆತನದವರೊಂದಿಗೆ ಹೊಂದಿದ ಸಂಬಂಧಗಳು ಒಂದು ಅಧ್ಯಯನ ಪುಟ ಸಂಖ್ಯೆ 140–141

35) ಒಂದನೇ ಸೋಮೇಶ್ವರ ಜೀವನ ಮತ್ತು ಸಾಧನೆಗಳು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಭೋಗಪ್ಪ ಗುರುಬಸಪ್ಪ (ಅಸ್ಕಿ) ರವರು ಮಂಡಿಸಿದ ಮಹಾಪ್ರಬಂಧ ಪುಟ ಸಂ. 29

36) ಚರಿತ್ರೆ ಮಾಲೆ2 ಕರ್ನಾಟಕ ಚರಿತ್ರೆ, ಸಂಪುಟ–2 ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ಪ್ರಧಾನ ಸಂಪಾದಕರು, ಪ್ರೋ.ಷೇಕ್ ಅಲಿ, ಸಂಪುಟ ಸಂಪಾದಕರು ಪ್ರೋ.ಬಿ ಸುರೇಂದ್ರರಾವ ಪುಟ ಸಂ. 83

37) ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–8, ಪುಟ ಸಂ.––––

38) ಒಂದನೇ ಸೋಮೇಶ್ವರ ಜೀವನ ಮತ್ತು ಸಾಧನೆಗಳು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಭೋಗಪ್ಪ ಗುರುಬಸಪ್ಪ (ಅಸ್ಕಿ) ರವರು ಮಂಡಿಸಿದ ಮಹಾಪ್ರಬಂಧ ಪುಟ ಸಂ. 33

39) ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–8, ಪುಟ ಸಂ. 102

40) ಒಂದನೇ ಸೋಮೇಶ್ವರ ಜೀವನ ಮತ್ತು ಸಾಧನೆಗಳು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಭೋಗಪ್ಪ ಗುರುಬಸಪ್ಪ (ಅಸ್ಕಿ) ರವರು ಮಂಡಿಸಿದ ಮಹಾಪ್ರಬಂಧ ಪುಟ ಸಂ. 42)

41) ಸಮಗ್ರ ಕರ್ನಾಟಕ ಇತಿಹಾಸ, ಲಕ್ಷ್ಮೀ ಮುದ್ರಣಾಲಯ,2011, ಕ.ಎನ್ ಅಶ್ವಥಪ್ಪಾ, ಪುಟ ಸಂಖ್ಯೆ 178–179

42) ಒಂದನೇ ಸೋಮೇಶ್ವರ ಜೀವನ ಮತ್ತು ಸಾಧನೆಗಳು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಭೋಗಪ್ಪ ಗುರುಬಸಪ್ಪ (ಅಸ್ಕಿ) ರವರು ಮಂಡಿಸಿದ ಮಹಾಪ್ರಬಂಧ ಪುಟ ಸಂ. 49–50

43) ಕರ್ನಾಟಕವನ್ನಾಳಿದ ರಾಣಿಯರು, ಶಕೀಲ್ ಐ.ಎಸ್. ಉಸ್ಮಾನ ಶಿಕ್ಷಣ ಸಂಸ್ಥೆ, ಪುಟ ಸಂ. 35 ರಿಂದ 38

44) ಅದೇ ಪುಟ ಸಂ. 38 ರಿಂದ 42)

45) ಪ್ರಕಾಶಕರು, ವೀರಶೈವ ಅಧ್ಯಯನ ಆಕಾಡಮಿ, ಶ್ರೀ ನಾಗನೂರು ರುದ್ರಾಕ್ಷಿ ಮಠ, ಬೆಳಗಾವಿ, ಜೆ.ಎಂ ನಾಗಯ್ಯ, ಆರನೆಯ ವಿಕ್ರಮಾದಿತ್ಯನ ಶಾಸನಗಳು, ಒಂದು ಅಧ್ಯಯನ, ಪುಟ ಸಂ. 6 ರಿಂದ 16

46) ಒಂದನೇ ಸೋಮೇಶ್ವರ ಜೀವನ ಮತ್ತು ಸಾಧನೆಗಳು, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದಲ್ಲಿ ಭೋಗಪ್ಪ ಗುರುಬಸಪ್ಪ (ಅಸ್ಕಿ) ರವರು ಮಂಡಿಸಿದ ಮಹಾಪ್ರಬಂಧ ಪುಟ ಸಂ. 68)

47) ಚರಿತ್ರೆ ಮಾಲೆ2 ಕರ್ನಾಟಕ ಚರಿತ್ರೆ, ಸಂಪುಟ–2 ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ ಪ್ರಧಾನ ಸಂಪಾದಕರು, ಪ್ರೋ.ಷೇಕ್ ಅಲಿ, ಸಂಪುಟ ಸಂಪಾದಕರು ಪ್ರೋ.ಬಿ ಸುರೇಂದ್ರರಾವ ಪುಟ ಸಂ. 84

48) ಅದೇ ಪುಟ ಸಂ. 84–86

49) ಕರ್ನಾಟಕದ ಜೈನ ಶಾಸನಗಳು ಸಂಪುಟ–5 ಪುಟ ಸಂ. 285

50) ಅದೇ ಪುಟ ಸಂ. 185

೧೦೩

51) ಪ್ರಕಾಶಕರು, ವೀರಶೈವ ಅಧ್ಯಯನ ಆಕಾಡಮಿ, ಶ್ರೀ ನಾಗನೂರು ರುದ್ರಾಕ್ಷಿ ಮಠ, ಬೆಳಗಾವಿ, ಜೆ.ಎಂ ನಾಗಯ್ಯ, ಆರನೆಯ ವಿಕ್ರಮಾದಿತ್ಯನ ಶಾಸನಗಳು, ಒಂದು ಅಧ್ಯಯನ, ಪುಟ ಸಂ. 6 ರಿಂದ 16

52)ಆರನೆಯ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ ಪುಟಸಂ.383

53) ಸಮಗ್ರ ಕರ್ನಾಟಕ ಇತಿಹಾಸ, ಲಕ್ಷ್ಮೀ ಮುದ್ರಣಾಲಯ,2011, ಕ.ಎನ್ ಅಶ್ವಥಪ್ಪಾ, ಪುಟ ಸಂಖ್ಯೆ 179

54) ಕಲ್ಯಾಣದ ಚಾಲುಕ್ಯರು ಸಮಕಾಲಿನ ಅರಸುಮನೆತನಗಳೊಂದಿಗೆ ಹೊಂದಿದ್ದ ಸಂಬಂಧಗಳು ಪುಟ ಸಂ. 3

55) ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–8, ಪುಟ ಸಂ. 104–105

56) ಬಿಲ್ಹಣನ ವಿಕ್ರಮಾಂಕದೇವಚರಿತ ಕಾವ್ಯದ ಸಮೀಕ್ಷಾತ್ಮಕ ಅಧ್ಯಯನ, ಕರ್ನಾಟಕ ವಿಶ್ವಿದ್ಯಾಲಯ, ಧಾರವಾಡ ಸಂಶೋಧಕರು ಅರವಿಂದ ಚಂದ್ರಕಾಂತ ಶ್ಯಾನಭಾಗ ಪುಟ ಸಂ. 133–134

57) ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–8 ಪುಟ ಸಂ. 3

58) ಕಲ್ಯಾಣದ ಚಾಲುಕ್ಯರು ಸಮಕಾಲಿನ ಅರಸುಮನೆತನಗಳೊಂದಿಗೆ ಹೊಂದಿದ್ದ ಸಂಬಂಧಗಳು ಪುಟ ಸಂ. 4

59) ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–8 ಪುಟ ಸಂ. 78

60) ಅದೇ ಪುಟ ಸಂ. 100

61) ಅದೇ ಪುಟ ಸಂ. 83)

62) ಅದೇ ಪುಟ ಸಂ. 64)

63) ಕರ್ನಾಟಕ ಜೈನಶಾಸನಗಳು ಸಂಪುಟ 5 ಪುಟ ಸಂಖ್ಯೆ 281

64) ಅದೇ ಸಂಖ್ಯೆ 190)

65) ಅದೇ ಪುಟ ಸಂ. 285

66) ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–8 ಪುಟ ಸಂ. 3

67) ಅದೇ ಸಂ. 94–95

68) ಅದೇ ಪುಟ ಸಂ. 93

69) ಅದೇ ಪುಟ ಸಂ. 115

70) ಅದೇ ಪುಟ ಸಂ. 1

71) ಅದೇ ಪುಟ ಸಂಖ್ಯೆ 279

72) ಅದೇ ಪುಟ ಸಂ. 19

73) ಅದೇ ಪುಟ ಸಂ. 74

74) ಅದೇ ಪುಟ ಸಂ. 163–164

75) ಅದೇ ಪುಟ ಸಂ. 179

76) ಅದೇ ಪುಟ ಸಂ. 181

77) ಪ್ರಕಾಶಕರು, ವೀರಶೈವ ಅಧ್ಯಯನ ಆಕಾಡಮಿ, ಶ್ರೀ ನಾಗನೂರು ರುದ್ರಾಕ್ಷಿ ಮಠ, ಬೆಳಗಾವಿ, ಜೆ.ಎಂ ನಾಗಯ್ಯ, ಆರನೆಯ ವಿಕ್ರಮಾದಿತ್ಯನ ಶಾಸನಗಳು, ಒಂದು ಅಧ್ಯಯನ, ಪುಟ ಸಂ. 20

78) ಸಮಗ್ರ ಕರ್ನಾಟಕ ಇತಿಹಾಸ, ಲಕ್ಷ್ಮೀ ಮುದ್ರಣಾಲಯ,2011, ಕ.ಎನ್ ಅಶ್ವಥಪ್ಪಾ, ಪುಟ ಸಂಖ್ಯೆ 180

79) ಪ್ರಕಾಶಕರು, ವೀರಶೈವ ಅಧ್ಯಯನ ಆಕಾಡಮಿ, ಶ್ರೀ ನಾಗನೂರು ರುದ್ರಾಕ್ಷಿ ಮಠ, ಬೆಳಗಾವಿ, ಜೆ.ಎಂ ನಾಗಯ್ಯ, ಆರನೆಯ ವಿಕ್ರಮಾದಿತ್ಯನ ಶಾಸನಗಳು, ಒಂದು ಅಧ್ಯಯನ, ಪುಟ ಸಂ. 24

80) ಅದೇ ಪುಟ ಸಂ. 25

81) ಸಮಗ್ರ ಕರ್ನಾಟಕ ಇತಿಹಾಸ, ಲಕ್ಷ್ಮೀ ಮುದ್ರಣಾಲಯ,2011, ಕ.ಎನ್ ಅಶ್ವಥಪ್ಪಾ, ಪುಟ ಸಂಖ್ಯೆ 180

82) ಅದೇ ಪುಟ ಸಂಖ್ಯೆ 180

83) ಅದೇ ಪುಟ ಸಂಖ್ಯೆ 180

84) ಪ್ರಕಾಶಕರು, ವೀರಶೈವ ಅಧ್ಯಯನ ಆಕಾಡಮಿ, ಶ್ರೀ ನಾಗನೂರು ರುದ್ರಾಕ್ಷಿ ಮಠ, ಬೆಳಗಾವಿ, ಜೆ.ಎಂ ನಾಗಯ್ಯ, ಆರನೆಯ ವಿಕ್ರಮಾದಿತ್ಯನ ಶಾಸನಗಳು, ಒಂದು ಅಧ್ಯಯನ, ಪುಟ ಸಂ. 23,24

85) ಹೊರನಾಡಿನ ಮೂರು ಕರ್ನಾಟಕ ರಾಜ್ಯಗಳು ಪುಟ ಸಂಖ್ಯೆ. 8,9,11,19,21

86) ಪ್ರಕಾಶಕರು, ವೀರಶೈವ ಅಧ್ಯಯನ ಆಕಾಡಮಿ, ಶ್ರೀ ನಾಗನೂರು ರುದ್ರಾಕ್ಷಿ ಮಠ, ಬೆಳಗಾವಿ, ಜೆ.ಎಂ ನಾಗಯ್ಯ, ಆರನೆಯ ವಿಕ್ರಮಾದಿತ್ಯನ ಶಾಸನಗಳು, ಒಂದು ಅಧ್ಯಯನ, ಪುಟ ಸಂ. 22,23

87) ಅದೇ ಪುಟ ಸಂ. 25

88) ಅದೇ ಪುಟ ಸಂ. 27,28

89) ಕರ್ನಾಟಕವನ್ನಾಳಿದ ರಾಣಿಯರು, ಶಕೀಲ್ ಐ.ಎಸ್. ಉಸ್ಮಾನ ಶಿಕ್ಷಣ ಸಂಸ್ಥೆ, ಪುಟ ಸಂ. 42 ರಿಂದ 69)

90) ಕಲ್ಯಾಣದ ಚಾಲುಕ್ಯರು ಸಮಕಾಲಿನ ಅರಸುಮನೆತನಗಳೊಂದಿಗೆ ಹೊಂದಿದ್ದ ಸಂಬಂಧಗಳು ಪುಟ ಸಂ.33

91) ಸಮಗ್ರ ಕರ್ನಾಟಕ ಇತಿಹಾಸ, ಲಕ್ಷ್ಮೀ ಮುದ್ರಣಾಲಯ,2011, ಕ.ಎನ್ ಅಶ್ವಥಪ್ಪಾ, ಪುಟ ಸಂಖ್ಯೆ 181

92) ಪ್ರಕಾಶಕರು, ವೀರಶೈವ ಅಧ್ಯಯನ ಆಕಾಡಮಿ, ಶ್ರೀ ನಾಗನೂರು ರುದ್ರಾಕ್ಷಿ ಮಠ, ಬೆಳಗಾವಿ, ಜೆ.ಎಂ ನಾಗಯ್ಯ, ಆರನೆಯ ವಿಕ್ರಮಾದಿತ್ಯನ ಶಾಸನಗಳು, ಒಂದು ಅಧ್ಯಯನ, ಪುಟ ಸಂ. 62

93) ಕಲ್ಯಾಣ ಚಾಲುಕ್ಯ ಮೂರನೆಯ ಸೋಮೇಶ್ವರನ ಜೀವನ ಮತ್ತು ಸಾಧನೆ, ಸಂಶೋಧಕರು, ಶ್ರೀ ಮಹಾಂತೇಶ ಎಂ. ಅಕ್ಕಿ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಪುಟ ಸಂ. 42 ರಿಂದ 44

94) ಕಲ್ಯಾಣ ಚಾಲುಕ್ಯ ಸಮಕಾಲಿನ ಮನೆತನದವರೊಂದಿಗೆ ಹೊಂದಿದ ಸಂಬಂಧಗಳು ಒಂದು ಅಧ್ಯಾಯನ ಪುಟ ಸಂ. 154

95) ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–8, ಪುಟ ಸಂ. 57)

96) ಅದೇ ಪುಟ ಸಂ. 113

97) ಕಲ್ಯಾಣ ಚಾಲುಕ್ಯ ಮೂರನೆಯ ಸೋಮೇಶ್ವರನ ಜೀವನ ಮತ್ತು ಸಾಧನೆ, ಸಂಶೋಧಕರು, ಶ್ರೀ ಮಹಾಂತೇಶ ಎಂ. ಅಕ್ಕಿ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಪುಟ ಸಂ. 42 ರಿಂದ 44

98) ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–8, ಪುಟ ಸಂ. 106

99) ಕಲ್ಯಾಣ ಚಾಲುಕ್ಯ ಮೂರನೆಯ ಸೋಮೇಶ್ವರನ ಜೀವನ ಮತ್ತು ಸಾಧನೆ, ಸಂಶೋಧಕರು, ಶ್ರೀ ಮಹಾಂತೇಶ ಎಂ. ಅಕ್ಕಿ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಪುಟ ಸಂ. 32 ರಿಂದ 33

100) ಅದೇ ಪುಟ ಸಂ. 39

101) ಕರ್ನಾಟಕವನ್ನಾಳಿದ ರಾಣಿಯರು, ಶಕೀಲ್ ಐ.ಎಸ್. ಉಸ್ಮಾನ ಶಿಕ್ಷಣ ಸಂಸ್ಥೆ, ಪುಟ ಸಂ. 42 ರಿಂದ 69

102) ಸಮಗ್ರ ಕರ್ನಾಟಕ ಇತಿಹಾಸ, ಲಕ್ಷ್ಮೀ ಮುದ್ರಣಾಲಯ,2011, ಕ.ಎನ್ ಅಶ್ವಥಪ್ಪಾ, ಪುಟ ಸಂಖ್ಯೆ 182

103) ಕಲ್ಯಾಣ ಚಾಲುಕ್ಯ ಮೂರನೆಯ ಸೋಮೇಶ್ವರನ ಜೀವನ ಮತ್ತು ಸಾಧನೆ, ಸಂಶೋಧಕರು, ಶ್ರೀ ಮಹಾಂತೇಶ ಎಂ. ಅಕ್ಕಿ. ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಪುಟ ಸಂ. 36 ರಿಂದ 37

104) ನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–8, ಪುಟ ಸಂ. 26

105) ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–8, ಪುಟ ಸಂ. 28

106) ಅದೇ ಪುಟ ಸಂ. 21

107) ಕನ್ನಡ ವಿಶ್ವವಿದ್ಯಾಲಯ, ಶಾಸನಗಳು ಸಂಪುಟ–8 ಪುಟ ಸಂ. 173)

108) ಸಮಗ್ರ ಕರ್ನಾಟಕ ಇತಿಹಾಸ, ಲಕ್ಷ್ಮೀ ಮುದ್ರಣಾಲಯ,2011, ಕ.ಎನ್ ಅಶ್ವಥಪ್ಪಾ, ಪುಟ ಸಂಖ್ಯೆ 18

109 ಅದೇ ಪುಟ ಸಂಖ್ಯೆ 183)

110) ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–8 ಪುಟ ಸಂ. 86

111) ಸಮಗ್ರ ಕರ್ನಾಟಕ ಇತಿಹಾಸ, ಲಕ್ಷ್ಮೀ ಮುದ್ರಣಾಲಯ,2011, ಕ.ಎನ್ ಅಶ್ವಥಪ್ಪಾ, ಪುಟ ಸಂಖ್ಯೆ 183

112) ಒಂದನೇ ಸೋಮೇಶ್ವರನ ಜೀವನ ಮತ್ತು ಸಾಧನೆ ಪುಟ ಸಂ. 71 ರಿಂದ 74

113) ಆರನೇ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ ಪುಟ ಸಂ.85

114) ಅದೇ ಪುಟ ಸಂ. 85–86

115) ಒಂದನೇ ಸೋಮೇಶ್ವರನ ಜೀವನ ಮತ್ತು ಸಾಧನೆ ಪುಟ ಸಂ. 75 ರಿಂದ 81

116) ಆರನೇ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ ಪುಟ ಸಂ. 95–96

117) ಆರನೇ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ ಪುಟ ಸಂ. 86

118) ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–8 ಪುಟ ಸಂ. XXIX

119) ಅದೇ ಪುಟ ಸಂ. 104–105

120) ಅದೇ ಪುಟ ಸಂ. 110

121) ಕರ್ನಾಟಕ ಜೈನಶಾಸನಗಳು ಸಂಪುಟ 5 ಪುಟ ಸಂಖ್ಯೆ 279

122) ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–8 ಪುಟ ಸಂ. 94–95)

123) ಅದೇ ಪುಟ ಸಂ. 74

124) ಅದೇ ಸಂ. 78

125) ಅದೇ ಸಂ. 183

126) ಕಲ್ಯಾಣ ಚಾಲುಕ್ಯ ಮೂರನೆಯ ಸೋಮೇಶ್ವರನ ಜೀವನ ಮತ್ತು ಸಾದನೆ ಪುಟ ಸಂಖ್ಯೆ.174 ರಿಂದ 196

127) ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–8, ಪುಟ ಸಂ. 13

128) ಅದೇ ಪುಟ ಸಂ. 21

129) ಅದೇ ಪುಟ ಸಂ. 24

130) ಅದೇ ಪುಟ ಸಂ. 32

131) ಅದೇ ಪುಟ ಸಂ. 104

132) ಅದೇ ಸಂ. 183

133) ಅದೇ ಪುಟ ಸಂ. 106

134) ಅದೇ ಪುಟ ಸಂ. 64

135) ಅದೇ ಪುಟ ಸಂ. 38

136) ಅದೇ ಪುಟ ಸಂ. 72

137) ಅದೇ ಪುಟ ಸಂ. 28

138) ಒಂದನೇ ಸೋಮೇಶ್ವರನ ಜೀವನ &ಸಾಧನೆ ಪುಟ ಸಂ. 193–218

139) (ರ್ನಾಟಕ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು ಸಂಪುಟ 5, ಸಂಪಾದರು, ಎಸ್. ಚಂದ್ರಶೇಖರ ಪುಟ ಸಂ. 5 ಮತ್ತು 6

140) ಒಂದನೇ ಸೋಮೇಶ್ವರನ ಜೀವನ ಮತ್ತು ಸಾಧನೆ ಪುಟ ಸಂ.218

141) (ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–8, ಪುಟ ಸಂ. 15)

142) ಅದೇ ಪುಟ ಸಂ. 109

143) ಅದೇ ಪುಟ ಸಂ. 110

144) ಅದೇ ಪುಟ ಸಂ. 170

145) ಅದೇ ಪುಟ ಸಂ. 173

146) ಅದೇ ಪುಟ ಸಂ. 181

147) ಒಂದನೇ ಸೋಮೇಶ್ವರನ ಜೀವನ &ಸಾಧನೆ ಪುಟ ಸಂ. 193–218

148) ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–8 ಪುಟ ಸಂ. 115

149) ಅದೇ ಪುಟ ಸಂ. 102

150) ಅದೇ ಪುಟ ಸಂ. 72

151) ಅದೇ ಪುಟ ಸಂ. 64

152) ಅದೇ ಪುಟ ಸಂ. 186

153) ಕಲ್ಯಾಣ ಚಾಲುಕ್ಯ ಮೂರನೆಯ ಸೋಮೇಶ್ವರನ ಜೀವನ ಮತ್ತು ಸಾಧನೆ ಪುಟ ಸಂ. 221

154) ಕಲ್ಯಾಣ ಚಾಲುಕ್ಯ ಮೂರನೆಯ ಸೋಮೇಶ್ವರನ ಜೀವನ ಮತ್ತು ಸಾಧನೆ ಪುಟ ಸಂ. 222

155) ಒಂದನೇ ಸೋಮೇಶ್ವರನ ಜೀವನ ಮತ್ತು ಸಾಧನೆ ಪುಟ ಸಂ. 254 ರಿಂದ 288

156) ಅದೇ ಪುಟ ಸಂ. 310

157) ಕನ್ನಡ ವಿಶ್ವದ್ಯಾಲಯ ಪ್ರಕಟಿಸಿದ, ಹಂಪ ನಾಗರಾಜಯ್ಯ ರವರ ಯಾಪನಿ ಸಂಘ, ಪುಟ.ಸಂ. 45

158) ಕಲ್ಯಾಣ ಚಾಲುಕ್ಯ ಮೂರನೆಯ ಸೋಮೇಶ್ವರನ ಜೀವನ ಮತ್ತು ಸಾಧನೆ ಪುಟ ಸಂ. 223

159) ಕರ್ನಾಟಕ ಜೈನಶಾಸನಗಳು ಸಂಪುಟ 5 ಪುಟ ಸಂಖ್ಯೆ 190

160) ಅದೇ ಪುಟ ಸಂ. 269–270

161) ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–8, ಪುಟ ಸಂ. 31

162) ಅದೇ ಪುಟ ಸಂ. 170

163) ಸಮಗ್ರ ಕರ್ನಾಟಕ ಇತಿಹಾಸ, ಲಕ್ಷ್ಮೀ ಮುದ್ರಣಾಲಯ,2011, ಕ.ಎನ್ ಅಶ್ವಥಪ್ಪಾ, ಪುಟ ಸಂಖ್ಯೆ 183,184

164) ವಿಜ್ಞಾನೇಶ್ವರ ಮಿತಾಕ್ಷರ ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ, ಶ್ರೀನಿವಾಸ ಸಿರನೂರಕರ್ ಪುಟ ಸಂ. 7 ರಿಂದ 38

165) ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ 8, ಬೀದರ ಜಿಲ್ಲೆ, ಪುಟ ಸಂ.

26 ಮತ್ತು 27

166) ಅದೇ ಪುಟ ಸಂ. 28

167) ಅದೇ ಪುಟ ಸಂ. 35

168) ಅದೇ ಪುಟ ಸಂ. 85

169) ಕನ್ನಡ ವಿಶ್ವವಿದ್ಯಾಲಯ, ಶಾಸನಗಳು ಸಂಪುಟ–8 ಪುಟ ಸಂ. 88

170) ಅದೇ ಪುಟ ಸಂ. 170

171) ಶ್ರೀಮದ್ಭಾಸ್ಕರಾಚಾರ್ಯ ವಿರಚಿತ ಲೀಲಾವತಿ, ಸಾನ್ವಯ–ಕನ್ನಡ ಅನುವಾದ ವೇಣುಗೋಪಾಲ ದ. ಹೇರೂರ, ಸಾಕ್ಷಿ ಟ್ರಸ್ಟ್ ಪುಟ ಸಂಖ್ಯೆ i ರಿಂದ vi

172) ಅದೇ ಪುಟ ಸಂಖ್ಯೆ vii ರಿಂದ xii

173) ಕಲ್ಯಾಣಿ ಚಾಲುಕ್ಯರ ಮೂರನೆಯ ಸೋಮೇಶ್ವರನ ಜೀವನ ಮತ್ತು ಸಾಧನೆ ಪುಟ ಸಂ.212 ರಿಂದ 264

174) ಒಂದನೇ ಸೋಮೇಶ್ವರನ ಜೀವನ &ಸಾಧನೆ ಪುಟಸಂ. 171–176

175) ಕನ್ನಡ ವಿಶ್ವವಿದ್ಯಾಲಯ, ಶಾಸನ ಸಂಪುಟ–8, ಪುಟ ಸಂ. 99

176) ಕರ್ನಾಟಕ ಜೈನ ಶಾಸನಗಳು ಸಂಪುಟ–5 ಪುಟ ಸಂ. 269–270

177) ಅದೇ ಪುಟ ಸಂ. 289

178) ಕನ್ನಡ ವಿಶ್ವವಿದ್ಯಾಲಯ, ಶಾಸನಗಳು ಸಂಪುಟ–8 ಪುಟ ಸಂ. 120

179) ಅದೇ ಪುಟ ಸಂ. 120

180) ಅದೇ ಪುಟ ಸಂ. 122

181) ಅದೇ ಪುಟ ಸಂ. 170

182) ಅದೇ ಪುಟ ಸಂ. ––––)

183) ಶ್ರೀಮದ್ಭಾಸ್ಕರಾಚಾರ್ಯ ವಿರಚಿತ ಲೀಲಾವತಿ, ಸಾನ್ವಯ–ಕನ್ನಡ ಅನುವಾದ ವೇಣುಗೋಪಾಲ ದ. ಹೇರೂರ, ಸಾಕ್ಷಿ ಟ್ರಸ್ಟ್ ಕೃತಿಯಲ್ಲಿ

184) ಒಂದನೇ ಸೋಮೇಶ್ವರನ ಜೀವನ & ಸಾಧನೆ ಪುಟಸಂ.171 ರಿಂದ176

185) ಕರ್ನಾಟಕ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಂಪುಟ–2, ಸಂಪಾದಕರು ಎಸ್. ಚಂದ್ರಶೇಖರ, ಪುಟ ಸಂಖ್ಯೆ 228

 ೧೦೭

186) ಅದೇ ಪುಟ ಸಂಖ್ಯೆ 56

187) ಪ್ರಸಾರಂಗ ಕನ್ನಡ ವಿಶ್ವಿದ್ಯಾಲಯ ಹಂಪಿ, ಯಾಪನೀಯ ಸಂಘ, ಪುಟ ಸಂಖ್ಯೆ 26, 59, 62 – 67,69,70

188) ಕರ್ನಾಟಕ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಸಂಪುಟ–2, ಸಂಪಾದಕರು ಎಸ್. ಚಂದ್ರಶೇಖರ, ಪುಟ ಸಂಖ್ಯೆ 56

189) ಕರ್ನಾಟಕ ಜೈನ ಶಾಸನಗಳು ಸಂಪುಟ–5 ಪುಟ ಸಂ. 269–270

190) ಅದೇ ಪುಟ ಸಂ. 272

191) ಅದೇ ಪುಟ ಸಂ. 274

192) ಅದೇ ಪುಟ ಸಂ. 285

193) ಅದೇ ಪುಟ ಸಂ. 286

194) ಅದೇ ಪುಟ ಸಂ. 289

195) ಕನ್ನಡ ವಿಶ್ವವಿದ್ಯಾಲಯ, ಶಾಸನಗಳು ಸಂಪುಟ–8 ಪುಟ ಸಂ. 183)

196) ಅದೇ ಪುಟ ಸಂ. 190

197) ಅದೇ ಪುಟ ಸಂ. 5

198) (ರ್ನಾಟಕ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಸಂಪುಟ–2, ಸಂಪಾದಕರು ಎಸ್. ಚಂದ್ರಶೇಖರ, ಪುಟ ಸಂಖ್ಯೆ 160

199) ಒಂದನೇ ಸೋಮೇಶ್ವರನ ಜೀವನ & ಸಾಧನೆ ಪುಟಸಂ. 229–247

200) ಅದೇ ಪುಟ ಸಂ. 304 ರಿಂದ 306

201) ಸಮಗ್ರ ಕರ್ನಾಟಕ ಇತಿಹಾಸ, ಲಕ್ಷ್ಮೀ ಮುದ್ರಣಾಲಯ,2011, ಕ.ಎನ್ ಅಶ್ವಥಪ್ಪಾ, ಪುಟ ಸಂಖ್ಯೆ 185

202) ಕರ್ನಾಟಕ ಸಾಮಾಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಸಂಪುಟ–2,ಸಂಪಾದಕರು ಎಸ್. ಚಂದ್ರಶೇಖರ, ಪುಟ ಸಂಖ್ಯೆ 226–228

 ೧೦೮